ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು : ಒಂದು ಚಾರಿತ್ರಿಕ ಅಧ್ಯಯನ

ಡಾಕ್ಟರ್ ಆಫ್ ಫಿಲಾಸಫಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಮಹಾಪ್ರಬಂಧ

ಸಂಶೋಧಕರು
ವಿರೂಪಾಕ್ಷಿ

ಮಾರ್ಗದರ್ಶಕರು
ಪ್ರೊ. ಲಕ್ಷ್ಮಣ್ ತೆಲಗಾವಿ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ [illegible]

೨೦೦೦

72

72

ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು : ಒಂದು ಚಾರಿತ್ರಿಕ ಅಧ್ಯಯನ

ಡಾಕ್ಟರ್ ಆಫ್ ಫಿಲಾಸಫಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಮಹಾಪ್ರಬಂಧ

ಸಂಶೋಧಕರು
ವಿರೂಪಾಕ್ಷಿ

ಮಾರ್ಗದರ್ಶಕರು
ಪ್ರೊ. ಲಕ್ಷ್ಮಣ್ ತೆಲಗಾವಿ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೦

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ವಿರೂಪಾಕ್ಷಿ ಇವರು **'ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು : ಒಂದು ಚಾರಿತ್ರಿಕ ಅಧ್ಯಯನ'** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಪಿಎಚ್.ಡಿ. ಮಹಾಪ್ರಬಂಧವು ಸಂಶೋಧಕರ ಪರಿಶ್ರಮದ ಮೂಲಕ ರೂಪುಗೊಂಡಿದೆ. ಇದರಲ್ಲಿನ ವಿಷಯವನ್ನು ಇಡಿಯಾಗಲಿ ಅಥವಾ ಬಿಡಿಯಾಗಲಿ ಈ ಮೊದಲು ಬೇರೆ ಯಾವುದೇ ಪದವಿ, ಉದ್ದೇಶಗಳಿಗೆ ಇವರು ಒಪ್ಪಿಸಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ :

(ಪ್ರೊ.ಲಕ್ಷ್ಮಣ್ ತೆಲಗಾವಿ)
ಮಾರ್ಗದರ್ಶಕರು ಹಾಗು ಮುಖ್ಯಸ್ಥರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬

ಸಂಶೋಧಕರ ಘೋಷಣಾ ಪತ್ರ

'ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು: ಒಂದು ಚಾರಿತ್ರಿಕ ಅಧ್ಯಯನ' ಎಂಬ ಈ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಪ್ರೊ.ಲಕ್ಷ್ಮಣ್ ತೆಲಗಾವಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಅಧ್ಯಯನದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ, ಉದ್ದೇಶಗಳಿಗೆ ಸಲ್ಲಿಸಿರುವುದಿಲ್ಲವೆಂದು ಘೋಷಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೦-೨-೨೦೦೦

(ವಿರೂಪಾಕ್ಷಿ)
ಅಧ್ಯಾಪಕರು, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಹಿಂದಿನ ಕುಲಪತಿ ಡಾ. ಚಂದ್ರಶೇಖರ ಕಂಬಾರ ಅವರಿಗೆ, ಸಂಶೋಧನೆಗೆ ಪ್ರೇರಣೆ ನೀಡಿದ ಇಂದಿನ ಕುಲಪತಿ ಡಾ. ಎಂ.ಎಂ.ಕಲಬುರ್ಗಿ ಅವರಿಗೆ, ಪಿಎಚ್.ಡಿ.ವಿದ್ಯಾರ್ಥಿಯಾಗಿ ಬಂದಾಗ ಸಂಶೋಧನೆ ದೀಕ್ಷೆಕೊಟ್ಟು ವಿವಿಧ ರೀತಿಯಲ್ಲಿ ನೆರವಾಗಿ ಮಾರ್ಗದರ್ಶನ ಮಾಡಿದ ಗುರುಗಳಾದ ಪ್ರೊ.ಲಕ್ಷ್ಮಣ್ ತೆಲಗಾವಿ ಅವರಿಗೆ,

ಅಧ್ಯಯನದ ಸಂದರ್ಭದಲ್ಲಿ ನಾನಾ ಬಗೆಯಾಗಿ ಸಹಕರಿಸಿದ ಡಾ.ಕೆ.ವಿ.ನಾರಾಯಣ, ಡಾ.ಎಚ್.ಎಸ್. ರಾಘವೇಂದ್ರರಾವ್, ಪ್ರೊ.ಹಿ.ಚಿ.ಬೋರಲಿಂಗಯ್ಯ, ಡಾ.ಕೆ.ಎಂ.ಸುರೇಶ್, ಡಾ.ಬಿ.ಶೇಷಾದ್ರಿ, ಡಾ. ಕರಿಗೌಡ ಬೀಚನಹಳ್ಳಿ, ಇಂದಿನ ಕುಲಸಚಿವ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಹಾಗೂ ಅಧ್ಯಯನಾಂಗದ ನಿರ್ದೇಶಕ ಬಾಲಸುಬ್ರಮಣ್ಯ ಅವರುಗಳಿಗೆ,

ಅಧ್ಯಯನಕ್ಕೆ ವಿಶೇಷ ಕಾಳಜಿ ತೋರಿ ಮಾಹಿತಿ ಕೊಟ್ಟು, ವಿವಿಧ ರೀತಿಯಲ್ಲಿ ನೆರವಾದ ದಿವಂಗತ ಡಾ.ಎಂ.ಬಿ.ನೇಗಿನಹಾಳ, ಡಾ.ಚೆನ್ನಣ್ಣ ವಾಲೀಕಾರ, ದೇವೇಂದ್ರ ಮಾಧವನವರ, ಶಿ.ಗು.ಕುಸಗಲ್ಲ, ಸಿ.ವಿ.ಅಹೋಬಲ ನಾಯಕ, ಡಾ.ತೇಜಸ್ವಿ ಕಟ್ಟೀಮನಿ, ಹರ್ತಿಕೋಟೆ ವೀರೇಂದ್ರಸಿಂಹ, ಡಾ.ರಂಗರಾಜ ವನದುರ್ಗ, ಆರ್.ವೈ.ನಾಯಕ, ಆರ್.ಬಿ.ಕಿತ್ತೂರ, ಎನ್.ಪಿ.ತಿಪ್ಪೇಸ್ವಾಮಿ, ಟಿ.ಗಿರಿಜ, ಡಿ.ಬೋರಪ್ಪ, ಟಿ.ಎಸ್.ಗಂಡುಗಲಿ, ಡಾ.ಡಿ.ರಾಮಚಂದ್ರನಾಯಕ, ಜಿ.ರಾಜಣ್ಣ, ಎಂ.ಕೆ.ನಾಯಕ, ಎ.ಬಸಪ್ಪ, ಎನ್.ಟಿ.ಬೊಮ್ಮಣ್ಣ, ವೈ.ನೆಟ್ಟಕಲ್ಲಪ್ಪ, ದಿ.ಅಲ್ಲೀಪುರದ ಜಿ.ಹನುಮಂತಪ್ಪ, ಎನ್.ಪಿ.ನಾಗೇಂದ್ರನಾಯಕ, ಕೆ.ಮಲ್ಲಣ್ಣ, ಬಿ.ಓಬಣ್ಣ, ಬಿ.ಬಸವರಾಜ, ಅನ್ನದಾನಿ ವೀರಭದ್ರಪ್ಪ, ಡಿ.ಎಂ.ಸದಾಶಿವಯ್ಯ, ಎಂ.ಎಲ್.ದೊಡ್ಡಬಸಪ್ಪ, ಡಿ.ಕೆ.ಎಂ.ತಿಪ್ಪೇಸ್ವಾಮಿ, ಮಂಜುನಾಥ ತೆಲಿಗಿ, ಟಿ.ಕೆ. ಶ್ರೀನಿವಾಸ, ಎಸ್.ಬಿ. ತಿಪ್ಪನಾಯಕ, ಮತ್ತು ಎಲ್.ಜಿ.ಹಾವನೂರು ಅವರುಗಳಿಗೆ,

ಸಂಶೋಧನೆಗೆ ಬಂದಾಗ ವಿವಿಧ ರೀತಿಯಲ್ಲಿ ಸಹಕರಿಸಿದ ಎಂ.ಪಿ.ವೀಣಾ, ಎಸ್.ವೈ.ಸೋಮಶೇಖರ, ಮಂಜುಳಾ, ಜಿ.ಎನ್.ಕೀರ್ತಿನಾಥ, ಗುರುರಾಜ, ಎಲ್.ಲಕ್ಷ್ಮೀದೇವಿ, ಡಾ.ಬೇವಿನಕಟ್ಟಿ ಮಂಜುನಾಥ, ಪ್ರೊ.ಜೆ.ಆರ್.ರಾಮಮೂರ್ತಿ, ಯು.ಮಲ್ಲಿಕಾರ್ಜುನ, ಡಾ.ಮೈತ್ರಿ ಕಾಮಣ್ಣ, ಡಾ.ಎ.ಸುಬ್ಬಣ್ಣ ರೈ, ಡಾ.ಕೇಶವನ್ ಪ್ರಸಾದ್, ರಮೇಶ ನಾಯಕ್, ಎಂ.ಕೊಟ್ರೇಶ್, ತಾರಿಹಳ್ಳಿ ಹನುಮಂತಪ್ಪ; ಸಹೋದ್ಯೋಗಿಗಳಾದ ಡಾ.ಸಿ.ಆರ್.ಗೋವಿಂದರಾಜು, ಡಾ.ಟಿ.ಪಿ.ವಿಜಯ್, ಕೆ.ಮೋಹನಕೃಷ್ಣ ರೈ, ಎನ್.ಚಿನ್ನಸ್ವಾಮಿ ಸೋಸಲೆ ಹಾಗೂ ಎಂ.ಎಂ.ಶಿವಪ್ರಕಾಶ್, ಓಬಯ್ಯ; ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೆರವಾದ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಹಾಗೂ ನನ್ನೂರಿನ ಬಾಲ್ಯದ ಗೆಳೆಯರಿಗೆ, ಹಿರಿಯರಿಗೆ, ಹೆತ್ತವರಿಗೆ ಮತ್ತು ಪತ್ನಿ ಪೂರ್ಣಿಮಾಳಿಗೆ; ಡಿ.ಟಿ.ಪಿ. ಮಾಡಿದ ರಾಘವೇಂದ್ರ ಭಟ್ ಅವರಿಗೆ; ರೇಖಾಚಿತ್ರ ಬರೆದು ಕೊಟ್ಟ ಸುರೇಶ್, ಕರಡು ತಿದ್ದುವಲ್ಲಿ ನೆರವಾದ ಜಿ. ಉಮೇಶ ಅವರಿಗೆ, ಕ್ಷೇತ್ರಕಾರ್ಯದಲ್ಲಿ ನೆರವಾದ ಅನೇಕರಿಗೆ ತುಂಬು ಹೃದಯದ ಕೃತಜ್ಞತೆಗಳು.


ದಿನಾಂಕ :

ಸ್ಥಳ : ವಿದ್ಯಾರಣ್ಯ

ವಿರೂಪಾಕ್ಷಿ


ಪರಿವಿಡಿ

ಪ್ರಾಚೀನ ಕಾಲದ ಕಿರಾತರು ನೆಲಸಿದ್ದ ಸ್ಥಳ ಮತ್ತು ಭೌಗೋಳಿಕ ವಿಸ್ತರಣೆ



ಕೃಪೆ: ಜೆ.ಪಿ.ಸಿಂಗ್: ದ ಕಿರಾತಾಸ್ ಇನ್ ಏನ್ಷಿಯಂಟ್ ಇಂಡಿಯಾ,೧೯೯೦

ಕರ್ನಾಟಕದಲ್ಲಿ ಬೇಡರ ಭೌಗೋಳಿಕ ವಿಸ್ತರಣೆ



ಕೃಪೆ: ಕರ್ನಾಟಕ ಅಭಿವೃದ್ಧಿ ಮಾಹಿತಿ ಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಭೂಮಿಯ ಮೇಲೆ ಜೀವಸಂಕುಲಗಳು ಉಗಮವಾದಾಗ, ವಿಕಾಸಕ್ರಮದಲ್ಲಿ ಮಾನವ ಪ್ರಾಣಿ ಮೊದಲ ಪಂಕ್ತಿಯಲ್ಲಿ ಶ್ರೇಷ್ಠನೆಂದು ಕರೆಸಿಕೊಂಡ. ಈ ಹಿನ್ನೆಲೆಯಲ್ಲಿ ಮಾನವ ಒಬ್ಬ ಸಮಾಜ ಜೀವಿ ಎನಿಸಿಕೊಂಡ. ಈ ಹಂತದಲ್ಲೇ ಮಾನವನ ಜನಾಂಗಿಕ ಚರಿತ್ರೆಯು ಹುಟ್ಟಿದ್ದು. ಹೀಗೆ ಬಾಯಾರಿಕೆ, ಹಸಿವುಗಳನ್ನು, ಸ್ವಾಭಾವಿಕ ಬಯಕೆಗಳನ್ನು ತೀರಿಸಿಕೊಳ್ಳಲು ಆಹಾರಕ್ಕಾಗಿ ಅಲೆದಾಡಿದ. ಈ ಅಲೆದಾಟದಲ್ಲಿ ಕಂಡುಕೊಂಡ ಮಾರ್ಗಗಳು ಎರಡು. ಒಂದು: ಆರಂಭದಲ್ಲಿ ಗೆಡ್ಡೆ-ಗೆಣಸು, ಸೊಪ್ಪು ಮೊದಲಾದ ಸಸ್ಯಾಹಾರಗಳ ಸೇವನೆ; ಎರಡು: ಆಹಾರೋತ್ಪಾದನೆಯ ಆವಿಷ್ಕಾರದಿಂದ ಪ್ರಾಣಿಗಳನ್ನು ಕೊಂದು ಮಾಂಸಾಹಾರವನ್ನು ಬಯಸಿದ್ದು. ಇವೆರಡರಲ್ಲಿ ಹೆಚ್ಚು ಚಾಲ್ತಿಗೆ ಬಂದುದು ಬೇಟೆ. ಮಾನವ ಕಂಡುಕೊಂಡ ಮೊದಲ ವೃತ್ತಿ ಎಂದು ಇದನ್ನು ಕರೆಯಲಾಗುತ್ತದೆ. ಪ್ರಾಚೀನ ಕಾಲದಲ್ಲಿ ಇದೊಂದು ಉದ್ಯೋಗವೇ ಆಗಿ ಮಾರ್ಪಟ್ಟಿತೆನ್ನಬಹುದು.

ಮಾನವ ಕೃಷಿ ಬದುಕಿನಲ್ಲಿ ನೆಲೆಯೂರಿದರೂ ಬೇಟೆ ಮುಂದುವರೆಯಿತು. ಬುಡಕಟ್ಟುಗಳ ಮಟ್ಟಿಗೆ ಇದು ಸಾರ್ವತ್ರಿಕವಾಗಿ ಅವರ ಸಂಸ್ಕೃತಿಯೊಂದಿಗೆ ಬೆರೆತುಹೋಗಿದೆ. ಆಹಾರ, ಸ್ವಯಂರಕ್ಷಣೆ, ಮನೋರಂಜನೆ, ಪ್ರಕೃತಿ ಸಮತೋಲನ, ಲಾಭದಾಯಕ ಉದ್ಯಮವಾಗಿ ಬೇಟೆ ಮಾನವನ ಚರಿತ್ರೆಯೊಂದಿಗೆ ಬೆಳೆದು ಬಂದಿರುವುದು ಸ್ಪಷ್ಟ. ಇದು ಪ್ರಾಕೃತಿಕ ದರೋಡೆ ಎನಿಸಿದರೂ, ಆಹಾರ ನಿಮಿತ್ತವಾಗಿ ಅನಿವಾರ್ಯವಾಗಿದ್ದಿತು. ಹೀಗೆ ಬೇಟೆ ನಾನಾ ಕಾರಣಗಳಿಗೆ ಸೀಮಿತವಾಗಿ ರೋಮಾಂಚನ ಕ್ರೀಡೆಯೂ ಆಗಿತ್ತು. ಸಾಹಸಿಗರಿಗೆ ಮನೋರಂಜನೆಯಾಗಿ ಪರಿಣಮಿಸಿದರೆ, ಬೇಟೆಗಾರನಿಗೆ ಹಸಿವನ್ನು ತೀರಿಸುವುದಾಗಿತ್ತು. ಪ್ರಾಣಿಗಳನ್ನು ಬೇಟೆಯಾಡುವುದು ಹಿಂದೆ ಸಹಜ ಹಾಗೂ ಅನಿವಾರ್ಯ ಕ್ರಿಯೆಯಾಗಿದ್ದರೆ, ಇಂದು ಕಾನೂನು ಬಾಹಿರ ಕೃತ್ಯವಾಗಿದೆ.

ಭಾರತವನ್ನಾಳಿದ ದೇಶೀ ಅರಸರು, ಮಂತ್ರಿ-ಸೇನಾಧಿಕಾರಿಗಳು, ಆಂಗ್ಲ ಅಧಿಕಾರಿಗಳು ಮೋಜಿಗಾಗಿ ಬೇಟೆಯಾಡಿದ ಉಲ್ಲೇಖಗಳಿವೆ. ಧೈರ್ಯ, ಪ್ರತಿಷ್ಠೆ, ಸಾಹಸಪ್ರದರ್ಶನಗಳಿಗೆ ಪ್ರೇರಣೆಕೊಟ್ಟದ್ದು ಬೇಟೆ. ಯೋಧರ, ಆಳರಸರ ಯುದ್ಧ ನೈಪುಣ್ಯತೆ ತೋರಲು ಬೇಟೆ ಮಾನದಂಡವಾಗಿತ್ತು. ಈ ನಿಟ್ಟಿನಲ್ಲಿ ಬೇಟೆ ಜನಸಾಮಾನ್ಯರಿಂದ ಆಳರಸರವರೆಗೆ ಮಹತ್ವ ಪಡೆದಿರುವುದು ಪರಿಣಾಮಕಾರಿಯಾಗಿದೆ. ಉದಾಹರಣೆಗೆ ಕೊಡಗಿನಲ್ಲಿ ಹುಲಿ ಕೊಂದವರಿಗೆ ವಿಶೇಷ ಗೌರವವಿದ್ದು, ಕೊಂದ ಹುಲಿಯೊಂದಿಗೆ ಬೇಟೆಗಾರನಿಗೆ 'ನರಿಮಂಗಲ'ವೆಂದು ಮದುವೆ ಮಾಡುವ ಸಂಪ್ರದಾಯವಿದೆ.

ಬೇಟೆಯ ಬಗೆಗೆ ವಿಪುಲ ಸಾಹಿತ್ಯ ಸಾಮಾಗ್ರಿ ದೊರೆತರೂ, ವ್ಯವಸ್ಥಿತ ಅಧ್ಯಯನದ ಕೊರತೆ ಎದ್ದು ಕಾಣುತ್ತದೆ. ಇತಿಹಾಸ ಆರಂಭದಿಂದಲೂ ಈ ಬಗೆಗಿನ ವಿವರಗಳು ಲಭ್ಯ. ಬೇಟೆ ಆಕರ್ಷಕಣೀಯ ವೃತ್ತಿಯಾಗಿದ್ದು, ಅನೇಕ ಜನವರ್ಗಗಳು ಇದನ್ನು ಅವಲಂಬಿಸಿದ್ದವು. ಆಗ ಅದು ವೃತ್ತಿ ಸ್ವರೂಪ ಕಳೆದುಕೊಂಡು ಅಗತ್ಯಕ್ಕೆ ತಕ್ಕಂತೆ ಪದ್ಧತಿ ರೂಪದಲ್ಲಿ ಗೌರವಯುತವಾಗಿ ಮುಂದುವರೆಯಿತು. ಬೇಡರು ಇದರಲ್ಲಿ ಪ್ರವೀಣರೆಂಬುದು ತಿಳಿದ ಸಂಗತಿ. ಆದರೆ ಅವರೇ ನಿಷ್ಣಾತರಲ್ಲ ; ಸರ್ವ ಜನಾಂಗಗಳು ಬೇಟೆಯಿಂದಲೇ ವಿಕಾಸ ಹೊಂದಿವೆ ಎಂಬುದು ಗಮನಾರ್ಹ. ಇಂದಿಗೂ

ಯುಗಾದಿ ಹಬ್ಬದಲ್ಲಿ ಬೇಡರು ಹಂದಿಬೇಟೆಗೆ ಹೋಗುವಾಗ ಹುರುಪು, ವಿಜೃಂಭಣೆ, ಶಸ್ತ್ರಸಜ್ಜಿಕೆಗಳ ಪ್ರದರ್ಶನವನ್ನು ಗಮನಿಸಬಹುದು. ಬೇಡರಿಗೂ ಬೇಟೆ ಜೀವನಕ್ಕೂ ಅವಿನಾಭಾವ ಸಂಬಂಧವಿದೆ. ಶಿವರಾತ್ರಿಯಲ್ಲಿ ಮೊಲದ ಬೇಟೆ, ಮುಂಗಾರಿನಲ್ಲಿ ಹೊಲಮೇರಿ ಬೇಟೆ, ಮಳೆ ಬಂದಾಗ ಮೀನಿನ ಬೇಟೆಯಾಡುವುದು ಬೇಡರ ಸಾಂಪ್ರದಾಯಿಕ ಪ್ರವೃತ್ತಿಗಳೆನಿಸಿವೆ. ಸರ್ಕಾರ ಕಾಯ್ದೆ -ಕಾನೂನುಗಳ ಪ್ರಕಾರ ಬೇಟೆಯನ್ನು ಇಂದು ನಿಷೇಧಿಸಲಾಗಿದೆ.

ಚರಿತ್ರೆಯ ಕಲ್ಪನೆ ತಲೆಮಾರುಗಳಿಂದ ತಲೆಮಾರಿಗೆ ಬದಲಾಗುವುದು ದಿಟ. ರಾಜ-ರಾಣಿಯರ ರಾಜಕೀಯದಿಂದ ಜನಸಾಮಾನ್ಯರ ಬದುಕಿನ ಕಡೆಗೆ ಅಧ್ಯಯನಗಳು ವಿಸ್ತೃತಗೊಂಡಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಸಾಮಾನ್ಯ ಸಮುದಾಯಗಳ ಚಿತ್ರಣ ಕಂಡುಕೊಳ್ಳುವುದು ಅನಿವಾರ್ಯ. ಇವರ ವೃತ್ತಿಗಳು ಚರಿತ್ರೆಯ ಪುಟಗಳಲ್ಲಿ ಪೂರ್ತ ದಾಖಲಾಗದೆ ಉಳಿದುಹೋಗಿವೆ. ಇಂಥ ವೃತ್ತಿ ಮತ್ತು ಜನಾಂಗಗಳ ಅಧ್ಯಯನವನ್ನಾರಂಭಿಸಿದವರಾರೂ ಬೇಟೆ ಬಗೆಗೆ ಕರಾರುವಕ್ಕಾಗಿ, ಸಮಗ್ರವಾಗಿ ತಿಳಿಸಿಲ್ಲ. ಅಲ್ಲಲ್ಲಿ ಅಲ್ಪ ಮಾಹಿತಿ ಮಾತ್ರ ಲಭ್ಯವಿದೆ. ಈ ಹಿನ್ನೆಲೆಯಲ್ಲಿ ಮಾನವನಿಗೆ ಮೂಲಭೂತ ವೃತ್ತಿಗಳಲ್ಲೊಂದಾದ ಬೇಟೆಯನ್ನು ಅಧ್ಯಯನಕ್ಕೆ ಕೈಗೆತ್ತಿಕೊಳ್ಳಲಾಗಿದೆ. ಪ್ರತಿಯೊಂದು ಜನಾಂಗಕ್ಕೆ ಒಂದು ವೃತ್ತಿಯಿರುವಂತೆ ಬೇಡರಿಗೂ ಬೇಟೆ ಸಾಂಪ್ರದಾಯಿಕ ವೃತ್ತಿಯಾಗಿದೆ. ಕುಂಬಾರ, ಅಗಸ, ಗೊಲ್ಲ, ಕುರುಬ ಮೊದಲಾದ ಜಾತಿಗಳನ್ನು ಇಲ್ಲಿ ಉದಾಹರಿಸಬಹುದು. ಬೇಟೆಯಲ್ಲಿ ಪರಿವರ್ತನೆ ಕಂಡುಕೊಂಡು ಅನೇಕ ಜಾತಿಗಳು ಮುಂದುವರೆಯುವ ನಿಟ್ಟಿನಲ್ಲಿದ್ದರೆ, ಬೇಡರು ಬೇಟೆಗೇ ಅಂಟಿಕೊಂಡು ದೀರ್ಘಕಾಲದವರೆಗೆ ಯಥಾ ಸ್ಥಿತಿಯಲ್ಲಿದ್ದುದು ಕಂಡುಬರುತ್ತದೆ. ಹೀಗಾಗಿ ಜೀವನಾವಶ್ಯಕ ವೃತ್ತಿಯಾಗಿರುವ ಬೇಟೆಯ ಜೊತೆಗೆ ಬೆಳೆದ ಬೇಡರನ್ನು ಅಲಕ್ಷಿಸಿರುವುದರಿಂದ ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಜಗತ್ತಿನ ಚರಿತ್ರೆಯಲ್ಲಿ ಮಧ್ಯಕಾಲವು ಮಹಾಪರಿವರ್ತನೆಯನ್ನು ಕಂಡುಕೊಂಡ ಕಾಲಘಟ್ಟ. ಯುರೋಪ್‌ನಲ್ಲಿ ಊಳಿಗಮಾನ್ಯ ಪದ್ಧತಿ, ಕ್ರೈಸ್ತ ಚರ್ಚುಗಳ ಅಧಿಕಾರದಾಹ ಸಮಾಜವನ್ನು ಅಸ್ತವ್ಯಸ್ತಗೊಳಿಸಿದ್ದವು. ಚರ್ಚು ಮತ್ತು ರಾಜ್ಯದ ನಡುವೆ ಸಂಘರ್ಷ ಹೆಚ್ಚಿತ್ತು. ರಾಜ ದೈವಾಂಶಸಂಭೂತನಾಗಿದ್ದು, ಜನಸಾಮಾನ್ಯರ ಸ್ಥಿತಿ ಶೋಚನೀಯವಾಗಿತ್ತು. ಹೀಗೆ ಯುರೋಪ್‌ನಲ್ಲಿ ವಿವಿಧ ರಂಗಗಳಲ್ಲಿ ಕಂಡುಬಂದ ಪುನರುಜ್ಜೀವನ ಚಳುವಳಿಯ ಫಲಿತಾಂಶಗಳು ಪರಿಣಾಮಕಾರಿಯಾಗಿದ್ದವು. ಇಂಥ ಲಕ್ಷಣಗಳಿಂದ ಭಾರತದಲ್ಲಿಯೂ ಅನೇಕ ಬದಲಾವಣೆಗಳಾದವು. ದೇಶೀ ಅರಸರು ಆಳ್ವಿಕೆ ನಡೆಸುವಾಗ ವಿದೇಶಿಯರ ಆಕ್ರಮಣಗಳು ನಡೆದದ್ದು ಸ್ಮರಣೀಯ. ಇಂಥ ಆಕ್ರಮಣಗಳನ್ನು ಅನೇಕರು ವಿರೋಧಿಸಿದ್ದುಂಟು. ಸಾಂಸ್ಕೃತಿಕವಾಗಿಯೂ ಈ ಕಾಲ ಮಹತ್ವವಾಗಿದೆ. ಕವಿಗಳು ಸಹಾ ತಮ್ಮ ಕಾವ್ಯಗಳಲ್ಲಿ ಪ್ರತಿಭಟಿಸುವ ಮನೋಧರ್ಮವನ್ನು ತಾಳಿದಂತಿದ್ದಾರೆ.

ಕಾವ್ಯ ಮತ್ತು ಚರಿತ್ರೆಗಳು ಪರಸ್ಪರ ಪೂರಕವಾದ ಸಂಗತಿಗಳನ್ನು ಹೊಂದಿವೆ. ಮಧ್ಯಯುಗದಲ್ಲಿ ರಮ್ಯಗೊಳಿಸಿದ ಜೀವನಚರಿತ್ರೆಗಳು ಕಾಣಿಸಿಕೊಂಡವು. ಈ ಒಂದೊಂದು ಕಾವ್ಯಗಳು ಆ ಕಾಲದ ದಾಖಲೆ, ವರದಿ, ಸಂಕಥನಗಳಂತೆ ಕಂಡುಬರುತ್ತವೆ. ಚರಿತ್ರೆಯ ಘಟನೆಗಳು ಹಾಗೂ ಅವುಗಳ ದಾಖಲೆಗಳಿಂದ ಭೂತಕ್ಕೆ ವರ್ತಮಾನಕಾಲ ಜೀವ ತುಂಬುತ್ತದೆ. ಹೀಗೆ ಕಾವ್ಯವು ಸಮಕಾಲೀನ ಸಂಗತಿಗಳನ್ನೊಳಗೊಂಡ ಕಥನವೇ ಆಗಿದೆ. ವಿವಿಧ ಕಾಲಕ್ಕೆ ಅದರ ಪ್ರಸ್ತುತತೆ, ಮಹತ್ವ ಹೆಚ್ಚಾಗುತ್ತ ಹೋಗುವುದು ಸಹಜ.

ಬೇಟೆ ಮತ್ತು ಬೇಡರನ್ನು ಕುರಿತು ಸ್ಥೂಲ ಅಧ್ಯಯನಗಳು ಈಗಾಗಲೇ ನಡೆದರೂ, ಬೇಡರು ಅವಲಂಬಿಸಿದ ಬೇಟೆ ಈ ಬರವಣಿಗೆಗಳಲ್ಲಿ ಗೌಣವೆಂಬಂತೆ ಕಂಡುಬರುತ್ತದೆ. ಹೀಗಾಗಿ ಪ್ರಸ್ತುತ ಅಧ್ಯಯನದಲ್ಲಿ ಬೇಟೆ ಮತ್ತು ಬೇಡರನ್ನು

ಚಾರಿತ್ರಿಕವಾಗಿ ಕಟ್ಟಿಕೊಡುವ ಪ್ರಯತ್ನ ನಡೆಸಲಾಗಿದೆ. ಬ್ರಿಟೀಷರ ಆಳ್ವಿಕೆಯಲ್ಲಿ ನಡೆದ ಬುಡಕಟ್ಟುಗಳ ಅಧ್ಯಯನಗಳಲ್ಲಿ ಬೇಡರ ಬಗ್ಗೆ ಮಾಹಿತಿ ದೊರೆಯುವುದೇ ವಿನಾ ಬೇಟೆಯನ್ನು ಕುರಿತು ಸಮಗ್ರ ವಿವರಣೆ ದೊರೆಯುವುದಿಲ್ಲ ಎನ್ನಬಹುದು. ಸರ್.ಥಾಮಸ್ ಮನ್ರೊ, ಕೆಲ್‌ಶಲ್, ರಾಬರ್ಟ ಸಿವೆಲ್, ಫ್ರಾನ್ಸಿಸ್ ಮೊದಲಾದವರು ಬೇಡರ ಬಗೆಗೆ ಮಾಹಿತಿ ನೀಡಿರುವುದು ಸ್ಮರಣೀಯ. ಇವರಲ್ಲದೆ, ಎಡ್ಗರ್ ಥರ್‌ಸ್ಟನ್, ರಂಗಾಚಾರಿ ಅವರು **'ಕ್ಯಾಸ್ಟ್ಸ್ ಆಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ'** (೧೯೦೦) ಕೃತಿಯಲ್ಲಿ ಇತರ ಜಾತಿಗಳೊಂದಿಗೆ ಬೇಡರ ಬಗ್ಗೆ ಸ್ಥೂಲವಾಗಿ ನೋಡಿದ್ದಾರೆ. ಇವರು ಕರ್ನಾಟಕ, ಆಂಧ್ರ, ಭಾಗಗಳಲ್ಲಿನ ಬೇಡ ಅಥವಾ ಬೋಯಾಗಳ ಬಗ್ಗೆ ಜನಾಂಗಿಕವಾಗಿ, ಸಾಂಸ್ಕೃತಿಕವಾಗಿ ಬೆಳಕು ಚೆಲ್ಲುತ್ತಾರೆ.

ಬೇಡ ಜನಾಂಗದ ಪರಿಚಯವನ್ನು ಥರ್ಸ್ಟನ್‌ನ ನಂತರ ಎಲ್.ಕೆ.ಅನಂತಕೃಷ್ಣ ಅಯ್ಯರ್ **'ಮೈಸೂರ್ ಕ್ಯಾಸ್ಟ್ಸ್ ಆಂಡ್ ಟ್ರೈಬ್ಸ್'** ವಾ-೨ (೧೯೮೮)ನಲ್ಲಿ ತಿಳಿಸಿದ್ದಾರೆ. ಇಲ್ಲಿ ಮೈಸೂರು ರಾಜ್ಯಕ್ಕೆ ಸಂಬಂಧಿಸಿದ ಕೆಲವು ಪ್ರದೇಶಗಳ ಜನಸಮುದಾಯಗಳನ್ನು ಪರಿಚಯಿಸಿದ್ದಾರೆ. ಬೇಡರ ಬಗೆಗೆ ವಿವರ ಕೊಟ್ಟರೂ ಬೇಟೆಯ ಉಲ್ಲೇಖಗಳು ಮರೆಯಾಗಿವೆ. ನಂತರ ಸೈಯದ್‌ಸಿರಾಜ್ ಉಲ್ ಹಸನ್ ಅವರ **'ದಿ ಕ್ಯಾಸ್ಟ್ಸ್ ಆಂಡ್ ಟ್ರೈಬ್ಸ್ ಆಫ್ ಎಚ್.ಇ.ಎಚ್.ದಿ. ನಿಜಾಮ್ಸ ಡೊಮಿನಿಯನ್ಸ್'** (೧೯೨೦) ಕೃತಿ ಪ್ರಮುಖವಾದುದು. ಲೇಖಕರು ಹೈದ್ರಬಾದ್ ಕರ್ನಾಟಕದ ಬೇಡರ ಬಗೆಗೆ ಬೆಳಕು ಚೆಲ್ಲಿದರೂ, ಬೇಟೆಯನ್ನು ಉಪೇಕ್ಷಿಸಿ ಬೇಡರ ರಾಜಕೀಯ ಚರಿತ್ರೆಯನ್ನು ವಿವರಿಸಿದ್ದಾರೆ.

ನಮ್ಮ ದೇಶೀ ನೆಲೆಯಲ್ಲಿ ನಡೆದ ಜನಾಂಗಿಕ ಸಂಶೋಧನೆಗಳು ಇತ್ತೀಚಿನವು ಎನ್ನಬಹುದು. ಹರ್ತಿಕೋಟೆಯ ವೀರನಾಯಕರ **'ಕ್ಷಾತ್ರಾಂಶ ಪ್ರಬೋಧ'**ದಲ್ಲಿ (೧೯೪೮) ಬೇಡ ಜನಾಂಗದ ಪೌರಾಣಿಕ, ಐತಿಹಾಸಿಕ ಸಂಗತಿಗಳನ್ನು ತಿಳಿಸಿದ್ದಾರೆ. ಇವರ ಮತ್ತೊಂದು ಪುಸ್ತಕವಾದ **'ರಾಷ್ಟ್ರಸೇವೆಯಲ್ಲಿ ನಾಯಕ ಜನಾಂಗ'**ವು ಬೇಡರ ಐತಿಹಾಸಿಕ ಸಂಗತಿಗಳನ್ನೊಳಗೊಂಡಿದೆ.

ಚಳ್ಳಕೆರೆಯ ಆರ್.ರಾಜಣ್ಣನವರು **'ನಾಯಕ ಜನಾಂಗದ ಇತಿಹಾಸ'**(೧೯೮೨) ಎಂಬ ಕೃತಿಯಲ್ಲಿ ಪುರಾಣ, ಪ್ರತೀತಿ, ಐತಿಹಾಸಿಕ ಸಂಗತಿಗಳ ಮೂಲಕ ಬೇಡರ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಟ್ಟಿರುವುದುಂಟು. ಡಿ.ಬಿ.ಥಂಗ ಅವರು **'ಜನಾಂಗ ಪರಿಚಯ'** ಎಂಬ ಪುಸ್ತಿಕೆಯಲ್ಲಿ ನಾಯಕ, ಬೇಡ ಜನಾಂಗದ ಲಕ್ಷಣಗಳನ್ನು ಪರಿಚಯಿದ್ದಾರೆ. ಬೇಡರ ಬಗ್ಗೆ ಸುದೀರ್ಘ ಲೇಖನಗಳನ್ನು ಬರೆದದ್ದು ಎಂ.ವಿ.ಚಿತ್ರಲಿಂಗಯ್ಯ ಅವರು. **'ನಾಯಕ ಜನಾಂಗದ ನಿಜ ನಿಷ್ಪತ್ತಿ'**, ಇತರ ಪಾಳಿಯಪಟ್ಟು, ಜನಾಂಗದ ಇತಿಹಾಸ ಕುರಿತು ಲೇಖನಗಳು ಪ್ರಕಟತಗೊಂಡಿದ್ದು, ಇವು ಸಂಶೋಧನಾತ್ಮಕ ಮಾದರಿಯಲ್ಲಿರುವುದು ಗಮನಾರ್ಹ. ವಿ.ರಂಗನಾಯಕರ **'ವಾಲ್ಮೀಕಿ ವಂಶಪಾವನಿ'**, ಪಂಡಿತ ರೇವಣಸಿದ್ಧಶಾಸ್ತ್ರಿಗಳ **'ವಾಲ್ಮೀಕರ ಪುರಾಣ'**ವು ಬೇಡರ ಮೂಲ, ವಿಸ್ತರಣೆ, ಪರಂಪರೆ ಇತ್ಯಾದಿ ಸಂಗತಿಗಳನ್ನು ತಿಳಿಸುವಲ್ಲಿ ಪ್ರಮುಖವಾಗಿವೆ.

ಮೇಲಿನವುಗಳಲ್ಲದೆ, ಎಂ.ಜಿ.ಈಶ್ವರಪ್ಪನವರ **'ಮ್ಯಾಸಬೇಡರು'**(೧೯೮೨) ಕೃತಿ ಬೇಡ ಜನಾಂಗದ ಉಪ ಪಂಗಡವಾದ **'ಮ್ಯಾಸಬೇಡರ'** ಬುಡಕಟ್ಟು ಸಂಸ್ಕೃತಿಯನ್ನು ಕುರಿತದ್ದು. ಇದರಲ್ಲಿ ಬೇಟೆಯ ಮೂಲಕ ಬೇಡರನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಕೃಷ್ಣಮೂರ್ತಿ ಹನೂರು ಅವರು **'ಮ್ಯಾಸಬೇಡರ ಸಂಸ್ಕೃತಿ'** (೧೯೯೩) ಯಲ್ಲಿ ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿನ ಮ್ಯಾಸಬೇಡರ ಸಂಸ್ಕೃತಿಯ ವಿವಿಧ ಮುಖಗಳನ್ನು ಚಿತ್ರಿಸಿದ್ದಾರೆ. ಇದು ಮ್ಯಾಸಬೇಡರ ಬುಡಕಟ್ಟಿನ ಮಟ್ಟಿಗೆ ಮೊದಲ ಅಧ್ಯಯನ ಕೃತಿ.

ಕೇವಲ ಸಾಂಸ್ಕೃತಿಕ, ಜಾನಪದೀಯ ಅಧ್ಯಯನಗಳ ಮೂಲಕವಲ್ಲದೆ, ಭಿನ್ನವಾಗಿ ಅಧ್ಯಯಿನಿಸುವ ಪ್ರಯತ್ನಗಳೂ ನಡೆದಿವೆ. ಇಂಥ ಸಾಲಿಗೆ ಡಾ.ಕೆ. ರುದ್ರಪ್ಪನವರ **'ಮ್ಯಾಸನಾಯಕರು : ಒಂದು ಜನಾಂಗಿಕ ಅಧ್ಯಯನ'** ಕೃತಿ ಸೇರುವುದು. ಇವರು ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳ ಕೆಲವು ಆಯ್ದ ಗ್ರಾಮಗಳಲ್ಲಿನ ಬೇಡರ ವಿಶಿಷ್ಟ ರೂಢಿ ಸಂಪ್ರದಾಯಗಳನ್ನು ತಿಳಿಸಿರುವುದು ಗಮನಾರ್ಹ. ಎಂ.ಪಿ.ವೀಣಾ ಅವರು **'ಊರುನಾಯಕರ ಮತ್ತು ಮ್ಯಾಸನಾಯಕರ ಗೃಹವಾಸ್ತುಶಿಲ್ಪ'** ಕುರಿತು ಎಂ.ಫಿಲ್.ಪ್ರಬಂಧ ರಚಿಸಿರುವರು. ಎ.ಆರ್.ನಾಯಕ ಅವರು **'ಸಗರನಾಡಿನ ಬೇಡ ಸಂಪ್ರದಾಯಗಳು ಮತ್ತು ನಂಬಿಕೆಗಳು'** ಎಂಬ ವಿಷಯ ಕುರಿತು ಎಂ.ಫಿಲ್ ಪ್ರಬಂಧ ರಚಿಸಿದ್ದಾರೆ.

ಬೇಟೆಯ ಜೊತೆಗೆ ಬೇಡರ ಚರಿತ್ರೆ ಕುರಿತ ಸಮಗ್ರ ಎನ್ನುವಂಥ ಕೃತಿಗಳು ಈವರೆಗೆ ಹೊರಬಂದಿಲ್ಲ. ಎಂ.ಎಸ್.ಪುಟ್ಟಣ್ಣನವರ **'ಚಿತ್ರದುರ್ಗದ ಪಾಳಯಗಾರರು'**, ಕಪಟರಾಳ ಕೃಷ್ಣರಾವ್ ಅವರ **'ಸುರಪುರ ಸಂಸ್ಥಾನ ಇತಿಹಾಸ'**, ಎ.ವಿ.ವೆಂಕಟರತ್ನಂ ಅವರ **'ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ'**, ಫ್ಲಿಟರು ಸಂಗ್ರಹಿಸಿದ **'ಹಲಗಲಿ ಬೇಡರ ಲಾವಣಿಗಳು'**, ಲಕ್ಷ್ಮಣ್ ತೆಲಗಾವಿಯವರ **ಹರತಿಸಿರಿ** (ಸಂ), **ಚಂದ್ರವಳ್ಳಿ** (ಸಂ), ಹೀಗೆ ಚಿತ್ರದುರ್ಗದ ಪಾಳೆಯಗಾರರು ಕುರಿತಂತೆ ಸಮಗ್ರ ಅಧ್ಯಯನದ ಫಲವಾಗಿ ಬಿಡಿಲೇಖನ, ಕೃತಿಗಳು ಪ್ರಕಟವಾಗಿವೆ. ಅಬ್ದುಲ್ ಸತ್ತಾರ್ ಅವರ **'ತರೀಕೆರೆ ಪಾಳೆಯಗಾರರು'** ಮೊದಲಾದವು ಬಹು ಮುಖ್ಯವೆನಿಸಿವೆ. ಇವುಗಳಲ್ಲಿ ಬೇಡರನ್ನು ಕುರಿತಂತೆ ವಿಪುಲವಾದ ಮಾಹಿತಿ ಸಿಗುತ್ತದೆ. ತರುವಾಯ ಸರ್ಕಾರ ಹೊರತಂದ ಮೀಸಲಾತಿ ಕುರಿತ ಹಾವನೂರು, ವೆಂಕಟಸ್ವಾಮಿ ಮತ್ತು ಚಿನ್ನಪ್ಪರೆಡ್ಡಿ ಆಯೋಗಗಳ ವರದಿಗಳಲ್ಲಿ ಬೇಡರ ಸ್ಥಿತಿ-ಗತಿಯ ಅವಲೋಕನ ಮುಖ್ಯವಾಗಿದೆ. ಗ್ಯಾಸೆಟಿಯರ್, ಜನಸಂಖ್ಯಾವರದಿ, ಕರ್ನಾಟಕ ವಾಲ್ಮೀಕಿ ನಾಯಕ ಸಂಘಗಳ ಆಶ್ರಯದಲ್ಲಿ ಹೊರತಂದ ಸ್ಮರಣ ಸಂಚಿಕೆಗಳಾದ ವಾಲ್ಮೀಕಿ, ಬಿಚ್ಚುಗತ್ತಿ, ಮೇಲುದುರ್ಗ, ವಾಲ್ಮೀಕಿ ಜ್ಯೋತಿ ಮತ್ತು ವಾಲ್ಮೀಕಿ ಕಿರಣಗಳು ಪ್ರಮುಖವಾಗಿವೆ.

ಮೇಲೆ ವಿವರಿಸಿದ ಅಧ್ಯಯನಗಳಲ್ಲಿ ಸಾಂಸ್ಕೃತಿಕ, ಜನಾಂಗಿಕ ಮತ್ತು ಜಾನಪದ ಕ್ಷೇತ್ರಗಳ ಮೂಲಕ ಬೇಡರನ್ನು ವಿವಿಧ ಶಿಸ್ತುಗಳ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಅವು ಪ್ರತ್ಯೇಕ ದೃಷ್ಟಿ ಕೋನಗಳಿಂದ ಕೂಡಿದ್ದು, ಆಯಾ ಭೌಗೋಳಿಕ ಪ್ರದೇಶಕ್ಕೆ ತಕ್ಕಂತಿವೆ. ಹೆಚ್ಚಾಗಿ ಬುಡಕಟ್ಟು ಸ್ಥಿತಿಯಲ್ಲಿರುವ ಮ್ಯಾಸಬೇಡರ ಬಗೆಗೆ ವ್ಯಾಪಕ ಅಧ್ಯಯನಗಳು ನಡೆಯುತ್ತಿವೆ. ಹೀಗಾಗಿ ಕರ್ನಾಟಕದ ಬೇಡ ಜನಾಂಗವನ್ನು ಸಮಗ್ರವಾಗಿ ಅಧ್ಯಯನ ನಡೆಸಿಲ್ಲದಿರುವುದು ತೆರೆದ ಸತ್ಯ. ಆ ಮೂಲಕ ಬೇಡರ ವಿವಿಧ ವೃತ್ತಿಗಳ ಚಾರಿತ್ರಿಕ ಅಧ್ಯಯನಗಳು ಈವರೆಗೆ ನಡೆದಿಲ್ಲ. ಅಲ್ಲದೆ, ಮೇಲಿನ ಅಧ್ಯಯಗಳು ಮುಕ್ಕಾಲು ಪಾಲು ಸಾಹಿತ್ಯ, ನೆಲೆಯಿಂದಲೇ ನಡೆದಿವೆ. ಆದರೂ ಕಾವ್ಯಗಳಲ್ಲಿನ ಬೇಟೆ ಮತ್ತು ಬೇಡರನ್ನು ಅಲಕ್ಷಿಸಿದಂತೆ ಕಂಡುಬರುತ್ತದೆ. ಚಾರಿತ್ರಿಕ ಅಧ್ಯಯನಗಳು ಈವರೆಗೆ ನಡೆದಿಲ್ಲವಾದ ಕಾರಣ ಇಲ್ಲಿ ಆ ಪ್ರಯತ್ನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಅಲಕ್ಷ್ಯಕ್ಕೊಳಗಾದ ಬೇಟೆ ಮತ್ತು ಬೇಡರ ಬಗೆಗೆ ಪ್ರಸ್ತುತ ಅಧ್ಯಯನವು ಬೆಳಕು ಚೆಲ್ಲಲೆತ್ನಿಸುತ್ತದೆ; ಹಾಗೂ ಈ ನಿಟ್ಟಿನಲ್ಲಿ ಇದು ಮೊದಲು ಪ್ರಯತ್ನವಾಗಿದೆ.

ಕಾವ್ಯ ಮತ್ತು ಚರಿತ್ರೆಗಳ ನಡುವೆ ಸಂಬಂಧವಿದೆ. ಕಾವ್ಯದಲ್ಲಿ ಬೇಟೆಯನ್ನು ಸಾಂಸ್ಕೃತಿಕ ನೆಲೆಯಲ್ಲಿ ನಿರೂಪಿಸುವುದನ್ನು ಕಾಣುತ್ತೇವೆ. ಬೇಡರು ರಾಜನೊಂದಿಗೆ ಬೇಟೆಯಲ್ಲಿ ಸಹಕರಿಸಿದ ಪ್ರಸ್ತಾಪವಿರುತ್ತದೆ. ಕಾವ್ಯದಲ್ಲಿ ಬೇಡರ ಚಿತ್ರಣ ವಾಸ್ತವ ನೆಲೆಯಲ್ಲಿದ್ದಂತೆ ಗೋಚರಿಸುವುದು. ಬೇಡರಂತೆ ಬೇಡತಿಯರು ಬೇಟೆಗಾರ್ತಿಯರಾಗಿದ್ದುದು ವಿಶೇಷ. ಈ ಕಾಲದ ಬೇಟೆ ಬೇಡರಿಗೆ ಆಹಾರಕ್ಕೆ ಸೀಮಿತವಾಗಿದ್ದರೆ, ಆಳರಸನಿಗೆ ವಿನೋದ, ಮೋಜಿನ

ಕ್ರೀಡೆಯಾಗಿದ್ದಿತು. ಬೇಡನೇ ಗುರಿಕಾರನಾಗಿದ್ದರಿಂದ ಪ್ರಾಣಿಗಳ ಚಲನವಲನ ಬೇಟೆಯ ಕ್ರಮದ ತಿಳುವಳಿಕೆ ಇರುತ್ತದೆ. ಬೇಡರು ಬೇಟೆಯಾಡುವ ಸ್ಥಳ, ಆಯುಧ ಮತ್ತು ಪ್ರಾಣಿಗಳಲ್ಲದೆ, ಬೆಟ್ಟ, ಗುಡ್ಡ,ನದಿ, ವೃಕ್ಷ ಮೊದಲಾದುವನ್ನು ಆರಾಧಿಸುತ್ತಿದ್ದರು. ಉದಾ : ಹಂದಿ, ಗೋವು, ತಿರುಪತಿ ತಿಮ್ಮಪ್ಪ, ಬೇವಿನಮರ, ಶ್ರೀಶೈಲ ಪರ್ವತ, ವೇದಾವತಿ ನದಿ ಇತ್ಯಾದಿ.

ಹೀಗೆ ಬೇಟೆಯಾಡುವವ ಬೇಡನಾದರೆ, ಬೇಟೆಯ ಚರಿತ್ರೆಯಲ್ಲಿ ಬೇಡನದೇ ಮೊದಲ ಹೆಜ್ಜೆ. ಕ್ಷತ್ರಿಯ ಲಕ್ಷಣಗಳಿಗೆ ಬೇಟೆಯೇ ಮೂಲ. ಹೀಗೆ ಆದಿಮಾನವ ನಾಗರಿಕತೆಗೆ ಕಾಲಿಟ್ಟು, ಸಮಾಜ ರಕ್ಷಣೆ ಪಡೆದಿದ್ದು, ಬೇಟೆ ಮತ್ತು ಬೇಟೆಗಾರರಿಂದ. ಇಂಥ ಸಂದರ್ಭಗಳು ಮಧ್ಯಕಾಲದಲ್ಲಿ ಮರೆಯಾದ ಅಧ್ಯಾಯವೊಂದನ್ನು ಕಟ್ಟಿಕೊಡಲು ಪೂರಕವಾಗಿವೆ.

ಬೇಟೆಯನ್ನೇ ನಂಬಿ ಕಾಡಿನಲ್ಲಿರುವ ಬೇಡರ ಜನಜೀವನವು ಸಂಸ್ಕೃತೀಕರಣ, ನಗರೀಕರಣ ಹಾಗೂ ಪಾಶ್ಚಾತ್ಯೀಕರಣಗಳ ಪ್ರಭಾವದಿಂದ ಬದಲಾಗುತ್ತಿದೆ. ಇದರ ಪರಿಣಾಮವಾಗಿ ಬೇಡರ ಬದುಕು ಸ್ಥಿತ್ಯಂತರಗಳಿಂದ ವಿವಿಧ ರೀತಿಯಲ್ಲಿ ವಿಸ್ತರಣೆಗೊಂಡಿರುವುದು ಗಮನಾರ್ಹ. ಹೀಗೆ ಬೇಡರ ಒಂದು ಪಂಗಡ ಕಾಡಿನಲ್ಲಿ ಮೊದಲಿನ ಸ್ಥಿತಿಯಲ್ಲಿರುವುದು ಕೆಲವು ಭಾಗಗಳಲ್ಲಿ ಇನ್ನೂ ಕಂಡುಬರುವುದಂಟು. ಆಧುನಿಕತೆಯ ಮುಖ್ಯವಾಹಿನಿಗೆ ಬಾರದೆ ಅತಂತ್ರ ಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಇತರ ಮೂಲನಿವಾಸಿಗಳ ಸಂಸ್ಕೃತಿ ಇಂದು ಪ್ರತ್ಯೇಕತೆಯನ್ನು ಕಾಪಾಡಿಕೊಂಡಿಲ್ಲ. ಏಕೆಂದರೆ ಮಾನವ ಪ್ರಾಣಿ ವಿಕಸಿಸುತ್ತಾ ಮಾನವನಾದ ಎನ್ನುವಂತೆ; ಕಾಡು ನಾಡಾಗುವ, ಕಾಡಿನ ಸಂಸ್ಕೃತಿ ಬದಲಾಗುವ ಲಕ್ಷಣಗಳು ಕಂಡುಬರುತ್ತವೆ. ಕರ್ನಾಟಕದಲ್ಲಿ ಸು.೪೯ಕ್ಕೂ ಹೆಚ್ಚು ಬುಡಕಟ್ಟುಗಳಿವೆ. ಸ್ವಾವಲಂಬಿಗಳಾಗಿ ಸರ್ಕಾರ ಸವಲತ್ತುಗಳಿಗಾಗಿ ಹೋರಾಟವನ್ನು ನಡೆಸುತ್ತಿವೆ. ಉದಾ: ಬೇಡ್ತಿ ಜಲವಿದ್ಯುತ್ ಯೋಜನೆಗಳಿಂದ (ಸೂಪ) ಕಾಡು ನಾಶವಾಗಿ ಹಾಲಕ್ಕಿ-ಒಕ್ಕಲಿಗರ ಬುಡಕಟ್ಟು ವಲಸೆ ಹೋಗಲಾರದೆ ಹೋರಾಟ ಮಾಡುವ ಚಿತ್ರಣ ಉತ್ತರಕನ್ನಡದಲ್ಲಿ ಇಂದಿಗೂ ಕಾಣಬಹುದು. ಮೇಲಿನಂತೆ ಕರ್ನಾಟಕದ ವಿವಿಧ ಬುಡಕಟ್ಟುಗಳು ಇಂಥ ಸಮಸ್ಯೆಗಳನ್ನು ಎದುರಿಸುವುದು ಸಾಮಾನ್ಯವಾಗಿದೆ.

ವ್ಯಾಪ್ತಿ :

ಆದಿಯಿಂದ ಮುಂದುವರೆಸಿಕೊಂಡು ಬಂದ ಬೇಟೆಯ ಚರಿತ್ರೆ ರೋಚಕವಾದುದು. ಇದನ್ನವಲಂಬಿಸಿದ ಜನಾಂಗಗಳಲ್ಲಿ ಕೆಲವು ತೀವ್ರತರವಾದ ಮಾರ್ಪಾಟಿಗೆ ಒಳಗಾಗಿ ಬೇಟೆಯಿಂದ ಸ್ಥಿತ್ಯಂತರಗೊಂಡವು. ಇದರೊಂದಿಗೆ ಬೆಳೆದ ಬೇಡರು ಇದನ್ನು ಉಸಿರೆಂದು ನಂಬಿಕೊಂಡಿರುವರು. ಬೇಟೆಯ ವಿಕಾಸದ ಹಂತಗಳೇ ಪಶುಪಾಲನೆ, ಕೃಷಿ ಎಂದರೂ, ಬೇಟೆಯ ವಾಸನೆ ಬೇಟೆಗಾರನಿಂದ ಇನ್ನು ಹೋಗಿಲ್ಲವೆನ್ನುವುದು ಸ್ಪಷ್ಟ. ಹೀಗೆ ಮಧ್ಯಕಾಲೀನ ಸಂದರ್ಭದಲ್ಲಿ ಸಾಂಸ್ಕೃತಿಕ ವೈವಿಧ್ಯತೆ ಕಾಣಬಹುದು. ಆಳರಸರು, ಯುದ್ಧಗಳು, ಕುತಂತ್ರ, ಸಾವು-ನೋವು ಮೊದಲಾದ ಚರಿತ್ರೆಯ ಘಟನೆಗಳ ಆಜುಬಾಜಿನಲ್ಲಿ ಸುಪ್ತವಾಗಿ ಬೆಳೆದು ಬಂದ ಬೇಟೆ ಅಷ್ಟೇ ಪರಿಣಾಮಕಾರಿಯಾಗಿ ಪ್ರದರ್ಶಿತವಾಗಿದೆ.

ಪ್ರಸ್ತುತ ಕಾವ್ಯಗಳಲ್ಲಿನ ಬೇಟೆ-ಬೇಡರ ಸಂದರ್ಭಗಳ ಚಾರಿತ್ರಿಕ ಅಧ್ಯಯನವು, ಬೇಟೆಯನ್ನು ವೃತ್ತಿ ನೆಲೆಯಲ್ಲಿ, ಬೇಡರನ್ನು ಜನಾಂಗಿಕ ನೆಲೆಯಲ್ಲಿ(ಚರಿತ್ರೆ ದೃಷ್ಟಿಕೋನದಲ್ಲಿ)ವಿಶ್ಲೇಷಿಸುವ ಪ್ರಯತ್ನವಾಗಿದೆ.

ಮಧ್ಯಕಾಲೀನ ಕನ್ನಡ ಕಾವ್ಯಗಳೆಂದು ನಿರ್ದಿಷ್ಟವಾದ ಕಾಲಘಟ್ಟವನ್ನು ನಿರ್ಧರಿಸಿ ಅಧ್ಯಯನ ಮಾಡುವ

ನೆಲೆಯಲ್ಲಿ 'ಮಧ್ಯಕಾಲೀನ' ಎಂಬುದನ್ನು ವಿವರಿಸಿಕೊಳ್ಳುವುದು ಇಲ್ಲಿ ಅಗತ್ಯ. ಕರ್ನಾಟಕದಲ್ಲಿ ಮಧ್ಯಕಾಲವೆಂದು ಕರೆಯುವ ಕಾಲಮಾನದ ಬಗೆಗೆ ತೀವ್ರತರವಾದ ಚರ್ಚೆಗಳಿವೆ. ಭಾರತದ ಇತಿಹಾಸದಲ್ಲಿ ಸಾಮಾನ್ಯವಾಗಿ ೧೦೦೦ದಿಂದ ೧೩೫೦ರವರೆಗೆ ಮಧ್ಯಕಾಲ ಎಂದು ಗುರುತಿಸಿದರೂ, ಕ್ರಿ.ಶ.೧೦೦೧ರಿಂದ ೧೭೦೭ರವರೆಗೆ ದೆಹಲಿ ಸುಲ್ತಾನರಿಂದ ಮೊಗಲರ ಔರಂಗಜೇಬನ ಅಂತ್ಯದವರೆಗೆ ಮಧ್ಯಕಾಲ ಎನ್ನಲಾಗುತ್ತದೆ. ಇವೆರಡನ್ನೂ ಹೊರತುಪಡಿಸಿದರೆ, ಜಗತ್ತಿನ ಇತಿಹಾಸದಲ್ಲಿ ಕ್ರಿ.ಶ.೮ನೇ ಶತಮಾನದಿಂದ ಕ್ರಿ.ಶ.೧೮ನೇ ಶತಮಾನದವರೆಗಿನ ಕಾಲವನ್ನು ಮಧ್ಯಕಾಲ ಎಂದಿರುವುದು ಗಮನಾರ್ಹ. ಇತಿಹಾಸಕಾರರಾದ ವಿನೋದ್‌ಚಂದ್‌ಪಾಂಡೆ ಮತ್ತು ವಿನೋದ್ ಬಿಹಾರಿಲಾಲ್ ಅವರು 'ದಿ ಮೆಡಿವಲ್ ಇಂಡಿಯಾ' ಕೃತಿಯಲ್ಲಿ ಕ್ರಿ.ಶ.೭೧೧ರಿಂದ ೧೮೦೨ರವರೆಗಿನ ಕಾಲವನ್ನು ಮಧ್ಯಕಾಲವೆಂದು ಸೂಚಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಮಧ್ಯಕಾಲವೆಂದು ಕರೆಯುವ ಬಗೆಗೆ ಚರ್ಚೆಗಳಿದ್ದರೂ, ಸಾಹಿತ್ಯದ ಲಕ್ಷಣಗಳನ್ನು ಗಮನಿಸಿ ೮ ರಿಂದ ೧೧ನೇ ಶ.ವರೆಗೆ ಪ್ರಾಚೀನವೆಂದು, ೧೧ ರಿಂದ ೧೬ನೇ ಶತಮಾನದ ಆರಂಭದವರೆಗೆ ಮಧ್ಯಕನ್ನಡವೆಂದು, ೧೬ರ ನಂತರ ಕಾಲವನ್ನು ಆಧುನಿಕವೆಂದು ಕರೆದಿರುವುದನ್ನು ಗಮನಿಸಬಹುದು. ಆರ್.ನರಸಿಂಹಚಾರ್ಯರು ಜೈನಯುಗ - (ಆರಂಭದಿಂದ ೧೨ನೇ ಶತಮಾನದಮಧ್ಯ), ವೀರಶೈವಯುಗ (೧೨ರಿಂದ ೧೫ನೇ ಶತಮಾನದವರೆಗೆ), ಬ್ರಾಹ್ಮಣಯುಗ(೧೫ ಶತಮಾನದ ಮಧ್ಯದಿಂದ ೧೯ನೇ ಶತಮಾನದವರೆಗೆ) ಎಂದು ತಿಳಿಸಿರುವುದುಂಟು. ರೆವರೆಂಡ್ ಎಫ್.ಕಿಟ್ಟಲ್ ಅವರು ಹಳಗನ್ನಡ - (೧೦ನೇ ಶ.ದಿಂದ ೧೩ನೇ ಶ.ಮಧ್ಯದವರೆಗೆ). ನಡುಗನ್ನಡ- (೧೩ನೇ ಶತಮಾನದ ನಂತರದಿಂದ ೧೫.ಶ.ದವರೆಗೆ), ಹೊಸಗನ್ನಡ(ನಂತರದ ಕಾಲ)ವೆಂದು ಮೂರು ವಿಭಾಗಗಳನ್ನಾಗಿ ಮಾಡಿದ್ದಾರೆ. ಇವರು ೧೦ನೇಶತಮಾನದಿಂದ ೧೩ನೇ ಶತಮಾನದ ಮಧ್ಯದವರೆಗೆ ಮಧ್ಯಕಾಲವೆಂಬ ನಿರ್ಧಾರಕ್ಕೆ ಬಂದಿದ್ದಾರೆ. ತಿ.ತಾ.ಶರ್ಮರು ಕ್ಷಾತ್ರಯುಗ (೧೦-೧೨ ಶತಮಾನ), ಮತಪ್ರಚಾರಯುಗ (೧೨-೧೬ಶತಮಾನ), ಸಾರ್ವಜನಿಕ ಯುಗ (೧೬ರಿಂದ ೧೯ಶತಮಾನದವರೆಗೆ), ಆಧುನಿಕ ಯುಗ (೧೯ರ ನಂತರ) ಎಂದಿದ್ದಾರೆ. ರಂ.ಶ್ರೀ.ಮುಗಳಿಯವರು ಪಂಪಪೂರ್ವಯುಗ, ಪಂಪಯುಗ, . ಬಸವಯುಗ, ಕುಮಾರವ್ಯಾಸಯುಗ ಎಂದು ನಾಲ್ಕು ಭಾಗಗಳಾಗಿ ವಿಭಾಗಿಸಿದ್ದಾರೆ. ಚರಿತ್ರೆಯಲ್ಲಿ ವಿನೋದ್‌ಚಂದ್ ಪಾಂಡೆ ಮತ್ತು ಸಾಹಿತ್ಯದಲ್ಲಿ ರಂ.ಶ್ರೀ.ಮುಗಳಿಯವರ ಕಾಲಮಾನಗಳನ್ನು ಅನುಸರಿಸಿ ನೋಡುವುದಾದರೆ, ಪಂಪನಿಂದ (೯೪೧) ಷಡಕ್ಷರದೇವನ(೧೬೫೫)ವರೆಗಿನ ಕಾಲವನ್ನು ಮಧ್ಯಕಾಲವೆಂದು ಭಾವಿಸಲಾಗಿದೆ. ಈ ಕಾಲವನ್ನು ನಡುಗನ್ನಡದ ಕಾಲವೆಂದು ಕರೆಯುವುದುಂಟು. ವಿಭಾಗೀಕರಣದ ದೃಷ್ಟಿಯಿಂದ ಚರಿತ್ರೆ ಮತ್ತು ಕನ್ನಡ ಸಾಹಿತ್ಯಗಳಿಗೆ ಇಲ್ಲಿ ಒಂದು ಸಮಾನ ಕಾಲಮಾನ ಗೊತ್ತುಪಡಿಸಿಕೊಳ್ಳುವ ಅಗತ್ಯವಿರುವುದರಿಂದ, ೧೦ನೇ ಶತಮಾನದಿಂದ ೧೭ನೇ ಶತಮಾನದ ಮಧ್ಯಭಾಗದವರೆಗೆ ಈ ಅಧ್ಯಯನದ ಕಾಲವ್ಯಾಪ್ತಿಯನ್ನು ನಿರ್ಧರಿಸಿಕೊಳ್ಳಲಾಗಿದೆ. ಪೂರಕವಾಗಿ ಹದಿನೆಂಟನೇ ಶತಮಾನದ ನಂತರದವರೆಗೂ ಕಾವ್ಯಗಳಲ್ಲಿನ ಬೇಟೆಯ ಸಂದರ್ಭಗಳನ್ನು ಪರಿಚಯಿಸಲು ಪ್ರಯತ್ನಿಸಲಾಗಿದೆ.

ಐತಿಹಾಸಿಕವಾಗಿ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ಕುಮ್ಮಟದುರ್ಗ, ವಿಜಯನಗರ ಮನೆತನಗಳವರು ಮತ್ತು ಸ್ಥಳೀಯ ಪಾಳೆಯಗಾರರು ಮೇಲಿನ ವ್ಯಾಪ್ತಿಗೆ ಸಹಜವಾಗಿಯೇ ಒಳಪಡುತ್ತಾರೆ. ಪೂರಕವಾಗಿ ಮೈಸೂರು ಅರಸರು, ಬ್ರಿಟಿಷರನ್ನೂ ಇಲ್ಲಿ ಅವಲೋಕಿಸಲಾಗಿದೆ. ಈ ಕಾಲಘಟ್ಟಗಳಲ್ಲಿ ಕಂಡುಬರುವ ಶಿವಕೋಟ್ಯಾಚಾರ್ಯ, ಪಂಪ, ಪೊನ್ನ, ರನ್ನ ಹರಿಹರ, ರಾಘವಾಂಕ, ನಾಗವರ್ಮ, ಜನ್ನ, ಕೇಶಿರಾಜ, ಚೌಂಡರಸ, ವಿರೂಪಾಕ್ಷ ಪಂಡಿತ, ಲಕ್ಷ್ಮೀಶ, ನೇಮಿನಾಥ, ನಂಜುಂಡ, ಷಡಕ್ಷರದೇವ, ಕನಕದಾಸ, ಕರ್ಣಪಾರ್ಯ, ಕುಮಾರವಾಲ್ಮೀಕಿ, ಕುಮಾರವ್ಯಾಸ, ತಿರುಮಲಾರ್ಯ, ಸರ್ವಜ್ಞ ಮೊದಲಾದವರ ಕಾವ್ಯಗಳು ಪ್ರಸ್ತುತ ಅಧ್ಯಯನ ವ್ಯಾಪ್ತಿಗೊಳಪಟ್ಟವೆ.

ಆಧುನಿಕ ಬೇಟೆಸಾಹಿತ್ಯದ ಸುಮಾರು ಮೂವತ್ತೈದಕ್ಕೂ ಹೆಚ್ಚು ಕೃತಿಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ. ಕುವೆಂಪು, ಕೆದಂಬಾಡಿ ಜತ್ತಪ್ಪ ರೈ, ಬಿ.ಡಿ.ಸುಬ್ಬಯ್ಯ, ಕೈರೆಜೆ ವಿಷ್ಣುಭಟ್ಟ, ಎಂ.ಮಂಜಪ್ಪಶೆಟ್ಟಿ, ಶಶಿಧರ ವಿಶ್ವಾಮಿತ್ರ, ಕಡಿದಾಳು ರಾಮಪ್ಪಗೌಡ, ಬಡ್ಡಡ್ಕ ಅಪ್ಪಯ್ಯಗೌಡ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಮೊದಲಾದವರ ಕೃತಿಗಳನ್ನು, ವಿದೇಶಿಯರ ಬರವಣಿಗೆಗಳನ್ನು ಗಮನಿಸಲಾಗಿದೆ. ಸಂದರ್ಭಾನುಸಾರ ವಿಶ್ವಾದ್ಯಂತ ಕಂಡು ಬರುವ ಬೇಟೆಯ ಸ್ವರೂಪ ಹಾಗೂ ಬೇಡರ ಬದುಕನ್ನು ವಿಶ್ಲೇಷಿಸಲಾಗಿದೆ.

ವಿಧಾನ :

ಪ್ರಸ್ತುತ ಅಧ್ಯಯನದಲ್ಲಿ ಚಾರಿತ್ರಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನವಿದೆ. ಈ ವ್ಯಾಪ್ತಿಯೊಳಗೆ ಬರುವ ಕಾವ್ಯಗಳಲ್ಲಿ ಅಂತರ್ಗತವಾದ ಬೇಟೆ ಮತ್ತು ಬೇಡರ ಸಂದರ್ಭಗಳನ್ನು ಗುರುತಿಸಲಾಗಿದೆ. ಜೊತೆಗೆ ಆಧುನಿಕ ಬೇಟೆ ಕುರಿತ ಅನೇಕ ಕೃತಿಗಳ ಅವಲೋಕನವನ್ನೂ ಕೈಗೊಳ್ಳಲಾಗಿದೆ. ಸಾಹಿತ್ಯ ಕೃತಿಗಳಲ್ಲಿನ ಕಥಾ ಪ್ರಸಂಗಗಳು ಕಾರ್ಯಕಾರಣ ಸಂಬಂಧ ಹೊಂದಿರುವುದರಿಂದ ಕಾವ್ಯಗಳು ಪ್ರಾಥಮಿಕ ಆಕರಗಳಾಗಿವೆ. ಮೌಖಿಕ ಸಾಹಿತ್ಯ ಚಿತ್ರಿಸುವ ಬೇಟೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಪೂರಕವಾಗಿ ಶಾಸನ, ವೀರಗಲ್ಲು, ಮಾಸ್ತಿಕಲ್ಲು, ಚಿತ್ರಕಲೆ, ವಾಸ್ತುಶಿಲ್ಪ ಮೊದಲಾದುವನ್ನು ಸಂದರ್ಭಾನುಸಾರ ಅನುಸರಿಸಲಾಗಿದೆ.

ಕಾವ್ಯ ಕುರಿತು ಅನೇಕ ಬಗೆಯ ವ್ಯಾಖ್ಯಾನಗಳಿವೆ. ಆಯಾ ಕಾಲಘಟ್ಟದ ವಸ್ತು, ವ್ಯಕ್ತಿ, ಘಟನೆಗಳನ್ನು ಆಧರಿಸಿ ನಿರೂಪಿಸುವ ಕಾವ್ಯ ಒಂದು ಸಂಕಥನದಂತೆಎನ್ನಲಾಗುವುದು. ಕಾವ್ಯದ ಲಕ್ಷಣಗಳಿಗೆ ಒಳಪಡುವ ಘಟನೆ ವಿಶೇಷಾರ್ಥ ಕೊಡುವಂಥಾದ್ದು. ಚರಿತ್ರೆಯಲ್ಲಿ ವಸ್ತುನಿಷ್ಠತೆಗೆ ಹತ್ತಿರವಾಗಿರುವುದು ಸಹಜ. ಹೀಗಾಗಿ ವಿವರಣಾತ್ಮಕವಾಗಿ ತಿಳಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಕಾವ್ಯ ಎಂದಿಗೂ ಚರಿತ್ರೆಯೆನಿಸಲಾರದು. ಚರಿತ್ರೆಗೆ ಪೂರಕವಾದ ಆಧಾರಗಳನ್ನು ಒದಗಿಸಬಹುದಷ್ಟೆ. ಹಾಗಾಗಿ ಇಲ್ಲಿನ ಅಧ್ಯಾಯಗಳಲ್ಲಿ ಚರಿತ್ರೆ, ಭೂಗೋಳ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಜಾನಪದ ಮೊದಲಾದ ಅಂತರಶಾಸ್ತ್ರೀಯ ಶಿಸ್ತುಗಳ ಆಕರಗಳನ್ನು ಬಳಸಿಕೊಂಡಿದೆ. ಕಾವ್ಯದ ಸಂದರ್ಭಗಳು ಗತಕಾಲದ ವಿಷಯಗಳನ್ನೇ ಪ್ರಸ್ತಾಪಿಸುವುದರಿಂದ ಅವುಗಳಿಗೆ ಚಾರಿತ್ರಿಕ ಮಹತ್ವವಿದೆ.

ಪ್ರಸ್ತುತ ಅಧ್ಯಯನಕ್ಕೆ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಲಾವಣಿ, ಜನಪದ ಗೀತೆ, ಕೋಲಾಟ ಪದ, ಸೋಬಾನೆ, ಐತಿಹಾಸಿಕಪುರುಷರ ಕತೆಗಳು, ಬೇಡರಬೆಡಗು, ದೇವರುಗಳು ಮತ್ತು ಸ್ಥಳನಾಮಗಳನ್ನು ಬಳಸಿಕೊಳ್ಳಲಾಗಿದೆ. ಅಗತ್ಯ ಛಾಯಾಚಿತ್ರ-ರೇಖಾಚಿತ್ರಗಳನ್ನು ಕೊಡಲಾಗಿದೆ. ವಿಜಯನಗರ ಮತ್ತು ಅನಂತರದ ಬೇಟೆ, ಪ್ರಚಲಿತ ಬೇಟೆ ಕುರಿತಂತೆ ಇಲ್ಲಿ ವಿಶೇಷವಾಗಿ ಅವಲೋಕಿಸಲಾಗಿದೆ. ಪ್ರಕಟಗೊಂಡ ಸಾಹಿತ್ಯ ಕೃತಿಗಳು, ಚರಿತ್ರೆ ಕೃತಿಗಳಲ್ಲದೆ, ಲೇಖನ, ಪತ್ರಿಕೆ, ಅಪ್ರಕಟಿತ ಹಸ್ತಪ್ರತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಪ್ರಸ್ತುತ ಪ್ರಬಂಧವನ್ನು ಅಧ್ಯಯನ ದೃಷ್ಟಿಯಿಂದ ಒಂಭತ್ತು ಅಧ್ಯಾಯಗಳಾಗಿ ವಿಭಾಗಿಸಿಕೊಳ್ಳಲಾಗಿದೆ. ಮೊದಲ ಅಧ್ಯಾಯದಲ್ಲಿ ಬರುವ ಸಂಗತಿಗಳನ್ನು ಈ ಹಿಂದೆಯೆ ಪೀಠಿಕಾರೂಪದಲ್ಲಿ ತಿಳಿಸಲಾಗಿದೆ.

ಅಧ್ಯಾಯ ಎರಡರಲ್ಲಿ ನಾಲ್ಕು ಉಪ ವಿಭಾಗಗಳಿವೆ. ಬೇಟೆಯ ಚಾರಿತ್ರಿಕ ಪರಿಕಲ್ಪನೆ ಮತ್ತು ಪ್ರಕ್ರಿಯೆಯಲ್ಲಿ ಮಾನವನ ಆಹಾರ ಸಂಗ್ರಹಣೆಯ ವಿವಿಧ ಹಂತಗಳನ್ನು ಗುರುತಿಸಲಾಗಿದೆ. ಆ ಮೂಲಕ ಉತ್ತರಧ್ರುವ, ಆಸ್ಟ್ರೇಲಿಯ,

ಆಫ್ರಿಕಾ, ಯುರೋಪ್, ಏಷ್ಯಾ, ಅಮೆರಿಕ ಮೊದಲಾದ ಭೂಖಂಡಗಳನ್ನು ಪರಿಚಯಿಸಲಾಗಿದೆ. ಒಂದನೇ ಉಪಶೀರ್ಷಿಕೆಯಲ್ಲಿ ಭಾರತದಲ್ಲಿ ಬೇಟೆಗಾರಿಕೆ ಮತ್ತು ಬೇಟೆಸಂಬಂಧಿ ಬುಡಕಟ್ಟುಗಳ ಬಗೆಗೆ ತಿಳಿಸುವ ಪ್ರಯತ್ನ ಮಾಡಲಾಗಿದೆ. ಎರಡನೇ ಉಪಶೀರ್ಷಿಕೆಯಲ್ಲಿ, ಸಾಂಸ್ಕೃತಿಕವಾಗಿ ಆಳರಸರು ಕೈಗೊಂಡ ಬೇಟೆ ಪ್ರಸಂಗಗಳನ್ನು ವಿಶ್ಲೇಷಿಸಿ, ರಾಜ, ಮಂತ್ರಿ, ದಂಡನಾಯಕ ಮೊದಲಾದವರ ಪಾತ್ರವನ್ನು .ಗಮನಿಸಿದೆ. ಮೌರ್ಯರಿಂದ ಹಿಡಿದು ಬ್ರಿಟಿಷರವರೆಗೆ ಬರುವ ವಿವಿಧ ರಾಜಮನೆತನ, ಅರಸರುಗಳ ಕಾಲದ ಬೇಟೆಯ ಸಂದರ್ಭಗಳನ್ನು ವಿವರಿಸಲಾಗಿದೆ. ಉಪಶೀರ್ಷಿಕೆ ಮೂರರಲ್ಲಿ ಬೇಟೆ ಕುರಿತು ಈವರೆಗೆ ಬಂದಿರುವ ಕೃತಿಗಳ ಸಮೀಕ್ಷೆ ನಡೆಸಲಾಗಿದೆ. ಕೊನೆಯ ಭಾಗದಲ್ಲಿ ಬೇಡ, ಶಬರ, ಪುಲಿಂದ ಎಂಬ ಬೇಡರ ಪರ್ಯಾಯ ಪಂಗಡಗಳ ವೃತ್ತಿ, ವರ್ಗಗಳನ್ನು ಕುರಿತು ಅವಲೋಕಿಸಲಾಗಿದೆ.

ಬೇಡ ಜನಾಂಗದ ಚಾರಿತ್ರಿಕ ಹಿನ್ನೆಲೆಯನ್ನು ಅಧ್ಯಾಯ ಮೂರರಲ್ಲಿ ಚರ್ಚಿಸಲಾಗಿದೆ. ಬೇಟೆಗಾರ, ಪಶುಪಾಲಕ, ಕೃಷಿಕನಾಗಿರುವ ವ್ಯವಸ್ಥೆಗಳಲ್ಲದೆ, ತಳವಾರ, ದಳವಾಯಿ, ದಂಡನಾಯಕ, ಸೈನಿಕ, ಪಾಳೆಯಗಾರರಾದಾಗ ಏರ್ಪಟ್ಟ ಸಾಂಸ್ಕೃತಿಕ ಸಂಘರ್ಷಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕು ಪ್ರಬಂಧದ ಮುಖ್ಯ ಭಾಗ. ಕನ್ನಡ ಕಾವ್ಯಗಳು ನಿರೂಪಿಸುವ ಬೇಟೆಯನ್ನು ಲೌಕಿಕ ಮತ್ತು ಅಲೌಕಿಕವೆಂದು ತಿಳಿಯಲಾಗಿದೆ. ಲೌಕಿಕ ಬೇಟೆಯಲ್ಲಿ ಪ್ರಜಾರಕ್ಷಣೆ, ಹಸಿವಿಗಾಗಿ ಬೇಟೆ ವಾಸ್ತವವೆಂಬಂತಿದೆ. ಅಲೌಕಿಕ ಬೇಟೆಯಲ್ಲಿ ಕಿರಾತಾರ್ಜುನೀಯ ಪ್ರಸಂಗವನ್ನು ಕಾವ್ಯಲಕ್ಷಣಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದ್ದು, ಶಿಷ್ಟ ಸಾಹಿತ್ಯದಂತೆ ಮೌಖಿಕ ಸಾಹಿತ್ಯದಲ್ಲಿ ಬೇಟೆ ವ್ಯಕ್ತಗೊಂಡ ಬಗೆಯನ್ನೂ ಅನುಲಕ್ಷಿಸಿ ಇಲ್ಲಿ ಸಮೀಕ್ಷಿಸಲಾಗಿದೆ.

ಕಾವ್ಯಗಳ ಹಿನ್ನೆಲೆಯಲ್ಲಿ ಬೆಳೆದು ಬಂದ ಬೇಟೆ ಮತ್ತು ಬೇಡರ ಸಂಸ್ಕೃತಿಯನ್ನು ಐದನೇ ಅಧ್ಯಾಯದಲ್ಲಿ ತಿಳಿಸಿದೆ. ಮಧ್ಯಕಾಲದಲ್ಲಿ ಪ್ರಚಲಿತವಿದ್ದ ಜನಜೀವನ ದೃಶ್ಯಗಳನ್ನು ಬೆಳಕಿಗೆ ತರುವ ನಿಟ್ಟಿನಲ್ಲಿ ಆಹಾರ, ಉಡುಗೆ, ತೊಡುಗೆ, ನಂಬಿಕೆ, ಆರಚಣೆ, ಆಯುಧಗಳಲ್ಲದೆ, ಬೇಟೆಯ ಸ್ವರೂಪ ಹಾಗೂ ವಿಧಾನಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಆರರಲ್ಲಿ ಆಧುನಿಕ ಪರಿಕಲ್ಪನೆಯ ನೆಲೆಯಲ್ಲಿ ಬೆಳೆದು ಬಂದ ಬೇಟೆಯನ್ನು ವಿಧಿ-ನಿಷೇಧ, ನೀತಿ-ನಿರ್ಬಂಧ, ವಲಸೆ, ಪರಂಪರೆ ಪರಿವರ್ತನೆ ಇತರ ಸಂಗತಿಗಳ ಮೂಲಕ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಏಳರಲ್ಲಿ ಪ್ರಚಲಿತವಿರುವ ಬೇಟೆಯ ವಿಧ, ಬಗೆಗಳನ್ನು ಬೇಡ ಜನಾಂಗದ ಸ್ಥಿತಿಗತಿಗಳನ್ನು, ಸರ್ಕಾರದ ಕಾಯ್ದೆ-ಕಾನೂನು, ಅಭಯಾರಣ್ಯಗಳ ಅಭಿವೃದ್ಧಿ ಯೋಜನೆ, ಪ್ರಾಣಿ ದಯಾಸಂಘಗಳ ಸ್ಥಾಪನೆ ಮೊದಲಾದವನ್ನು ಚರ್ಚಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಮೇಲಿನ ಎಲ್ಲ ಅಧ್ಯಾಯಗಳಲ್ಲಿ ಕಂಡುಕೊಂಡ ಫಲಿತಾಂಶಗಳನ್ನು ಸಮಾರೋಪವಾಗಿ ವಿಶ್ಲೇಷಿಸಲಾಗಿದೆ; ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

ಅಧ್ಯಾಯ - ೨.

ಬೇಟೆಯ ಚಾರಿತ್ರಿಕ ಪರಿಕಲ್ಪನೆ ಮತ್ತು ಪ್ರಕ್ರಿಯೆ

ಬೇಟೆಯ ಚಾರಿತ್ರಿಕ ಪರಿಕಲ್ಪನೆ ಮತ್ತು ಪ್ರಕ್ರಿಯೆ

ಬೇಟೆಯ ಅರ್ಥ

ಮಾನವ ತನ್ನ ಜೀವನದ ನಿರ್ವಹಣೆಗಾಗಿ ಕೈಗೊಂಡ ವೃತ್ತಿಗಳಲ್ಲಿ ಬೇಟೆ ಮೊದಲನೆಯದು ಎನ್ನಲಾಗಿದೆ. 'ಬೇಟೆ' ಎನ್ನುವ ಶಬ್ದಕ್ಕೆ ಪ್ರಾಣಿಗಳನ್ನು ಹಿಂಸಿಸುವ, ಕೊಲ್ಲುವ ಅರ್ಥ ರೂಢಿಯಲ್ಲಿದೆ. ಇಲ್ಲಿ ಪ್ರಾಣಿ, ಪಕ್ಷಿ, ಜಲಚರಗಳನ್ನು ನಾನಾ ತರಹದ ಆಯುಧಗಳಿಂದ ಕೊಲ್ಲುವ ಪ್ರಕ್ರಿಯೆಗೆ ಬೇಟೆ ಎನ್ನಲಾಗುತ್ತಿದೆ. ಇದಕ್ಕೆ ಶಿಕಾರಿ, ಮೃಗಯಾ ಎಂತಲೂ ಕರೆಯುವರು. ಇಂಗ್ಲಿಷ್‌ನ 'Hunting' ಪದಕ್ಕೆ ಕನ್ನಡದಲ್ಲಿ 'ಬೇಟೆ' ಎಂದು ಪ್ರಯೋಗಿಸಲಾಗಿದೆ. ಈ ಬೇಟೆಯಾಡುವವರಿಗೆ ಬೇಟೆಗಾರ, ಬೇಡರೆಂದು ಕರೆಯುವರು. ಇವರು ಬೇಟೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುವುದು ಸ್ಪಷ್ಟ.

ದ್ರಾವಿಡ ಭಾಷೆಗಳಲ್ಲಿ 'ಬೇಟೆ' ಗೆ ಸಮಾನವಾದ ಅನೇಕ ಪದಗಳಿವೆ. ತಮಿಳಿನಲ್ಲಿ ವೇಟ್ಟೈ, ವೇಟೆ, ವೇಡು; ತುಳುವಿನಲ್ಲಿ ಬೋಣ್ಟೆ ಅಥವಾ ಬೋಂಟೆ; ಮಲಯಾಳಂನಲ್ಲಿ ವೇಟ್ಟ; ತೆಲುಗಿನಲ್ಲಿ ಏಟ, ವೇಟ ಮುಂತಾದ ಪದಗಳ ಪ್ರಯೋಗವಿದೆ. 'ವೇಂಟ್ಟೈ ಎಂಬುದು ಮೂಲ ದ್ರಾವಿಡ ಪದ. ಬೇಟೆ ಎಂಬ ಪದದಲ್ಲಿ ಪೂರ್ವಾರ್ಧ ಪ್ರಕೃತಿ ಅಥವಾ ಧಾತು, ಉತ್ತರಾರ್ಧ ಪ್ರತ್ಯಯ ಅಂದರೆ ಬೇಳ್ + ಟೆ ಎಂಬುದಾಗಿ ವಿಶ್ಲೇಷಿಸಲಾಗಿದೆ. ಬೇಟೆ ಶಬ್ದದ ವಿಕಾಸವನ್ನು ವೇಂಟ್ಟೈ > ವೇಟ್ಟೈ> ವೇಟೆ ಮತ್ತು ವೇಂಟೆ> ಬೇಟೆಯಾಗಿದೆ ಎನ್ನಬಹುದು.[೧]

ಚಾರಿತ್ರಿಕ ಪರಿಕಲ್ಪನೆ

ಹಸಿವು ಮತ್ತು ಬಾಯಾರಿಕೆ ಮಾನವನ ಸ್ವಾಭಾವಿಕ ಬಯಕೆಗಳಾಗಿವೆ. ಹಸಿವಿನಿಂದ ಅವನು ಅನ್ನ ಮಾರ್ಗವನ್ನು ಅನುಸರಿಸಿ ದಾಹವನ್ನು ತೀರಿಸಿಕೊಳ್ಳುವ ವಿಧಾನ ಮಾನವನ ಉಗಮದಷ್ಟೇ ಹಳೆಯದು. ಹಸಿವು, ಬಾಯಾರಿಕೆ ಜೀವಂತ ವ್ಯಕ್ತಿಯ ಅವಿಭಾಜ್ಯ ಅಂಗಗಳು. ಅವುಗಳಲ್ಲಿ ನಾನಾ ಬಗೆಯ ಮಾದರಿಗಳಿವೆ. ಪ್ರಾಥಮಿಕವಾಗಿ: ಆಹಾರಕ್ಕಾಗಿ ಅವಿರತ ಹೋರಾಟ; ಇಲ್ಲಿ ಸಿಕ್ಕ ಸಿಕ್ಕ ವಸ್ತುಗಳ ರುಚಿ ನೋಡುತ್ತಾ ಹಸಿವು ನೀಗಿಸಿಕೊಳ್ಳುತ್ತಿದ್ದನಲ್ಲದೆ, ಭೌಗೋಳಿಕವಾಗಿ ದೊರೆಯುತ್ತಿದ್ದ ಮರದ ಎಲೆ, ಸೊಪ್ಪು, ಗೆಡ್ಡೆ - ಗೆಣಸು, ಕಾಯಿ, ಹಣ್ಣು- ಹಂಪಲುಗಳನ್ನು ಸೇವಿಸುತ್ತಿದ್ದಿರಬೇಕು.

ರಕ್ತಪರಿಚಲನೆಗೆ ಆಹಾರ, ನೀರು ಮತ್ತು ಗಾಳಿ ಅತ್ಯಗತ್ಯ. ಆಹಾರ ಪ್ರಕೃತಿದತ್ತ ಕೊಡುಗೆಯಾಗಿದ್ದರೂ, ಶ್ರಮದ ಮೂಲಕ ಪಡೆಯಬೇಕಾಗುವುದು. ಆದಕ್ಕಾಗಿ ಮಾನವ ಅನೇಕ ರೀತಿಯ ಆಯಾಮಗಳ ಮೂಲಕ ಸೇವಿಸುವ ಆಹಾರದ ಸ್ವರೂಪ, ವಿಧಗಳನ್ನು ಅನ್ವೇಷಿಸಿದ. ಆಹಾರವು ಎರಡು ರೀತಿಯಲ್ಲಿ ಬಳಕೆಯಲ್ಲಿದ್ದಿರಬೇಕು. ಒಂದು : ಪ್ರಕೃತಿ ಮಡಿಲಲ್ಲಿ ಅಲೆದಾಡಿ ಸಸ್ಯಾಹಾರವನ್ನು ಸಂಗ್ರಹಿಸಿದರೆ, ಎರಡನೆಯದು ಹೋರಾಡುವುದರ ಮೂಲಕ ಮಾಂಸಾಹಾರವನ್ನು ಪಡೆಯುತ್ತಿದ್ದದ್ದು. ಆಹಾರಕ್ಕಾಗಿ ಅಲೆದಾಡುವ ಮಾನವ ತನ್ನ ಬೇಡಿಕೆ ಈಡೇರಿದಂತೆ ಮತ್ತೊಂದಕ್ಕೆ

ಆಸೆಪಟ್ಟಿರಬೇಕು. ಅದು ನಾಗರೀಕತೆಯ ಮೊದಲ ಮೆಟ್ಟಲು ಎಂದರೆ ತಪ್ಪಲ್ಲ. ಗೆಡ್ಡೆ, ಗೆಣಸುಗಳ ಅನ್ವೇಷಣೆ ಮೂಲಕ ಇಡೀ ಭೌಗೋಳಿಕತೆಯ ಅರಿವಾಗಿರಬೇಕೆಂದು ತಿಳಿಯಬಹುದು. ಆ ಮೂಲಕ ಪ್ರಾಣಿಸಂಕುಲ, ಆಯುಧ ಶೋಧನೆ, ಸಂಚಾರ ಮಾರ್ಗಗಳ ನಿರ್ಮಾಣ, ತರುವಾಯ ಪ್ರಾಣಿಗಳ ಸಂಖ್ಯೆ ಇಳಿಮುಖವಾದಂತೆ ಕ್ರೂರ ಪ್ರಾಣಿ ಹೊರತಾದ ಪ್ರಾಣಿಗಳನ್ನು ಸಾಕುವುದು ಬೆಳೆಯಿತೆನ್ನಬಹುದು. ಸಂಘಟನೆ, ತಂತ್ರಜ್ಞಾನದೊಂದಿಗೆ ಪಶುಪಾಲನೆಯಿಂದ ಕೃಷಿಯಲ್ಲಿ ನೆಮ್ಮದಿಯನ್ನು ಕಾಣಲು ಆತುರಪಟ್ಟ ಮಾನವ, ಜೊತೆ ಜೊತೆಗೆ ಸಾಧು ಪ್ರಾಣಿಗಳನ್ನು ಹಿಡಿದು ಕೊಲ್ಲುವ ಪ್ರಕ್ರಿಯೆ ನಿರ್ದಾಕ್ಷಿಣ್ಯವಾಗಿ ಮುಂದುವರೆಯಿತು. ಇದು ಇನ್ನೊಂದು ರೀತಿಯ 'ಹಿಂಸೆ'ಯ ರೂಪ ತಾಳಿದ್ದು, ತನ್ನ ಹಸಿವಿಗಾಗಿಯೇ ಹೊರತು ಬೇರೆ ಅಲ್ಲ ಎನ್ನಬಹುದು. ಕೊಲ್ಲುವ ಮತ್ತು ಕೊಲ್ಲಿಸುವ ಪ್ರಯೋಗವು ಈ ರೀತಿಯಿಂದಲೇ ಉಗಮವಾಗಿರಬೇಕು. ಮಾನವ ಏಕಾಂಗಿಯಾಗಿ ಕೊಲ್ಲದೆ ತನ್ನ ಸಮುದಾಯದೊಂದಿಗೆ ಕೂಡಿ ಹಿಂಸೆ, ಪ್ರತಿಹಿಂಸೆಗಳ ಮೂಲಕ ಜೀವಂತ ಪ್ರಾಣಿಗಳನ್ನು ಅನೂಚಾನವಾಗಿ ಕೊಲ್ಲುತ್ತಾ ಬಂದಿರುವನು. ಇದು ಪ್ರಾಣಿ-ಪ್ರಾಣಿಯನ್ನು ಕೊಲ್ಲುವ ಪ್ರಕ್ರಿಯೆ, ಮಾನವ - ಮಾನವನನ್ನು ಬೇಟೆಯಾಡಲು ಸಹಕಾರಿಯಾಯಿತೆನ್ನಬಹುದು. 'ಹಸಿವು' ಪ್ರಾಣಿ ಜಗತ್ತನ್ನು ಉಳಿಸುವ, ಕ್ಷೀಣಿಸುವಲ್ಲಿ ಪ್ರಕೃತಿ ಅಕ್ಷಯ ಸಂಪತ್ತಾಗಿ ನಿಲ್ಲುತ್ತದೆ. 'ನೀರು' ಸಹ ಮಾನವ ಜೀವಂತಿಕೆಗೆ ಅಗತ್ಯ. ಅದು ಪ್ರಕೃತಿ ಮಡಿಲಲ್ಲಿ ಹರಿದರೂ ನಿರ್ದಿಷ್ಟ ಸ್ಥಳ, ಸಮಯದಲ್ಲಿ ದೊರೆಯುವುದಿಲ್ಲ. ಮಾನವ ಇದಕ್ಕಾಗಿ ಸಾಹಸಮಯವಾದ ಕಾರ್ಯಚಟುವಟಿಕೆ ನಡೆಸುತ್ತಾನೆ. ಮತ್ತೊಂದು ಗಾಳಿ: ಉಸಿರಾಡುವುದಕ್ಕೆ ಇದು ಅಗತ್ಯ. ಗಾಳಿಯೇ ಇಲ್ಲದಿದ್ದಲ್ಲಿ ಪ್ರಾಣಿಜಗತ್ತು ಭೂ ಮಂಡಲದಿಂದ ಕಣ್ಮರೆಯಾಗುತ್ತಿತ್ತು. ಹಸಿವನ್ನು ನೀಗಿಸಿಕೊಳ್ಳುವ ಕ್ರಿಯೆ ಅವನ ಮನಸ್ಸನ್ನು ಕಲಕುವಂತೆ, ಪಲ್ಲಟಗೊಳಿಸುವಂತೆ ಮಾಡಿದ್ದು ಈ ಶತಮಾನದಲ್ಲಿ. ಆದಿಯಿಂದ ಈ ಶತಮಾನದ ಮಧ್ಯದವರೆಗೆ ಬೇಟೆಗೆ ಕಡಿವಾಣ ಇರಲಿಲ್ಲವಾದ ಕಾರಣ ರಾಜಾರೋಷವಾಗಿ ನಡೆಯುತ್ತಿತ್ತು. ಹೀಗೆ ವಿಶ್ವದ ಚರಿತ್ರೆಯಲ್ಲಿ ಮಾನವ ಉಗಮವಾದಂದಿನಿಂದ ಇಂದಿನವರೆಗೆ ಆಹಾರ ಸಂಗ್ರಹಣೆ, ಬೇಟೆಗಾರಿಕೆ ಕುರಿತಂತೆ ಕೆಲವು ಪ್ರಮುಖ ಸಂಗತಿಗಳನ್ನು ಈ ಮುಂದೆ ಸಮೀಕ್ಷಿಸಲಾಗುವುದು.

ವಿಶ್ವದಲ್ಲಿ ಸಾಗರ, ನದಿ-ಸರೋವರ, ಬೆಟ್ಟ-ಗುಡ್ಡಗಳಲ್ಲದೆ, ಬೃಹದಾರಣ್ಯ, ಮರುಭೂಮಿ ಮೊದಲಾದ ಪ್ರದೇಶಗಳಲ್ಲಿ ವಾಸಿಸುವ ಅನೇಕ ಸಮುದಾಯಗಳು ಬೇಟೆಯನ್ನು ಜೀವನಾಶ್ಯಕವಾಗಿ, ಮನೋರಂಜನೆಯ ವೃತ್ತಿಯಾಗಿ ಅವಲಂಬಿಸಿವೆ. ಮಾನವನ ವಿಕಾಸದ ಜೊತೆ ಜೊತೆಗೆ ಬೇಟೆಯು ಪ್ರಧಾನವಾಗಿ ಬೆಳೆದು ಬಂದಿರುವುದು ಸ್ಮರಣೀಯ.

ವಿಶ್ವದ ಆದಿಇತಿಹಾಸಪೂರ್ವ ಸಮಾಜಗಳನ್ನು ಕುರಿತಂತೆ ಹಳೆ ಶಿಲಾಯುಗದಿಂದ ಮಾನವನ ಚರಿತ್ರೆಯನ್ನು ಇಂದಿನವರೆಗೂ ನೋಡಬಹುದು. ಪುರಾತನ ಶಿಲಾಯುಗದ ಸಮಾಜಗಳಿಂದ ಮಾನವನ ಉತ್ಕ್ರಾಂತಿಯನ್ನಷ್ಟೆ ಅಲ್ಲದೆ ತಾಂತ್ರಿಕ ಸಾಮರ್ಥ್ಯ ಮತ್ತು ಸಾಂಸ್ಕೃತಿಕ ವೈಶಾಲ್ಯತೆ, ಬೌದ್ಧಿಕವಿಕಾಸ, ಪರಿಸರದ ಹೊಂದಾಣಿಕೆ ಇತ್ಯಾದಿ ಸಂಗತಿಗಳು ತಿಳಿಯುತ್ತವೆ. ಮಾನವ ಗೊರಿಲ್ಲಾ, ಚಿಂಪಾಂಜಿಗಳ ತರಹ ತನ್ನ ಪೂರ್ವಜರಿಂದ ವಿಕಾಸ ಹೊಂದುತ್ತ ಇಂದಿನ ದೈಹಿಕ ಸ್ವರೂಪ ತಳೆದನು.[೨] ಮಾನವನ ಪ್ರಾಚೀನತೆ ೩.೫ ಮಿಲಿಯನ್ ವರ್ಷಗಳ ಹಿಂದಿನಷ್ಟು ಹೋಗುತ್ತದೆ. ಪ್ಲಿಸ್ಟೋಸಿನ್ ಕಾಲದಲ್ಲಿ ೪.೨. ಮಿಲಿಯನ್ ವರ್ಷಗಳ ಹಿಂದೆ ಆಫ್ರಿಕೆಯಲ್ಲಿ ಮಾನವನಿದ್ದ. ಈ ಮಾನವನ ಆಹಾರ ಸಂಗ್ರಹಣೆ; ಬೇಟೆಯನ್ನು ಚರಿತ್ರೆಯಲ್ಲಿ ಶಿಲಾಯುಗದಿಂದ ಈ ರೀತಿ ವಿಂಗಡಿಸಲಾಗಿದೆ :

೧. ಹಳೆ ಶಿಲಾಯುಗ (Palaeolithic)

೨. ಮಧ್ಯ ಶಿಲಾಯುಗ (Measolithic) ಮತ್ತು

೩. ನವಶಿಲಾಯುಗ (Neolithic)

ಮೇಲಿನ ಹಳೆ ಶಿಲಾಯುಗವನ್ನು ಮತ್ತೆ ೩ ಹಂತಗಳಾಗಿ ವಿಭಾಗಿಸಿದ್ದಾರೆ :

೧. ಆದಿ ಹಳೆ ಶಿಲಾಯುಗ

೨. ಮಧ್ಯ ಹಳೆ ಶಿಲಾಯುಗ ಮತ್ತು

೩. ಅಂತಿಮ ಹಳೆ ಶಿಲಾಯುಗ

ಇಲ್ಲಿನ ಪ್ರತಿಯೊಂದು ಹಂತದಲ್ಲಿಯೂ ಮಾನವ ಹಸಿವಿನ ದಾಹ ಇಂಗಿಸಿಕೊಳ್ಳಲು ಉಪಕರಣಗಳ ತಯಾರಿಕೆ, ಬಳಸಿದ ತಂತ್ರ, ಅವನ ಸಂಸ್ಕೃತಿಯ ವಿವಿಧ ಬೆಳವಣಿಗೆಗಳ ಜತೆ ಬೇಟೆ ಮತ್ತು ಆಹಾರ ಸಂಗ್ರಹಣೆ ವಾಸ್ತವವಾಗಿ ಬೆಳೆದು ಬಂದುದನ್ನು ನೋಡಬಹುದು.

೧. ಆದಿ ಹಳೆ ಶಿಲಾಯುಗ : ಈ ಹಂತದಲ್ಲಿ ಬೇಟೆಗಾರಿಕೆ ಮತ್ತು ಆಹಾರಸಂಗ್ರಹಣೆ ಇದ್ದು, ಪ್ರಥಮವಾಗಿ ಆಫ್ರಿಕಾದಲ್ಲಿ ಕಾಣಿಸಿಕೊಳ್ಳುತ್ತದೆ.[೩] ಇಲ್ಲಿ ವಿಲ್ಲಫ್ರಾಂಕನ್ ಅಥವಾ ಲೋಯೆರ್ **ಪ್ಲಿಸ್ಟೋಸೀನ್ ಯುಗ** ಅಂತಿಮವಾದುದು. ವಿಲ್ಲ ಫ್ರಾಂಕನ್ ಮಾನವನ ನಾಗರಿಕತೆಯ ಒಂದು ಹಂತ. ಆನೆ, ಕುದುರೆ ಮತ್ತು ಪಶುಗಳನ್ನು ಇಲ್ಲಿ ಸಾಕುತ್ತಿದ್ದುದು ವಿಶೇಷ.

ಪ್ಲಿಸ್ಟೋಸೀನ್ ಅವಧಿ ಎಂದರೆ ೧೦,೦೦೦ ವರ್ಷಗಳ ಹಿಂದಿನದು.[೪] ಈ ಅವಧಿಯಲ್ಲಿ ಉತ್ತರದ ಯುರೋಪ್, ಏಷ್ಯಾ ಮತ್ತು ಆಫ್ರೊ ಏಷ್ಯಾ ದೇಶಗಳಲ್ಲಿ ಪ್ಲಿಸ್ಟೋಸೀನ್ ಕೊನೆ ಹಂತದ ವಾಯುಗುಣ ಸುಧಾರಿಸಿ ಉತ್ತಮವಾದ ಹಿಮತಟ್ಟೆಗಳ (ಗಡ್ಡೆ) ಮೇಲೆ ಹಿಮ ಆಕ್ರಮಿಸಿತು. ಆಗ ಬೇಟೆಗಾರಿಕೆಯ ಜನಸಂಖ್ಯೆ ಹೆಚ್ಚಾದುದರಿಂದ ಆಹಾರದ ಸಮಸ್ಯೆ ದ್ವಿಗುಣವಾಯಿತು. ಪರಿಸರದ ಸಂಪತ್ತಿನ ಪ್ರಯೋಜನ ಪಡೆಯಲು ಚಳವಳಿ, ಅತಿಕ್ರಮಣ ಮಾಡುವುದು ಉಲ್ಬಣಗೊಂಡಾಗ, ಬೇಟೆ ಮತ್ತು ಆಹಾರ ಸಂಗ್ರಹಣೆ ಆ ಕಾಲದ ಆರ್ಥಿಕ ಬೆಳವಣಿಗೆಯ ಮುಖ್ಯ ಲಕ್ಷಣಗಳಾಗಿದ್ದವು.

ಯುರೋಪಿನಲ್ಲಿ ಅನೇಕ ಇತಿಹಾಸ ಪೂರ್ವ ನೆಲೆಗಳಿವೆ. ಮೆಡಿಟರೇನಿಯನ್ ಸಮುದ್ರಮಟ್ಟದ, ಆಫ್ರಿಕಾದ ಸಹರಾ ಮರುಭೂಮಿಯಲ್ಲಿ ಮಧ್ಯಪ್ಲಿಸ್ಟೋಸೀನ್ ಯುಗದ ಸಂಸ್ಕೃತಿ ಇತ್ತು. ಇವುಗಳ ಕಾಲಮಾನ ಕ್ರಿ.ಪೂ. ೮ ಮಿಲಿಯನ್ ವರ್ಷಗಳು. ಇಲ್ಲಿ ಆಹಾರ ಧಾನ್ಯಗಳ ಕೃಷಿ, ಪ್ರಾಣಿಗಳ ಸಾಕುವಿಕೆ (ಕುರಿ, ಮೇಕೆ) ಬೆಳೆಯಿತು. ಆಹಾರ ಸಂಗ್ರಹಣೆ ೭ ಮಿಲಿಯನ್‌ಗಳಷ್ಟು ಹಿಂದೆ ಇತ್ತಲ್ಲದೆ, ನವಶಿಲಾಯುಗದಲ್ಲಿ ವಿಪುಲವಾಗಿ ಕಂಡುಬರುತ್ತದೆ. ಡ್ಯಾನುಬ್, ಅಟ್ಲಾಂಟಿಕ್ ನದಿ ಮತ್ತು ಸಮುದ್ರ ತೀರ, ಬ್ರಿಟನ್‌ಪ್ರದೇಶದ ಹೊಸ ದ್ವೀಪಗಳು ಸೇರಿದಂತೆ ಪಶ್ಚಿಮ ಯುರೋಪ್‌ನಲ್ಲಿ ೩ ಮಿಲಿಯನ್ ವರ್ಷಗಳಿಂದಲೂ ಪ್ರಾಣಿಗಳನ್ನು ಸಾಕುತ್ತಿದ್ದರೆಂಬುದು ಸ್ಪಷ್ಟ.

ಆಹಾರ ಸಂಗ್ರಹಣೆ, ಹೊಸ ಆರ್ಥಿಕತೆಯ ವಿಸ್ತರಣೆಯು ನೈಲ್ ನದಿ, ಭಾರತ ಮತ್ತು ಆಗ್ನೇಯ ಏಶಿಯಾಗಳಲ್ಲಿ ಕ್ರಿ.ಪೂ.೫ ನೇ ಮಿಲಿಯನ್ ಹಿಂದಿನ ಕಾಲದಲ್ಲಿ ಪ್ರಾರಂಭವಾಯಿತು.[೫] ಹಾಗೆಯೇ ಪಶ್ಚಿಮ ಮತ್ತು ದಕ್ಷಿಣ ಏಷ್ಯಾದ ಅರಣ್ಯಗಳಲ್ಲಿ ಬೇಟೆ ವ್ಯಾಪಕವಾಗಿತ್ತು. ಆಫ್ರಿಕಾದ ಸಹರಾ ಮರುಭೂಮಿಯ ದಕ್ಷಿಣ ಭಾಗದಲ್ಲಿ ವಾಸ್ತವವಾಗಿ ಈ ಜನಸಂಖ್ಯೆ ದೊಡ್ಡ ಪ್ರಮಾಣದಲ್ಲಿತ್ತು. ಶಿಲಾಯುಗದಲ್ಲಿ ಬೇಟೆಗಾರರು ಮತ್ತು ಆಹಾರ ಸಂಗ್ರಹಕಾರರು ಕ್ರಿ.ಪೂ. ೧ ನೇ ಮಿಲಿಯನ್ ವರ್ಷಗಳಿಗಿಂತ ಮೊದಲಿಗೆ ಲೋಹ ವಿಜ್ಞಾನವನ್ನು ಬೆಳಕಿಗೆ ತಂದಿದ್ದರು ಎನ್ನಲಾಗಿದೆ. ಅಂದಿನಿಂದ ಯುರೋಪ್ ಖಂಡವು ಸಾಂಸ್ಕೃತಿಕ ಚರಿತ್ರೆ ಹೊಂದಿರುವುದು ಹೆಚ್ಚಾಗಿ ಕೈಗಾರಿಕೆ ಹಂತಗಳಲ್ಲಿ ಮಾತ್ರ.

ಇಲ್ಲಿ ಭೂವಿವರಣಶಾಸ್ತ್ರ ಅಧ್ಯಯನವು, ನದಿಹರಿಯುವ ಪದ್ಧತಿ, ವಾಯುಗುಣ, ಭೂಪ್ರದೇಶ, ಸಮುದ್ರ ಅಲೆಗಳಿಂದ ಸ್ತರಗಳುಂಟಾಗುವುದು, ಮಟ್ಟಗಳು, ಹಿಮಗಳು, ಸರೋವರ ಮುಂತಾದವು ಕಾಲಗಣನೆಗೆ ಸಹಾಯಕವಾಗಿದೆ. ಪುರಾತತ್ವಜ್ಞರು ಹೊಸ ಕಾಲಗಣನ ವಿಧಾನವನ್ನು ಶೋಧಿಸಿದ್ದಾರೆ. ಅದು ರೇಡಿಯೋ ಕಾರ್ಬನ್ ಮೆಥೆಡ್ (ಲಿಬಿ.೧೯೫೨); ಇದು ೭೫,೦೦೦ ವರ್ಷಗಳ ಹಿಂದಿನ ಕಾಲವನ್ನು ತಿಳಿಸುತ್ತದೆ. ತರುವಾಯ ಪೊಟ್ಯಾಶಿಯಂ ಆರ್ಗನ್ (ಎವರ್ಂಡನ್ ಮತ್ತು ಕುರ್ಟೀಸ್: ೧೯೬೫); ಅಗ್ನಿಶಿಲೆ, ಜ್ವಾಲಾಮುಖಿ ಮತ್ತು ಗುಹೆಗಳನ್ನು ಪೊಟ್ಯಾಶಿಯಂ ಆರ್ಗನ್ ಮೂಲಕ ಕಾಲಗಣನೆ ಮಾಡುತ್ತಾರೆ. ಆ ಮೂಲಕ ಬೇಟೆಯ ಆರಂಭ, ರೂಢಿ, ಸಂಪ್ರದಾಯಗಳನ್ನು ತಿಳಿಯಬಹುದು.

ಈ ಅವಸ್ಥೆಯ ನೆಲೆಗಳನ್ನು ೧ ನೇ ಮತ್ತು ೨ ನೇ ಮಹಾಯುದ್ಧಗಳ ಸಂದರ್ಭದಲ್ಲಿ ಉತ್ಖನನ ಮಾಡಿ ಕಾಲಗಣನೆ ಮಾಡುವುದನ್ನು ಸಂಶೋಧಿಸಲಾಯಿತು. ಗೊರಿಲ್ಲಾ, ಚಿಂಪಾಂಜಿ, ಪೂರ್ವಜರ ಭೂ ವಿಸ್ತರಣೆ, ವರ್ತನೆ, ಉಪಕರಣ, ವೃತ್ತಿ ಮುಂತಾದ ಲಕ್ಷಣಗಳನ್ನು ಬೆಳಕಿಗೆ ತರಲಾಯಿತು. ಅಂದಿನ ದಿನಗಳಲ್ಲಿ ಅವ್ಯಾಹತವಾಗಿ ನಡೆದ ಬೇಟೆ ಮತ್ತು ಆಹಾರ ಸಂಗ್ರಹಣೆಯ ಸಂದರ್ಭದಲ್ಲಿ ಜನಸಂಖ್ಯೆ ಹೆಚ್ಚಾಯಿತು. ಬೇಟೆಗಾರರ ಕುಟುಂಬ ಗೌರವ, ಸಾಮಾಜಿಕ, ಆರ್ಥಿಕ, ಸಂಘಟನೆಯಿಂದ ಇರುತಿತ್ತು. ಇತರ ಸಮುದಾಯಗಳ ಚಿತ್ರಣ ಹೇಗಿತ್ತೆಂದು ಊಹಿಸುವುದು ಕಷ್ಟ. ಸ್ವಾಭಾವಿಕ ಸಂಪತ್ತಿನ ಬಳಕೆ ಆದಿ, ಮಧ್ಯ ಪ್ಲಿಸ್ಟೋಸೀನ್ ಮತ್ತು ಆಸ್ಟ್ರೊಲೊಪಿಥಿಕೆನ್‌ನಲ್ಲಿ ಕೆಲವು ಲಕ್ಷಣಗಳು ಕಂಡುಬರುತ್ತವೆ.

೧ : ೧. ಆದಿಶಿಲಾಯುಗ ಮತ್ತು ಆಯುಧಗಳ ತಯಾರಕರು

ಆಫ್ರಿಕಾದ 'ಸವನ್ನಾ' ಹುಲ್ಲುಗಾವಲಿನಲ್ಲಿ ಮೊದಲ ಬಾರಿಗೆ ಕೈ ಬಳಕೆಯ ಆಯುಧಗಳ ತಯಾರಿಕೆ ಕಂಡುಬರುತ್ತದೆ. ಇಲ್ಲಿ 'ಏಪ್' ಎನ್ನುವ ಪೂರ್ವಜ ಮಾನವ ಕಲ್ಲಿನ ಆಯುಧಗಳ ತಯಾರಿಕೆ, ಬಳಕೆ ಮಾಡಿದ್ದಾನೆ.[೬] ದಕ್ಷಿಣಆಫ್ರಿಕಾದಲ್ಲಿ ಶಿಲಾಯುಧಗಳ ತಯಾರಿಕಾ ಘಟಕಗಳಿದ್ದವು. ಅಲ್ಲಿ ಮೂಳೆಗಳನ್ನು ಆಯುಧಗಳನ್ನಾಗಿ ಮಾಡುತ್ತಿದ್ದರು. ನಿಸರ್ಗದ ಸ್ವಾಭಾವಿಕ ಕಲ್ಲು-ಬಂಡೆಗಳ ಆಸರೆಗಳಲ್ಲಿ ವಸತಿ ನೆಲೆ ಮತ್ತು ಆಯುಧೋಪಕರಣಗಳನ್ನು ಬೇಟೆಗೆ ಬಳಸುತ್ತಿದ್ದರು. ಬೆಂಕಿ ಕಂಡುಹಿಡಿದ ತರುವಾಯ ಅಲ್ಪವಾಗಿ ಬದಲಾಯಿತು. ಅನಿವಾರ್ಯವಾಗಿ ಹಸಿವಿನ ನಿಮಿತ್ತ ಕಲ್ಲು ಮತ್ತು ಮೂಳೆಗಳಿಂದ, ಸಣ್ಣ ಗಾತ್ರದ ಆಯುಧಗಳಿಂದ ಪ್ರಾಣಿಯನ್ನು ಕೊಂದು ತಿನ್ನುತ್ತಿದ್ದರು. ಬೇಟೆಗಾರರು ವಿಶೇಷವಾಗಿ ಸಾಮರ್ಥ್ಯವಿಲ್ಲದ ಪ್ರಾಣಿಯಿಂದ ದೊರೆತ ಮಾಂಸವನ್ನು ಬಳಸುವ ರೀತಿ, ಕೊಳೆಯುವ ಮಾಂಸವನ್ನು ಶೇಖರಿಸುವ ರೀತಿಗಿಂತ ಭಿನ್ನವಾಗಿತ್ತು. ತಿನ್ನಲು ಯೋಗ್ಯವಾದ ಪ್ರಾಣಿ-ಪಕ್ಷಿಗಳ ಕಡೆ ಗಮನ ಹರಿಸುತ್ತಿದ್ದರು. ಅಂದು ಸಣ್ಣ, ಹರೆಯದ ಪ್ರಾಣಿಗಳನ್ನು ಕೊಲ್ಲಲು ಕರುಣೆ ತೋರುತ್ತಿದ್ದರು. ಸತ್ತ ಪ್ರಾಣಿಗಳನ್ನು ನೆನೆಯಿಟ್ಟು ಆನಂತರ ಆಹಾರವಾಗಿ ಪಡೆಯುತ್ತಿದ್ದರು.

೧.೨. ಮಧ್ಯ ಪ್ಲಿಸ್ಟೋಸೀನ್ ಸಂಸ್ಕೃತಿ

ಈ ಹಂತದಲ್ಲಿ ಮಾನವ ಆಯುಧ ಸಲಕರಣೆಯಲ್ಲಿ ತೊಡಗಿ ಕೈಗೊಡಲಿಯನ್ನು ತಯಾರಿಸುತ್ತಿದ್ದುದು ಏಷ್ಯಾ ಮತ್ತು ಯುರೋಪ್‌ಗಳಲ್ಲಿತ್ತು. ಫ್ರಾನ್ಸ್‌ನ ನದಿ ಪ್ರದೇಶದಲ್ಲಿ ಸಣ್ಣ ಕೊಡಲಿ ಕೈಗಾರಿಕೆಗಳಿದ್ದವು. ಅದೇ ರೀತಿ ಡ್ಯಾನುಬ್, ಹಂಗೇರಿ, ಜೋರ್ಡನ್ ಕಣಿವೆ, ಚೀನಾದ ಪೀಕಿಂಗ್ ಮತ್ತು ಆಫ್ರಿಕಾದಲ್ಲಿ ವಿವಿಧ ರೀತಿಯ ವೃತ್ತಿ ಸಲಕರಣೆಗಳ ತಯಾರಿಕಾ ಘಟಕಗಳಿದ್ದವು.

ಇಲ್ಲಿರುವಂತೆ ಸಾಮೂಹಿಕ ಸಂಘಟಿತ ಸಂಸ್ಕೃತಿ, ಪ್ರಾಣಿಗಳ ಸಾಕಣೆ, ಕಪ್ಪಾದ ಸುಣ್ಣದ ಕಲ್ಲಿನಿಂದ ಕೆತ್ತುವ, ಕುಟ್ಟುವ ಕೆಲಸಗಳಲ್ಲದೆ, ಸಿರಿಯಾ, ಆಫ್ರಿಕಾ ಮುಂತಾದ ದೇಶಗಳಲ್ಲಿ ಅವರ ಜನವಸತಿಗಳು ಕಂಡುಬರುತ್ತವೆ. ಬೇಟೆಗಾರಿಕೆಯಿಂದ ದೊಡ್ಡ ಪ್ರಮಾಣದ ಪ್ರಾಣಿಗಳನ್ನು ಸಾಯಿಸುವ ತಂತ್ರವು ಸುಧಾರಣೆಯಾಯಿತು. ಕೈ ಕೊಡಲಿ, ಸಣ್ಣ ಕೊಡಲಿ, ಕ್ಲೀವರ್ಸ್ ಮತ್ತು ಮೊನಚಾದ ಆಯುಧ ಮುಂತಾದವುಗಳ ತಯಾರಿಕ ನೆಲೆಗಳು ಸವನ್ನಾ ಹುಲ್ಲುಗಾವಲಿನಲ್ಲಿದ್ದವು.

೨. ಮಧ್ಯ ಹಳೆ ಶಿಲಾಯುಗ

ಯುರೋಪ್, ಆಫ್ರಿಕಾ ಇತರ ದೇಶಗಳಲ್ಲಿ ಸು.೩೫,೦೦೦ ವರ್ಷಗಳ ಹಿಂದೆ ಹೋಮೊಸೆಪಿಯನ್ಸ್ ಮಾನವನಿದ್ದ. ಇವನು ತ್ವರಿತವಾಗಿ ನಿಯಂಡರ್‌ಥಾಲ್ ಎಂಬ ರೂಪ ಪಡೆದಾಗ ಹೊಸ ಜನಾಂಗವೇ ಬೆಳೆಯಿತು. ಆಗ್ನೇಯ ಏಷ್ಯಾದಲ್ಲಿ ಸುಮಾರು ೪೦,೦೦೦ ವರ್ಷಗಳಷ್ಟು ಹಿಂದಿನ ದೊಡ್ಡದಾದ ನಿಹಾ (Niah) ಎನ್ನುವ ಗುಹೆಯಲ್ಲಿ ಅಂತಿಮ ಹಳೆಶಿಲಾಯುಗದ ಲಕ್ಷಣಗಳಿವೆ. ಈ ಅವಧಿಯಲ್ಲಿ ವಿನಾಶದ ಸಂಸ್ಕೃತಿಗಳಿದ್ದು, ಕೊಡಲಿ, ಚಾಕು, ಕತ್ತಿ, ಅಲಗು, ಮೊದಲಾದವುಗಳನ್ನು ಹೊತ್ತು ಸಾಗಿಸುವುದು: ಯುರೋಪ್ ಮತ್ತು ಪಶ್ಚಿಮ ಹಾಗೂ ಉತ್ತರ ಏಶಿಯಾದ ಹೊಮೊಸೆಪಿಯನ್ಸ್ ಮಾನವ ಜೀವಿಸುತ್ತಿದ್ದ ರೀತಿಯಾಗಿತ್ತೆಂದು ಊಹಿಸಲಾಗಿದೆ.

ಅಂತಿಮ ಹಳೆ ಶಿಲಾಯುಗದಲ್ಲಿ ಮೂಲಭೂತವಾದ ತಂತ್ರಜ್ಞಾನದ ಆವಿಷ್ಕಾರವಾಯಿತು. ಬೇಟೆಗಾರಿಕೆ ಜನಸಮುದಾಯಗಳು ತ್ವರಿತಗತಿಯಲ್ಲಿ ಬೆಳೆದು ತೀವ್ರವಾದ ಹಂತ ತಲುಪಿದವು. ವಿಶೇಷವಾಗಿ ಇವರು ಪ್ರಾದೇಶಿಕ ಮನೋಭಾವ ಮತ್ತು ಆಧುನಿಕತೆಯನ್ನು ಅಳವಡಿಸಿಕೊಂಡು, ಕಚ್ಚಾ ವಸ್ತುಗಳನ್ನು ವ್ಯಾಪಕವಾಗಿ ಆಹಾರ ಸಂಗ್ರಹಣೆಗೆಂದು ತಯಾರಿಸುತ್ತಿದ್ದರು.[೭]

ಮಾನವ ನದಿ ಮತ್ತು ಸರೋವರಗಳಿಂದ ಮೀನುಗಾರಿಕೆಯನ್ನು ಲಾಭಕರವಾಗಿ ಬಳಸಿಕೊಳ್ಳುವ ಮೊದಲು, ಸಮುದ್ರದ ಆಹಾರಕ್ಕೆ ಸೀಮಿತವಾಗಿರಬೇಕು. ನಂತರ ಬೇಟೆಯಲ್ಲಿ ಚಕ್ರಗಳು ಮತ್ತು ಸನ್ನೆ ಕೋಲುಗಳನ್ನು ಬಳಸುತ್ತಿದ್ದನಲ್ಲದೆ, ಸಂಪರ್ಕ ವ್ಯವಸ್ಥೆ ತನಗಾಗಿ ಮಾಡಿಕೊಳ್ಳುತ್ತಿದ್ದನಂತೆ. ಸಣ್ಣ ಸಣ್ಣ ಪ್ರಾಣಿಗಳನ್ನು ವಾರ್ಷಿಕದ ಕೆಲವು ಋತುಮಾನಗಳಲ್ಲಿ ಮಾತ್ರ ಕೊಲ್ಲುತ್ತಿದ್ದರು. ಈಗಾಗಲೇ ನಶಿಸಿಹೋಗಿರುವ ಸಸ್ತನಿ ಅಥವಾ ಬೃಹತ್ ಆನೆ ಅಥವಾ ಯುರೋಪಿಯಾದ ರಿಯಂಡರ್, ಜಬ್ರಾ ಅಥವಾ ಆಫ್ರಿಕಾದ ಹಂದಿ ಈ ದೊಡ್ಡ ಗಾತ್ರದ ಪ್ರಾಣಿಗಳನ್ನು ಅಂದು ಕೊಲ್ಲಲಾಗುತ್ತಿತ್ತು. ಇಂದು ಈ ಸಂತತಿ ಇಲ್ಲ. ಪ್ರಾಚೀನ ಪ್ಲಿಸ್ಟೋಸೀನ್ ಅವಧಿಯಲ್ಲಿ ಪ್ರಾಣಿ ವಂಶಗಳನ್ನು ಮತ್ತು ಅಂತಿಮ ಹಳೆ ಶಿಲಾಯುಗ ಪಟ್ಟ, ಲೋಹದ ಉದ್ದದ ತುಂಡುಗಳನ್ನು ಯುರೋಪ್ ಮತ್ತು ಉತ್ತರ ಏಷಿಯಾದಲ್ಲಿ ಗುರುತಿಸುತ್ತಾರೆ. ಉಷ್ಣತೆಯನ್ನು ಅಳಿದು ಬೇಟೆಗೆ ಹೋಗುವ ಸಾಮರ್ಥ್ಯ ಎಸ್ಕಿಮೋಗಳಂತೆ ಉತ್ತರ ಅಮೇರಿಕಾದ ಕೆಂಪು ಭಾರತೀಯರು ಅರಿತಿದ್ದರು.

ಆ ಕಾಲದ ತಂತ್ರಜ್ಞಾನ ಹೆಚ್ಚಿದಂತೆ ಉಗುರು ಕತ್ತರಿಸುವ ಚಾಕು, ಶಿಲಾಯುಧ, ಮೂಳೆ, ಲಂಬವಾಗಿರುವ ಗರಗಸ, ಉಳಿ, ಬಂದೂಕಿನಿಂದ ಹಾರಿಸುವುದರಲ್ಲಿ ಕಟ್ಟಿದ ಈಟಿ (ತಿಮಿಂಗಿಲ ಹಿಡಿಯಲು), ಮೀನು ಹಿಡಿಯುವ ಸಾಧನ, ಕೊರಗ ಮುಂತಾದ ಉಪಕರಣಗಳನ್ನು ತಯಾರಿಸುತ್ತಿದ್ದರು. ಸತ್ತ ಪ್ರಾಣಿಯ ಹೊಟ್ಟೆ ಸೀಳಿ ಹುಲ್ಲು ಸೇರಿಸಿ ಹೊಲಿಯುತ್ತಿದ್ದರು. ಚರ್ಮದಿಂದ ಉಡುಪು ತಯಾರಿಸಿ ಧರಿಸುತ್ತಿದ್ದರು. ಈ ರೀತಿ ಆಫ್ರಿಕಾ, ಸೈಬರಿಯಾ ಮತ್ತು ಉತ್ತರ ರಷ್ಯಾಗಳಲ್ಲಿದ್ದಿತು.

ಮಧ್ಯಯುರೋಪಿನ ಲೊಸ್ (Loess), ರಷ್ಯಾ, ಸೈಬಿರಿಯಾ ಮತ್ತಿತರ ರಾಷ್ಟ್ರಗಳಲ್ಲಿ ಸಮಯೋಚಿತ ಋತುಮಾನದ ವಲಸೆಯಲ್ಲಿ, ಬೇಟೆಗಾರರು ಬೃಹತ್ ಗಾತ್ರದ ಆನೆಗಳನ್ನು ಬೇಟೆಯಾಡುತ್ತಾರೆ. ಮೂಳೆ, ಚರ್ಮ, ದಂತಗಳನ್ನು ತೆಗೆದುಕೊಳ್ಳುವುದು, ಮೈಗಡಲೆನಿಯನ್ ಸಂಸ್ಕೃತಿಯ ಲಕ್ಷಣವಾಗಿದೆ (ಕೀಟ ನೊಣದ ಬೇಟೆ). ಆಸ್ಟ್ರೇಲಿಯಾದ ಬುಷ್‌ಮನ್‌ರಂತೆ ಉತ್ತರ ಅಮೇರಿಕಾದಲ್ಲಿ ಕಾಡುಕೋಣದ (Bison) ಬೇಟೆಯಲ್ಲಿ ಬೇಟೆಗಾರರು ತೊಡಗಿದ್ದರು.

೨.೧ ಹಳೆ ಶಿಲಾಯುಗದ ನಂತರದ ಬೇಟೆ ಸಮಾಜಗಳು

ಹಿಮಯುಗ ಮುಗಿದಾಗ ಉತ್ತರ ಗೋಳಾರ್ಧದಲ್ಲಿ ಬೇಟೆಯನ್ನು ಬೇಟೆಗಾರಿಕೆ ಸಮಾಜಗಳು ಕ್ರಮೇಣ ಕೈಬಿಟ್ಟವು. ಬಹುಶಃ ಅಲ್ಲಿನ ವಿಶೇಷವಾದ ವಾತಾವರಣ ಹಿಡಿಸಿರಲಿಕ್ಕಿಲ್ಲ. ಕೆಲವು ಪ್ರಾಣಿಗಳಿಗೆ ಅವಲಂಬಿತವಾಗಿ ಪುನಃ ಮಾರ್ಗ ಕಂಡುಹಿಡಿದು ಟಾಂಡ್ರ ಪ್ರದೇಶ, ಉತ್ತರ ಯುರೋಪ್ ಮತ್ತು ಏಷಿಯಾದ ಉಷ್ಣವಲಯ ಪ್ರದೇಶದಲ್ಲಿ ತಂಗಿದರು. ಹಾಗೆಯೇ ಅರಣ್ಯ ಪ್ರದೇಶದಲ್ಲಿ ಬಿಲ್ಲು-ಬಾಣ ಆಯುಧಗಳಿಂದ ಬೇಟೆಯನ್ನು ಮುಂದುವರಿಸಿದರು. ಅಲ್ಲಿ ಬೇಟೆಗಾರಿಕೆಯ ಸಣ್ಣ ಗುಂಪುಗಳಿದ್ದು, ವೈಯಕ್ತಿಕವಾಗಿ ಬೇಟೆ ಕೆಲವರಿಗೆ ಜೀವನಾವಶ್ಯಕವಾಗಿತ್ತು.

ಸಾಗರದ ಆಹಾರ ಸಂಪತ್ತು ರುಚಿಸಿದಂತೆ ದೋಣಿ ಮೂಲಕ ಬೇಟೆಯಾಡುವ ಪ್ರವೃತ್ತಿ ಹೆಚ್ಚಾಯಿತು. ಅಂತಿಮ ಹಳೆ ಶಿಲಾಯುಗದ ಮಾನವ ವಿಶೇಷವಾಗಿ ಚಿಕ್ಕ ಪ್ರಾಣಿಗಳನ್ನು ಕೊಲ್ಲುತ್ತಿದ್ದನಲ್ಲದೆ, ಸಸ್ಯಾಹಾರಿ ಮತ್ತು ಮಾಂಸಾಹಾರಿ ಪ್ರಾಣಿಗಳನ್ನು ತಿನ್ನುತ್ತಿದ್ದನು. ವಿಶೇಷವಾಗಿ ಮಳೆಗಾಲದಲ್ಲಿ ಯುವಕರು ಬೇಟೆಯ ಆಟ ಆಡುತ್ತಾರೆ. ಹಿಮಯುಗದ ನಂತರ ದಕ್ಷಿಣ ಆಫ್ರಿಕಾದಲ್ಲಿ ಬೇಟೆಗಾರರು ಸಮುದ್ರದ ಆಹಾರವನ್ನೇ ಅವಲಂಬಿಸಿ ಕರಾವಳಿಯಲ್ಲಿ ತಂಗುತ್ತಿದ್ದರು. ಆಗ ಒಡೆಯ, ಆಳರಸರು ಸಹ ಬೇಟೆಯಿಂದಲೇ ಜೀವಿಸಬೇಕಿತ್ತು. ಮೀನುಗಾರಿಕೆ ನಂತರ ಬೃಹತ್ ಹುಲ್ಲುಗಾವಲಿನಲ್ಲಿ ಹುಲ್ಲನ್ನು ಕಟಾವು ಮಾಡುವ ಕ್ರಮ ಬೆಳೆಯಿತು. ಇವರು ವೃತ್ತಾಕಾರದ ಕೊಟ್ಟಿಗೆ (Hut) ಗಳನ್ನು ಹೊಲಗಳಲ್ಲಿ ಕಟ್ಟಿಕೊಂಡಿರುತ್ತಿದ್ದರು. ಸತ್ತ ವ್ಯಕ್ತಿಯನ್ನು ಹೂಳುತ್ತಿದ್ದರು. ಇವರು ಕಲಾತ್ಮಕ ಜನರಾಗಿದ್ದು, ಶ್ರೇಣೀಕೃತ ವೃತ್ತಿಗಳನ್ನು ಹೊಂದಿದ್ದರು. ಐಂದ್ರಜಾಲಿಕ, ಧಾರ್ಮಿಕ ನಂಬಿಕೆ ಮತ್ತು ರೂಢಿಗಳಿಂದ ಕೃಷಿ ಪಶುಸಂಗೋಪನೆ ಮೇಲೆ ಪ್ರಭಾವ ಬೀರಿತು.

೨..೨ ಇತಿಹಾಸ ಪೂರ್ವ ಸಮಾಜಗಳು

ಆದಿಯ ಯುರೋಪಿನ ಬಗ್ಗೆ ಶೋಧಕರು ಹೊಸ ಪ್ರಪಂಚವೆಂದು ಕರೆ ಕೊಟ್ಟಾಗ ಹಲವು ವಿಧದಲ್ಲಿ ಬದಲಾಯಿತು. ಅಮೇರಿಕ, ಭಾರತದಂತಹ ಸಂಸ್ಕೃತಿಗಳ ಸ್ತರ-ಹಂತಗಳಲ್ಲಿ ದೇಶಿಯ ನಾಗರಿಕತೆಗಳು ಹುಟ್ಟಿದವು. ಅಮೇರಿಕದಲ್ಲಿ ಆಹಾರ ಸಂಗ್ರಹಣೆ ಗುಂಪುಗಳು ಮರುಭೂಮಿಯಲ್ಲಿ ಆ ವೃತ್ತಿಯನ್ನು ಮುಂದುವರೆಸಿದವು.

ಇತಿಹಾಸ ಪೂರ್ವ, ಇತಿಹಾಸ ಕಾಲದಿಂದ ಆಧುನಿಕ ಪ್ರಪಂಚದವರೆಗೆ ಆದಿ ಸಂಸ್ಕೃತಿಯ ಮುಖಗಳು ವಿವಿಧ ಪ್ರದೇಶಗಳ, ವಿವಿಧ ರೀತಿಯ ಆಕ್ರಮಣಶೀಲ ನೀತಿಯಿಂದ ಬೇಟೆ ಮತ್ತು ಆಹಾರ ಸಂಗ್ರಹಣೆ ಹಂತಗಳು ಪ್ರಭಾವಿತವಾಗಿದ್ದವು. ನಗರ ಕೇಂದ್ರಗಳಲ್ಲಿ ಬೇಟೆ ಮತ್ತು ಆಹಾರ ಸಂಗ್ರಹಣೆಗಳನ್ನು ಆದಿ ಕಾಲದ ಕೃಷಿಯ ಹಂತದಿಂದ ಮುಂದುವರೆಸಿಕೊಂಡು ಬಂದಿದ್ದಾರೆ. ಹೀಗಿದ್ದರೂ ಉಭಯ ಸಂಸ್ಕೃತಿ (ಆದಿ ಮತು ಆಧುನಿಕ)ಗಳನ್ನು ಮೈಗೂಡಿಸಿಕೊಂಡಿದ್ದು ಗಮನಾರ್ಹ.

೩. ಪ್ಲಿಸ್ಟೋಸೀನ್ ಕಾಲದ ಬೇಟೆಗಾರಿಕೆ ಚಟುವಟಿಕೆಗಳು

ಆಧುನಿಕ ಜಗತ್ತಿಗೆ ಮಾನವ ಕಾಲಿಟ್ಟ ವಿಷಯ ಕುರಿತು ವ್ಯಾಪಕವಾದ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಪ್ಲಿಸ್ಟೋಸೀನ್ ಕಾಲದಲ್ಲಿ ದೊಡ್ಡ ಗಾತ್ರದ ಆನೆಗಳ ನಾಶ, ಸಾಂಸ್ಕೃತಿಕ ಸಂವರ್ಧನೆಯಾಯಿತು ಎನ್ನಲಾಗಿದೆ. C-೧೪ ಕಾಲಮಾನ ಕಂಡುಹಿಡಿದ ನಂತರ ದಕ್ಷಿಣ ಅಮೇರಿಕದ ತುತ್ತ ತುದಿಗೆ ಮಾನವ ತಲುಪಿದ್ದಾನೆ.[೮] ಇಲ್ಲಿ ಕಾಲಗಣನೆಯ ಆಧಾರ, ಭೌಗೋಳಿಕ ಗುಣಗಳು, ಪ್ರತ್ಯಕ್ಷ ಸಂಬಂಧ, ಆಧುನಿಕ ಜಗತ್ತಿನ ಸಾಂಸ್ಕೃತಿಕ ಕಾರ್ಖಾನೆಗಳಂತೆ ಪ್ಲಿಸ್ಟೋಸೀನ್ ನಂತರ ಸಂಸ್ಕೃತಿಯ ವಿಕಾಸದಿಂದ ಉತ್ತರ ಏಷಿಯಾದಲ್ಲಿ ಕಾಲಿಟ್ಟವು. ಅಲ್ಲಿಯೂ ದೊಡ್ಡ ಆನೆಗಳನ್ನು ಬೇಟೆಯಾಡಿದ್ದು, ಈ ಬೇಟೆ ಮುಂದುವರೆದು ಅತಿ ಪ್ರಮುಖವಾಗಿ ಬೆಳೆಯಿತು. ಆಗ್ನೇಯ ಅರಿಜೊನಾದಲ್ಲಿ ಕ್ರಿ.ಪೂ. ೧೧,೦೦೦-೯೦೦೦ ವರ್ಷಗಳಲ್ಲಿ ದೊಡ್ಡಾನೆಗಳನ್ನು ಪಳಗಿಸಲು ಮತ್ತು ಇತರ ಪ್ರಾಣಿಗಳು ಆಹಾರಕ್ಕೆ ಸಿಗದುದರಿಂದ ಬೇಟೆಗಾರರು ಸಂಘಟಿತರಾದರು. ಕ್ರಿ.ಪೂ.೮೦೦೦-೫೦೦೦ ದಲ್ಲಿ ಬೇಟೆ ವಿವಿಧ ರೀತಿಯಲ್ಲಿ ಸಣ್ಣಗಾತ್ರದ ಪ್ರಾಣಿಗಳಿಗೆ ಸೀಮಿತವಾಯಿತು. ಕಾರಣ ದೊಡ್ಡಾನೆಗಳ ವಿಕಾಸವು ಸಾಮುದಾಯಿಕ ಉಪಕರಣ ಮತ್ತು ಆಯುಧಗಳಿಂದ ಆಯಿತು. ನೆಲೆ ಇಲ್ಲದ ಆಹಾರ ಸಂಗ್ರಹಕರು ಕೊನೆಗೆ ತುರು ಮಂದೆಗಳನ್ನು ಕಟ್ಟಿಕೊಂಡು ; ಆರ್ಕಟಿಕ್, ಪಶ್ಚಿಮ ಮರುಭೂಮಿಯಲ್ಲಿ ವಿವಿಧ ವೃತ್ತಿಗಳನ್ನನುಸರಿಸಿದರು.

೩.೧ ಪ್ಲಿಸ್ಟೋಸೀನ್ ನಂತರದ ಸಾಂಸ್ಕೃತಿಕ ವೈವಿಧ್ಯತೆ

ಪ್ಲಿಸ್ಟೋಸೀನ್ ಕೊನೆಯ ಹಂತದಲ್ಲಿ ಅನೇಕ ವಿಧವಾದ ಸಂಸ್ಕೃತಿಗಳು ಬೆಳೆದವಲ್ಲದೆ, ಅವು ವಿವಿಧ ಕಾಲಘಟ್ಟಗಳಲ್ಲಿ ಆರ್ಥಿಕವಾಗಿ ಇಬ್ಭಾಗವಾದವು. ಸಂಪತ್ತು ಆದಿಯಿಂದಲೂ ಇತ್ತು. ಆದರೆ ದೊಡ್ಡ ಕೊಟ್ಟಿಗೆ -ಹಟ್ಟಿಗಳು ಇದ್ದಿರಲಿಕ್ಕಿಲ್ಲ. ಕ್ರಿ.ಪೂ. ಸು. ೬೦೦೦-೫೦೦೦ದಲ್ಲಿ ಅರಣ್ಯ ಸಂಪತ್ತಿನಲ್ಲಿಯೂ ಬೇಟೆಗಾರಿಕೆ ಬೆಳೆದು ಬಂದುದು ಗಮನಾರ್ಹ. ಉತ್ತರ ಅಮೇರಿಕಾದಲ್ಲಿ ಬೇಟೆಗಾರರು ಮತ್ತು ಆಹಾರ ಸಂಗ್ರಹಕಾರರು ಹೆಚ್ಚುವರಿ ಅಥವಾ ಮಿಕ್ಕ ಸಂಪತ್ತನ್ನು ಕಾಪಾಡುವಲ್ಲಿ ಮರುಭೂಮಿ ಸಂಸ್ಕೃತಿಗೆ ಬಂದರು. ವಿದ್ವಾಂಸರು ಮಾನವ ಬೇಟೆಯಾಡಿ ಅಭಿವೃದ್ಧಿ ಹೊಂದಿದ ನೆಲೆಗಳನ್ನು ಪೆರುವಿನ ಕರಾವಳಿ, ಮರುಭೂಮಿ ಮತ್ತು ಪರ್ವತಗಳನ್ನು ಶೋಧಿಸಿ ಬೆಳಕಿಗೆ ತಂದಿದ್ದಾರೆ. ಪ್ರಥಮವಾಗಿ ಇಡೀ ಆಧುನಿಕ ಜಗತ್ತಿನಲ್ಲಿ ಮೇಲ್ನೋಟಕ್ಕೆ ಕಾಣುವುದು ಆಹಾರ ತಯಾರಿಕೆ ಮಾತ್ರ.

೩.೧.೧ ಉತ್ತರ ಧ್ರುವ

ಇಲ್ಲಿ ನೈಸರ್ಗಿಕ ಸ್ಥಿತಿಗೆ ಹೊಂದಿಕೊಂಡು, ಆದಿಕಾಲದ ಕೃಷಿ ಬೆಳೆಯುವ ಮುನ್ನ ಬೇಟೆ ಮತ್ತು ಆಹಾರ ಸಂಗ್ರಹಣೆ ತಂತ್ರ ಮುಂದುವರೆದುದು ಇತಿಹಾಸ ಕಾಲಕ್ಕೆ ಸಂಬಂಧಿಸಿದೆ. ಇಲ್ಲಿನ ಸಂಸ್ಕೃತಿಯನ್ನು arctic small-tool tradition ಎಂದು ಮೇಲ್ನೋಟಕ್ಕೆ ಕರೆದರೂ, ಕಾಲಮಾನದಲ್ಲಿ ವ್ಯತ್ಯಾಸವಿರಬೇಕು. ಇಲ್ಲಿ ಎಸ್ಕಿಮೊ, ಡಾರ್ಸೆಟ್ ಜನ ಹೆಚ್ಚಾಗಿ ನೆಲಸಿದ್ದು, ವಾಯವ್ಯ ಕರಾವಳಿ ತೀರದಲ್ಲಿ ಬೇಟೆಗಾರಿಕೆ ಮತ್ತು ಆಹಾರ ಸಂಗ್ರಹಣೆ ವ್ಯಾಪಕವಾಗಿತ್ತು.

೩.೧:೨ ವಿಸ್ತಾರವಾದ ಜಲಾನಯನ ಪ್ರದೇಶ

ದಕ್ಷಿಣ ಪ್ರಸ್ಥಭೂಮಿಯಲ್ಲಿ ಕ್ರಿ.ಪೂ.೯೦೦೦ ವರ್ಷಗಳ ಹಿಂದೆ ಬೇಟೆಗಾರಿಕೆ ಮತ್ತು ಆಹಾರ ಸಂಗ್ರಹಣೆಯ ಸಂಪ್ರದಾಯವಿದ್ದು, ಮರುಭೂಮಿ ಸಂಸ್ಕೃತಿಯಲ್ಲಿ ಅದು ಮುಂದುವರೆಯಿತು.[೯] ಇದೇ ಕಾಲಕ್ಕೆ ಭಾರತದಲ್ಲಿಯೂ

ಆಹಾರ ಸಂಗ್ರಹಣೆಯ ಜೊತೆಗೆ ಶ್ರೀಗಂಧ ಮತ್ತು ಹತ್ತಿಗಳನ್ನು ಬಳಸಿಕೊಳ್ಳಲಾಗುತ್ತಿತ್ತು. ಅಲ್ಲದೆ ಈ ಕಾಲದ ಭೌತಿಕ ಚಟುವಟಿಕೆಗಳು ಅತ್ಯಂತ ಗಮನಾರ್ಹವೆನಿಸಿವೆ.

೩.೧: ೩ ಕ್ಯಾಲಿಫೋರ್ನಿಯ

ಆದಿ ಸಂಸ್ಕೃತಿಗಳು ಕ್ಯಾಲಿಫೋರ್ನಿಯಾದಲ್ಲಿ ಸಂಘಟನೆಯಾಗಿದ್ದರೂ, ಅವು ಮರುಭೂಮಿ ಸಂಸ್ಕೃತಿಗೆ ಹೊರಗಿದ್ದವು. ಇಲ್ಲಿನ ಶಿಲಾಯುಗದ ಬಗೆಗೆ ಖಚಿತವಾಗಿ ಏನನ್ನೂ ತಿಳಿಸಲಾಗಿಲ್ಲ. ಹೀಗಾಗಿ ಕ್ಯಾಲಿಫೋರ್ನಿಯದಲ್ಲಿ ಆದಿ ಸಂಸ್ಕೃತಿ ಇರುವಂತೆ ಭಾರತದಲ್ಲಿ ಆದಿ ಶಿಲಾಯುಗದ ಬೇಟೆ ಸಂಸ್ಕೃತಿ ಗುಣ ಲಕ್ಷಣಗಳು ಸಹ ಇತಿಹಾಸ ಕಾಲಕ್ಕೆ ಸೇರಿದ್ದವೆಂದು ಹೋಲಿಸಲಾಗಿದೆ.

೩.೧ : ೪ ನೈಋತ್ಯ ಭಾಗ

ಯು.ಎಸ್.ಎ.ಯ ನೈಋತ್ಯ ದಿಕ್ಕಿಗೆ ಮರುಭೂಮಿ ಸಂಸ್ಕೃತಿಯು ಗ್ರಾಮ ಹಂತದ್ದಾಗಿದೆ. ಈ ಸಂಸ್ಕೃತಿ ಕ್ರಿ.ಪೂ. ೧೦೦೦ ವರ್ಷಗಳ ಹಿಂದಿನದು. ಆಹಾರ ಸಂಗ್ರಹಣೆಯಲ್ಲಿ ಅವರೆ, ಹುರುಳಿ, ಹಣ್ಣಿನ ರುಚಿಯಾದ ಪಾನೀಯ, ಮೆಕ್ಕೆಜೋಳ ಮುಂತಾದವುಗಳನ್ನು ಮೆಕ್ಸಿಕೋದಲ್ಲಿ ಕೃಷಿ ಮಾಡುತ್ತಿದ್ದರು. ಇವು ಮೊದಲಿಗೆ ಅಲ್ಲಿಯೇ ಉತ್ಪತ್ತಿಯಾದುವೆಂದು ಹೇಳಲಾಗಿದೆ.[೧೦] ಪೂರ್ವದ ಮರುಭೂಮಿಯಲ್ಲಿ ಬೇಟೆಗಾರರು, ಆಹಾರ ಸಂಗ್ರಹಕರು ಸಣ್ಣ ಗುಂಪುಗಳಾಗಿ ರಾಕಿ ಪರ್ವತಗಳಲ್ಲಿದ್ದರು.

೩.೧:೫ ವಿಶಾಲವಾದ ಬಯಲು ಪ್ರದೇಶ

ಕ್ರಿ.ಪೂ. ಮಿಲಿಯನ್ ವರ್ಷಗಳಷ್ಟು ಹಿಂದೆ ಮಹಾ ಮೈದಾನ ಅಥವಾ ವಿಸ್ತಾರವಾದ ಬಯಲು ಪ್ರದೇಶಗಳಲ್ಲಿ ಬೇಟೆಗಾರಿಕೆ ಮಾದರಿ ಮುಖ್ಯ ವೃತ್ತಿಯಾಗಿ ಕಂಡುಬರುತ್ತದೆ. ಕೃಷಿ, ತಂತ್ರಗಾರಿಕೆ ಇಂಥ ಸಸ್ಯ ವರ್ಗದಲ್ಲಿ ಬೆಳೆಯಿತು. ಇಲ್ಲಿ ಸಸ್ಯವು ಪ್ರಾಣಿಗಳಿಗೆ ಇತಿಹಾಸ ಕಾಲದಿಂದಲೂ ಪ್ರಮುಖ ಆಹಾರವಾಗಿತ್ತು.

೩.೧:೬ ಪೂರ್ವೋತ್ತರ ಜಂಗಲು ಪ್ರದೇಶ

ಯು.ಎಸ್.ಎ. ಪೂರ್ವಕ್ಕೆ ಆರ್ಕೆಯಿಕ್ ಅವಧಿ ಕ್ರಿ.ಪೂ.೨೫೦೦ಕ್ಕೆ ಬೇಟೆಗಾರಿಕೆ ಮತ್ತು ಆಹಾರದ ಅಲೆದಾಟ, ಸಂಗ್ರಹಣೆ ಇತ್ತು. ಈ ಸಂಸ್ಕೃತಿ ಸ್ಥಳೀಯ ಹೊಂದಾಣಿಕೆಗೆ ಎರಡು ಪ್ರಮುಖ ಸಂಪತ್ತಿನ ಮಾದರಿಗಳಾಗಿವೆ. ಉತ್ತರದ ಲ್ಯಾಕಸ್ಟ್ರೀನ್ (Lacastrine) ಕೇಂದ್ರೀತ ಸಂಸ್ಕೃತಿಗಳು ಸಮತೋಲನವಾಗಿ ಬೇಟೆ ಮತ್ತು ಆಹಾರ ಸಂಗ್ರಹಣೆ, ಮೀನುಗಾರಿಕೆ ಮತ್ತು ಸಸ್ಯ ಸಂಗ್ರಹಣೆಗಳನ್ನು ಹೊಂದಿವೆ. ಇಲ್ಲಿ ತಾಮ್ರದ ಬಳಕೆ (old copper culture) ಬರುತ್ತದೆ. ಬಾರ್ಟರ್ ಪದ್ಧತಿ ಉತ್ತರ ಅಮೇರಿಕಾದ ಪೂರ್ವ ಭಾಗದಲ್ಲಿ ಕ್ರಿ.ಪೂ. ೨೦೦೦ ದಲ್ಲಿತ್ತು. ಗಲ್ಫ್ ಮತ್ತು ಅಟ್ಲಾಂಟಿಕ್ ತೀರದ ದಕ್ಷಿಣ ಭಾಗದಲ್ಲಿ ಬೇಟೆ ಸಂಸ್ಕೃತಿಯ ನೆಲೆಗಳಲ್ಲಿ ಬೇಟೆ ಉಚ್ಛ್ರಾಯ ಸ್ಥಿತಿ ತಲುಪಿದ್ದು ಗಮನಾರ್ಹ.

ಆಹಾರ ಸಂಗ್ರಹಣೆಯ ವೃತ್ತಿ ದಕ್ಷಿಣೋತ್ತರವಾಗಿ ವಿಸ್ತಾರವಾಯಿತೆಂದು ಪುರಾತತ್ವಜ್ಞರು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಧ್ಯಅಮೇರಿಕಾದಲ್ಲಿ ಕ್ರಿ.ಪೂ.೧೦೦೦ದಲ್ಲಿ ಕೃಷಿಯ ತಂತ್ರವನ್ನು ಪ್ರಯೋಗಿಸಿದರು. ಆಹಾರ

ಸಂಗ್ರಹಕರಿಂದಲೇ ಇದು ಅನ್ವೇಷಣೆಯಾಗಿತ್ತು. ಈ ಮಾದರಿ ೫೦೦೦ ವರ್ಷಗಳವರೆಗೆ ಮುಂದುವರೆಯಿತು. ಕೃಷಿಯ ಹವ್ಯಾಸ ದೈವಕೊಡುಗೆ ಎಂದೂ, ಆ ದೈವತ್ವದ ಭಾಗವಾಗಿ ಬೇಟೆ ಮತ್ತು ಆಹಾರ ಸಂಗ್ರಹಣೆ ಇತ್ತೆಂದೂ ನಂಬಲಾಗಿತ್ತು.

೩.೧:೭ ಮಧ್ಯ ಅಮೆರಿಕ

ಮಧ್ಯ ಅಮೇರಿಕಾದಲ್ಲಿ ಆಹಾರ ಸಂಗ್ರಹಣೆ ಸಂಸ್ಕೃತಿ ಆದಿಯಿಂದ ಇಲ್ಲಿಯವರೆಗೆ ನಡೆದು ಬಂದಿದೆ. ಮೆಕ್ಸಿಕೊ, ಮರುಭೂಮಿ ಸಂಸ್ಕೃತಿ, ಪಶ್ಚಿಮ ಯು.ಎಸ್.ಎ. ಮುಂತಾದ ಪ್ರದೇಶಗಳಲ್ಲಿ ಕ್ರಿ.ಪೂ.೮೦೦೦-೭೦೦೦ವರೆಗೆ ಕೃಷಿ, ಪಶುಸಂಗೋಪನೆಯಾದಾಗ ಬೇಟೆಗಾರಿಕೆಯ ಹವ್ಯಾಸ ಇಳಿಮುಖವಾಯಿತು.

ಪನಾಮ ಕಾಲುವೆಯಿಂದ ದಕ್ಷಿಣಕ್ಕೆ ಕ್ರಿ.ಪೂ.೫೦೦೦ ಕಾಲಕ್ಕೆ ಸೇರಿದ ಸಿರೊಮಾಂಗ್ಟೇ ಪ್ರದೇಶವಿದ್ದು, ಇದು ಆಹಾರೇತರ ವಸ್ತುಗಳ ಉತ್ಪಾದನೆಯ ಕೇಂದ್ರವಾಗಿತ್ತೆನ್ನಲಾಗಿದೆ. ಬೇಟೆಗಾರರು ಸಂಪತ್ತಿನಿಂದ ಮೃದ್ವಂಗಿ, ಮೀನು ಮತ್ತು ಏಡಿಗಳನ್ನು ಬೇಟೆಯಾಡಿ ಇನ್ನೊಂದೆಡೆಗೆ ಸಾಗಿಸುತ್ತಿದ್ದರು. ಜಂಕೆ ಮತ್ತು ದೊಡ್ಡ ಆನೆಗಳು ಮತ್ತು ಸಸ್ಯದ ಬಳಕೆ ಕ್ರಿ.ಪೂ. ೩೦೦೦ದಿಂದ ಬಳಸಲಾಗಿದೆ. ರಿಪಬ್ಲಿಕ್ ರೊಮೆನಿಕನ್, ವೆನಿಜುಲ, ಪನಾಮದಲ್ಲಿ ಕೃಷಿ ಬೆಳವಣಿಗೆಯಾಯಿತು. ಇಲ್ಲಿ ಇತಿಹಾಸ ಕಾಲದ ಆಹಾರ ಸಂಗ್ರಹಣೆಯು ಔನ್ನತ್ಯ ಸ್ಥಿತಿ ತಲುಪಿತ್ತು.

೩.೧:೮ ದಕ್ಷಿಣ ಅಮೆರಿಕ

ಇಲ್ಲಿ ಇತಿಹಾಸ ಕಾಲದಿಂದಲೂ ಆಹಾರ ಸಂಗ್ರಹಣೆ ಮತ್ತು ಬೇಟೆಗಾರಿಕೆ ಮುಂದುವರೆದುಕೊಂಡು ಬಂದಿದೆ. ಆದಿ ಕಾಲದ ಕೃಷಿ ಬೆಳೆಗಾರರು ಅಂಡಿಯನ್ ನಾಗರಿಕತೆ ಬಿಟ್ಟು, ಕರಾವಳಿಯ ಸಾಗರದಲ್ಲಿ ಬೇಟೆ ಪ್ರಾಣಿಗಳನ್ನು ಸಂಗ್ರಹಿಸಲು ವಲಸೆಗಾರರಾಗಿ ಬರುತ್ತಾರೆ. ಇವರಿಂದ ಕುಬಾಗ್ವಸ್ತರ, ವೆನಿಜುಲ, ಆದಿ ಅಂಟಿಲೆನಾ (ಸಂಸ್ಕೃತಿ), ಅಟ್ಲಾಂಟಿಕ್ ಕರಾವಳಿ, ಬ್ರಾಜಿಲ್‌ಗಳಲ್ಲಿ ಸಂಬಾಕ್ವಿಸ್ ಅಥವಾ ಪ್ರಾಣಿ ಚಿಪ್ಪುಗಳ ರಾಶಿ ದಿಬ್ಬಗಳಾಗಿ ನಿರ್ಮಾಣವಾದವು. ಕೆಲವು ದೊಡ್ಡ ಗಾತ್ರದ ಆನೆ, ಪಕ್ಷಿಗಳು ಬೇಟೆ ಉಪಕರಣಗಳಿಗೆ ಬಲಿಯಾಗಿದ್ದವು.

ಪೆಸಿಫಿಕ್ ಕರಾವಳಿಯ ವಾಲ್ಡಿವಿಯಾ ಮುಖದ ಈಕ್ವಾಡರ್‌ನಲ್ಲಿ ಮೀನಿನ ಚಿಪ್ಪುಗಳ ರಾಶಿಯನ್ನು ಸಂಗ್ರಹಿಸುತ್ತಿದ್ದು, ಮೀನುಗಾರಿಕೆ ಕ್ರಿ.ಪೂ. ೩೦೦೦ದಲ್ಲಿ ಬೆಳವಣಿಗೆಯಾಗಿತ್ತು. ಜೋಮನ್ ಸಂಸ್ಕೃತಿ ಜಪಾನ್‌ನಲ್ಲಿದ್ದಾಗ, ಅಮೇರಿಕಾದಲ್ಲಿ ಮೀನುಗಾರಿಕೆ, ಉತ್ತರ ಪಥ ಮತ್ತು ದಕ್ಷಿಣ ಪಥದಿಂದ ಅಮೆಜಾನ್ ನದಿ ಪ್ರದೇಶದವರೆಗೆ ವಿಸ್ತರಿಸಿತ್ತು.

ಪೆರುವಿನ ಕರಾವಳಿಯಲ್ಲಿ ಬೇಟೆ ಸಂಪ್ರದಾಯದ ವಿಜಯಿ ಬೇಟೆಗಾರರು ಋತುಮಾನಗಳಲ್ಲಿ ವಲಸೆ ಹೋಗುತ್ತಿದ್ದರು. ಚಳಿಗಾಲದಲ್ಲಿ ಒಂದು ಕಡೆಯಿಂದ ಇನ್ನೊಂದುಕಡೆ ವಲಸೆ ಹೋದರೆ, ಬೇಸಗೆಯಲ್ಲಿ ಬೇಟೆಯಾಡುತ್ತಾರೆ. ಮೀನಿನ ಚಿಪ್ಪುಗಳ ರಾಶಿ, ಮೂಳೆ ಮೀನನ್ನು ಹಿಡಿವ ಸಾಧನ, ತಿಮಿಂಗಿಲ ಹಿಡಿಯುವ ಸಾಧನ, ಗಜರಾಜ (ದೊಡ್ಡಾನೆ)ಗಳನ್ನು ಬೇಟೆಯಾಡುವುದು ಇಲ್ಲಿ ಕಂಡುಬರುತ್ತದೆ. ಇದು ಜಲ ಬೇಟೆಯ ಮೇಲ್ಪಂಕ್ತಿಯನ್ನು ಸಂಕೇತಿಸುತ್ತದೆ.

೪. ಸಮಕಾಲೀನ ಸಮಾಜಗಳು

ಜಗತ್ತಿನ ಈ ದಿನಗಳಲ್ಲಿ ಬೇಟೆ ಮತ್ತು ಆಹಾರ ಸಂಗ್ರಹಣೆ ಮಾಡಿ ಒಂದೆಡೆ ಸೇರುವ ಸಂದರ್ಭಗಳು ಮರೆಯಾಗಿವೆ. ಆದರೂ ಆರ್ಥಿಕವಾಗಿ ಬೇಟೆಯನ್ನು ನಂಬಿಕೊಂಡು ಬಂದಿರುವ ಕೆಲವು ಸಮುದಾಯಗಳಿವೆ. ಕೃಷಿ ಜ್ಞಾನ, ಪಶು ಸಂಗೋಪನೆ, ಆಹಾರ ವಿನಿಮಯ, ವ್ಯಾಪಾರ ಮತ್ತು ಸೇವೆಗಳು ಇಂದಿಗೂ ಉಜ್ವಲವಾಗಿ ಬೆಳವಣಿಗೆಯಾಗಿವೆ. ನಂತರ ಬೇಟೆಗಾರಿಕೆ ಮತ್ತು ಸಂಗ್ರಹಣೆ ಅಸಾಂಪ್ರದಾಯಿಕವಾಗಿ ಮುಂದುವರೆಯಿತು.

ಬೇಟೆ ಮತ್ತು ಆಹಾರ ಸಂಗ್ರಹಣೆಯಿಂದ ಜೀವಿಸುವುದು ಕಷ್ಟವೆನಿಸಲಿಲ್ಲ. ವಿವಿಧ ಸಮುದಾಯಗಳಿಗೆ ಆಗಣ್ಯವಾದ ಪರಿಸರ ಆಹಾರ ಸಂಗ್ರಹಣೆಗೆ ಯೋಗ್ಯವಾಗಿತ್ತು. ಆರ್ಥಿಕತೆ ವಿರಾಟ್ ಸಂಪ್ರದಾಯ ವಿದೇಶಿಯರ ಪ್ರಭಾವದಿಂದ ಬಂದಿದ್ದು ಸ್ಮರಣೀಯ. ಹೀಗೆ ಆಫ್ರಿಕಾದ ಮುಬ್ತಿ, ಪಿಗ್ಮಿ, ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಜಪ್ಸಿ ಉತ್ತಮ ಉದಾಹರಣೆಯಾಗಿದೆ. ಇವರಿಗೆ ಬೇಟೆ ಜ್ಞಾನ, ಆಹಾರ ಸಂಗ್ರಹಣೆ ಮತ್ತು ಆಹಾರ ಸಂಘಟನೆ ಸಮಾನವಾಗಿದ್ದವು. ಇವರು ದೇಶೀಯ ನೈಪುಣ್ಯತೆಯಿಂದ ಬೇಟೆ ತಂತ್ರಜ್ಞಾನಕ್ಕೆ ಜೋತುಬಿದ್ದರೂ, ನಾಜೂಕುತನ ಎದ್ದು ಕಾಣುತ್ತಿತ್ತು. ಯಾವುದೇ ರಾಷ್ಟ್ರದ ಬೇಟೆಗಾರ ಆ ದೇಶದ ಬದ್ಧತೆಗೆ ಒಳಗಾಗಿ ಬೇಟೆಯನ್ನು ನವೀನ ಮಾದರಿಗೆ ಮಾರ್ಪಡಿಸಿಕೊಳ್ಳುವುದು ಕಷ್ಟವೆನಿಸುವುದಿಲ್ಲ. ಹೀಗೆ . ಆಫ್ರಿಕಾದ ಕಲಹರಿ ಬೇಟೆಗಾರರು ಬೇಟೆಯನ್ನು ಜೀವಂತಗೊಳಿಸಿಕೊಂಡಿದ್ದರಿಂದಲೇ ಅದು ಭೌತಿಕ ಆಯ್ಕೆಗೆ ಸಿಲುಕಿತು. ಬೇಟೆಗಾರರು ಇತರರಿಗೆ ರಕ್ಷಣೆ, ಕೃಷಿ, ವ್ಯಾಪಾರದಲ್ಲಿ ಗಣನೀಯ ಸಾಧನೆ ಮಾಡಿದರು.

ಹೊಸ ಜಗತ್ತಿನಲ್ಲಿ ಈಶಾನ್ಯ ಪೆಸಿಫಿಕ್, ವಿಶಾಲವಾದ ಬಯಲು ಪ್ರದೇಶ, ಸಿರಿನೊ, ಬೊಲಿವಿಯ, ಯಮನ, ಯಾಗನ್ಯ, ದಕ್ಷಿಣ ಅಮೆರಿಕದಲ್ಲಿ ಎಸ್ಕಿಮೊ, ಇಂಡಿಯನ್ನರು ಇತರ ಬುಡಕಟ್ಟುಗಳಿದ್ದವು. ಆಫ್ರಿಕಾದ ಮುಬ್ತಿ ಮತ್ತು ವೆಗ್ನಿಸ್‌ನಲ್ಲಿ ಕಲಹರಿ ಮತ್ತು ಬುಷ್‌ಮನ್ನರು ಕಂಡುಬಂದಿದ್ದರು. ಆಸ್ಟ್ರೇಲಿಯಾದ ಮೂಲನಿವಾಸಿಗಳು ಬೇಟೆಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಇಲ್ಲಿ ಆರ್ಥಿಕತೆ ಮುಖ್ಯವಾಗಿದ್ದು, ಕಷ್ಟದ ಸ್ಥಿತಿಯಿಂದ ಕೆಲವು ಬುಡಕಟ್ಟುಗಳು ಬರ್ಹ್ವೊರ್ ಮತ್ತು ಅಂಡಮಾನ್ ದ್ವೀಪಗಳಲ್ಲಿ ಈಗಲೂ ವಲಸಿಗರಿದ್ದಾರೆ.

೫. ಬೇಟೆ ಮತ್ತು ಪರಿಸರದ ಅವಲಂಬನೆ

ಒಂದು ಕಾಲದ ಪರಿಸರದಲ್ಲಿ ಬೇಟೆ ಮತ್ತು ಆಹಾರ ಸಂಗ್ರಹಣೆಯನ್ನು ಸೂಕ್ಷ್ಮವಾಗಿ ನೋಡಬಹುದು. ಉತ್ತರ ಧ್ರುವ, ಭೂ ಮಧ್ಯರೇಖೆ ಅಥವಾ ಸಮಭಾಜಕ ವೃತ್ತ, ಉಷ್ಣವಲಯ ಅಥವಾ ಸಂಕ್ರಾಂತಿ ವೃತ್ತ, ಮಕರ ಸಂಕ್ರಾಂತಿ ವೃತ್ತ ಹಾಗೂ ಖಂಡಗಳು ನೆಲೆಸಲು ಯೋಗ್ಯವಾಗಿದ್ದವು. ಬೇಟೆಗಾರರು ಮತ್ತು ಆಹಾರ ಸಂಗ್ರಹಕರು ಒಳನಾಡಿನ ಸಾಗರದಲ್ಲಿ ನೆಲಸುತ್ತಾರೆ. ಭಯಂಕರವಾದ ಕಾಡು ಮತ್ತು ಮರುಭೂಮಿಯ ೧೦,೦೦೦ ಅಡಿ ಎತ್ತರದ ಬಯಲು ಪ್ರದೇಶದ ಈ ಪರಿಸರದಲ್ಲಿ ಬೇಟೆಗಾರರ ತಾಣಗಳಿದ್ದವು. ಅದೇ ರೀತಿ ಆಫ್ರಿಕಾದಲ್ಲಿ ಪಿಗ್ಮಿಗಳು ಜೀವಿಸುತ್ತಿದ್ದರು. ಕೆಟ್ಟ ಹವಮಾನದಲ್ಲಿ ಈ ಬೇಟೆಗಾರರು ಸಸ್ಯಾಹಾರವನ್ನು ತಿನ್ನಲು ದುಃಖಪಡುತ್ತಿದ್ದರು.[೧೧] ಬೇಟೆ ಮತ್ತು ಆಹಾರ ಸಂಗ್ರಹಣೆ ಸಮುದಾಯಕ್ಕೆ ಶಾಶ್ವತವಾದ ಪರಿಸರ ಮುಖ್ಯ. ಇದಕ್ಕೆ ಇತರೆ ತಾಂತ್ರಿಕತೆ, ಸಾಮಾಜಿಕ, ಸಂಘಟನೆ, ರಾಜಕೀಯ ಸ್ಥಿತಿ ಮತ್ತು ಧಾರ್ಮಿಕ ನಂಬಿಕೆಗಳಿಗೂ ಜನರು ಸ್ಪಂದಿಸುವರು. ಕೊನೆಗೆ ಪರಿಸರ ಗುಂಪುಗಳ ನಡುವೆ ಸಂಬಂಧ ಬೆಳೆದು ಜವಾಬ್ದಾರಿ ಹೆಚ್ಚುತ್ತದೆ. ಬೇಟೆಗಾರರು ಸಂಗ್ರಹಕರು ವಿಶ್ವದಲ್ಲಿ ಪ್ರಮುಖವಾಗಿ ಸಮಾನ ಪ್ರಮಾಣದಲ್ಲಿ ಕಂಡುಬರುತ್ತಾರಲ್ಲದೆ, ಒಂದೇ ಪರಿಸರಕ್ಕೆ ಅಂಟಿಕೊಳ್ಳದೆ, ವಲಸೆ ರೂಢಿಸಿಕೊಂಡಿದ್ದರು.

೬. ಸಾಮಾಜಿಕ ವಿಕಾಸ

ಮಾನವ ಆದಿಯಲ್ಲಿ ಕಂಡುಹಿಡಿದ ಜೀವನ ನಿರ್ವಹಣೆಗೆ ಬೇಟೆ ವಿಧಾನಗಳಲ್ಲಿ ಗೆಡ್ಡೆಗೆಣಸುಗಳ ತರುವಾಯ ಬೇಟೆಗೆ ಅವಲಂಬಿಸಿದ ಈ ಶೋಧನೆಯಿಂದ ಆಹಾರ ಸಂಗ್ರಹಣೆ ವಿಕಾಸವಾಗಿ ಮಾನವನ ಸಾಮಾಜಿಕ ವಿಕಾಸಕ್ಕೂ ಕಾರಣವಾಯಿತು.[೧೨] ಬೇಟೆ ಭೌತಿಕ ವಿಕಾಸವಾದರೆ, ಬೇಟೆ ಜೀವನ ಸಾಮಾಜಿಕ ವಿಕಾಸವಾಗಿರುತ್ತದೆ. ಜನರ ಸಾಮಾಜಿಕ ರಚನೆ ಸಾಮಾನ್ಯವಾಗಿ ಅಗತ್ಯಕ್ಕೆ ತಕ್ಕಂತೆ ಇತ್ತು. ಬೇಟೆಗಾರರು - ಆಹಾರ ಸಂಗ್ರಹಕಾರರು ನಿಷ್ಠೆಯಿಂದ, ಪೂರ್ವಗ್ರಹವಿಲ್ಲದೆ, ಹಗೆತನವಿಲ್ಲದೆ ಜೀವಿಸುತ್ತಿದ್ದರು. ಬೇಟೆಗಾರಿಕೆ ಆರ್ಥಿಕವಾಗಿ ಪರಿಸರದ ಸ್ಥಿತಿಗೆ, ಸಮಾಜದ ಮುನ್ನಡೆಗೆ ಕಾರಣವಾಗಿತ್ತು.

೭. ಬೇಟೆಯ ಅಲೆಮಾರಿ ಜೀವನ

ಜನರು ಪ್ರಕೃತಿಯೊಂದಿಗೆ ಗೌರವ ಹೊಂದಿದ್ದು ಅಲೆಮಾರಿತನದಲ್ಲಿಯೇ. ಬೇಟೆ, ಆಹಾರ ಸಂಗ್ರಹಣೆ ಸಂದರ್ಭದಲ್ಲಿ ಬೇಟೆಗೆ ಆಹಾರ ಸಿಗಲಿಲ್ಲ ಎಂದಾಗ ಹೊಸ ರೀತಿಯಲ್ಲಿ ಅನ್ವೇಷಣೆ ಮಾಡುತ್ತಾರೆ. ಭೌತಿಕ ಸಂಸ್ಕೃತಿಯಲ್ಲಿ ಭಾರತದ ಬಿರ್ಹೋರ್ ಮತ್ತು ಕೆಲವು ಕಲಹರಿ ಬುಡಕಟ್ಟುಗಳು ಮುಖ್ಯವಾಗಿವೆ. ಬುಷ್‌ಮನ್‌ರು ಹಿಂದಿನಿಂದ ಬಂದ ಸಂಪ್ರದಾಯಗಳನ್ನು ಬದಲಾಯಿಸಿದ ನಂತರ ಕಾಂಗೊ, ಪಿಗ್ಮಿ, ಬ್ಲಾಕ್‌ಫುಟ್ ಇಂಡಿಯನ್ಸ್, ಬಿ.ಯನ್ಕೂಲ್‌ಗಳ ವಲಸೆಯಿಂದ ಸಂಘರ್ಷಗಳು ನಡೆದವು. ಕೆನಡಾ ಕರಾವಳಿ ತೀರದ ಎಸ್ಕಿಮೊ ಜನರ ಮೀನುಗಾರಿಕೆ ಅವಲಂಬನೆ, ಗ್ರಾಮ ಜೀವನದ ವಿಸ್ತರಣೆ ಮತ್ತು ಸಂಕೀರ್ಣ ಭೌತಿಕ ಸಂಸ್ಕೃತಿ ಬೆಳೆಯಿತು.

ಕಾಂಗೊ ಪಿಗ್ಮಿಗಳು ಭೌತಿಕ ಸಂಸ್ಕೃತಿ, ಪ್ರಕೃತಿಯ ಅವಲಂಬಿಗಳಾಗಿದ್ದರು. ಅದೇ ರೀತಿ ಅಂಡಮಾನ್ ದ್ವೀಪಗಳಲ್ಲಿ ಬೇಟೆಗಾರರು ಮಳೆ ಆಶ್ರಿತ ಕಾಡುಗಳಲ್ಲಿ ಹೆಚ್ಚಾಗಿ ನೆಲಸಿದ್ದರು. ದಕ್ಷಿಣ ಅಮೆರಿಕದ ಯೆಮನ್‌ದಲ್ಲಿ ವಿವಿಧ ಚಿತ್ರಣಗಳನ್ನು, ಮನೆ ಆಸರೆಗಳಲ್ಲಿ (Home shelter) ಬಿಡಿಸಲಾಗಿದೆ. ಬೇಟೆಗಾರರ ಮತ್ತು ಆಹಾರ ಸಂಗ್ರಹಕಾರರ ಅಲೆಮಾರಿ ಜೀವನ ಸಾಮಾಜಿಕ, ರಾಜಕೀಯ, ಸಂಘಟನೆಗಳಿಂದ ಕೂಡಿತ್ತು.

೮. ಸಾಮಾಜಿಕ ರಚನೆ

ಯಾವುದೇ ಸಮುದಾಯಗಳು ವರ್ಗ, ಶ್ರೇಣಿ, ವರ್ಣ ಮತ್ತು ಕುಟುಂಬ ಸಮುದಾಯಗಳನ್ನು ಹೊಂದಿರುವಂತೆ ಬೇಟೆಗಾರರು ಮತ್ತು ಆಹಾರ ಸಂಗ್ರಹಕರು ಸಾಮಾಜಿಕ ರಚನೆ ಹೊಂದಿದ್ದರು. ಮೂಲ ವಸ್ತುಗಳ ಬಳಕೆಯಿಂದ ಭೌತಿಕ ಸಂಸ್ಕೃತಿ, ಸಾಮಾಜಿಕ ಸಂಘಟನೆ ಆಗುತ್ತಿತ್ತು. ಕುಟುಂಬದ ಹಂತದಲ್ಲಿ ಸ್ವಾಭಾವಿಕ ಅಥವಾ ಪ್ರಕೃತಿಆರಾಧನೆ ಸಮಕಾಲೀನ ಸಮಾಜಗಳಲ್ಲಿ ಕಂಡುಬರುತ್ತದೆ. ಬಿರ್ಹೋರ್ ಮತ್ತು ಆಸ್ಟ್ರೇಲಿಯಾದ ಮೂಲ ನಿವಾಸಿಗಳು, ಚಳವಳಿಯ ಗುಂಪುಗಳಿಂದ ಒಗ್ಗಟ್ಟಾಗಿದ್ದರು. ಇವರು ವಂಶಪರಂಪರೆಯಿಂದ ಬಂದ ಆರಾಧನೆಗಳನ್ನು ಪ್ರಾದೇಶಿಕವಾಗಿ ಸಮಾಜದ ಪ್ರಮುಖ ಸಂಪ್ರದಾಯವಾಗಿ ಮಾರ್ಪಡಿಸಿಕೊಂಡಿದ್ದು ಸ್ಪಷ್ಟ.

ಹೀಗೆ ಬೇಟೆಯ ಪರಿಕಲ್ಪನೆ ಹಸಿವಿನ, ಆಹಾರ ಸಂಗ್ರಹಣೆ ಮೂಲಕ ಆಗುತ್ತದೆ. ಮಾನವ ಬೌದ್ಧಿಕವಾಗಿ ಬೇಟೆಯ ವೃತ್ತಿಯನ್ನು ಕಂಡುಕೊಂಡರೆ, ಭೌತಿಕ, ಪ್ರಾಯೋಗಿಕವಾಗಿ, ಪ್ರಾಣಿಯನ್ನು ಕೊಲ್ಲುವ ಕ್ರಿಯೆಯನ್ನು ಅನ್ವೇಷಣೆ ಮಾಡಿದ. ಪ್ರಥಮವಾಗಿ ಬೇಟೆ ಪುರುಷನಿಗೆ ಮೀಸಲಾಗಿರಬೇಕು. ಕ್ರಮೇಣ ಮಹಿಳೆಯರು ಭಾಗವಹಿಸಿ ಬೇಟೆಯಲ್ಲಿ ತೊಡಗಿಕೊಂಡ ಬಗೆ ಅನಂತರದ ಹೊಸ ಬೆಳವಣಿಗೆಗೆ ಕಾರ್ಣವಾಯಿತು.

ಚಾರಿತ್ರಿಕ ಪ್ರಕ್ರಿಯೆ

ವಿಶ್ವದಲ್ಲಿ ಮಾನವ ಜನಾಂಗ ಉಗಮವಾದ ತರುವಾಯ ಹಸಿವಿಗಾಗಿ ಕಂಡುಕೊಂಡ ಮೊದಲ ಪ್ರಯೋಗವೇ ಬೇಟೆ. ಈ ಆಹಾರ ಪಡೆಯಲು ದೈಹಿಕವಾಗಿ ಶ್ರಮಿಸತೊಡಗಿದ್ದು, ಹೀಗೆ ಕ್ರಾಂತಿಕಾರಿ ಬದಲಾವಣೆಯಾಗಿ ಗೆಡ್ಡೆ, ಗೆಣಸು, ಸೊಪ್ಪು ಸೇವಿಸುತ್ತಿದ್ದ. ಇವುಗಳ ಪೂರೈಕೆ ಕ್ಷೀಣಿಸಿ, ನಾಲಿಗೆ ರುಚಿಗೆ ಮತ್ತೊಂದು ತೆರನಾದ ಹವ್ಯಾಸಕ್ಕೆ ಇಳಿಯಬೇಕಾದಾಗ ತನ್ನ ಉಳಿವಿಗಾಗಿ ಕಲಿತ ಪಾಠ ಬೇಟೆ. ವ್ಯವಸಾಯ ಪೂರ್ವದಲ್ಲಿ ಬೇಟೆ ಆಹಾರ ಪೂರೈಕೆಯ ಏಕೈಕ ವೃತ್ತಿಯಾಗಿತ್ತು. ಆದಿಮಾನವನ ಆಹಾರಕ್ಕಾಗಿದ್ದ ಬೇಟೆಯ ಸಿದ್ಧಾಂತವು ಆತ ನಾಗರೀಕನಾದಂತೆಲ್ಲ ಬೇಟೆ ಕ್ರೀಡೆಯ ಸ್ವರೂಪ ಪಡೆಯಿತು.

ಬೇಟೆ ಪ್ರಾಚೀನಕಾಲದಿಂದಲೂ ಜನಪದರ ಜೀವನ ವಿಧಾನವಾಗಿ ಬೆಳೆದು ಬಂದಿದೆ. ಭಾರತದಲ್ಲಿ ಅನೂಚಾನವಾಗಿ ಬೆಳೆದು ಬಂದ ಬೇಟೆ ವೃತ್ತಿಗೆ ಸ್ವಾತಂತ್ರ್ಯ ನಂತರ ನಿಷೇಧಿಸಲಾಯಿತು. ಇದರಿಂದ ಸಹಸ್ರಾರು ಬೇಟೆಗಾರರು ನಿರಾಶೆಗೊಂಡರು. ಇವರು ಸ್ಥಿತ್ಯಂತರಗೊಂಡು ಆಹಾರಕ್ಕಾಗಿ ಅಲೆದಾಡುವಾಗ ಬೇಟೆಯನ್ನು ಮರೆಯಲಿಲ್ಲ, ಇತರ ಲಾಭದಾಯಕ ವೃತ್ತಿಗೆ ಬಲಿಯಾಗಲಿಲ್ಲ. ಒಂದು ರೀತಿಯ ಡೋಲಾಯಮಾನ ಸ್ಥಿತಿ ಏರ್ಪಟ್ಟಿತ್ತು. ನಮ್ಮಲ್ಲಿಂದು ಬೇಟೆಯಾಡುವುದು ಕಡಿಮೆಯಾಗಿದೆ. ಹಬ್ಬ, ಆಚರಣೆಗಳಲ್ಲಿ ಮಾತ್ರ ಪ್ರದರ್ಶಿಸುವ ಬೇಟೆಕಲೆ ಬಹು ದೊಡ್ಡ ಕ್ರೀಡಾ ಪದ್ಧತಿಯನ್ನೇ ನೆನಪಿಸುತ್ತದೆ.

ಬೇಟೆಯ ಪರಿಕಲ್ಪನೆ ಮತ್ತು ಪ್ರಕ್ರಿಯೆ ಮಾನವ ಉಗಮದೊಂದಿಗೆ ತಳಕುಹಾಕಿಕೊಂಡಿದೆ. ಪ್ರಕೃತಿಯ ಮಡಿಲಲ್ಲಿ ದೊರೆತ ಆಹಾರವನ್ನು ಪಡೆದು ಅವನು ನಾನಾ ಬಗೆಯ ಬದಲಾವಣೆಗಳಿಗೆ ಕಾರಣನಾದ. ಬಹುಶಃ ಅವನನ್ನು ಸಮಾಜಜೀವಿ ಎಂದು ಕರೆದಿರುವುದು ಇದಕ್ಕೆ ಅಪವಾದವಲ್ಲ. ಬೇಟೆ ಎಂದ ಕೂಡಲೆ ಪ್ರಾಣಿಗಳನ್ನು ಕೊಲ್ಲುವುದು ಎಂದು ಭಾಸವಾಗುತ್ತದೆ. ಹಣ್ಣು, ಹಂಪಲು, ಗೆಡ್ಡೆ, ಗೆಣಸು ಎಲ್ಲಾ ಋತುಮಾನಗಳಲ್ಲಿಯೂ ಒಂದೇ ಸಮನೆ ದೊರೆಯುತ್ತಿರಲಿಲ್ಲ. ಹೀಗಾಗಿ ಅವನು ಕೆಲವು ಋತುಮಾನಗಳಲ್ಲಿ ತನ್ನ ಆಹಾರಕ್ಕೆ ಅಥವಾ ರುಚಿ ಬದಲಾವಣೆಗಾಗಿ ಬೇಟೆಯನ್ನು ಒಂದು ವೃತ್ತಿಯನ್ನಾಗಿ ಮಾಡಿಕೊಳ್ಳಬೇಕಾಗಿ ಬಂದಿತು ಎನ್ನಲಾಗಿದೆ. ಇದು ಎಂದಿನಿಂದ, ಯಾವ ಹಂತದಲ್ಲಿ ಹೇಗೆ ರೂಢಿಸಿಕೊಂಡನೆಂಬುದು ನಿರ್ದಿಷ್ಟವಾಗಿ ತಿಳಿದುಬಂದಿಲ್ಲ. ಅವನಿಗೆ ಶಿಲಾಯುಧಗಳ ಸಹಾಯದಿಂದ ಕುಟ್ಟುವುದು, ರುಬ್ಬುವುದು, ಪ್ರಾಣಿವಧೆ ಮಾಡುವುದು ನಿರಂತರವಾಗಿ ನಡೆದು ಬಂದಂತಿದೆ.

ಆದಿಶಿಲಾಯುಗದಲ್ಲಿ ಗೆಡ್ಡೆ - ಗೆಣಸು ತಿನ್ನುತ್ತಾ, ಗವಿ-ಗುಂಡಾರಗಳಲ್ಲಿ ವಾಸಿಸುವುದು ಸಾಮಾನ್ಯ ವಾಗಿತ್ತು. ಈ ಹಂತದಲ್ಲಿ ಶಿಲಾಯುಧಗಳಿಂದಲೇ ಪ್ರಾಣಿಗಳನ್ನು ಕೊಲ್ಲುತ್ತಿದ್ದನೆಂಬುದು ಸ್ಪಷ್ಟ. ಆನಂತರ ಆಯುಧಗಳ ಶೋಧನೆಯಿಂದ ಬಲ್ಲಿಡಿದು ಬೇಟೆಯಾಡಿ ಸಿಕ್ಕ ಪ್ರಾಣಿಗಳನ್ನು ಕೊಂದು ಸೇವಿಸತೊಡಗಿದ. ಕೊಂದ ಅಥವಾ ಸತ್ತ ಪ್ರಾಣಿಯ ಮಾಂಸ ಸೇವನೆ ಮತ್ತು ಗುಹೆಗಳಲ್ಲಿ ವಾಸಿಸುವುದನ್ನು ಮಾನವನ ಅನಾಗರಿಕ ವ್ಯವಸ್ಥೆ ಎನ್ನುವುದು ವಾಡಿಕೆ. ಅಂದಿನ ನಾಗರಿಕತೆಯನ್ನು (ಮಾನವನ ವಿಕಾಸ) ಇಂದಿನ ನಾಗರಿಕತೆಗೆ ಹೋಲಿಸಿಕೊಂಡಾಗ ಮಾತ್ರ ಅದು ಅನಾಗರಿಕವೆನಿಸುತ್ತದೆ. ಇಲ್ಲವಾದರೆ, ಅಂದಿನ ಕಾಲಕ್ಕೆ ಸಮ ಮತ್ತು ಪ್ರತಿಯಾದ ನಾಗರಿಕತೆ ಇದ್ದಿರಲಿಕ್ಕಿಲ್ಲ, ಹೀಗಾಗಿ ಅದು ಅಂದಿಗೆ ನಾಗರಿಕ ವ್ಯವಸ್ಥೆಯಾಗಿತ್ತು. ನವಶಿಲಾಯುಗದಲ್ಲಿ ಬೆಂಕಿ ಉತ್ಪಾದಿಸುವುದನ್ನು ಅರಿತುಕೊಂಡ ತರುವಾಯ ಸಿಕ್ಕ ಪ್ರಾಣಿಗಳನ್ನು ಸುಟ್ಟು ಹಸಿವು ನೀಗಿಸಿಕೊಳ್ಳುವ ಕ್ರಿಯೆ ಬೆಳೆಯಿತು.

ಬೇಟೆಯ ಪರಿಕಲ್ಪನೆ ಮತ್ತು ಪ್ರಕ್ರಿಯೆ ನಮ್ಮ ಜೀವನದಷ್ಟೇ ಮಹತ್ವ ಪಡೆದಿದೆ. ಜೀವನವಿಲ್ಲದೆ ಆಹಾರವಿಲ್ಲ, ಆಹಾರವಿಲ್ಲದೆ ಜೀವನವಿಲ್ಲ ಎಂಬ ಮಾತು ಬದುಕುವುದಕ್ಕೆ ಆಹಾರದ ಅವಶ್ಯಕತೆಯನ್ನು ತೋರಿಸುತ್ತದೆ. ಆಗ ದೊಡ್ಡ ಪ್ರಾಣಿಗಳನ್ನು ಕೊಲ್ಲುವುದರ ಮೂಲಕ ಆಹಾರ ಮತ್ತು ಸ್ವಯಂರಕ್ಷಣೆಗಾಗಿಯೇ ಬೇಟೆ ಉಗಮವಾಗಿರಬೇಕು.[೧೩] ನಾವು ಬೇಟೆಯನ್ನು ಕುರಿತು ವಿವರಿಸುವಾಗ ಪಶುಪಾಲನೆ ಮತ್ತು ಕೃಷಿಯ ಹಿಂದಿನ ಅವಸ್ಥೆ ಎಂದು ಖಚಿತಪಡಿಸಿಕೊಳ್ಳಬೇಕು. ಹೀಗಾಗಿ ಮಾನವನ ಆರಂಭಿಕ ವೃತ್ತಿ ಬೇಟೆಯಾಗಿತ್ತೆಂಬುದರಲ್ಲಿ ಅನುಮಾನವಿಲ್ಲ. ಇಂದು ಬೇಟೆ ಆಶ್ಚರ್ಯಪಡುವ ಮತ್ತು ಆತ್ಮಾಕರ್ಷಣೆಗೊಳಗಾದ, ವ್ಯಾಮೋಹಕ ಕ್ರೀಡೆಯಾಗಿದೆ. ಇಂದಿಗೂ ಹಲವು ಸಮುದಾಯದವರು ಬೇಟೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಇವರಲ್ಲಿ ಬೇಡರಂಥಾ ಬುಡಕಟ್ಟು ಜನಾಂಗಗಳವರು ಪ್ರವೀಣರೆಂಬುದಕ್ಕೆ ಅವರ ರೂಢಿ-ಸಂಪ್ರದಾಯಗಳೇ ಸಾಕ್ಷಿ.

ಪ್ರಾಚೀನ ಕಾಲದಿಂದಲೂ ಜನರ ಜೀವನದ ವಿಧಾನವಾಗಿ ಬೇಟೆ ರೂಪು ಪಡೆದುಕೊಂಡಿದೆಯಲ್ಲದೆ, ಇಡೀ ಮಾನವ ಜನಾಂಗದ ಜೀವನಾರಂಭಕ್ಕೆ ಬಳುವಳಿಯಾಗಿ ಬಂದ ವೃತ್ತಿಯಾಗಿದೆ. ಆದಿಯಲ್ಲಿ ಸಾರ್ವತ್ರಿಕವಾಗಿದ್ದ ಬೇಟೆ ಇಂದು ಕೆಲವೇ ಬುಡಕಟ್ಟುಗಳಿಗೆ ಸೀಮಿತಗೊಂಡಿರುವುದುಂಟು. ಬೇಟೆಯ ಬದುಕು ನಾನಾ ಕಾರಣಗಳನ್ನು ಹೊಂದಿದೆ: ಸ್ವಯಂರಕ್ಷಣೆ, ಆಹಾರ, ಮನೋರಂಜನೆ, ಪ್ರಕೃತಿ ಸಮತೋಲನ, ಲಾಭದಾಯಕ ಉದ್ಯಮ ಇತ್ಯಾದಿ ಅಂಶಗಳನ್ನು ಹೆಸರಿಸಬಹುದು. ಬೇಟೆ ಪ್ರಾಕೃತಿಕ ಸಂಪತ್ತಿನ ದರೋಡೆ ಎನಿಸಿದರೂ, ಜೀವನಾವಶ್ಯಕತೆಗೆ ಪರ್ಯಾಯ ವ್ಯವಸ್ಥೆ ಇಲ್ಲದಿರುವುದರಿಂದ ಅನಿವಾರ್ಯವಾಗಿ ಬೇಟೆಗೆ ಕಾಡೇ ಕ್ರೀಡಾಂಗಣವಾಗಿತ್ತು.

ಇಲ್ಲಿ ಜಗತ್ತಿನ ವಿವಿಧ ಭಾಗಗಳಲ್ಲಿದ್ದ ಬೇಟೆಯ ಪ್ರಕ್ರಿಯೆ ಸೂಕ್ಷ್ಮವಾಗಿ ಅವಲೋಕಿಸಲಾಗುತ್ತದೆ. ಗೆಡ್ಡೆ-ಗೆಣಸುಗಳಿಂದ ಆರಂಭಿಸಿ ಶಿಲಾಯುಧಗಳ ಮೂಲಕ ಬೇಟೆಯಾಡುವುದು, ಆಧುನಿಕ ಬಂದೂಕುಗಳು ಬಂದಾಗ ಬೇಟೆಯ ಹವ್ಯಾಸ ದ್ವಿಗುಣಗೊಂಡಿತು. ಆಡಮಸನ್ ಹೆಬೋಲ್ ಅವರು ಮಾನವ ನಿಸರ್ಗದ ಒಡೆಯ. ಆಹಾರ ಸಂಗ್ರಹಣೆಯಲ್ಲಿ ಗೆಡ್ಡೆ - ಗೆಣಸಿಗಾಗಿ ಯಾವಾಗಲೂ ದೈವದ ಆರಾಧನೆಯನ್ನು ಬೇಟೆಗಾರರು ಮಾಡುತ್ತಿದ್ದರು ಎಂದು ತಿಳಿಸಿದ್ದಾರೆ.[೧೪] ಮುಂದುವರೆದು ಬೇಟೆಯ ಉಪಯೋಗ, ಆಹಾರ ಸಂಗ್ರಹಣೆ, ಇತರ ಹವ್ಯಾಸಗಳನ್ನು ಉಲ್ಲೇಖಿಸಲಾಗಿದೆ.

ಬೇಟೆ ಬೆಳೆದು ಬಂದ ಬಗೆಯನ್ನು ಈ ರೀತಿಯಾಗಿ ವಿವರಿಸಲಾಗಿದೆ: ಆಹಾರ ಪಡೆಯುವ ವಿಧಾನಗಳಲ್ಲಿ ಬೇಟೆ ತುಂಬಾ ಹಳೆಯದು. ಆರಂಭದ ಬೇಟೆಗಾರರು ಶಿಲಾಯುಧ, ಕತ್ತಿ, ಕೊಡಲಿ ಅಲ್ಲದೆ ಬಲ್ಲು- ಬಾಣಗಳನ್ನು ಬೇಟೆ ತಂತ್ರಜ್ಞಾನದಲ್ಲಿ ಬಳಸುತ್ತಿದ್ದರು. ಹೀಗೆ ಬೇಟೆಯ ತಂತ್ರಜ್ಞಾನ, ಬಂದೂಕು, ಆಧುನಿಕ ಪಿಸ್ತೂಲು, ಪ್ರಾಣಿಗಳ ಬೇಟೆಯಲ್ಲಿ ಉಪಯೋಗವನ್ನು, ಬೇಟೆನಾಯಿಗಳ ಪಾತ್ರವನ್ನು ತಿಳಿಸಿದ್ದಾನೆ.[೧೫]

ಬೇಟೆಯನ್ನು ಒಂದು ಕ್ರೀಡೆ ಎಂದು ಒಪ್ಪಿಕೊಳ್ಳಲಾಗಿದ್ದು, ಕಾಡಿನ ಅನೇಕ ವಿಧದ ಪ್ರಾಣಿಗಳ ಬಲಿಯೂ ನಡೆಯುತ್ತಿತ್ತು. ಹಿಂದೆ ಕಾಡುಪ್ರಾಣಿಗಳನ್ನು ಕೊಂದು ತಿನ್ನುವ ಪ್ರವೃತ್ತಿಯನ್ನು ಬೇಟೆ ಕ್ರೀಡೆಯಲ್ಲಿ ಅನೂಚಾನವಾಗಿ ರೂಢಿಸಿಕೊಂಡಿದ್ದು ಸ್ಪಷ್ಟ. ಗ್ರೇಟ್‌ಬ್ರಿಟನ್ ಮತ್ತು ಪಶ್ಚಿಮ ಯುರೋಪ್‌ನಲ್ಲಿ ಕಾಡು ಪ್ರಾಣಿಗಳ ಬೇಟೆ ನಿರ್ದಾಕ್ಷಿಣ್ಯವಾಗಿ ನಡೆದು, ಇತರ ಪ್ರಾಣಿ, ಪಕ್ಷಿಗಳ ಬೇಟೆ ಪ್ರಚಲಿತಕ್ಕೆ ಬಂತು. ಇಲ್ಲಿ ಬೇಟೆ ಮೂಲವನ್ನು ಬಹು ಹಿಂದಕ್ಕೆ ಕೊಂಡೊಯ್ಯುತ್ತಾರೆ. ಬೇಟೆಗಾರನನ್ನು ನೇಮಿಸಿಕೊಂಡು ಕಾಡು ಪ್ರಾಣಿಗಳನ್ನು ಸಂಗ್ರಹಿಸಿ ಹಂಚಿಕೊಳ್ಳುತ್ತಿದ್ದರು.

ಪಕ್ಷಿಗಳನ್ನು ಸಹಾ ಬೇಟೆ ಆಡುತ್ತಿದ್ದು, ಆಧುನಿಕ ಗನ್‌ಗಳಿಂದ ಶೂಟ್ ಮಾಡಿ ಸಾಯಿಸುತ್ತಿದ್ದರು. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಮತ್ತು ನೆರೆಯ ರಾಷ್ಟ್ರಗಳಲ್ಲಿ ಬೇಟೆಯನ್ನು ವೃತ್ತಿಯಾಗಿಸಿಕೊಂಡು, ಆಯುಧಗಳ ಮೂಲಕ ಪ್ರಾಣಿಗಳನ್ನು ಕೊಲ್ಲುತ್ತಿದ್ದರು.

ಬೇಟೆ ಆದಿಮಾನವನಿಗೆ ಅಗತ್ಯವಾದ ವೃತ್ತಿಯಾಗಿತ್ತು; ಕೇವಲ ಉದರ ಪೋಷಣೆಯಾಗಿರಲಿಲ್ಲ. ಉಡುಗೆ-ತೊಡುಗೆಗಳಿಗೆ ಚರ್ಮ, ಮೂಳೆ, ಕೋಡು ಇತರ ವಸ್ತುಗಳನ್ನು ಬಳಸುತ್ತಿದ್ದರು. ಪ್ರಾಕ್ತನಶಾಸ್ತ್ರೀಯ ಆಧಾರಗಳಿಂದ ಗತಕಾಲ ಮತ್ತು ವರ್ತಮಾನದ ವಿದ್ಯಾಮಾನಗಳನ್ನು ಅವಲೋಕಿಸಿದರೆ, ಸಂಕೀರ್ಣ ಸಮಾಜಗಳು ಅಂದಿನ ಸನ್ನಿವೇಶಗಳಲ್ಲಿ ಕಂಡುಬರುತ್ತವೆ. ಅವರ ಬೇಟೆಯ ವಿಧಾನಗಳು ವೃತ್ತಿ ಪೂರ್ವ ಗುಂಪಿನಿಂದ ಕೂಡಿದ್ದವು. ಪ್ರಾಣಿಗಳ ಬೇಟೆಗೆ ಉಪಕರಣಗಳನ್ನು ಬಳಸಿ, ಅವುಗಳನ್ನೇ ಬಳಸದೆ ಇತರ ಆಯುಧಗಳ ಮೂಲಕ (ಕೋಲು, ಶಿಲಾಯುಧ) ಹಕ್ಕಿಗಳನ್ನು ಕೊಲ್ಲುತ್ತಿದ್ದರು. ಆಫ್ರಿಕಾದಲ್ಲಿ ಈ ರೀತಿಯ ಸಣ್ಣ ಬೇಟೆಗೆ 'ನೊಬಕರ್ರಿ' ಮತ್ತು 'ಟ್ರೊಂಬಾಷ್'ಗಳೆಂದು ಹೆಸರು. ನೈಲ್ ನದಿಯ ಮೇಲ್ಭಾಗದಲ್ಲಿ ಇವು ಪ್ರಚಲಿತದಲ್ಲಿದ್ದವು. ಆಸ್ಟ್ರೇಲಿಯಾದ 'ಬೂಮ್‌ರಾಂಗ್' ಬೇಟೆಗೆ ಸರಳವಾದ ಕೋಲುಗಳನ್ನು ಬಳಸಿದ್ದು ಗಮನಾರ್ಹ. ಶಿಲಾಯುಧ, ಮೂಳೆ ಮತ್ತು ಲೋಹ ಕೂಡ ಬೇಟೆಗೆ ಬಳಸಲಾಗಿದೆ. ಆಸ್ಟ್ರೇಲಿಯಾವನ್ನು ಬಿಟ್ಟರೆ 'ಬಿಲ್ಲು' ಮತ್ತು 'ಬಾಣ' ಗಳನ್ನು ಇತರ ರಾಷ್ಟ್ರಗಳಲ್ಲಿ ನವಶಿಲಾಯುಗದಲ್ಲಿ ಪ್ರಯೋಗಿಸುತ್ತಿದ್ದರು. ೧೯ನೇ ಶತಮಾನದಲ್ಲಿ ಹೊಸ ಆಯುಧ ಮತ್ತು ತಂತ್ರಗಳು ಬರುವವರೆಗೆ ಅವೇ ಬಳಕೆಯಲ್ಲಿದ್ದವು. ಬೇಟೆಗೆ ಕುದುರೆಯನ್ನು ಅಳವಡಿಸಿಕೊಂಡಿದ್ದು ಕ್ರಿ.ಪೂ.೨ ಮಿಲಿಯನ್ ವರ್ಷಗಳಿಂದ ಎನ್ನಲಾಗಿದೆ.

ಬೇಟೆಯ ಪ್ರಾಚೀನತೆಯನ್ನು ಖಚಿತವಾಗಿ, ಗೆರೆಹೊಡೆದಂತೆ ತಿಳಿಸುವುದು ಕಷ್ಟ. ಆದಿಯಲ್ಲಿ ಬೇಟೆಯನ್ನು ವಿನೋದ, ಆಟವಾಗಿ ಕಂಡಿದ್ದರು. ಒಡೆಯರು, ಅಧಿಕಾರರು, ನೊಬೆಲ್ಲರು (ಶ್ರೀಮಂತರು) ಬೇಟೆ ಆರೋಗ್ಯಕ್ಕೆ ಒಳ್ಳೆಯದೆಂದು ಅಳವಡಿಸಿಕೊಂಡಿದ್ದರು. ಪ್ರಾಚೀನ ಈಜಿಪ್ಟ್‌ನಲ್ಲಿ ಬೇಟೆಗಾರರ ಒಂದು ಸಾಮೂಹಿಕ ವರ್ಗವೇ ಇತ್ತು. ಇವರು ಬೇಟೆಯಾಡುತ್ತಿದ್ದುದು ತಮಗಾಗಿ ಮತ್ತು ನೊಬೆಲ್ಲರಿಗಾಗಿ ಎಂಬುದು ಗಮನಾರ್ಹ. ನೈಲ್ ನದಿ ಮತ್ತು ಸಹರಾ ಮರುಭೂಮಿಯ ಬಯಲಿನ ಎರಡು ಭಾಗಗಳಲ್ಲಿ ಕೆಲವೊಮ್ಮೆ ಪ್ರಾಣಿಗಳನ್ನು ಸೆರೆ ಹಿಡಿಯುವುದು, ರಕ್ಷಣೆ ನೀಡುವುದು ಬೇಟೆಯಿಂದ ಸಾಧ್ಯವಾಯಿತು. ಮೊಲ, ಬರ್‌ಬರಿಕುರಿ, ನರಿ, ಕಾಡುಹಂದಿ, ಫೇಂಡಾಮೃಗ, ಚಿರತೆ ರೈತನಿಗೆ ಶತ್ರುಗಳಾಗಿದ್ದವು. ಬೇಟೆಗಾರರು ಕೆಲವನ್ನು ಮಾತ್ರ ಪಳಗಿಸುತ್ತಿದ್ದು, ಸಿಂಹವನ್ನು ಆಕಸ್ಮಿಕವಾಗಿ ಬೇಟೆಯಾಡುತ್ತಿದ್ದರು.

ಬೇಟೆಗಾರರು ರಥದಲ್ಲಿ ಅಥವಾ ಕುದುರೆ ಸವಾರಿಯಲ್ಲಿ ಬೇಟೆಯಾಡುವ ರೂಢಿಯಿತ್ತು. ಇಂಥ ಅನೇಕ ಬೇಟೆ ದೃಶ್ಯಗಳನ್ನು ಅಸ್ಸೀರಿಯ ಮತ್ತು ಬ್ಯಾಬಿಲೋನಿಯರ ಮನೆ ಮತ್ತು ದೇವಾಲಯದ ಗೋಡೆಗಳ ಮೇಲೆ ಕೆತ್ತಲಾಗಿದೆ. ಕ್ರಿ.ಪೂ. ೭ನೇ ಶತಮಾನದಲ್ಲಿ ಅಂದಿನ ರಾಜ ಅಸ್ಸುರ್ ಬನಿಪಾಲ್ ಅರಸನಾದರೂ ಬೇಟೆಯಾಡುವುದನ್ನು ಕಡಿಮೆ ಮಾಡಿರಲಿಲ್ಲ. ಹಾಗಾಗಿ ಅವನಿಗೆ ಬೇಟೆಯರಾಜ ('Hunting King') ಎಂದು ಕರೆಯುತ್ತಿದ್ದರು.

ಇವನು ಎಲ್ಲರಿಗೂ ಒಡೆಯನಾಗಿದ್ದುದು, ಒಡೆಯ-ಪರಿಹಾರ ಕೊಡುವಾಗ ಬಹುಮುಖ ಪ್ರತಿಭೆಯನ್ನು ಗುರುತಿಸುತ್ತಿದ್ದನು. ಇವನ ಗುಂಪಿನಲ್ಲಿರುವವರ ಜತೆಗೆ ಬೇಟೆಯಾಡುವಾಗ 'ನಾನು ಸಿಂಹವನ್ನು ಕೊಲ್ಲುವೆ' ಎಂದು ಆಗಾಗ ಹೇಳುತ್ತಿದ್ದುದು ಪ್ರೇರಣೆಯ ಸಂಕೇತವಾದಂತಿದೆ. ಕ್ರಿ.ಪೂ.೩ನೇ ಶತಮಾನದಲ್ಲಿ ಬೆಳ್ಳಿಯ ತಟ್ಟೆಯಲ್ಲಿ ಬಡಿಸಿದ

ಆಹಾರವನ್ನು ಸೇವಿಸುವಂತೆ ಸಸಾನಿಯನ್‌ನ ರಾಜ ೧ನೇ ಕವಾಧ ಕಾಡುಕುರಿಗಳನ್ನು ತಿನ್ನುತ್ತಿದ್ದ ಉಲ್ಲೇಖವಿದೆ. ಕ್ರಿ.ಪೂ. ೨೦೦ರಲ್ಲಿ ಅಸ್ಸೀರಿಯದವರು ಬೇಟೆಯಲ್ಲಿ ಬಹುಪಾಲು ಸುಧಾರಿಸಿದ್ದರು. ಭಾರತ ಮತ್ತು ಚೀನಾಗಳಲ್ಲಿ ಆದಿಕಾಲದಿಂದಲೂ ಕಾಡುಮೃಗಗಳನ್ನು ಕೊಲ್ಲುತ್ತಿದ್ದುದು ಸ್ಪಷ್ಟ. ಈ ಕಾಲಮಾನದಲ್ಲಿ ನಾಗರಿಕತೆ ಮತ್ತು ಮಹಾಕಾವ್ಯಗಳ ಹಿನ್ನೆಲೆಯಲ್ಲಿ ಬೇಟೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತ್ತು. ಹೀಗೆ ಇಸ್ರೇಲಿಯನ್ನರು ಸಹಾ ಬೇಟೆ ವರ್ಣನೆ, ಅನುಭವಗಳನ್ನು ಗ್ರಂಥಗಳಲ್ಲಿ ಬರೆದಿಟ್ಟದ್ದಾರೆ.

ಜಗತ್ತಿನಲ್ಲಿ ಬೇಟೆಯ ಆರಂಭದ ಮೂಲವನ್ನು ಗ್ರೀಸ್ ದೇಶದಿಂದ ಗುರುತಿಸುತ್ತಾರೆ. ಇಲ್ಲಿ ಜೆನೊಫೊನ್ ಕಿನೆಗೆಟಿಕಾಸ್ ಎಂಬ ರಾಜನ ಅವಧಿಯಲ್ಲಿ (ಕ್ರಿ.ಪೂ. ೪.ನೇ ಶ.) ಮೊಲದ ಬೇಟೆ, ಗಂಡುಹಂದಿ, ಗಂಡು ಸಾರಂಗಗಳ ಬೇಟೆಗೆ ಮಹತ್ವ ಕೊಟ್ಟದ್ದ. ಇವನು ಸಿಂಹ, ಚಿರತೆ, ಯೇದು, ಕರಡಿ ಇತರ ಪ್ರಾಣಿಗಳನ್ನು ಬೇಟೆಯಾಡಿ ಸೇವಿಸುತ್ತಿದ್ದನು. ರೋಮನ್ನರು ಬೇಟೆಯಲ್ಲಿ ಅಪಾರವಾದ ಪ್ರತಿಭೆ ತೋರಿಸಿದ್ದು, ಯಾವುದರಲ್ಲಿಯೂ ಹಿಂದುಳಿದಿರಲಿಲ್ಲ.[೧೬]

ಕ್ರಿ.ಪೂ.೬ನೇ ಶತಮಾನದಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಹೊಸ ಧರ್ಮಗಳ ಉದಯದಿಂದ ಬೇಟೆಗೆ ಕಡಿವಾಣ ಬತ್ತಾದರೂ, ನೈತಿಕತೆ ಹೊಣೆಯಿಂದ, ಬೇಟೆಗಾರರು ಹಸಿವಿಗಾಗಿ ಬೇಟೆಗೆ ಪುನಃ ಬಲಿಯಾಗಿದ್ದು ಅನಿವಾರ್ಯವಾಗಿದ್ದು ಸ್ಪಷ್ಟ.

ಆನಂತರದ ಸಂದರ್ಭದಲ್ಲಿ ಬೇಟೆಗೆ ಐತಿಹಾಸಿಕ ಮಹತ್ವ ಇಮ್ಮಡಿಯಾಯಿತು. ಫ್ರಾಂಕ್ ಮತ್ತು ಇತರ ಟುಟಾನಿಕ್ ಜನಾಂಗಗಳು ಹಲವು ಶತಮಾನಗಳಿಂದಲೂ ಪಕ್ಷಿಬೇಟೆಯನ್ನು ರೂಢಿಸಿಕೊಂಡು ಬಂದಿದ್ದಾರೆ. ಉದಾ: ಗಿಡುಗ, ಕೌಜುಗ ಮುಂತಾದ ಪಕ್ಷಿಗಳು. ಇದಕ್ಕೆ ಜನಸಾಮಾನ್ಯರ, ಆಳರಸರ ಪ್ರೋತ್ಸಾಹವಿತ್ತು. ಬೇಟೆಯು ವಿವಿಧ ಆಯಾಮ, ಬೇಟೆಗಾರರ ಬಗ್ಗೆ ತಿಳಿಸುತ್ತಾ: ಊಳಿಗಮಾನ್ಯ ವ್ಯವಸ್ಥೆಯಲ್ಲಿ ಬೇಟೆ ರಕ್ಷಣೆ ಮತ್ತು ಹಕ್ಕು ಭೂ ಒಡೆಯನ ಹಿಡಿತದಲ್ಲಿತ್ತು.[೧೭] ವಂಶ ಪರಂಪರೆಯಾಗಿ ಬೇಟೆ ವಿಶೇಷ ಸ್ಥಾನ ಪಡೆಯಿತು. ಬೇಟೆ ರಕ್ಷಣಾತ್ಮಕ ಕ್ರೀಡೆಯಾಗಿ, ಊಳಿಗಮಾನ್ಯ ಕಾಲದಲ್ಲಿ ಭೂಹಿಡುವಳಿದಾರರಿಗೆ ಹಕ್ಕಾಗಿದ್ದ ಇತರ ಸಂಗತಿಗಳು ತಿಳಿಯುತ್ತವೆ. ಭೂ ಒಡೆಯನಿಗೂ ಸಂಬಂಧವಿದ್ದ ಬೇಟೆ ವಂಶಪಾರಂಪರ್ಯವಾಗಿ ರೋಮನ್ ಮಹಾ ಸಾಮ್ರಾಜ್ಯದವರೆಗೂ ಆವರಿಸಿರುವುದು ಗಮನಾರ್ಹ. ಸ್ಯಾಕ್ಸೊನಿಯದರಾಜ ಎಲೆಕ್ಟರ್ ಜಾನ್ ಜಾರ್ಜ್ - II (೧೬೫೬-೮೦) ೪೨, ೬೪೯ ಕೆಂಪು ಜಿಂಕೆಗಳನ್ನು ಶೂಟ್ ಮಾಡಿ ಸಾಯಿಸಿದ್ದಾನೆ.[೧೮] ಸ್ಯಾಕ್ಸೊನಿ ರಾಜ ಬೊಹೆಮಿಯಾ ರಾಜ್ಯದ ಬಗೆಗೆ ನಿರಾಶೆಯುಳ್ಳವನಾಗಿದ್ದು, ಅದು ಚಿಕ್ಕ ರಾಜ್ಯವಾಗಿದ್ದಾಗ ಗಡಿ ರಕ್ಷಿಸಿದ ಕಾರಣ ಅದನ್ನು ಆಳಲು ಇಚ್ಛೆಪಡಲಿಲ್ಲ. ರಾಜನ ಆಸಕ್ತಿ ಬೇಟೆ ಕಡೆ ಇತ್ತೆನ್ನಬಹುದು.

ಇಂಗ್ಲೆಂಡಿನ ಎಡ್ವರ್ಡ್ ಕನ್‌ಫೆಸರ್ ಕ್ರಿ.ಶ. ೧೧ನೇ ಶತಮಾನದಲ್ಲಿ ಬೇಟೆಯ ಸವಾರಿ ಮಾಡುತ್ತಾ ತನ್ನ ಬೇಟೆ ನಾಯಿಗಳಿಂದ ಸಾಕಷ್ಟು ಗೆಲುವು ಕಂಡಿದ್ದ. ೧೮ನೇ ಶತಮಾನದಲ್ಲಿ ಫ್ರಾನ್ಸಿನ ಚಕ್ರವರ್ತಿಯಾದ ೧೫ನೇ ಲೂಯಿ ತನ್ನ ಮನೆಯ ಮಾರ್ಗದ ಎತ್ತರವಾದ ಭೂಪ್ರದೇಶಗಳಲ್ಲೊಂದಾದ ವಿಲ್ಲಾರ್ಸ್-ಕೊಟರೆಟ್ಸ್ ಅರಣ್ಯದಲ್ಲಿ ಇತರರೊಡನೆ ಬೇಟೆಯಾಡುತ್ತಿದ್ದ. ೧೭೨೬ರೊಳಗೆ ಸು.೨೭೬ ದಿವಸಗಳ ಕಾಲ ಬೇಟೆಯಾಡಿದ್ದನು. ಇವನಂತೆಯೇ ೧೬ನೇ ಲೂಯಿ ಸಹಾ ಬೇಟೆಯ ಹವ್ಯಾಸಿಯಾಗಿದ್ದ. ರಷ್ಯಾದ ಜಾರ್ ಅರಸರು ಬೇಟೆಯಾಡುತ್ತಿದ್ದ ಉಲ್ಲೇಖವಿದೆ:[೧೯]

ಯುರೋಪಿನ ಮಹಿಳೆಯರು ಸಹಾ ಬೇಟೆಯಲ್ಲಿ ಖ್ಯಾತಿ ಪಡೆದಿದ್ದರು. ಐಸೆನಿಕ್‌ನ ರಾಣಿ ಫ್ರೆಡರಿಕಳು

ಚಿಗರೆಗಳನ್ನು ಕೂಡಿ ಹಾಕುವ ಕೌಶಲ್ಯ ಹೊಂದಿದ್ದರೆ, ನೆದರ್‌ಲ್ಯಾಂಡಿನ ಚಕ್ರವರ್ತಿನಿ ಮೆರಿಯಾಳು ವಿಶಾಲವಾದ ಪ್ರದೇಶದಲ್ಲಿ ಗಂಡು ಸಾರಂಗವನ್ನು ಬಿಲ್ಲು, ಬಾಣಗಳಿಂದ ಹೊಡೆದು ಪಡೆಯುತ್ತಿದ್ದಳಂತೆ. ಫ್ರಾನ್ಸಿನಲ್ಲಿ ೨ ನೇ ಹೆನ್ರಿ (೧೫೪೭-೫೯)ಯ ಆಳ್ವಿಯಲ್ಲಿ ಉಪಪತ್ನಿ ಡಯಾನ ಡಿ.ಪಾಯಿಟರ್ಸ್‌ಳು ಜಿಂಕೆ ಮತ್ತು ಕಾಡುಹಂದಿಗಳು ಸೇರಿದಂತೆ ಇತರ ಪ್ರಾಣಿಗಳನ್ನು ಚೆಗೊನ್‌ಸ್ಕೋ ಜಲಾಶಯದ ಹತ್ತಿರ ಬೇಟೆಯಾಡುತ್ತಿದ್ದಳು. ಇದು ಯುರೋಪಿನಲ್ಲಿ ಬೇಟೆಯ ಕ್ರೀಡೆಗೆ ಅತ್ಯಂತ ಆಕರ್ಷಕವಾದ ಸ್ಥಳವಾಗಿರಬೇಕು. ಹೀಗೆ ಇಂಗ್ಲೆಂಡಿನ ೧ನೇ ಎಲಿಜಬೆತ್ ರಾಣಿ ಎರಡು ರೀತಿಯಲ್ಲಿ ಬೇಟೆಯಾಡಿದ ಉಲ್ಲೇಖವಿದೆ.

ಉತ್ತರ ಅಮೆರಿಕಾದಲ್ಲಿ ವಸಾಹತುಗಳು ಬರುವ ಮುನ್ನ ತೀರ ಪ್ರದೇಶಗಳ ನಡುವೆ ಬೇಟೆ ದಟ್ಟವಾಗಿತ್ತು. ನ್ಯೂ ಇಂಗ್ಲೆಂಡ್‌ನ ಮೂಸ್, ಅಟ್ಲಾಂಟಿಕ್ ತೀರ ಮುಂತಾದ ಸ್ಥಳಗಳಲ್ಲಿ ಜಿಂಕೆ, ಪಕ್ಷಿ, ಬಾತುಕೋಳಿ, ಕಾಡುಹಂದಿ ಮುಂತಾದ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡುತ್ತಿದ್ದರು. ಇಲ್ಲಿ ಪ್ರತಿಯೊಬ್ಬನೂ ಬೇಟೆಗಾರನಾಗಿರುತ್ತಿದ್ದುದು ವಿಶೇಷ.

ಆಫ್ರಿಕಾ ಖಂಡಕ್ಕೆ ಯುರೋಪಿಯನ್ನರು ಆಗಮಿಸಿದಾಗ (೧೯ನೇ.ಶ) ಆಹಾರಕ್ಕಾಗಿ ಬೇಟೆಯನ್ನು ಅನಿವಾರ್ಯವಾಗಿ ಮಾಡಿಕೊಂಡರು. ದೇಶೀಯ ಬೇಟೆಗಾರರು ಪ್ರವೀಣರಾಗಿದ್ದು, ಅಸಂಖ್ಯಾತ ಪ್ರಾಣಿಗಳನ್ನು ಕೊಲ್ಲುತ್ತಿದ್ದರು. ಸಫಾರಿ ಎನ್ನುವ ಬೇಟೆ ಪ್ರಸಿದ್ಧವಾದುದು. ಇದರಲ್ಲಿ ತಂಡ ರಚಿಸಿಕೊಂಡು ಒಂದುವಾರ, ದಿವಸಗಳ ಲೆಕ್ಕದಲ್ಲಿ ಬೇಟೆಗೆ ಹೋಗಿ ಕರಡಿ ಸೇರಿದಂತೆ ಹಲವು ಪ್ರಾಣಿಗಳನ್ನು ಕೊಲ್ಲುತ್ತಿದ್ದರು. ಎರಡನೇ ಮಹಾಯುದ್ಧದಲ್ಲಿ ಈ ಬೇಟೆ ಹೆಚ್ಚಾಗಿತ್ತು.

ಏಶಿಯಾ ದೇಶಗಳಲ್ಲಿ ಬೇಟೆ ಕ್ರೀಡೆಯಾಗಿ ವಿದೇಶಿಯರಿಂದ ಪ್ರಚಲಿತಕ್ಕೆ ಬಂತು. ಉತ್ತರ ಅಮೆರಿಕ, ಆಫ್ರಿಕಾ ವಸಾಹತುಗಳಂತೆ ಏಷಿಯಾವು ಸಹಾ ಹಲವು ಬಗೆಯಲ್ಲಿ ತೊಡಗಿಸಿಕೊಂಡಿತ್ತು. ಹೊಸದಾಗಿ ಗನ್‌ಪೌಡರ್, ಕೋವಿ, ಮದ್ದು ಗುಂಡುಗಳು ಬಂದಾಗ ಬೇಟೆ ತಂತ್ರ ಬದಲಾಯಿತು. ಅವರು ಹೆಚ್ಚಾಗಿ ಹುಲಿಗಳನ್ನು ಕೊಲ್ಲುತ್ತಿದ್ದರು. ಇಂದಿಗೂ ಭಾರತದ ಕರ್ನಾಟಕ ರಾಜ್ಯದಲ್ಲಿ ಕೊಡಗಿನ ಜನರು ಹುಲಿಬೇಟೆಯಲ್ಲಿ ಪ್ರವೀಣರಾಗಿದ್ದಾರೆ. ದಕ್ಷಿಣ ಅಮೇರಿಕಾದಲ್ಲಿ ಹೀಗೆಯೇ ಸ್ಥಳೀಯ ೩ ದೊಡ್ಡ ಬೇಟೆ ವಿಧಾನಗಳಿಗೆ ವಿದೇಶೀಯರು ಪ್ರೋತ್ಸಾಹಿಸುತ್ತಿದ್ದರು. ಆಸ್ಟ್ರೇಲಿಯಾದಲ್ಲಿ ದೊಡ್ಡ ಪ್ರಾಣಿಗಳ ಬೇಟೆ ಇರಲಿಲ್ಲ. ಕಾಂಗರೂ, ಕಾಡುನಾಯಿ, ಜಿಂಕೆ, ನರಿ, ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ನ್ಯೂಜಿಲ್ಯಾಂಡ್, ಜಪಾನ್, ಇತ್ಯಾದಿ ದೇಶಗಳಲ್ಲಿಯೂ ಬೇಟೆ ವೈವಿಧ್ಯ ಮಯವಾಗಿತ್ತು. ಮಾನವನಿಗೆ ತನ್ನ ಪೂರ್ವಜರು ರೂಢಿಸಿಕೊಂಡು ಬಂದ ಆಹಾರ ಸಂಗ್ರಹಣೆ, ಬೇಟೆ ವಿಧಾನದಲ್ಲಿ ಸಂದರ್ಭಕ್ಕೆ ತಕ್ಕಂತೆ ಪ್ರಯೋಗಿಸುವ ಕಲೆ ಗೊತ್ತಿತ್ತು. ಬೇಟೆಗಾರನ ಬೌದ್ಧಿಕ ವಿಕಾಸನವನ್ನು, ಪ್ರಾಣಿಗಳ ದೌರ್ಬಲ್ಯವನ್ನು ಬೇಟೆಯ ಆಯುಧ ಮೊದಲಾದ ಸಂಗತಿಗಳು ತಿಳಿದುಬರುತ್ತವೆ.[೨೦] ಬೇಟೆ ಕ್ರೀಡೆಯಾಗಿದ್ದು, ಇತ್ತೀಚಿನ ದಿನಗಳಲ್ಲಿ ಕ್ರೂರ ವೃತ್ತಿಯಾಗಿ ಪರಿಣಮಿಸಿದೆ. ಮಾನವ ಪ್ರಾಣಿಗಳಿಗಿಂತ ಉತ್ತಮನಾಗಿದ್ದರೂ, ಆಯುಧಗಳ ಮೂಲಕ ಅವುಗಳನ್ನು ಪಳಗಿಸಿ ಹಿಂಸಿಸುವುದು ಹೇಯವಾಗಿತ್ತು. ಬೇಟೆಗಾರರು ಆಯುಧಗಳಿಂದ ಆಹಾರ ಸಂಗ್ರಹಿಸುತ್ತಿದ್ದುದು ಬೌದ್ಧಿಕ ವಿಕಾಸದಿಂದ ಸ್ವಸಾಮರ್ಥ್ಯ ಜಾಣ್ಮೆಯಿಂದ ಪ್ರಾಣಿಗಳನ್ನು ಆಯುಧಗಳ ಮತ್ತು ನಾಯಿಗಳ ಮೂಲಕ ಕೊಲ್ಲುತ್ತಿದ್ದರು. ಆದಿ ಜನರು ತರಬೇತಿ ಪಡೆಯುತ್ತಿದ್ದುದು ಈ ಪ್ರಾಣಿಗಳಿಂದಲೇ ಇರಬೇಕು. ಇಂದಿಗೂ ನಾಯಿ ಬೇಟೆಗಾರನ ಸ್ನೇಹಿತ.

ಕಾಲ ಕಾಲಕ್ಕೆ ಬೇಟೆ ಆಹಾರ ಸಂಗ್ರಹಣೆಯ ವಿಧಾನದಲ್ಲಿ ಮಾರ್ಪಾಟುಗೊಂಡಿದೆ. ಮಾನವನಲ್ಲಿ ಪ್ರಾಣಿಗಳ ಬಗೆಗೆ ದಯೆಹುಟ್ಟಿ, ಸಾಕುವಲ್ಲಿ ನಿರತನಾದ. ಉಗ್ರಪ್ರಾಣಿಗಳನ್ನು ವಿರೋಧಿಸುತ್ತಾ, ಸಂಹಾರ ಮಾಡುತ್ತಾ ಅಹಿಂಸೆಯ

ಹೊಸ್ತಿಲು ದಾಟಲು ಹೋರಾಡಿದ. ಆದರೂ ಗುರಿ ಮುಟ್ಟುವಲ್ಲಿ ತಡವರಿಸಿದ. ಬೇಟೆ ಶಾಶ್ವತವಾದ ಸಂಪತ್ತಲ್ಲ, ಇದು ಸುಗ್ಗಿಯ ಕಾಲ ಇಲ್ಲದ ಸಂಪನ್ಮೂಲವಾಗಿದೆ. ಆದರೆ ಪಶುಪಾಲನೆಯಿಂದ ಜೀವಿಸುವ ಪ್ರಾಣಿಗಳ ಹಕ್ಕು ಸಾಮಾಜಿಕ ಸಂಬಂಧಗಳ ವೃದ್ಧಿ, ವಿತರಣೆ, ಉತ್ಪಾದನೆಗಳನ್ನು ಮಾಡಬಹುದು. ಬೇಟೆ ಸತ್ತ ಪ್ರಾಣಿಗಳ ಮೇಲೆ ಹಕ್ಕನ್ನು ಪ್ರತಿಪಾದಿಸುತ್ತದೆ ಎಂಬುದನ್ನು ಒಪ್ಪಬಹುದು.[೨೧] ಬೇಟೆ ಒಂದು ಕಾಲಕ್ಕೆ ಲಾಭದಾಯಕ ವೃತ್ತಿಯಾಗಿತ್ತು. ತರುವಾಯ ಪಶುಪಾಲನೆ ಸಂಘಟನೆಗಳು ಬೆಳೆದಾಗ ಆ ಮೂಲಕ ಕೃಷಿ ಚಟುವಟಿಕೆಗಳು ಸಾಗಿದವು. ಆಗ ಬೇಟೆ ಒಂದು ಕ್ರೀಡೆಯಾಗಿ ಅನೂಚಾನವಾಗಿ ಬೆಳೆದು ಬಂತು.

ಬೇರೆ ಬೇರೆ ರಾಷ್ಟ್ರಗಳಲ್ಲಿ ಬೇಟೆಯನ್ನು ಹೋಲಿಸಿದಾಗ ವಿಭಿನ್ನವಾಗಿ ಎಲ್ಲಿಯೂ ಕಂಡುಬರುವುದಿಲ್ಲ. ಬೇಟೆ : ಆಹಾರ, ಕ್ರೀಡೆ, ರಕ್ಷಣೆ, ಹೀಗೆ ನಾನಾ ಕಾರಣಗಳಿಗಾಗಿದ್ದು, ಮಹತ್ವ ಸ್ಥಾನವಿದೆ. ಅಸ್ಸೀರಿಯಾದ ರಾಜರು ಸಿಂಹಗಳ ಬೇಟೆಯಾಡಲು ಕಾರಣವೇನು? ಇದನ್ನು ನೋಡಿಯೋ ಏನೋ ಆಫ್ರಿಕಾದ ಮಾಸಯಿ ಹತ್ತಿರ ಸಿಂಹಗಳ ಬೇಟೆ ಜರುಗುತ್ತದೆ. ಮಧ್ಯಯುಗದಲ್ಲಿ ಬೇಟೆ ವೈವಿಧ್ಯಮಯ ಪಾತ್ರ ವಹಿಸಿತು. ಅನೇಕ ಅರಸರು ಮೃಗಾಯ ವ್ಯಸನಿಗಳಾಗಿದ್ದಾರೆ. ದಕ್ಷಿಣ ಇಂಗ್ಲೆಂಡಿನ ನ್ಯೂ ಫಾರೆಸ್ಟನ್ನು ವಿಲಿಯಂ (೧೦೬೬-೧೦೮೭) ಶ್ರೀಮಂತರಿಗಾಗಿ ಬೇಟೆಯ ಮೈದಾನವನ್ನಾಗಿ ನಿರ್ಮಿಸಿದ. ಅವನ ಕಾಲದಲ್ಲಿ ಪಕ್ಷಿ ಬೇಟೆ ಜನಪ್ರಿಯವಾಗಿತ್ತು.[೨೨] ಉತ್ತರ ಅಮೇರಿಕ ಇತರ ರಾಷ್ಟ್ರಗಳ ಮೇಲೆ ವಸಾಹತುಶಾಹಿಗಳು ಪದಾರ್ಪಣೆ ಮಾಡಿದ ತರುವಾಯ ಬೇಟೆ ಕ್ರೀಡೆಗೆ ಆಸ್ತಿಭಾರ ಹಾಕಿದರು. ಕರಡಿ, ಹಂದಿ, ಜಿಂಕೆ,ತೋಳ, ನರಿ, ಟರ್ಕಿಕೋಳಿ, ಮೊಲ ಇತರ ಪ್ರಾಣಿಗಳನ್ನು ಸೇವಿಸುತ್ತಿದ್ದರು. ಪಕ್ಷಿಬೇಟೆ ಜನಪ್ರಿಯವಾಗಿತ್ತು. ಬೇಟೆಗಾರರು ಆಕರ್ಷಣೀಯವಾದ ವ್ಯಾಪಾರಿ ಮಾರ್ಗಗಳನ್ನು ಮಾಡಿದರು.

ಮೊದಲು ಬೇಟೆಗಾರರು ಪ್ರಾಣಿಗಳನ್ನು ಕೊಲ್ಲುತ್ತಿದ್ದುದು ಆಹಾರಕ್ಕಾಗಿ. ಕ್ರಮೇಣ ಬೆಲೆಬಾಳುವ ಪದಾರ್ಥಗಳಿಗಾಗಿದ್ದು, ಕೋವಿಗಳಿಂದ ಬೇಟೆ ಅಭಿವೃದ್ಧಿಯಾಯಿತು. ಯುರೋಪ್ ಇತರ ರಾಷ್ಟ್ರಗಳಲ್ಲಿ ಎಮ್ಮೆಗಳನ್ನು ಬೇಟೆಯಾಡಿ ಕೊಂದು, ತಿನ್ನುತ್ತಿದ್ದದು ೧೯ನೇ ಶತಮಾನದವರಿಗಿತ್ತು. ಉತ್ತರ ಅಮೆರಿಕದ ಎಮ್ಮೆಗಳು ಬೇಟೆಗೆ ಮುಖ್ಯವಾಗಿವೆ. ಆಫ್ರಿಕಾದಲ್ಲಿ ವಿಶಿಷ್ಟ ಬೇಟೆ ಕಣ್ಮರೆಯಾಗಿ, ವಾಣಿಜ್ಯ ಬೇಟೆಯಿಂದ ಅತ್ಯಧಿಕ ಲಾಭಗಳಿಸುವ ಪ್ರವೃತ್ತಿ ಬೆಳೆಯಿತು.

ಇಪ್ಪತ್ತನೆಯ ಶತಮಾನದಲ್ಲಿ ಬೇಟೆಯನ್ನು ಚಾಣಾಕ್ಷತನದಿಂದಲೇ ಅಳವಡಿಸಿಕೊಳ್ಳಲಾಗಿದೆ. ಉತ್ತರ ಅಮೇರಿಕಾದ ಪ್ರಯಾಣಿಕರು ಆಹಾರಕ್ಕಾಗಿ ಪಾರಿವಾಳ ಮತ್ತು ಆಫ್ರಿಕಾದ ಜೀಬ್ರಾಕ್ಕೆ ಸಂಬಂಧಿಸಿದ ಕ್ವೆಗ್ಗಾ ಎಂಬ ಪಕ್ಷಿ-ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಇಂದು ಬೇಟೆಯಿಂದ ಅಪಾಯವಿಲ್ಲದೆ ಇಲ್ಲ. ಪ್ರಾಕೃತಿಕ ಸಂಪತ್ತಿನ ದರೋಡೆಯಿಂದ ವನ್ಯಜೀವಿಗಳ ನಾಶ, ಪ್ರಾಣಿ ಸಂಕುಲಕ್ಕೆ ಗಂಡಾಂತರವಾಗಿರುತ್ತದೆ. ಬೇಟೆ ನಿಷೇಧಕ್ಕೆ ಒಳಪಡಲು ಹಲವಾರು ಕಾರಣಗಳಿವೆ. ಆಸ್ಟ್ರೇಲಿಯಾ, ಇಂಗ್ಲೆಂಡ್, ಅಮೇರಿಕ ಉತ್ತಮ ಉದಾಹರಣೆಗಳಾಗಿದ್ದು, ಬೇಟೆ ನಿಷೇಧಗೊಂಡರೂ ಅಲ್ಲಿ ರೂಢಿಯಲ್ಲಿದೆ. ಕಾನೂನು ಪ್ರಕಾರ ಬೇಟೆಗೆ ಕಡಿವಾಣ ಹಾಕಲಾಗಿದೆ.[೨೩] ಬೇಟೆ ಪ್ರಾಣಿ ಸಂಕುಲಕ್ಕೆ ಕಂಠಕವಾದ್ದರಿಂದ ಅದು ನೀಚ ಕ್ರೀಡೆಯೆನಿಸಿಕೊಂಡಿತು.

ಆಹಾರ ಸಂಗ್ರಹಣೆಗಾಗಿ ಹುಟ್ಟಿಕೊಂಡ ಬೇಟೆ, ಮಾನವ ಜೀವನದ ಪಕ್ವತೆಗೆ ಕೊಂಡೊಯ್ದಿದ್ದು ಸ್ಮರಣೀಯ. ಈ ಪರಿಕಲ್ಪನೆ ಮುಂದೆ ನಾನಾ ರೀತಿಯ ಸಾಧಕ- ಬಾಧಕಗಳಿಗೆ ಪ್ರತಿಕ್ರಿಯೆಯಾಗಿದ್ದು ವಾಸ್ತವ ಸಂಗತಿ. ತರುವಾಯ

ಬೇಟೆಯಿಂದ ಮಾನವ ನಾನಾ ಮಜಲುಗಳನ್ನು ಕಂಡುಕೊಂಡ. ಸ್ಥಿತ್ಯಂತರಗೊಂಡ ಮೇಲೆ ಬೇಟೆ ಅಳಿದು ಹೋಗದೆ ರೂಢಿಯಲ್ಲಿದ್ದು, ಜನಾಕರ್ಷಣೆ ಪಡೆಯಿತು. ಭೌತಿಕವಾಗಿ ಬೇಟೆಯಿಂದ ಸಂಪತ್ತನ್ನು ಹೆಚ್ಚಿಸಿಕೊಂಡ ಮಾನವ, ನವೀನ ಆವಿಷ್ಕಾರಗಳಿಗೆ ಮುಂದಾದ. ಹೀಗೆ ಬೌದ್ಧಿಕ ವಿಕಾಸವಾಗಿ ಬೇಟೆಯಿಂದ ಪರಿವರ್ತನೆ ಬಂತು.

ಮನುಷ್ಯನ ಮೂಲಭೂತ ಪ್ರವೃತ್ತಿಗಳಲ್ಲಿ ಹಿಂಸೆಯೂ ಒಂದು. ಹಿಂಸೆಗೆ ನಾಂದಿ ಹಾಡಿದವನು ಬೇಟೆಗಾರ. ಆಹಾರಕ್ಕೆ ಅಲೆದಾಡುವಾಗ ಹಸಿದು-ದೀನನಾಗಿದ್ದರೆ, ಪ್ರಾಣಿಗಳ ಬೇಟೆಯಲ್ಲಿ ಹಿಂಸೆಯ ಬ್ರಹ್ಮನಂತೆ ಗೋಚರಿಸುತ್ತಾನೆ. ಬೇಟೆಯಿಂದ ಪ್ರಾಣಬಲಿ, ನರಬಲಿಯನ್ನು ದೇವತೆಗೆ ಕೊಡುವುದು ಬೆಳೆದು ಬಂತು. ಮಾಂಸವನ್ನು ಸೇವಿಸದವರು ಸಹ ಬೇಟೆಯಾಡುತ್ತಾರೆ. ಬುಡಕಟ್ಟು ಜನರು ಮಾತ್ರ ಬೇಟೆಯಿಂದ ವಂಚಿತರಾಗಿಲ್ಲ. ಇಂದು ಹೊಲಗಳ ರಕ್ಷಣೆಗಾಗಿ ಮತ್ತು ಆಹಾರಕ್ಕಾಗಿ ಮಂಗ, ಹಕ್ಕಿ, ನವಿಲು, ಕಾಡುಕೋಳಿ, ಮೊಲ, ಹಂದಿ ಮುಂತಾದ ಪ್ರಾಣಿಗಳ ಹಾವಳಿ ತಪ್ಪಿಸಿದ್ದು ಬೇಟೆ. ಬೇಡನ ಜತೆಗೆ ಬೇಡತಿಯು ಬೇಟೆಯಾಡುತ್ತಾಳೆ. ಏಡಿಬೇಟೆ, ಮೀನಿನಬೇಟೆ, ಪಕ್ಷಿಬೇಟೆ, ಪ್ರಾಣಿ ಬೇಟೆ, ಆಧುನಿಕ ಆಯುಧಗಳಿಂದ ಬೇಟೆ ಅಭಿವೃದ್ಧಿಗೊಂಡಿತೇನೋ ನಿಜ. ಆದರೆ ಬೇಟೆ ವಿಕಸನ ಲಕ್ಷಣಗಳಿಂದ ಪಶುಪಾಲನೆ, ಕೃಷಿ ಬೆಳವಣಿಗೆಗೆ ಅವಕಾಶವಾಯಿತು.

ಎರಡು ದಶಕಗಳಿಂದೆ ಅಂಟಾರ್ಟಿಕ್ ಅಥವಾ ದಕ್ಷಿಣ ಧ್ರುವದಲ್ಲಿ ಮಾನವ ಪಯಣಿಸಿ ಹಿಂದೆ ಇಲ್ಲಿ ಬೇಟೆಯಾಡಿದ ಕುರುಹುಗಳಿವೆ ಎಂದಿದ್ದಾನೆ. ಇಲ್ಲಿ ವರ್ಷಕ್ಕೆ ಕೇವಲ ಎರಡೇ ದಿನ. ಆರು ತಿಂಗಳು ಕತ್ತಲು ಮತ್ತು ಆರು ತಿಂಗಳು ಬೆಳಕು. ೬ ತಿಂಗಳ ಕತ್ತಲಿನಲ್ಲಿ ಜೀವನ ಕಷ್ಟವಾದ್ದರಿಂದ, ಬೆಳಕಿನಲ್ಲಿಯೇ ಬೇಟೆಯಾಡಿ ಆಹಾರವನ್ನು ಹಿಮಪಾತಗಳಲ್ಲಿ ಸಂಗ್ರಹಿಸಿಕೊಂಡು, ಮುಂದಿನ ಸುಗ್ಗಿಯವರೆಗೆ ಕಾಯುತ್ತಿದ್ದಿರಬೇಕು. ಇತ್ತೀಚಿನ ಶೋಧನೆಗಳ ಪ್ರಕಾರ ಅಲ್ಲಿ ಕೇವಲ ಸಸ್ಯ ಮತ್ತು ಚಿಕ್ಕ ಪ್ರಾಣಿಗಳಿಗೆ (ಪೆಂಗ್ವಿನ್) ಯೋಗ್ಯವಾದ ಸ್ಥಳವಾಗಿದ್ದು, ಮಾನವನಿಗೆ ಅಯೋಗ್ಯವಾದ ಪ್ರದೇಶವೆಂದು ತಿಳಿಸಿದ್ದಾರೆ.[೨೪]

ಬೇಟೆಯನ್ನು ಜೀವನಾವಶ್ಯಕ ವೃತ್ತಿ ಮಾಡಿಕೊಂಡು, ಆದಿಯಿಂದ ಇಂದಿನವರೆಗೂ ಬೇಟೆಗಾರರ ಸಮುದಾಯಗಳು ವಿಕಾಸವಾಗಿವೆ. ಇಂದು ಅವು ಆರ್ಥಿಕಾಭಿವೃದ್ಧಿಯಲ್ಲಿ ಮುನ್ನಡೆ ಸಾಧಿಸಲು ಪಶುಪಾಲನೆ, ಕೃಷಿಯನ್ನು ನಂಬಿರುವುದು ಸ್ಪಷ್ಟ. ಕ್ರಮೇಣ ವಿವಿಧ ರಂಗಗಳಲ್ಲಿ ಪ್ರಗತಿದಾಯಕ ಜೀವನವನ್ನು ಮಾಡುತ್ತಿದ್ದಾರೆ. ಜಗತ್ತಿನಲ್ಲಿ ಜೀವಿಗಳ ಉಗಮಗೊಂಡ ತರುವಾಯ ಬದುಕಲು ಆಹಾರಕ್ಕಾಗಿ ಶ್ರಮಿಸಿದವು. ಈ ಆಯ್ಕೆ ವಿಧಾನದಲ್ಲಿ ಬೇಟೆಯನ್ನು ಮಾನವ ರೂಢಿಸಿಕೊಂಡ. ಹೀಗೆ ಪ್ರಾಣಿ - ಪ್ರಾಣಿಗಳಲ್ಲಿಯೂ ಬೇಟೆ ಇದೆ. ಮಾನವ ಪ್ರಾಣಿಯನ್ನು ಮತ್ತು ಮನುಷ್ಯನನ್ನು ಬೇಟೆಯಾಡಬಲ್ಲ. ಇಂದು ಬೇಟೆಯ ಪುರಾತನ ತಂತ್ರ, ಕಲ್ಪನೆಗಳು ಬದಲಾಗಿ ಮರೆಯಾಗಿವೆ. ಕಾಡು ಮೃಗಗಳು ನಶಿಸುತ್ತಿವೆ. ಅರಣ್ಯನಾಶ, ಕಾಳ್ಗಿಚ್ಚು, ಬೇಟೆಯ ಹಿನ್ನೆಡೆಗೆ ಕಾರಣವಾಯಿತು. ಬ್ರಿಟಿಷರು (ವಸಾಹತುಶಾಹಿ) ಸ್ವಪ್ರತಿಷ್ಠೆಗಾಗಿ ದಂತ, ಚರ್ಮಗಳನ್ನು ತಮ್ಮ ದೇಶಗಳಿಗೆ ವಸಾಹತು ರಾಷ್ಟ್ರದಿಂದ ಸಾಗಿಸಿದರು. ಇವರ ಆಳ್ವಿಕೆಯ ತರುವಾಯ ಬೇಟೆ ಮನರಂಜನೆಯ ಕ್ರೀಡೆಯಾಗಿರುವುದು ಸ್ಪಷ್ಟ. ಸ್ವಾತಂತ್ರ್ಯ ಬಂದ ನಂತರ ಭಾರತ ಸರ್ಕಾರ (೧೯೭೨) ಬೇಟೆಯನ್ನು ನಿಷೇಧಿಸಿದರೂ, ಇಂದಿನ ಬೇಟೆ ಆಚರಣೆಗಳಲ್ಲಿ ಮಾತ್ರ ಉಳಿದಿರುವುದು ವಿಷಾದನೀಯ.

೨.೧. ಭಾರತದಲ್ಲಿ ಬೇಟೆಗಾರಿಕೆ ಮತ್ತು ಬೇಟೆಸಂಬಂಧಿ ಬುಡಕಟ್ಟುಗಳು

ಭಾರತದಲ್ಲಿ ಬೇಟೆ ಅನಾದಿಕಾಲದಿಂದಲೂ ಬೆಳೆದುಬಂದಿದೆ. ಆಯಾ ಕಾಲಘಟ್ಟಗಳಲ್ಲಿ ಮಾನವ ಹಣ್ಣು, ಕಾಯಿ, ಗೆಡ್ಡೆ, ಗೆಣಸುಗಳನ್ನು ತಿನ್ನುವಾಗ ನಾಲಿಗೆ, ಹಲ್ಲು, ತುಟಿಗಳಿಗೆ ಮೆದು ಮತ್ತು ಹಿತವಾದ ಆಹಾರ ಪಡೆಯಲು ಇಚ್ಛಿಸಿದ. ಹೀಗೆ ನಾಲಗೆಯ ರುಚಿಯಂತೆ ಪ್ರಾಣಿ, ಪಕ್ಷಿ, ಮೀನುಗಳನ್ನು ತಿನ್ನತೊಡಗಿದ. ಕ್ರಮೇಣ ಆಯುಧಗಳಿಂದ ಅನೂಚಾನವಾಗಿ ಪ್ರಾಣಿಗಳ ಬೇಟೆಯಾಡಿ ಜೀವಿಸತೊಡಗಿದ. ಮಾನವನಿಗೆ ಬೇಟೆ ಆಹಾರ ಮತ್ತು ಸ್ವಯಂ ರಕ್ಷಣೆಗಳಿಗೆ ಮೀಸಲಾಗಿತ್ತು. ಇಲ್ಲಿ ಶಿಲಾಯುಗದ ನಿವೇಶನಗಳು ಕಂಡುಬಂದಿದ್ದು, ಪ್ರಾಣಿಗಳನ್ನು ಕೊಂದು ತಿನ್ನುವ ರೇಖಾ ಚಿತ್ರಗಳನ್ನು ಬಂಡೆಗಳ ಮೇಲೆ ಕೆತ್ತಲಾಗಿದೆ.[illegible] ದಕ್ಷಿಣ ಭಾರತದಲ್ಲಿ ಇಂದಿಗೂ ಈ ಕುರುಹುಗಳಿರುವ ಅನೇಕ ವಸತಿ ನಿವೇಶನಗಳು ಕಂಡುಬಂದಿದೆ. ಉಳಿ, ಬಾಳಚಿ, ಕೊಡಲಿ, ಹಾರೆ, ಇತರೆ ಆಯುಧಗಳನ್ನು ಆದಿ ಶಿಲಾಯುಗದ ಮಾನವ ಬಳಸುತ್ತಿದ್ದನೆಂಬುದು ಮೆಚ್ಚತಕ್ಕ ಸಂಗತಿ.

ಭಾರತದ ಅರಸರು ಶಿಕಾರಿಯನ್ನಾಡಿ ಪ್ರಸಿದ್ಧ ಪ್ರಾಣಿಗಳನ್ನು ಅರಣ್ಯದಿಂದ ಬಲಿ ತೆಗೆದುಕೊಳ್ಳುತ್ತಿದ್ದರು. ಆಗ ಬಿಲ್ಲು ಮತ್ತು ಬಾಣದಿಂದಲೇ ಬೇಟೆಗಾರಿಕೆ ನಡೆಯುತ್ತಿತ್ತು. ಪ್ರಾಚೀನಕಾಲದಲ್ಲಿ ಕಾಡು ಸಮೃದ್ಧವಾಗಿತ್ತಲ್ಲದೆ, ಅದರಂತೆ ಪ್ರಾಣಿಗಳು ಸಹ ವಿಪುಲವಾಗಿದ್ದಿರಬೇಕು. ಮೊದಲು ಗುದ್ದಲಿ, ಕೊಡಲಿ, ಈಟಿ, ಖಡ್ಗಗಳ ಬಳಕೆಯಿತ್ತು. ಬೆಂಕಿ ಕಂಡುಹಿಡಿದಾಗ ಪ್ರಾಣಿಗಳನ್ನು ಸುಟ್ಟು ತಿನ್ನುವುದು, ಶಿಲಾಯುಧಗಳ ಬಳಕೆ ಬದಲಾಯಿತು. ದಕ್ಷಿಣ ಭಾರತದಲ್ಲಿ ಕಬ್ಬಿಣದ ಶೋಧನೆಯಾದ ನಂತರ ಬಿಲ್ಲು, ಬಾಣಗಳಿಗಿಂತಲೂ ಕ್ರಮೇಣ ಬಂದೂಕುಗಳ ಬಳಕೆ ದ್ವಿಗುಣಗೊಂಡಿತು. ಆಯುಧಗಳ ಆವಿಷ್ಕಾರದಿಂದ ಬೇಟೆ ಕ್ರಮೇಣ ಅನಾಯಸದ ವೃತ್ತಿಯಾಯಿತು.

ಹಸಿವಾದಾಗ ಬೇಟೆಯಾಡುವುದು ಸಹಜ. ಹೀಗೆ ಮಾನವನ ಬೇಟೆಯಲ್ಲಿ ತಂತ್ರಗಳು ಕಾಲ ಕಾಲಕ್ಕೆ ಬದಲಾಗುತ್ತ ಬಂದಾಗ, ಅಧುನಿಕವಾದ ಕೋವಿ, ಬೇಟೆ ಸಮರಕ್ಕೆ ನಾಂದಿಹಾಡಿ ತೃಪ್ತಿಕರ ಆಹಾರಕ್ಕೆ ಕಾರಣವಾಯಿತು. ಪ್ರಪಂಚದ ಸೃಷ್ಟಿಗೆ (ಜೀವಸಂಕುಲ) ಬೇಟೆಯೇ ಕಾರಣವೆಂದು ನಂಬಲಾಗಿದೆ. ಚಿಕ್ಕ ಮೀನು ದೊಡ್ಡಮೀನನ್ನು ನುಂಗುವಂತೆ, ಪ್ರಾಣಿ-ಪ್ರಾಣಿಗಳನ್ನು ಬೇಟೆಯಾಡುವುದು, ಆ ಪ್ರಾಣಿಗಳನ್ನು ಮನುಷ್ಯ ಬೇಟೆಯಾಡುವುದು ವಾಸ್ತವ. ಬೇಟೆ ಪ್ರಾಣಿಗಳನ್ನು ಸಾಕುವುದು ಇತ್ತೀಚಿನ ಹವ್ಯಾಸವಾಗಿದೆ.

ಸಿಂಧೂಬಯಲಿನ ನಾಗರಿಕತೆಯಲ್ಲಿ ಕೃಷಿ ಪ್ರಧಾನವಿದ್ದರೂ ಬೇಟೆ, ಪಶುಪಾಲನೆ ತಕ್ಕಮಟ್ಟಿಗಿತ್ತು. ವೇದ ಕಾಲದ ಯಜ್ಞ ವಿಧಾನಕ್ಕೆ ಪಶುಬಲಿ ಕೊಡುತ್ತಿದ್ದರು. ರಾಮಾಯಣ, ಮಹಾಭಾರತಗಳಲ್ಲಿ ಬೇಟೆ ಚಿತ್ರಣ ಸಮಗ್ರವಾಗಿ ಬಂದಿದೆ. ಈ ಎಲ್ಲ ಹಿನ್ನೆಲೆಯಿಂದಲೇ ಹದಿನೆಂಟು ವರ್ಣನೆ, ಸಪ್ತವ್ಯಸನ, ನವರಸಗಳಿಗೆ ಅನಿವಾರ್ಯವೆಂಬಂತೆ ಬೇಟೆ ಸಾಹಿತ್ಯದಲ್ಲಿ ದಾಖಲಾಗಿದೆ. ಅರ್ಜುನ ಮತ್ತು ಕಿರಾತನಿಗೂ ಸತ್ತ ಹಂದಿಗಾಗಿ ಯುದ್ಧವಾಗುವುದು ಕಾವ್ಯದಲ್ಲಿ ಕಂಡುಬರುವ ಸಂಗತಿ. ಹೀಗಾಗಿ ಇಂಥ ಅನೇಕ ಸಂಗತಿಗಳಿಂದ ಮಹಾಭಾರತ ಮತ್ತು ರಾಮಾಯಣವು ಬುಡಕಟ್ಟು ಜನರು ಕಟ್ಟಿಕೊಡುವ ಮೌಖಿಕ ಕಾವ್ಯಗಳೆನ್ನಬಹುದು. ಆ ಕಥಾವಸ್ತುವನ್ನು ಶಿಷ್ಟ ಕಾವ್ಯದಲ್ಲಿ ಕವಿ ಬಳಸಿಕೊಂಡಿರುವ ಸಾಧ್ಯತೆಯಿದೆ.

ಮೌರ್ಯ, ಶಾತವಾಹನ, ಗಂಗ, ಕದಂಬ, ಕುಶಾನ, ವರ್ಧನರು, ಗುಪ್ತರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಮತ್ತು ವಿಜಯನಗರ ಸಾಮ್ರಾಜ್ಯಗಳಲ್ಲಿ ಬೇಟೆಯ ಗುರುತುಗಳನ್ನು ನೋಡಬಹುದು. ಕವಿಗಳು ರಾಜನ ಬೇಟೆಯನ್ನು ಕಾವ್ಯದಲ್ಲಿ ತಿಳಿಸಿದರೆ, ಜನಸಾಮಾನ್ಯರ ಜೊತೆಗೆ ರಾಜನ ಬೇಟೆಯನ್ನು ಶಾಸನ, ವೀರಗಲ್ಲು,

ವಾಸ್ತುಶಿಲ್ಪದಲ್ಲಿ ವ್ಯಕ್ತಪಡಿಸಲಾಗಿದೆ. ನಿರಂಕುಶಪ್ರಭುತ್ವದಲ್ಲಿ ಪ್ರಾಣಿಬೇಟೆ ಅನಿವಾರ್ಯವಾಗಿ ರಾಜನ ಪ್ರತಿಷ್ಠೆಗೆ ಮಾನದಂಡವಾಗಿತ್ತು. ಬ್ರಿಟಿಷರು ತಮ್ಮ ಕಾಲದಲ್ಲಿನ ಬೇಟೆ ಬಗೆಗೆ ವಿವರಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಸ್ವಾತಂತ್ರ್ಯ ನಂತರ ಬೇಟೆಯ ಬೆಳವಣಿಗೆಯೇ ಕ್ಷೀಣಿಸಿತು.

ಭಾರತದಲ್ಲಿದ್ದ ಬೇಟೆಯ ಸ್ವರೂಪ ವೈವಿಧ್ಯಮಯವಾದುದು. ಆಹಾರಕ್ಕಾಗಿ ಬೇಟೆ, ವಿನೋದಕ್ಕಾಗಿ ಬೇಟೆ ಇದ್ದರೂ, ರಾಜ-ಜನಸಾಮಾನ್ಯರ ನಡುವೆ ಕಾವ್ಯದಲ್ಲಿನ ಬೇಟೆ ಸೃಷ್ಟಿ ತೀರಾ ಭಿನ್ನವಾದದು. ಪ್ರಾಯೋಗಿಕ ಬೇಟೆ ಸ್ವರೂಪವನ್ನು ಇತಿಹಾಸದಲ್ಲಿ ಕಾಣಬಹುದು. ಆಳರಸರ ಬೇಟೆ ನಿಖರವಾಗಿ ದಾಖಲಾಗಿಲ್ಲವಾದರೂ, ಸದ್ಯಕ್ಕೆ ಯೋಗ್ಯ ರೀತಿಯಲ್ಲಿದೆ ಎನ್ನಬಹುದು. ಅರಸರಿಗೆ ಬೇಟೆಯೇ ಎಂದರೆ ಹುಚ್ಚು. ಬೇಟೆಗಾರನ ಸಾಹಸ,ಪ್ರಶಸ್ತಿ-ಬಿರುದು, ಸ್ಮಾರಕ-ವೀರಗಲ್ಲು, ಪ್ರಾಣಿಬಲಿ, ವಿವಾಹ, ಹಂದಿಗೆ ದೈವತ್ವಸ್ಥಾನ, ದೇವಾಲಯ, ಅರಮನೆ, ಕೋಟೆಗಳ ರಚನೆಗೆ ಬೇಟೆ ಕಾರಣ ಎನ್ನಲಾಗಿದೆ. ಬೇಟೆಗಾರರ ಹಾಡು, ಬೇಟೆದೇವರು, ಮಾಟ-ಮಂತ್ರಗಳು ಇತ್ಯಾದಿ ಪರಿಕರಗಳನ್ನು ಬಳಸುತ್ತಾರೆ. ಒಟ್ಟಾರೆಯಾಗಿ 'ಬೇಟೆ ರಾಜನಿಗೂ, ಪ್ರಜೆಗಳಿಗೂ ಪ್ರಿಯವಾಗಿದ್ದ ಇನ್ನೊಂದು ಮನರಂಜನೆಯಾಗಿ, ವನ್ಯಮೃಗ ಸಂಪತ್ತು ಸಮೃದ್ಧವಾಗಿತ್ತು.[೨೬]

ಭಾರತದಲ್ಲಿ ಶಿಲಾಯುಗದ ಬೇಟೆಗಾರನಿಗೆ ಕಿರಾತಕನೆಂದು, ಪುರಾಣ-ಕಾವ್ಯಗಳ ಸಂದರ್ಭದಲ್ಲಿ 'ಶಬರ'ನೆಂದು ಕರೆಯಲಾಗಿದೆ. ಭಾರತದಲ್ಲಿ ಸಣ್ಣ ಪುಟ್ಟ ಗಣರಾಜ್ಯಗಳಿದ್ದಾಗ 'ನಿಷಧ' ಎಂಬ ರಾಜ್ಯವಿತ್ತು. ಇದು ಬೇಡರದೇ ಆದ ರಾಜ್ಯವಾಗಿತ್ತು. ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆಯಾಗಿ 'ಪುಳಿಂದ' ಎನ್ನುವ ಬೇಡರ ಸಮೂಹ ಧೈರ್ಯ ಮತ್ತು ಸಾಹಸವನ್ನು ತೋರಿರುವುದು ಸ್ಪಷ್ಟ. ಹೀಗೆ ವಿವಿಧ ಕಾಲಘಟ್ಟಗಳಲ್ಲಿನ ಬೇಟೆಗಾರರನ್ನು ನಾನಾ ಹೆಸರುಗಳಿಂದ ಕರೆದಿದ್ದಾರೆ. ಆಗಿನ ಕಾಲದಲ್ಲಿ ಜನರು ಆಹಾರಕ್ಕಾಗಿ ಅಲೆದಾಡುತ್ತಾ ವಲಸೆ ಹೋಗುತ್ತಿದ್ದರು. ಗುಹೆ, ಮರದ ಪೊಟರೆಗಳಲ್ಲಿ ವಸತಿಮಾಡಿ, ಹಣ್ಣು ಮತ್ತು ಕಾಯಿಗಳಿಗಾಗಿ ಹಗಲಿರುಳು ಶ್ರಮಿಸಿದರು. ಪ್ರಾಚೀನ ಕಾಲದ ಶಿಕಾರಿ ಸಾರ್ವತ್ರಿಕವಾಗಿದ್ದು, ಸಂಗ್ರಹಣೆ, ವಿತರಣೆ, ಅನುಭೋಗ ರೂಪದಲ್ಲಿದ್ದವು.

ರಾಮಾಯಣ ಮತ್ತು ಮಹಾಭಾರತಗಳ ಕಾಲದಲ್ಲೇ ಮಾಂಸದ ಬಳಕೆಗಾಗಿ ಬೇಟೆ ಬಳಕೆಯಲ್ಲಿತ್ತು.[೨೭] ರಾಮಾಯಣದಲ್ಲಿ ವಾಲ್ಮೀಕಿ ಲಕ್ಷ್ಮಣನಿಗೆ ಮೃಗಗಳನ್ನು ಕೊಂದು ಮಾಂಸ ತರಲು ಹೇಳುವುದು, ಮಹಾಭಾರತದಲ್ಲಿ ತಾಂಡವ ಮುನಿಯ ದುರಂತದ ಕಥೆಯಲ್ಲಿ ಬೇಟೆ ಚಿತ್ರಣವಿದೆ. ರಾವಣನು ಪಂಚವಟಿಗೆ ಬಂದಾಗ ಸೀತೆ ಪತಿದೇವರು ಬೇಟೆಗೆ ಹೋಗಿದ್ದಾರೆ ಎಂದು ಹೇಳುತ್ತಾಳೆ. ಮಹಾಭಾರತದ ಪಾಂಡು ಚಕ್ರವರ್ತಿ ಬೇಟೆಯಲ್ಲಿ ಋಷಿದಂಪತಿಗಳನ್ನು ಹೊಡೆದು ಸಾಯಿಸುತ್ತಾನೆ. ಹೀಗೆ ರಾಜಮಹಾರಾಜರು ಅನೇಕ ವರ್ಷಗಳಿಂದ ಬೇಟೆಯನ್ನಾಡುತ್ತ ಬಂದಿದ್ದಾರೆ. ಮೊಘಲರ ಬಾಬರ್, ಹುಮಾಯೂನ್, ಅಕ್ಬರ್, ಜಹಾಂಗೀರ್ ಬೇಟೆಯಲ್ಲಿ ನಿಪುಣರಾಗಿದ್ದರು.

ಭಾರತದಲ್ಲಿ ಸಹಸ್ರಾರು ಬುಡಕಟ್ಟು ಸಮುದಾಯಗಳು ಬೇಟೆಯನ್ನವಲಂಬಿಸಿವೆ. ಕೆಲವನ್ನು ಮಾತ್ರ ಇಲ್ಲಿ ಪರಿಚಯಿಸಲಾಗಿದೆ. ಬೇಟೆಯನ್ನು ನಂಬಿಕೊಂಡಿದ್ದ ಬೇಡ ಜನಾಂಗಕ್ಕೆ ಅನೇಕ ಪರ್ಯಾಯ ಹೆಸರುಗಳಿವೆ.[೨೮] ನಾಯ್ಕಡ, ನಾಯಿಕ್‌ಪಾಡ್, ನಾಯಕ್, ನಾಯಕ, ವಾಲ್ಮೀಕಿ, ಬೇಡ ಮುಂತಾದ ಜನಸಮುದಾಯಗಳಿದ್ದು, ಮ್ಯಾಸಬೇಡರ ಬಗೆಗೂ ವಿವರಗಳಿವೆ.[೨೯]

ಬೇಟೆಯನ್ನೇ ನಂಬಿಕೊಂಡು ಬದುಕುವ ಬುಡಕಟ್ಟುಗಳಲ್ಲಿ ಪ್ರಮುಖವಾದವುಗಳು ಇಂತಿವೆ : ೧೯೬೩ -೬೪ರ ಜನಗಣತಿ ಪ್ರಕಾರ ೫೩೨ ಪರಿಶಿಷ್ಟ ವರ್ಗಗಳಿದ್ದವು. ಭಾರತದಲ್ಲಿ ಬೇಟೆಗೆ ಸಾಂಸ್ಕೃತಿಕ ಮತ್ತು ರಾಜಕೀಯ ಚರಿತ್ರೆ

ಇದ್ದರೂ ಕಣ್ಮರೆಯಾದಂತಿದೆ. ಬೇಡರು ಮಾತ್ರ ಬೇಟೆಯನ್ನು ಆಚರಣೆಯಲ್ಲಿ ಅನೂಚಾನವಾಗಿ ಉಳಿಸಿಕೊಂಡು ಬಂದಿದ್ದಾರೆ.

ಅತೀ ಹೆಚ್ಚು ಬುಡಕಟ್ಟುಗಳಿರುವುದು ಮಧ್ಯ ಹಾಗೂ ಈಶಾನ್ಯ ಭಾರತದಲ್ಲಿ. ಅರುಣಾಚಲ ಪ್ರದೇಶದಲ್ಲಿ ೨೯ ಇದ್ದು, ನಾ ಮತ್ತು ಆದಿ ಎಂಬ ೧೫ ಪ್ರತ್ಯೇಕ ಬುಡಕಟ್ಟುಗಳು ವಾಸಿಸುತ್ತವೆ. ಲಕ್ಷ ದ್ವೀಪದಲ್ಲಿ ಸಹಾ ಏಳು ಸಮುದಾಯಗಳಿದ್ದರೆ, ಮಿಜೋರಾಮ್‌ನಲ್ಲಿ ಕುಕಿ ಬುಡಕಟ್ಟು ಆಧುನಿಕವಾಗಿ ಸೇರಿದೆ. ತ್ರಿಪುರ ಮತ್ತು ಮೇಘಾಲಯದ ನಾಗಾ ಸಮುದಾಯಗಳು ಹೆಚ್ಚಾಗಿವೆ. ಮಧ್ಯಭಾರತದಲ್ಲಿ ಭಿಲ್ಲರು, ಗೊಂಡರು ಮತ್ತು ಮೀನಾ ಬುಡಕಟ್ಟುಗಳು ಕಂಡುಬರುತ್ತವೆ. ಲಕ್ಷದ್ವೀಪದಲ್ಲಿ ಅನೊಮಾಲಿಸ್‌ರನ್ನು, ಪೂರ್ವಭಾರತದಲ್ಲಿ ಹೆಚ್ಚಾಗಿ ಸಾಂತಾಲರನ್ನು ಪಶ್ಚಿಮ ರಾಜ್ಯಗಳಿಗೆ ಹೋಲಿಸಿದರೆ, ಈಶಾನ್ಯ ಭಾರತದ ತ್ರಿಪುರ ಅಥವಾ ಮಹಾರಾಷ್ಟ್ರದಲ್ಲಿ ೪೬೧ ಬುಡಕಟ್ಟು ಸಮುದಾಯಗಳನ್ನು ಗುರುತಿಸಬಹುದು. ಮಹಾರಾಷ್ಟ್ರದ ಥಾಂಕಾ ಸಮುದಾಯ ಜನಸಂಖ್ಯೆ ೫೫,೮೮೧(೧೯೮೧) ತದ್ವಿ, ತೆತರಿಯ, ವಾಲ್ವಿ ಸೇರಿದಂತೆ ೧೯೮೧ರಲ್ಲಿ ಇವರ ಒಟ್ಟು ಸಂಖ್ಯೆ ೫೧,೬೨೮,೬೩೮ ಇತ್ತು. ಭಾರತದ ಪ್ರಮುಖ ಬುಡಕಟ್ಟುಗಳ ಪೈಕಿ : ಗೊಂಡಾ - ೭,೪೪,೯,೧೯೩, ಭಿಲ್-೭,೩೬೭,೯೭೩, ಸಾಂತಾಲ-೪,೨೬೦,೮೪೨, ಮಿನ-೨,೦೮೭,೦೭೫, ಒರಿಯನ-೧,೮೬೫,೯೯೫ ಇತರೆ ಸಮುದಾಯಗಳ ಸಂಖ್ಯೆ ಗಣನೀಯವಾಗಿದೆ.[೩೦]

ಅಂಡಮಾನ್, ಜಾವದಲ್ಲಿ ನೈಗ್ರೊ,ಪ್ರೊಟೊ ಆಸ್ಟ್ರಲಾಯಿಡ್ ಜನಾಂಗಗಳಲ್ಲಿ ಮುಂಡ-ಒರ್‍ಯಾನ್, ಗೊಂಡಾ ಬುಡಕಟ್ಟುಗಳಿವೆ. ಹಾಗೆಯೇ ಮಂಗೋಲಾಯಿಡ್ ಲಕ್ಷಣದ ಜನಾಂಗ ಈಶಾನ್ಯ ಭಾರತದಲ್ಲಿದ್ದರೆ, ಕಾಕಸಾಯಿಡ್-ತೋಡಾ, ರಬರಿ, ಗುಜ್ಜಾರಿ ಬುಡಕಟ್ಟುಗಳಿದ್ದು, ಅವರು ಮೊದಲಿಗೆ ಇಂಡೊಆರ್ಯನ್ ಭಾಷೆ ಮಾತನಾಡುತ್ತಿದ್ದರು. ಇವರು ಹೆಚ್ಚಾಗಿ ಮಾಂಸಾಹಾರಿಗಳು. ಇವರಲ್ಲಿ ೩ ಸಸ್ಯಹಾರಿ ಬುಡಕಟ್ಟುಗಳಾದ ತೊಡಾ, ರಾಬರಿ ಮತ್ತು ಭಾರ್ವಡ ಕಂಡುಬರುತ್ತವೆ. ಇವೆಲ್ಲವು ಪಶುಪಾಲನಾ ಸಮುದಾಯಗಳು. ಪಶುಪಾಲನ ದೇವರು ಕೃಷ್ಣ. ಸಾಂತಾಲ, ಒರೊನ್ಸ್, ಭಿಲ್ಸ್, ಗೊಂಡರಲ್ಲಿ ವೈಷ್ಣವಧರ್ಮವಲಂಬಿಗಳು ಹೆಚ್ಚು. ಈ ಬುಡಕಟ್ಟುಗಳನ್ನು ಪ್ರಾದೇಶಿಕವಾಗಿ ಗುರುತಿಸುವಾಗ ಶೇ.೭೦.೬ರಷ್ಟು ಕಂಡುಬರುತ್ತವೆ.

ಬುಡಕಟ್ಟನವರ ವರ್ಣ ವ್ಯವಸ್ಥೆಯಲ್ಲಿ ೧೧.೮%, ಮತ್ತು ೩೧.೬%ರಷ್ಟು ಇದ್ದರು. ಇದರಲ್ಲಿ ೮.೩% ಕ್ಷತ್ರಿಯ, ೭.೫% ಶೂದ್ರ, ೦.೯% ಬ್ರಾಹ್ಮಣ ಅಲ್ಲದೆ, ಬುಡಕಟ್ಟುಗಳನ್ನು ವಿಭಾಗಿಸುವಲ್ಲಿ ಶ್ರೇಣೀಕೃತ, ಪರಿಸರ ಶಾಸ್ತ್ರ, ವಂಶಪರಂಪರೆ, ಸಂತತಿ, ಅಂತಸ್ತು ಇವು ಮಾನದಂಡವಾಗಿದ್ದವು. ಮಧ್ಯಭಾರತದಲ್ಲಿ ಅತಿ ಹೆಚ್ಚಿನ ಬುಡಕಟ್ಟುಗಳು ನೆಲೆಸಿವೆ. ಈ ಬುಡಕಟ್ಟುಗಳಲ್ಲಿ ಮಹಿಳೆ ಹೆಚ್ಚಿನ ಸ್ಥಾನ ಹೊಂದಿರಲಿಲ್ಲ. ಕರ್ನಾಟಕ ರಾಜ್ಯದ ದಕ್ಷಿಣಕನ್ನಡ ಮತ್ತು ಕೇರಳದ ಬುಡಕಟ್ಟುಗಳಲ್ಲಿ ಮಗ-ಮಗಳಿಗೆ ಆಸ್ತಿಯಲ್ಲಿ ಸಮಾನವಾದ ಪಾಲಿದೆ. ಈ ಬುಡಕಟ್ಟು ಮಹಿಳೆ ಆರ್ಥಿಕ ಉತ್ಪನ್ನದಲ್ಲಿ ತೊಡಗುತ್ತಾಳಲ್ಲದೆ, ಎಲ್ಲ ರಂಗದಲ್ಲಿಯೂ ಮುಂದುವರೆದಿರುವುದು ವಿಶೇಷ.

ವೃತ್ತಿಯಲ್ಲಿ ಸಧೃಡರಾದಂತೆ ಜೀವನಶೈಲಿಯಲ್ಲಿ ಬದಲಾಗುತ್ತಾರೆ. ಕೆಲವು ಸಮುದಾಯಗಳು ಬೇಟೆಯ ಅಭ್ಯಾಸವನ್ನು ಆಹಾರಕ್ಕಾಗಿ ೨೪.೦೮% ರಷ್ಟು ಅರಣ್ಯದಲ್ಲಿ ಜೀವನ ನಡೆಸುತ್ತಿದ್ದರು. ಸಂಪ್ರದಾಯಕವಾಗಿ ಬಂದ, ಪ್ರಕೃತಿದತ್ತ ವೃತ್ತಿಯಲ್ಲಿ ಅವರು ತೊಡಗುತ್ತಾರೆ. ಪಕ್ಷಿ-ಪ್ರಾಣಿ ಇಳಿಮುಖ ೩೬.೮೪%ರಷ್ಟು ಇದ್ದರೆ, ಪಶುಪಾಲನೆ ೧೨.೫% ಮತ್ತು ಕೃಷಿ ೧೮.೧೪% ರಷ್ಟಿತ್ತು. ಹೀಗೆ ಇತರೆ ಬೇರೆ ಬೇರೆ ವರ್ಗಗಳಿದ್ದವು.

ಭಾರತದ ಬುಡಕಟ್ಟುಗಳು ಪ್ರಮುಖ ಧರ್ಮಗಳನ್ನೇ ಅವಲಂಬಿಸಿವೆ. ಹಿಂದೂಧರ್ಮ-೫೯.೪%, ಕ್ರೈಸ್ತ-೨೩.೪%, ಇಸ್ಲಾಂ-೩% ಬೌದ್ಧ-೬.೯% ಇತ್ಯಾದಿ. ನಾಗಾಲ್ಯಾಂಡ್, ಮಿಜೋರಾಮ್, ಮೇಘಾಲಯ, ಅರುಣಾಚಲಪ್ರದೇಶದಲ್ಲಿ ಕ್ರೈಸ್ತಧರ್ಮ ಹೆಚ್ಚಾಗಿದೆ. ದೊನ್ಯಿಪೊಲೆ ಎಂಬ ಧರ್ಮ ಅರುಣಾಚಲ ಪ್ರದೇಶದಲ್ಲಿದೆ. ಮಧ್ಯಪ್ರದೇಶದಲ್ಲಿ ಗೊಂಡಿಧರ್ಮ ೧,೨೭,೯೨೬ಇದ್ದು, ಒರಿಸ್ಸಾ ಬುಡಕಟ್ಟುಗಳ ಸಾಂಪ್ರದಾಯಿಕ ಧರ್ಮ ೦.೦೩ರಷ್ಟಿದೆ. ೧೯೮೧ರಲ್ಲಿ ಹಿಂದೂಧರ್ಮದ ಬುಡಕಟ್ಟು ೮೭.೦೫% ಗಿರಿಜನರು, ರೈತರಷ್ಟೆ ಅಲ್ಲದೆ ಉತ್ಪಾದಕರು, ಸಾಂಸ್ಕೃತಿಕ ಸಂಪ್ರದಾಯ ಪಡೆದ ಬುಡಕಟ್ಟುಗಳು ೬೮ ಕಂಡುಬಂದಿವೆ.

ಆದಿ ಗುಂಪಿನ ಅಬೊರ್ ಎನ್ನುವ ಉಪಗುಂಪಿನವರು ಅಸ್ಸಾಮಿನ ಬ್ರಹ್ಮಪುತ್ರ ಕಣಿವೆಯಲ್ಲಿದ್ದಾರೆ. ಹಿಮಾಲಯದ ಆದಿವಾಸಿ ಜನಾಂಗವಾದ ಆದಿಗಳು ೧೧೨,೦೫೨ ಜನಸಂಖ್ಯೆ ಇದ್ದು, ೩೫ ಉಪಬುಡಕಟ್ಟುಗಳಿವೆ. ಅವುಗಳಲ್ಲಿ ಆಯಾ ಬುಡಕಟ್ಟಿನ ಗ್ರಾಮ ನಾಮಗಳಿರುವುದು ವಿಶೇಷ. ಅಶಿಂಗ್, ಬೊಕರ್, ಬೊರಿ, ಗಾಲಾಂಗ್, ಕಾರ್ಕೊ, ಕೊಮ್ಕರ್, ಮಿಲಾಂಗ್, ಪದಮ್, ಪೈಲಿಬೊ, ಪಾಂಗಿ, ಪಾಸಿ, ರಾಮೊ, ಶಿಮಾಂಗ್ ಮತ್ತು ತಂಗಮ್ ಬುಡಕಟ್ಟುಗಳು ನದಿಮುಖಜ ಭೂಮಿಗಳಲ್ಲೇ ವಾಸಿಸುತ್ತಿದ್ದರಲ್ಲದೆ, ಕೃಷಿ ಮಾಡುತ್ತಾ, ಸಸ್ಯಹಾರಿಗಳಾಗಿದ್ದರು.

ಆದಿ ಬುಡಕಟ್ಟಿನ ಉಪಬುಡಕಟ್ಟಾದ ಆದಿಅಶಿಂಗ್ ನದಿಪ್ರದೇಶದಲ್ಲಿದ್ದು, ಬೇಟೆಗಾರಿಕೆಯನ್ನು ಉಪವೃತ್ತಿ ಮಾಡಿಕೊಂಡರೂ, ಮೀನುಗಾರಿಕೆಯನ್ನು ಕೈಬಿಟ್ಟಿಲ್ಲ. ಆದಿಬೊರಿ ಬುಡಕಟ್ಟು ಜನರು ಬೇಟೆಯಲ್ಲಿ ಪ್ರವೀಣರು. ಇವರು ಮೀನುಗಾರಿಕೆಯನ್ನು ಉಪವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಆದಿ ಬುಡಕಟ್ಟಿನ ಶಾಖೆಯಾದ ಆದಿಗಾಲಾಂಗ್ ಬುಡಕಟ್ಟು ಜನರು ಉಪಕಸುಬಾಗಿ ಬೇಟೆ ಮತ್ತು ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ. ಅರುಣಾಚಲಪ್ರದೇಶದ ಆದಿಮಿಲಾಂಗ್ ಬುಡಕಟ್ಟು ಜನರಲ್ಲಿ ಪ್ರಾಣಿಗಳ ಸಾಕಣೆ, ಬೇಟೆಗಾರಿಕೆ, ವ್ಯಾಪಾರ, ಮೀನುಗಾರಿಕೆ, ನೇಕಾರಿಕೆ, ಕುಶಲಕರ್ಮಿ, ಅಕ್ಕಸಾಲಿಗ, ಇತ್ಯಾದಿ ಸಂಪ್ರದಾಯಿಕ ವೃತ್ತಿಗಳಿವೆ. ಆದಿಮಿನ್ಯಾಂಗ್, ಮಿನಿಯಾಂಗ್ ಬುಡಕಟ್ಟು ಜನರು ಪ್ರಾಥಮಿಕವಾಗಿ ಕೃಷಿ ಮತ್ತು ಬೇಟೆಗಾರಿಕೆ ಅನುಸರಿಸುತ್ತಾರೆ. ಆದಿಪಾದಮ್ ಬುಡಕಟ್ಟಿನ ಜನರು ಅರಣ್ಯದಲ್ಲಿ ವಾಸಿಸುತ್ತಾ, ಗೃಹ, ಕೈಗಾರಿಕೆ, ಕೃಷಿ, ಕಾರ್ಮಿಕರಲ್ಲದೆ, ಬೇಟೆಗಾರರಾಗಿದ್ದರು. ಆದಿ ಪೈಲಿಬೊ ಬುಡಕಟ್ಟು ಜನರು ಪ್ರಥಮ ವೃತ್ತಿಯಾಗಿ ಕೃಷಿ, ಮೀನುಗಾರಿಕೆ ಮತ್ತು ಬೇಟೆಯನ್ನು ಅವಲಂಬಿಸಿದ್ದಾರೆ.

ಬುಡಕಟ್ಟು ಜನರು ಪ್ರಾಣಿಸಾಕಾಣಿಕೆ, ಬೇಟೆ, ಮೀನುಗಾರಿಕೆ ಮತ್ತು ವ್ಯಾಪಾರದಲ್ಲಿ ಮೊದಲಿಗರು. ಹಾಗೆಯೇ ಆದಿರಾಮೊರು ಸಹ ಅರುಣಾಚಲಪ್ರದೇಶದ ನದಿ, ಕಣಿವೆ, ಗಿರಿ ಪ್ರದೇಶಗಳಲ್ಲಿ ಪ್ರಾಥಮಿಕವಾಗಿ ಕೃಷಿ ಮತ್ತು ಬೇಟೆಗಾರಿಕೆ, ಮೀನುಗಾರಿಕೆ ವೃತ್ತಿಗಳನ್ನು ಹೊಂದಿದ್ದಾರೆ. ಶಿಮಾಂಗರು ಅರುಣಾಚಲಪ್ರದೇಶದಲ್ಲಿ ಕೃಷಿಕರಾಗಿದ್ದು, ಭೂ ಹಿಡುವಳಿದಾರರಾಗಿದ್ದರು. ಆದಿ ತಂಗಮರು ಸ್ವಂತ ಭೂಮಿ ಇದ್ದರೂ ಇತರ ವೃತ್ತಿಯಲ್ಲಿದ್ದಾರೆ. ಆದಿಯಾನ್ ಬುಡಕಟ್ಟು ಜನರು ಕೇರಳದಲ್ಲಿದ್ದು (ಕಣ್ಣನೂರು), ಕನ್ನಡ, ಮಲೆಯಾಳಿ ಮಾತನಾಡುತ್ತಾರೆ. ಇವರು ಭೂರಹಿತ ಜನಾಂಗವಾಗಿದ್ದು, ಸಾಂಪ್ರದಾಯಿಕ ಕೃಷಿ,ಕೂಲಿ ಪ್ರಾಣಿ ಸಾಕಾಣಿಕೆಯಲ್ಲಿ ತೊಡಗಿರುವರು. ಮಧ್ಯಪ್ರದೇಶದ ಅಗರಿಯಾ ಜನರು ಗೃಹಕೈಗಾರಿಕೆ ಮಾಡಿದರೆ, ಮಣಿಪುರದ ಐಮೋಲ್ ಬುಡಕಟ್ಟು ಜನರು ಕೃಷಿಕರಾಗಿದ್ದಾರೆ. ಅರುಣಾಚಲಪ್ರದೇಶದ ಅಕ ಎಂಬ ಜನರು ಆರ್ಥಿಕವಾಗಿ ಬೇಟೆಗಾರಿಕೆ, ಮೀನುಗಾರಿಕೆ ಮತ್ತು ಕೃಷಿಗಳನ್ನವಲಂಬಿಸಿದ್ದಾರೆ. ಮಣಿಪುರದ ಅನಾಲ್‌ರು ಮೀನುಹಿಡಿಯುವಲ್ಲಿ ಸಿದ್ಧಹಸ್ತರು. 'ಅಂಧಾ'ರು ಮಹಾರಾಷ್ಟ್ರದ

ನಂದೇಡ್, ಪರಭಾನಿ, ಯಟಮಾಲದಲ್ಲಿದ್ದಾರೆ. ಇವರ ಪ್ರಾಥಮಿಕ ವೃತ್ತಿ ಕೃಷಿ; ನಂತರ ಬೇಟೆಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಇದ್ದು, ಬೇಟೆ ಆಹಾರ ಸಂಗ್ರಹಣೆಯ ಮೂಲವಾಗಿದೆ. ಆಧುನಿಕ ಕೃಷಿಗೆ ಬಲಿಯಾಗಿದ್ದ ಬುಡಕಟ್ಟುಗಳು ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲಿ ಹೆಚ್ಚಾಗಿವೆ. ಆಂಧ್ರದಲ್ಲಿ ಬುಡಕಟ್ಟು ಜನರು ಬೇಟೆಯನ್ನು ಎರಡನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಆಂಧ್ರಪ್ರದೇಶದ (ವಿಶಾಖಪಟ್ಟಣ) ಗ್ರಾಮೀಣ ಪರಿಸರದಲ್ಲಿ ಬಗತ/ ಭಾಗಥಾ ಎಂಬ ಬುಡಕಟ್ಟು ಜನರಿದ್ದಾರೆ. ಇವರು ಆಹಾರ ಸಂಗ್ರಹಣೆಗೆ ಬೇಟೆಗಾರಿಕೆಯನ್ನು ಅವಲಂಬಿಸಿದ್ದಾರೆ. ಬೈಗ ಎನ್ನುವವರು ಮಧ್ಯಪ್ರದೇಶದಲ್ಲಿದ್ದು, ಅರಣ್ಯದಿಂದ ಆಹಾರ, ಬೆಲೆಬಾಳುವ ಕಟ್ಟಿಗೆ, ವನಸ್ಪತಿ ಬಳಕೆಯನ್ನು ಮಾಡುತ್ತಿದ್ದರು.

ಕೇರಳದ ಅರಾಂದಾನ್ ಜನರು ಬೇಟೆ, ಪಶುಸಂಗೋಪನೆಯಲ್ಲಿ ತೊಡಗಿದ್ದರು. ಬೇಟೆಯಿಂದಲೇ ಜೀವನ ಸಾಗಿಸುತ್ತಿದ್ದರು. ಬಿಹಾರದ ಅಸುರ್, ಬರ್‌ಅಸುರ್‌ರು ಪ್ರಾಚೀನ ಜನಸಮುದಾಯದವರಾಗಿದ್ದು,(ಚೋಟನಾಗಪುರ) ಆರ್ಯೇತರ ಜನಾಂಗವಾಗಿದೆ. ಇವರು ಆಯುಧಗಳನ್ನು ಬಳಸಿ ಬೇಟೆಯಾಡಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಬಾಕರ್‌ವಾಲ್ ಎಂಬ ಪಶುಪಾಲಕರ ವಲಸೆ ಸಮುದಾಯವಿದೆ. ಬಾಕರ್‌ವಾಲ್ ಎಂದರೆ ಮೇಕೆ ಮತ್ತು ಕುರಿ ಸಾಕುವವರು ಎಂದರ್ಥ. ಒರಿಸ್ಸಾದಲ್ಲಿ ಪರಿಶಿಷ್ಟವರ್ಗಕ್ಕೆ ಸೇರಿದ ಬಂಜಾರ ಪಂಗಡವು ಕರ್ನಾಟಕ,ಹರಿಯಾಣ, ಪಂಜಾಬ್ ಮತ್ತು ಹಿಮಾಚಲಪ್ರದೇಶದಲ್ಲಿ ಪರಿಶಿಷ್ಟಜಾತಿಗೆ ಸೇರಿದ್ದಾರೆ. ಮಧ್ಯಪ್ರದೇಶದಲ್ಲಿ ನಾಯ್ಕ ಎಂದು ಹಿಂದುಳಿದ ವರ್ಗಗಳಲ್ಲಿ ಸೇರಿಸಲಾಗಿದೆ. ಇವರು ಗುಜರಾತ್‌ನ ರಾಜಸ್ಥಾನ, ಮಹಾರಾಷ್ಟ್ರಗಳಲ್ಲಿ ಕೀಳು ಜನರೆಂದು ಕರೆಸಿಕೊಂಡಿದ್ದಾರೆ. ಪಶುಪಾಲನೆ ಇವರ ಪ್ರಧಾನ ವೃತ್ತಿಯಾಗಿದೆ.

ಮಹಾರಾಷ್ಟ್ರದ ಧೂಲೆ, ಜಲ್‌ಗಾಂವ್, ನಾಸಿಕ್, ಉಸ್ಮಾನಾಬಾದ್, ಸೊಲ್ಲಾಪುರ ಮತ್ತು ಕೊಲ್ಹಾಪುರ ಜಿಲ್ಲೆಗಳಲ್ಲಿ ಬರ್ದಾ ಜನಾಂಗವಿದ್ದು, ಇವರಿಗೆ ಕಾನ್ದೇಶಿ ಭಿಲ್ ಎನ್ನುತ್ತಾರೆ. ಮರಾಠಿ ಭಾಷೆಯನ್ನಾಡುತ್ತಾ, ಬೇಟೆ ಮತ್ತು ಆಹಾರ ಸಂಗ್ರಹಣೆ, ಕೂಲಿ ಕೆಲಸದಲ್ಲಿ ನಿರತರಾಗಿದ್ದಾರೆ.

ಗುಜರಾತ್ ರಾಜ್ಯದ ಸೂರತ್ ಇತರ ಜಿಲ್ಲೆಗಳಲ್ಲಿ ಬರೊಡಿಯ ಎನ್ನುವ ಜನರಿದ್ದಾರೆ. ಇವರು ಸಂಪ್ರದಾಯಿಕ ಬದುಕನ್ನು ಮೀರಿಲ್ಲ. ಅದೇ ರೀತಿ ಒರಿಸ್ಸಾ, ಬಿಹಾರದ ಸಿಂಗಭೂಮ್ ಪ್ರದೇಶದಲ್ಲಿ ಬಥೂಡಿ ಬುಡಕಟ್ಟಿನ ಜನರಿದ್ದಾರೆ. ಅಡವಿಯಲ್ಲಿ ಎಲೆ, ಹೂವು, ಹಣ್ಣು ಸಂಗ್ರಹಿಸಿ ಜೀವನ ಮಾಡುತ್ತಾರೆ.

ಜಮ್ಮು ಮತ್ತು ಕಾಶ್ಮೀರದ ಲಡಾಕ್‌ನಲ್ಲಿ ಬೇಡ ಎನ್ನುವ ವಲಸೆ ಜನಾಂಗವಿದೆ. ಇವರು (ಸೆಟ್ಲೆಜ್) ಸಟಲೇಜ್‌ದೇವಿ, ಅಂಬಕಾರನ್ನು ಆರಾಧಿಸುತ್ತಾರೆ. ಬೌದ್ಧಧರ್ಮಕ್ಕೆ ಸೇರಿದ್ದು, ಭೂರಹಿತರಾಗಿ ಕಟ್ಟಿಗೆ ಮಾರುವ ಜೀವನ ಈ ಬೇಡರದಾಗಿದೆ. ಸ್ವಂತ ಭೂಮಿ ಇಲ್ಲದೆ, ದಬ್ಬಾಳಿಕೆ ನಡೆಸುವ ಸಮುದಾಯಗಳ ಪ್ರದೇಶದಲ್ಲಿ ಜೀವಿಸುತ್ತಾರೆ. ನಾನಾ ಬಗೆಯ ವೃತ್ತಿಗಳಿಂದ ಅನ್ನ ಆಹಾರವಿಲ್ಲದೆ ಬಳಲುತ್ತಿದ್ದಾರೆ. ಇದೇ ರೀತಿ ಬೇಡಿಯಾ, ಬೈನಾ ಬುಡಕಟ್ಟುಗಳು ಬಿಹಾರ್, ಮಧ್ಯಪ್ರದೇಶದಲ್ಲಿ ಕಂಡುಬರುತ್ತಿವೆ.

ಮಧ್ಯಪ್ರದೇಶದಲ್ಲಿ ಭಾರಿಯ ಎನ್ನುವ ಅರಣ್ಯ ನಾಶಪಡಿಸುವ ಸಮುದಾಯವಿದೆ. ಹಾಗೆಯೇ ಭಾರವಾಡ್ ಎಂಬುವರು ಕುರುಬರಂತೆ ಕುರಿ, ಮೇಕೆ ಮತ್ತು ದನ ಕಾಯುತ್ತಿದ್ದರು. ಪಶ್ಚಿಮಭಾರತ, ದಕ್ಷಿಣ ರಾಜಸ್ಥಾನ, ಪಶ್ಚಿಮ ಮಧ್ಯಪ್ರದೇಶ, ಗುಜರಾತ್ ಮತ್ತು ಉತ್ತರ ಮಹಾರಾಷ್ಟ್ರಗಳಲ್ಲಿ ಭಿಲ್ ಎನ್ನುವ ಬುಡಕಟ್ಟು ಜನರಿದ್ದು, ಭಾರತದ

ಎರಡನೇ ದೊಡ್ಡ ಪರಿಶಿಷ್ಟವರ್ಗವಾಗಿದೆ. ೧೯೮೧ರ ಜನಗಣತಿ ಪ್ರಕಾರ ೭,೩೬೭,೯೭೩ ಇತ್ತು. ತ್ರಿಪುರದಲ್ಲಿ ಭಿಲ್‌ರು ಕೂಲಿಕಾರರಾಗಿದ್ದರು. ೧೮೮೧ರಲ್ಲಿ ಭಿಲ್ಲರು ಅರಾವಳಿ ಪ್ರದೇಶದಲ್ಲಿ ವಾಸಿಸುವ ಪ್ರಾಚೀನ ಭಾರತೀಯ ನಿವಾಸಿಗರಾಗಿದ್ದರೆಂದು ಗುರುತಿಸಲಾಗಿದೆ. ಅಲ್ಲಿ ಅತಿಯಾದ ಜನಸಂದಣಿ ಇವರದಿತ್ತು. ಇದೇ ಪಂಗಡದ ಭಿಲ್‌ಗಾಮೆತಿಯರು ಉದಯಪುರ, ಸಿರೊಹಿ ಜಿಲ್ಲೆಗಳಲ್ಲಿ ಮತ್ತು ರಾಜಸ್ಥಾನದ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ಭಿಲ್ ಕತಾರಿಯ ಮತ್ತು ಭಿಲ್‌ಮಾಮ ಎಂಬುವರು ಉದಯಪುರ, ದುಂಗರಪುರ ಮತ್ತು ಬನ್ಸವರ ಜಿಲ್ಲೆ, ರಾಜಸ್ಥಾನದ ಗಿರಿಪ್ರದೇಶದಲ್ಲಿ ನೆಲೆಸಿರುವರು.

ಮಹಾರಾಷ್ಟ್ರದಲ್ಲಿಯೂ ಭಿಲ್ಲರು ಪರಿಶಿಷ್ಟವರ್ಗಕ್ಕೆ ಸೇರಿದ್ದು, ೧೯೮೧ರ ಜನಗಣತಿ ಪ್ರಕಾರ ೯೯೩,೦೭೪ಇತ್ತು. ಇವರು ಗುಜರಾತ್‌ನ ಮೇವಾಡದಿಂದ ಇಲ್ಲಿಗೆ ವಲಸೆ ಬಂದವರು. ಭಿಲ್‌ವಾಲ್ವಿ, ಪಾದ್ವಿ, ಮಾವಚಿ, ಗವಿತಿ, ನೈಕ್ ಮೊದಲಾದ ಉಪಜಾತಿಗಳಿವೆ. ಇವರು ಬೇಟೆ ಮತ್ತು ಅರಣ್ಯದ ಆಹಾರ ಸಂಗ್ರಹಣೆಯಲ್ಲಿ ಶೇ.೨.೧೭ರಷ್ಟು ಬೇಟೆಯಾಡುತ್ತಾರೆ. ಮಹಾರಾಷ್ಟ್ರದ ದೌಲಿಯಜಾಲ್‌ಗೋನ್‌ಗಳಲ್ಲಿ ಭಿಲ್‌ಭಿಲಾಲರು ಮಾಂಸಹಾರಿಗಳು. ಕೃಷಿ, ಪಶುಪಾಲನೆ, ಆಹಾರ ಸಂಗ್ರಹಣೆ ಪ್ರಥಮ ವೃತ್ತಿ. ಭಿಲ್‌ಮಾಲ್ಟ್ ಎನ್ನುವ ಜನಾಂಗವು ಮಹಾರಾಷ್ಟ್ರದ ಧೂಲೆ ಜಿಲ್ಲೆಯಲ್ಲಿದೆ. ಇವರ ಪೂರ್ವಜರು ರಾಣಪ್ರತಾಪ್‌ನ ಸೈನ್ಯದಲ್ಲಿದ್ದರು. ಇವರು ಕೃಷಿ ಮತ್ತು ಕೂಲಿಗಾರರಾಗಿದ್ದರು. ಭಿಲ್‌ತಾಡ್ವಿ, ಭಿಲ್‌ವಸವೆ, ಭಿಲ್‌ಬರೆಲ ಸಮುದಾಯಗಳು ಮಹಾರಾಷ್ಟ್ರದ ಸತ್ಪುರ, ದೌಲಿಯ, ನಾಸಿಕ್, ಜಾಲ್ನಾನ್, ಅಹಮದ್‌ನಗರ, ಖರ್‌ಗೂನ್, ಕಾಂದ್ವಾ, ಹೊಸಂಗಬಾದ್ ಮತ್ತು ನರಸಿಂಪುರ್ ಇತ್ಯಾದಿ ಪ್ರದೇಶಗಳಲ್ಲಿ ಕೃಷಿ , ಪಶುಸಂಗೋಪನೆ ಮತ್ತು ಬೇಟೆಯಿಂದ ಜೀವಿಸುತ್ತಿದ್ದರು.

ತ್ರಿಪುರ, ಅಸ್ಸಾಂ, ಮಧ್ಯಪ್ರದೇಶ, ಒರಿಸ್ಸಾ ಮತ್ತು ಮಹಾರಾಷ್ಟ್ರಗಳಲ್ಲಿ ಹಲಾಮ್, ಹಲಾಮ್‌ಕೈಪಿಂಗ್, ಹಲಾಮ್‌ಮೊಲ್‌ಸಂ, ಹಲಾಮ್‌ರೂಪಿನಿ ಮತ್ತು ಹಲ್ಯಾ ಬುಡಕಟ್ಟುಗಳು ಕೃಷಿ, ಪಶುಸಂಗೋಪನೆ ಮತ್ತು ಬೇಟೆಯಲ್ಲಿ ತೊಡಗಿದ್ದವು.

ಕರ್ನಾಟಕದಲ್ಲಿ ಹಕ್ಕಿ-ಪಿಕ್ಕಿ ಬುಡಕಟ್ಟು ಸಮುದಾಯವಿದೆ. ಇವರು ಮೈಸೂರು, ಕೋಲಾರ, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಬೆರಳೆಣಿಕೆಯಷ್ಟು ಇದ್ದಾರೆ. ಇವರದು ಪಕ್ಷಿ ಹಿಡಿಯುವ ಕಸುಬು. ಗುಜರಾತ್, ರಾಜಸ್ಥಾನದಿಂದ ಆಂಧ್ರಪ್ರದೇಶಕ್ಕೆ ವಲಸೆ ಬಂದಿದ್ದಾರೆ. ಕನ್ನಡಭಾಷೆ, ತಮಿಳು, ತೆಲುಗು, ಮಲೆಯಾಳಂ ಮತ್ತು ಹಿಂದಿಯನ್ನು ಮಾತನಾಡುತ್ತಾರೆ. ಈ ಹಕ್ಕಿ -ಪಿಕ್ಕಿಗಳು ಹಕ್ಕಿಗಳನ್ನು ಹೆಚ್ಚಾಗಿ ಸಾಂಪ್ರದಾಯಿಕವಾಗಿ ಬೇಟೆಯಾಡುತ್ತಾರೆ.

ಕರ್ನಾಟಕದಲ್ಲಿ ಗಿರಿಪ್ರದೇಶಗಳಾದ ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಹಸಲ /ಹಸಲಾರ್ ಎನ್ನುವ ಜನ ಕೂಲಿಕಾರ್ಮಿಕರು. ಯಾವಾಗಲೂ ಆಹಾರ ಸಂಗ್ರಹಣೆ, ಬೇಟೆಯಲ್ಲಿ ಕಾಲ ಕಳೆಯುತ್ತಿದ್ದರು. ಸಹ್ಯಾದ್ರಿಘಟ್ಟ ಪ್ರದೇಶದಲ್ಲಿ ಹಸಿರಾದ ಕಾಡಿದ್ದು, ಅತೀ ಹೆಚ್ಚಿನ ಮಳೆಯಾಗುತ್ತದೆ. ಹೀಗಾಗಿ ಎಲ್ಲ ರೀತಿಯ ಪ್ರಾಣಿಗಳು ವಾಸಿಸುತ್ತಿದ್ದವು.

ಕರ್ನಾಟಕದಲ್ಲಿ ಬೇಡರು ಕರಡಿ, ಕೋತಿ ಮತ್ತು ಹೋರಿಗಳಿಗೆ ತರಬೇತಿ ಕೊಟ್ಟು ಅವುಗಳಿಂದ ಜನರನ್ನು ರಂಜಿಸಿ ತಮ್ಮ ಹೊಟ್ಟೆ ಹೊರೆದುಕೊಳ್ಳುತ್ತಿರುವ ವೃತ್ತಿ ಇನ್ನೂ ಇದೆ. ಬೇಡ, ಬೇಸ್ತ, ಗೊಲ್ಲ ಇತರ ಬುಡಕಟ್ಟುಗಳು ಕಂಡುಬಂದರೂ ಬೇಡರು ಮಾತ್ರ ಬೇಟೆಯನ್ನು ಇನ್ನೂ ಕೈಬಿಟ್ಟಿಲ್ಲ. ಇವರು ಪ್ರತಿವರ್ಷ ಯುಗಾದಿಯಲ್ಲಿ ಹಂದಿಬೇಟೆ,

ಶಿವರಾತ್ರಿಯಲ್ಲಿ ಮೊಲದಬೇಟೆ ಮತ್ತು ಮಳೆಬಾರದಿದ್ದಾಗ ಹೊಲಮೇರಿ ಬೇಟೆಯಂಥ ಆಚರಣೆಗಳನ್ನು ಜೀವಂತವಾಗಿ ಉಳಿಸಿಕೊಂಡು ಬಂದಿದ್ದಾರೆ.

ಹಿಲಮರಿ ಬುಡಕಟ್ಟು ಅರುಣಾಚಲ ಪ್ರದೇಶದಲ್ಲಿದೆ. ಬೇಟೆಗಾರಿಕೆ ಮತ್ತು ಮೀನುಗಾರಿಕೆಯಿಂದ ಇವರು ಜೀವಿಸುತ್ತಿದ್ದರು. ಇದರಂತೆ ಹಿಲ್‌ಪುಲಯ ಎಂಬ ಬುಡಕಟ್ಟು ಕೇರಳ, ತಮಿಳುನಾಡಿನಿಂದ ವಲಸೆ ಬಂದಿರುವರು. ಕೇರಳದಲ್ಲಿ ಹಿಲ್‌ಪುಲಯರು ಕುರುಬರಂತೆ ಜೀವಿಸುತ್ತಿದ್ದಾರೆ. ಇವರು ಸಿಕ್ಕಿಂ, ಅಸ್ಸಾಂ, ಮಿಜೋರಾಮ್, ಹಮಾರ್-ಐಜೋಲ್‌ನಲ್ಲಿದ್ದಾರೆ. ಸಿಂಗಭೂಮಾ ಜಿಲ್ಲೆ ಬಿಹಾರ್, ಒರಿಸ್ಸಾ ಮಧ್ಯಪ್ರದೇಶದಲ್ಲಿ ಮುಂಡಾ ಸಂತಾಲರು ಅರಣ್ಯದಲ್ಲಿ ಅಲೆದು ಆಹಾರ ಸಂಗ್ರಹಿಸುತ್ತಿದ್ದರು. ತಮಿಳುನಾಡಿನ ನೀಲಗಿರಿ, ಕೊಯಮತ್ತೂರು, ದಕ್ಷಿಣಅರ್ಕಾಟ್, ಉತ್ತರಅರ್ಕಾಟ್ ಜಿಲ್ಲೆಗಳಲ್ಲಿ ಬುಡಕಟ್ಟು ವರ್ಗಗಳಿವೆ.

ಇರುಲರ್ ಎಂಬ ಮಂಗಳೂರಿನ ಬುಡಕಟ್ಟು ಜನರು ಬೇಟೆಯಾಡುತ್ತಾರೆ. ಜೈಂಟಿಯಾ, ಮೇಘಾಲಯ ಮತ್ತು ಜಯಂತಿ ಬೆಟ್ಟಗಳಲ್ಲಿ ಜಮಟಿಯ, ತ್ರಿಪುರಗಳಲ್ಲಿ ಕೃಷಿ ಆರಾಧನೆ ಪ್ರಕ್ರಿಯೆಯಲ್ಲಿದ್ದರು. ಜರವಸೇನೆ ಎಂಬ ಬುಡಕಟ್ಟು ಜನರು ಅಂಡಮಾನ್ ದ್ವೀಪದ್ದಲ್ಲಿದ್ದು, ಬೇಟೆ -ಆಹಾರ ಸಂಗ್ರಹಣೆಯಲ್ಲಿ ತೊಡಗಿದ್ದರು.

ಆಂಧ್ರದ ಬುಡಕಟ್ಟು ಜನರು ತಿರುಪತಿ ತಿಮ್ಮಪ್ಪ ಬೇಟೆಗಾರರ ದೇವರೆಂದು ಆರಾಧಿಸುತ್ತಾರೆ. ಇದು ಮೂಲಬೇಟೆ ಆಚರಣೆಯ ದೇವತೆಯಂತೆ ಕಂಡುಬರುವುದು ಸಹಜ. ಇಲ್ಲಿ ಜಟಪು/ಜಟಾಪುದೊರ, ಸವರ, ಕೊಂಡದೊರ, ಬೊಯಾ, ವಾಲ್ಮೀಕಿ ಮೊದಲಾದ ಬುಡಕಟ್ಟುಗಳಿವೆ. ಚೌನ್ಸಾರಿ-ಉತ್ತರಪ್ರದೇಶದಲ್ಲಿದ್ದು, ಇವರು ಪಶುಸಂಗೋಪನೆ ಮಾಡುತ್ತಿದ್ದರು. ಒರಿಸ್ಸಾದಲ್ಲಿ ಜುಯಾಂಗ್ ಆರ್ಯೇತರ ಬುಡಕಟ್ಟಾಗಿರುತ್ತದೆ. ಇವರು ಬೇಟೆ, ಮೀನುಗಾರಿಕೆ, ಆಹಾರ ಸಂಗ್ರಹಣೆಯಲ್ಲಿ ಮುಂದಾಗಿದ್ದರು. ಅಸ್ಸಾಂನ ಬ್ರಹ್ಮಪುತ್ರಾ ನದಿಕಣಿವೆಯಲ್ಲಿ ಬೇಟೆಗಾರರು ಕಿರಾತ-ಕಿರಾತಿಯರನ್ನು ಆರಾಧಿಸುತ್ತಾರೆ. ಕಚಾರಿಬರ್ಮನ್, ಕಚಾರಿಬೊರೊ, ಕಚಾರಿಡಿಮಾಸ, ಕಚಾರಿಮಾದಹಿ, ಕಚಾರಿ ಮೆಖ, ಸೊನೊವಾಲ್ ಬುಡಕಟ್ಟುಗಳು ಬೇಟೆಯಾಡುತ್ತಿದ್ದವು.

ಕೇರಳದ ತ್ರಿಚೂರು ಮತ್ತು ಪಾಲ್ಘಾಟ್ ಜಿಲ್ಲೆಗಳ ದಟ್ಟಕಾಡಿನಲ್ಲಿ ಇವರು ಶಿಕಾರಿ ಮಾಡಿಕೊಂಡು ವಾಸವಾಗಿದ್ದರು. ಇವರು ಕಾಡಿನ ಸಂಪತ್ತನ್ನು ಕೊಳ್ಳೆ ಹೊಡೆಯುವವರಾಗಿದ್ದು, ಪ್ರಾರಂಭದಲ್ಲಿ ಬೇಟೆ, ಪಶುಸಂಗೋಪನೆ ಇತ್ತು. ಇತರ ಪ್ರದೇಶಗಳಲ್ಲಿ ಬುಡಕಟ್ಟುಗಳಿದ್ದು, ನವೀನ ನಾಗರಿಕತೆಗೆ ಸ್ಥಿತ್ಯಂತರ ಹೊಂದಿರುವುದು ಗಮನಾರ್ಹ. ಇವರಂತೆ ದಕ್ಷಿಣಕನ್ನಡದಲ್ಲಿ · ಹದಿನಾಲ್ಕಕ್ಕೂ ಹೆಚ್ಚು ಬುಡಕಟ್ಟುಗಳು ಬೇಟೆಯಿಂದ ಜೀವಿಸುತ್ತಿರುವುದು ಸ್ಪಷ್ಟ. ಲಕ್ಷದ್ವೀಪ, ಅಂಡಮಾನ್ ನಿಕೋಬಾರ್‌ನಲ್ಲಿ ಮಾನವ ಮಾನವನನ್ನು ಬೇಟೆಯಾಡುತ್ತಾನೆ. ಇಲ್ಲಿ ಅಪಾಯದ ಬುಡಕಟ್ಟು ನೆಲೆಗಳಿದ್ದು, ಮಾನವನ ಜೀವನವು ಕಷ್ಟದಿಂದ ಕೂಡಿದೆ.

ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹು ದೊಡ್ಡ ದೇಶವಾಗಿದೆ. ಇಂತಹ ದೇಶದಲ್ಲಿ ಬೇಟೆಯನ್ನು ನಂಬಿ ಬದುಕುವ ಅನೇಕ ಜನಸಮುದಾಯಗಳಿವೆ. ಆರ್ಥಿಕವಾಗಿ ಸದೃಢರಾಗುತ್ತಾ, ತಾಂತ್ರಿಕತೆ, ಆಧುನಿಕತೆಗಳ ಕ್ಷೇತ್ರದಲ್ಲಿ ದಾಪುಗಾಲು ಹಾಕುತ್ತಿದ್ದಾರೆ. ನಾಗರಿಕತೆ, ಸಂಸ್ಕೃತಿಗಳ ಪ್ರಭಾವ ದಟ್ಟವಾಗಿ ಪರಿಣಮಿಸಿದರೂ, ಕೆಲವು ಬುಡಕಟ್ಟುಗಳು ಆ ಸುಳಿಗೆ ಬೀಳದೆ ಪ್ರತ್ಯೇಕವಾಗಿದ್ದು, ಕಟ್ಟು-ಪಾಡುಗಳಿಂದ ಜೀವಿಸುತ್ತಿದ್ದಾರೆ.

ದಕ್ಷಿಣ ಭಾರತದಲ್ಲಿ ಬೇಡ, ರಾಮೋಶಿ, ವೇಡನ್, ನಯನಾರ್, ನಾಯರ್, ವಾಲ್ಮೀಕಿ, ಕಣ್ಣಪ್ಪನ ಮಕ್ಕಳು, ಭಿಲ್ಲ, ಮುಂಡ, ಬೊಯೊ ಇತ್ಯಾದಿ ಪರ್ಯಾಯ ಪದಗಳಿಂದ ಕರೆಯುವ ಬೇಟೆಗಾರರ ಸಮುದಾಯಗಳಿದ್ದು, ಆಹಾರಸಂಗ್ರಹಣೆಯಲ್ಲಿ ಅಲೆಮಾರಿತನ, ಬುಡಕಟ್ಟು ಶೈಲಿಯನ್ನು ಕೈಬಿಟ್ಟಿಲ್ಲದಿರುವುದುಂಟು. ಸಿಂಧೂ, ಬ್ರಹ್ಮಪುತ್ರಾ, ಗಂಗಾ, ಯಮುನಾ, ನರ್ಮದಾ, ತಪತಿ, ಕೃಷ್ಣಾ, ತುಂಗಭದ್ರಾ, ಗೋದಾವರಿ, ಕಾವೇರಿ, ಮುಂತಾದ ನದಿಕಣಿವೆಗಳಲ್ಲಿ ಬುಡಕಟ್ಟು ಜನರು ವಾಸಿಸುತ್ತಿದ್ದಾರೆ.

೨.೨. ಭಾರತೀಯ ಸಂಸ್ಕೃತಿ ನೆಲೆಯಲ್ಲಿ ಬೇಟೆಯ ಸ್ಥಾನ-ಮಾನ

ಭಾರತದ ಸಾಂಸ್ಕೃತಿಕ ಚರಿತ್ರೆಯು ಸಾಮ್ರಾಜ್ಯ, ರಾಜರುಗಳ ವಿವರಗಳಲ್ಲದೆ, ದೇಶದ, ಪ್ರದೇಶದ, ಹಳ್ಳಿಯ, ಜನರ ಜೀವನ ಲಕ್ಷಣಗಳನ್ನೊಳಗೊಂಡಿದೆ. ಆಚಾರ, ವಿಚಾರ ರೂಢಿ, ಸಂಪ್ರದಾಯ, ಉಡುಗೆ-ತೊಡಿಗೆ, ಕಲೆ-ಸಾಹಿತ್ಯವನ್ನು ಸಂಸ್ಕೃತಿ ಚೌಕಟ್ಟನಲ್ಲಿ ನೋಡಬಹುದು. ಒಟ್ಟು ಭೌತಿಕವಾಗಿಯೂ, ಬೌದ್ಧಿಕವಾಗಿಯೂ ಮಾನವನ ಜೀವನದ ಚಿತ್ರಣ ಕೊಡುವುದೇ ಆಗಿದೆ. ಇದರ ವಿಸ್ತಾರ, ಹರವು ಬಹು ವಿಶಾಲವಾದುದು. ಭಾರತದಲ್ಲಿ ನದಿ, ಬೆಟ್ಟ, ಗುಡ್ಡ, ನಗರ, ಪಟ್ಟಣ, ಗ್ರಾಮ ಮತ್ತು ಮರುಭೂಮಿಗಳು ಕಂಡುಬರುತ್ತವೆ. ಗಂಗಾ-ಯಮುನಾ ನದಿ ಮುಖಜಭೂಮಿ, ಪಶ್ಚಿಮ-ಪೂರ್ವ ಘಟ್ಟಗಳು, ದಖನ್ ಪ್ರಸ್ಥಭೂಮಿ, ಕೃಷ್ಣ-ತುಂಗಭದ್ರದ ದೋಬ್‌ಪ್ರದೇಶ, ಕಾವೇರಿ ನದಿ ಅಲ್ಲದೆ, ಭಾರತಕ್ಕೆ ಮೂರು ಕಡೆ ಸಮುದ್ರತೀರಗಳಿವೆ. ವಿವಿಧ ರೀತಿಯ ಜನಾಂಗಗಳಿದ್ದು, ಪ್ರಾಣಿ-ಪಕ್ಷಿಗಳು ಇತರೆ ಜೀವಿಗಳು ವಾಸಿಸುವ ಭೌಗೋಳಿಕ ಪ್ರದೇಶದ ಇತಿಹಾಸವು ಸಾಂಸ್ಕೃತಿಕವಾಗಿ ಸಮೃದ್ಧವಾಗಿದೆ.[೩೧]

ಭೌಗೋಳಿಕವಾಗಿ ಭಾರತ ವಿಶ್ವದಲ್ಲಿ ೭ ನೇ ದೊಡ್ಡ ದೇಶ. ಇಂದು ನೂರು ಕೋಟಿ ಜನಸಂಖ್ಯೆಯನ್ನು ಹೊಂದಿದೆ. ಇದು ವಿಶಾಲವಾದ ಭೂಭಾಗ, ಅನೇಕ ಜನಾಂಗ, ಭಾಷೆಗಳನ್ನು ಹೊಂದಿರುವುದು ಸ್ಪಷ್ಟ. ಭಾರತದಲ್ಲಿ ದಖನ್‌ಪ್ರಸ್ಥಭೂಮಿ, ಕರಾವಳಿ ಪ್ರದೇಶಗಳು, ಥಾರ್‌ಮರುಭೂಮಿ, ಪರ್ವತಸಾಲು, ವಿಂಧ್ಯಪರ್ವತ, ಪ್ರಾಚೀನಕಾಲದ ಗಣರಾಜ್ಯಗಳು, ನಗರಗಳು, ಪಶ್ಚಿಮಘಟ್ಟಗಳು, ಪೂರ್ವಘಟ್ಟಗಳು, ಕಣಿವೆಗಳು, ಬಂದರುಗಳು, ರೇವುಪಟ್ಟಣಗಳು, ಇತ್ಯಾದಿ ಭೌಗೋಳಿಕ ಲಕ್ಷಣಗಳಿವೆ. ಬ್ರಹ್ಮಗಿರಿ, ಬಳ್ಳಾರಿ, ಕಡಪ, ಕರ್ನೂಲ್, ಆದಿಚನೆಲ್ಲೂರು, ಪೆರಾಂಬೂರ್ ಮುಂತಾದ ಕಡೆಗಳಲ್ಲಿ ಶಿಲಾಯುಗದ ಅವಶೇಷಗಳು ಇಲ್ಲಿನ ಮೆರಗನ್ನು ಹೆಚ್ಚಿಸಿವೆ. ಈ ಸಂಸ್ಕೃತಿಯನ್ನು ರೂಢಿಸಿದ ಜನ ವಿವಿಧ ಬುಡಕಟ್ಟುಗಳಿಗೆ ಸೇರಿದ್ದರು. ಕ್ರಮೇಣ ದ್ರಾವಿಡರ ಸಂಸ್ಕೃತಿ ವಿಕಾಸಗೊಂಡಿತು. ಐತಿಹಾಸಿಕವಾಗಿ ಮಾನವ ಬದುಕಿದ ಬೇಟೆಯೊಂದಿಗಿನ ಪರಿಸರ, ಸಂಸ್ಕೃತಿ ಮತ್ತು ನಾಗರಿಕತೆಗಳ ಪ್ರಮುಖ ಸಂಗತಿಗಳೇ ಸಾಂಸ್ಕೃತಿಕ ಇತಿಹಾಸದ ಲಕ್ಷಣಗಳು ಎನ್ನಬಹುದು.

ಶಿಲಾಯುಗದಲ್ಲಿ ಮಾನವನ ಜನಜೀವನ

ಮಾನವ ದೈವ ಸೃಷ್ಟಿಯಲ್ಲ. ಇತರ ಪ್ರಾಣಿಗಳಂತೆ ವಿಕಾಸ ಹೊಂದಿ ಬೆಳೆದುಬಂದವನು. ಹೀಗೆ ಭಾರತದೇಶ ಪುರಾತನ ಕಾಲದಲ್ಲಿ ದೊಡ್ಡ ಭೂಖಂಡವಾಗಿತ್ತು. 'ಆಫ್ರಿಕ, ಆಸ್ಟ್ರೇಲಿಯ, ದಖನ್ ಪ್ರಸ್ಥಭೂಮಿಗಳು ಸೇರಿದ ಒಂದು ಭೂಖಂಡವಿದ್ದು, ಕಾಲಕ್ರಮೇಣ ಮೂರಕ್ಕೂ ಮಧ್ಯೆ ಇದ್ದ ಪ್ರದೇಶ ಮುಳುಗಿ ಹೋಗಿ ಅಲ್ಲಿ ಸಾಗರವು ಏರ್ಪಟ್ಟಿತು ಎಂಬ ಅಂಶ ತಿಳಿದುಬರುತ್ತದೆ. ಈಗಿನ ಗಂಗಾಬಯಲು ಇರದೆ ಅಲ್ಲಿಯೂ ಹಿಂದೆ ಸಮುದ್ರವಿದ್ದು, ಹಿಮಾಲಯ ಮೇಲಕ್ಕೆದ್ದು ಕ್ರಮೇಣ ಬಯಲು ಉಂಟಾಯಿತು ಎನ್ನಲಾಗಿದೆ. ಸರಸ್ವತಿ ಮುಂತಾದ ನದಿಗಳು ಪ್ರಾಚೀನ ಕಾಲದಲ್ಲಿದ್ದು, ಕ್ರಮೇಣ ಬತ್ತಿ, ನಶಿಸಿ ಹೋಗಿ ಮರುಭೂಮಿಯಾಗಿರಬೇಕೆಂದು ಊಹಿಸಲಾಗಿದೆ.

ಇದೇ ರೀತಿ ಸಹಸ್ರಾರು ವರ್ಷಗಳ ಹಿಂದೆ ದಖನ್‌ಪ್ರಸ್ಥಭೂಮಿಯಲ್ಲಿ ಜನರು ವಾಸಿಸತೊಡಗಿದಾಗ, ಅವರು ಪ್ರಾಣಿಗಳಂತೆ ಆಹಾರ, ನಿದ್ರೆ, ಮೈಥುನ, ಭಯಗಳಲ್ಲಿ ನಿರತರಾಗಿರುತ್ತಿದ್ದರು. ಅವರು ಭಾವನೆ, ಕೂಗು, ಸಂಜ್ಞೆಗಳಿಂದ ಚಿತ್ರಗಳ ಮೂಲಕ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುತ್ತಿದ್ದರು. ಭಾಷೆ, ಲಿಪಿ ಹುಟ್ಟುವ ಮುನ್ನ ಸತ್ತಪ್ರಾಣಿಗಳ ಎಲುಬು, ಮರದತುಂಡುಗಳ ಉಪಯೋಗ ಶಿಲಾಯುಗದ ಲಕ್ಷಣಗಳ ಹೆಗ್ಗುರುತುಗಳಾಗಿವೆ.

ಶಿಲಾಯುಗದ ಮಾನವ ಅಲೆದಾಡುತ್ತಿದ್ದು, ದುಷ್ಟಪ್ರಾಣಿಗಳಿಂದ ತಪ್ಪಿಸಿಕೊಳ್ಳಲು, ರಕ್ಷಿಸಿಕೊಳ್ಳಲು ಮರ, ಗಿಡ, ಪೊದರು, ಕಲ್ಲು, ಬಂಡೆ, ಗುಹೆ, ಪೊಟರೆಗಳ ಆಶ್ರಯ ಪಡೆದ. ಅಂದು ಪ್ರಾಣಿಗಳ ಚರ್ಮ, ಮರದ ತೊಗಟೆ, ಸೊಪ್ಪುಗಳಿಂದ ಮೈ ಮುಚ್ಚಿಕೊಳ್ಳುತ್ತಿದ್ದ. ಅಲ್ಲದೆ ಅವನು 'ಕಲ್ಲಿನಿಂದ ಚೂಪಾದ ಹಾಗೂ ಹರಿತವಾದ ಆಯುಧಗಳನ್ನು, ಬಿದಿರು-ಬಳ್ಳಿಗಳಿಂದ ಬಿಲ್ಲು-ಬಾಣಗಳನ್ನು ಮಾಡುವ ವಿಧಾನವನ್ನು ಕಲಿತು, ಅವುಗಳನ್ನು ಬೇಟೆ, ಯುದ್ಧ, ಮಾಂಸ ಕತ್ತರಿಸುವುದು ಮುಂತಾದ ಕೆಲಸಗಳಲ್ಲಿ ಉಪಯೋಗಿಸುತ್ತಿದ್ದ. ಹೀಗೆ ಗೆಡ್ಡೆ, ಗೆಣಸು, ಗಿಡ ಬಳ್ಳಿಗಳ ಹಣ್ಣು-ಹಂಪಲುಗಳನ್ನು ತಿನ್ನುತ್ತಿದ್ದು, ನಂತರ ಕಾಡುಪ್ರಾಣಿಗಳನ್ನು ಬೇಟೆಯಾಡಿ, ಬೆಂಕಿ ತಿಳಿದಿರಲಿಲ್ಲವಾದ ಕಾರಣ ಅವುಗಳ ಮಾಂಸವನ್ನು ಹಸಿಯಾಗಿಯೇ ತಿನ್ನುತ್ತಿದ್ದನು.

ಶಿಲಾಯುಗದಲ್ಲಿ ಕಂಡುಬರುವ ಕೀಳುಹಂತದ ಬೇಟೆಗಾರರಿಗೆ ಕಿರಾತರೆಂಬ ಹೆಸರಿದೆ. ಇವರು ಪರ್ವತಗಳ ಅಭೇದ್ಯವಾದ ಗಿರಿಕಂದರ, ಕಣಿವೆ, ದಟ್ಟಡವಿಯಲ್ಲಿ ನೆಲಸುತ್ತಿದ್ದರು. ವಸತಿ, ಸಿರಿವಂತ- ಬಡವನೆಂಬ ಅಂತರ ಇವರಿಗೆ ಗೊತ್ತಿರಲಿಲ್ಲ. ಗುಂಪು ಗುಂಪಾಗಿ ಅಲೆದಾಟದ ಮೂಲಕ ಬೇಟೆಯಾಡಿ ಬದುಕುತ್ತಿದ್ದರು.[೧೨]

ಪುರುಷನು ಶಿಲಾಯುಗದ ಸಂದರ್ಭದಲ್ಲಿ ಬೇಟೆಯಾಡಿ ತಂದ ಮಾಂಸವನ್ನು ಬೇಯಿಸುವುದು, ಮನುಷ್ಯ ಹಾಗೂ ಪ್ರಾಣಿಗಳ ಚಿತ್ರಗಳನ್ನು ಗೀಚುವುದು ಹೆಂಗಸರ ಮುಖ್ಯ ಕೆಲಸವಾಗಿತ್ತು.[೧೩] ಮಾನವನಿಗೆ ಬೇಟೆ ದೊರಕದಾಗ ಅಥವಾ ಮಾಂಸ ತಿಂದು ಬೇಸರವಾದಾಗ ಹಸುವಿನಹಾಲು, ಮೊಟ್ಟೆ, ಹುಳ, ಕಪ್ಪೆ, ಜೇನು, ಗೆಡ್ಡೆ-ಗೆಣಸುಗಳು ಆಹಾರ ಮಾಧ್ಯಮವಾಗಿದ್ದವು.[೧೪] ಕ್ರಮೇಣ ಹಸು, ಎಮ್ಮೆ, ಆಡು, ಕುರಿಗಳ ಸಾಕಣಿಕೆ ಬೆಳೆಯಿತೆನ್ನಬಹುದು. ಪಶುಗಳ ರಕ್ಷಣೆ ಮತ್ತು ಬೇಟೆಯ ಸಹಾಯಕ್ಕೆ ನಾಯಿಯನ್ನು ಸಾಕಿದರು. ಕಲ್ಲನ್ನು ಚೂಪಾಗಿ ಮಾಡಿ ಚೂರಿ, ಭರ್ಜಿ, ಕೊಡಲಿ, ಬಾಣಗಳನ್ನು ಮಾಡುತ್ತಿದ್ದರು. ಹುಲ್ಲಿನಿಂದ ಬುಟ್ಟಿ ಹೆಣೆದುದರಿಂದ ಮುಂದೆ ದೋಣಿ, ನಾವೆಗಳ ಶೋಧನೆಗೆ ಅನುಕೂಲವಾಯಿತು.

ಅಲೆಮಾರಿ ಜನರು ಪಶುಪಾಲನೆ, ವ್ಯವಸಾಯಗಳಲ್ಲಿ ತೊಡಗಿ ದನಕರುಗಳಿಗೆ ಹುಲ್ಲು, ನೀರು, ಸಮೃದ್ಧಿಯಾಗಿರುವ, ಫಲವತ್ತಾದ ಭೂಮಿಯಲ್ಲಿ, ದೊಡ್ಡ ನದಿತೀರಗಳ ಬಳಿಯಲ್ಲಿ ನೆಲಸಿದರು. ನೇಗಿಲಿನ ಉಪಯೋಗ ಆನಂತರವಾಯಿತು. ಈಜಿಪ್ಟ್, ಮೆಸಪಟೋಮಿಯ, ಭಾರತ, ಚೈನಾ ಎಂಬ ನಾಲ್ಕು ದೇಶಗಳ ಬಯಲುಗಳಲ್ಲಿ ಬಿದಿರು, ತಾಳೆ, ಹತ್ತಿ, ತಾಮ್ರ, ಕಂಚು, ಹಿತ್ತಾಳೆ, ಚಿನ್ನ, ಬೆಳ್ಳಿ, ದಂತಗಳ ಬಳಕೆಯಾದಾಗ ಕ್ರಾಂತಿಕಾರಿ ಬದಲಾವಣೆಯಾಯಿತು. ಹುಲ್ಲುಗಾವಲಿನ ಜನರು ಧಾನ್ಯ ಬೆಳೆದು ದನ-ಕುರಿಗಳನ್ನು ಸಾಕುತ್ತಿದ್ದರು. 'ಬೆಟ್ಟ ಸೀಮೆಯ ಜನರು ಒಬ್ಬ ನಾಯಕನನ್ನು ರಾಜನಾಗಿ ಮಾಡಿಕೊಂಡು, ಬೇಟೆ, ಯುದ್ಧ, ಇತರ ಕೆಲಸಗಳಲ್ಲಿ ನಿರತರಾಗಿದ್ದವರು; ತೀರದ ಬಳಿಯ ಜನರು ಮೀನು ಹಿಡಿಯುವುದು, ಉಪ್ಪು ತಯಾರಿಸುವುದು, ದೋಣಿ ನಾವೆಗಳನ್ನು ತಯಾರಿಸಿ, ನದಿಗಳಲ್ಲಿ ನಡೆಸುವುದು, ಸಮುದ್ರತೀರಪ್ರದೇಶಗಳ ಪರಿಚಯ ಪಡೆಯುವುದು ಮಾಡುತ್ತಿದ್ದರು. ಮಲಯ, ಫಿಲಿಪೈನ್ಸ್, ಆಸ್ಟ್ರೇಲಿಯ, ಈಜಿಪ್ಟ್, ಜುಡಾ, ಬೇಬಿಲೋನಿಯ ಮುಂತಾದ ದೇಶಗಳೊಡನೆ ವ್ಯಾಪಾರ ಮಾಡುತ್ತಿದ್ದು, ಅವರಿಗೆ ಹತ್ತಿ, ವಸ್ತ್ರ, ದಂತ, ತೇಗ, ಸುಗಂಧ ದ್ರವ್ಯ, ಒಡವೆಗಳನ್ನು ಮಾರುತ್ತಿದ್ದರು. ಹೀಗೆ ಮಾನವನು ಬದುಕಿನ ಹೋರಾಟದಲ್ಲಿ ಸವಾಲುಗಳನ್ನು ಎದುರಿಸುತ್ತಿದ್ದು, ಕಾಡುಮನುಷ್ಯನಿಂದ ಸುಧಾರಿತಾ ಮನುಷ್ಯನಾಗಲು ಹವಣಿಸುತ್ತಾ ಪರಸ್ಪರ ಬದಲಾವಣೆ ಹಂತದಲ್ಲಿದ್ದನು.

ಕ್ರಿ.ಪೂ. ೨,೫೦,೦೦೦ ವರ್ಷಗಳ ಆದಿಮಾನವನ ಅವಶೇಷಗಳು, ಕುರುಹುಗಳು ದೊರೆತಿವೆ. ಭಾರತದಲ್ಲಿ ಮಾನವ ಆಫ್ರಿಕಾಕ್ಕಿಂತ ತಡವಾಗಿ ನೆಲಸಿದ. 'ಆದಿಮಾನವ ಕಲ್ಲುಗಳ ಚಕ್ಕೆಗಳನ್ನು, ಕಚ್ಚುಮಾಡಿದ ಕಲ್ಲುಗಳನ್ನು ಬೇಟೆಗಾಗಿಯೂ, ಕತ್ತರಿಸುವುದು, ತುಂಡರಿಸುವುದು ಮುಂತಾದ ಕೆಲಸಗಳಿಗಾಗಿಯೂ ಬಳಸುತ್ತಿದ್ದ. ಕಾಡುಗಳಲ್ಲಿ ಅಲೆದು ಸಂಗ್ರಹಣೆ, ಬೇಟೆಗಾರಿಕೆ, ಕೃಷಿ ಮುಂತಾದವುಗಳನ್ನು ಅವಲಂಬಿಸಿದ. ಕ್ರಿ.ಪೂ.೯೦೦೦ದವರೆಗೆ ಕಾಲ ಹೀಗೇ ಉರುಳಿತು ಎನ್ನಲಾಗುತ್ತದೆ'.[೩೫]

ಹಳೆಶಿಲಾಯುಗ

ಮಾನವನು ಮೇಕೆ, ಕುರಿ ಮತ್ತು ದನಗಳನ್ನು ಸಾಕುವ ಮುನ್ನ ಗೆಡ್ಡೆ-ಗೆಣಸುಗಳನ್ನು, ಹಣ್ಣುಗಳನ್ನು ತಿಂದು ಬದುಕುವ ಪುರಾವೆಗಳಿವೆ. ಮಾನವಸಮುದಾಯವು ಹಳೆಯ ಶಿಲಾಯುಗದಲ್ಲಿ ಬೇಟೆಯಿಂದಲೇ ಜೀವಿಸುತ್ತಿತ್ತು. ಶಿಲಾಯುಗ ಸಂಸ್ಕೃತಿಯನ್ನು ಈ ಕೆಳಕಂಡಂತೆ ನೋಡಬಹುದು :

೧. ಕೆಳಶಿಲಾಯುಗ - ೨,೫೦,೦೦೦ - ೧,೦೦,೦೦೦ ಕ್ರಿ.ಪೂ.ನಡುವೆ

೨. ಮಧ್ಯ ಶಿಲಾಯುಗ - ೧,೦೦,೦೦೦ - ೪೦,೦೦೦ ಕ್ರಿ.ಪೂ.ನಡುವೆ

೩. ಮೇಲು ಶಿಲಾಯುಗ - ೪೦,೦೦೦ - ೧೦,೦೦೦ ಕ್ರಿ.ಪೂ.ನಡುವೆ

೧. ಕೆಳಶಿಲಾಯುಗ : ಈ ಕೆಳಶಿಲಾಸಂಸ್ಕೃತಿಯ ಕಾಲವು ಹಿಮಯುಗವಾಗಿದೆ. ಕಲ್ಲಿನ ಕೈಗೊಡಲಿ, ಕಡಿಗತ್ತಿ ಮತ್ತು ಮಚ್ಚುಗತ್ತಿ, ಶಿಲಾಯುಧಗಳಾಗಿದ್ದವು. ಭಾರತದಲ್ಲಿ ಥಾರ್ ಮರುಭೂಮಿ, ಕಾಶ್ಮೀರ ಮತ್ತು ಬೇಲಂಕಣಿವೆ, ರಾಜಸ್ಥಾನ ಮರುಳುಗಾಡು ದಿದ್ವಾನಾ, ಬೇಲಂ, ನರ್ಮದಾ ನದಿ, ಭೂಪಾಲಿನ ಭೀಂಬೆಟ್ಕಾ ಗುಹೆಗಳು ಮುಂತಾದ ಕಡೆ ಈ ಕಾಲದ ನಿವೇಶನಗಳಿವೆ.

೨. ಮಧ್ಯಶಿಲಾಯುಗ : ಮಧ್ಯಶಿಲಾಯುಗದಲ್ಲಿ ಕಲ್ಲುಚಕ್ಕೆಗಳಿಂದ ಮಾಡಿದ ಆಯುಧಗಳು ಹೆಚ್ಚು. ಅಲಗು, ಮೊನೆಗಳು, ಬೈರಿಗೆ, ಹೆರೆಗೆಗಳು ನರ್ಮದಾ, ತುಂಗಭದ್ರಾ ಮುಂತಾದ ನದಿಭಾಗಗಳಲ್ಲಿ ಕಂಡುಬರುತ್ತವೆ. ಆಂಧ್ರ, ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರ ಪ್ರದೇಶ ಇತರೆಡೆ ಅಲಗುಗಳು, ಕೊರೆ ಉಳಿಗಳು ಕಂಡುಬಂದಿವೆ. ಈ ಕಾಲದ ನಿವೇಶನಗಳು ಬೆಟ್ಟಗಳ ತಪ್ಪಲು ಅಥವಾ ನದಿಗಳ ಕಣಿವೆ ಹತ್ತಿರದಲ್ಲಿದ್ದು, ಬೇಟೆಗಾರರು ಸಿಂಧು, ಗಂಗಾನದಿಗಳ ಮೆಕ್ಕಲುಮಣ್ಣಿನಲ್ಲಿ ಜೀವಿಸುತ್ತಿದ್ದರು.

೩. ಮೇಲುಶಿಲಾಯುಗ: ಬೇಟೆ ಹಾಗೂ ಪಶುಪಾಲನೆ : ಹಳೆಯಶಿಲಾಯುಗದ ಮೇಲು ಹಂತ ಕ್ರಿ.ಪೂ.೯,೦೦೦ದಲ್ಲಿ ಕೊನೆಯಾಯಿತು. ಹಿಮಯುಗ ಕೊನೆಗೊಂಡು ಹವಮಾನ ಬೆಚ್ಚಗಾದಾಗ, ಸಸ್ಯ ಮತ್ತು ಪ್ರಾಣಿವರ್ಗಗಳಲ್ಲೂ ಬದಲಾವಣೆಗಳು ಕಂಡುಬಂದವು. ಕ್ರಿ.ಪೂ.೯೦೦೦ದಲ್ಲಿ ಹಳೆಯ ಶಿಲಾಯುಗಕ್ಕೂ ಮತ್ತು ನವಶಿಲಾಯುಗಕ್ಕೂ ನಡುವಿನ ಸೂಕ್ಷ್ಮಶಿಲಾಯುಗ ಆರಂಭವಾಯಿತು. ಆ ಕಾಲದ ಜನ ಬೇಟೆ, ಮೀನುಗಾರಿಕೆ, ಆಹಾರ ಸಂಗ್ರಹಣೆ ಜೊತೆಗೆ ನವಶಿಲಾಯುಗದಲ್ಲಿ ಪಶುಪಾಲನೆ ರೂಢಿಸಿಕೊಂಡರು.

ಈ ಕಾಲದ ನಿವೇಶನಗಳು ರಾಜಸ್ತಾನ, ದಕ್ಷಿಣ-ಉತ್ತರ ಭಾರತ, ಮಧ್ಯ ಹಾಗೂ ಪೂರ್ವ ಭಾರತ, ದಕ್ಷಿಣದಲ್ಲಿ ಕೃಷ್ಣ ನದಿಯಿಂದಾಚೆ ದೊರೆತಿವೆ. ಮೇಲಿನ ನಿವೇಶನಗಳಲ್ಲಿನ ಆಧಾರಗಳ ಮೂಲಕ ಅಂದಿನ ಜನರು

ಬೇಟೆ ಹಾಗೂ ಪಶುಪಾಲನೆಯಿಂದ ಜೀವನ ನಡೆಸುತ್ತಿದ್ದರು ಎನ್ನಲಾಗಿದೆ.[೩೬] ಪಶುಪಾಲನೆಯ ಮೊದಲ ಕುರುಹು ದೊರೆತಿರುವುದು ರಾಜಸ್ಥಾನ ಬಗೋರ್ ಎಂಬಲ್ಲಿ.

ಇತಿಹಾಸ ಪೂರ್ವಕಲೆಯಲ್ಲಿ ಮಾನವ ಗುಹೆ, ಬಂಡೆಗಳ ಮೇಲೆ ಚಿತ್ರಗಳನ್ನು ಬರೆಯುತ್ತಿದ್ದ. ವಿಂಧ್ಯಪರ್ವತದ ಸಾಲಿನಲ್ಲಿನ ಭೀಂಬೆಟ್ಕಾ ಉದಾಹರಣೆ. ಬೇಟೆ ಮತ್ತು ಆಹಾರ ಸಂಗ್ರಹದ ಆಧಾರದ ಮೇಲೆ ನಿಂತಿದ್ದ ಅರ್ಥವ್ಯವಸ್ಥೆಯು ಅಸ್ತಿತ್ವದಲ್ಲಿದ್ದ ಕಾಲದಲ್ಲಿ ಆ ಚಿತ್ರಗಳು ಬರೆಯಲ್ಪಟ್ಟವು ಎಂದು ಆರ್. ಎಸ್. ಶರ್ಮರು ಅಭಿಪ್ರಾಯಿಸಿದ್ದಾರೆ.[೩೭]

ನವಶಿಲಾಯುಗದ ಆಹಾರೋತ್ಪಾದನೆಗೆ ಕಲ್ಲಿನ ಆಯುಧಗಳನ್ನು ಉಜ್ಜ ನಯಗೊಳಿಸಲಾಗಿತ್ತು. ಕಲ್ಲು-ಕೊಡಲಿಗಳು, ಬೆಟ್ಟಸೀಮೆಗಳಲ್ಲಿ ದೊರೆತಿವೆ. ಈ ಕಾಲದ ಜನರು ಸರೋವರದ ತಡಿಯಲ್ಲಿ ಗುಹೆಗಳಲ್ಲಿ ವಾಸಿಸುತ್ತಿದ್ದರು. 'ಮೀನುಗಾರಿಕೆ, ಬೇಟೆ ಪ್ರಮುಖ ಜೀವನೋಪಾಯಗಳಾಗಿದ್ದರೂ, ಕೃಷಿ-ಪರಿಚಯವೂ ಇತ್ತು'.[೩೮] ಜನರು ಗೋದಾವರಿನದಿ ದಕ್ಷಿಣದಲ್ಲಿ ಬೆಟ್ಟಗಳ, ನದಿ-ತೀರಗಳಲ್ಲಿ ವಾಸಿಸುತ್ತಿದ್ದರು. ಕಲ್ಲು-ಕೊಡಲಿಗಳು, ಕಲ್ಲು ಅಲಗುಗಳು, ಪ್ರಾಣಿಗಳ ಬೊಂಬೆಗಳು ದೊರೆತಿರುವುದರಿಂದ ದನ, ಕುರಿ, ಮೇಕೆ, ಸಾಕಿದ್ದರೆಂಬುದಕ್ಕೆ ಸಾಕ್ಷಿ. ಅಲ್ಲದೆ, ಆ ಮೂಲಕ ಕೃಷಿಗೆ ಹವಣಿಸಿದ ಪ್ರಯತ್ನವು ಗಮನಾರ್ಹವಾದುದು.

ಕರ್ನಾಟಕದ ಮಸ್ಕಿ, ಬ್ರಹ್ಮಗಿರಿ, ಹಳ್ಳೂರು, ಕೊಡೇಕಲ್ಲು, ಸಂಗನಕಲ್ಲು, ಪಿಕ್ಲಿಹಾಳ್, ತಿರುಮಕೂಡಲು, ನರಸಿಂಹಪುರ ಮತ್ತು ತೆಕ್ಕಲಕೋಟೆ, ತಮಿಳುನಾಡಿನ ಪೈಯಂಪಳ್ಳಿ ಹಾಗೂ ಆಂಧ್ರದ ಉತ್ತನೂರು ಪ್ರಮುಖ ನವಶಿಲಾಯುಗ ನಿವೇಶನಗಳಾಗಿವೆ. ದಕ್ಷಿಣ ಭಾರತದ ನವಶಿಲಾಯುಗದ ಜನ ಪಶುಪಾಲಕರಾಗಿದ್ದರು. ಅಲ್ಲಿ ದನ, ಕುರಿ, ಮೇಕೆಗಳನ್ನು ಸಾಕುತ್ತಿದ್ದರು. ಈ ನವಶಿಲಾಯುಗದ ಜನರೇ ಮೊಟ್ಟಮೊದಲ ಕೃಷಿಕರು. ಜೋರ್ವೆ, ನೆವಾಸಾ, ದೈಮಬಾದ್, ಪುಣೆ ಜಿಲ್ಲೆಯ ಚಂದೋಳಿ, ಸೋನಾಗಾಂವ್, ಇಮಾಂಗಾಂವ್, ನಾಸಿಕ ಮತ್ತು ಪ್ರಕಾಶನ ನಿವೇಶನಗಳು ಈ ಕಾಲದವು. ತಾಮ್ರಶಿಲಾಯುಗದ ಜನರು ಪಶುಪಾಲನೆ ಮಾಡುತ್ತಿದ್ದರಲ್ಲದೆ, ಕೃಷಿಯನ್ನು ಅರಿತಿದ್ದರು. 'ಹಸು, ಕುರಿ, ಮೇಕೆ, ಹಂದಿ ಮತ್ತು ಎಮ್ಮೆಗಳನ್ನು ಸಾಕುತ್ತಿದ್ದರು. ಜಿಂಕೆಗಳನ್ನು ಬೇಟೆಯಾಡುತ್ತಿದ್ದರು. ಕೆಲವೆಡೆ ಒಂಟೆಗಳ ಅವಶೇಷಗಳೂ ದೊರೆತಿವೆ'.[೩೯] ಕುದುರೆ, ಕತ್ತೆ, ಪರಿಚಯದ ಬಗ್ಗೆ ವಿವರಗಳಿದ್ದರೂ ಉಪಯೋಗಪಿತ್ತೆಂಬುದು ತಿಳಿದಿಲ್ಲ. ಅವು ಮಹಾರಾಷ್ಟ್ರದ ನರ್ಮದಾ ತೀರದಲ್ಲಿನ ನವದಾತೋಲಿಯಲ್ಲಿದ್ದು, ಮೀನು ಹಿಡಿಯುವುದೇ ಅಲ್ಲಿ ಪ್ರಧಾನವಾಗಿತ್ತು.

ಒಟ್ಟಾರೆ ಆದಿಕಾಲದ ಮಾನವನು ಕಾಡಿನಲ್ಲಿ ವಾಸಿಸುತ್ತಿದ್ದು, ಪ್ರಾಣಿಗಳಂತೆಯೇ ಕಾಡಿನಲ್ಲಿ ದೊರೆಯುತ್ತಿದ್ದ ಗೆಡ್ಡೆ-ಗೆಣಸುಗಳನ್ನು, ಹಣ್ಣುಗಳನ್ನಲ್ಲದೆ, ಬೇಟೆಯಾಡಿದ ಪ್ರಾಣಿಗಳ ಹಸಿಮಾಂಸವನ್ನು ತಿನ್ನುತ್ತಾ, ಒಂದೆಡೆಯಿಂದ ಮತ್ತೊಂದೆಡೆಗೆ ವಲಸೆ ಜೀವನ ಸಾಗಿಸಿದ. ಬೇಟೆಯಾಡಿ ಪ್ರಾಣಿಗಳ ಚರ್ಮದಿಂದ ಶರೀರವನ್ನು ಮುಚ್ಚಿಕೊಳ್ಳಲು ತಯಾರಾದ. ದೇಹರಕ್ಷಣೆಗೆ ಆಯುಧಗಳನ್ನು ಬಳಸಿಕೊಂಡ. ಗುಹೆಯಲ್ಲಿ ವಾಸಿಸುವಾಗ ಗೆಡ್ಡೆ-ಗೆಣಸು, ಬೇಟೆ, ಮೀನುಗಾರಿಕೆಯಲ್ಲಿ ಪರಿವರ್ತನೆ ಕಂಡುಬಂತು.

ಸಿಂಧೂಬಯಲಿನ ನಾಗರಿಕತೆ

ಭಾರತದ ನಾಗರಿಕತೆಯ ತೊಟ್ಟಿಲಾದ ಸಿಂಧೂಕಣಿವೆಯಲ್ಲಿ ಫಲವತ್ತಾದ ಭೂಮಿ, ನೀರಿನ ಸೌಕರ್ಯ, ಸಸ್ಯವರ್ಗ, ವಾಯುಗುಣ ಇದ್ದುದರಿಂದ ಹರಪ್ಪ ಮತ್ತು ಮೆಹಂಜೋದಾರೊ ನಗರಗಳು ಶ್ರೀಮಂತ ಸಂಸ್ಕೃತಿ ಮತ್ತು ನಾಗರಿಕ ನೆಲೆಗಳಾಗಿದ್ದವು. ಈ ಕಾಲದಲ್ಲಿ ದನಕರುಗಳ ಮಾಂಸ, ಮೀನು, ಕಾಯಿಪಲ್ಯ, ಹಣ್ಣು, ಹಾಲು, ತುಪ್ಪಗಳನ್ನು ತಿನ್ನುತ್ತಿದ್ದರು. ಹತ್ತಿಯಿಂದ ವಿವಿಧ ಬಟ್ಟೆ ಧರಿಸುತ್ತಿದ್ದರು. 'ಕಾಡಿನಲ್ಲಿ ಅಲೆಯುತ್ತಿದ್ದ ಹಸು, ಎತ್ತು, ಎಮ್ಮೆ, ಕುದುರೆ, ಕುರಿ, ಆಡು, ಕೋಳಿ, ನಾಯಿ, ಹಂದಿ, ಒಂಟೆ ಮತ್ತು ಆನೆಗಳನ್ನು ಪಳಗಿಸಿ, ಅವುಗಳಿಂದ ನಾನಾ ಪ್ರಯೋಜನಗಳನ್ನು ಪಡೆಯುತ್ತಿದ್ದರು.[೪೦] ಹರಪ್ಪಾ ಸಂಸ್ಕೃತಿಯಲ್ಲಿ ಜನರು ವಿರಾಮಕಾಲವನ್ನು ಮೀನುಹಿಡಿಯುವುದು, ಬೇಟೆಯಾಡುವುದರಲ್ಲಿ ಕಳೆಯುತ್ತಿದ್ದರು. ಆದರೂ ಕೃಷಿ, ಪಶುಪಾಲನೆ ಪ್ರಧಾನವಾಗಿ ಸಿಂಧೂ ಜನರ ವೃತ್ತಿಯಾಗಿತ್ತು.

ಹರಪ್ಪಾದ ಜನ ಭಾಗಶಃ ಕೃಷಿ ಮತ್ತು ಬಹುಮಟ್ಟಿಗೆ ಬೇಟೆಯಿಂದ ಬದುಕುತ್ತಿದ್ದರು. ತಾಮ್ರ ಉಪಕರಣಗಳಾದ ಉಂಗುರಗಳು, ಬಾ(ಳ)ಚಿ, ಕೊಡಲಿ, ಕತ್ತಿ, ಈಟಿ, ಗಾಳ, ಅಥವಾ ಮೀನು ಭರ್ಜಿ, ಈಟಿಮೊನೆಗಳು, ಮನುಷ್ಯಾಕಾರದ ಬೊಂಬೆಗಳು ಮುಂತಾದ ಉಪಕರಣಗಳು ಮೀನುಗಾರಿಕೆ, ಬೇಟೆ, ಕೃಷಿ ಕಸುಬುಗಳಿಗೆ ನೆರವಾಗಿದ್ದವು. ಪಶುಪಾಲನೆಯಿಂದಲೇ ಬೇಸಾಯ ಮಾಡುವ ವಿಧಾನವನ್ನು ಮಾನವ ಕಲಿತದ್ದು ಶ್ಲಾಘನೀಯ.

ಸಿಂಧೂ ಸಂಸ್ಕೃತಿಯಲ್ಲಿ ಕೃಷಿ ಮತ್ತು ಪಶುಪಾಲನೆ ಪ್ರಮುಖವಾಗಿರಲು ಸಮೃದ್ಧಿ ನೆಲ - ಜಲವೇ ಕಾರಣ. ಒಂಟೆ, ಆನೆ, ದನ, ಎತ್ತು, ಎಮ್ಮೆ, ಕುರಿ ಮತ್ತು ಮೇಕೆಗಳನ್ನು ಸಾಕುತ್ತಿದ್ದರು. ಹಾಗೂ ಹಂದಿಗಳನ್ನು ಪಳಗಿಸಿಕೊಂಡು, ಗೂಳಿ, ಬೆಕ್ಕು, ನಾಯಿಗಳನ್ನು ಸಾಕುತ್ತಿದ್ದರು. ಇಲ್ಲಿ ಕುದುರೆ ಕುರುಹುಗಳು ದೊರೆತಿವೆ. ಕಾಡು ಪ್ರಾಣಿಗಳಾದ ಹುಲಿ, ಆನೆ, ಘೇಂಡಾಮೃಗ, ಕೋತಿ, ಕಾಡೆಮ್ಮೆ, ಜಿಂಕೆ ಜನರಿಗೆ ಪರಿಚಯವಿದ್ದವು. ಉಪ ಸಿಂಧುಸಂಸ್ಕೃತಿಗಳು ತಾಮ್ರಶಿಲಾ ಸಂಸ್ಕೃತಿಗಳಾಗಿದ್ದು, ಕಲ್ಲು ಹಾಗೂ ತಾಮ್ರದ ಆಯುಧ ಇತರ ಹತಾರಗಳನ್ನು ಬಳಸುತ್ತಿದ್ದರು. ಕೊಡಲಿ, ಉಳಿ, ಚಾಕು, ಬಳೆ, ಡೊಂಕು ಕತ್ತಿ, ಮೀನಿನ ಗಾಳಗಳು, ಈಟಿಮೊನೆ ಮೊದಲಾದವುಗಳನ್ನು ಉಪಯೋಗಿಸುತ್ತಿದ್ದರು. ಇವುಗಳ ನೆರವಿನಿಂದ ಈ ಜನರು ಕೃಷಿ, ಪಶುಪಾಲನೆ, ಬೇಟೆ ಮತ್ತು ಮೀನುಗಾರಿಕೆಗಳಲ್ಲಿ ಬದುಕುತ್ತಿದ್ದರು. ಸಿಂಧೂ ಜನರು ಬೇಟೆ ಮತ್ತು ರಥದ ಓಟದಲ್ಲಿ ಹೆಚ್ಚಾಗಿ ಆಸಕ್ತಿ ತೋರಿಸಿರಲಿಲ್ಲ ಮತ್ತು ಬಿಲ್ಲಿಗೆ ಬಾಣ ಏರಿಸುವುದು ಹೆಚ್ಚಾಗಿ ಕಂಡುಬರುವುದಿಲ್ಲ. ಇವರು ಗೂಳಿಗಳನ್ನು ಸಾಕುತ್ತಿದ್ದರು. ಹೀಗಾಗಿ ಬೇಟೆಯ ಸ್ಥಾನ ಕಡಿಮೆ ಇದ್ದು, ಕೃಷಿ ಮತ್ತು ಪಶುಸಂಗೋಪನೆ ರೂಢಿಯಲ್ಲಿದ್ದಿರಬೇಕು. ದ್ರಾವಿಡರೇ ಸಿಂಧೂಬಯಲಿನ ಮೂಲನಿವಾಸಿಗಳೆಂದು ಡಾ.ಜೆ.ಹೆಚ್.ಹಟ್ಟನ್ ಹೇಳುತ್ತಾರೆ. ಹೀಗಾಗಿ ಇವರು ಬೇಟೆ ಜೊತೆಗೆ ಕೃಷಿಯನ್ನು ಅವಲಂಬಿಸಿದ ಬಗ್ಗೆ ತಿಳಿದುಬರುತ್ತದೆ.

ವೇದಗಳ ಕಾಲ ಅಥವಾ ಆರ್ಯರ ಸಂಸ್ಕೃತಿ

ಋಗ್ವೇದದಲ್ಲಿ ಯುದ್ಧಕ್ಕೆ 'ಗವಿಷ್ಠಿ' ಎಂದು, ಹಸುಗಳನ್ನು ಹುಡುಕುವುದೆಂದು ಕರೆದರು. ಅಂದು ಗೋವುಗಳ ಸಂಪತ್ತೇ ಪ್ರಧಾನವಾಗಿತ್ತು. ಹುಲ್ಲುಗಾವಲು(ಗೋಮಾಳ)ಗಳ ಅಧಿಕಾರಿಗೆ ವ್ರಜಪತಿ ಎಂಬ ಹೆಸರಿತ್ತು. ಈ ಕಾಲದಲ್ಲಿ ಅರ್ಥವ್ಯವಸ್ಥೆಯ ಮುಖ್ಯ ಆಧಾರ ಪಶುಪಾಲನೆಯಾಗಿತ್ತು. ಉತ್ತರ ವೇದಕಾಲದಲ್ಲಿ ಸಾಮಾನ್ಯ ಜನರು ವೈಶ್ಯವರ್ಣದವರು. ಅವರಿಗೆ ಕೃಷಿ, ಪಶುಪಾಲನೆ ಉತ್ಪಾದನೆ ಕ್ರಿಯೆಗಳಲ್ಲದೆ, ಕುಶಲ ಕೈಗಾರಿಕೆಗಳು ವಹಿಸಲ್ಪಟ್ಟವು.

ಋಗ್ವೇದ ಕಾಲದಲ್ಲಿ ಪಶುಪಾಲನೆಯು ಆರ್ಯರ ಪ್ರಮುಖ ವೃತ್ತಿಯಾಗಿರಲು ಕಾರಣ ಸಮೃದ್ಧವಾದ ಬಯಲು, ಹುಲ್ಲು, ನೀರು ದೊರೆಯುತ್ತಿತ್ತು ಮತ್ತು ಆರ್ಥಿಕ ವಹಿವಾಟಿಗೆ ಅನುಕೂಲವಾಗಿತ್ತು. 'ಅಂತಿಮ ವೇದಗಳ ಕಾಲದಲ್ಲಿ ಪಶುಪಾಲನೆಯ ದೇವತೆಯಾದ ಪೂಷನ್' ಈಗ ಶೂದ್ರರ ದೇವತೆಯಾಗಿದೆ.[೪೧] ಯಜ್ಞದಲ್ಲಿ ಪ್ರಾಣಬಲಿ, ಗೋಸಂಪತ್ತಿನ ನಾಶ, ವೇದ ಕಾಲದಲ್ಲಿ ಅಧಿಕವಾಗಿತ್ತು. ಆರ್ಯರಿಗೆ ಹಸು ಪವಿತ್ರ. ಗೋಗ್ರಹಣ, ಗೋಪಾಲ, ಗವಿಷ್ಠಿ, ಗೋಹತ್ಯೆ ಮೊದಲಾದ ಲಕ್ಷಣಗಳಿದ್ದವು. ಕ್ರಿ.ಪೂ.೪೦೦೦ ವೇಳೆಗೆ ಯುರೋಪ್ ಮತ್ತು ಏಷ್ಯಾಗಳಲ್ಲಿ ಮಾನವನ ಬಣಗಳು ಉದಯಿಸಿ ವಾಸಿಸತೊಡಗಿದವು. ಅವರಲ್ಲಿ ಆರ್ಯರು ಪ್ರಮುಖರು. ಇವರು ಪಶುಪಾಲನೆ, ಸ್ವಲ್ಪ ವ್ಯವಸಾಯ ಅವರ ಕಸುಬುಗಳಾಗಿದ್ದುದ್ದರಿಂದ ಉತ್ತಮವಾದ ಜೀವನಕ್ಕೆ ಹಾತೊರೆದು ಹುಲ್ಲು - ನೀರು ಸಮೃದ್ಧಿಯಾಗಿರುವೆಡೆಗಳನ್ನು ಹುಡುಕುತ್ತಲೇ ಜನಸಂಖ್ಯೆ ಹೆಚ್ಚಾಗಿಯೋ, ಪರಸ್ಪರ ಕಲಹದಿಂದಲೋ, ಪಾಳೆಯಗಾರರ ಒತ್ತಡದಿಂದಲೋ, ಇವರು ತಮ್ಮ ಜನ್ಮಭೂಮಿಯನ್ನು ತ್ಯಜಿಸಿ , ಚಿಕ್ಕ ಗುಂಪುಗಳಾಗಿ ಹೊರಗೆ ಹೊರಟು ಪಶ್ಚಿಮದಲ್ಲಿ ಭೂಮಧ್ಯಸಮುದ್ರದವರೆಗೂ, ಪೂರ್ವದಲ್ಲಿ ಮಂಗೋಲಿಯಾದ ಹುಲ್ಲುಗಾವಲಿನವರೆಗೂ ವಲಸೆ ಹೋಗಲಾರಂಭಿಸಿದರು.[೪೨] ಹೀಗೆ ಭಾರತದಲ್ಲಿ ಸಪ್ತಸಿಂಧುವಿನ ನಂತರ ಆರ್ಯರು ಗಂಗಾಬಯಲಿನಲ್ಲಿ ನೆಲಸತೊಡಗಿದರು.

ಆರ್ಯರು ಮೊದಲು ಇತರ ಜನರನ್ನು ಅನಾರ್ಯ, ಅಸುರ, ದಾಸ, ದಸ್ಯು ಕಪ್ಪುವರ್ಣ ಎಂದುಕರೆದು, ತಾವೇ ಶ್ರೇಷ್ಠರೆಂಬ ಗರ್ವದಿಂದ, ಅವರನ್ನು ಉದಾಸೀನವಾಗಿ ನೋಡುತ್ತಿದ್ದರು. ಆರ್ಯರು ಸದಾ ತಪಸ್ಸು, ಯಜ್ಞಯಾಗಗಳಲ್ಲಿ ನಿರತರಾಗಿದ್ದರೂ, ಲೌಕಿಕ ವ್ಯವಹಾರಗಳಿಂದ ವಿಮುಖರಾಗಿರಲಿಲ್ಲ. ಅವರು ಬೇಟೆ, ಯುದ್ಧಗಳಲ್ಲಿ ಅಪೇಕ್ಷೆಯುಳ್ಳ ಧೀರ, ಸಾಹಸಿ, ಜನರಾಗಿದ್ದರು. ಹಾಗೆಯೇ ಅವರ ಜೀವನ ಸುಲಭ, ಸರಳ, ಗಂಭೀರ ಮತ್ತು ಉಲ್ಲಾಸಕರವಾಗಿದ್ದಿತು. ಅನಾರ್ಯ ಎಂದರೆ ದ್ರಾವಿಡರು. ಈ ಅನಾರ್ಯರು ಪಟ್ಟಣಗಳನ್ನು ಕೋಟೆಗಳನ್ನು ಕಟ್ಟಿ ಅವುಗಳನ್ನು ಪುರಗಳೆಂದು ಕರೆದರು. ಪುರಗಳನ್ನು ನಾಶ ಮಾಡುವ ದೇವತೆ ಇಂದ್ರನನ್ನು ಪುರಂಧರ ಎನ್ನುತ್ತಿದ್ದರು. ಆರ್ಯರಿಗೂ ದ್ರಾವಿಡರಿಗೂ ಆಗಾಗ ಯುದ್ಧಗಳಾಗುತ್ತಿದ್ದವು.

ಕುಲಗಳ ಗುಂಪು 'ಹಳ್ಳಿ' (ಗ್ರಾಮ), ಹಳ್ಳಿಗಳ ಗುಂಪು 'ವಿಷ್', ವಿಷ್‌ಗಳ ಗುಂಪು 'ಜನ' ಎಂದು ಕರೆದರು. ಈ ಜನಗಳೆಲ್ಲರ ಮುಖ್ಯಸ್ಥನೇ ರಾಜನ್. ಜನಗಳ ಗುಂಪು ಗಣ, ಗಣಗಳ ಗುಂಪು ರಾಷ್ಟ್ರ. ರಾಷ್ಟ್ರದ ಮುಖ್ಯಸ್ಥನೇ ಸಾಮ್ರಾಟ ಕ್ಷತ್ರಿಯ ಮುಖ್ಯಸ್ಥನಾದ ರಾಜನು ವೀರ, ಬಲಿಷ್ಠ, ತೇಜಸ್ವಿ ಆಗಿರುತ್ತಿದ್ದ. ಬೇಟೆಯಲ್ಲಿ ಅಗ್ರೇಸರನಾಯಕ, ಯುದ್ಧದಲ್ಲಿ ದಳಪತಿ ಆಗಿರುತ್ತಿದ್ದ. ರಾಜನಿಗೆ ದುರ್ಗ, ಅರಮನೆ, ಸಿಂಹಾಸನ, ಕಿರೀಟ, ಮಂತ್ರಿ ಇರಲಿಲ್ಲ. ಇತರರಂತೆ ಆತನೂ ಇರುತ್ತಿದ್ದನು. ಆದರೆ, ಬೇಟೆ, ಯುದ್ಧದ ಕೊಳ್ಳೆ, ಇವುಗಳಲ್ಲಿ ಆತನಿಗೆ ಇತರರಿಗಿಂತ ಒಂದು ಪಾಲು ಹೆಚ್ಚಾಗಿ ಸಿಗುತ್ತಿತ್ತು. ಆದಿಕಾಲದಲ್ಲಿ ಬೇಟೆಗಾಗಿ ಬಳಸುತ್ತಿದ್ದ ಬಿಲ್ಲು, ಬಾಣ, ಕತ್ತಿ, ಕಠಾರಿ, ಕೊಡಲಿ, ಈಟಿ, ಗದೆ, ಅಗ್ನಿಚಕ್ರ, ಇವುಗಳು ಯುದ್ಧದಲ್ಲಿ ಆಯುಧಗಳಾಗಿ ಉಪಯೋಗಿಸಲ್ಪಡುತ್ತಿದ್ದವು.

ವೇದಕಾಲದ ಜನಜೀವನವು ವಿಚಿತ್ರವಾಗಿತ್ತು. ಮನೆ, ಕುಲ, ಕುಟುಂಬವು ಸಮಾಜದ ಅಡಿಗಲ್ಲಾಗಿ, ಗ್ರಾಮವಾಸಿಗಳಾದ ಇವರಿಗೆ ನಗರದ ಸೋಂಕು ಹಿಡಿಸಿರಲಿಲ್ಲ. ಇವರದು ಅವಿಭಕ್ತ ಕುಟುಂಬವಾಗಿತ್ತು. ತಂದೆಯ ಆಜ್ಞೆಗೆ ಬದ್ಧರಾಗಿ, ಉಳಿದ ಗಂಡಸರು ಬೇಟೆ, ಪಶುಪಾಲನೆ, ಕಾಡಿನಿಂದ ಹುಲ್ಲು, ಸೌದೆ ತರುವುದು ಮುಂತಾದ ಮನೆಯ ಹೊರಗಿನ ಕೆಲಸವನ್ನು ಮಾಡುತ್ತಿದ್ದರು. ಸ್ವಚ್ಛತೆ, ಸದಸ್ಯರ ಸುಖ ಸೌಕರ್ಯ, ನೂಲುವುದು, ಹಾಲು

ಕರೆಯವುದು, ಅಗ್ನಿಕಾರ್ಯಕ್ಕೆ ಅಣಿ ಮಾಡುವುದು ಮುಂತಾದ ಮನೆಯೊಳಗಿನ ಕಾರ್ಯಗಳನ್ನು ಹೆಂಗಸರು ಮಾಡುತ್ತಿದ್ದರು.

ಪಶುಪಾಲನೆ ವೇದಕಾಲದಲ್ಲಿ ಇತರ ಕುಲ ಕಸುಬುಗಳಿಗಿಂತ ಪ್ರಧಾನವಾಗಿತ್ತು. ಗೋರಕ್ಷಣೆ, ವ್ಯವಸಾಯ ಆರ್ಯರಿಗೆ ಮುಖ್ಯವಾಗಿದ್ದಿತು. ಮಾಂಸದ ಜೊತೆಗೆ ಗೋಧಿ, ಹಾಲು, ಬೆಣ್ಣೆ, ತುಪ್ಪ, ಮೊಸರು, ವಿವಿಧ ಕಾಯಿ ಪಲ್ಯ ಹಣ್ಣು-ಹಂಪಲು ಮುಂತಾದ ಸಾತ್ವಿಕ ಆಹಾರವನ್ನೇ ಉಪಯೋಗಿಸುತ್ತಿದ್ದರು.

ಆರ್ಯರು ತೇಜಸ್ವಿ, ಉಲ್ಲಾಸಿ, ಪೌರುಷ ಸ್ವಭಾವದವರು. ಎಲ್ಲರೂ ಧನಸ್ಸು, ಬಾಣ, ಗದೆ, ಖಡ್ಗಗಳನ್ನು ಉಪಯೋಗಿಸುವುದು ಕಲಿತಿದ್ದರು. ಓಡುವುದು, ಹಾರುವುದು, ಈಜುವುದು, ಗುರಿಯಿಡುವುದು, ಕುಸ್ತಿಮಾಡುವುದು, ಪ್ರಾಣಿಗಳಬೇಟೆ, ಪಗಡೆ, ಜೂಜು, ಚದುರಂಗ, ರಥ-ಕುದುರೆಗಳ ಪಂದ್ಯ, ಗಾಯನ, ನರ್ತನ ಮುಂತಾದ ಶಕ್ತಿಪ್ರದರ್ಶನಗಳು ಪ್ರಿಯವಾದ ವಿನೋದ-ವಿಹಾರಗಳಾಗಿದ್ದು, ಜನರಿಗೆ ಮನರಂಜನೆಯನ್ನು ಒದಗಿಸುತ್ತಿದ್ದವು. 'ಆರ್ಯ' ಎನ್ನುವುದು ವೃತ್ತಿಪದವಾಗಿದ್ದು, ಕೃಷಿಮಾಡುವವನು ಎಂದರ್ಥ. ವೇದಗಳ ಕಾಲದಲ್ಲಿ ಪಶುಪಾಲನೆಯೂ ಕೃಷಿಯಂತೆಯೇ ಮುಖ್ಯ ಉದ್ಯೋಗವಾಗಿದ್ದಿತು. ಹಸು, ಎತ್ತು, ಕುದುರೆ, ಆಡು, ಕುರಿ, ಕತ್ತೆ, ನಾಯಿಗಳನ್ನು ಸಾಕುತ್ತಿದ್ದರು. ಹಾಲು ಕೊಡುವವ, ಉಳುವ ಎತ್ತನ್ನು ನೀಡುವ, ಹಸುವನ್ನು ಪವಿತ್ರ ಪ್ರಾಣಿ ಎಂದು ಗೌರವಿಸಿ ಅದಕ್ಕೆ ಪೂಜ್ಯ ಸ್ಥಾನ ಕೊಡುತ್ತಿದ್ದರು. ಅಂದು ಬೇಟೆ, ಯುದ್ಧ, ವ್ಯವಸಾಯ, ಪಶುಪಾಲನೆ, ಈ ನಾಲ್ಕು ಉದ್ಯೋಗಗಳಾಗಿದ್ದರೂ, ಇತರ ಕಸುಬುಗಳೂ ರೂಢಿಯಲ್ಲಿದ್ದುವು. ಅವುಗಳೆಂದರೆ ಬಡಗಿ, ಕಮ್ಮಾರ, ಅಕ್ಕಸಾಲಿಗ, ನೇಕಾರ, ಉಪ್ಪಾರ, ನಾಪಿತ, ಚರ್ಮಹದಮಾಡುವವ, ನಟ, ಇವರೆಲ್ಲ ಆ ಕಾಲದ ಮುಖ್ಯ ಕಸುಬುದಾರರು. ಯುದ್ಧಕ್ಕಾಗಿ ಬಿಲ್ಲು, ಬಾಣ, ಕತ್ತಿಗಳನ್ನು ಮನುಷ್ಯರು ಹಾಗೂ ಸಾಮಾನುಗಳನ್ನು ಸಾಗಿಸಲು ಗಾಡಿ, ರಥ,ದೋಣಿಗಳನ್ನು ತಯಾರಿಸುತ್ತಿದ್ದರು. ಅವರು ತಯಾರಿಸಿದ ಗಾಡಿಗಳೇ ಕ್ರಮೇಣ ರಥಗಳಾಗಿ ಪರಿವರ್ತನೆಗೊಂಡು ವಿವಿಧ ರೀತಿಯಲ್ಲಿ ಸಹಾಯಕವಾಗಿರಬೇಕು. ಭಾರತಕ್ಕೆ ರಥ ಬಂದುದು ಆರ್ಯರಿಂದ. ವೇದಗಳ ಕಾಲದಲ್ಲಿ ಮಾಂಸಾಹಾರವೂ ರೂಢಿಯಲ್ಲಿದ್ದಿತು. ಸೋಮ ಮತ್ತು ಸುರ ಎಂಬ ಪಾನೀಯಗಳು ಜನ ಬಳಕೆಯಲ್ಲಿದ್ದವು. ಜೂಜಾಟ, ರಥದ ಓಟಸ್ಪರ್ಧೆ ಮತ್ತು ಬೇಟೆ ಪುರುಷರ ಮುಖ್ಯ ಕ್ರೀಡೆಗಳಾಗಿದ್ದವು. ಆರ್ಯರು ಸಿಂಧೂನದಿಯ ಪ್ರದೇಶಗಳನ್ನು ಅಲ್ಲಿದ್ದ ಜನರನ್ನು ದಾಸ ಅಥವಾ ದಸ್ಯುಗಳೆಂದು ಕರೆದರು. ಅಂತಿಮ ವೇದಗಳ ಕಾಲದಲ್ಲಿ ಅನಾರ್ಯ ಬುಡಕಟ್ಟುಗಳು ಬೇಟೆಯನ್ನು, ಪಶುಪಾಲನೆ -ಕೃಷಿಯನ್ನು ಅವಲಂಬಿಸಿದ್ದವು.

ಆರ್ಯರು ಸಕಲ ವಿದ್ಯೆಗಳಲ್ಲಿ ಪ್ರವೀಣರಾಗಿದ್ದರು. ಅವರು ಯುದ್ಧಕ್ಕಾಗಿ ಬಿಲ್ಲು, ಬಾಣ, ಕತ್ತಿಗಳನ್ನು , ಮನುಷ್ಯರು ಹಾಗೂ ಸಾಮಾನುಗಳನ್ನು ಸಾಗಿಸಲು ಗಾಡಿ, ರಥ, ದೋಣಿಗಳನ್ನು ತಯಾರಿಸುತ್ತಿದ್ದರು ಎಂದಾಗ ಬೇಟೆಯ ವಿಕಾಸ, ಸ್ಥಿತ್ಯಂತರ ಪ್ರಕ್ರಿಯೆ ಕಂಡುಬರುತ್ತದೆ.

ಮಹಾಕಾವ್ಯ ಮತ್ತು ಐತಿಹಾಸಿಕ ರಾಜವಂಶಗಳ ಕಾಲ

ಮಹಾಕಾವ್ಯಗಳ ಕಾಲವು ಕ್ರಿ.ಪೂ.೧೪೦೦ರಿಂದ ೮೦೦ವರೆಗಿತ್ತು. 'ರಾಜಕುಮಾರರೆಲ್ಲರೂ ಶಸ್ತ್ರಾಸ್ತ್ರಗಳಲ್ಲಿ ಯುದ್ಧವಿದ್ಯೆಯಲ್ಲಿ, ರಾಜನೀತಿಗಳಲ್ಲಿ ಪರಿಣಿತರಾಗಬೇಕಾಗಿದ್ದುದ್ದರಿಂದ ಅವರ ಶಿಕ್ಷಣವು ಕಷ್ಟಕರವಾಗಿದ್ದಿತು. ಆಗ ಕೃಷಿ ಮತ್ತು ಪಶುಪಾಲನೆ ಪ್ರಬಲವಾಗಿರುವುದನ್ನು, ರಾಮಾಯಣದಲ್ಲಿ ನೋಡಬಹುದು. ರಾಜನಿಗೆ ಬೇಟೆ ಯುದ್ಧವಿದ್ಯೆಯ ಮಾನದಂಡವಾಗಿತ್ತು.

ರಾಮಾಯಣದ ಪ್ರಕಾರ ರಾಮ, ಸೀತೆ, ಲಕ್ಷ್ಮಣ ವನವಾಸದಲ್ಲಿದ್ದಾಗ, ಪಂಚವಟಿ ಕುಟೀರದ ಬಳಿ ಮಾಯದಂತ ಬಂಗಾರದ ಜಿಂಕೆಯನ್ನು ಕಂಡ ಸೀತೆ ಅದರ ಚರ್ಮಕ್ಕೆ ಆಸೆ ಪಟ್ಟಿದ್ದು ಆ ಕಾಲಕ್ಕೆ ಸಹಜವಾದುದು. ಮತ್ತು ಅವಳಿಗಾಗಿ ರಾಮ ಬೇಟೆಗೆ ಹೋದುದು ಇಡೀ ರಾಮಾಯಣದ ಕಥೆಗೆ ಒಂದು ತಿರುವು ನೀಡಿದ್ದು ಸ್ಪಷ್ಟ.

ಮಹಾಭಾರತದಲ್ಲಿ ಪಾಂಡವರು ವನವಾಸದಲ್ಲಿದ್ದಾಗ ಅರ್ಜುನ ಪಾಶುಪತಾಸ್ತ್ರಕ್ಕಾಗಿ ತಪಸ್ಸು ಮಾಡುತ್ತಾನೆ. ಕೊನೆಗೆ ಮಾಯವರಾಹವನ್ನು ಸಾಯಿಸುವುದು ತಾನು - ತಾನೆಂದು ಬಲ್ಲಿನಿಂದ ಸಾಯಿಸಿದ್ದೆಂದು ಶಿವ - ಅರ್ಜುನರ ಮಲ್ಲಯುದ್ಧ ಜರುಗಿ ಅನೇಕ ವಿಧದಲ್ಲಿ ಅರ್ಜುನ ಹತಾಶನಾಗಿ ಕೊನೆಗೆ ಶಿವನೆಂದು ನಮಸ್ಕರಿಸಿದಾಗ ಶಿವ ಮತ್ತು ಪಾರ್ವತಿಯರು ಅವನಿಗೆ 'ಪಾಶುಪತಾಸ್ತ್ರ' ಮತ್ತು 'ಅಂಜನಾಸ್ತ್ರ'ವನ್ನು ನೀಡುತ್ತಾರೆ. ಇವೆರೆಡು ಸಂದರ್ಭಗಳು ಈಗಾಗಲೇ ಕೃತಿಗಳಲ್ಲಿ ಉಲ್ಲೇಖಗೊಂಡಿವೆ.

ಕ್ರಿ.ಪೂ. ೧೦೦೦-೬೦೦ರ ಕಾಲದ ದಖನ್ನಿನ ಪೂರ್ವತೀರದಲ್ಲಿ ಕಳಿಂಗ, ಚೋಳ, ಪಾಂಡ್ಯ ರಾಜ್ಯಗಳೂ, ದಕ್ಷಿಣಾಗ್ರದಲ್ಲಿ ಚೇರ ಅಥವಾ ಕೇರಳವೂ ಇದ್ದುವು. ಪ್ರಸ್ಥಭೂಮಿಯಲ್ಲಿ ಶಬರ, ಪುಂಡ, ಪುಳಿಂದ, ನಿಷಾದ ಜನರು ಪ್ರಬಲರಾಗಿದ್ದರು. ಈ ನಾಲ್ಕು ಜಾತಿಗಳು ವೃತ್ತಿಯಲ್ಲಿ ಬೇಟೆಗಾರಿಕೆಯನ್ನು ಅವಲಂಬಿಸಿ ವಿಕಾಸ ಹೊಂದಿ ರಾಜಕೀಯ ಚುಕ್ಕಾಣಿ ಹಿಡಿದಂತವು. ಹೀಗೆ ಛಪ್ಪನ್ನ ಐವತ್ತಾರು ದೇಶಗಳಲ್ಲಿ 'ಶಬರನಾಡು' ಒಂದು.

ಕ್ರಿ.ಪೂ. ೬ನೇ ಶತಮಾನದಲ್ಲಿ ಹೊಸ ಮತ ಧರ್ಮಗಳು ಉದಯವಾಗುವ ಸಂದರ್ಭದಲ್ಲಿ ಮಾತ್ರ ಹೆಚ್ಚು ಸಂಖ್ಯೆಯ ಗೋವುಗಳಿದ್ದವು. ಆಗ ಯಜ್ಞಯಾಗಗಳಲ್ಲಿ ಬಹು ಸಂಖ್ಯೆಯಲ್ಲಿ ದನಗಳನ್ನು ಕೊಲ್ಲಲಾಗುತ್ತಿತ್ತು. ಪೂರ್ವದ ಅಂಚಿನಲ್ಲಿ ನೆಲಸಿದ್ದ ಆದಿವಾಸಿಗಳು ಸಹ ಆಹಾರಕ್ಕಾಗಿ ದನಗಳನ್ನು ಕೊಲ್ಲುತ್ತಿದ್ದರು.

ಜೈನಧರ್ಮದ ಪ್ರಕಾರ 'ಪ್ರಾಣಿಗಳನ್ನು ಕೊಂದ ಅಪರಾಧಕ್ಕೆ ಜೈನರಾಜರು ಮನುಷ್ಯರಿಗೆ ಮರಣದಂಡನೆ ವಿಧಿಸುತ್ತಿದ್ದರು.[೪೩] ಇಲ್ಲಿ ಅಹಿಂಸೆಯನ್ನು ಪರಿ ಜೈನರು ಪ್ರತಿಪಾದಿಸಿದ್ದು ಗಮನಾರ್ಹ. ನಂತರ ಗೌತಮ ಬುದ್ಧನು ಬೌದ್ಧ ಮತದ ತತ್ವಗಳನ್ನು ಹೇಳುವಾಗ:'ಹಿಂಸೆ ಮಾಡಬೇಡ' ಎನ್ನುವ ಮಾತು ಬೇಟೆಯನ್ನು ನಿಯಂತ್ರಿಸಲು ಕಾರಣವಾಯಿತು. ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುತ್ತಿದ್ದ ಕಾಲದಲ್ಲಿ ಈ ಬೋಧನೆ ಅತ್ಯಂತ ಮಹತ್ವದ್ದಾಗಿತ್ತು ಮತ್ತು ಪರಿಣಾಮ ಬೀರಿತಾದರೂ ನಂತರ ಬೇಟೆ ಜನರ ಜೀವನಾವಶ್ಯಕ ವೃತ್ತಿಯಾಗಿ ಬೆಳೆದದ್ದು ತೆರೆದ ಸತ್ಯ.

ಕ್ರಿ.ಪೂ.೧೫೦೦ರಲ್ಲಿ ಎರಡನೇ ಬಾರಿ ಭಾರತದಲ್ಲಿ ನಗರೀಕರಣವಾಗುತ್ತದೆ. ತರುವಾಯ ಕ್ರಿ.ಪೂ. ೧೦೦೦ದಲ್ಲಿ ಅಳಿದು ಹೋದ ನಗರಗಳನ್ನು ಮತ್ತೆ ನಿರ್ಮಿಲಾಯಿತು. ನಗರ, ಬೀದಿ, ಕಾಲುವೆ, ವಸತಿ ಮನೆ, ಆಹಾರ ಪದ್ಧತಿ, ಕ್ರೀಡೆಗಳು, ಹಬ್ಬ-ಆಚರಣೆಗಳ ಮೂಲಕ ಈ ಸಂದರ್ಭದಲ್ಲಿ ಮಾನವನ ಜೀವನ ಹೇಗೆ ಸಾಗುತ್ತಿತ್ತೆಂಬುದನ್ನು ತಿಳಿಯಬೇಕು.

ಬೌದ್ಧಕಾಲೀನ ಸಮಾಜ ವ್ಯವಸ್ಥೆಯಲ್ಲಿ ಕೆಲವು ಬೇಟೆ ಲಕ್ಷಣಗಳನ್ನು ನೋಡಬಹುದು. ಪಾಲಿಗ್ರಂಥಗಳು ಮೂರು ಬಗೆಯ ಹಳ್ಳಿಗಳನ್ನು ನಮೂದಿಸಿವೆ. ಅವುಗಳಲ್ಲಿ ೩ನೆಯದು ಗಡಿ ಗ್ರಾಮಗಳ ಬಗೆಯದು. 'ಇವು ಗ್ರಾಮಾಂತರ ಪ್ರದೇಶಗಳು ಅರಣ್ಯಪ್ರದೇಶಗಳನ್ನು ಕೂಡಿಕೊಳ್ಳುವ ಜಾಗಗಳಲ್ಲಿದ್ದವು. ಅಲ್ಲಿನ ಜನ ಬೇಟೆಗಾರರಾಗಿದ್ದು ಬಹುಮಟ್ಟಿಗೆ ಅರಣ್ಯಗಳಿಂದ ಆಹಾರ ಸಂಗ್ರಹಿಸಿ ಬದುಕುತ್ತಿದ್ದರು.[೪೪] ಕೊನೆಗೆ ಗೌತಮಬುದ್ಧ ಪ್ರಾಣಿ ಬಲಿಯನ್ನು

ಪ್ರಬಲವಾಗಿ ಖಂಡಿಸಿದ್ದನು. ಕ್ರಿ.ಪೂ.೬ ನೇ ಶತಮಾನದಲ್ಲಿ ವಜ್ಜ(ಮ) ರಾಜ್ಯದಲ್ಲಿ ಗಿರಿಜನ ಬುಡಕಟ್ಟುಗಳಿದ್ದವು. ವಜ್ಜಿ, ವಿದೇಹ, ಲಿಚ್ಛವಿ, ಜ್ಞಾತ್ರಿಯ ಪ್ರಮುಖ ಗಣಗಳು ಆಡಳಿತವನ್ನು ಸಂತಾಗಾರದಲ್ಲಿ ನಡೆಸುತ್ತಿದ್ದರು. ಇದರಲ್ಲಿ ಬುಡಕಟ್ಟಿಗೆ ಸೇರಿದವರೆ ಹೆಚ್ಚು. ಮಗಧ ರಾಜ್ಯದ ದೊರೆ ಬಿಂಬಸಾರ ದಕ್ಷಿಣ ಬಿಹಾರದ ಕ್ಷತ್ರಿಯ ಮುಖಂಡನ ಮಗನಾಗಿದ್ದ.

ಮಗಧ ರಾಜ್ಯದ ಏಳಿಗೆಯ ಸಂದರ್ಭದ 'ಸೈನ್ಯ'ದಲ್ಲಿ ರಥ, ಕರಿ, ತುರಗ, ಪದಾತಿಗಳಿದ್ದವು. ಸಿಂಧೂ ನದಿ ಪ್ರಾಂತದಲ್ಲಿ ನೌಕಾಸೈನ್ಯವಿತ್ತು. ಪದಾತಿಗಳು ಉದ್ದನೆಯ ಬಿಲ್ಲು, ಕಬ್ಬಿಣದ, ತಂತಿಯ ಬಾಣ, ಭರ್ಚಿಗಳನ್ನು ಉಪಯೋಗಿಸುತ್ತಿದ್ದರು. ಇಲ್ಲಿಯು ಸಹ ಬೇಟೆಗಾರಿಕೆಯ ಇನ್ನೊಂದು ಹಂತದ ಲಕ್ಷಣವನ್ನು ಕಾಣುತ್ತೇವೆ. ಈ ಕಾಲದಲ್ಲಿ ಸ್ತ್ರೀಯರ ವಿಹಾರಕ್ಕಾಗಿ ಆಟದ ಮೈದಾನ, ಚಿಲುಮೆ, ಹೂ ಗಿಡಗಳಿದ್ದವು. ರಾಜಸ್ತ್ರೀಯರು, ಹಾಡು, ಸಂಗೀತ, ನರ್ತನಗಳಲ್ಲೂ, ಸರದಾರರು ಜೂಜು, ಬೇಟೆ, ಕ್ರೀಡಾಯುದ್ಧಗಳಲ್ಲಿಯೂ ತಮ್ಮ ವಿರಾಮ ಕಾಲವನ್ನು ಕಳೆಯುತ್ತಿದ್ದರು. ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಬೇಟೆಯನ್ನು ನಿಷೇಧಿಸಿದ್ದು, ನೀಚ ವೃತ್ತಿಯೆಂದು ಪರಿಗಣಿಸಿದ್ದಾನೆ.

ಅಲೆಗ್ಸಾಂಡರನು ಕ್ರಿ.ಪೂ.೩೨೭ರಲ್ಲಿ ಹಿಂದೂಕುಷ್ ಪರ್ವತಗಳನ್ನು ದಾಟಿ ಸ್ವಾಟ್ ಮತ್ತು ಬಾಜುರ್ ಕಣಿವೆಯಲ್ಲಿನ ಅನಾಗರಿಕ ಬುಡಕಟ್ಟುಗಳನ್ನು ಹತ್ತಿಕ್ಕುತ್ತಾನೆ. ನಂತರ ಭಾರತದ ಮೇಲೆ ದಂಡಯಾತ್ರೆ ಮಾಡಿ ಹೈಡಸ್‌ಪಸ್ ಯುದ್ಧದಲ್ಲಿ ಪೊರಸನನ್ನು ಸೋಲಿಸಿದನು. ಈ ವಿಜಯದ ನಂತರ ತನ್ನ ದಂಡಯಾತ್ರೆಯನ್ನು ಕೊನೆಗೊಳಿಸದೆ ಚೀನಾಬ್ ಮತ್ತು ರಾವಿ ನದಿಗಳ ಮಧ್ಯ ಭಾಗದಲ್ಲಿ ವಾಸಿಸುತ್ತಿದ್ದ ಬುಡಕಟ್ಟುಗಳನ್ನು ಸೋಲಿಸಿದನು. ಇವನು ಹಿಂದಿರುಗುವ ಸಂದರ್ಭದಲ್ಲಿ ಸೈನ್ಯಕ್ಕೆ ಗಣರಾಜ್ಯ ಬುಡಕಟ್ಟುಗಳಾದ ಸಿಬಾಯ್, ಅಗಲಾಸ್ಸಾ, ಕ್ಷುದ್ರಕರ, ಮಲ್ಲಾರು ಪ್ರಬಲ ವಿರೋಧವನ್ನು ತೋರಿಸಿದರು. ಇವರನ್ನೆಲ್ಲ ಸೋಲಿಸಲು ಅವನು ಯತ್ನಿಸಿದರೂ ಇವರ ಪ್ರಬಲತೆಯಿಂದ ಆಗಲಿಲ್ಲ. ಹೀಗಾಗಿ ಬುಡಕಟ್ಟು ಜನರು ಆಗಲೇ ವಿದೇಶಿಯರನ್ನು ಹತ್ತಿಕ್ಕುವ ಪ್ರಯತ್ನ ಮಾಡಿದ್ದು ಗಮನೀಯ ಸಂಗತಿ. ಪರ್ಶಿಯಾ ಮತ್ತು ಗ್ರೀಕರ ದಂಡಯಾತ್ರೆಯ ಸಮಯದಲ್ಲಿ ಭಾರತೀಯರು ಇರಾನ್ ಸಾಮ್ರಾಜ್ಯದಲ್ಲಿ ಉದ್ಯೋಗಗಳನ್ನು ಪಡೆಯುವ ಅವಕಾಶವಾಯಿತು. ಧನುರ್ವಿದ್ಯೆಯಲ್ಲಿ ಅದ್ವಿತೀಯವಾಗಿ ವೀರ ಬಿಲ್ಲಾಳುಗಳು ಅವರ ಸೇನೆಗೆ ಸೇರಿದರು. ಭಾರತೀಯರ ಬಿಲ್ಲುಗಾರರನ್ನು ಕಂಡು ಗ್ರೀಕರಿಗೆ ಆಶ್ಚರ್ಯವಾಯಿತೆನ್ನಲಾಗಿದೆ.

ಮೌರ್ಯಸಾಮ್ರಾಜ್ಯದ ಸ್ಥಾಪಕನಾದ ಚಂದ್ರಗುಪ್ತಮೌರ್ಯ ಪಂಜಾಬು, ಸಿಂಧು ರಾಜ್ಯಗಳಲ್ಲಿನ ಶೂರರಾದ ಕಾಡು ಜನರ ಸ್ನೇಹವನ್ನು ಸಂಪಾದಿಸಿ ಒಂದು ಸೈನ್ಯವನ್ನು ಕಟ್ಟಿದನು. ಹೀಗೆ ಈ ಕಾಡು ಜನರು ವಿವಿಧ ಕಸಬುಗಳಲ್ಲಿ ನಿರತರಾಗಿರಬೇಕು. ಈ ಚಂದ್ರಗುಪ್ತಮೌರ್ಯನ ಸೈನ್ಯದಲ್ಲಿ 'ಬಿಲ್ಲುಗಾರರಿಂದ ಕೂಡಿದ ೯೦೦೦ ಆನೆ, ಸೈನಿಕರಿಂದ ಕೂಡಿದ ೯೦೦೦ರಥ, ೩೦೦೦ ಕುದುರೆ, ೬ ಲಕ್ಷ ಪದಾತಿಗಳು ಇದ್ದರು'. ಬಿಲ್ಲು, ಬಾಣ, ಚೂರಿ, ಕತ್ತಿ, ಈಟಿ, ಕೊಡಲಿ, ಅಂಕುಶ, ಢಾಲು-ಇವು ಸೈನ್ಯದ ಆಯುಧಗಳು. ಇವನ ಕಾಲದಲ್ಲಿ ದನ ಕಾಯುವವರು ಮತ್ತು ಬೇಟೆಗಾರರು ದನಕರುಗಳನ್ನು ಮೇಯಿಸಿ ಬೆಳೆಯಿಂದ ತುಂಬಿದ ಹೊಲ, ಗದ್ದೆ, ತೋಯಗಳನ್ನು ಮೃಗಪಕ್ಷಿಳಿಂದ ರಕ್ಷಿಸುತ್ತಿದ್ದರು. ಈ ಕೆಲಸಕ್ಕಾಗಿ ಇವರಿಗೆ ಸರ್ಕಾರದಿಂದಲೇ ಧಾನ್ಯ ದೊರಕುತ್ತಿದ್ದಿತು: ಚಂದ್ರಗುಪ್ತಮೌರ್ಯ ಬಾಲ್ಯದಲ್ಲಿ ದನಗಾಹಿಗಳ ಮತ್ತು ಬೇಟೆಗಾರರ ಮಧ್ಯೆ ಬೆಳೆದನು. ಇವನ ಕಾಲದಲ್ಲಿ 'ಬೇಟೆ, ಪಂದ್ಯ, ಕುಸ್ತಿ, ದ್ಯೂತ ಮತ್ತು ಮದ್ಯದ ಅಂಗಡಿಗಳು ಊರ ಹೊರಗೆ ನಿಷ್ಕಲ್ಮಶವಾಗಿ, ಚಿತ್ತಾಕರ್ಷವಾಗಿ ನಡೆಯಬೇಕೆಂದು ರಾಜಾಜ್ಞೆ ಇದ್ದಿತು. ಚಂದ್ರಗುಪ್ತನಿಗೂ ಬೇಟೆಯಲ್ಲಿ ತುಂಬಾ ಆಸಕ್ತಿ ಇದ್ದು, ಆಗಾಗ ರಥಸ್ಪರ್ಧೆ, ಮಲ್ಲಯುದ್ದಗಳನ್ನು ಮಾಡಿಸಿ ನೋಡಿ ಸಂತೋಷಪಡುತ್ತಿದ್ದನು.

ಮೌರ್ಯದೊರೆ ಬಿಂದುಸಾರ (ಕ್ರಿ.ಪೂ.೩೦೦-೨೭೩) ಮೈಸೂರು ಪ್ರದೇಶದ ಚಿತ್ರದುರ್ಗ ಜಿಲ್ಲೆಯವರೆಗೂ ರಾಜ್ಯ ವಿಸ್ತರಿಸಿದ. ಭೋಜ, ರಾಷ್ಟ್ರೀಕ, ಪುಳಿಂದ, ತಿಥೇನಿಕ, ಶಾತವಾಹನ ರಾಷ್ಟ್ರಗಳನ್ನು ಸೋಲಿಸಿ ಪೊಗದಿಯನ್ನು ತೆಗೆದುಕೊಂಡನು. ಈ ಪುಳಿಂದರಾಷ್ಟ್ರ ಬೇಟೆ ಸಮುದಾಯದವರಿಂದ ಕೂಡಿದ್ದು, ರಾಷ್ಟ್ರ ಪ್ರೇಮಕ್ಕಾಗಿ ತನ್ನ ರಾಜ್ಯವನ್ನು ರಕ್ಷಿಸಿಕೊಳ್ಳಲು ಅವಿರತ ಶ್ರಮಿಸಿದ್ದು ಶ್ಲಾಘನೀಯ.

ಕಳಿಂಗ ಯುದ್ಧದ ನಂತರ ಅಪಾರ ನಷ್ಟವನ್ನು ಕಂಡ ಅಶೋಕನು ಪಾಟಲಿಪುತ್ರದಲ್ಲಿ ಪ್ರತಿನಿತ್ಯ ಜರುಗುತ್ತಿದ್ದ ಪ್ರಾಣಿವಧೆಯನ್ನು ನಿಲ್ಲಿಸಿದನಲ್ಲದೆ, ಮಾಂಸಾಹಾರವನ್ನು ಕೈಬಿಡಲು ಕರೆಕೊಟ್ಟ. ರಾಜರು ನಡೆಸುತ್ತಿದ್ದ ಬೇಟೆಯ ಸಂಪ್ರದಾಯವನ್ನು ನಿಲ್ಲಿಸಿ ತನ್ನ ಸಾಮ್ರಾಜ್ಯದಲ್ಲಿ ನಿರ್ದಿಷ್ಟ ದಿವಸಗಳಲ್ಲಿ ಪ್ರಾಣಿವಧೆ ನಿಷೇಧಿಸಿದ್ದುದು ಸ್ಮರಣೀಯ. ಅಶೋಕನು ಸ್ವತಃ ಮಾಂಸಾಹಾರಗಳನ್ನು ತ್ಯಜಿಸಿದನಲ್ಲದೆ, ವಿವಿಧ ಪ್ರಾಣಿಗಳಿಗಾಗಿ ಉಚಿತವಾಗಿ ಚಿಕಿತ್ಸೆ, ಔಷಧಿಗಳ ಆಲಯವನ್ನು ನಿರ್ಮಾಣ ಮಾಡಿಸಿದನು. ಅಂದು ಪ್ರಾಣಿಗಳನ್ನು ಕೊಲ್ಲುವುದು ಅಪರಾಧವೆಂದು ವನಸ್ಪತಿ ಅಧ್ಯಯನ, ಗಿರಿಜನರ ಸುಧಾರಣೆ ಕೈಗೊಂಡಿದ್ದು ಮಹತ್ವದ ಸಂಗತಿ. ಅಶೋಕನು ಶಿಲಾಶಾಸನಗಳಲ್ಲಿ ಪ್ರಾಣಿವಧೆ ಮಾಡಬೇಡಿರಿ, ಅವುಗಳಲ್ಲಿ ದಯೆಯಿಡಿ ಎಂದು ತಿಳಿಸಿದ್ದಾನೆ. ಇದಕ್ಕೆ ಕಳಿಂಗಯುದ್ಧದ ಪ್ರಭಾವವೇ ಕಾರಣ ಎನ್ನಬಹುದು. ನರಹತ್ಯೆಯನ್ನು ಖಂಡಿಸಿ, ಅರಣ್ಯವಾಸಿಗಳನ್ನು ಒಲಿಸಿಕೊಂಡನು. ಇವರ ಮತ್ತು ಪ್ರಾಣಿಗಳ ಕಲ್ಯಾಣಕ್ಕಾಗಿ 'ಅರಣ್ಯ ಜನ ಬಣಗಳನ್ನು ಧರ್ಮದ ದಾರಿ ತುಳಿಯಿರಿ ಎಂದು ಮೇಲಿಂದ ಮೇಲೆ ಹೇಳುತ್ತಿದ್ದ'.[೪೫] ಇವನ ಪ್ರಾಣಿದಯೆ ಬಗ್ಗೆ ಅನೇಕ ಶಾಸನಗಳು ಬೆಳಕು ಚೆಲ್ಲುತ್ತವೆ. ಉದಾ : ಕಂಧಾರ್ ಶಾಸನವು ಬೇಡರು ಹಾಗೂ ಬೆಸ್ತರು ಪ್ರಾಣಿಗಳನ್ನು ಕೊಲ್ಲುವುದನ್ನು ಬಿಟ್ಟರು ಎಂದು ತಿಳಿಸಿ ಅವನ ನೀತಿಯು ಗಳಿಸಿದ ಯಶಸ್ಸನ್ನು ಸೂಚಿಸುತ್ತದೆ.[೪೬]

ಅಶೋಕನ ಶಾಸನಗಳು ದೊರೆತಿರುವ ಧಾಲಿ ಮತ್ತು ಜೌಗುಡಗಳ ೧೯ ಮತ್ತು ೧೩ನೇ ಶಾಸನಗಳಲ್ಲಿ ಕಳಿಂಗಯುದ್ಧದ ವಿವರ, ಗಡಿನಾಡುಗಳ ಬುಡಕಟ್ಟುಗಳ ಬಗೆಗಿನ ನಡವಳಿಕೆಯ ವಿವರಗಳನ್ನು ತಿಳಿಸಲಾಗಿದೆ. ಅವರು ಇತರರೊಂದಿಗೆ ಹೊಂದಿರುವ ಸಂಬಂಧ, ಸೌಜನ್ಯಗಳ ಪ್ರತೀಕವಾಗಿದೆ ಈ ಶಾಸನಗಳು. ಕೆಲವರು ಅಶೋಕನು ಪ್ರಾಣಿವಧೆಯನ್ನು ನಿಷೇಧಿಸಿದುದು ಮೌರ್ಯ ಸಾಮ್ರಾಜ್ಯದ ಪತನಕ್ಕೆ ಕಾರಣವಾಯಿತೆಂದು ವಾದಿಸಿದ್ದಾರೆ. ಅಶೋಕನ 'ಅಹಿಂಸಾ ನೀತಿ' ಜನರ ಮತ್ತು ಸೈನಿಕರ ಶಕ್ತಿ ಸಾಮರ್ಥ್ಯಗಳನ್ನು ಮತ್ತು ಶೌರ್ಯವನ್ನು ನಾಶಪಡಿಸಿತು. ಭಾರತವೆಲ್ಲವೂ ಶಾಂತಿಪ್ರಿಯ ಜನತೆಯ ಮತ್ತು ಸಸ್ಯಹಾರಿಗಳ ನಾಡಾಗಿ ಪರಿವರ್ತಿತವಾಯಿತು.[೪೭] ಈ ಮಾತನ್ನು ಸಂಪೂರ್ಣವಾಗಿ ನಂಬುವುದು ಅಸಾಧ್ಯ. ಏಕೆಂದರೆ ಒಟ್ಟೊಟ್ಟಿಗೆ ಬೆಳೆದ ಬುಡಕಟ್ಟು ಸಮುದಾಯಗಳು ಮಾಂಸಹಾರವನ್ನು ಏಕಕಾಲಕ್ಕೆ ಕೈಬಿಡಲಿಲ್ಲ. ಅಲ್ಲಿದ್ದ ಬಹುತೇಕ ಆದಿವಾಸಿಗಳೊಂದಿಗೆ ಅಶೋಕ ಸಹಜವಾಗಿ ಸಂಪರ್ಕ ಪಡೆದನಲ್ಲದೆ, 'ಬೇಟೆಗಾರರು ಮತ್ತು ಮೀನುಗಾರರು ಪ್ರಾಣಿ ಹತ್ಯೆ ಬಿಟ್ಟು ಧರ್ಮದ ದಾರಿ ಹಿಡಿದರೆಂದು ಅವನೇ ಹೇಳಿದ್ದಾನೆ'.[೪೮] ಇದು ಆಗಿನ ಸಂದರ್ಭದಲ್ಲಿ ಒಂದು ಆಕಸ್ಮಿಕ ಘಟನೆಯಾಗಿರಬೇಕು ಮತ್ತು ಪರಿವರ್ತನೆಗೊಳ್ಳುತ್ತಿರುವ ಸಮಾಜಗಳಲ್ಲಿ ಬೇಟೆ, ಮೀನುಗಾರಿಕೆಗೆ ವಾಣಿಜ್ಯಕ್ಷೇತ್ರದಲ್ಲಿ ಬೇಡಿಕೆ ಕ್ಷೀಣಿಸಿತ್ತೆನ್ನಬಹುದು. ಹೀಗಾಗಿ ಸಾಂಕೇತಿಕವಾಗಿ ನಿಷೇಧಿಸಿದರೂ ಬೇಟೆಗೆಂದು ಪ್ರಾಯೋಗಿಕವಾಗಿ ಹತ್ಯೆ ನಡೆಯುತ್ತಲೇ ಇದ್ದಿರಬೇಕು. ಇಂದಿಗೂ ಸಹ ಮೀನುಗಾರಿಕೆ ಜಗತ್ತಿನಲ್ಲಿ ಬಹು ದೊಡ್ಡ ವ್ಯಾಪಾರ, ವಿನಿಮಯ ಉದ್ಯೋಗವಾಗಿದೆ. ಹೀಗಾಗಿ ಅಶೋಕನ ಕಾಲಕ್ಕೂ ಇಂದಿಗೂ ಹೋಲಿಸಿಕೊಂಡರೆ ಸಾಕಷ್ಟು ಬದಲಾವಣೆಗಳಾಗಿವೆ.

ಮೌರ್ಯರ ಕಾಲದಲ್ಲಿ ಬೇಟೆ, ಈಜು, ದೋಣಿಯಾಟ ಮತ್ತು ಬಿಲ್ಲು, ಬಾಣ ಸ್ಪರ್ಧೆಗಳು ಆಗಿನ ಯುವಕರ ಸಾಮಾನ್ಯ ಕ್ರೀಡೆಗಳಾಗಿದ್ದವು. ಹೋರಿ,ಕುರಿ, ಆನೆ ಮತ್ತು ಘೇಂಡಾಮೃಗಗಳ ಕಾಳಗಗಳು ಸಾರ್ವಜನಿಕವಾಗಿ ಪ್ರೇಕ್ಷಕ ಆಟಗಳಾಗಿದ್ದವು. ಎಲ್ಲ ವರ್ಗದ ಸ್ತ್ರೀ ಪುರುಷರು, ಇವುಗಳಲ್ಲಿ ಭಾಗವಹಿಸುತ್ತಿದ್ದರು. ಇವರ ಕಾಲದ ಸಮಾಜದಲ್ಲಿ ಪ್ರಬಲವಾದ ೩ ಜನವರ್ಗಗಳಿದ್ದವು: ಕೃಷಿಕರು, ಗೋಪಾಲಕರು ಮತ್ತು ಬೇಟೆಗಾರರು ಮೊದಲ ವರ್ಗವಾದರೆ, ವ್ಯಾಪಾರಿಗಳು ಎರಡನೇವರ್ಗ ಮತ್ತು ಕುಶಲ ಕರ್ಮಿಗಳು ಮೂರನೇ ವರ್ಗದವರಾಗಿ ಕಂಡುಬರುತ್ತಾರೆ.

ಶಾತವಾಹನರ ಕಾಲದ ಬೃಹತ್ ಶಿಲಾಸಂಸ್ಕೃತಿಯಲ್ಲಿ ಬಾಣದ ಮೊನೆ, ಈಟಿ, ಗುದ್ದಲಿ ಹಾಗೂ ಕುಡುಗೋಲುಗಳು ದೊರೆತಿವೆ. ಹೋಲಿಕೆಯಲ್ಲಿ ಕೃಷಿ ಹತಾರಗಳಿಗಿಂತ ಯುದ್ಧ ಹಾಗೂ ಬೇಟೆಯ ಆಯುಧಗಳು ಹೆಚ್ಚಿಗೆ ದೊರೆತಿವೆ. ಈ ಕಾಲದಲ್ಲಿ ಕಾಡುಗಳನ್ನು ಕಡಿದು ನೇಗಿಲು ಬಳಕೆ ಮಾಡಿದ್ದು ಕೃಷಿಯ ಕ್ಷೇತ್ರ ಬದಲಾಗಲಿಕ್ಕೆ ಅನುಕೂಲವಾಯಿತು. ತಮಿಳುಹಮಿನ ಭೂಮಿಯ ಹಂಚಿಕೆಯನ್ನು ೫ ಬಗೆಯಾಗಿ ವಿಂಗಡಿಸಿರುವುದನ್ನು ಕಾಣಬಹುದು. ಅವುಗಳೆಂದರೆ : 'ಕುರುಂಜ,ಪಾಲೈ, ಮುಲೈ,ನೀಯ್ದಲ್ ಮತ್ತು ಮರುದಮ್. ಹೀಗೆಂದರೆ ಗುಡ್ಡಗಾಡು ಪ್ರದೇಶ, ಮರುಭೂಮಿ, ಹುಲ್ಲುಗಾವಲು, ಕರಾವಳಿ ಮತ್ತು ಕೃಷಿ. ಅನುಕ್ರಮವಾಗಿ ಬೇಡರು, ದರೋಡೆಕೋರರು, ಕುರುಬರು, ಬೆಸ್ತರು ಮತ್ತು ರೈತರ ಪ್ರದೇಶಗಳು' ಎಂದು ಹೇಳಬಹುದು. ಸಂಗಮ್ ಕಾಲದಲ್ಲಿ ತುರುಕಾಳಗಗಳು ನಡೆಯುತ್ತಿದ್ದವು. ಸಂಗಮ್ ಗ್ರಂಥಗಳು ಬೃಹತ್‌ಶಿಲಾ ಸಮಾಧಿ ಕಾಲದ ಆರಂಭದಲ್ಲಿದ್ದ ಜನಜೀವನದ ಸೂಚನೆಗಳನ್ನು ನೀಡುವವು. ಅವರು ಅಕ್ಕಿಯನ್ನು ಸಹ ಉತ್ಪಾದಿಸುತ್ತಿದ್ದರು. ಮುಖ್ಯವಾಗಿ ತುರುಗಾಹಿಗಳು, ಬೇಡರು ಮತ್ತು ಬೆಸ್ತರು ತಮಿಳುನಲ್ಲೂ ಬೇಟೆ ಕಟುಮಾತು, ಕಠಿಣಶಿಕ್ಷೆ, ಜೂಜಾಟ, ಮಾದಕಪಾನೀಯ ಸೇವನೆಗೆ ಪ್ರಮುಖರಾಗಿದ್ದಾರೆ. ಸ್ವೈರ ವೃತ್ತಿ ನಿಷಿದ್ಧ ಕುರಳ್ ಬೇಟೆಯನ್ನು ಜರೆಯುವುದರ ಬದಲು, ಬೇಟೆಯಲ್ಲಿ ಮೊಲವನ್ನು ಹಿಡಿದೆ ಎನ್ನುವುದಕ್ಕಿಂತಲೂ ಆನೆಗಿದಿರು ವಿಫಲವಾದ ಈಟಿಯನ್ನು ಹಿಡಿಯುವುದು ಹೆಚ್ಚು ಧೀರೋದಾತ್ತಾ ಎನ್ನುತ್ತಾರೆ. ಸಂಗಮಯುಗದ ಲಕ್ಷಣಗಳಲ್ಲಿ 'ಬೇಟೆಗಾರಿಕೆ ಅರಸರ ಒಂದು ಮುಖ್ಯ ವೃತ್ತಿಯಾಗಿತ್ತು.' ಇಕ್ಷ್ವಾಕು ವಂಶದ ರಾಜರು ಶಾತವಾಹನರ ಸಾಮಂತರಾಗಿದ್ದು, ಮಹಾತಳವಾರ ಎಂಬ ಬಿರುದು ಬೇಡರ ಮುಖಂಡನಿಗಿತ್ತು. ಸಂಗಮರ ಕಾಲದಲ್ಲಿ ಜೂಜಾಡುವುದು, ಪಗಡೆಯಾಡುವುದು, ಬೇಟೆಯಾಡುವುದು, ಕುಸ್ತಿಯಾಡುವುದು ಅವರ ಹವ್ಯಾಸಗಳಾಗಿದ್ದುದು ಸ್ಪಷ್ಟ. ವ್ಯವಸಾಯ, ದನಕರುಗಳನ್ನು ಸಾಕುವುದು, ನೇಯುವುದು, ಬೇಟೆಯಾಡುವುದು, ಮಡಕೆ-ಕುಡಕೆಗಳನ್ನು ಮಾಡುವುದು, ಮೀನುಗಾರಿಕೆ ಇತ್ಯಾದಿ ವೃತ್ತಿಗಳಿದ್ದು, ರಾಜ್ಯದ ಅಭಿವೃದ್ಧಿಗೆ ಇವು ಪೂರಕವಾಗಿದ್ದವು.

ಭಾರತಕ್ಕೆ ಪ್ರಾಚೀನ ಕಾಲದಿಂದಲೂ ವಿದೇಶಿಯರು ಆಕ್ರಮಣ ಮಾಡಿ ತಮ್ಮ ಸಾಹಸ ಪ್ರದರ್ಶಿಸಿ ಇಲ್ಲಿನ ಸಂಪತ್ತನ್ನು ಪಡೆದಿದ್ದಾರೆ. ಇಂಥವರಲ್ಲಿ ದಂಡಯಾತ್ರೆ ಮಾಡಿದ ಹೂಣರು ನಿಪುಣ ಬಿಲ್ಗಾರರಾಗಿದ್ದರು. ಕುಶಾನರು ಕ್ರಿ.ಪೂ. ೧೬೫ರಲ್ಲಿ ಹಿಯುಗ್-ನು ಎಂಬ ವಲಸೆಗಾರರ ಗುಂಪನ್ನು ಇಲ್ಲಿಂದ ಕಾಲ್ತೆಗೆಯುವಂತೆ ಮಾಡಿದರಲ್ಲದೆ, ವಲಸೆ ಹೊರಟ ಯೂಚಿಗಳನ್ನು ಸಿರ್‌ದಾರ್ಯ ನದಿ ಕಣಿವೆಯಲ್ಲಿದ್ದ ಶಕರನ್ನು ಓಡಿಸಿ ಅವರ ಪ್ರದೇಶಗಳನ್ನು ವಶಪಡಿಸಿಕೊಂಡರು. ಇವರಲ್ಲಿ ವಲಸೆಗಾರಿಕೆಯಿದ್ದು, ಐದು ರಾಜ್ಯಗಳನ್ನು ಸ್ಥಾಪಿಸಿ ಆಳ್ವಿಕೆ ನಡೆಸಿದರು. ಭಾರತದ ಖ್ಯಾತ ಅರಸ, ಉತ್ತರಪಥೇಶ್ವರನೆಂದು ಬಿರುದಾಂಕಿತನಾದ ಹರ್ಷವರ್ಧನನು ಪ್ರಾಣಿವಧೆಯನ್ನು ನಿಷೇಧಿಸಿದ್ದು ಗಮನಾರ್ಹ.

ಗುಪ್ತರ ಕಾಲದ ಮಧ್ಯಭಾರತದಲ್ಲಿ ಬಹಳಷ್ಟು ಅರಣ್ಯ ಕೃಷಿಗೆ ಬಳಕೆಯಾಯಿತು. ಆದಿವಾಸಿ ಕೃಷಿಕರು ಮೇರು ಕೆಳಸ್ಥಾನಮಾನಗಳಿಗೆ ಬಂದರು. ಆದಿವಾಸಿ ಬಣಗಳು ಬ್ರಾಹ್ಮಣೀಯ ವ್ಯವಸ್ಥೆಯ ವ್ಯಾಪ್ತಿಗೆ ಬಂದುವು. ಆದಿವಾಸಿ

ಕೃಷಿಕರಿಂದ ಕಾಣಿಕೆಗಳನ್ನು ಸಂಗ್ರಹಿಸುತ್ತಿದ್ದರು. 'ಆದಿವಾಸಿ ಬಣನಾಯಕರ ಆಳ್ವಿಕೆಯಲ್ಲಿದ್ದ ಪ್ರದೇಶಗಳು ಇತಿಹಾಸದ ಬೆಳಕಿಗೆ ಬಂದಂತಾಯಿತು. ಆಗ ದಕ್ಷಿಣದ ರಾಜ್ಯಗಳಲ್ಲಿ ಆದಿವಾಸಿ ಬಣಗಳ ಪ್ರದೇಶಗಳಲ್ಲಿ ಬ್ರಾಹ್ಮಣರಿಗೆ ಮಾನ್ಯವಾಗಿ ಭೂಮಿ ನೀಡಿದ್ದರಿಂದ, ಸುತ್ತಿನ ಆದಿವಾಸಿಗಳು ಗೋಸಂಪತ್ತನ್ನು ಕಾಪಾಡುವುದರ ಮಹತ್ವವನ್ನು, ಉತ್ತಮ ಕೃಷಿ ವಿಧಾನಗಳನ್ನು ಕಲಿತರು.' ಬ್ರಾಹ್ಮಣರಿಗೆ ಯಜ್ಞಯಾಗಾದಿಗಳಿಗೆ ಗೋಸಂಪತ್ತು ಕೊಡುತ್ತಿದ್ದರಿಂದ ಇವರಿಬ್ಬರಲ್ಲಿ ಹೊಂದಾಣಿಕೆಯಿತ್ತು ಎನ್ನಬಹುದು.

ಗುಪ್ತರ ಕಾಲದಲ್ಲಿ ಮಾಂಸಾಹಾರಿಗಳೇ ಹೆಚ್ಚಾಗಿದ್ದುದರಿಂದ ಬೇಟೆ ಸ್ಥಿತಿ-ಗತಿ ಬಗ್ಗೆ ಹೇಳಬೇಕಾಗಿಲ್ಲ. ಹಿಂಸೆಯ ಚಟುವಟಿಕೆಗಳು ನಡೆಯುತ್ತಲೇ ಇದ್ದವು. ಹೀಗೆ ಬೇಟೆ, ಪಶುಪಾಲನೆ ಮಾಡಿಕೊಂಡು ಜೀವಿಸುತ್ತಿದ್ದ ಅರಣ್ಯ ಬುಡಕಟ್ಟುಗಳ ಮೇಲೆ ಸಮುದ್ರಗುಪ್ತನು ತನ್ನ ದಂಡಯಾತ್ರೆಗಳನ್ನು, ಎರಡನೇ ವರ್ಗದಲ್ಲಿ ಇವರ ಮೇಲೆ ದಿಗ್ವಿಜಯಗಳನ್ನು ಮಾಡಿದ್ದು ಸ್ಮರಣೀಯ. ಕ್ರಮೇಣ ಬುಡಕಟ್ಟುಗಳೊಂದಿಗಿನ ಸಂಬಂಧ ಕಡಿದು ಬಂದಾಗ ಆಳರಸರು ವ್ಯಘ್ರರಾಗುತ್ತಾರೆಂಬುದಕ್ಕೆ ಕುಮಾರಗುಪ್ತನೇ ಸಾಕ್ಷಿ. ಇವನು ಗುಪ್ತ ಆಳ್ವಿಕೆಯ ಅಂತ್ಯದಲ್ಲಿ 'ನರ್ಮದಾ ಕಣಿವೆಯಲ್ಲಿ ಆಳುತ್ತಿದ್ದ ಪುಷ್ಯಮಿತ್ರ ಎಂಬ ಬುಡಕಟ್ಟನವರ ವಿರೋಧದಿಂದಾಗಿ ಗುಪ್ತರ ಪ್ರಭುತ್ವಕ್ಕೆ ತೀವ್ರವಾದ ಧಕ್ಕೆ ಒದಗಿತು. ಗುಪ್ತರ ಕಾಲದಲ್ಲಿ ಸೈನಿಕರು ಬಿಲ್ಲು, ಬಾಣ, ಕತ್ತಿ, ಕೈಕೊಡಲಿ, ಈಟಿ, ಭರ್ಜಿ, ಇತ್ಯಾದಿ ಬಳಸುತ್ತಿದ್ದರು. ಇವುಗಳಲ್ಲಿ ಕೆಲವು ಬೇಟೆಯ ಆಯುಧೋಪಕರಣಗಳು ಆಗಿದ್ದವು. ಇವರ ಕಾಲದ ಜನ ಜೀವನದಲ್ಲಿ ಬೇಟೆ, ಟಗರು ಮತ್ತು ಕೋಳಿ ಕಾಳಗಗಳು ಹೊರಾಂಗಣ ಕ್ರೀಡೆಗಳಾಗಿದ್ದವು. ಇಲ್ಲಿ ಇವು ಸಾರ್ವತ್ರಿಕಗೊಂಡಿದ್ದವೆಂಬುದನ್ನು ಒಪ್ಪಬಹುದು. ಕಾಳಿದಾಸ ಅಭಿಜ್ಞಾನ ಶಾಂಕುತಲೆ ನಾಟಕದಲ್ಲಿ ದುಷ್ಯಂತ ರಾಜನ ಬೇಟೆಯ ಬಗೆಗೆ ತಿಳಿಸಿದ್ದಾನೆ. ಸಂಸ್ಕೃತದ ಕಿರಾತಾರ್ಜುನೀಯದಲ್ಲಿ ಭಾರವಿ ಬೇಟೆಯನ್ನೇ ಕುರಿತು ಚಿತ್ರಿಸಿದ್ದಾನೆ. ಕಿರಾತಾರ್ಜುನೀಯದ ೧೫ಸರ್ಗಕ್ಕೆ ದುರ್ವಿನೀತನೇ ಭಾಷ್ಯ ಬರೆದಿರುವುದಾಗಿ ಪ್ರತೀತಿಯಿದೆ.

ಸಮುದ್ರಗುಪ್ತನಿಗೆ ಸಂಬಂಧಿಸಿದ ಹುಲಿ, ಅಶ್ವಮೇಧ, ಬಿಲ್ಲುಗಾರ, ಸಂಗೀತಜ್ಞನ ಚಿತ್ರವಿರುವ ನಾಣ್ಯಗಳು ಸಿಕ್ಕಿವೆ. ಎರಡನೇ ಚಂದ್ರಗುಪ್ತನ ಕಾಲದ ಅನೇಕ ಬಗೆಯ ನಾಣ್ಯಗಳು ದೊರೆತಿದ್ದು, ಅವುಗಳಲ್ಲಿ ಸವಾರನ ಚಿತ್ರವಿರುವ ನಾಣ್ಯಗಳು ಕುಮಾರಗುಪ್ತನ ಕಾಲದ ಬಿಲ್ಲುಗಾರನ, ಅಶ್ವಮೇಧದ, ಕುದುರೆ ಸವಾರನ, ಆನೆ ಸವಾರನ, ಹುಲಿಯ ಬೇಟೆಗಾರನ ಚಿತ್ರಗಳಿರುವ ಬಂಗಾರದ ನಾಣ್ಯಗಳು ಮಾತ್ರ ಪ್ರಮುಖವಾದವು. ಗುಪ್ತರ ಕಾಲದಲ್ಲಿ 'ಬೇಟೆ, ಟಗರು ಮತ್ತು ಗೂಳಿಗಳ ಕಾಳಗ, ಚೆಂಡಾಟ, ಮುಂತಾದವುಗಳಲ್ಲಿ ಜನರು ಆಸಕ್ತರಾಗಿದ್ದರು'.

ಮಧ್ಯಕಾಲೀನ ಸಂದರ್ಭದಲ್ಲಿ ಬೇಟೆ ಉತ್ತುಂಗ ಶಿಖರ ಮುಟ್ಟಿತು. ಇಲ್ಲಿ ಆಳರಸರೇ ನೇರವಾಗಿ ಬೇಟೆಗೆ ಹೋಗುತ್ತಿದ್ದನ್ನು ಕನ್ನಡ ಕಾವ್ಯಗಳಲ್ಲಿ ವರ್ಣಿಸಲಾಗಿದೆ. ಹೊಯ್ಸಳರ ಕಾಲದಲ್ಲಿನ ಅರಸರಿಗೆ ಗಿರಿದುರ್ಗಮಲ್ಲ, ಮಲೆಪರೊಳ್‌ಗಂಡ ಎಂಬ ಬಿರುದುಗಳಿದ್ದವು. ಗಿರಿಜನರಾದ ಇವರು ಮೂಲ ವೃತ್ತಿಯಲ್ಲಿ ಬೇಟೆ ಮತ್ತು ಪಶುಪಾಲಕರಾಗಿದ್ದಂತೆ ಕಂಡುಬರುತ್ತದೆ. 'ಸಳ' ನು ಹೊಯ್ಸಳ ವಂಶದ ಸ್ಥಾಪಕನೆಂದು, 'ಯದು' ವಂಶೀಯದವನೆಂದು ಹೇಳಲಾಗಿದೆ.[೪೯] ಸಳನ ಬೇಟೆ ಬಗೆಗೆ ಬೆಳವಡಿಯ ಶಿಲಾಶಾಸನ (ಬೇಲೂರು ೧೭೧)ದಲ್ಲಿ ತಿಳಿಸಲಾಗಿದೆ. ಜನ್ನನು ತನ್ನ ಯಶೋಧರ ಚರಿತೆಯಲ್ಲಿ ಹೀಗಿದೆ :

'ಸಳನೆಂಬ ಯಾದವಂ ಹೊಯ್

ಸಳನಾದಂ ಶಶಕಪುರದ ವಾಸಂತಿಕೆಯೊಳ್

ಮುಳಿದು ಪುಲಿ ಪಾಯ್ವುದುಂ ಹೊಯ್
ಸಳ ಎಂದೊಡೆ ಗುರುಗಳಿತ್ತು ಕುಂಚದ ಸೆಳೆಯಂ'[೫೦] ll೯ll

ಶಶಕಪುರದ ವಾಸಂತಿಕೆಯಲ್ಲಿ ಹುಲಿಯೊಂದು ರೋಷದಿಂದ ಒಳನುಗ್ಗುತ್ತಿತ್ತು. ಆಗ ಯದುವಂಶದ ಸಳನೆಂಬುವನನ್ನು ಉದ್ದೇಶಿಸಿ, ತನ್ನ ಕುಂಚದ ಬೆತ್ತವನ್ನಿತ್ತು ಗುರುಗಳು 'ಹೊಯ್‌ಸಳ' ಎಂದರಂತೆ. ಹುಲಿಯನ್ನು ಹತ್ಯೆ ಮಾಡಿದ ನಂತರ ಹೊಯ್ಸಳನಾಮ ಪ್ರಚಲಿತಕ್ಕೆ ಬಂದಿದೆ. ಇಲ್ಲಿ 'ಸಳ'ನೆಂಬ ಯವಕ ತನ್ನ ಗುರು ಸುದಾತ್ತಾಚಾರ್ಯರ ಅಣತಿಯಂತೆ ವಾಸಂತಿಕಾ ದೇವಾಲಯವನ್ನು ಪ್ರವೇಶಿಸಿದ ಹುಲಿಯನ್ನು ಕೊಂದು ಶೌರ್ಯ ಮೆರೆದ ಕಾರಣ ರಾಜ್ಯಸ್ಥಾಪನೆ ಮಾಡಿದನು. ಹೀಗೆ ಪ್ರಾಣವಧೆ ಮಾಡುವುದು ಇವರಿಗೆ ಜನ್ಮಾಂತರಗಳಿಂದ ಬಂದಿರಬೇಕು. ಇವರ ಕಾಲದಲ್ಲಿ 'ಗರುಡ ಪದ್ಧತಿ' ಜಾರಿಯಲ್ಲಿತ್ತು. ರಾಜನಿಗಾಗಿ ಅವನ ಆಪ್ತಭಟರು ಪ್ರಾಣಬಿಡುವುದು ಆ ಕಾಲದ ಒಂದು ವೈಶಿಷ್ಟ್ಯವಾಗಿತ್ತು.

ರಜಪೂತರು ಯುದ್ಧಪ್ರಿಯರಾಗಿದ್ದರೂ, ಶರಣಾಗತರಾದ ಶತೃಗಳ ವಿಷಯದಲ್ಲಿ ಅತ್ಯಂತ ಉದಾರವಾಗಿ ನಡೆದುಕೊಳ್ಳುತ್ತಿದ್ದರು. ಕರ್ನಲ್ ಟಾಡ್ ಹೇಳುವಂತೆ ಅಪರಿಮಿತ ಧೈರ್ಯ, ಶೌರ್ಯ, ದೇಶಭಕ್ತಿ, ನಂಬಿಕೆ, ಗೌರವ, ಉದಾರತೆ, ಸರಳತೆ ಮತ್ತು ಸತ್ಯ ಪ್ರೀಯತೆ ರಜಪೂತರ ಸಹಜ ಗುಣಗಳಾಗಿದ್ದವು. ಇವರು ಯುದ್ಧವಿಲ್ಲದಾಗ ಶಸ್ತ್ರಾಸ್ತ್ರ ಅಭ್ಯಾಸ, ಬೇಟೆ ಮುಂತಾದ ಸಾಹಸ ಕಾರ್ಯಗಳಲ್ಲಿ ನಿರತರಾಗುತ್ತಿದ್ದರು. ಇವರಂತೆಯೇ ಕರ್ನಾಟಕದ ಬೇಡಪಾಳೆಯಗಾರರು, ಸಮರ್ಥರು, ಸಾಹಸಿ, ಮಹತ್ವ ಪೂರ್ವ ಸಾಧಕರಾಗಿ ಕಂಡುಬರುತ್ತಾರೆ. ಹೆಚ್ಚಾಗಿ ನೃತ್ಯ, ಸಂಗೀತ ಹಾಗೂ ಬೇಟೆ ರಜಪೂತರಿಗೆ ಮನರಂಜನೆ ನೀಡುತ್ತಿದ್ದವು. ಗ್ವಾಲಿಯರಿನ ಮಾನಸಿಂಹನು ಬೇಟೆಯಲ್ಲಿ ನಿಪುಣನಾಗಿದ್ದು, ತನ್ನ ರಾಜ್ಯದ ಎಲ್ಲ ಅಡವಿಗಳಲ್ಲಿ ಹೆಚ್ಚು ಕಾಲ ಬೇಟೆಯಲ್ಲಿ ತಲ್ಲೀನನಾಗಿರುತ್ತಿದ್ದ.

ಕುಮ್ಮಟ ದುರ್ಗದ ಅರಸರ ಕಾಲದಲ್ಲಿ ಬೇಟೆ ಮತ್ತು ಪಶುಪಾಲನೆ ಪ್ರಸಂಗಗಳು

ಯಾವುದೇ ರಾಜ್ಯಸ್ಥಾಪನೆಯ ಹಿಂದೆ ಬೇಟೆ ಪ್ರಸಂಗ ಬರುತ್ತದೆ. ಉದಾ: ಹೊಯ್ಸಳ, ವಿಜಯನಗರ, ಗುಡಿಕೋಟೆ, ಸೊಂಡೂರು, ಹರಪನಹಳ್ಳಿ, ಚಿತ್ರದುರ್ಗ ಮೊದಲಾದ ರಾಜ್ಯ ಮತ್ತು ಪಾಳೆಯಪಟ್ಟುಗಳನ್ನು ಹೆಸರಿಸಬಹುದು. ಪ್ರಾಚೀನಕಾಲದಿಂದಲೂ ಹಾಸುಹೊಕ್ಕಾಗಿ ಬಂದ ಬೇಟೆಗೆ ಮಧ್ಯಕಾಲ ಸಂದರ್ಭದಲ್ಲಿ ಅಪರಿಮಿತ ಸ್ಥಾನ ದಕ್ಕಿದ್ದು ವಿಶೇಷ. ಕವಿಗಳು ಮಹಾಕಾವ್ಯಗಳನ್ನು ರಚಿಸುವಾಗ ಅಷ್ಟಾದಶವರ್ಣನೆಗಳಲ್ಲಿ ಬೇಟೆಯನ್ನು ಒಂದೆಂದು ಪರಿಗಣಿಸಿ ಅಮೋಘವಾಗಿ ವರ್ಣಿಸಿದ್ದಾರೆ. ಪ್ರತಿಯೊಂದು ಕನ್ನಡ ಮಹಾ ಕಾವ್ಯದಲ್ಲಿಯೂ ಇದನ್ನು ನೋಡಬಹುದು. ಶಾಸನ, ವೀರಗಲ್ಲು, ಮಹಾಸತಿಕಲ್ಲು ಮುಂತಾದ ಶಿಲ್ಪಿ ಸೌಂದರ್ಯದಲ್ಲಿ ಬೇಟೆಯ ಉಲ್ಲೇಖವಿದೆ.

ಕುಮ್ಮಟದುರ್ಗ ಚಿಕ್ಕ ರಾಜ್ಯವಾದರೂ, ಇತರ ರಾಜ್ಯಗಳಲ್ಲಿರುವಂತೆ ಇಲ್ಲಿಯೂ ಬೇಟೆ ಪ್ರಸಂಗ ಬರುತ್ತದೆ. ಕುಮ್ಮಟದ ರಾಜಕೀಯ ಚರಿತ್ರೆಯಲ್ಲಿ ಸಾಂಸ್ಕೃತಿಕ ಹೆಗ್ಗುರುತುಗಳು ಅಚ್ಚಳಿಯದೇ ನಿಂತಿದ್ದು, ಅವುಗಳಲ್ಲಿ ಬೇಟೆ ಮತ್ತು ಪಶುಪಾಲನೆಗಳು ಮುಖ್ಯವೆನಿಸಿವೆ. ಕಂಪಿಲರಾಯ ಹೊಸಮಲೆಗೆ ಹೊರಟು ಬೇಟೆಯಾಡುವ ಸಂಗತಿ ಮತ್ತು ಕುಮಾರರಾಮ ರತ್ನಾಜಿಯ ಪ್ರಸಂಗ ಚರಿತ್ರೆಯ ಅಧ್ಯಯನ, ಬರೆಹಕ್ಕೆ ಗಮನಾರ್ಹ ವಿಷಯಗಳಾಗಿವೆ. ಅದೇ ರೀತಿ ಕಂಪಿಲರಾಯ ಮತ್ತು ಕುಮಾರರಾಮನ ಕಾಲದಲ್ಲಿ ಪಶುಪಾಲನೆ ಕೇಂದ್ರಗಳು ಅನೇಕ ಇದ್ದುವು. ಅವುಗಳಲ್ಲಿ ಪ್ರಮುಖವಾದುದು ಚಿತ್ರದುರ್ಗ ಜಿಲ್ಲೆಯ ಪರಿಸರ. ಮಧ್ಯಕಾಲೀನ ಸಂದರ್ಭದಲ್ಲಿ ಅನೇಕ ಗುಂಪುಗಳ ಪಶುಪಾಲನಾ

ಕೇಂದ್ರಗಳಿದ್ದವು. ಒಬ್ಬರ ಪಶುಗಳನ್ನು ಮತ್ತೊಬ್ಬರು ಅಪಹರಿಸಿದಾಗ ಅವುಗಳಿಗಾಗಿ ತುರುಕಾಳಗ ಅಥವಾ ಗೋಗ್ರಹಣ ನಡೆಯುತ್ತಿತ್ತು. ಇವುಗಳಲ್ಲಿ ಯಶಸ್ವಿ ಹೋರಾಟ ನಡೆಸಿದ ಬಗ್ಗೆ ಹರಿಹರ, ಹೊಳಲ್ಕೆರೆ, ದಾವಣಗೆರೆ, ಚಳ್ಳಕೆರೆ ಮುಂತಾದ ಸ್ಥಳದಲ್ಲಿ ದೊರೆತಿರುವ ಗೋಗ್ರಹಣದ ವೀರಗಲ್ಲುಗಳೇ ಸಾಕ್ಷಿ.

ಇಲ್ಲಿ ಒಬ್ಬರನ್ನೊಬ್ಬರು ಪರಸ್ಪರ ರಕ್ಷಿಸುವ, ಶಿಕ್ಷಿಸುವ ಪ್ರಸಂಗಗಳಲ್ಲದೆ, ಸಾರ್ವಭೌಮತ್ವ ಕಲ್ಪನೆ, ಸಂಪತ್ತಿನ ಕ್ರೋಢೀಕರಣ ಮುಂತಾದ ಸಂಗತಿಗಳು ಗಮನಾರ್ಹವಾದವುಗಳಾಗಿವೆ. ಕುದುರೆ, ಕಂಪಿಲರಾಯನ ಬೇಡರದಂಡು ಬೇಟೆಗೆ ಇನ್ನಷ್ಟು ಉತ್ತೇಜನಕಾರಿಯಾಗಿದ್ದವು. ಇವರ ಕಾಲಕ್ಕೆ ಬೇಟೆ ಪ್ರಮುಖ ವೃತ್ತಿಯಾಗಿ, ಅರಸರ ಯುದ್ಧ ನೈಪುಣ್ಯತೆಗೆ ಮಾದರಿ ತರಬೇತಿಯಾಗಿರುವಂತಿದೆ.

ಕಂಪಿಲರಾಯನ ಬೇಟೆ

ವಿಜಯನಗರ ಪೂರ್ವದಲ್ಲಿ ಕುಮ್ಮಟ ರಾಜ್ಯದ ಖ್ಯಾತ ಅರಸ ಕಂಪಿಲರಾಯ ತನ್ನ ಆಳ್ವಿಕೆಯ ಅವಧಿಯಲ್ಲಿ ಅನೇಕ ವಿಧವಾದ ಕ್ರೀಡಾ ವ್ಯಸನಕ್ಕೀಡಾಗಿರುತ್ತಾನೆ. ಅವುಗಳಲ್ಲಿ ಬೇಟೆಯೂ ಒಂದು.

ರತ್ನಾಜಿ ಮಾನಸಿಕವಾಗಿ ನರಳುತ್ತಿದ್ದಾಗ ವೈದ್ಯ ಆಕೆಯನ್ನು ಪರೀಕ್ಷಿಸಿ ಸತ್ಯಸಂಗತಿ ಹೇಳುತ್ತಾನೆ. ಮನೋವೇದನೆ ಅರಿತ ಕಂಪಿಲನ ಪಟ್ಟದರಾಣಿ ಮಾಡುವ ಬಯಕೆಯನ್ನು ಪೂರೈಸುವುದಾಗಿ ಮಾತುಕೊಟ್ಟ. ಹೀಗಿರುವಾಗ ರಾಜಸಭೆ ಆರಂಭವಾಗುತ್ತದೆ. ನಾನಾ ವಿಧವಾದ ಪೋಷಾಕುಗಳನ್ನು ಧರಿಸಿ, ತಮ್ಮ ತಮ್ಮ ಪದವಿಗನುಸಾರವಾಗಿ ವಿವಿಧ ಆಯುಧಗಳನ್ನು ಹಿಡಿದಿದ್ದ ಬೇರೆ ಬೇರೆ ವೀರಯೋಧರು ಅಲ್ಲಿ ನೆರೆದಿದ್ದರು. ಕವಿ-ಗಮಕಿ, ವಾದಿ, ವಾಗ್ಮಿಗಳು ತಮಗೆ ನಿಯೋಜಿತವಾದ ಆಸನಗಳಲ್ಲಿ ಮಂಡಿಸಿದ್ದರು. ವಂದಿಮಾಗಧರು ಕಂಪಿಲನ ಬಿರುದಾವಳಿಗಳನ್ನು ಮುಕ್ತ ಕಂಠದಿಂದ ಹೊಗಳುತ್ತಿದ್ದರು. ಈ ರೀತಿ ವಿಜೃಂಭಿಸಿದ ಒಡ್ಡೋಲಗಕ್ಕೆ, ಒಬ್ಬ ಬೇಡರೊಡೆಯನು ಪ್ರವೇಶಿಸಿ ಮಹಾರಾಜನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಮಹಾಸ್ವಾಮಿ ಕಾಡಿನಲ್ಲಿ ಮೃಗಗಳ ಹಾವಳಿ ಹೇಳತೀರದು. ಅವುಗಳನ್ನು ಬೇಟೆಯಾಡಲು ಪ್ರಭುಗಳ ಸವಾರಿ ಈಗಲೇ ಚಿತ್ತೈಸಬೇಕು ಎಂದು ವಿನಂತಿ ಮಾಡಿಕೊಂಡನು. ಕಂಪಿಲನು ಆ ಬೇಡರೊಡೆಯನನ್ನು ಸತ್ಕರಿಸಿ, ಬೇಟೆಗಾಗಿ ತೆರಳಲು ಸಂಕೇತ ವಾದ್ಯಗಳನ್ನು ಬಾರಿಸುವಂತೆ ಆಜ್ಞಾಪಿಸಿದನು. ಮರುಕ್ಷಣದಲ್ಲಿಯೇ ಕಂಪಿಲನ ಬಳಿಯಲ್ಲಿದ್ದ ಬೇಡರಪಡೆಯೇ ಅಲ್ಲಿ ನೆರೆಯಿತು[೫೧] ಶಬರನಾಯಕರು ತಮ್ಮ ತಮ್ಮ ಬಿಲ್ಲು, ಬಾಣ, ಕತ್ತಿ, ಕುಡುಗೋಲು, ಬಲೆ ಮತ್ತು ಬೇಟೆ ನಾಯಿಗಳನ್ನು ಅಣಿಗೊಳಿಸಿ ರಾಜನೊಂದಿಗೆ ಹೊರಡಲು ಸಿದ್ಧರಾದರು. ಕಾಡಿನಲ್ಲಿ ಬೀಡು ಬಿಡುವುದಕ್ಕಾಗಿ ಗುಡಿ, ಗುಡಾರ, ಸರಾತಿ ಪೆಟ್ಟಿಗೆ, ಗಿಂಡಿ, ಪಡಿಗ, ಮೆಲ್ವಾಸು, ಮಂಚಗಳನ್ನು ತೆಗೆದುಕೊಂಡರು. ವಂದಿಮಾಗಧರು ಕಂಪಿಲನನ್ನು ಬೇಟೆಗಾಗಿ ತೆರಳುವಂತೆ ಮಾಡಿ ತರಾಕು ಹೇಳಿದರು. ರಾಜನು ದುರ್ಗದ ರಕ್ಷಣೆಗಾಗಿ ತಕ್ಕ ವ್ಯವಸ್ಥೆಯನ್ನು ಮಾಡಿ, ಬೇಟೆಯ ಪಡೆಯನ್ನು ಬಂದು ಕೂಡಿಕೊಳ್ಳುವಂತೆ ಕುಮಾರ ರಾಮನಿಗೆ ಹೇಳಿ ಕಳುಹಿಸಿ ತಾನು ವಿಳಂಬ ಮಾಡದೆ ಹೊಸಮಲೆಯ ಅರಣ್ಯಕ್ಕೆ ತೆರಳಿದನು.

ಹೊಸಮಲೆ ದುರ್ಗಮವಾದ ಅರಣ್ಯ ಪ್ರದೇಶ. ಮರಗಳು ಮುಗಿಲು ಮುಟ್ಟುತ್ತಿದ್ದವು. ಅಲ್ಲಿ ಕಾಡುಮೃಗಗಳ ಹಿಂಡಿನ, ದಂಡು ಇತ್ತು. ಅವುಗಳ ವಿಲಾಸ, ಆರ್ಭಟ ವೈಯ್ಯಾರ ಅವರ್ಣನೀಯ. ಅವುಗಳೆಂದರೆ: ಕರಡಿ, ಕಡವೆ, ಕಾಡೆಮ್ಮೆ, ಕಸ್ತೂರಿಮೃಗ, ಹುಲಿ, ಹುಲ್ಲೆ, ಮುಳ್ಳು ಹಂದಿ, ಸಾರಂಗ, ಸರ್ಪ, ಮೊಲ, ಮುಂಗುಸಿ, ಕಪಿ ಮೊದಲಾದವು.

ನಿಪುಣರಾದ ಬೇಡರು ಬೇಟೆನಾಯಿಗಳನ್ನು ಮುಂದೆ ಬಿಟ್ಟು, ಆ ಮೃಗ ಜಾಲವನ್ನು ಬೇಟೆಯಾಡಲು ಆರಂಭಿಸಿದರು. 'ಇರಿ, ಕಡಿ, ಬಡಿ, ಹಿಡಿ, ನೆಡು' ಎಂಬ ಅವರ ಕೂಗಿನಿಂದ ಕಿವಿ ಬಿರಿದಂತಾಯಿತು. ಉತ್ಸಾಹಶಾಲಿಗಳಾದ ಬೇಡರು ಇದೋ ಹೆಬ್ಬುಲಿ ಮಲಗಿದ್ದು, ಎದ್ದು ಹೋದ ಸ್ಥಳ! ಆಗೋ, ಕಾಡುಕೋಣಗಳು ಹೋದ ಜಾಡು! ಕರಡಿ ಕೆಡವಿ ಹೋದ ಹುತ್ತ ! ಹುಲ್ಲೆಯ ಮರಿ ಹುಲ್ಲನ್ನು ಮೆಲುಕುತ್ತ ಬೆಳ್ನೊರೆಯನ್ನು ಸುರಿಸಿದ ತಾಣ! ಹಂದಿ ಹೊರಳಾಡಿ ಮೇಲೆದ್ದು ಹೋದ ಕೆಸರು! ಎಂದು ಅಬ್ಬರಿಸುತ್ತ ಅತ್ತಿಂದಿತ್ತ ಅರಣ್ಯದಲ್ಲಿ ಅಡ್ಡಾಡುತ್ತಿದ್ದರು. ಬೇಟೆಯಲ್ಲಿ ನಿರತರಾದ ಬೇಡರಿಗೆ ಹುರುಪು ನೀಡಲು ನಲ್ಲೆಯರು ಬೆನ್ನ ಹಿಂದೆಯೇ ಇರುತ್ತಿದ್ದರು. ಬೇಡರು ಬೇಟೆಯಲ್ಲಿ ಪಳಗಿದ್ದವರು, ದುಷ್ಟ ಮೃಗಗಳನ್ನು ಸುಲಭವಾಗಿ ಕೊಲ್ಲುತ್ತಿದ್ದರು. ಬೇಟೆಗೋಸ್ಕರವಾಗಿಯೇ ಸಾಕಿಕೊಂಡಿದ್ದ ಹುಲಿ, ಹುಲ್ಲೆ, ಸಾಳುವ ಮತ್ತು ನಾಯಿಗಳು ಮೈ ಮರೆತು ರೋಷಾವೇಶದಿಂದ ಮೇಲೆ ಬಿದ್ದು ಅನೇಕ ಖಗಮೃಗಗಳನ್ನು ಸಂಹರಿಸಿದವು. ಬೇಡರ ಬೇಟೆಗೆ ಬಲಿಯಾದ ಹೊಸಮಲೆ ಇವರಿಂದ ತತ್ತರಿಸಿ ಹೋಗಿತ್ತು. ತಂದೆಯೊಂದಿಗೆ ಹೋಗಬೇಕಾಗಿದ್ದ ಕುಮಾರರಾಮ ಮನ್ನೆಯರೊಂದಿಗೆ ಬೇಟೆಗಾಗಿ ಸಜ್ಜಾಗಿ ವೈಹಾಳಿಯ ಬಯಲಿನವರೆಗೆ ಬಂದವನು ಮನಃ ಬದಲಾಯಿಸಿ ಮರಳಿ ಬಂದ.

ನಂಜುಂಡಕವಿ ಹೊಸಮಲೆದುರ್ಗವನ್ನು ವರ್ಣಿಸುವಾಗ ಪುರದ ಹೊರಗೆ ಆ ದಿಕ್ಕಿನಲ್ಲಿ ಗಾರುಡಿಗಳಿದ್ದವೆಂದೂ ಅಲ್ಲಿ ಬಿರುದಿನ ಬಂಟರಿಗೆ ಪಾಡುಗಳನ್ನು ಬರಿಸುವ ಅಭ್ಯಾಸಿಗಳಿದ್ದರೆಂದೂ ಹೇಳುತ್ತಾನೆ. ಕೋಡುಗಳಿಗೆ ಸೂನಗಿಗಳ ಸೇರಿಸಿ ಜೋಡಿಸಿ ಪಣೆಗೆ ಕೂರಲಗ ಕೂಡೆ ಕಾದಿಸುವವರು ಕೋಣಗಳನು ಜೂದಾಡೆ ಪುಲಿಗಳೊಡನಲ್ಲಿ ಎಂದು ವರ್ಣಿಸುತ್ತಾನೆ. ಅಂದರೆ ಹೊಸಮಲೆದುರ್ಗದ ಹೊರವಲಯದಲ್ಲಿ 'ಬಲ್ಲಾಳು ಗುಂಪುಗಳು ನೆಲಸುವ ಬಯಲು, ಬಲುಮಲ್ಲರು ಹೆಣಗುವ ಬಯಲು, ಪಲ್ಲಮರಿಯ ಸಾಧನೆಯ ಬಯಲು, ಕಣ್ಣಲ್ಲಲ್ಲಿ ಕರಮೊಸೆದಿಹುದು ಕವಿವರ್ಣಿಸಿ ಮೃಗಗಳು ಕೂಡ ಕಾಳಗ ಹಬ್ಬಿಸಿ ವಿನೋದ ಪಡುವುದು ಜನರಿಗೆ ಸಾಮಾನ್ಯ ದೃಶ್ಯವಾಗಿತ್ತೆಂದು ಹೇಳುತ್ತಾನೆ'.[೫೨] ರಾಜ ಮೊದಲಿಗನಾಗಿ ಬೇಟೆಯಾಡುವನು. ನಾಯಿಗಳೂ ಇವರಿಗೆ ಸಹಾಯ ಮಾಡಿದರೆ ಕಿರಾತಕರು ಬಲೆಗಳನ್ನೊಡ್ಡಿ ಪ್ರಾಣಿಗಳನ್ನು ಕೊಲ್ಲುತ್ತಿದ್ದರು.

ಬೇಟೆ ಉಗ್ರ ಸ್ವರೂಪ ತಾಳಿದಾಗ ಹರಿಣ, ಹುಲಿ, ಚಿರತೆಗಳನ್ನು ಅರಸರು ಬೇಟೆಯಾಡುತ್ತಿದ್ದರು. ಇಂಥ ಕೆಲವು ದುಷ್ಟಪ್ರಾಣಿಗಳು ಚಿರತೆ, ವಲಕ ಮೊದಲಾದವುಗಳೂ ಸಾಹಸದಿಂದ ತಾವು ಬೇಟೆಯಾಡಿ ಹಿಡಿದುದನ್ನು ತಿನ್ನುವಷ್ಟರಲ್ಲಿ ತಮ್ಮನ್ನು ಬೇಟೆಯಾಡಲು ಬರುವ ಈ ಜನರ ಸುಳಿವನ್ನು ತಿಳಿದು ತಿನ್ನುವ ಆಸೆಯನ್ನು ಬಿಟ್ಟು ಜೀವದ ಆಸೆಯಿಂದ ಓಡಿ ಹೋಗುತ್ತಿದ್ದವು. ಎಲ್ಲಾ ವನಚರ ಪ್ರಾಣಿಗಳ ಸಾಮಾನ್ಯ ವೈರಿಗಳಾದ ಈ ಬೇಟೆಗಾರರ ದೆಬ್ಬೆಗೆ ಈ ಅರಣ್ಯ ಜೀವಿಗಳು ಅರಣ್ಯದ ಹೃದಯದಂತೆ ಇರುವ ಮಧ್ಯಭಾಗದ ಗಹನವಾದ ಮತ್ತು ಗೋಪ್ಯವಾದ ಸ್ಥಳಗಳ ಕಡೆಗೆ ಭರದಿಂದ ಸಾಗುತ್ತಿದ್ದವು.

'ಬೇಟೆಗಾರರು ಪ್ರಾಣಿಗಳನ್ನು ಬೆನ್ನಟ್ಟುತ್ತ ಅಲ್ಲಲ್ಲಿ ಕಣ್ಣಿಗೆ ಬಿದ್ದ ಮತ್ತು ಕೈಗೆ ಸಿಕ್ಕ ಬೆಳುವ, ಗಿಡುಗ, ಹೆಗ್ಗಿಡುಗ ಹಾಗೂ ಹುಲಿಯ ಕಣ್ಣನ್ನು ಕುಕ್ಕಿಕೊಲ್ಲುವ ಭರದ್ವಾಜ ಮೊದಲಾದ ಪಕ್ಷಿಗಳನ್ನು ಬೇಟೆಯಾಡುತ್ತಿದ್ದರು. ಹೀಗೆ ಕುಮ್ಮಟ ಅರಸರ ಅವಧಿಯಲ್ಲಿ ಬೇಟೆ ರಕ್ಷಣೆ, ವಿನೋದವಾಗಿ ಮೂಡಿಬಂದಿದೆ.

ವಿಜಯನಗರ ಕಾಲದಲ್ಲಿ ಬೇಟೆ ಸಂಸ್ಕೃತಿ

ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಬೇಟೆ ಉತ್ತುಂಗ ಶಿಖರ ಮುಟ್ಟಲು ಕಾರಣ ಆಳರಸರು ಮತ್ತು ಜನಸಾಮಾನ್ಯರು ಬೇಟೆಯನ್ನು ಒಂದು ಪ್ರಮುಖ ಉದ್ಯೋಗವನ್ನಾಗಿ ಮಾಡಿಕೊಂಡಿದ್ದರು. ಈ ಕುರಿತಂತೆ ನಮಗೆ ಅನೇಕ

ಆಧಾರಗಳು ಲಭ್ಯವಿವೆ; ಅವುಗಳೆಂದರೆ: ಪುರಾತತ್ವ ಆಧಾರಗಳು ಮತ್ತು ಸಾಹಿತ್ಯ ಆಧಾರಗಳು. ಪುರಾತತ್ವ ಆಧಾರಗಳಲ್ಲಿ ಶಾಸನ, ವೀರಗಲ್ಲು, ಮಹಾಸತಿ ಕಲ್ಲು, ನಾಣ್ಯ, ಶಿಲ್ಪ, ದೇವಾಲಯ ಮತ್ತು ಅವಶೇಷಗಳನ್ನು ಹೆಸರಿಸಬಹುದು. ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ನೋಡಿದರೂ, ಪ್ರಮುಖವಾಗಿ ಹಂಪಿ, ಲೇಪಾಕ್ಷಿ, ಕಂಪ್ಲಿ, ಕಮಲಾಪುರ, ಮರಿಯಮ್ಮನಹಳ್ಳಿ ಮತ್ತು ಗುಡೆಕೋಟೆ ಮುಂತಾದ ಸ್ಥಳಗಳನ್ನು ಉದಾಹರಿಸಬಹುದು. ಸಾಹಿತ್ಯ ಆಧಾರಗಳು ಎರಡು : ದೇಶೀಯ ಮತ್ತು ವಿದೇಶೀ ಸಾಹಿತ್ಯ. ವಿದೇಶಿ ಸಾಹಿತ್ಯ ಆಧಾರಗಳಲ್ಲಿ ಭಾರತಕ್ಕೆ ಭೇಟಿ ನೀಡಿದ ವಿದೇಶಿ ಪ್ರಯಾಣಿಕರ ನೆನಪುಗಳಲ್ಲಿ ಬೇಟೆಯ ಉಲ್ಲೇಖಗಳನ್ನು ಗುರುತಿಸಲಾಗುವುದು. ದೇಶಿಯ ಸಾಹಿತ್ಯ ಆಧಾರಗಳಲ್ಲಿ ತೆಲುಗು, ತಮಿಳು, ಸಂಸ್ಕೃತ ಮತ್ತು ಕನ್ನಡ ಕೃತಿಗಳನ್ನು ಅವಲೋಕಿಸಿದರೂ ಪ್ರಧಾನವಾಗಿ ತೆಲುಗು ಮತ್ತು ಕನ್ನಡ ಕೃತಿಗಳನ್ನು ಪರಿಗಣಿಸಬಹುದು. ಮಧ್ಯಕಾಲದ ಸಂದರ್ಭದಲ್ಲಿ ವಿಜಯನಗರ ಆಸ್ಥಾನದ ಕವಿಗಳು ಕಂಡ ಮೃಗಯಾ ವರ್ಣನೆಯ ಸಂದರ್ಭಗಳನ್ನು ಗುರುತಿಸಬೇಕಾಗುತ್ತದೆ.

ವಿಜಯನಗರ ಕಾಲದ ಅರಮನೆ, ಕೋಟೆ-ಕೊತ್ತಲ, ಸಾರ್ವಜನಿಕ ಕಟ್ಟಡ, ದೇವಾಲಯ, ಗೋಪುರ, ಕಲ್ಯಾಣಮಂಟಪ, ವಸಂತ ಮಂಟಪ, ಕಂಬಗಳ ಮಂಟಪ, ಕೆರೆ ಕಟ್ಟೆ, ಕಾಲುವೆ, ಪಟ್ಟಣ, ಆಣೆಕಟ್ಟು ಮತ್ತು ವಾಸದ ಮನೆಗಳ ಅವಶೇಷಗಳು ಕಂಡುಬರುತ್ತವೆ. ಹಂಪೆವಿರೂಪಾಕ್ಷ ದೇವಾಲಯದಲ್ಲಿ ಅದ್ಭುತವಾದ ವರ್ಣ ಚಿತ್ರಗಳಿವೆ. ಅಲ್ಲದೆ ಉಬ್ಬುಶಿಲ್ಪಗಳು, ಕಂಬಗಳಲ್ಲಿ ಕೆತ್ತಿರುವ ದೃಶ್ಯಗಳು ಮನಮೋಹಕವಾಗಿವೆ. 'ಅರ್ಜುನನು ನೀರಿನಲ್ಲಿ ಮೀನಿನ ಪ್ರತಿಬಿಂಬವನ್ನು ನೋಡಿ ಮೀನಿಗೆ ಗುರಿಯಿಟ್ಟು ಬಾಣ ಬಿಡುತ್ತಿರುವುದು, ಮಹಾರಂಗಮಂಟಪದಲ್ಲಿ ಹಂಸ, ಕುದುರೆಗಳಲ್ಲದೆ ಬೇಟೆಗಾರ್ತಿ ಮತ್ತು ಯೋಧರ ಸ್ತಬ್ಧ ಚಿತ್ರಗಳಿವೆ.[೫೩] ಮಹಾನವಮಿದಿಬ್ಬದ ಶಿಲ್ಪಗಳಲ್ಲಿ ಆನೆಗಳು, ಒಂಟೆಗಳು, ಕುದುರೆಗಳ ಸವಾರರು, ಚಾಕರರು, ಚಾತುಕೋಳಿ, ಬೇಟೆಯದೃಶ್ಯ, ಕಾಡಿನದೃಶ್ಯ ಮೊದಲಾದ ಉಬ್ಬು ಕೆತ್ತನೆಯಿಂದ ಅಲಂಕಾರ ಮಾಡಿದ್ದಾರೆ.[೫೪] ವಿಜಯನಗರದ ಸ್ಮಾರಕಗಳಲ್ಲಿ ಮಹತ್ವವಾದ ಮತ್ತು ಅಚ್ಚಳಿಯದೇ ಇರುವ ಒಂದು ಪ್ರದೇಶಕ್ಕೆ ಬೇಟೆಕಾರರ ಹೆಬ್ಬಾಗಿಲು ಎಂದು ಹೆಸರಿಟ್ಟುರುವುದನ್ನು ನೋಡಿದರೆ ಬೇಟೆಯ ಪ್ರಭಾವ ಎಷ್ಟಿತ್ತೆಂಬುದನ್ನು ಊಹಿಸಬಹುದು.[೫೫] ಈ ಬೇಟೆಕಾರರ ಹೆಬ್ಬಾಗಿಲು ಸಿಂಗಾರದ ಹೆಬ್ಬಾಗಿಲಿನಂತೆ ಪ್ರಧಾನವಾದ ಮಹಾದ್ವಾರವೆನಿಸಿದೆ. ಸಿಂಗಾರದ ಹೆಬ್ಬಾಗಿಲು ಎರಡನೇ ಹಂತಕ್ಕೆ ಪೂರ್ವದಿಂದಲೇ ನಗರಕ್ಕೆ ಪ್ರವೇಶಕೊಟ್ಟರೆ, ಹೊರಕೋಟೆಯ ಬೇಟೆಕಾರರ ಹೆಬ್ಬಾಗಿಲು ಮೊದಲಿಗೆ ಪೂರ್ವದಿಂದಲೇ ನಗರಕ್ಕೆ ಪ್ರವೇಶವನ್ನು ಕೊಡುತ್ತದೆ.

ವಿಜಯನಗರ ಕಾಲದ ಲೇಪಾಕ್ಷಿ ವೀರಭದ್ರದೇವಾಲಯದಲ್ಲಿ ಶಬರ-ಶಂಕರ ದೃಶ್ಯದ ಚಿತ್ರಗಳಿವೆ. ಅರ್ಜುನ ಮತ್ತು ಶಿವ ಮೂಕ ದಾನವ (ವರಾಹ)ಕ್ಕೆ ಬಿಲ್ಲಿಂದ ಬಾಣ ಬಿಡುವ, ಸತ್ತ ಹಂದಿಗಾಗಿ ಹೋರಾಡುವ ಸನ್ನಿವೇಶ ಕೆತ್ತಲಾಗಿದೆ. ಉಬ್ಬು ಚಿತ್ರಗಳಲ್ಲಿ ಅರ್ಜುನ-ಶಿವ ಮಾಯಾ ವರಾಹಕ್ಕಾಗಿ ಮಲ್ಲಯುದ್ಧ ಮಾಡುವುದು ಅದ್ಭುತವಾಗಿದೆ. ಶಿವ - ಪಾರ್ವತಿಯರು ಅರ್ಜುನನಿಗೆ ಪಾಶುಪತಾಸ್ತ್ರ, ಅಂಜನಾಸ್ತ್ರಗಳನ್ನು ನೀಡಿ ನಂದಿವಾಹನವೇರಿ ತೆರಳುವ ಉಬ್ಬುಶಿಲ್ಪ ಮನನೀಯವಾಗಿದೆ. ಗೋಪಾಲಕನು ಶಿವನಿಗೆ ನಮಸ್ಕರಿಸುವುದು ಮುಂತಾದ ಪೌರಾಣಿಕ ಕಥೆಗಳ ದೃಶ್ಯಗಳನ್ನು ಕೆತ್ತಿದ್ದಾರೆ. ಮೊದಲೇ ತಿಳಿಸಿರುವಂತೆ, ಹಂಪೆಯ ಮಹಾನವಮಿ ದಿಬ್ಬದಲ್ಲಿ ಬೇಡ-ಬೇಡತಿಯರಿಬ್ಬರೂ ಜಿಂಕೆಗಳನ್ನು ಬಲ್ಲು-ಬಾಣದಿಂದ ಹೊಡೆಯುವ ಅಪೂರ್ವ ದೃಶ್ಯಗಳನ್ನು ನೋಡಬಹುದು. ಬೇಟೆಯಲ್ಲಿ ಸತ್ತ ಪ್ರಾಣಿಯನ್ನು ಕೋಲಿಗೆ ಕಟ್ಟಿಕೊಂಡು ಮತ್ತು ಇಬ್ಬರು ಕೋಲಿಗೆ ಏರಿಸಿಕೊಂಡು ಹೆಗಲ ಮೇಲೆ ಹೊತ್ತು ಮನೆಗೊಯ್ಯುವರು. ಬೇಟೆ ಒಯ್ಯುವವರ ಮುಂದೆ ಇನ್ನೊಬ್ಬ ಬೇಟೆಗಾರ ಬಂದು ಬಿಲ್ಲಿಡಿದು ಪೌರುಷದಿಂದ ಹೋರಾಡುವ ರೀತಿಯಲ್ಲಿ

ನಡೆಯುವನು. ಇನ್ನೊಂದು ಕಡೆ ಜೋಡಿಯಾಗಿ ಬೇಟೆಯಾಡುವುದು, ಎದುರ-ಬದುರ ಪರಸ್ಪರ ವಿರುದ್ಧವಾಗಿರುವ ಪ್ರಾಣಿಗಳ ಬೇಟೆ, ಏಕಾಂಗಿ ವೀರನೊಬ್ಬ ಹುಲಿ ಬಾಯಲ್ಲಿ ದೊಡ್ಡ ಆಯುಧ ಇಡುವ ದೃಶ್ಯಗಳು ಗಮನೀಯವಾಗಿವೆ. ಈ ಮಹಾನವಮಿ ದಿಬ್ಬದ ಮತ್ತೊಂದು ಬದಿಯಲ್ಲಿ ೩ ಜನ ಬೇಡ -ಬೇಟೆಗಾರರು ಬಲ್ಲಿಡಿದು ಬೇಟೆ ನಾಯಿಯೊಂದಿಗೆ ಕಾಡಿನ ಪ್ರಾಣಿಗಳನ್ನು ಹಿಂಬಾಲಿಸುವ ದೃಶ್ಯ ಅದ್ಭುತವಾದದು.

ನಂತರ, ಹಜಾರರಾಮ ದೇವಾಲಯದ ದ್ವಾರಬಾಗಿಲ ಪಕ್ಕದಲ್ಲಿ ಹಂದಿ, ಚಿಗರೆ ಬೇಟೆ ಶಿಲ್ಪಗಳಿವೆ. ಕಂಪ್ಲಿ ಸೋಮೇಶ್ವರದೇವಸ್ಥಾನದಲ್ಲಿ ಬೇಟೆಯ ಉಬ್ಬು ಶಿಲ್ಪಗಳಿವೆ. ವಿಜಯನಗರ ಕಾಲಕ್ಕೆ ಸೇರಿದ ಗುಡೆಕೋಟೆಯ ಆಂಜನೇಯ ದೇವಾಲಯದಲ್ಲಿ ಬೇಟೆ ಶಿಲ್ಪ ಸೊಗಸಾಗಿದೆ. ಮರಿಯಮ್ಮನಹಳ್ಳಿಯ ಆಂಜನೇಯ ದೇವಾಲಯದಲ್ಲಿ ಹುಲಿಬೇಟೆ ವೀರಗಲ್ಲಿದೆ. ಈ ರೀತಿ ಅನೇಕ ಶಾಸನ, ವೀರಗಲ್ಲು, ಮಹಾಸತಿ ಕಲ್ಲು, ಉಬ್ಬು ಶಿಲ್ಪ, ದೇವಾಲಯ ಮತ್ತು ಕಂಬಗಳಲ್ಲಿ ಬೇಟೆದೃಶ್ಯಗಳು ಕಂಡುಬರುತ್ತವೆ. ವಿಜಯನಗರದ ಅರಸ ಎರಡನೇ ವೆಂಕಟನ ಆಸ್ಥಾನದಲ್ಲಿದ್ದ ರಾಮಾಜ ತಿರುಮಲ ಎಂಬುವನು ಪ್ರಭುವಿನ ಪ್ರೀತ್ಯರ್ಥವಾಗಿ ಆನೆಮಲೆ, ಏಳಿಮಲೆ ಮತ್ತು ಶಬರಿಮಲೆಗಳಲ್ಲಿ ಬೇಟೆಯಾಡುತ್ತಿದ್ದನಂತೆ. ದಕ್ಷಿಣದ ಆಲೆಮಲಬೆಟ್ಟಗಳಲ್ಲಿ, ಜೀವಿಸುತ್ತಿರುವ ಪೊಲ್ಲೆಯನ್ ಜನಾಂಗ ಮತ್ತು ಪರಾಂಬಿಕ್ಕಳಮ್‌ನಲ್ಲಿ ಜೀವಿಸುವ ಕಾಡರ್ ಜನಾಂಗಗಳಲ್ಲಿ ಬೇಟೆ ಜೀವಂತವಾಗಿದೆ. ಇಲ್ಲಿರುವ ಜನಾಂಗಗಳನ್ನು ಕಕೇಸಿಯನ್ನರು, ಮಂಗೋಲಾಯಿಡ್ ಮತ್ತು ನೀಗ್ರೋ ಎಂದು ಗುರುತಿಸಿದ್ದಾರೆ.

ವಿಜಯನಗರ ಕಾಲದ ಸ್ಥಳೀಯ ಆಡಳಿತದಲ್ಲಿ ಮಹಾನಾಯಕಚಾರ್ಯರು ರಾಜ ಮತ್ತು ಗ್ರಾಮಾಧಿಕಾರಿಗಳ ನಡುವಣ ಕೊಂಡಿಯಾಗಿದ್ದು, ಅವರ ಮೇಲಣ ಮೇಲ್ವಿಚಾರಕ ಅಧಿಕಾರ ಹೊಂದಿದ್ದರು. ಇವರು ರಾಜನು ಬೇಟೆಗೆ ಹೊರಡುವಾಗ ತಮ್ಮ ಬೇಡಪಡೆಯನ್ನು ಸಿದ್ಧಗೊಳಿಸಿ ಬೇಟೆಗೆ ಹೊರಡುತ್ತಿದ್ದರು. ಅಲ್ಲದೆ, ನವರಾತ್ರಿ ಹಬ್ಬದಲ್ಲಿ ೨೫ಕೋಣ, ೪೫೦ ಕುರಿಗಳನ್ನು ಬಲಿ ಕೊಡುತ್ತಿದ್ದರು. ಇದರಂತೆ ಜನಸಾಮಾನ್ಯರು ಬೇಟೆಗೆ ಅಂದು ಯಾವ ರೀತಿ ಮತ್ತು ಎಷ್ಟೆಷ್ಟು ಪ್ರಾಣಿಗಳನ್ನು ಕೊಲ್ಲುತ್ತಿದ್ದರೆಂದು ಊಹಿಸಿದರೆ ಸೋಜಿಗವಾಗುತ್ತದೆ.

ಕನ್ನಡ ಸಾಹಿತ್ಯ ಮತ್ತು ವಿದೇಶಿಯರ ವೃತ್ತಾಂತಗಳಲ್ಲಿ ಬೇಟೆಯ ಸಂದರ್ಭಗಳನ್ನು ವಿಜಯನಗರ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಅವಲೋಕಿಸಬಹುದು. ವೇರ್ಥಮ ಎಂಬ ಪ್ರವಾಸಿ 'ಈ ಜಾಗವು ಬೇಟೆಗೂ, ಹಕ್ಕಿಗಳನ್ನು ಹಿಡಿಯಲೂ ಬಹಳ ಚೆನ್ನಾಗಿದ್ದು ಎರಡನೆಯ ಸ್ವರ್ಗದಂತಿದೆ' ಎಂದಿರುವನು. ಇವನಂತೆ ಬಾರ್ಬೋಸ 'ಈ ಸಾಮ್ರಾಜ್ಯದ ಜನರು ಒಳ್ಳೆಯ ಬೇಟೆಗಾರರು, ಕ್ರೂರ ಮೃಗಗಳ ಮತ್ತು ಹಾರುವ ಹಕ್ಕಿಗಳ ಬೇಟೆಯಲ್ಲಿ ಸಮರ್ಥರು' ಎಂದು ತಿಳಿಸಿದ್ದಾನೆ. ೧೪೪೧ರಲ್ಲಿ ಅಬ್ದುಲ್ ರಜಾಕನು ಆನೆಗಳನ್ನು ಹಿಡಿಯುವ ಬೇಟೆ ಬಗ್ಗೆ ಉಲ್ಲೇಖಿಸಿರುವನು. ಪೆರ್ನಾಂವ್ ನೂನಿಜ್ ದೇವರಾಯ ಹಂಪೆಯಲ್ಲಿ ದೇವಾಲಯ ಕಟ್ಟಲು ಬೇಟೆಯೇ ಕಾರಣ ಎನ್ನುತ್ತಾನೆ. ದೇವರಾಯ ಬೇಟೆಯಾಡುತ್ತಾ ಒಂದು ಸ್ಥಳಕ್ಕೆ ಬಂದಾಗ ಅಲ್ಲಿ ಮೊಲವು ಬೇಟೆಯು ನಾಯಿಯನ್ನು ಹಿಮ್ಮೆಟ್ಟುವುದು ಕಂಡು ಆಶ್ಚರ್ಯಪಟ್ಟನಂತೆ. ಹೀಗೆ ಅನೇಕ ಉದಾಹರಣೆಗಳನ್ನು ಕೊಡಬಹುದು.

ಬೇಟೆಯು ಮಾನವನಿಗೆ ಆಹಾರ ಸಂಗ್ರಹಣೆಯ, ಮನೋರಂಜನೆಯ ಹವ್ಯಾಸವಾಗಿ ಮತ್ತು ಮತ್ತಿತರ ಸಾಧನವಾಗಿ ಜನಮನದಲ್ಲಿ ಅನೂಚಾನವಾಗಿ ಬೆಳೆದುಬಂದಿದೆ. ಜನರು ಹಸಿವನ್ನು ಇಂಗಿಸಿಕೊಳ್ಳಲು ಮೃಗಗಳನ್ನು ಕೊಲ್ಲುವುದು, ಉಳಿವಿಗಾಗಿ ಮೃಗಗಳೊಂದಿಗೆ ಹೋರಾಡುವುದು ಅನಿವಾರ್ಯವೂ ಆಗಿತ್ತು. ಬೇಟೆಯಾಡುವುದು ಒಂದು

ವಿನೋದ. ಇದಕ್ಕೆ ಮೃಗಯಾ ವಿನೋದವೆಂದು ಮತ್ತು ಕ್ಷತ್ರಿಯಧರ್ಮವೂ ಆಗಿತ್ತೆಂದು ಹೇಳಬಹುದು. ಬೇಡರು ಕಾಡಿನಲ್ಲಿ ಮೃಗಗಳ ಹಾವಳಿ ತೀವ್ರವಾದಾಗ ರಾಜನ ಬಳಿ ಬಂದು, ರಕ್ಷಣೆ ಕೋರಿದಾಗ, ರಾಜ ಒಪ್ಪಿ ಅವರೊಂದಿಗೆ ಬೇಟೆಗೆ ಹೋಗುತ್ತಾನೆ. ಉದಾ: ಇಕ್ಕಿ ಹಣೆಗೆ ಕೈಗಳ ರಾಯಗೆ ಲೀಲೆ ಮಿಕ್ಕು ಭಿನ್ನವಿಸಿದನಿಂತು: ಲೆಕ್ಕವಿಲ್ಲದ ಮೃಗತತಿ ಬಂದು ತಳಿಯೊಳ (ಳು) (ಬೇಲಿ, ಪಾಳಯ) ಪೊಕ್ಕುದು ಚಿತ್ತೈಸೆಂದ 'ಲೀಲೆಯಿಂದುಡು ಗೋರತೆ ಗೊಟ್ಟವನಿಗೆ ಭೂಪಾಲ ಪೊಯ್ಕಲು ಭೇರಿಯನು.[೫೬] ಹೀಗೆ ಹಿಂದಿನ ಕಾಲದಲ್ಲಿ ಅರಸರ ಬೇಟೆಗಾಗಿ ಕೆಲವು ಕಾಡುಗಳನ್ನು ಪ್ರತ್ಯೇಕಿಸಿ ಕಾಯ್ದಿರಿಸಿರುತ್ತಾರೆ. ಅಲ್ಲಿ ಕಾಡು ಪ್ರಾಣಿಗಳನ್ನು ಉತ್ಕೃಷ್ಟವಾಗಿ ಬೆಳೆಸಿ ಅರಸನನ್ನು ಬೇಟೆಗೆ ಹುರಿದುಂಬಿಸಿ ಕೊಲ್ಲಿಸುವ ಪ್ರವೃತ್ತಿ ರಾಜನ ಗುಣಗಳನ್ನು, ಶೌರ್ಯವನ್ನು ಹೆಚ್ಚಿಸುವ ಪ್ರಯತ್ನದಂತಿದೆ.

ವಿಜಯನಗರದ ಅರಸರು ಬೇಟೆಯಲ್ಲಿ ಪ್ರವೀಣರಾಗಿದ್ದಾರೆಂಬುದಕ್ಕೆ ಅವರಿಗಿದ್ದ ಬಿರುದುಗಳೇ ಸಾಕ್ಷಿ. ಎರಡನೇ ದೇವರಾಯನಿಗೆ 'ಗಜವೇಂಟೆಗಾರ' ಬಿರುದು ಪ್ರಸಿದ್ಧವಾದುದು. ಪ್ರೌಢಪ್ರತಾಪದೇವರಾಯ ಮಹಾರಾಯ, ಗಜವೇಂಟೆಕಾರ ದೇವೇಂದ್ರ ಎಂಬ ಬಿರುದುಗಳಿದ್ದವು. ೨ನೇ ದೇವರಾಯ ೧೪೩೪ರಲ್ಲಿ ಮಚ್ಚೇನಹಳ್ಳಿಗೆ ಬೇಟೆಗೆಂದು ಬಂದಾಗ ಜಟ್ಟಂಗಿರಾಮೇಶ್ವರ ದರ್ಶನಮಾಡಿ, ತನ್ನ ಬೇಟೆಯ ಕುರುಹಾಗಿ ೨೦ವರಹಗಳ ಆದಾಯ ಬರುವ ಒಂದು ಭೂಮಿಯನ್ನೇ ಉಂಬಳಿಯಾಗಿ ಕೊಟ್ಟನು.[೫೭] ೧೫೦೪ರ ಸಂದರ್ಭ ಉಮ್ಮತ್ತೂರಿನ ಮಹಾಮಂಡಲೇಶ್ವರ ನಂಜರಾಜ ಒಡೆಯರು 'ಗಜವೇಂಟೆಕಾರ' ಬಿರುದು ಪಡೆದಿದ್ದರು. ಹಾಗೆಯೇ ಇಮ್ಮಡಿ ರಾಜ ಒಡೆಯರಿಗೆ ಆನೆ ಮತ್ತು ಜಿಂಕೆಗಳ ಕ್ರೀಡೋತ್ಸವವನ್ನು ಏರ್ಪಡಿಸುತ್ತಿದ್ದರು. ಅವರಿಗೆ 'ಗಜಮಾರ್ಗ ವಿಹಾರ' ಎಂಬ ಬಿರುದಿತ್ತು. ವಿಜಯನಗರ ಕಾಲದಲ್ಲಿ ಸಾಮಾನ್ಯ ವ್ಯಕ್ತಿ ಗಜಬೇಂಟೆಯನ್ನಾಡಿದ್ದರೂ ಅವರಿಗೆ ಮಹತ್ವವಿದ್ದಿರಲಿಲ್ಲ. ರಾಜನಾದವ ಅಲ್ಪವಾಗಿ ಸಾಧಿಸಿದರೆ ಸಾಕು ಬಿರುದು ಬಾವಲಿಗಳ ಸುರಿಮಳೆಗೈಯುತ್ತಿದ್ದರು. ರಾಜನಿಗೆ ಕೊಡುವ ಗೌರವವು ಅದಾಗಿತ್ತೆನ್ನಬಹುದು.

ವಿಜಯನಗರ ಕಾಲದ ಸಂಸ್ಕೃತಿಯ ಬಗ್ಗೆ ಬೆಳಕು ಚೆಲ್ಲುವ 'ಸಾಮ್ರಾಜ್ಯಲಕ್ಷ್ಮಿ ಪೀಠಿಕಾ' ಎಂಬ ಸಂಸ್ಕೃತ ಗ್ರಂಥದ ಬಗ್ಗೆ ರಾಧಾಕೃಷ್ಣಮೂರ್ತಿ ಅವರು ಕೆಲವು ವಿವರಗಳನ್ನು ಕೊಡುತ್ತಾರೆ. ಕೃತಿಯ ಮೊದಲ ಅಧ್ಯಾಯದ ತರುವಾಯ ಮತ್ತೊಂದು ಅಧ್ಯಾಯದಲ್ಲಿ 'ರಾಜನ ಪಟ್ಟಾಭಿಷೇಕ, ರಾಜನ ನಿತ್ಯ ನೈಮಿತ್ತಿಕ ಕಾರ್ಯಗಳು, ಯುದ್ಧ ಸ್ಥಿತಿ, ಧನುರ್ವಿದ್ಯೆ, ಅಶ್ವವಿದ್ಯೆ, ಗಜವಿದ್ಯೆ, ರಥಗಳು, ಹಬ್ಬಗಳು, ಹರಕೆಗಳು, ಉಪಾಸನೆ, ಯಾತ್ರಾಸ್ಥಳಗಳು, ಅಶುಭ ಸೂಚನೆಗಳು, ಅರಣ್ಯಗಳು, ಅರಮನೆಗಳು, ಬೇಟೆ, ರಾಜ್ಯದ ಅಧಿಕಾರಿಗಳು ಹೀಗೆ ಮುಂತಾದ ವಿಷಯಗಳು ವಿಸ್ತಾರವಾಗಿವೆ ಮತ್ತು ಒಬ್ಬ ರಾಜಕುಮಾರನು ತಿಳಿಯಲೇಬೇಕಾದ ಅನೇಕ ಸುದ್ದಿ ಸಮಾಚಾರಗಳಿವೆ.[೫೮]

'ಸಾಮ್ರಾಜ್ಯಲಕ್ಷ್ಮಿ ಪೀಠಿಕಾ'ದಲ್ಲಿ ಬೇಟೆಗೆ ಸಂಬಂಧಪಟ್ಟ ಒಂದು ಅಧ್ಯಾಯ ಇದೆ. ರಾಜನು ಬೇಟೆಯ ಅಭ್ಯಾಸ ಮಾಡಬೇಕೆಂದೂ ಮತ್ತು ನಗರ ಹಾಗೂ ಪಟ್ಟಣಗಳನ್ನು ಕ್ರೂರಮೃಗಗಳ ಹಾವಳಿಯಿಂದ ರಕ್ಷಿಸಲು ಆಗಿಂದಾಗ್ಗೆ ಬೇಟೆಗೆ ಹೊರಡುತ್ತಿರಬೇಕೆಂದೂ ಇದು ರಾಜನಿಗೆ ಉಪದೇಶಿಸುತ್ತದೆ. ಇದರಿಂದ ಆತನ ಶಕ್ತಿ ಹೆಚ್ಚುತ್ತದಲ್ಲದೆ ಬೇರೆ ದೇಶಗಳಲ್ಲಿ ಪ್ರಖ್ಯಾತನೂ ಆಗಬಹುದು. ಈ ಅಧ್ಯಾಯದಲ್ಲಿ ಬೇಟೆಯ ಬಗೆಗೆ ಕುತೂಹಲಕಾರಿಯಾದ ವರ್ಣನೆಗಳಿವೆ. ಕೇವಲ ಕಾಲ ಕಳೆಯಲು ಬೇಟೆಯ ಶಿಫಾರಸ್ಸು ಮಾಡಿಲ್ಲ. ಅದು ಒಂದು ಅತಿ ಅವಶ್ಯಕವಾದ ಕಲೆ. ಇದರಿಂದ ಯುದ್ಧ ವಿಜ್ಞಾನ ಹಾಗೂ ರಾಜನೀತಿ ವಿಜ್ಞಾನದ ಜ್ಞಾನ ಉಂಟಾಗುತ್ತದೆ. ಸಂಪೂರ್ಣ ಮಲ್ಲಿಕಾರ್ಜುನ ಮರಗಳಿರುವ ಶ್ರೀ ಶೈಲದಂತಹ ಅರಣ್ಯಗಳನ್ನು ಬೇಟೆಯಾಡಲು ಆಯ್ದುಕೊಳ್ಳಲು ಶ್ರೀ ಶೈಲ ತಟವತ್ ಉಲ್ಲಸನ್ ಮಲ್ಲಿಕಾರ್ಜುನಮ್

ಗ್ರಂಥದಲ್ಲಿ ತಿಳಿಸಿರುವುದನ್ನು ಗಮನಿಸಬಹುದು.

ಮಹಾಕಾವ್ಯಗಳಿಗೆ ಅಷ್ಟಾದಶವರ್ಣನೆಗಳಲ್ಲಿ ಮೃಗಯಾ (ಬೇಟೆ) ಒಂದಾಗಿರುವುದರಿಂದ ಆ ಕಾಲದಲ್ಲಿ ಬರುವ ಬೇಟೆಯ ವರ್ಣನೆ ಸಮಗ್ರವಾಗಿದ್ದು, ಪ್ರಾಯೋಗಿಕವಾಗಿರುವಂತಿದೆ. ಬೇಟೆಯಲ್ಲಿ ಮೃಗ ಪಕ್ಷಿಗಳನ್ನು ಹಿಡಿಯಲು ಬಲೆ ಅತಿ ಮುಖ್ಯ. 'ಸಿಲುಕುವುದು ಮೃಗ, ಪಕ್ಷಿ ಹೂಡಿದ ಬಲೆಗಳಲಿ ಕಾಡಾನೆ ಬೀಸಿದ ಬಲೆಯಕೊಂಬುದೆ ಎಂದು ತಿಳಿದು ಬರುತ್ತದೆ. ವಿವಿಧ ರೀತಿಯ ಪ್ರಾಣಿಗಳನ್ನು ಹಿಡಿಯಲು ವಿವಿಧ ಬಗೆಯ ಬಲೆಗಳನ್ನು ಬಳಸುತ್ತಿದ್ದರು.[೫೯] ಬೇಟೆಗಾರರು ಉಪಯೋಗಿಸುತ್ತಿದ್ದ ನಾನಾ ರೀತಿಯ ಬಲೆಗಳನ್ನು ಕೆಲವು ಕವಿಗಳು ಹೇಳಿದ್ದಾರೆ. 'ಬೆಳ್ಳಾರವಲೆ (ದನ ಹಿಡಿಯುವ ಉರುಲು), ಖಂಡವಲೆ (ತುಂಡು ತುಂಡು ಕೂಡಿಸಿದ ಬಲೆ), ತಡಿಕವಲೆ (ಹಕ್ಕಿ ಬೇಟೆಗೆ ಉಪಯೋಗಿಸುವುದು), ಗುಂಡುವಲೆ, ಬೀಸುವಲೆ (ಬೀಸುವ ಬಲೆ) ದಂಡಿವಲೆ (ಕೋಲಿಗೆ ಕಟ್ಟಿದ ಮತ್ತೊಂದು ಪ್ರಕಾರದ ಬಲೆ= ದಡಿವಲೆ), ತೊಡಕುವಲೆ (ಕಾಲಿಗೆ ಸುತ್ತಿಹಾಕುವ ಬಲೆ) ಹಿಂಡುವಲೆ (ಬಲೆಗಳ ಗುಂಪು), ಮಯಣ ದಂಟಿನ ಮಂಡವಿಗೆ ಬಲೆ (ಅಂಟನಿಂದ ತಯಾರಿಸಿದ ಬಲೆ), ಕೋಲುವಲೆ (ಕೋಲಿನ ತುದಿಗೆ ಕಟ್ಟಿದ ಬಲೆ, ಇದರಿಂದ ಹಂದಿಗಳನ್ನು ಹಿಡಿಯುತ್ತಾರೆ). ಸಿಡಿವಲೆ, ಮಿಡಿವಲೆ, ಹೆಬಲೆ, ಕಡ್ಡಿದ ಬಲೆ; ಕುಣಿವಲೆ, ಓಡಿವಲೆ, ಸೆಳವಲೆ, ಕಾಲ್ವಳೆ, ಕೊರಲ್ವಲೆ, ನಿಡಿವಲೆ, ಬಡಿವಲೆ, ಕಪಿಬಲೆ ಮುಂತಾದವು ಕಂಡುಬರುತ್ತವೆ.

ನಂಜುಂಡಕವಿ ವಿರಚಿತ ರಾಮನಾಥ ಚರಿತೆಯ 'ಕಂಪಿಲನು ಬೇಟೆಗೆ ಹೊರಟ ಸಂದರ್ಭದಲ್ಲಿ ಬರುವ ಬೇಡ -ಬೇಡತಿಯರ ವರ್ಣನೆಯು ಬೇಟೆಯಲ್ಲಿ ಬಳಸುವ ಅನೇಕ ರೀತಿಯಾದ ಬಲೆ ಮತ್ತು ಇತರ ಸಾಧನಗಳ ವಿವರವು ಕಂಡುಬರುತ್ತದೆ. ಬೇಡರಂತೆ ಬೇಡತಿಯರೂ ತಮಗೆ ತಕ್ಕಂತೆ ತೊಡೆ ಚಲ್ಲಣ, ಮೊಲೆಕಟ್ಟು, ಹೆಣೆದಜಡೆ, ಕಲ್ಲಿ ಸುರಗಿಗಳಿಂದ ಕೂಡಿ ಬಂದರು'.[೬೦] ಶಬರರು ಹೆಬ್ಬಲೆ, ತೆರೆಸೀಲೆ, ಕಾಲ್ಕಾಗ್ಗೆ ಬೆಳ್ಳಾರ, ಹಬ್ಬುಗೆವಲೆ, ಕುಡುಗೋಲು, ಕತ್ತಿ, ಕೊಡಲಿ, ಹೇರಿಟ್ಟ, ಬಡಿಗೋಲು, ಇಡುಕ್ಕೆದು, ಗುಡಿ, ಗುಡಾರ, ಸರಾತಿ ಪೆಟ್ಟಿಗೆ, ಗಿಂಡ ಪಡಿಗ, ಮಂಚ, ಮುಂತಾದ ಸಕಲ ಸಾಮಗ್ರಿಗಳನ್ನು ಅಣಿಮಾಡಿಕೊಂಡು ಹೊರಡುವ ದೃಶ್ಯವಿದೆ.

ಕನ್ನಡ ಕಾವ್ಯಗಳಲ್ಲಿ ಬೇಟೆಯಾಡಿದ ನಾನಾ ವಿಧವಾದ ಪಕ್ಷಿಗಳ ಹೆಸರುಗಳು ಕಂಡುಬರುತ್ತವೆ: 'ಮಹಾದೇವಿಯು ಕಲ್ಯಾಣಕ್ಕೆ ಬರುವಾಗ ಈ ಮೃಗಗಳ ಬೇಟೆಯನ್ನು ನೋಡಿದಳು ; ಸೊಕ್ಕಾನೆ (೧೪೪೧ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ ಅಬ್ದುಲ್ ರಜಾಕನು ಜನರು ಆನೆಗಳನ್ನು ಹಿಡಿಯುತ್ತಿದ್ದ ರೀತಿಯನ್ನು ವರ್ಣಿಸಿರುವನು. ಅದು ಸ್ವಲ್ಪಮಟ್ಟಿಗೆ ಖೆಡ್ಡಾವನ್ನು ನೆನಪಿಗೆ ತರುತ್ತದೆ.[೬೧] ವೇಂಟೆರಲ ವೇಂಟೆ[೬೨] ಮರವೇಂಟೆ ಮಲ ತೆಕ್ಕಲನ ಬೇಂಟೆ ೨ ನೇ ದೇವರಾಯನ ಸೋದರ ಮಹಾಮಂಡಲೇಶ್ವರ ವೀರಪಾರ್ವತಿರಾಜ ಒಡೆಯರು ಹಂದಿ ಬೇಟೆಯಾಡಿದ ವಿಚಾರವಿದೆ. ಹರಿಶ್ಚಂದ್ರಕಾವ್ಯದಲ್ಲಿ ಹಂದಿ ಬೇಟೆಯ ಸೊಗಸಾದ ಚಿತ್ರವಿದೆ. ಹೆಬ್ಬುಲಿ ವೇಂಟೆ ಬಗ್ಗೆ ಕಾಳಹಸ್ತಿ ದೇವಾಲಯದಲ್ಲಿ ದೊರಕಿದ ೧೪ನೇ ಶತಮಾನದ ಒಂದು ದಾಖಲೆ ಅಯ್ಯೋಧ್ಯಾಪುರ ದೊರೆ 'ಪೆಳ್ಳಿವರಸು' ಎಂಬವನು ೧೫೦ ಹುಲಿಗಳನ್ನು ಕೊಂದಂತೆ ಹೇಳಿದೆ. ಕತ್ತುರಿಯ ಬೆಕ್ಕುಗಳ ಬೇಂಟೆ ಝುಲ್ಲರಿಯ ಮಿಗವೇಂಟೆ ಗಂಡಿನ ಸಿಂಗವೇಂಟೆ ಪಲವು ಪಕ್ಕಿಗಳ ಬೇಂಟೆಯುಡುವೇಂಟೆ ಮೊಲವೇಂಟೆ (ಇಲಿ, ಏಡಿ, ಅಣಿಲು(ಳ), ಆಮೆ, ಮೊದಲಾದ ಬೇಟೆ ಬಗೆಗಳು ಸೊಬಗಿನಸೋನೆಯಲ್ಲಿವೆ. ಜಲ ದಿರ್ಕೆಯೊಳ್ಜಲ ಜಂತುಗಳ (ಜಾಲಗಾರನೊಬ್ಬ ಮೀನನ್ನು ಗಾಳದಿಂದ ಹಿಡಿಯುವಂತೆ) ಬೇಂಟೆಯಾಡು ಏರ್ಪಿಕ್ಕಳಿಯ ಪೂವಿನಳ್ತಿಗರು ಗುಂಜಾ ಭರಣದಂಜನ ನಿಭಾಂಗರಲ್ಲಲ್ಲಿ ವಿಷಯಗಳು

ಗಮನಾರ್ಹ.[೬೩]

ಬೇಟೆ ಹಸಿವಿನ ದಾಹದ ಬಯಕೆ ತೀರಿಸುವುದಾಗಿರದೆ ಲಾಭ ನಿಮಿತ್ತವೂ ಆಗಿತ್ತು. ಪ್ರಾಣಿಗಳ ಚರ್ಮ, ಹಲ್ಲು, ಕೊಂಬು, ಉಗುರು ಇತ್ಯಾದಿ ವಸ್ತುಗಳಿಗೆ ಅಂದು ಅಪಾರ ಬೇಡಿಕೆ ಇತ್ತು. ಹೀಗೆ ವ್ಯಾಪಾರ ವಹಿವಾಟನಿಂದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಕನಕದಾಸರು ಬೇಟೆಯ ವರ್ಣನೆಯಲ್ಲಿ 'ಬೇಡರು' ಕರಿಯ, ಝುಲ್ಲರಿ, ಬೆಳ್ಳವ್ಯಾದಿ, ಕಸ್ತೂರಿ, ಪುಣಗಿನ ಚೆಟ್ಟು, ಗೋರೋಜನ, ಕೃಷ್ಣಾಜ, ಹುಲಿ ಚರ್ಮ, ನರಿಕೊಂಬು, ಕಾಡೆಮ್ಮೆಯ ಕೋಡು, ವರಹ ದಂತಿಯ ದಾಡೆ, ನಾಡೆ, ಶಾರ್ದುಲ ಸಿಂಹಗಳ ಗೂಢಪಾದಾಂಗುಳಿ ಖಭೇರುಂಡನ ರೂಢ ಪೆರ್ಗರೆಯತ್ತರೊಲಿದು ಎಂದು ತಿಳಿಸಿದ್ದಾರೆ.[೬೪] ಕಾಗೆ, ನವಿಲು, ಕಬ್ಬಾಯ, ಗುಬ್ಬಿ, ಕೊಂಚ, ಗೂಬೆ, ಮರವ, ಪಾರಿವ, ಜಾಗರಿಗ, ಹರಡೆ, ಹಂಗ, ಗೊರವಕ್ಕ, ಮೂಗಿಲಗಣ್ಣಿನ ಹಸುಬ ಎಂಬ ಪಕ್ಷಿಗಳ ಹೆಸರುಗಳನ್ನು ರಾಮನಾಥ ಚರಿತೆ (೨೭-೮೫)ಯಲ್ಲಿ, ಕಕ್ಕರೆ, ಕನ್ನವಿಲು, ಕೌಡೆ, ಗಿಡುಗ, ಗಿಳಿ, ಗೌಜು, ಸರಲೆ ಇತರ ಪಕ್ಷಿಗಳು ಬೇಟೆಗೊಳಗಾದವೆಂದು ದೇವರಾಜ ಕವಿ ಸೊಬಗಿನಸೋನೆಯಲ್ಲಿ ಹೇಳುತ್ತಾನೆ.

ಹೀಗೆ ವಿಜಯನಗರದರಸರು ಮತ್ತು ಕವಿಗಳು ತೆಲುಗು ಮತ್ತು ಕನ್ನಡದಲ್ಲಿ ಕಾವ್ಯ ಕೃತಿಗಳನ್ನು ರಚಿಸುವಾಗ ಮೃಗಯಾ ವಿಹಾರದ ವರ್ಣನೆಯನ್ನು ಬಿಟ್ಟಿಲ್ಲ. ಕನ್ನಡದ ಅಷ್ಟಾದಶ ವರ್ಣನೆಯಿರುವ ಪ್ರತಿ ಕಾವ್ಯದಲ್ಲಿಯೂ ಈ ವರ್ಣನೆಯಿದೆ. ವನ್ಯ ಹಾಗೂ ಕೃಷಿ ಸಂಪತ್ತು, ಖಗ ಮೃಗಗಳು ಇಲ್ಲಿ ಪ್ರಧಾನವಾಗಿವೆ. ವಿಜಯನಗರ ಕಾಲದಲ್ಲಿ ವಿದೇಶಿ ಪ್ರವಾಸಿಗರು ಬೇಟೆಯಾಡುತ್ತಿದ್ದ ಸ್ಥಳ, ಆನೆಯನ್ನು ಹಿಡಿಯುವುದು ಬಿಟ್ಟರೆ ಬೇಟೆ ಬಗ್ಗೆ ಬೇರೇನೂ ಹೇಳಿದಂತಿಲ್ಲ. ಹಾಗೆಯೇ ಶಾಸನಗಳಲ್ಲಿ ಕೆಲವು ರಾಜರು; ರಾಜ ಮಾನ್ಯರು ಅನೇಕ ಸಂದರ್ಭಗಳಲ್ಲಿ ಬಂದು ನಾನಾ ಮೃಗಗಳನ್ನು ಬೇಟೆಯಾಡಿದುದು, ಆ ನೆನಪಿಗಾಗಿ ಕೆಲವು ಉಂಬಳಿಗಳನ್ನು ಬಿಟ್ಟದ್ದು- ಇಷ್ಟು ಹೊರತಾಗಿ ಹೆಚ್ಚಿನ ವಿಷಯಗಳು ಕಂಡು ಬರುವುದಿಲ್ಲ ಎಂದು ತಿಳಿದು ಬರುತ್ತದೆ.[೬೫] ವಾಸ್ತವವಾಗಿ ಬೇಟೆಗೆ ಜನ ಯಾವ ಕಾರಣಕ್ಕಾಗಿ ಹೋಗುತ್ತಿದ್ದರು, ಉಪಕರಣಗಳ ಪ್ರಯೋಗ, ಬೇಟೆಗೆ ಸಿದ್ಧತೆ, ಬಲೆಗಳು, ಬೇಟೆಯ ಪಡೆ, ಪ್ರಾಣಿಗಳನ್ನು ಯಾವ ರೀತಿ ಸುತ್ತುಗಟ್ಟುತ್ತಿದ್ದರು, ಬೇಟೆಯಲ್ಲಿ ಸಂಗ್ರಹಿಸಿದ ವಸ್ತುಗಳು, ಬೇಟೆಗಾರರ ವೇಷಭೂಷಣಗಳು ಮುಂತಾದ ವಿಷಯಗಳನ್ನು ವಿಜಯನಗರ ಕಾಲದ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ.

ವಿಜಯನಗರೋತ್ತರ ಸಂದರ್ಭದಲ್ಲಿಯೂ ಬೇಟೆ ಸಾಗಿಬಂದಿತ್ತು. ಚಿತ್ರದುರ್ಗ ಪಾಳೆಯಗಾರರು ಬೇಟೆಯಲ್ಲಿ ನಿಷ್ಣಾತರು. ಮದಿಸಿದ ಆನೆಯನ್ನು ಪಳಗಿಸಿದ್ದರಿಂದಲೇ ಮದಕರಿ ಬಿರುದು ಬಂದಿದೆಯೆಂಬ ಐತಿಹ್ಯವಿದೆ. ಬೇಡ ಅರಸರಾದ ಇವರು ಸಹಜವಾಗಿಯೇ ಬೇಟೆಯನ್ನು ರೂಢಿಸಿಕೊಂಡಿದ್ದರು. ಈ ಅರಸರ ಪೈಕಿ ಕಸ್ತೂರಿ ರಂಗಪ್ಪನಾಯಕ ಮತ್ತು ರಾಜವೀರ ಮದಕರಿನಾಯಕರಿಗೆ 'ಗಾದ್ರಿಮಲೆ ಹೆಬ್ಬುಲಿ' ಎಂಬ ಬಿರುದುಗಳಿದ್ದವು.

ಗುಡೆಕೋಟೆ ಪಾಳೆಯಗಾರರು

ಗುಡೆಕೋಟೆ ಪಾಳೆಯಗಾರರ ಇತಿಹಾಸ ಆರಂಭವಾಗುವ ಮುನ್ನವೇ ಬೇಟೆಯ ಪ್ರಸಂಗ ಬರುತ್ತದೆ. ಸೊಂಡೂರಿನ ಕಾರ್ತಿಕೇಯನ ಕ್ಷೇತ್ರಕ್ಕೆ ಆ ಪ್ರಾಂತದವರೂ ಆಡಗಿ ಈರಣ್ಣನ ತಗ್ಗು, ಎಂಬ ಸ್ಥಳದವರೆಗೂ ಹೋಗಿ ಅಲ್ಲಿಯೇ ಕಾಯಿ ಕರ್ಪೂರ ಮಾಡಿಕೊಂಡು ಕೈ ಮುಗಿದು ಬರುತ್ತಾರೆ. ಹೀಗೆ 'ಮಳೆನೋರು ಎಂದು ಮನೆತನದ ಹೆಸರಿರುವ ಪಾಳೆಯಗಾರನು ಬೇಟೆಗೆ ಹೋದಾಗ ನಾಯಿ ನೀರು ಕುಡಿದು ಬಂದುದನ್ನು ನೋಡಿ ಕೊಳವನ್ನು ಕಂಡು

ಬಟ್ಟೆಯ ತುಂಡುಗಳನ್ನು ಅಲ್ಲಲ್ಲಿ ಅಡಗಿ ಈರಣ್ಣನ ತಗ್ಗಿನವರೆಗೆ ಗುರುತು ಕಟ್ಟ ತರುವಾಯ ಪರಿವಾರ ಸಹಿತವಾಗಿ ಹೋಗಿ ಗಿಡಗಳನ್ನು ಕಡಿದು ಬಯಲುಮಾಡಿಸಿದನು. ಅಲ್ಲಿ ಗೋಪುರ ಗುಡಿಗಳು ಇರುವುದನ್ನು ನೋಡಿ ಅಂಜದ ಅವರು ಸ್ವಾಮಿಯ ಗುಡಿಗೆ ಬಂದು ಬಾಗಿಲು ತೆರೆದರು. ಅಲ್ಲಿ ದೀಪಗಳಿರುವುದನ್ನು ಕಂಡು ಇನ್ನಷ್ಟು ಅಂಜಿಕೂಡಲೇ ನೆಲಕ್ಕೆ ಕುಕ್ಕರಿಸಿ ಬಿದ್ದರು. ಅವರು ಸ್ವಲ್ಪ ಸಮಯದ ನಂತರ ಚೇತರಿಸಿಕೊಂಡು 'ಏಕಮುಖ, ದ್ವಿಭುಜ, ಬಲಗೈಯಲ್ಲಿ ಶಕ್ತ್ಯಾಯುಧವನ್ನು ಎಡಗೈಯಲ್ಲಿ ಕ್ರೌಂಚ ಪಕ್ಷಿಯನ್ನು ಧರಿಸಿನಿಂತಿದ್ದ. ಸುಂದರವಾದ ಶ್ರೀ ಕುಮಾರಸ್ವಾಮಿಯ ಮೂರ್ತಿಯನ್ನು ಕಂಡರು. ಈ 'ಮಳೆನೋರು' ಮನೆತನದ ಪಾಳೆಯಗಾರರು ಕೂಡ್ಲಿಗಿ ತಾಲೂಕಿನ ಗುಡೇಕೋಟೆ ಪಾಳೆಯಗಾರನಿಗೆ ಸಂಬಂಧಿಕನೆಂದು ಪ್ರತೀತಿಯಿದೆ.[೬೬] ಮಧ್ಯಕಾಲದ ಸಂದರ್ಭದಲ್ಲಿ ಮಂಗಳಕರ ವೇಳೆಯಲ್ಲಿ ರಾಜನು ಪರಿವಾರದೊಂದಿಗೆ ಬೇಟೆಗೆ ಹೋಗುತ್ತಿದ್ದ. ಮೊಲ, ಚಿಗರೆ, ಇತರೆ ಸಾಧು ಪ್ರಾಣಿಗಳು ಆಹುತಿಯಾದವು. ಈ ಲೇಖಕರು ಬೇಟೆಯಲ್ಲಿ ನಳ, ಧರ್ಮರಾಜರು ಸಪ್ತ ವ್ಯಸನಿಗಳೆಂದು ತಿಳಿಸಿ ಜೂಜನಲ್ಲಿ ಆಸಕ್ತಿ ಇದ್ದಂತೆ ಇವರಿಗೆ ಬೇಟೆಯಲ್ಲಿಯೂ ಆಸಕ್ತಿ ಇದ್ದಿತ್ತು. ಈ ಪ್ರದೇಶ ವ್ಯಾಪಕ ಅರಣ್ಯ ಹೊಂದಿರುವುದರಿಂದ ಬೇಟೆ ಸಹಜ ಪ್ರವೃತ್ತಿಯಾಗಿರಬೇಕು.

ಶಿವನ ಬೇಟೆಯಂತೆ ಸೊಂಡೂರು ರಾಜರು, ಪ್ರಜೆಗಳು ಸಹ ಬೇಟೆಯಾಡುತ್ತಿದ್ದರು. ಬೇಟೆಗೆ ಹೋಗುವ ಅಭಿಲಾಷೆಯನ್ನು ಜನರಿಗೆ ತಿಳಿಸುವುದು, ಶಿಕಾರಿಗೆ ಶಬರಪಡೆ ಕರೆದುದು ಕಾಲೋಚಿತವಾದುದು. ರಾಜನು ಕಾರ್ತಿಕೇಯನನ್ನು ಧ್ಯಾನಮಾಡಿ ಉಪಹಾರವನ್ನು ತೆಗೆದುಕೊಂಡು ಬೇಟೆಯ ಪೋಷಾಕನ್ನು ಹಾಕಿಕೊಂಡು ತಯಾರಾಗುತ್ತಿದ್ದಾಗ ತಟ್ಟನೆ ವಿಷಯ ತಿಳಿದ ಬೇಡರು ರೊಚ್ಚಿನ ಬೇಟೆಗೆ ಸಿದ್ಧರಾಗಿ ನಾಯಿ ಸಮೇತ ಹೋಗುತ್ತಿದ್ದರು.

ಬೇಟೆ ರುಚಿಕಂಡ ಬೇಟೆಗಾರರು ಹೊತ್ತು ಏರುವುದರೊಳಗೆ ಅನೇಕ ವನಚರ ಪ್ರಾಣಿಗಳನ್ನು ಕೊಲ್ಲುತ್ತಿದ್ದರು. ಕೆಲವು ಪ್ರಾಣಿಗಳನ್ನು ಅಲ್ಲೇ ಸುಟ್ಟು ತಿನ್ನುತ್ತಿದ್ದರು. ಸಾರಂಗ, ಕಡಿವೆ ಮೊದಲಾದ ಸಾಧುಪ್ರಾಣಿಗಳಾಗಿದ್ದವು. ಈ ಸಾಧುಪ್ರಾಣಿಗಳನ್ನು ಅಟ್ಟಿಸಿಕೊಂಡು ಹೋಗಿ ಬೇಟೆಯಾಡಿ ತಿನ್ನುವ ಕತ್ತೆ ಕಿರುಬ, ತೋಳ ಮೊದಲಾದ ಕ್ರೂರ ಮೃಗಗಳು ಈ ಹಿಂಸಾಮೃಗಗಳಿಗೆ ಮಣಿಯದ ಸಾಧುಪ್ರಾಣಿಗಳನ್ನು ಗಣನೆಗೆ ತಾರದ ಕಾಡುಹಂದಿ ಕಾಡೆಮ್ಮೆಗಳು ವಿಪುಲವಾಗಿದ್ದವು. ಮೃಗಯಾ ವಿಚಾರದಲ್ಲಿ ತೋರುತ್ತಲಿದ್ದ ಶೌರ್ಯೋತ್ಸಾಹಿಗಳಿಗೆ ಮೇಲಿನದು ಒಂದು ನಿದರ್ಶನ.

ಜರಿಮಲೆ ಪಾಳೆಯಗಾರರು

ಜರಿಮಲೆ ಪಾಳೆಯಗಾರರು ಕೂಡ್ಲಿಗಿ ತಾಲ್ಲೂಕಿನ ಜರಿಮಲೆ ಗ್ರಾಮದಿಂದ ಆಳ್ವಿಕೆ ನಡೆಸುತ್ತಿದ್ದ ಬೇಡ ಜನಾಂಗದ ವೀರರಾಗಿದ್ದಾರೆ. ಇವರು ತಮ್ಮ ಪಶುಗಳೊಂದಿಗೆ ಬಳ್ಳಾರಿ ಜಿಲ್ಲೆಯ ಗಂಗಮ್ಮನಹಳ್ಳಿ ದೋಣಿಗುಡ್ಡದವರೆವಿಗೂ ಬಂದಾಗ ಅಲ್ಲಿ ಸ್ವಾಮಿಗಳ ದರ್ಶನವಾಯ್ತು. ಆ ಸ್ವಾಮಿಗಳ ಪ್ರಕಾರ ಏಳುಮಂದಿ ಸಹೋದರರು ಮಳೆಭೂಪಸಮುದ್ರಕ್ಕೆ (ಜಗಳೂರು ತಾ॥) ಬಂದು ನೆಲಸಿದರು. ಆ ಕಾಡಿನಲ್ಲಿ ಬಿಳೀ ಹಂದಿ ದಾರಿಹೋಕರಿಗೆ ತುಂಬಾ ಉಪದ್ರವ ಕೊಡುತಿತ್ತು. ಬೇಸತ್ತ ಜನ ಗ್ರಾಮದ ಮುಖಂಡ ಭೈಯಪ್ಪನಿಗೆ ಮೊರೆಹೋದರು. ಅವನು ಕಂಚಿದೇಶದ ವೀರರೇ ಇದಕ್ಕೆ (ಕಂಚಿಯಿಂದ ಬಂದರೆಂಬ ಪ್ರತೀತಿ) ಸೂಕ್ತ ವ್ಯಕ್ತಿಗಳೆಂದನು. ಎಲ್ಲರೂ ಅವರಲ್ಲಿ ಬೇಡಿಕೊಂಡರು. ಶ್ರೀ ಮರುಳ ಸಿದ್ಧಾರ್ಯರನ್ನು ಪುನಃ ಸಂದರ್ಶಿಸಿ, ಆಶೀರ್ವಾದ ಪಡೆದು, ಏಳು ಮಂದಿ ವೀರರು ಹಂದಿಬೇಟೆಗೆ ನಡೆದರು. ಅವರುಗಳೆಂದರೆ ಸಿದ್ಧಪ್ಪನಾಯ್ಕ, ಲಿಂಗಳನಾಯ್ಕ, ಓಬಳನಾಯ್ಕ, ಮಲ್ಲಿಕಾರ್ಜುನನಾಯ್ಕ ಮುಂತಾದವರು.

ಏಳುಮಂದಿ ನಾಯಕಸಹೋದರರು ಮಳೆಭೂಪಸಮುದ್ರದಿಂದ ಏಳು ನಾಯಿಗಳ ಸಹಿತ ಬಳಿಹಂದಿಯನ್ನು ಹಿಂಬಾಲಿಸಿದರು. ಪರಾರಿಯಾದ ಹಂದಿ 'ನೀರ್ಕಲ್‌ಕೆರೆನಳ್ಳಿ' (ಚಿಕ್ಕಕೆರೆನಹಳ್ಳಿ) ವರೆಗೆ ಬಂದಿತು. ಅಲ್ಲಿದ್ದ ಹಳ್ಳದಲ್ಲಿ ಮೈನೆನೆಸಿಕೊಂಡು ಗುಡ್ಡದಲ್ಲಿ ಹೋಗಿ ಅಡಗಿತು. 'ಏಳು ಮಂದಿ ನಾಯ್ಕರ ಪೈಕಿ ಭೂಮರಾಜು ಎಂಬುವನು ಆ ಹಂದಿಗೆ ಭರ್ಚಿ ಹಾಕಿದ. ಹಂದಿ ಸಿಂಹದಂತಹ ಗರ್ಜನೆ ಮಾಡಿತು. ಪಕ್ಕದಲ್ಲಿದ್ದ ಗುಂಡು ಆ ಭಯಂಕರ ಗರ್ಜನೆಗೆ ಸಿಡಿದು ಹೋಯಿತು. ಇಂದಿಗೂ ಆ ಗುಂಡನ್ನು 'ಹಂದಿವಡೆದ ಕಲ್ಲು' ಎಂದು ಕರೆಯುತ್ತಾರೆ.[೬೭] ನಂತರ ಹಂದಿ ಅಲ್ಲಿಂದ 'ಉಜ್ಜಯಿನಿ' ಕಡೆ ಓಡಲಾರಂಭಿಸಿತು. ಇವರು ಹಿಂಬಾಲಿಸುತ್ತಿದ್ದರು. ಬೇಟೆಯಲ್ಲಿ ಅವರು ದಣಿದು ನಿಟ್ಟುಸಿರು ಬಿಡುತ್ತಿದ್ದರು. ಬಾಯಾರಿಕೆ, ಹಸಿವು ಉಲ್ಬಣಗೊಂಡಿತ್ತು. ಹಂದಿ ಉಜ್ಜಯನಿ ದೇವಾಲಯವಿರುವ ಸ್ಥಳದಲ್ಲಿ 'ಪೆಳೆ' ಪೊದೆಗಳಿದ್ದು, ಅದರಲ್ಲಿ ಹೋಗಿ ತಲೆಮರೆಸಿಕೊಂಡಿತು. ಈ ನಾಯಕರು ಮರದನೆರಳಿನಲ್ಲಿ ಬೀಡು ಬಿಟ್ಟರು. ನೀರಡಿಕೆಯಾದ ಭೂಮರಾಜುವಿಗೆ ನಾಯಿಯಿಂದ ದಾರಿಸಿಕ್ಕಿತು. ಆ ಪೊದೆಯ ಮಧ್ಯೆ ಜಲದಸ್ಥಾನ ಕಂಡು ನೀರು ಕುಡಿಯಲು ಹೋದ ನಾಯಕನಿಗೆ ಸಿದ್ದೇಶ್ವರ ಮಹಾಸ್ವಾಮಿಗಳ ದರ್ಶನವಾಯಿತು. ಭೂಮರಾಜುಗೆ ಸ್ವಾಮಿಗಳು ರಾಜನಾಗುವ ದೀಕ್ಷೆ ನೀಡಿದರು. ಹೀಗೆ ಜರಿಮಲೆ ಪಾಳೆಯಗಾರರು ತಮ್ಮ ಪರಿಸರದಲ್ಲಿ ಬೇಟೆಯಾಡುತ್ತಿದ್ದ ಬಗ್ಗೆ ಉಲ್ಲೇಖಗಳಿವೆ.

ಇತರೆ ರಾಜವಂಶಗಳು

ಮೊಘಲರು, ಇತರ ಮುಸ್ಲಿಮ ಅರಸರು ಬೇಟೆಯಲ್ಲಿ ಅಪಾರ ಸಾಧನೆ ಮಾಡಿದ್ದಾರೆ. ಮಹಿಳೆಯಾದ ನೂರ್‌ಜಹಾನ್ ಬೇಗಂ ಮೂರು ಸಿಂಹಗಳನ್ನು ಒಂದೇ ಬಾರಿ ಬೇಟೆಯಾಡುತ್ತಿದ್ದಳು. ಸುಲ್ತಾನರು ಮಂಗಳವಾರ ಮತ್ತು ಗುರುವಾರಗಳಂದು ಬೇಟೆಯಾಡುತ್ತಿದ್ದರು. ಅವರೊಂದಿಗೆ ಮೂವರು ವಜೀರರೂ ಹೋಗುತ್ತಾರೆ ಎಂದು ರಷ್ಯಾದ ಅಥನೇಷಿಯನ್ ಎಂಬ ಪ್ರವಾಸಿ ತಿಳಿಸಿರುವಂತೆ 'ಯುದ್ಧವಿಲ್ಲದ ವೇಳೆ ಅಕ್ಬರನಿಗೆ ಬೇಟೆಯಾಡುವ ಹವ್ಯಾಸವಿತ್ತಂತೆ. ಸರ್‌ಥಾಮಸ್ ರೋ ಜಹಾಂಗೀರ್‌ನ ಬೇಟೆ ಬಗ್ಗೆ ದಾಖಲಿಸಿದ್ದಾನೆ. ಆಗ ಷಾಹಜಾನನು ತಂದೆಯಂತೆ ಕಾಡು ಮೇಡುಗಳಲ್ಲಿ ಅಲೆದಾಡಿ ಪ್ರಾಣಿಗಳನ್ನು ಕೊಲ್ಲುತ್ತಿದ್ದನು. ಅವನು ಬೇಟೆಗೆ ಹೋಗುತ್ತಾನೆಂದು ಗೊತ್ತಾದಾಗ ಸೇವಕರು ಕಾಡಿಗೆ ಹೋಗಿ ಹುಲಿಗಳಿರುವ ಜಾಗ ಪತ್ತೆ ಹಚ್ಚಿ ಅವು ತಮ್ಮ ಸ್ಥಳವನ್ನು ಬದಲಾಯಿಸದೇ ಇರಲೆಂದು ಅಲ್ಲಿ ಕತ್ತೆ, ಹಸು, ಕುರಿಗಳನ್ನು ಬಿಡುತ್ತಾರೆ. ರಾಜ ಆನೆಯ ಮೇಲೇರಿ ಅಲ್ಲಿ ಬೇಟೆಯಾಡುತ್ತಿದ್ದನೆಂದು ನಿಕಲೊ ಮನುಚಿ ತಿಳಿಸುತ್ತಾನೆ.

ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರು ಬೇಟೆಗಾಗಿ ಶಿವಮೊಗ್ಗ ಜಿಲ್ಲೆಯ ಆಗುಂಬೆಯವರೆಗೂ ಹೋಗಿದ್ದರೆಂಬುದಕ್ಕೆ ಅವರು ಸ್ವತಃ ಹುಲಿಗಳನ್ನು ಕೊಂದ ಅನೇಕ ನಿದರ್ಶನಗಳಿವೆ.[೬೮] ವಿವಿಧ ಅರಸರು ಬೇಟೆಯಾಡಿದ ಉಲ್ಲೇಖಗಳು ಈ ಭಾಗದ ಜಾನಪದ ಸಾಹಿತ್ಯದಿಂದ ಬೆಳಕಿಗೆ ಬರುತ್ತವೆ.

ಕೊಡಗಿನಲ್ಲಿ ಹುಲಿ ಕೊಂದರೆ ರಾಜಸನ್ಮಾನ, ಮರ್ಯಾದೆ ಇದೆ. ಕೊಂದ ಬೇಟೆಯೊಂದಿಗೆ ಬೇಟೆಗಾರನಿಗೆ ಮದುವೆ ಮಾಡುವ 'ನರಮಂಗಲ' ಇಂದಿಗೂ ಪ್ರಸ್ತುತ. ಹೀಗಾಗಿ ಹುಲಿ ಬೇಟೆಗೆ ಇಲ್ಲಿ ಹೆಚ್ಚಿನ ಗೌರವವಿದ್ದು, ಪರಾಕ್ರಮವೆನಿಸಿದೆ. ದಕ್ಷಿಣಕನ್ನಡದಲ್ಲಿ 'ಕೆಡ್ಡಾಸ ಬೇಟೆ' ಪ್ರಸಿದ್ಧವಾಗಿದೆ. ಇತರ ಭಾಗಗಳಲ್ಲಿ ಸಂಗೀತದ ಮೂಲಕ ಬೇಟೆಯಾಡುತ್ತಾರೆ.

೧೮೦೧ರ ಒಂದು ಶಾಸನದಿಂದ ಕೊಡಗಿನ ಅರಸನಾದ ಲಿಂಗರಾಜೇಂದ್ರನು 'ಕಾಡಿನ ಬೇಟೆಯಲ್ಲು ದೊಡ್ಡ ಆನೆ ಹೊಡೆದು ಸಣ್ಣಮರಿ ಅನ್ನು ಕೈ ಸೆರ್ರೆ ಹಿಡಿದು ತಂದವನಿಗೆ ಬೆಳ್ಳಿಯ ಆನೆಯನ್ನು ಬಹುಮಾನ ವಾಗಿ ಕೊಡುತ್ತಾನೆ.ವಸಾಹತುಶಾಹಿ ಸಂದರ್ಭದಲ್ಲಿ ಬೇಟೆ ನಿರ್ದಾಕ್ಷಿಣ್ಯವಾಗಿತ್ತಲ್ಲದೆ, ಹೊಸದಾಗಿ ಬಂದ ಬಂದೂಕುಗಳ ಮೂಲಕ ಪ್ರಾಣಿಬೇಟೆ ಸುಲಭವಾಯಿತು. ಬ್ರಿಟಿಷ್ ಅಧಿಕಾರಿಗಳು ತಮ್ಮ ಪ್ರವಾಸ ಕಥನಗಳಲ್ಲಿ ಬೇಟೆಯ ಅನುಭವಗಳನ್ನು ಹಂಚಿಕೊಂಡಿದ್ದು ವಿಸ್ಮಯವೆನಿಸಿದೆ.

ಸ್ವಾತಂತ್ರ್ಯದ ಸಂದರ್ಭದಲ್ಲಿಯೂ ಬೇಟೆ ಆಹಾರದ ವಿಧಾನವಾಗಿತ್ತು. ಹೋರಾಟಗಾರರು ಬ್ರಿಟಿಷರಿಗೆ ತಲೆಮರೆಸಿಕೊಂಡು ಕಾಡಿನಲ್ಲಿ ವಾಸಿಸುತ್ತಿದ್ದಾಗ ಬೇಟೆಯನ್ನು ಅವಲಂಬಿಸಿದ್ದರು. ಮುಂಡರಗಿ ಭೀಮರಾಯ ಕೊಪ್ಪಳ, ಬಳ್ಳಾರಿ, ನರಗುಂದ, ಧಾರವಾಡ ಇತರ ಸ್ಥಳಗಳಲ್ಲಿ ಬೇಟೆಯಾಡುತ್ತಿದ್ದನೆಂದು ಹೇಳಲಾಗಿದೆ. ವಿದೇಶಿಯರು ಇಲ್ಲಿ ಬೇಟೆಯಾಡಿದ ಉಲ್ಲೇಖಗಳಿವೆ.

ಸ್ವಾತಂತ್ರ್ಯಾನಂತರ ಬೇಟೆಯನ್ನು ನಿಷೇಧಿಸಲಾಯಿತಾದರೂ, ಅನೂಚಾನವಾಗಿ ಬೆಳೆದು ಬಂದ ಪರಿಸ್ಥಿತಿಗೆ ಕಡಿವಾಣ ಬಿದ್ದಾಗ ಜನರು ಸುಮ್ಮನಿರಲಿಲ್ಲ. ದಂಗೆಯೇಳಲು ಆರಂಭಿಸಿದರು. ಆದರೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬೇಟೆಯನ್ನು ನಿಷೇಧಿಸುವುದು ಒಳ್ಳೆಯದೇ ಆಗಿದೆ.

೨.೩. ಬೇಟೆ ಬಗೆಗಿನ ಸಾಹಿತ್ಯಾವಲೋಕನ

ಮಾನವ ತನ್ನ ಹಸಿವಿನ ದಾಹವನ್ನು ತೀರಿಸಿಕೊಳ್ಳುವುದಕ್ಕಾಗಿ ಹಾಗೂ ಮನೋರಂಜನೆಯ ಹವ್ಯಾಸವಾಗಿ ಬೇಟೆಯನ್ನು ಅವಲಂಬಿಸಿದ್ದನು. ಈ ಬೇಟೆಯನ್ನು ಕುರಿತು ತನ್ನ ಅನುಭವಗಳನ್ನು ಮೊದಲು ಬಂಡೆ, ಗುಹೆಯ ಗೋಡೆಗಳ ಮೇಲೆ ಕೆತ್ತಿ ತೋರ್ಪಡಿಸಿದ್ದಾನೆ. ಪ್ರಾಚೀನ ಕವಿಗಳ ಅಷ್ಟಾದಶ ವರ್ಣನೆಯ ಕಾವ್ಯದಲ್ಲಿ ಬೇಟೆಯ ಪ್ರಸ್ತಾಪವಿದೆ. ಇತ್ತೀಚಿನ ಕಥೆ, ಕಾದಂಬರಿ, ಇತ್ಯಾದಿ ಸಾಹಿತ್ಯ ಪ್ರಕಾರದ ಕೃತಿಗಳಲ್ಲಿ ಬೇಟೆ - ಬೇಡರನ್ನು ಕುರಿತಂತೆ ವಿವರ ಲಭ್ಯ. ಇಂತಹ ಕೆಲವು ಪ್ರಮುಖ ಕೃತಿಗಳ ಸಮೀಕ್ಷೆಯನ್ನಿಲ್ಲಿ ಮಾಡಲಾಗಿದೆ. ರಾಜನ ಬೇಟೆಯನ್ನು ವೈಭವಯುತವಾಗಿ ಕಾವ್ಯಗಳಲ್ಲಿ ತಿಳಿಸಲಾಗಿದೆ. ಜನಸಾಮಾನ್ಯರ ಬೇಟೆಯನ್ನು ಮೇಲಿನಂತೆ ತಿಳಿಸಿದರೂ ರಾಜರಂತೆ ವೀರಗಲ್ಲು, ಶಾಸನ,ಕಾವ್ಯಗಳಲ್ಲಿ ಮತ್ತು ಪುರಾತತ್ವ ಆಧಾರಗಳಲ್ಲಿ ಕಾಣಬಹುದು.

ಎಲ್ಲ ಪ್ರಾಣಿಸಂಕುಲಕ್ಕೆ ಬೇಟೆಯೇ ಬುನಾದಿ. ಇದರಿಂದಲೇ ಎಲ್ಲ ಜನ ಸಮುದಾಯಗಳು ವಿಕಾಸ ಹೊಂದಿ ತನ್ನ ಕಬಂಧ ಬಾಹುಗಳನ್ನು ವಿಶ್ವವ್ಯಾಪಿ ಚಾಚಿಕೊಂಡಿವೆ. ಈ ರೀತಿಯ ಬೇಟೆಯ ಸಂದರ್ಭಗಳನ್ನು ವೇದ, ಪುರಾಣ, ಮಹಾಕಾವ್ಯ, ಸ್ಮೃತಿ ಮತ್ತು ಇತರ ಕೃತಿಗಳಲ್ಲಿ ಪ್ರಸ್ತಾಪಿಸಿರುವುದನ್ನು ಇಲ್ಲಿ ಸೋದಾಹರಣವಾಗಿ ಅವಲೋಕಿಸಲಾಗುವುದು. ಅಮರಸಿಂಹನ ಅಮರಕೋಶ, ವಾಲ್ಮೀಕಿಯ ರಾಮಾಯಣ, ಪಂಪನ ವಿಕ್ರಮಾರ್ಜುನ ವಿಜಯ (ಪಂಪಭಾರತ), ರನ್ನನ ಗದಾಯುದ್ಧ, ಜನ್ನನಯಶೋಧರಚರಿತೆ, ವಚನಗಳು (ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣ, ಸಿದ್ಧರಾಮ), ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ, ಕೇಶಿರಾಜನ ಶಬ್ದಮಣಿ ದರ್ಪಣ, ಹರಿಹರನ ಗಿಂಚಾಕಲ್ಯಾಣ, ನೇಮಿಚಂದ್ರನ ಲೀಲಾವತಿ ಪ್ರಬಂಧ, ಕುಮಾರವ್ಯಾಸನ ಗದುಗಿನ ಭಾರತ, ರಾಘವಾಂಕನ ಹರಿಶ್ಚಂದ್ರಕಾವ್ಯ, ಷಡಕ್ಷರದೇವನ ಶಬರಶಂಕರವಿಳಾಸ, ರುದ್ರಭಟ್ಟನ ಜಗನ್ನಾಥವಿಜಯ, ನಾಗವರ್ಮನ ಕರ್ನಾಟಕ ಕಾದಂಬರಿ, ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣ, ಮುಂತಾದ ಕೃತಿಗಳಲ್ಲಿನ ಬೇಟೆ ಮತ್ತು ಬೇಡರ ಸಂದರ್ಭಗಳನ್ನು ಗಮನಿಸಬಹುದು. ಬೇಟೆ ಕುರಿತ ಸಾಹಿತ್ಯಕೃತಿಗಳ ಅವಲೋಕನ ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಕಾವ್ಯಗಳನ್ನು ಅನುಲಕ್ಷಿಸಿ ಈ ಶತಮಾನದಲ್ಲಿ ಬಂದ ಕೃತಿಗಳನ್ನು, ಮೌಲ್ಯಗಳನ್ನು ಕುರಿತು ಇಲ್ಲಿ ವಿಶ್ಲೇಷಿಲಾಗಿದೆ.

ಭಾರತದಲ್ಲಿ ಬೇಟೆಯನ್ನು ಗುರುತಿಸುವುದು ಸಂಸ್ಕೃತ ಸಾಹಿತ್ಯದಿಂದಲೇ ಆರಂಭವಾಗುತ್ತದೆ. ಭಾರವಿಯ ಕಿರಾತಾರ್ಜುನೀಯ ಬೇಟೆ ಕುರಿತ ಆದಿಗ್ರಂಥ. ಹೀಗೆ ಸಂಸ್ಕೃತ, ತೆಲುಗು, ತಮಿಳು, ಹಿಂದಿ ಮತ್ತು ಇಂಗ್ಲೀಷ್ ಭಾಷಾ ಸಾಹಿತ್ಯದಲ್ಲಿ ಬೇಟೆ ಉಲ್ಲೇಖಗಳು ಬಂದಿರುವುದನ್ನು ಗಮನಿಸಬಹುದು. ಕಾಳಿದಾಸ, ಭಾರವಿ, ದಂಡಿ, ಶೂದ್ರಕ, ಮುಂತಾದವರ ಕಾವ್ಯಗಳಲ್ಲಿಯ ಶಿಕಾರಿ ವರ್ಣನೆ ಅಪೂರ್ವವಾದುದು. ಕನ್ನಡದಲ್ಲಿ ಸಪ್ತವ್ಯಸನ, ನವರಸ, ಅಷ್ಟಾದಶ ವರ್ಣನೆ, ಬಂದಾಗ ಬೇಟೆ ಸರಾಗವಾಗಿ ಬರುತ್ತದೆ. ಈ ಬೇಟೆಯನ್ನೇ ಕೇಂದ್ರೀಕೃತಗೊಂಡು ಬಂದ ಕೃತಿಗಳು ವಿರಳ. ಕನ್ನಡದಲ್ಲಿ ಮಾತ್ರ ಮಹಾಕಾವ್ಯಗಳ ಹದಿನೆಂಟು ವರ್ಣನೆ ಮತ್ತು ಪ್ರಾಯೋಗಿಕ ದೃಷ್ಟಿಯಿಂದ ಬೇಟೆ ನಿದರ್ಶನವಾಗಿದೆ. ಇಂಥ ಸಂದರ್ಭದಲ್ಲಿ ಹುಟ್ಟಿಕೊಂಡ ಕಥೆ-ಉಪಕಥೆಗಳು ಅಪಾರ. ನಡೆದ ಘಟನೆಗಳು ಅವಿಸ್ಮರಣೀಯ. ಹಾಗಾಗಿ ಬೇಟೆ ಎಂಬುದು ಕಥೆ, ಕವನ, ಕಾದಂಬರಿ, ಗದ್ಯ ಕೃತಿಗಳನ್ನೊಳಗೊಂಡ ಇತರ ಸಾಹಿತ್ಯ ಪ್ರಕಾರಗಳಲ್ಲಿ ಮತ್ತು ಜನಪದರ ಆಚರಣೆಯಾಗಿ ವಿರೋಚಿತ ಕ್ರೀಡೆಯಾಗಿ ಪರಿಣಮಿಸಿದೆ.

ಮೇಲಿನಂತೆ, ಕನ್ನಡ ಸಾಹಿತ್ಯದಲ್ಲಿ ಬೇಟೆಯ ಉಲ್ಲೇಖನವನ್ನು ಶ್ರೀವಿಜಯನ ಕವಿರಾಜಮಾರ್ಗ, ಶಿವಕೊಟ್ಯಾಚಾರ್ಯನ ವಡ್ಡಾರಾಧನೆಯಿಂದ ಆರಂಭಿಸಬಹುದು. ಕನ್ನಡಕಾವ್ಯ ದೃಷ್ಟಿಯಿಂದ ಪಂಪನ ವಿಕ್ರಮಾರ್ಜುನ ವಿಜಯದಿಂದಲೇ ಆರಂಭಿಸುವುದು ಸೂಕ್ತ. ಪಂಪನು ಚಾಲುಕ್ಯ ರಾಜನಾದ ಅರಿಕೇಸರಿಯ ಆಶ್ರಯದಾತ ಕವಿ-ಕಲಿಯಾಗಿದ್ದು, ಜನಮನ್ನಣೆ ಪಡೆದ ಕೀರ್ತಿಶಾಲಿ. ಆದಿಪುರಾಣ ಇವನ ಧರ್ಮಗ್ರಂಥ. ಸಮಗ್ರ ಭಾರತದಲ್ಲಿ ಪಂಪ ಅರಿಕೇಸರಿಯನ್ನು ಭಾರತದ ಅರ್ಜುನನಲ್ಲಿ ಹೋಲಿಸಿ ರಚಿಸಿದ್ದಾನೆ.

ಪಂಪ : ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಬೇಟೆ - ಬೇಡರ ಪ್ರಸ್ತಾಪವಿದ್ದು, ೫ನೇ ಆಶ್ವಾಸದಲ್ಲಿ ಅರ್ಜುನನ್ನು ಬೇಟೆಗೆ ಆಹ್ವಾನಿಸುವ ವನಪಾಲಕರ ಪ್ರಸಂಗದಲ್ಲಿ ಕವಿ ಬೇಟೆಯನ್ನು ಸೈಜವಾಗಿ ಚಿತ್ರಿಸಿದ್ದಾನೆ. ಇಂದ್ರಕೀಲದಲ್ಲಿ ಅರ್ಜುನ ಶಿವನಿಂದ ಪಾಶುಪತಾಸ್ತ್ರವನ್ನು ಸ್ವೀಕರಿಸುವ ಸಂದರ್ಭದಲ್ಲಿ ಶಿಕಾರಿ ವರ್ಣನೆ ಅದ್ಭುತವಾಗಿದೆ. ಅರ್ಜುನ ಮತ್ತು ಶಿವರಿಂದ ಬೇಟೆಯಾಡುವುದು, ಹಂದಿಯ ಪ್ರಬಲ ಶಕ್ತಿಯ ವರ್ಣನೆಯಲ್ಲಿ ಪಂಪನ ಜಾಣ್ಮೆ ಇಲ್ಲಿ ಅನಾವರಣಗೊಂಡಿದೆ. ಇವನ ವೃತ್ತಿ ಬೇಟೆಗಾರನಂತೆ, ಹಂದಿಯ ಬೇಟೆ ವಿಧಗಳನ್ನು ತಿಳಿಸಿ, ಬೇಟೆ ನಾಯಿ, ಬೇಟೆ ಪ್ರಯೋಜನ, ಬೇಟೆಗಾರನ ಲಕ್ಷಣಗಳನ್ನು ವಿವರಿಸಿದ್ದಾನೆ. ಅಭಿಮನ್ಯುವಿನ ಜನನಾನಂತರ ಬೇಟೆಗಾರನೊಬ್ಬ ಬಂದು ಅರ್ಜುನನನ್ನು ಬೇಟೆಗೆ ಆಹ್ವಾನಿಸುವ ದೃಶ್ಯ ವಸಂತಕಾಲದಲ್ಲಿ ಮೂಡಿ ಬಂದಿದೆ. ಬೇಟೆ ಅನುಭವ ಅಷ್ಟಾದಶವರ್ಣನಾನಿಮಿತ್ತವಲ್ಲದೆ, ಪ್ರಾಯೋಗಿಕವಾಗಿ ರೂಪಿತವಾಗಿದೆ. ಹಂದಿಯ ವರ್ಣನೆ, ಮುಳ್ಳು ಹಂದಿ-ಉದ್ದುದ್ದ ರೋಮವಿರುವ ಹಂದಿ, ಬೇಟೆ ಸಂದರ್ಭದಲ್ಲಿ ಗಾಳಿ-ಸನ್ನೆ ಸೂಕ್ಷ್ಮಗಳ ವಿಚಾರ ಸೈಜವಾಗಿ ಕವಿ ಬಣ್ಣಿಸಿದ್ದಾನೆ. ಬೇಡರ ನಾಯಕ ಶಿಕಾರಿಯಲ್ಲಿನ ಸೂಕ್ಷ್ಮತಿಳಿವಳಿಕೆ-ವನಪಾಲಕರ ಬಗ್ಗೆ ತಿಳುವಳಿಕೆ ಇತರ ವಿಧಾನಗಳಲ್ಲಿನ ಬೇಟೆಯನ್ನು ವಿವರಿಸುತ್ತಾ : ಪೆರ್ವೆಂಟೆ, ಕಿರುವೆಂಟೆ, ದೀಪದಬೇಟೆ, ಹಂದಿಬೇಟೆ, ರಾತ್ರಿ ಸಮಯದೀಪ ಮೂಲಕ ಬೇಟೆಗೆ ಹೋಗುವುದು ಬೇಟೆಗಾರನ ಚತುರತೆ, ಯುದ್ಧವಿದ್ಯೆಗೆ ಬೇಟೆಯ ಪರಿಣತಿಯೇ ಕಾರಣವೆನ್ನುತ್ತಾನೆ ಪಂಪ. ಪಂಪನ ಬೇಟೆಯ ವರ್ಣನೆ ಕನ್ನಡ ಕಾವ್ಯದ ಮೊದಲ ಪ್ರಯೋಗ.

ಶಿವಕೋಟ್ಯಾಚಾರ್ಯ : ೧೯ ಕಥೆಗಳ ಗದ್ಯಕಾವ್ಯವಾದ ವಡ್ಡಾರಾಧನೆ ಈತನ ಕೃತಿ. ಸುಕುಮಾರಸ್ವಾಮಿ ಕಥೆಯಲ್ಲಿ ಬರುವ ಸೋಮಶರ್ಮನೆಂಬ ಮಂತ್ರಿಯ ಮಕ್ಕಳಾದ ಅಗ್ನಿಭೂತಿ, ವಾಯುಭೂತಿಯರಿಬ್ಬರು ತಂದೆ ಪಡೆದ ಕಸುಬನ್ನು ಬಿಟ್ಟು ಸಪ್ತವ್ಯಸನಗಭಿಮಾತರಾಗಿ ವಾಸಿಸುತ್ತಿದ್ದರೆಂದು ಕಥೆಗಾರ ಬಣ್ಣಿಸಿದ್ದಾನೆ. ಹೀಗಾಗಿ ಸಪ್ತವ್ಯಸನಗಳಲ್ಲಿ ಬೇಟೆಯೂ ಒಂದು. ಲಲಿತಘಟೆ ಕಥೆಯಲ್ಲಿ ಬೇಟೆಯ ಪ್ರಸಂಗ ಇಡೀ ಕಥೆಯ ಬೆಳವಣಿಗೆಗೆ ಆಧಾರ. ಲಲಿತಘಟೆಯವರು ಒಂದು ದಿನ 'ಶ್ರೀಕಾಂತ' ಎಂಬ ಬೆಟ್ಟದ ಕಾಡಿಗೆ ಮೃಗಬೇಟೆಗೆ ಹೋದಾಗ ಅಭಯಘೋಷ ಎಂಬ ಋಷಿಯ ತಪಸ್ಸಿನಿಂದ ಬೇಟೆ ಸಾಧ್ಯವಾಗಲಿಲ್ಲ. ಮತ್ತೆ ವಾರ ಬಿಟ್ಟು ಬೇಟೆಗೆ ಹೋಗುವುದು ಮೃಗವೆಂದು ಬಗೆದು ಅಭಯಘೋಷರಿಗೇ ಬಾಣ ಪ್ರಯೋಗಿಸುವಾಗ ಬಾಣ ಅರ್ಧದಲ್ಲಿ ತುಂಡಾಗುತ್ತದೆ.

'ಚಿಲಾತಪುತ್ರನ' ಕಥೆಯಲ್ಲಿ ರಾಜನಾದ ಉಪಶ್ರೇಣಿಕನು ಕುದುರೆಯ ಮೇಲೇರಿ ಹಂದಿಯನ್ನು ಬೇಟೆಯಾಡುವ ಪ್ರಸಂಗವಿದೆ. ಮದುವೆ, ಬೇಡರ ನಾಯಕನ ಕಾಣಿಕೆಗಳು ಇಲ್ಲಿ ಕಂಡುಬರುತ್ತವೆ. ತಳವಾರನ ಪಾತ್ರವಿದ್ದರೂ ಅದು ನಾಗರಿಕತೆಯ ಹಂತವನ್ನು ಮೀರಿಸುವಂತಿದೆ. ಬೇಟೆಯನ್ನು ನಂಬಿ ಉಪಶ್ರೇಣಿಕರ ಬೇಡರ ನಾಯಕನಾದ ಮಹಾಕಾಳನ ಮಗಳನ್ನು ಮದುವೆಯಾಗುತ್ತಾನೆ. ಆ ಸಂದರ್ಭದಲ್ಲಿ ರಾಜನಿಗೆ ಬೇಡರ ನಾಯಕ ಆನೆಯ ದಂತ, ಹುಲಿಯ ಚರ್ಮ, ಚಮರೀ ಮೃಗಗಳನ್ನು ಗೌರವದ ಕಾಣಿಕೆಯಾಗಿ ಕೊಡುತ್ತಾನೆ.

ಹರಿಹರ (೧೧೮೦-೧೨೭೦) : ಇವನು 'ಪಂಪಾಶತಕ' 'ರಕ್ಷಾಶತಕ' ಮುಡಿಗೆಯ ಅಷ್ಟಕ, ಶಿವ ಶರಣರ ರಗಳೆಗಳು' ಗಿರಿಜಾಕಲ್ಯಾಣ, ಮುಂತಾದ ಕಾವ್ಯಕೃತಿಗಳನ್ನು ರಚಿಸಿದ್ದಾನೆ. ಗಿರಿಜಾಕಲ್ಯಾಣದಲ್ಲಿ ಹರಿಹರ ಮೃಗಯಾ ವರ್ಣನೆಯನ್ನು ವಿಪುಲವಾಗಿ ತಂದಿರುವನು. ಅಷ್ಟಾದಶ ವರ್ಣನೆಗೆ ಕಟ್ಟುಬದ್ದು ಕಾವ್ಯದ ಹೆಣಿಗೆಯಲ್ಲಿ ಇಲ್ಲಸಲ್ಲದ ವಿಷಯಗಳ ವರ್ಣನೆ ಸಹಾ ಇದೆ. ಇಲ್ಲಿನ ಕಾವ್ಯ ನಾಯಕಿ ಗಿರಿಜೆ. ಶಿವನ ಪಾತ್ರ ಕಥಾನಾಯಕಿಯ ಪೋಷಣೆಗೆ ಸಹಾಯಕ.

ಹರಿಹರನು ಗಿರಿಜಾಕಲ್ಯಾಣದಲ್ಲಿ ಬೇಟೆಗಾರನ ಭೀಕರ ಸ್ವರೂಪ, ಪ್ರಾಣಿಗಳ ಬೇಟೆ, ಕಾಡು, ಬೇಡರ ಪಡೆ, ಹಂದಿಬೇಟೆ, ಹುಲಿ-ಸಿಂಹ ಬೇಟೆ, ಜಂಕೆ ಬೇಟೆ, ಬೇಡರ ಬಾಣ ಪ್ರಯೋಗ, ಮುಳ್ಳು ಹಂದಿ ಇತ್ಯಾದಿ ವಿಷಯಗಳನ್ನು ವರ್ಣಿಸಿರುವುದು ಅಸಾಮಾನ್ಯವಾಗಿದೆ. ಇವನಂತೆ ವರ್ಣನಾ ಕೌಶಲ್ಯವೂ ರಾಘವಾಂಕ, ಷಡಕ್ಷರದೇವ, ನಂಜುಂಡ ಕವಿಗಳಲ್ಲಿ ಕಂಡುಬರುತ್ತದೆ. ಹಂದಿ ಬೇಟೆನಾಯಿಯನ್ನು ಕೊಲ್ಲುವುದು, ಪುಳಿಂದನ ದುಃಖ, ಕೊಂದ ನಾಯಿಯ ಹಂದಿಯನ್ನು ಕೊಲ್ಲುವ ಪಣ, ಬೇಡ-ಬೇಡತಿಯರ ಶೃಂಗಾರ ಪ್ರಣಯಕಲಹದ ಚಿತ್ರಣ ವಿಸ್ಮಯಕಾರಿಯಾಗಿದೆ. ಬೇಡರ ಕಣ್ಣಪ್ಪನ ಬಗ್ಗೆ ರಗಳೆಗಳಲ್ಲಿ ತಿಳಿಸಲಾಗಿದೆ.

ರಾಘವಾಂಕ : ರಾಘವಾಂಕ ಹರಿಹರನ ಸೋದರಳಿಯ ಮತ್ತು ವಿಜಯನಗರ ಕಾಲದ ಸುಪ್ರಸಿದ್ಧ ಕವಿ. ಇವನ ಕೃತಿಗಳಲ್ಲಿ ಹರಿಶ್ಚಂದ್ರಕಾವ್ಯ ಪ್ರಮುಖವಾದುದು. ಇದರಲ್ಲಿ ಮೃಗಯಾ ವರ್ಣನೆ ಸುದೀರ್ಘವಾಗಿದೆ. ೬ನೇ ಸ್ಥಲದಲ್ಲಿ ಹರಿಶ್ಚಂದ್ರನು ಬೇಟೆಯಾಡುವುದು ಮಾಯಾ ವರಾಹವನ್ನು.

ಹರಿಶ್ಚಂದ್ರ ಮಹಾರಾಜನ ರಾಜ್ಯದಲ್ಲಿ ಆಕಸ್ಮಿಕವಾಗಿ, ಅನಿರೀಕ್ಷಿತವಾಗಿ ಎಂದೆಂದಿಗೂ ಇಲ್ಲದಂತ ಪ್ರಮಾಣದಲ್ಲಿ ಕ್ರೂರ-ದುಷ್ಟಮೃಗಗಳ ಹಾವಳಿ ಉದ್ಭವಿಸುತ್ತದೆ. ರಾಜ್ಯದ ಪ್ರಜೆಗಳೆಲ್ಲ ಸೇರಿ ಹರಿಶ್ಚಂದ್ರನನ್ನು 'ಖಗ ಮೃಗಗಳ ಕಾಟವಿದೆ. ಧರೆಯೊಳಗೆ ಬೆಳಿಸಿಲ್ಲ ಬತ್ತಿಲ್ಲ ನೀರಿಲ್ಲ ....ಕಾಡು ಮೃಗಗಳನ್ನು ಬಡಿದೊಡಿಸಬೇಕೆಂದು' ಸಂಕಟವನ್ನು ತೋಡಿಕೊಂಡರು. ಅರಿತ ರಾಜನು ಶಿಕಾರಿಗಾಗಿ ಕರೆಕೊಟ್ಟ ತರುವಾಯ ಶಬರ ನಾಯಕರು ಉತ್ಸುಕರಾಗಿ ತಮ್ಮ ಸಹಾಯಕರನ್ನೆಲ್ಲ ಕೂಡಿಸಿಕೊಂಡು ಬೇಟೆಗೆ ಹೊರಡುತ್ತಾರೆ. ಬೇಟೆಗೆ ನಡೆದ ರಾಜನಿಗೆ ಅರಣ್ಯದಲ್ಲಿ ಬೇಟೆಗಾರ ಸಂಕುಲ ಮೀನಿನ ಗೊಂಚಲು, ಸಾರಂಗದ ಮರಿ, ಜಿಂಕೆಯ ತೊಡೆ, ಆನೆಯ ದಂತ, ಚಮರಿ, ಜೇನು, ನವಿಲುಗರಿ, ಸಿಂಹದ ಉಗುರು, ಹುಲಿಯ ಚರ್ಮ, ಹಂದಿಯ ಮರಿ, ಪುನುಗು ಬೆಕ್ಕು ಮೊದಲಾದವುಗಳನ್ನು ಕಾಣಿಕೆಯಾಗಿ ನೀಡುತ್ತಾರೆ. ಈ ರೀತಿಯ ಕಾಣಿಕೆ ನೀಡುವುದು ಅಂದಿನ ಸಂಪ್ರದಾಯ. ಇತರ ಕನ್ನಡ ಕಾವ್ಯಗಳಲ್ಲಿ ಇದು ಉಲ್ಲೇಖಗೊಂಡಿದೆ. ಬೇಡರ ದಂಡು, ಬೇಟೆನಾಯಿ ಬೇಟೆನಾಯಿಗಳ ಬಿರುದುಗಳು, ಬಲೆ, ಗಾಣ, ಕೂಳಿ, ಬಿಲ್ಲು-ಬಾಣ, ಗಿಡುಗ, ಅತಿಯಾದ ಕೆಸರು, ಉರುಳು, ತೋರೆತ್ತು, ಜಿಂಕೆ, ಇತರೆ ಸಂಗತಿಗಳನ್ನು ಕವಿ ತಿಳಿಸಿದ್ದಾನೆ. ರಾಘವಾಂಕನ ಮೃಗಯಾ ವರ್ಣನಾ ಚತುರತೆಗೆ ಮಹಾಕವಿ ಕುವೆಂಪು ಅವರು ಪ್ರಶಂಸಿಸಿ ಉತ್ತಮ ಪ್ರಶಸ್ತಿಯನ್ನು ಕಲ್ಪಿಸಿದ್ದಾರೆ. ಇಲ್ಲಿಯ ಶಬರಬಲ ಅಥವಾ ಬೇಡರದಂಡು, ವನ್ಯಜೀವಿಗಳ ಚಿತ್ರಣ, ಶಿಕಾರಿಯ ಹೊಸ ತಂತ್ರ ಬೇಟೆಯ ಹೋಲಿಕೆ, ಬೇಡರು ಕೈ ಕಾಲು ಮುರಿದುಕೊಂಡ ದೃಶ್ಯ, ಬೇಟೆಗಾರರು ಮಾರಕ ಗಾಯಗಳಿಂದ ನರಳುವ ದೃಶ್ಯವಿದೆ. ಕಿರಾತರನ್ನು ಅವರ ಮಡದಿಯರು ಮರದ ನೆರಳಿನಲ್ಲಿ ಮಲಗಿಸಿ ಶುಶ್ರೂಷೆ ಮಾಡುವ ದೃಶ್ಯ ಮನಮೋಹಕವಾಗಿವೆ. ರಾಘವಾಂಕನ ಪರಿಸರ ಪ್ರೀತಿ, ಪ್ರಕೃತಿಸೌಂದರ್ಯ, ಬೇಡ-ಬೇಡತಿಯರ ಚೆಲುವು, ಬೇಡರಪಡೆ, ಪ್ರಾಣಿ-ಪಕ್ಷಿಗಳ ಚಿತ್ರಣವಲ್ಲದೆ ಎಂಟು ವಿಧದ ಬೇಟೆಯ ಉಲ್ಲೇಖವಿದೆ. ಕೌಶಿಕ ಮುನಿ ಸೃಷ್ಟಿಸಿದ ಮಾಯಾ ವರಾಹದ ಬೇಟೆ ಮೂಲಕ ಹರಿಶ್ಚಂದ್ರ ವಿಶ್ವಾಮಿತ್ರನ

ಆಶ್ರಮಕ್ಕೆ ಹೋಗುತ್ತಾನೆ. ರಾಘವಾಂಕನ ಕಾವ್ಯ ನೈಪುಣ್ಯತೆಯಲ್ಲಿ ಕೌಶಿಕ ಮುನಿ ಹರಿಶ್ಚಂದ್ರನ ಬೇಟೆಯನ್ನು ಹೆಣೆಯಲಾಗಿದೆಯಲ್ಲದೆ, ವರ್ಣನೆ ಹೆಚ್ಚಾಗಿದೆ.

ಜನ್ನ (೧೨೨೫) : ಜನ್ನ ಕವಿಯ ಯೋಶೋಧರಚರಿತೆ ಮತ್ತು ಅನಂತನಾಥಪುರಾಣದಲ್ಲಿ ಬೇಟೆ, ಬೇಡರ ಸಂದರ್ಭಗಳನ್ನು ಉಲ್ಲೇಖಿಸಿದ್ದಾನೆ. ಇಲ್ಲಿ ಯಶೋಮತಿ ರಾಜನು ಬೇಟೆಗೆ ಹೋದಾಗ ಕಾಡಿನಲ್ಲಿ ಪ್ರಾಣಿ ಚಹರೆ ಸಿಗುವುದಿಲ್ಲ, ಮಾಂಸದಾಸೆಯಿಂದ ಎದುರು ಬಂದ ಗರ್ಭಿಣಿ ಆಡನ್ನೇ ಕೊಲ್ಲುತ್ತಾನೆ. ಇಲ್ಲಿ ಪುನರ್ಜನ್ಮ, ಭವಾವಳಿಯನ್ನು ಕವಿ ತಿಳಿಸಿದ್ದಾನೆ. ಈ ಭವಾವಳಿಯಲ್ಲಿ ಬೇಟೆ ಕಥೆಯು ವೃತ್ತಾಂತಗಳಲ್ಲಿ ಕಂಡುಬರುತ್ತದೆ. ಎರಲೆಯ(ಜಿಂಕೆ) ಮರಿಯನ್ನು ಕಂಡ ಚಂಡಶಾಸನನು, ಸುನಂದೆಯೇ ದೀವವಾಗಿ, ಮನ್ಮಥನೇ ಬೇಟೆಗಾರನಾಗಿ, ತಾನೇ ಹರಿಣವಾಗಿ ಪಡುತ್ತಿರುವ ವಿರಹಾವಸ್ಥೆಯನ್ನು ಅನಂತನಾಥಪುರಾಣದಲ್ಲಿ ಬೇಟೆ ಹಿಂಸೆ ಕೃತ್ಯವೆಂದೇ ಹೇಳಲು ಹೊರಟದ್ದಾನೆ.

ಕರ್ಣಪಾರ್ಯ (೧೧೪೦) : ಕರ್ಣಪಾರ್ಯ ೧೨ನೇ ಶತಮಾನದ ಜೈನಕವಿ. ಇವನು ೨೨ನೇ ತೀರ್ಥಂಕರನಾದ ನೇಮಿನಾಥನ ಪುರಾಣವನ್ನು ಬರೆದಿದ್ದಾನೆ. ಕನ್ನಡದಲ್ಲಿ ದೊರೆತ ನೇಮಿನಾಥ ಪುರಾಣದಲ್ಲಿ ಇವನದೇ ಮೊದಲನೆಯದು. ಸಾಂಪ್ರದಾಯಿಕ ಎನ್ನುವಂತೆ ಅಷ್ಟಾದಶ ವರ್ಣನೆಗಳ ನಿಮಿತ್ತದಲ್ಲಿ ಮೃಗಯಾ ವಿಚಾರವನ್ನು ಮಾಡಿರುವುದು ಗಮನಾರ್ಹ.

ಇಲ್ಲಿ ನೀತಿಕಥೆಗಳ ಮೂಲಕ, ಮಾನವ ಪರಿವರ್ತನೆಯ ಬದುಕನ್ನು ಸಾಗಿಸುವ ನಿಟ್ಟನಲ್ಲಿ ಬೇಟೆ ಉಲ್ಲೇಖಿತಗೊಂಡಿದೆ. ಮಗಧ ದೇಶದ ಕಾಡೊಂದರಲ್ಲಿ ವಿಂಧ್ಯಕನೆಂಬ ಬೇಡ ಮತ್ತು ವಾಗುರೆ ಎಂಬ ಬೇಡತಿಯೂ ಚಾರಣಯತಿ ದಂಪತಿಗಳನ್ನು ಯಾವುದೋ ಅಪೂರ್ವ ಮೃಗವೆಂದು ತಿಳಿದು ಕೊಲ್ಲಲು ಬಾಣ ಹೂಡಿದನು. ಬೇಡತಿ ವಾಗುರೆಯು ಪತಿ ಚಾರಣಯತಿಗಳ ಮೇಲೆ ಬಾಣ ಪ್ರಯೋಗಿಸದಂತೆ ತಡೆದು, ದಂಪತಿಗಳಿಬ್ಬರೂ ಆ ಯತಿಗಳಿಂದ ಧರ್ಮಬೋಧೆಯನ್ನು ಸ್ವೀಕರಿಸಿ ಹೊಸ ಬದುಕು ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ.

ಕೇಶಿರಾಜ (೧೨೬೦): ಕೇಶಿರಾಜ ತನ್ನ ವ್ಯಾಕರಣ ಗ್ರಂಥ ಶಬ್ದಮಣಿದರ್ಪಣದಲ್ಲಿ ಮೃಗಯಾ ವರ್ಣನೆಯನ್ನು ತಿಳಿಸುವಲ್ಲಿ ಬೇಟೆಗೆ ಸಂಬಂಧಿಸಿ ಪದ್ಯವನ್ನು ಉಲ್ಲೇಖಿಸಿದ್ದು, ಇದರ ಕರ್ತೃ ಮತ್ತು ಕಾಲಮಾನ ತಿಳಿದುಬಂದಿಲ್ಲ. ಆದರೆ ಅರಣ್ಯ ವಾಸಿಗಳಾಗಿ ಬೇಟೆಯನ್ನೇ ಪ್ರಧಾನ ವೃತ್ತಿಯನ್ನಾಗಿಸಿಕೊಂಡು ಬದುಕುವ ಬೇಡ-ಬೇಡತಿಯರ ಲೈಂಗಿಕ ಚಿತ್ರಣ ರೋಚಕವಾಗಿದೆ. 'ಚೆಲುವೆಯ ಯೌವ್ವನವು ವರ್ಧಿಸಿದಂತೆ ಬೇಡನು ಆತ್ಮಾಸಕ್ತನಾಗಿ ದುರ್ಬಲನಾಗುತ್ತಾ ಬರುತ್ತಾನೆ.' ಮೊದಲು ಲೀಲಾಜಾಲವಾಗಿ ಬಾಗಿಸಿ ಪ್ರಯೋಗಿಸುತ್ತಿದ್ದ ಬಿಲ್ಲನ್ನು ಕ್ರಮೇಣ ಎತ್ತುವುದಕ್ಕೂ ಬೇಡನಿಗೆ ಕಷ್ಟವಾಗುತ್ತದೆ. ಬೇಡನು ಬಿಲ್ಲನ್ನು ಪ್ರಯೋಗಿಸಬೇಕಾದುದು ಅನಿವಾರ್ಯ. ಬೇಡತಿಯ ಎದೆ ತುಂಬಿ ಬಂದಂತೆ ಬೇಡ ಅಷ್ಟಷ್ಟೂ ತನ್ನ ಬಿಲ್ಲನ್ನು ಹೆರೆ ಹೆರೆದು ತೆಳುಗೊಳಿಸುತ್ತಿದ್ದನು.

ಚೌಂಡರಸ (೧೩೦೦) : ಇವನ ತಂದೆ ಮಧುಸೂದನ, ತಾಯಿ ಮಲ್ಲವ್ವೆ, ಮಡದಿ ಲಕ್ಷ್ಮಿ, ಅಣ್ಣ ಸರಸ ಕವೀಶ್ವರ. ಇವನ ಕೃತಿಗಳು 'ದಶಕುಮಾರಚರಿತೆ', 'ನಳಚರಿತ್ರೆ' ಎಂಬ ಎರಡು ಚಂಪೂಕಾವ್ಯಗಳು. 'ದಶಕುಮಾರಚರಿತೆ'ಯು ಸಂಸ್ಕೃತದ ಉದ್ದಾಮ ಕವಿ ದಂಡಿಯ ಕಾವ್ಯದಿಂದ ಕನ್ನಡಕ್ಕೆ ಎತ್ತಿಕೊಂಡುದಾಗಿದೆ. ಕಥೆ, ಸರಗಥೆಯನ್ನು ಒಳಗೊಂಡ ಇದರಲ್ಲಿ ಹತ್ತು ಜನ ರಾಜಕುಮಾರರ ಕಾಮ ರಾಜ್ಯ ವಿಹಾರವು ವರ್ಣಿತವಾಗಿದೆ. ಇದರಲ್ಲಿ ಚೌಂಡರಸ ಪುಳಿಂದ ನಾಯಕನು ಕಾಡು ಪ್ರಾಣಿಗಳ ಉಪಟಳವನ್ನು ತಾಳಲಾರದೆ ರಾಜನಲ್ಲಿಗೆ ಬಂದು ಬೇಟೆಯ ಅನಿವಾರ್ಯ ಸಂದರ್ಭವನ್ನು ಒತ್ತಾಯಪಡಿಸುವನು. ಪುಳಿಂದನು ಮುಂದುವರೆದು 'ವನ್ಯಪ್ರಾಣಿಗಳ ಸಂಖ್ಯೆ ಮಿತಿ ಮೀರಿ ಅವು ಋಷಿಗಳ

ಆಶ್ರಮವನ್ನು ಬಾಧಿಸುತ್ತಿವೆ. ಅವುಗಳನ್ನು ಬೇಟೆಯಾಡಲು ಇದು ಸಕಾಲ. ಈ ವಿಚಾರವನ್ನು ಬೇಟೆಗಾರನೇ ಹೇಳುತ್ತಿದ್ದಾನೆಂದು ಉಪೇಕ್ಷಿಸುವುದು ಬೇಡ' ಎನ್ನುವನು. ಕ್ರೂರಮೃಗಗಳ ಉಪಟಳವನ್ನು ಬೇಟೆಯ ಮೂಲಕ ಉಪಶಮನಗೊಳಿಸಲು ರಾಜನಿಗೆ ವಿಷಯ ತಿಳಿಸಿ ಒತ್ತಾಯಿಸುವ ಪರಿ ಪಂಪನ 'ವಿಕ್ರಮಾರ್ಜುನ ವಿಜಯ' ದಲ್ಲೂ ಇದೆ. ಬೇಟೆಗಾರರಿಗಿರುವ ನಾಯಕ, ಬೇಟೆ ನಾಯಿ, ಬೇಟೆಯಲ್ಲಿ ತೊಡಗಿದ ರಾಜ, ಭೀತಿಯ ಜಂಕೆ, ತಿರುಗಿದ ಕುತ್ತಿಗೆ, ನೆಟ್ಟಗಾದ ಕಿವಿ, ನಡುಗುವ ಶರೀರ, ಕಡೆ ಬಾಯಿಯಲ್ಲಿ ಸಿಕ್ಕಿಕೊಂಡಿರುವ ಹುಲ್ಲಿನೆಸಳು, ಚಂಚಲವಾದ ಕಣ್ಣು, ರಾಹುವಿನಂತೆ ಯಕ್ಷಪತಿವೈರಿ......... ಜಾಯಿಲನುರ್ವ ರಾಧಿಕಾ ಎಂದು ಅತಿ ವೇಗವಾಗಿ ಹಾರುವ ಜಂಕೆ ಬೇಟೆಗಾರನ ಅಬ್ಬರಕ್ಕೆ ಹೆದರಿ ತಪ್ಪಿಸಿಕೊಳ್ಳಲು ಚಡಪಡಿಸುತ್ತಿತ್ತು. ರಾಜನಿಗೆ ಮತ್ತು ಬೇಟೆಗಾರರಿಗೆ ಕುತೂಹಲಕಾರಿಯಾಗಿ ಗೋಚರಿಸುವುದನ್ನು ಕವಿ ವರ್ಣಿಸುತ್ತಾನೆ. ಬೇಟೆಯು ಮುಗಿದಾಗ ಬೇಡರಹಳ್ಳಿಯ ಸಡಗರ-ಸಂಭ್ರಮ ವಾತಾವರಣವನ್ನು ಚೌಂಡರಸ ಸುಂದರವಾಗಿ ವರ್ಣಿಸಿದ್ದಾನೆ. ಆ ಹಳ್ಳಿಯಲ್ಲಿರುವ ಭಿಲ್ಲರ ಸಮೂಹವು ಬೇಟೆಯ ನಾಯಿಗಳಿಗೆ ತಿನ್ನಸನ್ನಿತ್ತು ಪೋಷಿಸುತ್ತಿತ್ತು. ಹರಿದ ದೊಡ್ಡ ದೊಡ್ಡ ಬಲೆಗಳನ್ನು ಸರಿಯಾಗಿ ಜೋಡಿಸುವುದು, ಹೊಲಿಸುವುದು, ಪ್ರಾಣಿಗಳ ಎದೆ ಗುಂಡಿಗೆಗೆ ಚುಚ್ಚಿಕೊಂಡಿದ್ದ ಬಾಣಗಳನ್ನು ತೊಳೆಯುತ್ತಿದ್ದರು. ಹೀಗೆ ಬೇಟೆಗಾಗಿ ಒಡ್ಡುವ ಮೃಗಗಳ ರಕ್ಷಣೆ, ಕೈ ದೋಟಗಳನ್ನು ಕಟ್ಟುತ್ತಿದ್ದರು. ಬಲ್ಲಿನ ಹೆದೆಬಳ್ಳಿಯನ್ನು ಕೈಯಿಂದ ಮಿಡಿದು ಪರೀಕ್ಷಿಸುತ್ತಿದ್ದರು. ಆ ಬೇಟೆಗಾರರ ಪರಿಸರದಲ್ಲಿ ಬೇಟೆಯ ಯಶಸ್ಸಿಗಾಗಿ ಅಥವಾ ಸಿದ್ಧಿಗಾಗಿ ಪ್ರಾಣಬಲಿ ಕೊಡುವ ಸಂಪ್ರದಾಯ ಇತ್ತೆಂಬುದನ್ನು ಕವಿ ತಿಳಿಸುತ್ತಾನೆ.

ಚಿಕ್ಕವನಂ ಬೇಟೆಗೆ ಬಲಿ
ಯಿಕ್ಕುವ ಪೋಗುರೆ ಯನೊಡ್ಡಿಕೆಡಪುವಪೋಮೇ.......!

ಬೇಟೆಯಲ್ಲಿ ತಮ್ಮ ಇಚ್ಚಿತಗುರಿ ಈಡೇರಲು ಮನುಷ್ಯ ಅಥವಾ ಪ್ರಾಣಿಗಳನ್ನು ಬಲಿ ಕೊಡುವ ಸಂಪ್ರದಾಯವನ್ನು ಚೌಂಡರಸ ಮೊತ್ತ ಮೊದಲಿಗೆ ತಿಳಿಸಿದ್ದಾನೆ.

ದೇಪರಾಜ (೧೪೧೦): ವಿಜಯನಗರದರಸ ಬುಕ್ಕರಾಯನ ೨ನೇ ಮಗನೇ ಎರಡನೇ ಕಂಪ ಅಥವಾ ದೇಪರಾಜ (ದೇವರಾಜ). ಸೊಬಗಿನಸೋನೆ ಪ್ರಥಮ ಸಾಂಗತ್ಯ ಕೃತಿಯಾಗಿದ್ದು, ಸಾಂಗತ್ಯದಲ್ಲಿ ಅಮರಶತಕ ಕೃತಿಗಳನ್ನು ಬರೆದಿದ್ದಾನೆ. ೧೮ವರ್ಣನೆಗಳಲ್ಲಿ ಕವಿಗೆ ಬೇರೆ ಚಪಲವಿದ್ದಂತಿದೆ. ೭ಕಥೆಗಳ ಸಂಕಲನವಿದಾಗಿದ್ದು, ಕಂಜರೆ, ವಸಂತೆ, ಸುರಭಿಶೇಖರ ಕಥೆಗಳಲ್ಲಿ ಬೇಟೆಯ ಪ್ರಸ್ತಾಪವಿದೆ. ಕಾಶ್ಮೀರ ರಾಜನಾದ ಸೌಂದರಾಜನ ಆಳ್ವಿಕೆ, ಬೇಟೆಗಾರ ಗಂಡು ಸಿಂಹದ ಶಿಕಾರಿಗೆ ಮುಂದಾಗುವ ಚಿತ್ರಣವಿದೆ. ರಾಜಪರಿವಾರದವರು ಬಲೆಬೀಸಿ ಸುತ್ತುಗಟ್ಟಿದರೆ, ಬೇಡರು ವಿವಿಧ ಶಬ್ದಗಳಿಂದ ಸಿಂಹವನ್ನು ಹೆದರಿಸಿ ರಾಜನತ್ತ ಅಟ್ಟುತ್ತಾರೆ. ಬೇಡರಪಡೆ, ಬೇಡರು, ಗಿಳಿ, ಗೀಜಗ, ಗೌಜು, ಸೋರೆ ಇತ್ಯಾದಿ ಹಕ್ಕಿಗಳನ್ನು ಉಲ್ಲೇಖಿಸಿದ್ದಾನೆ. ಆನೆ, ಕರಡಿ, ಸಿಂಹ, ಕಾಡ್ಕೋಣ, ಹಂದಿ, ಜಂಕೆ, ಸಾರಂಗ, ಒಂಟೆ ಮೊದಲಾದವುಗಳ ವರ್ಣನೆಯಿದೆ. ಮೊಟ್ಟಮೊದಲಿಗೆ ಒಂಟೆಯನ್ನು ಬೇಟೆಯಾಡಿದ ಉಲ್ಲೇಖ ಸೊಬಗಿನಸೋನೆಯಲ್ಲಿ ಕಂಡುಬರುತ್ತದೆ.

ಕುಮಾರವಾಲ್ಮೀಕಿ (೧೫೦೦) : ಈತನಿಗೆ 'ನರಹರಿ' ಎಂಬ ಹೆಸರಿನಿಂದಲೂ ಕರೆದರಲ್ಲದೆ, 'ಕವಿರಾಜ ಹಂಸ' ಎಂಬ ಬಿರುದಿತ್ತು. ವ್ಯಾಸಭಾರತ ಸಂಗ್ರಹಿಸಿದ ಕುಮಾರವ್ಯಾಸನಂತೆ, ವಾಲ್ಮೀಕಿ ರಾಮಾಯಣವನ್ನು ಸಂಗ್ರಹಿಸಿದವನು

ಕುಮಾರವಾಲ್ಮೀಕಿ. ತೊರವೆ ನರಸಿಂಹ ಇವನ ಆರಾಧ್ಯ ದೈವ. ಭಾಗವತ ದೃಷ್ಟಿ, ಭಗವಂತನೆಂದು ನಂಬ ಭಕ್ತಿಯಿಂದ ಬರೆದಿದ್ದಾನೆ.

ತೊರವೆ ರಾಮಾಯಣದಲ್ಲಿ ಶಂಬುಕಾಸುರನ ವಧೆಗಾಗಿ ಬೇಟೆ ಪ್ರಸ್ತಾಪಿಸಲಾಗಿದೆ. ಇಲ್ಲಿ ಶಂಭುಕಾಸುರ ಇಂದ್ರಪದವಿಯ ಆಸೆಗಾಗಿ ತಪಸ್ಸು ಮಾಡುತ್ತಾನೆ. ಅವನನ್ನು ಕೊಲ್ಲಲು ಇಂದ್ರನು ನಾರದ ಮತ್ತು ಸುರಾಚಾರ್ಯರ ಅಭಿಪ್ರಾಯದಂತೆ ದೇವರೂಪವನ್ನು ತ್ಯಜಿಸಿ, ಕಿರಾತ ರೂಪವನ್ನು ಧರಿಸುವನು. ದೇವತೆಗಳು ಬೇಟೆಗಾರರ ವೇಷದಲ್ಲಿ ಇಂದ್ರನೊಂದಿಗಿದ್ದರು. ಆ ಸಂದರ್ಭದಲ್ಲಿ ತಪಸ್ವಿಗಳು ರಾಮನಲ್ಲಿಗೆ ಬಂದು ಕಾಡಿನಲ್ಲಿ ಮೃಗಬಾಧೆ, ಹೆಚ್ಚಾಗಿದ್ದು ತಾಳಲಾರೆವು ಎಂದಾಗ, ರಾಮ ತನ್ನ ತಮ್ಮನಾದ ಲಕ್ಷ್ಮಣನನ್ನು ಮೃಗ ಬೇಟೆಗೆ ಕಳಿಸುತ್ತಾನೆ. ವಿಷ್ಣು ಸಕಾಲದಲ್ಲಿ ಮಾಯಾ ವರಾಹವನ್ನು ಸೃಷ್ಟಿಸಿರುತ್ತಾನೆ. ಅದು ನುಗ್ಗಿ ಬಂದು ಶಂಬುಕಾಸುರನನ್ನು ಹಿಂದಕ್ಕೆ ಹಾಕಿ ಮುಂದೆ ನಿಲ್ಲುತ್ತದೆ. 'ಲಕ್ಷ್ಮಣ ಅದಕ್ಕೆ ಬಾಣ ಪ್ರಯೋಗಿಸಲಾಗಿ, ಬಾಣವು ಹಂದಿಯನ್ನು ಸೀಳಿಕೊಂಡು ಹುತ್ತವನ್ನು ಬಗಿದು ಅದರಲ್ಲಿದ್ದ ಶಂಬುಕಾಸುರನನ್ನು ಕೊಲ್ಲುತ್ತದೆ. ಇಲ್ಲಿ ಇಂದ್ರಾದಿದೇವತೆಗಳು ಬೇಡರ ವೇಷವನ್ನು ಧರಿಸಿ ರಾಮನಲ್ಲಿಗೆ ಬಂದು ಕಾಣಿಕೆ ನೀಡಿ ಗೌರವಿಸಿ ಬೇಟೆಗೆ ಬರಬೇಕೆಂದು ವಿನಂತಿಸುವ ಪ್ರಸಂಗವೊಂದಿದೆ. ಇದರಲ್ಲಿ ಆನೆಯ ಕುಂಭಸ್ಥಳದ ಮುತ್ತುಗಳು, ಕಾಡುಹಂದಿಯ ಕೋರೆಹಲ್ಲು, ಜಂಕಿಮರಿ, ಕಸ್ತೂರಿ ಮೃಗ, ಶಾರ್ದೂಲದ ಚರ್ಮ, ಸಿಂಹದ ಉಗುರು, ಬಗಿದು ಕಟ್ಟದ ಬಿಲ್ಲು ಬಾಣ, ಅರೆಗೂಳಿ, ಕೋತಿಮರಿ, ಮೊದಲಾದವುಗಳನ್ನು ಬೇಡರು ರಾಮನಿಗೆ ನೀಡಿ ಅಭಿನಂದಿಸಿದ್ದಾರೆ ಎಂಬುದನ್ನು ತಿಳಿಯಬಹುದು.

ನಂಜುಂಡಕವಿ (೧೫೨೫): ಕ್ಷತ್ರಿಯ ಕುಲದ ಕವಿ ನಂಜುಂಡನ ತಂದೆ ಚಂಗಳನಾಡ ನಾಲ್ಕತ್ತು ನಾಯಕ ಗಜಸಿಂಹ ಎಂಬ ಚದುರಮಾಧವ. ತಾತ ಪ್ರಭುಕುಲಾಗ್ರಗಣ್ಯ ವಿಜಯನೃಪಾಲ. 'ರಾಮನಾಥಚರಿತೆ' ಕನ್ನಡದ ಮೊಟ್ಟ ಮೊದಲ ಚಾರಿತ್ರ ಕಾವ್ಯ. ಇದರಲ್ಲಿ ಕುಂತಳರಾಜ್ಯದ ವರ್ಣನೆ ಅವರ ಯುದ್ಧಗಳು, ಕಂಪಿಲ ಮುಂತಾದ ವಿಷಯಗಳು ಕೆಲವು (೨೨) ಪದ್ಯಗಳಲ್ಲಿ ಬಂದರೆ, ಕುಮಾರರಾಮನ ಜೀವನಚರಿತ್ರೆಯನ್ನು ಉಳಿದ ಭಾಗ ಪ್ರತಿಸಿಧಿಸಿದೆ. ಇಲ್ಲಿ ಸಮಕಾಲೀನ ಸಮಾಜದ ಚಿತ್ರಣವಿದೆ. ಶಿಕಾರಿಯ ಪ್ರಮುಖ ವಿಧಾನಗಳಲ್ಲಿ ಒಂದಾದ ತಡೆ ಬೇಟೆ ಇದ್ದಿತು. ಅಂದರೆ, 'ರಾತ್ರಿ ಅಥವಾ ಹಗಲು ಹೊತ್ತು ಕಾಡಿನಲ್ಲಿ ಸಂಚರಿಸುವ ಪ್ರಾಣಿಗಳ ಹಾದಿಯನ್ನು ಅರಿತು, ಅಲ್ಲಿ ಕಾಣದಂತೆ ಕಾದು ಕುಳಿತು, ಅವುಗಳನ್ನು ಬೇಟೆಯಾಡುವುದೇ ತಡೆಬೇಟೆ'. ಇಂಥ ಬೇಟೆಗೆ 'ಮರಸುಬೇಟೆ' ಎಂಬ ಹೆಸರೂ ಇದೆ. ಕಾಡಿನಲ್ಲಿ ಪ್ರಾಣಿಗಳು ಅಡ್ಡಾಡುವ ಸ್ಥಳದಲ್ಲಿ 'ಕಾವಲುಮನೆ' ಕಟ್ಟಿ ಅದರೊಳಗಿಂದ ಮೃಗಗಳಿಗೆ ಬಾಣ ಪ್ರಯೋಗಿಸಿ ಕೊಲ್ಲುವುದಕ್ಕೆ ಮರಸುಬೇಟೆ ಎನ್ನುತ್ತಾರೆ. ಈ ರೀತಿಯ ಬೇಟೆಗಾಗಿ ರಾಜನಿಗೆ ಕಾವಲು ಮನೆಯೊಂದನ್ನು ನಿರ್ಮಿಸಲು ಸೇವಕರು ಸಾಮಗ್ರಿಗಳನ್ನು ಒಟ್ಟಾಗಿಸುವ ಚಿತ್ರ 'ರಾಮನಾಥ ಚರಿತೆ'ಯಲ್ಲಿದೆ (ಪದ್ಯ; ಗುಡಿ-ಗುಡಾರ, ಪಡಿಗ-ಗಡನ-ತಡ). ಇದರಲ್ಲಿ ಬೇಟೆಯಾಡಿ ಬಳಲಿ ಬಂದ ಬೇಡರನ್ನು ತಮ್ಮ ಮಡದಿಯರು ಶುಶ್ರೂಷೆ ಮಾಡುವ ದೃಶ್ಯಕಾವ್ಯ ಮಾರ್ಮಿಕವಾದುದು. ಕ್ರೂರ ಕಾಡು ಮೃಗಗಳಿಂದ ಉಂಟಾದ ನೋವು, ಗಾಯಗಳಿಂದ ಬಳಲಿ ನರಳುತ್ತಿರುವ ಶಬರರನ್ನು ಎತ್ತಿ ಶಬರಿಯರು ನೆರಳಿನಲ್ಲಿ ಮಲಗಿಸಿ ತಕ್ಕ ಚಿಕಿತ್ಸೆ ಕೊಡುತ್ತಾರೆ. 'ಬೇಟೆಯಲ್ಲಿ ಬೇಡರಿಗಾದ ಗಾಯಗಳಿಂದ ರಕ್ತ ಸೋರಿ ಹೋಗದಂತೆ ಬೇಡತಿಯರು ತಾಂಬೂಲದಿಂದ ಗಾಯವನ್ನು ಒತ್ತಿಕಟ್ಟದರೆಂಬ ವಿಚಾರ ವಾಸ್ತವಿಕವಾದುದು. ಇಂದಿಗೂ ಸಹ ಬೇಟೆಗಾರರ ಮಡದಿಯರು, ಗಂಡಬೇಟೆಯಲ್ಲಿ ಗಾಯಗೊಂಡರೆ, ಕಟ್ಟಿಗೆ ಕಡಿದು ಗಾಯಗೊಂಡರೆ ಈ ರೀತಿ ತಾಂಬೂಲದಿಂದ ಕಟ್ಟುವುದು ಸಾಮಾನ್ಯವಾಗಿದೆ.

ಲಕ್ಷ್ಮೀಶ (೧೫೩೦): ಪಂಪನಿಗೆ ರನ್ನ, ಹರಿಹರನಿಗೆ ರಾಘವಾಂಕ ಜೋಡಿಯಂತೆ ಮಹಾಕವಿ ಕುಮಾರವ್ಯಾಸನಿಗೆ ಲಕ್ಷ್ಮೀಶನ ಜೋಡಿ ಸ್ಥಾನ ಒದಗಿದೆ. ಇಬ್ಬರ ಕಥಾನಾಯಕನೂ ಕೃಷ್ಣ. ಇಬ್ಬರೂ ತಮ್ಮ ಕಾವ್ಯಗಳನ್ನು ಕೃಷ್ಣ ಚರಿತಾಮೃತವೆಂದು ಕರೆದು ಸನ್ಮಾನಿಸಿದ್ದಾರೆ. ಕುಮಾರವ್ಯಾಸನದು ವ್ಯಾಸಭಾರತವಾದರೆ, ಲಕ್ಷ್ಮೀಶನದು ಜೈಮಿನಿ ಭಾರತ. ಜೈಮಿನಿ ಭಾರತ ಪಾಂಡವರ ಅಶ್ವಮೇಧಯಾಗದ ಕಥೆ. ವೀರರಸ ಪ್ರಧಾನವಾದ ಕಾವ್ಯ. ಲಕ್ಷ್ಮೀಶ ಕವಿ ಜೈಮಿನಿ ಭಾರತದಲ್ಲಿ ಪ್ರಕೃತಿಯಲ್ಲಿಯ ಖಗಮೃಗಗಳನ್ನು ಬೇಟೆಯಾಡುವ ನಾಯಿಗಳು ಹೇಗಿರುತ್ತವೆಂಬುದನ್ನು ಹೀಗೆ ವಿವರಿಸಿದ್ದಾನೆ: ಉಬ್ಬಿದರು ದೇರ...... ಪುಲಿಯಂ ಕೊಂದವು. ಬೇಟೆಗಾರರಿಬ್ಬರು ಒಂದೇ ಹುಲಿಯೊಂದನ್ನು ಬಾಣದಿಂದ ಹೊಡೆಯಲು ಹೋಗಿ ಇಬ್ಬರು ಮಡಿದ ವೃತ್ತಾಂತವನ್ನು ಕವಿ ಹೇಳಿದ್ದಾನೆ (ಉಭಯ ಜನ ಮೇಕಾರ್ಥಕೆಳಸಿದೆಡೆ ಮತ್ತೆ ಲೇಸಾದಪುದೆ). ಸಿಂಹವೊಂದು ಬೇಡತಿಯನ್ನು ಆನೆ ಎಂದು ತಿಳಿದು ಮೇಲೆ ಬೀಳುವಾಗ ಅವಳ ನಡುವನ್ನು ನೋಡಿ ಅದೊಂದು ಸಿಂಹವೆಂದು ಸುಮ್ಮನಾಗುವಷ್ಟರಲ್ಲಿ ಅವಳ ಕಾಂತಿಯ ಕಣ್ಣುಗಳನ್ನು ನೋಡಿ ಘರ್ಜಿಸಿ ಹಾರಿಬೀಳುವಷ್ಟರಲ್ಲಿ ಬೇಡನು ಬಾಣದಿಂದ ಹೊಡೆದು ಸಾಯಿಸುತ್ತಾನೆ.

ಕನಕದಾಸ(೧೫೦೯-೧೬೦೭): 'ಮೋಹನ ತರಂಗಿಣಿ' (ಕೃಷ್ಣ ಚರಿತ್ರೆ), ನಳಚರಿತ್ರೆ ಇವನ ಪ್ರಮುಖ ಕೃತಿಗಳು. ನಳಚರಿತ್ರೆಯಲ್ಲಿ ಬೇಟೆ ಪ್ರಾಸಂಗಿಕವಾಗಿದೆ. ಇಲ್ಲಿ ನಳಮಹಾರಾಜ ದಮಯಂತಿಯನ್ನು ಮದುವೆಯಾಗುವ ಮೊದಲು ಅವಳಲ್ಲಿದ್ದ ಒಂದೊಂದೇ ಗುಣವನ್ನು ಮೆಲುಕು ಹಾಕುತ್ತಾ ವಿರಹತಾಪದಿಂದ ಬಳಲುತ್ತಾನೆ. ಆಗ ಬೇಡಪಡೆಯೊಂದಿಗೆ ಪುಳಿಂದ ನಾಯಕನೊಬ್ಬ ಬಂದು ಮಹಾರಾಜನಿಗೆ ಹಣ್ಣು-ಹಂಪಲುಗಳನ್ನು ಕಾಣಿಕೆ ನೀಡಿ ಇಂದು ದೊಡ್ಡದೊಂದು ಮೃಗಬೇಟೆಯಿದೆ, ಅದಕ್ಕೆ ತಾವು ದಯಮಾಡಿಸಬೇಕೆಂದು ವಿನಂತಿಸುತ್ತಾನೆ. ಇವನ ಕೋರಿಕೆಯಂತೆ ಮಹಾರಾಜನು ಬೇಡ ಪಡೆಯೊಂದಿಗೆ ಮೃಗಬೇಟೆಗೆ ಭಾರೀ ಸಿದ್ಧತೆ ನಡೆಸುತ್ತಾನೆ. ಬೇಟೆಗೆ ಹೊರಡುವ ಮೊದಲು ನಳಮಹಾರಾಜನು ಧರಿಸುವ ಅಭರಣಾಧಿ ವಿಚಾರಗಳನ್ನು ಕವಿ ಹೀಗೆ ಬಣ್ಣಿಸಿದ್ದಾನೆ: ಅರಸ ಕೇಳ್ ಶಶಿಕುಲ .....ನೆಲಬರಿಯಲ್ಲೆ ತಂದು ರಾಜಕುದುರೆಯ ಮೇಲೇರಿ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದನೆಂಬುದು ಇಲ್ಲಿ ಹೊಸ ವಿಚಾರ. ಕನಕದಾಸರ ವೃತ್ತಿಯೇ ಬೇಟೆಯಾಡುವುದು. ಹೀಗಾಗಿ ಅವನು ಬೇಟೆಯ ಪ್ರಾಯೋಗಿಕಾನುಭವವನ್ನು ವಾಸ್ತವಿಕ ನೆಲೆಗಟ್ಟನಲ್ಲಿ ಚಿತ್ರಿಸಿದ್ದಾನೆ.

ಕನಕದಾಸರ ಮೋಹನತರಂಗಿಣಿಯಲ್ಲಿಯೂ ಸಹ ಮೃಗಯಾವರ್ಣನೆಯಿದೆ. ೧೮ ವರ್ಣನೆಗಳ ಸಾಂಗತ್ಯ-ಕಾವ್ಯ ಇದಾಗಿದೆ. ಮನ್ಮಥದಹನ, ಕಾಮೋತ್ಪತ್ತಿ, ಶಂಬರಾಸುರವಧೆ, ಬಾಣಾಸುರವಧೆ, ಅನಿರುದ್ಧಲೀಲೆ ಇತರ ವಿಷಯಗಳು ಈ ಕಾವ್ಯದಲ್ಲಿವೆ. ಅನಿರುದ್ಧನ ಬೇಟೆಯ ಪ್ರಸಂಗ ಪ್ರತ್ಯೇಕ ಸಂಧಿಯಾಗಿದೆ. ಇಲ್ಲಿ ಬೇಟೆನಾಯಿಯ ಶಕ್ತಿ-ಯುಕ್ತಿ, ಸಾಹಸದ ಬಗ್ಗೆ ಸುಮಾರು ಏಳು ಪದ್ಯಗಳಲ್ಲಿ ದೀರ್ಘ ವಿವರಣೆಯಿದೆ. ಮಾಣಿಕ್ಯ ಖಚಿತವಾದ ಕೆಂಬಟ್ಟೆಯನ್ನು ಹೊಂದಿಸಿದ ಬಂಗಾರದಕೊರಳಪಟ್ಟಯನ್ನು ಹೊಂದಿದ ನಾಯಿಗಳನ್ನು ಬೇಡರ ಪಡೆ ಹಿಡಿದುಕೊಂಡು ಬೇಟೆಗಾಗಿ ಮುಂದುವರೆಯಿತು. ಬೇಡರ ಪಡೆಯಲ್ಲಿ ಮೇಲು ತರಪಟ್ಟ, ವರಸೂಪುಸಕಲಾತಿ ಜೂಲುಗಳಿಂದ ರಂಜಸುತ್ತಿರುವ ನಾಯಿಗಳಿದ್ದವೆನ್ನಲಾಗಿದೆ. ಇಂದಿಗೂ ಬೇಡರು ಹಂದಿಯ ಬೇಟೆ ಸಂದರ್ಭದಲ್ಲಿ ಇಂತಹ ನಾಯಿಗಳನ್ನು ಕರೆದೊಯ್ಯುವರು. ಅವು ಚುರುಕಾಗಿ, ಬೇಟೆಯಾಡುವ, ಬೇಡರು ಶಿಸ್ತಿನಿಂದ ನಾಯಿಗಳಿಗೆ ಬೇಟೆ ಸುಳಿವನ್ನು ಕಲಿಸುತ್ತಿದ್ದರು. ಈ ನಾಯಿಗಳು ಓಡುವ ಉಡ, ಮೊಲ, ನರಿ, ಜಿಂಕೆ, ಸಾರಂಗ, ಮುಂತಾದ ಪ್ರಾಣಿಗಳನ್ನು ದಿಕ್ಕೆಡಿಸಿ ಬೇಟೆಯಾಡುವುದರಲ್ಲಿ ಪ್ರೌಢಿಮೆಯನ್ನು ಹೊಂದಿದ್ದವು. ನಾಯಿಯ ಬಗ್ಗೆ ತಿಳಿಸುತ್ತಾ: ಬಿಸಿಲಿನ ಬೇಗೆಗೆ ಧಗೆ ಹತ್ತಿ ಪಕ್ಕೆ ಬಡಿದುಕೊಳ್ಳುವ, ನಾಲಗೆಯಿಂದ ನೀರು ಸುರಿಸುವ ನಾಯಿಗಳು ಬೇಡರಿಗಿಂತ ವೇಗವಾಗಿ ಓಡುತ್ತಿದ್ದವು. ಓಡುವ

ಮೊಲವನ್ನು ಬೇಡರು ಹಗ್ಗ ಹಿಡಿದು ಜಗ್ಗುತ್ತಾರೆ. 'ಬೇಟೆಯ ನಾಯಿಯೊಂದು ಚಂದ್ರನ ಒಡಲ ಮೊಲವನ್ನು ಕಂಡು ಮೊಗವೆತ್ತಿ ಬೊಗಳಿತು' ಎನ್ನುವುದು ಅತಿಶಯೋಕ್ತಿಯಾಗಿದೆ. ಹೀಗೆ ಬೇಟೆ ಮುಗಿದ ನಂತರ ಆಯಾಸ ಪರಿಹರಿಸಿಕೊಳ್ಳಲು ಬೇಡ-ಬೇಡತಿಯರು ಅನಿರುದ್ಧನ ಮುಂದೆ ಸಾಮೂಹಿಕವಾಗಿ ಕುಣಿಯುತ್ತಾರೆ. ಬೇಟೆ ನೃತ್ಯದ ಮೂಲವನ್ನು ಕವಿ ತಿಳಿಸಿದ್ದು ಗಮನೀಯವಾಗಿದೆ.

ವಿರೂಪಾಕ್ಷಪಂಡಿತ (೧೫೮೪): ಅಷ್ಟಾದಶವರ್ಣನೆ, ನವರಸಗಳಿಂದ ಚೆನ್ನಬಸವಪುರಾಣ ಕಾವ್ಯ ರಚನೆಯಾಗಿದೆ. ಇದರ ೫೩ನೇ ಸಂಧಿಯಲ್ಲಿ ಮೃಗಯಾವಿದೆ. ಇಂದ್ರಕೀಲ ಪರ್ವತದಲ್ಲಿ ಅರ್ಜುನನು ಕಠಿಣತಪಸ್ಸನ್ನು ಮಾಡವುದು, ಶಿವನು ಕಿರಾತ ರೂಪ ಧರಿಸಿ ಅವನಿಗೆ ಪಾಶುಪತಾಸ್ತ್ರವನ್ನು ಕೊಡುವ ಪ್ರಸಂಗವಿದೆ. ಒಂದು ಪದ್ಯದಲ್ಲಿ ಬೇಟೆಗಾರರು ಬೇಟೆಯಾಡುವಾಗ ಮೊಗವಾಡಗಳನ್ನು ಬಳಸುತ್ತಿದ್ದುದು ಹೊಸ ಸಂಗತಿ. ಶಿಕಾರಿಯಲ್ಲಿ ಈ ತಂತ್ರ ಅಪರೂಪವಾದದು. ಜಿಂಕೆ-ಹುಲಿ, ಹುಲಿಯನ್ನು ಆನೆ, ಆನೆಯನ್ನು ಸಿಂಹ, ಸಿಂಹವನ್ನು ಶರಭ, ಶರಭವನ್ನು ಭೇರುಂಡ ಕೊಲ್ಲುವುದು, ಬೇಟೆಗಾರರು ಇದರ ಬಗ್ಗೆ ಆಸಕ್ತಿ ವಹಿಸುವುದು ಗಮನಾರ್ಹ. ವಿರೂಪಾಕ್ಷ ಪಂಡಿತ ಲೌಕಿಕ ಬೇಟೆಯನ್ನು ತಿಳಿಸುವಲ್ಲಿ ಸಫಲನಾಗಿದ್ದಾನೆ.

ಷಡಕ್ಷರದೇವ (೧೬೫೫) : ಷಡಕ್ಷರದೇವ ವೀರಶೈವ ಕವಿ. ರಾಜಶೇಖರವಿಳಾಸ, ವೃಷಭೇಂದ್ರವಿಜಯ, ಶಬರಶಂಕರವಿಳಾಸ ಎಂಬ ೩ ಚಂಪೂಕಾವ್ಯಗಳನ್ನು ರಚಿಸಿದ್ದಾನೆ. ಇವಕ್ಕೆ ಭಾವಚಿಂತಾರತ್ನ, ಬಸವಪುರಾಣ, ಕುಮಾರವ್ಯಾಸಭಾರತಗಳು ಕಾವ್ಯ ವಸ್ತುವನ್ನು ಒದಗಿಸಿವೆ.

ರಾಜಶೇಖರವಿಳಾಸ ಶಿವಪಂಚಾಕ್ಷರಿ ಮಹತ್ವವನ್ನು ಸಾರುವ ಕಾವ್ಯ. ಗುಬ್ಬಿಯ ಮಲ್ಲಣಾರ್ಯ ತಮಿಳಿನಲ್ಲಿ ಬರೆದ ಭಾವಚಿಂತಾರತ್ನ ಕಾವ್ಯದ ಪ್ರಭಾವ ಉಂಟು. ಇದರಲ್ಲಿ ಮೃಗಯಾ ವರ್ಣನೆ ಪ್ರಾಸಂಗಿಕವಾಗಿ ಬರುತ್ತದೆ. ಪ್ರಾಯೋಗಿಕ ಮೃಗಯಾ ಅಥವಾ ಶಿಕಾರಿ ವರ್ಣನೆ ಜಾಣ್ಮೆಗೆ ಕನ್ನಡಿಯಾಗಿದೆ. ಪುಳಿಂದ ನಾಯಕ ಬೇಟೆಗೆ ಒಗ್ಗೂಡುವ ಸಂದರ್ಭ, ಶಕ್ತಿ ಸ್ವರೂಪ, ಹಲ್ಲು, ಹುಬ್ಬು, ದೇಹ, ಕೆಂಪಾದ ಕಣ್ಣುಗಳು, ದಪ್ಪ ಮೀಸೆ, ಆನೆಯ ಕುಂಭಸ್ಥಳ, ಮುತ್ತಿನ ಸರ, ಬಿಲ್ಲು, ಬಾಣ, ಚಪ್ಪಲಿ, ಬೇಟೆನಾಯಿಗಳು, ಶಬರ ನಾಯಕ, ಬೇಟೆಗಾರರ ಪಡೆ, ಬಲೆ, ಪ್ರಾಣಿಗಳ ಪ್ರಜ್ಞೆ ತಪ್ಪಿಸುವುದು, ಬಡಿಗೋಲು, ಮದ್ದುಹಾಕುವ ತಂಬಾಕು, ಕಲ್ಲುಬೀಸುವ ಕವಣೆ, ದೊಡ್ಡ ಬಲೆ, ಚೂಪಾದ ಗಾಳ, ಕತ್ತಿ, ಗುರಾಣಿ, ದೀಹದ ಜಿಂಕೆ, ಕಲ್ಲಿನ ಉಳಿ, ದೀಪ, ದೀಹದ ಗಿಡುಗ, ಮುಂತಾದ ಬೇಟೆಯ ಸಂಗತಿಗಳನ್ನು ತಿಳಿಸಿದ್ದಾನೆ. ಕಾಡಿನ ಪ್ರಾಣಿಗಳ ಹೆಜ್ಜೆ ಗುರುತುಗಳಿಂದ ಬೇಟೆಯಾಡುವ ತಂತ್ರ ರಾಘವಾಂಕನಂತೆ ಷಡಕ್ಷರದೇವ ಹೇಳಿದ್ದಾನೆ. ಬೇಡೆಪಡೆಯವರು ಪ್ರಾಣಿಯ ಹೆಜ್ಜೆಗಳನ್ನು ಗುರುತಿಸಿ ಆ ಪ್ರಾಣಿಗಳನ್ನು ಹಿಡಿದು ಕೊಲ್ಲುತ್ತಾರೆ. ಅವುಗಳಲ್ಲಿ ಜಿಂಕೆ, ಮೊಲ, ಆನೆ, ಹೆಬ್ಬುಲಿ, ಪಕ್ಷಿ, ಖಡ್ಗಮೃಗ, ತೋಳ, ಸಿಂಹ ಮುಂತಾದವು ಪ್ರಮುಖವಾಗಿವೆ. ಬೇಟೆಯ ನಿಮಿತ್ತ ಬೇಹುಗಾರರು, ಸೋವತರು, ಚಲನವಲನ, ಸಂಕೇತ- ಸಂಜ್ಞೆಗಳ ಪ್ರಾಣಿಕೊಂದ ಸಂಕೇತಕ್ಕೆ 'ಸನ್ನೆ ಬೇಂಟೆ' ಎಂದಿದ್ದಾರೆ. ಬೇಟೆಯ ವರ್ಣನೆ, ಷಡಕ್ಷರದೇವನಿಗೆ ವೀರರಸ ಪ್ರತಿಪಾದನೆಗೆ ಅನುಕೂಲವಾಗಿದ್ದರೂ ಕವಿ ಶೃಂಗಾರರಸವನ್ನು ಪ್ರತಿಪಾದಿಸುತ್ತಾನೆ. ಇಲ್ಲಿ ಕಿರಾತ ರತಿಯ ಪ್ರಸಂಗ, ರಸಮಿಳಿತ, ಸುಂದರ ಪುಳಿಂದನ ಹಿಂದೆ ಮಡದಿ ಹಿಂದಿನ ದಿನ ಮುನಿದಿದ್ದಳಿಂದ ನಲ್ಲನ ಹಿಂದೆ ಜೊತೆ ಕೂಡಿ ಬೇಟೆಗೆ ಹೋಗುತ್ತಾಳೆ (ಪ್ರಣಯ ಬೇಟೆ). ಹುಲಿಯ ವರ್ತನೆ ಸಹಿಸದ ಪುಳಿಂದ ಬಾಣ ಪ್ರಯೋಗಮಾಡುತ್ತಾನೆ. ಹುಲಿಗೆ ಬಾಣದ ಗುರಿಯಿಡುವಷ್ಟರಲ್ಲಿ ಇನಿಯನನ್ನು ಬಂದು ಮಡದಿ ಅಪ್ಪುವಳು. ಆಗ ಗುರಿ ತಪ್ಪುತ್ತದೆ. ನಲ್ಲೆ ಬಿಗಿ ಅಪ್ಪುಗೆಯಿಂದ. ಬಾಣದ ಗುರಿ ತಪ್ಪುವುದು ವಿಷಾದ, ಅಪ್ಪಿಗೆಯಿಂದ

ಮುದವಾಗುತ್ತದೆ. ಷಡಕ್ಷರದೇವ ಮೃಗಯಾವಿಹಾರವನ್ನು ಹೇಳುತ್ತಾ, ಬೇಟೆ ಪಾಪಕೃತ್ಯವೆಂದು ಪ್ರತಿಪಾದಿಸುತ್ತಾನೆ. ಕನ್ನಡದ ಪ್ರಾಚೀನ ಕವಿಗಳೆಲ್ಲರೂ ಮೃಗಯಾದ ಪರವಾಗಿದ್ದರೆ ಷಡಕ್ಷರ ಮೊತ್ತಮೊದಲ ಬಾರಿಗೆ ವಿರೋಧವಾಗಿಯೂ ಹೇಳಿಕೆ ನೀಡಿ ವನ್ಯಜೀವಿಗಳ ಬಗ್ಗೆ ಕಾಳಜಿ, ಪ್ರೀತಿ ತೋರಿದ್ದಾನೆ.

ಶಬರಶಂಕರವಿಳಾಸ : ಶಿವನ ಪಂಚವಿಶಂತಿ ಲೀಲೆಗಳಲ್ಲಿ ಒಂದಾದ ಅರ್ಜುನನಿಗೆ ಪಾಶುಪತಾಸ್ತ್ರ ನೀಡುವ ಕಥಾಭಾಗ ಇದರ ವಸ್ತು. ಶಬರ ವೇಷ ಧಾರಿ ಶಿವ ಕಥಾನಾಯಕ. ಭಕ್ತನಾದ ಅರ್ಜುನನ ಮೇಲೆ ಶಿವನಿಗಿರುವ ಕರುಣೆ ನಿರೂಪಣೆಯಾಗಿದೆ. 'ಶಬರಶಂಕರವಿಳಾಸ' ಕಥೆ ಸಂಸ್ಕೃತ ಮತ್ತು ಕನ್ನಡದ ಕೃತಿಗಳಲ್ಲಿದೆ. ಮೊದಲು ವ್ಯಾಸಮಹಾಭಾರತದಲ್ಲಿ ಕಾಣುತ್ತೇವೆ. ಭಾರವಿ, ಪಂಪ, ಕುಮಾರವ್ಯಾಸ, ವಿರೂಪಾಕ್ಷಪಂಡಿತ, ಮೊದಲಾದವರು ಈ ಪ್ರಸಂಗವನ್ನು ಚಿತ್ರಿಸಿದ್ದಾರೆ. ಕನ್ನಡದಲ್ಲಿ ಪ್ರತ್ಯೇಕವಾಗಿ ಖಂಡಕಾವ್ಯವೊಂದನ್ನು ರಚಿಸಿದ ಕೀರ್ತಿ ಷಡಕ್ಷರನದು. ಶಬರಶಂಕರವಿಳಾಸದ ೩-೪ನೇ ಆಶ್ವಾಸನೆಗಳಲ್ಲಿ ಬೇಟೆಯ ಉಲ್ಲೇಖಗಳಿವೆ. ಶಿವ-ಪಾರ್ವತಿಯರು, ಶಬರ-ಶಬರಿಯರಾಗಿ ದೇವತೆಗಳು ಕಿರಾತ ರೂಪ ಧರಿಸಿ ಇಂದ್ರಕೀಲಕ್ಕೆ ಬಂದು ಬೇಟೆಯಾಡುವ ಚಿತ್ರ, ನಾಲ್ಕನೇ ಸ್ಥಲದಲ್ಲಿ ಮೂಕದಾನವ ದೇವ ಪಡೆಯ ಮೇಲೆ ದಾಳಿ, ಹಂದಿಯ ಕಿರುಕಳ, ಬೇಡರಪಡೆ ನಾಶ, ಶಿವ ಮಾಯಾ ವರಾಹವನ್ನು ಕೊಲ್ಲುವುದು ಮುಂತಾದ ವರ್ಣನೆಯಿದೆ. 'ಕಿರಾತಾರ್ಜುನೀಯ ಪ್ರಸಂಗ, 'ಬೇಟೆಗೆ ತಯರಾದ ಶಿವಗಣರ ಸ್ವರೂಪ, 'ಭ್ರಾಂತಿಯನ್ನುಂಟು ಮಾಡುವ ದೀಪ, ಮಂಕುಬೂದಿ ಎಂಬ ಎರಚಿ ಪ್ರಾಣಿಗಳನ್ನು ಸೆರೆಹಿಡಿಯುವ ಹೊಸ ತಂತ್ರಗಳನ್ನು ಈ ಕವಿ ಹೇಳಿದ್ದಾನೆ. ಬೇಟೆಗಾರನಿಗೆ ನೀಡುವ ಚಿನ್ಹೆ, ಸಂಕೇತಗಳ ಬಗ್ಗೆ 'ಶಬರಶಂಕರವಿಳಾಸ'ದಲ್ಲಿ ಮೃಗಯಾ ಮತ್ತು ಕಿರಾತ ಲೀಲೆಗಳ ವರ್ಣನೆ ಪರಸ್ಪರ ಸಾಮ್ಯವಿದ್ದಂತಿದೆ. ಶಿವ ಮತ್ತು ಅರ್ಜುನರು ಹಂದಿಯನ್ನು ಕೊಲ್ಲುವ ಪ್ರಸಂಗ ಮೂಲಕಥೆಯಲ್ಲೇ ಇದೆ. ನಿಸರ್ಗದ ವರ್ಣನೆ, ಇತ್ಯಾದಿ ಸಂಗತಿಗಳು ಇಲ್ಲಿ ಗಮನಾರ್ಹ.

ತಿರುಮಲಾರ್ಯ : ಚಿಕ್ಕದೇವರಾಯ ವಂಶಾವಳಿ ತಿರುಮಲಾರ್ಯನ ಕೃತಿ. ರಾಜನು ಅಧಿಕಾರವನ್ನು ಕಸಿದುಕೊಳ್ಳಲು ಬೇಟೆ ಮಾಧ್ಯಮವಾದ ವಿಚಾರ ಚಿಕ್ಕದೇವರಾಜ ವಂಶಾವಳಿಯಲ್ಲಿ ಬರುತ್ತದೆ. ರಾಜನನ್ನು ಬೇಟೆಯ ಮೂಲಕ ಮೆಚ್ಚಿಸಿ, ಅಂದರೆ ಅವನಿಗೆ ಶಿಕಾರಿಯ ಹುಚ್ಚು ಹಿಡಿಸಿ ಆ ಮೂಲಕ ರಾಜ್ಯದ ಅಧಿಕಾರ ಕಸಿಯುವ ಸೇನಾನಿಯೊಬ್ಬನ ಸಂಚು ಇಲ್ಲಿಯ ವೈಶಿಷ್ಟ್ಯ. ಸೇನಾನಿ ಅಧಿಕಾರಿಗಳು, ವಿಲಾಸಕ್ಕಾಗಿ ಮಿತ್ರರ ಜೊತೆ ಬೇಟೆಯ ಕೋವಿಗಳನ್ನು ಉಪಯೋಗಿಸಿ ದೇವಾಲಯದ ಗೋಪುರ, ಪ್ರಾಕಾರ, ಮಂಟಪ, ವಿಮಾನಗಳಲ್ಲಿ ವಾಸಿಸುವ ಹಕ್ಕಿಗಳನ್ನು ಹಾರಿಸಿ, ಗುಂಡಿಕ್ಕಿ ಕೆಡಹುತ್ತಿದ್ದರು. ಅವು ಹೆದರಿಕೊಂಡು ಗರ್ಭಗೃಹ ಹೊಕ್ಕರೂ ಬಿಡದೇ ಹಿಡಿಯುತ್ತಿದ್ದರು. ಬೇಟೆಗಾಗಿ ಆಧುನಿಕ ತಂತ್ರವಾದ ಕೋವಿಯನ್ನು ಬಳಸಿದ ಉಲ್ಲೇಖ ಈ ಕೃತಿಯನ್ನುಳಿದು ಹಳೆಗನ್ನಡದ ಬೇರೆ ಯಾವುದೇ ಕೃತಿಯಲ್ಲಿಲ್ಲ. ಪ್ರಕೃತಿಯ ವರ್ಣನೆಯಲ್ಲಿ ಇವನು ಮೊದಲಿಗನಾಗಿದ್ದಾನೆ.

ಮುಮ್ಮಡಿ ಕೃಷ್ಣರಾಜ ಒಡೆಯರ್ : ಈತನ ಸೌಗಂಧಿಕಪರಿಣಯ ಭಾಮಿನಿ ಷಟ್ಪದಿಯ ಗದ್ಯಕಾವ್ಯ. ಇದರಲ್ಲಿ ಸುಗಂಧ ರಾಜನು ಮೃಗಯಾ ವಿಹಾರಕ್ಕೆ ಹೊರಡುವ ವರ್ಣನೆಯನ್ನು ಕವಿ ಸುಂದರವಾಗಿ ನೈಜವೆಂಬಂತೆ ಚಿತ್ರಿಸಿದ್ದಾನೆ. ಸಡಗರ-ಸಂಭ್ರಮದಿಂದ ಸೈನ್ಯ ಸಮೇತನಾಗಿ ಹೊರಟ ರಾಜ ಕಾಡಿನೊಳಗೆ ಬೇಟೆಗಾಗಿ ಸೋವತರು ವಿವಿಧ ರೀತಿಯ ಸಂಚು ಹೂಡಬೇಕೆಂದು ನಿರ್ದೇಶಿಸುತ್ತಾನೆ. ಕಾಡಿನೊಳಗೆ ವಾದ್ಯದ ಧ್ವನಿಯನ್ನು ನಿಲ್ಲಿಸುವಂತೆ, ಕುದುರೆಗಳು ಕೆನೆಯಂತೆ ಅವುಗಳ ಬಾಯಿಗೆ ಕಟ್ಟುಗಳನ್ನು ಬಿಗಿಯುವಂತೆ ಆಳುಗಳಿಗೆ ಹೇಳುತ್ತಾನೆ. ಬೇಟೆಗಾರರು ಕಾಡಿನೊಳಗೆ ಬೊಬ್ಬಿಡದೆ ಪರಸ್ಪರ ಸಂಜ್ಞೆಯಿಂದಲೇ ವ್ಯವಹರಿಸುತ್ತಾರೆ. ಪ್ರಾಣಿ ವಾಸಿಸುವ ಜಾಗದ ಗುಮಾನಿಯನ್ನು ಗುರುತಿಸಿ ಹಂದಿಗಳು ಗೆದ್ದೆ

ಗೆಣಸುಗಳನ್ನು ಅಗೆದು, ಅರ್ಧ ತಿಂದು ಬಿಟ್ಟ ಅವಶೇಷಗಳಿಂದ ಅವುಗಳ ಹಾದಿಯನ್ನು ಪತ್ತೆ ಹಚ್ಚುತ್ತಿದ್ದರು. 'ಸೌಗಂಧಿಕಪರಿಣಯ'ದಲ್ಲಿ ಬೇಟೆಯಾಡುವ ತಂತ್ರಗಳನ್ನು ಗಮನದಲ್ಲಿಟ್ಟುಕೊಂಡು ಮೃಗಯಾವನ್ನು ಬೇರೆ ಬೇರೆ (ಆರು) ವಿಧಗಳಾಗಿ ನೋಡಿದ್ದಾರೆ. ಈ ವಿಧಾನಗಳನ್ನು ಅನುಸರಿಸಿ ಬೇಟೆಯಾಡಿದರೆ 'ಧರ್ಮಾರ್ಥ ಕಾಮ ಮೋಕ್ಷ'ಗಳು ಲಭಿಸುತ್ತವೆಂದು ಕರ್ತೃ ಹೇಳಿರುವುದುಂಟು.[೬೯]

ಇತರ ಸಾಹಿತ್ಯ ಕೃತಿಗಳು

ಬೇಟೆಯನ್ನು ಕುರಿತು ಮೇಲಿನಂತೆ ವಿವರವಾಗಿ ತಿಳಿಸಲಾಗಿದ್ದರೂ, ಇನ್ನೂ ಮರೆಯಾದ ಅನೇಕ ಕೃತಿ, ಲೇಖನ, ಕಥೆ, ಕವನಗಳನ್ನು ಅವಲೋಕಿಸುವ ಅಗತ್ಯವಿದೆ. ಇಲ್ಲಿ ಕೆಲವು ಕೃತಿಗಳನ್ನು ಪ್ರಸ್ತಾಪಿಸಲಾಗುತ್ತದೆ. ೧೮ ವರ್ಣನೆಗಳ ಪ್ರತಿ ಕಾವ್ಯದಲ್ಲಿ ಮೃಗಯಾವಿರುವುದು ಸ್ಪಷ್ಟ. ಬಾಹುಬಲಿಪಂಡಿತನ ಧರ್ಮನಾಥಪುರಾಣದಲ್ಲಿ ಬೇಟೆಗಾರರ ಸ್ವರೂಪ ವರ್ಣನೆಯ ಸಂದರ್ಭದಲ್ಲಿ ಕವಿಯ ಬಲಗೈಯಲ್ಲಿ ಪೆಣ್ನಾಯ್ಗಳಂ ಸಂಗಡದೊಳಂ ಎಂದು ಶಿಕಾರಿಯಲ್ಲಿ ಹೆಣ್ಣುನಾಯಿಗಳನ್ನು ಕೂಡಾ ಉಪಯೋಗಿಸುತ್ತಾರೆಂಬುದು ಕಾವ್ಯಗಳಿಂದ ತಿಳಿದುಬರುತ್ತದೆ.

ಲಕ್ಷ್ಮಯ್ಯ ಕವಿ : 'ಮದನ ಮೋಹಿನಿಯ ಕಥೆ'ಯಲ್ಲಿ ಬೇಟೆ ಮತ್ತು ಬೇಡರ ಪಡೆಗಳ ಉಲ್ಲೇಖವಿದೆ. ಕಾಡಿನ ನಡುವೆ ಬೇಟೆಗೆ ಸಜ್ಜಾದ ಶಬರರ ಪಡೆಯನ್ನು ಕವಿ ಉಲ್ಲೇಖಿಸಿರುವನು. ಯುವ ಬೇಟೆಗಾರನೊಬ್ಬ ಪರಸ್ತ್ರೀಯರೊಂದಿಗೆ ರತಿಕ್ರೀಡೆಯಾಡಿ ಉಗುರಿಗೆ ಆದ ಗಾಯವನ್ನು ತನ್ನ ಹೆಂಡತಿಗೆ ಹುಲಿಯ ಹೊಡೆತದಿಂದ ಆಗಿದೆ ಎಂದು ತಿಳಿದುಕೊಳ್ಳುವಂತೆ ಮಾಡಲು ಹುಲಿಮರಿಯನ್ನು ಕಂಕುಳಲ್ಲಿ ಹಿಡಿದುಕೊಂಡು ಬರುವ ತಂತ್ರವನ್ನು ಈ ಕವಿ ಅದ್ಭುತವಾಗಿ ವರ್ಣಿಸಿದ್ದಾನೆ.

ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ' ದಲ್ಲಿ ಪರ್ವತ ವರ್ಣನಾ ವಿಭಾಗದ ೬೫ ಪದ್ಯಗಳು ಬೇಟೆಗೆ ಸೀಮಿತವಾಗಿವೆ. ಇಲ್ಲಿ ಬೇಟೆ ವಿನೋದ, ವ್ಯಸನ ಅಲ್ಲ. ಇಲ್ಲಿ ಸತ್ಕಾರ್ಯ ಎಂಬ ಸಿದ್ಧಾಂತ ರೂಪದ ಪದ್ಯಗಳಿವೆ. ಬೇಡರಹಳ್ಳಿಯ ಸುಂದರವಾದ ಚಿತ್ರವೊಂದು ಗೋವಿಂದ ಕವಿಯ 'ನಂದಿ ಮಾಹಾತ್ಮ'ದಲ್ಲಿದೆ. ನಾಗವರ್ಮನ ಕರ್ನಾಟಕ ಕಾದಂಬರಿ, ನೇಮಿಚಂದ್ರನ ಲೀಲಾವತೀ ಮಹಾ ಪ್ರಬಂಧಂ, ನೇಮಿಚಂದ್ರ ಪುರಾಣ, ಕುಮಾರವ್ಯಾಸನ ಕರ್ನಾಟಕಭಾರತ ಕಥಾಮಂಜರಿ', ಪರ್ವತೇಶನ ಚಾತುರಾಚರ್ಯ ಚರಿತ್ರೆ, ಪಾಯಣ್ಣನ ಸಮ್ಯುಕ್ತ ಕೌಮುದಿ, ಪದ್ಮನಾಭ ಕವಿಯ 'ಜನದತ್ತ ಚರಿತೆ, ಮಲ್ಲಿಕಾರ್ಜುನನ ತೋಂಟದರಾಯನ ಸಾಂಗತ್ಯ, ಬಸವಕವಿಯ 'ಕಲ್ಲೇಲಿಂಗೇಶ್ವರ ಚಾರಿತ್ರ, ಪರ್ವತೇಶನ 'ನನ್ನಯ್ಯ ಚಾರಿತ್ರ', ಅಗ್ಗಳನ ಚಂದ್ರಪ್ರಭಾಪುರಾಣ, ಗುರುದತ್ತ ಚರಿತೆ ಇತರ ಕೃತಿಗಳಲ್ಲಿ ಬೇಟೆಯ - ಬೇಡರ ಸಂಕ್ಷಿಪ್ತ ಮಾಹಿತಿ ದೊರೆಯುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬೇಟೆ ಮತ್ತು ಬೇಡರು

ಭಾರತಕ್ಕೆ ಯುರೋಪಿಯನ್ನರ ಆಗಮನದ ತರುವಾಯ ವಿವಿಧ ರಂಗಗಳಲ್ಲಿ ಬದಲಾದ ಸಾಂಸ್ಕೃತಿಕ ಕ್ಷೇತ್ರವು ಪರಿವರ್ತನಾ ಘಟ್ಟವನ್ನು ತಲುಪಿತು. ಇದಕ್ಕೆ ಬ್ರಿಟಿಷ್ ವಿದ್ವಾಂಸರು ಕಾರಣರೆಂದರೆ ತಪ್ಪಲ್ಲ. ಅವರು ಇಲ್ಲಿನ ಸಾಂಸ್ಕೃತಿಕ ಹೆಗ್ಗುರುತುಗಳನ್ನು ಜಗತ್ತಿಗೆ ಪರಿಚಯಿಸುವ ರೂವಾರಿಗಳಾಗಿದ್ದರು. ಸೂಕ್ಷ್ಮ ಸಂಗತಿಗಳನ್ನು ಬೆಳಕಿಗೆ ತಂದು, ಕೃತಿಗಳ ಮೂಲಕ ಪರಿಚಯಿಸುತ್ತಿದ್ದರು. ಹೀಗಾಗಿ ಬೇಟೆಯ ಬಗೆಗೆ ಅವರು ಸಾಕಷ್ಟು ಕೃಷಿ ಮಾಡಿರುವುದನ್ನು ಗಮನಿಸಬಹುದು. ಇಲ್ಲಿನ ಬೇಟೆ ಚಟುವಟಿಕೆಗಳನ್ನು ನೋಡಿ, ಭಾಗವಹಿಸಿ ನಮ್ಮವರು

ಆತ್ಮಕಥೆ, ಜೀವನ ಚರಿತ್ರೆ, ಕಥೆ, ಕಾದಂಬರಿ, ಕವನಗಳಲ್ಲಿ ಪ್ರಸ್ತಾಪಿಸಿದ್ದಾರೆ. ಮೊದಲಿಗೆ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಬೇಟೆಯ ಕೃತಿಗಳನ್ನು, ಎರಡನೇ ಭಾಗದಲ್ಲಿ ಆಂಗ್ಲ ಸಾಹಿತ್ಯದಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಬೇಟೆ, ವಾಸ್ತುಶಿಲ್ಪ, ಪ್ರಾಚ್ಯಾವಶೇಷಗಳ ನೆರವಿನೊಂದಿಗೆ ಕೊನೆಯಲ್ಲಿ ನೋಡಬಹುದು. ಇಲ್ಲಿ ಕೆದಂಬಾಡಿ ಜತ್ತಪ್ಪ ರೈ, ಕುವೆಂಪು, ಕಾಕೆಮಾನಿ, ಮಂಜಪ್ಪಶೆಟ್ಟಿ, ನರೇಂದ್ರ ರೈ ದೇರ್ಲ, ಹರತಿ ವೀರನಾಯಕ, ತ.ರಾ.ಸು., ತೇಜಸ್ವಿ, ಮುಂತಾದವರು ಕೃಷಿ ಮಾಡಿರುವ ಬೇಟೆಯ ರೋಚಕತೆಗಳ ಅಧ್ಯಯನವನ್ನು ಮಾಡಲಾಗಿದೆ.

ದಕ್ಷಿಣಕನ್ನಡ ಜಿಲ್ಲೆಯ ಕೆದಂಬಾಡಿ ಜತ್ತಪ್ಪ ರೈ ಅವರು ಹೊಸಗನ್ನಡದ ಮೃಗಯಾ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಇವರು ಬೇಟೆಯ ಗೀಳನ್ನು ಬಾಲ್ಯದಲ್ಲೇ ಬೆಳೆಸಿಕೊಂಡು ತಮ್ಮ ಅನುಭವದ ಶಿಖರದಲ್ಲಿ ಮೆಲುಕು ಹಾಕುತ್ತಾ ತಮ್ಮ ೫೦ನೇ ದಶಕದಲ್ಲಿ ಅನುಭವದ ಗುಟ್ಟನ್ನು ನಾಡಿನ ಜನರೊಂದಿಗೆ ಬಿಚ್ಚಿದರು. ೧೯೭೦ರಲ್ಲಿ 'ಬೇಟೆಯ ನೆನಪುಗಳು' ಪ್ರಕಟವಾಯಿತು. ನಂತರ 'ಈಡೊಂದು ಹುಲಿಯೆರಡು', ಬೇಟೆಯ ಉರುಳು ಮತ್ತು ಬೆಟ್ಟದ ತಪ್ಪಲಿಂದ ಕಡಲಕರೆಗೆ ಎನ್ನುವ ನಾಲ್ಕು ಕೃತಿಗಳು ಮೃಗಯಾದ ಅನುಭವಗಳನ್ನು ಹೊಂದಿವೆ.

೧. **ಬೇಟೆಯ ನೆನಪುಗಳು :** ರೈಯವರ ಶಿಕಾರಿ ಸಾಹಸದ ಕೆಲವು ಪ್ರಸಂಗಗಳು ಇದರಲ್ಲಿವೆ. ಹುಲಿಶಿಕಾರಿ, ಜೀವಂತ ಹುಲಿಯ ಮೀಸೆಯನ್ನು ಕಿತ್ತು ತರುವ ಮೋಂತು, ದೊಣ್ಣೆಯಿಂದ ಹುಲಿಯನ್ನು ಕೊಂದ ಕುಂಞಮೋನು; ಕತ್ತಲಲ್ಲಿ ವಿಪತ್ತು, ಬ್ರಿಟಿಷ್ ಕುಟುಂಬದೊಂದಿಗೆ ಕುದುರೆ ಮುಖ ನೋಡಬೇಕು, ಹುಲಿ- ಹಂದಿಯ ಹೋರಾಟ ಮತ್ತು ಗಾರ್ಡರ ಬೆಲಿಪ ಶಿಕಾರಿ ಎನ್ನುವ ಅಧ್ಯಾಯ ೧೧ರಲ್ಲಿ ಬಾಲ್ಯದಲ್ಲಿ ಕಂಡುಂಡ ಅನುಭವಗಳನ್ನು ಚಿತ್ರಿಸಿದ್ದಾರೆ. ಅಂತರ್ಯದಲ್ಲಿ ಹುದುಗಿರುವ ಅನಿಸಿಕೆ-ಭಾವನೆಗಳನ್ನು ಪರಿಸರದ ಕೃಷಿ, ಪ್ರಾಣಿ, ಪಕ್ಷಿಗಳು, ಕಾಡು, ಬೆಟ್ಟ, ನದಿ, ಹೊಳೆ, ವಿವಿಧ ಜಾತಿ, ಜನಾಂಗ, ವರ್ಗಗಳನ್ನು ಮತ್ತು ೫೦ ವರ್ಷಗಳ ಹಿಂದಿನ ದಕ್ಷಿಣಕನ್ನಡದ ಭೌಗೋಳಿಕ ಸ್ವರೂಪ, ಇತರ ವಿಷಯಗಳನ್ನು ತಿಳಿಸುತ್ತಾರೆ. ಬಾಲ್ಯದಲ್ಲಿ ತಾನು ಬೇಟೆಗೆ ಆಕರ್ಷಿತರಾದುದರ ಹಿನ್ನೆಲೆ, ಶಿಕಾರಿ, ಸಂದರ್ಭಗಳನ್ನು ಕೇಳಿದ, ನೋಡಿದ ಅನುಭವಗಳು ಇಲ್ಲಿ ಹರಡಿಕೊಂಡಿವೆ. ಹಂದಿ,ಹುಲಿ, ಕಾಡುಕೋಣ, ಇಂತಹ ಕ್ರೂರಮೃಗಗಳು ದಿನನಿತ್ಯ ರೈತರಿಗೆ ತೊಂದರೆ ಕೊಡುತ್ತಿದ್ದವು. ಇವುಗಳನ್ನು ಕೊಲ್ಲಲು ಭರ್ಚಿ, ಕೋವಿ, ಕತ್ತಿ ಮೊದಲಾದ ಆಯುಧಗಳನ್ನು ಬಳಸಿದ ಬೇಟೆ ಜನರ ಪರಿಚಯ ಇಲ್ಲಿದೆ. ಬೇಟೆಯ ತಂತ್ರದಲ್ಲಿ : ಕರ್ಪು ತೊಡುವುದು, ಕೋವಿ ಎತ್ತಿಕಟ್ಟುವುದು, ಸಾರ್ತೆ ಬೇಟೆ, ಲೈಟು ಶಿಕಾರಿ, ಕಾಡುಸೋವುದು ಕಂಡುಬರುತ್ತದೆ. ಬೇಟೆಗಾರರು ಬೇಟೆಯಾದ ಮೇಲೆ ಮಾಂಸದೂಟ ಮಾಡುವುದು ಸಹಜ. ಕಾಡುಮೃಗಗಳ ಹಾವಳಿ ಜಾಸ್ತಿಯಾದಾಗ ಅವುಗಳ ನಿಯಂತ್ರಣಕ್ಕೆ ಜಿಲ್ಲಾ ಇಂಗ್ಲೀಷ್ ಅಧಿಕಾರಿ ಬರುವುದು ವಿಶೇಷ. ರೈ ಆಗ ೧೪ರ ಬಾಲಕ. ಅವರಜ್ಜ ಕೊರಗಪ್ಪ ರೈ ಖ್ಯಾತ ಬೇಟೆಗಾರರು. ಇವರ ಗುರಿತಪ್ಪಿದ ಕೌಶಲ್ಯಕ್ಕೆ ಆ ಅಧಿಕಾರಿ ಜೋಡು ನಳಿಗೆಯ ಕೋವಿಯನ್ನು ಬಹುಮಾನವನ್ನಾಗಿ ನೀಡಿದರು.

ಉಳಿದ ಅಧ್ಯಾಯಗಳಲ್ಲಿ ರೈಯವರು -ಯೌವ್ವನದ ಕಾಲದಲ್ಲಿ ವಿವಿಧ ಪ್ರದೇಶಗಳಲ್ಲಿ ಬೇಟೆಯಾಡಿದ ಸಾಹಸಗಾಥೆಯಿದೆ. ಹುಲಿಶಿಕಾರಿಯಲ್ಲಿ ರೈ ಅವರು ಬಾವಿಯಲ್ಲಿ ಬಿದ್ದ ಹುಲಿಯನ್ನು ಕೊಂದು ಸಾಹಸದ ನಾಟಕವಾಡಿ, ಹುಲಿಕೊಂದ ವೀರರಿಗೆ ಮಾಡುವಂತಹ ಮೆರವಣಿಗೆಯ ಗೌರವವನ್ನು ಪಡೆದ ಉಪಾಯ ಅನನ್ಯವಾದುದು. ಜೀವಂತ ಹುಲಿಯ ಮೀಸೆ ತರುವ ಸಾಹಸ, ರಾತ್ರಿ ಬೇಟೆ, ಬ್ರಿಟಿಷ್ ಕುಟುಂಬದೊಂದಿಗೆ ಕುದುರೆಮುಖದಲ್ಲಿ ಕಳೆದ ನೆನಪು,

ಬ್ರಿಟಿಷ್ ಕುಟುಂಬದ ಬುದ್ಧಿವಂತ ಯುವತಿ ರೋಸ್ಲಿಯೊಂದಿಗೆ ರೈಯವರು ನಡೆಸಿದ ಮೋಜಿನ ಮೃಗಬೇಟೆ, ಕೂಡುಬೇಟೆಯಲ್ಲಿ ಭಾಗವಹಿಸಿದ್ದು ಕಂಡುಬರುತ್ತದೆ. ರೈಯವರು ಗಿರಿಜಾ, ಮೀಸೆಯ ದೊಳ್ಳಜ್ಜ, ಕಾಸಿಂಸಾಹೇಬ್, ಜೋನ್ ಬ್ರಗಾಂಜ, ಕೊಂಬಾರಿನ ಸಾಂತಗೌಡ, ಬೇಳ್ತಮೇರ ಇವನ ಹೆಂಡತಿ ಚೋಮು ಇವರು ಬೇಟೆಗಾರರು. ವೀರ, ರೌದ್ರ, ಅಭಿವ್ಯಕ್ತಿಗಳಿಗೆ ಇವರು ಆನೆ,ಹುಲಿ,ನಾಯಿ, ಇತ್ಯಾದಿ ಸಂಗತಿಗಳ ಬಗ್ಗೆ ವಿವರಿಸಿದ್ದಾರೆ. ಬೇಟೆ, ಹಿಂಸೆ, ಕ್ರೌರ್ಯ ಎಂದು ಲೇಖಕರು ಅಂತಿಮ ನಿರ್ಧಾರಕ್ಕೆ ಬಂದಿರುವುದು ಸ್ಪಷ್ಟ.

೨. **ಈಡೊಂದು ಹುಲಿಯೆರಡು :** ಇದು ಜತ್ತಪ್ಪ ರೈ ಅವರ ೨ ನೇ ಕೃತಿಯಾಗಿದ್ದು, ೩ ಅಧ್ಯಾಯಗಳ ಒಂದು ಸಂಕಲನವಾಗಿದೆ. ೧೯೭೯ರಲ್ಲಿ ಪ್ರಕಟವಾದಾಗ ಮೊದಲಿನ ಕೃತಿಯಲ್ಲಿ ಮರೆಯಾದ ಸಂಗತಿಗಳನ್ನು ಇದರಲ್ಲಿ ಪ್ರಸ್ತಾಪಿಸಿದ್ದಾರೆ. ಹಂದಿ ಮತ್ತು ಹುಲಿಬೇಟೆಯೊಂದಿಗೆ ಕರಡಿ, ಆನೆ, ಕಾಡುಕೋಣಗಳಂಥ ಬಲಶಾಲಿ ಪ್ರಾಣಿಗಳನ್ನು ರೈಯವರು ಬೇಟೆಯಾಡಿರುವುದಕ್ಕೆ ಈ ಕೃತಿ ನಿದರ್ಶನ. ಕಾಡುಬೇಟೆಯೊಂದಿಗೆ ನೀರಬೇಟೆಯ ಬಗ್ಗೆ ಮಾಹಿತಿ ಇದೆ. ಮೀನಿಗಾಗಿ ನೀರಿಗೆ ತೋಟೆ ಹಾಕುವ ಪ್ರಯೋಗವುಂಟು. ಎರಡು ಹುಲಿಗಳು ಪ್ರೀತಿಯ ಸಲ್ಲಾಪದಲ್ಲಿದ್ದಾಗ ಈಡಿನಿಂದ ಕೊಂದ ಲೇಖಕರ ಜಾಣ್ಮೆ-ಸಾಹಸ ಮೆಚ್ಚತಕ್ಕದ್ದು. ಹುಲಿಗಳನ್ನು ಬಂಧಿಸಲು ಬೋನು ತಯಾರಿಸುವ ವಿಧಾನ, ಬೇಟೆಗಾರನಾದ ಲೇಖಕ ಮನಬಿಚ್ಚಿ ಹೇಳಿದ್ದಾನೆ. ಇಂಗ್ಲೀಷ್ ಲೇಡಿ ರೋಸ್ಲಿ ಕಾಡುಕೋಳಿಯ ಬೇಟೆಗೆಂದು ಹೋಗಿ ಅನಿರೀಕ್ಷಿತವಾಗಿ ಕರಡಿಯನ್ನು ಕಂಡು ಭಯದಿಂದ ಆತಂಕಪಡುವ ಸಂಗತಿ ಅಪೂರ್ವವಾದುದು.

ಇವರು ಕಾಡು ಸೋವುವಲ್ಲಿ, ಈಡು ಹೊಡೆಯುವಲ್ಲಿ, ಸತ್ತಬೇಟೆಯನ್ನು ಮಾಂಸ ಮಾಡಿ ಹಂಚುವಲ್ಲಿನ ಉದಾಹರಣೆಗಳಿವೆ. ರಾತ್ರಿ ಹೊತ್ತಿನ ಲೈಟು ಶಿಕಾರಿಯ ತಂತ್ರದ ಕುರಿತು ರೈಯವರ ಖಚಿತ ಉಲ್ಲೇಖವಿದೆ. ಬೇಟೆಗಾರನೊಬ್ಬನಿಗೆ ಹಂದಿಹಾಯ್ದು ಉಂಟಾದ ಗಾಯ, ಹಂದಿ, ಎಷ್ಟು ಅಪಾಯಕಾರಿ ಎಂಬ ಅರಿವು, ಬೇಟೆಯಾಡಿದ ಸಾಹಸಗಾತೆ ಎರಡು ಅಧ್ಯಾಯಗಳಿವೆ. ಎದೆಗಾರಿಕೆ ಈಡುಗಾರಿಕೆಯ ಅನುಭವ ವೀರರಸ ಮುಖ್ಯವಾಗಿದೆ. ಇಲ್ಲಿ ಭಯಾನಕ, ಭೀಬತ್ಸ, ಕರುಣ, ಹಾಸ್ಯ, ರಸಗಳ ಮಿಶ್ರಣವೂ ಒಳಗೊಂಡಿದೆ. ಮೀನು ಬೇಟೆಗೆ ಹೋಗಿ ಅಲ್ಲಿ ಕೊಳೆತು ನಾರುವ ಹೆಣವನ್ನು ಕಾಣುವಲ್ಲಿ ಭೀಬತ್ಸಕ್ಕೆ ಕಾರಣವಾಗಿದೆ. ಇಲ್ಲಿ ೪-೫ ದಶಕಗಳ ಬೇಟೆಯ ಅನುಭವದ ಸಂಗತಿಗಳನ್ನು ಹಂಚಿಕೊಂಡಿದ್ದಾರೆ. ಒಟ್ಟಾರೆ ಕಾಡು ಮತ್ತು ಮಾನವ ನಡುವಿನ ಸಂಬಂಧ ಬೆತ್ತಲೆಯಾಗಿ ಚಿತ್ರಿತವಾದಂತಿದೆ.

೩. **ಬೇಟೆಯ ಉರುಳು :** ಇದು ಕೆದಂಬಾಡಿ ಜತ್ತಪ್ಪ ರೈ ಅವರ ೩ನೇ ಕೃತಿ. ೧೯೮೨ರಲ್ಲಿ ಪ್ರಕಟವಾಯಿತು. ಚಿಕ್ಕ ಪ್ರಾಣಿ ಜಂತುಗಳಿಂದ ಅತಿ ದೊಡ್ಡ , ಬಲಶಾಲಿ ಪ್ರಾಣಿಗಳನ್ನು ಬೇಟೆಯಾಡುವ ಎಲ್ಲ ವಿವರವಿದೆ. ಬೇಟೆಗೆ ಕಾನೂನು ತಡೆಯಾಗಿರುವ ಹೊತ್ತಿನಲ್ಲಿ ಮೃಗಯಾ ಮನುಷ್ಯರ ಸಂಬಂಧದ ವಿಶ್ಲೇಷಣೆ ಇಲ್ಲಿನ ವೈಶಿಷ್ಟ್ಯವೆನಿಸಿದೆ. ಇಲ್ಲಿ ಬಾಲಕನು ಬೇಟೆಯ ಕುತೂಹಲದಿಂದ ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ತಿಳಿಸುತ್ತಾ ಕೃತಿ ಬರವಣಿಗೆಗಳಿಗೆ ಸಾಗುತ್ತಾನೆ. ಬೇಟೆಯ ಮೂಲ, ಉದ್ದೇಶ, ವಿಧಾನ, ಮುಂತಾದ ವಿಷಯಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಮನುಷ್ಯ ಮತ್ತು ಪ್ರಾಣಿಗಳಲ್ಲಿ ಬೇಟೆಯ ಇತಿಹಾಸವನ್ನು ಶಿಲಾಯುಗ, ಯಂತ್ರಯುಗ, ರಾಮಾಯಣ, ಮಹಾಭಾರತ, ಕಾವ್ಯ ಕಾಲಘಟ್ಟಗಳಲ್ಲಿ ವಿವಿಧ ರಾಜರ ಆಡಳಿತದಲ್ಲಿದ್ದ ಬೇಟೆಯ ಸ್ಥಿತಿಗತಿಯನ್ನು ಕೆದಕಿರುವುದು ಸ್ಪಷ್ಟ.

ಜನಪದರಲ್ಲಿ ಉಳಿದು ಬಂದ ಸಂಪ್ರದಾಯಬದ್ಧ ಜಾನಪದ ಬೇಟೆಯ ವೈವಿಧ್ಯವನ್ನು ಈ ಕೃತಿ ತಿಳಿಸುತ್ತದೆ. ಬಲೆಬೇಟೆ, ಕರ್ಪುತೊಡುವುದು, ಕೋವಿ ಎತ್ತಿಕಟ್ಟುವುದು ಇತರ ಬೇಟೆ ಕ್ರಮ, ಕೋವಿ-ತೋಟಾಗಳ ಪರಿಚಯ ಇಲ್ಲಿದೆ.

ಈ ಕೃತಿಯಲ್ಲಿ ರೈಯವರು ತನಗಿಂತ ಹಿರಿಯ, ಕಿರಿಯ ಮತ್ತು ಸಮಕಾಲೀನ ಬೇಟೆಗಾರರನ್ನು ಮೆಲುಕು ಹಾಕಿದ್ದಾರೆ. ಪಕೀರಪ್ಪ ರೈ ಸಾಹಸವನ್ನು ಇವರು ಉಲ್ಲೇಖಿಸಿದ್ದಾರೆ. ಇದರಲ್ಲಿ 'ಹಾರೋತಿ'ಯ ವಿಚಾರ ಬಗ್ಗೆ ಇದೆ. ಹಾರೋತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಾಭಾವಿಕವಾಗಿದ್ದರೂ ಉಳಿದೆಡೆ ಅಪರೂಪ. ಇದಕ್ಕೆ ತುಳುವಿನಲ್ಲಿ 'ರಾವೋತಿ' ಎಂದು ಕರೆಯುತ್ತಾರೆ. ಈ ಪ್ರಾಣಿಯನ್ನು ಪ್ರಪಂಚದ ವಿಜ್ಞಾನಿಗಳು. ಕುತೂಹಲದಿಂದ ಬಂದು ನೋಡಿದ್ದರು. ಲೇಖಕನ ಸ್ವಭಾವ-ಸ್ವರೂಪ ತೆರೆದಿದೆ. 'ಮಯೂರಲಾಸ್ಕ' ಇಂಗ್ಲೀಷ್ ಕುಟುಂಬದ ಕಥಾನಕದಂತೆ ಕುತೂಹಲಕಾರಿಯಾಗಿದೆ. ಮಲೆನಾಡಿನ ಮಳೆಗಾಲದಲ್ಲಿ ಮಾತ್ರ ಕಂಡುಬರುವ 'ಗೂರ್ಮೆ' ಹಕ್ಕಿಯನ್ನು ಬೇಟೆಯಾಡುವ ವಿಧಾನ ಈ ಕೃತಿಯಿಂದ ಲಭ್ಯ. ರಾಗಿ ಪೈರನ್ನು ತಿನ್ನಲು ಬರುವ ನವಿಲು, ಇನ್ನರಿಗಳನ್ನು ತಿಳಿಸಿದ್ದಾರೆ. ಮೊದಲೆರಡು ಕೃತಿಗಳ ವಿಚಾರವನ್ನು ಇದರಲ್ಲಿ ಆಕಸ್ಮಿಕವಾಗಿ ಅಲ್ಲಲ್ಲಿ ಸ್ಮರಿಸಿಕೊಂಡಿದ್ದಾರೆ.

೪. **ಬೆಟ್ಟದ ತಪ್ಪಲಿಂದ ಕಡಲತಡಿಗೆ** : ಇದು ಕಿರು ಪುಸ್ತಕವಾಗಿದ್ದು, ರೈ ಅವರ ೪ನೇ ಕೃತಿ. ಇದರಲ್ಲಿ ಬೇಟೆಯನ್ನೇ ಕುರಿತ ಚಿತ್ರವಿದೆ. ಕೇರಳದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಉದ್ಯೋಗಿಯಾಗಿ ಬಂದ ಮಣಿಕೃಷ್ಣ ನಾಯರ್ ಕುಟುಂಬವನ್ನು ರೈ ಯವರು ಪ್ರಸ್ತಾಪಿಸುತ್ತಾರೆ. ಅವರಿಗೂ ಬೇಟೆಗೂ ಸಂಬಂಧವಿಲ್ಲದಿದ್ದರೂ ಲೇಖಕನಿಗೆ ಅಪಾರವಾಗಿ ಮೆಚ್ಚುಗೆಯಾದವರು. ಬ್ರಾಹ್ಮಣರ ಆಚಾರ-ವಿಚಾರ, ಸಂಸ್ಕೃತಿಯ ವಿಭಿನ್ನ ನೆಲೆಗಳ ಪರಿಚಯವಿಲ್ಲಿದೆ. ಆಹಾರ, ಉಡುಪು, ನಂಬಿಕೆ, ಹಬ್ಬ, ಕಲೆ, ಉದ್ಯೋಗಗಳ ಬಗ್ಗೆ, ಕನ್ನಡಿಗರಿಗಿಂತ ಇವರು ಹೇಗೆ ಭಿನ್ನವೆಂದು ತಿಳಿಸುತ್ತಾರೆ. ರೈಯವರು ಕೇರಳದಲ್ಲಿ ಬಳಕೆಯಲ್ಲಿರುವ ಬೇಟೆಯ ಬಗೆಗಳನ್ನು ತಿಳಿಸಿ, ಬೇಟೆಗಾರರಾದ ತನ್ನ ಗೆಳೆಯರನ್ನು ತಿಳಿಸಿದ್ದಾರೆ. ಕಾಡುಬೇಟೆಗೆ ಕೇರಳದಲ್ಲಿ 'ನಾಯಾಟ' ಎಂದು ಹೆಸರು. ಅಲ್ಲಿ ನಾಯಿಯದೇ ಪ್ರಧಾನ ಪಾತ್ರ. ಶಿಕಾರಿಗೆಂದು ಕೇರಳಕ್ಕೊದ ರೈ 'ಗನ್‌ಬೋಟ್' ಎಂದು ಅಲ್ಲಿಯವರೆಗೆ ಪರಿಚಿತರಾಗಿ ಕ್ಷಣದಲ್ಲಿ ಐದಾರು ಹಂದಿಗಳನ್ನು ಬೇಟೆಯಾಡಿ ಮಳೆಯಾಳಿ ಬೇಟೆಗಾರರಿಂದ 'ಕಿನನ್‌ಶಿಫ್' ಎಂಬ ಬಿರುದು ಪಡೆದರು. ಸರ್ಕಾರದ ಕಳಕಳಿಮೇರೆಗೆ ನರಭಕ್ಷಕ ಹುಲಿಯೊಂದನ್ನು ಬೇಟೆಯಾಡುತ್ತಾರೆ. ನರಭಕ್ಷಕ ಗಂಡು ಹುಲಿ ಹತವಾದರೆ ಹೆಣ್ಣು ಹುಲಿ ಮತ್ತು ಮರಿಗಳು ತಬ್ಬಲಿಯಾಗಿ ದೂರವಾಗುತ್ತವೆ. ತಬ್ಬಲಿ ಮರಿಗಳು ಬಂದಾಗ ಬೇಟೆಗೆ ಅನುಕೂಲ. ತಬ್ಬಲಿ ಮರಿಗಳನ್ನು ನಂಬಿಯಾರ್ ಸಾಕುತ್ತಾನೆ. ಹೀಗೆ ಬೇಟೆಯಿಂದ ಕಾಡುಗಳಲ್ಲಿ ಸಿಕ್ಕ ಪ್ರಾಣಿಗಳು ಹೊಟ್ಟೆಯ ಆಹಾರಕ್ಕಷ್ಟೆ ಅಲ್ಲ ಇತರೆ ಕೆಲಸಗಳಿಗೂ ಮೀಸಲಾಗಿರುತ್ತವೆ. ಈ ಕೃತಿಯಲ್ಲಿ ಮಲಯಾಳಿ, ತುಳು ಅನ್ಯಭಾಷೆಗಳ ಪ್ರಭಾವವಿದೆ. ಒಟ್ಟಾರೆ ತನ್ನ ಅನುಭವದ ಕನ್ನಡಿಯಲ್ಲಿ ಬಿಂಬವೆಂಬಂತೆ ಬೇಟೆಯ ಅನುಭವಗಳನ್ನು ರೈಯವರು ವಸ್ತುನಿಷ್ಠವಾಗಿ ಹೇಳಿರುವದು ಗಮನಾರ್ಹ.

೫. **ಬೇಟೆ ನೆನಪು** : ಬಿ.ಡಿ.ಸುಬ್ಬಯ್ಯ ಅವರ ಬೇಟೆಯ ಸಾಹಸ ಕಥೆಯನ್ನೊಳಗೊಂಡ ಕೃತಿ. ಕಾಕೆಮಾನಿ ಎಂಬುದು ಇವರ ಕಾವ್ಯನಾಮ. ಇವರು ಸಾಹಸಿಗರು ಸ್ವತಃ ಬೇಟೆಗಾರರಾಗಿದ್ದರಿಂದಲೇ ಆ ಅನುಭವಗಳ ಮೂಲಕ 'ಬೇಟೆ ನೆನಪು'ಕೃತಿ ರಚಿಸಿದ್ದಾರೆ. ಈ ಕೃತಿಯಲ್ಲಿ ಕೊಡಗಿನ ಪರಿಸರದಲ್ಲಿನ ಹುಲಿ, ಆನೆ, ಚಿರತೆ, ಕಾಡೆಮ್ಮೆ, ಕಾಡುಕೋಣಗಳನ್ನು ಬೇಟೆಯಾಡಿದ ಅನುಭವಗಳೊಂದಿಗೆ ಸುಮಾರು ೧೪ ಅಧ್ಯಾಯಗಳಿವೆ. ಇಲ್ಲಿ ಅಂಡಮಾನಿನಲ್ಲಿದ್ದ 'ಮಾನವ ಬೇಟೆ' ಯನ್ನು ಪರಿಚಯಿಸುತ್ತಾರೆ.

ಕಾಕೆಮಾನಿ ಅರಣ್ಯ ಅಧಿಕಾರಿಯಾಗಿ ಅಂಡಮಾನ್ ದ್ವೀಪಕ್ಕೆ ಹೋದಾಗ, ಅಲ್ಲಿ ಪ್ರಾಣಿ ಬೇಟೆಯೊಂದಿಗೆ

ಅನಿವಾರ್ಯವಾಗಿ ಮಾನವ ಬೇಟೆಯಲ್ಲೂ ತೊಡಗಬೇಕಾಗುವುದು. 'ಸಾಂಪೆನ್ಸ್'ಮತ್ತು 'ಜರುವಾ' ಎಂಬ ಎರಡು ಅನಾಗರಿಕ ಜನಾಂಗದ ಜನರಿದ್ದಾರೆ. ಜರುವಾ ಜನರು ಬಹಳ ಅಪಾಯಕಾರಿ. ತಮ್ಮನ್ನುಳಿದ ಇತರೆ ನಾಗರಿಕರಿಗೆ ಇಲ್ಲಿ ಉಳಿಗಾಲವಿಲ್ಲ. ಅವರನ್ನು ವಿಷಪೂರಿತ ಬಾಣದಿಂದ ಕೊಲ್ಲುತ್ತಾರೆ. ಕೆನ್ನಾಯಿಗಳ ಸಾಹಸದ ಮೂಲಕ ಸಾಮೂಹಿಕ ಬೇಟೆಯನ್ನು ಮಾಡುತ್ತಾರೆ. ಬೇಟೆಯಾಡುವ ರೀತಿಯನ್ನು ಲೇಖಕರು ಚಿತ್ರಿಸಿದ್ದಾರೆ. ಎರಡು ಹುಲಿಗಳ ಬೇಟೆ, ನಾನು ಹುಲಿಯ ಮದುವೆಯಾದೆ. ಇತ್ಯಾದಿ ಸಂಗತಿಗಳು ಇದರಲ್ಲಿವೆ.

೬. **ಅರಣ್ಯಾಧಿಕಾರಿಯ ದಿನಚರಿ :** ಕಾಕೆಮಾನಿಯವರ ಬೇಟೆ ಅನುಭವದ ಎರಡನೇ ಕೃತಿ. ಇವರ ಸ್ನೇಹಿತರ ಅನುಭವದ ಕಥೆಯಿದು. ಹಾಗಾಗಿ ಅವರ ದಿನಚರಿಯಿಂದ ಸಂಗ್ರಹಿಸಿ ಬರೆದಿದ್ದಾರೆ. ಕಾಕೆಮಾನಿಯವರು ಬ್ರಿಟಿಷರ ಆಡಳಿತದಲ್ಲಿ ಅರಣ್ಯಪಾಲಕರಾಗಿ ಗೊಂಡಾರಣ್ಯದಲ್ಲಿ ಜೀವಿಸಬೇಕಾಯಿತು. ಇದರಲ್ಲಿ ಹುಲಿ ಬೇಟೆಯಾಡುವ ವಿಧಾನ, ಕಾಡುಕುರುಬರಲ್ಲಿರುವ ಮಾಟ-ಮಂತ್ರಗಳು, ಕರಡಿಯ ವಿಕೃತ ಕಾಮ ಇತ್ಯಾದಿ ಅಪೂರ್ವ ವಿಚಾರಗಳನ್ನು ತಿಳಿಸಿದ್ದಾರೆ.

೭. **ಬೇಟೆಯ ಸುತ್ತಮುತ್ತ :** ಕೈಂತಜೆವಿಷ್ಣುಭಟ್ಟರು ಬರೆದ ಮೊದಲ ಬೇಟೆ ಕೃತಿ. ಇದರಲ್ಲಿ ಲೇಖಕ ತನ್ನ ಅನುಭವದ ವಿವರ, ಇತರರಿಂದ ಕೇಳಿ ತಿಳಿದ ಸ್ವಾರಸ್ಯಕರವಾದ ಸಂಗತಿ, ಪರಿಸರ ಹಾಗೂ ಜೀವ ಜಗತ್ತಿನ ನೈಜ ಚಿತ್ರಣವಿದೆ. ಬೇಟೆ ಹಾಗೂ ಅದಕ್ಕೆ ಸಂಬಂಧಿಸಿದ ಇತರ ವಿಷಯಗಳನ್ನು ಒಂದೆಡೆ ವಿಚಾರಶೀಲ- ಪರಿಶೀಲನೆಗೆ, ಆತ್ಮಕಥನದ ರೂಪದಲ್ಲಿ ಅಂಕಿ ಮಾಡುತ್ತಾರೆ.

ಹತ್ತು ಅಧ್ಯಾಯಗಳಿರುವ ಈ ಕೃತಿಯಲ್ಲಿ 'ಬೇಟೆ' ಕೇಂದ್ರಬಿಂದುವಾಗಿದ್ದು, ಇತರ ಸಂಗತಿಗಳನ್ನು ಅನುಭವದೊಂದಿಗೆ ಚರ್ಚಿಸಿದ್ದಾರೆ. ಇವರು ಬೇಟೆ ಮೋಜು, ಮನೋರಂಜನೆಗಲ್ಲದೆ ಬದುಕಿಗಾಗಿ ಬೇಟೆ ಎಂದು ನಿರೂಪಿಸಿದ್ದಾರೆ. ಆಹಾರದ ಹುಡುಕಾಟ, ಪರಿಸರದ ಒತ್ತಡ, ಮೃಗಯಾಸಕ್ತಿ ಬಗ್ಗೆ ವಿವರಿಸಿದ್ದಾರೆ. ಕೈಂತಜೆಯವರ ಸಮಕಾಲೀನರು ಬೇಟೆಗಾರರು. ಬಾಲ್ಯದಿಂದಲೇ ಬೇಟೆಯ ಹುಚ್ಚು, ತೋಟದಲ್ಲಿ ಮಂಗನ ಮೂಲಕ ಬೇಟೆ ಆರಂಭಿಸಿ ಕೈತಂಜೆಯವರು 'ಪರಿಸರದ ವನಸಿರಿ' ಸಸ್ಯ ಸಂಪತ್ತು, ಹಂದಿ ಬೇಟೆ, ಪ್ರಾಣವಧೆ, ನಿವಾರಣೋಪಾಯ, ಮದ್ದು ಗುಂಡುಗಳ ಕುರಿತು ಚರ್ಚಿಸಿದ್ದಾರೆ.

೮. **ಗಜಬೇಂಟೆಗಾರ :** ಶ್ರೀನಿವಾಸ ಕೊರಟಿ ಅವರ ಐತಿಹಾಸಿಕ ಕಾದಂಬರಿ. ಇದರಲ್ಲಿ ವಿಜಯನಗರ ಸಾಮ್ರಾಜ್ಯದ ವೈಭವ, ಫ್ರೌಡದೇವರಾಯನ ಜೀವನ, ಸಾಧನೆ-ಮತ್ತು ಅಂದಿನ ಜನ ಜೀವನದ ಚಿತ್ರಣವಿದೆ. ಪ್ರೌಢದೇವರಾಯನಿಗೆ ಬೇಟೆ ಎಂದರೆ ಅತ್ಯಾಸಕ್ತಿ. ಆನೆಬೇಟೆಯಲ್ಲಿ ಇವರು ನಿಸ್ಸೀಮರು. ಹೀಗಾಗಿ 'ಗಜಬೇಟೆಗಾರ'ನೆಂಬ ಬಿರುದಿನಿಂದ ಅವರನ್ನು ಕರೆಯಲಾಯಿತು. ಗಜಬೇಂಟೆಗಾರ, ಪ್ರೌಢಪ್ರತಾಪರುದ್ರದೇವರಾಯ ಮಹಾರಾಯ, ಅಪ್ರತಿಮ ಬಿರುದಂಕಗಜಬೇಂಟೆಗಾರ ದೇವೇಂದ್ರ ಹೀಗೆ ಹಲವಾರು ಬಿರುದುಗಳಿವೆ. ಬೇಟೆ ಅವನಿಗೆ ಮೋಜಿನಕ್ರಿಡೆ, ಕಾಲದವ್ಯಯ ಸವೆಸುವುದಾಗಿತ್ತು. ಫ್ರೌಢದೇವರಾಯನಿಗೆ ಆನೆಬೇಟೆಯೆಂದರೆ ತುಂಬಾ ಇಷ್ಟ. ಕಾಡು ಆನೆಗಳನ್ನು ಹಿಡಿದು ಪಳಗಿಸಿ ಸೈನ್ಯಕ್ಕೆ ಸೇರಿಸಿಕೊಳ್ಳುವ ಚಾಣಕ್ಷತನ ಮಾಡುತ್ತಿದ್ದನು. ಈತ ಆನೆಯ ಬೇಟೆ ಕೇವಲ ನನ್ನಂಥ ಪುರುಷ ಸಿಂಹಗಳಿಗೆ ಒಪ್ಪುವ ಏಕೈಕ ಕ್ರೀಡೆ ಎಂದಿರುವನು. 'ಗಜಭಾಷೆ' ಕುರಿತು ಲೇಖಕ ವಿವರಿಸಿರುವುದು ಮುಖ್ಯವಾಗಿದೆ.

೯. **ನೆನಪಿನ ಅಂಗಳ :** ಇದು ತೋವಿನಕೆರೆ ಸೀತಾರಾಯ ಜೋಯಿಸರ ಕೃತಿ. ಒಂದು ಅಧ್ಯಾಯದಲ್ಲಿ ಮಾತ್ರ ಬೇಟೆಯ ಪ್ರಸ್ತಾಪವಿದೆ. ಈ ಬೇಟೆ ಸಂದರ್ಭ ಮಾಜಿಪಟೇಲ ಗುಂಡಪ್ಪನಾಯಕನ ಬೇಟೆಯ ವಿವರಗಳು ಇಲ್ಲಿ

ಪ್ರಕಟವಾಗಿವೆ. ಆತನ ಅನುಭವಗಳನ್ನು ಲೇಖಕ ಒಂದೆಡೆ ಸೆರೆಹಿಡಿದಿದ್ದಾನೆ. ರಾಜ, ಇಂಗ್ಲೀಷ್ ಅಧಿಕಾರಿ, ಸಾಮಾನ್ಯ ವ್ಯಕ್ತಿಗಳು ಕುದುರೆ ಮೇಲೇರಿ ಬೇಟೆಯಾಡುವ ವಿಧಾನ, ಗುಂಡಪ್ಪ ಒಬ್ಬಂಟಿಯಾಗಿ ಗುಹೆಯೊಳಗಿನ ಚಿರತೆಯೊಡನೆ ಹೋರಾಡಿ ಅದನ್ನು ಜಯಿಸಿದ ಸನ್ನಿವೇಶ ಇತರೆ ವಿಷಯಗಳ ಉಲ್ಲೇಖವಿದೆ.

೧೦. ಕಡೆಯ ಚಿರತೆ :- ಶಶಿಧರ ವಿಶ್ವಾಮಿತ್ರರು ರಚಿಸಿದ ಮೃಗಯಾ ಸಾಹಿತ್ಯ ಕೃತಿಯಲ್ಲಿ 'ಕಡೆಯ ಚಿರತೆ'. ಈ ಲೇಖಕ ಬೇಟೆಗಾರನಲ್ಲವಾದರೂ ಬೇಟೆ ಬಗ್ಗೆ ಬರೆದಿರುವುದು ಸೋಜಿಗವೆನಿಸಿದೆ. ಇತರರ ಅನುಭವಗಳನ್ನಿಲ್ಲಿ ಚಿತ್ರಿಸಿದ್ದಾರೆ. ಬೇಟೆಗೆ ಒಳಗಾಗುವ ಚಿರತೆ ಕೊನೆಯ ಪ್ರಾಣಿ ಸಂತತಿ. ವನ್ಯಪ್ರಾಣಿಗಳನ್ನು ಸಂರಕ್ಷಿಸುವ ಸಂದರ್ಭದಲ್ಲಿ ಅಳಿದುಳಿದ ಚಿರತೆಯ ಬಗ್ಗೆ ಉಲ್ಲೇಖಿಸಿ, ಚಿರತೆ ಬೇಟೆ, ಚಿರತೆ ಆಹಾರಕ್ಕಾಗಿ ಕೈಗೆ ಎಟುಕಿದ ಪ್ರಾಣಿಗಳನ್ನು ಹಿಂಸಿಸುವ ಪ್ರವೃತ್ತಿ ಇದರಲ್ಲಿದೆ. ಈಡುಗಾರ, ಚಿರತೆಬೇಟೆ, ಪರಿಸರದ ಜನರ ಜೀವನವಿಧಾನದ ಬಗ್ಗೆ ತಿಳಿಸಿದ್ದಾರೆ.

೧೧. ಮಲೆನಾಡಿನ ಶಿಕಾರಿಯ ನೆನಪುಗಳು :- 'ಮಲೆನಾಡಿನ ಶಿಕಾರಿಯ ನೆನಪುಗಳು' ಎಂಬ ಕೃತಿಯಲ್ಲಿ ಕಡಿದಾಳ ಕೆ.ಎಸ್. ರಾಮಪ್ಪಗೌಡರು ಇದರಲ್ಲಿ ಆಧುನಿಕ ಬೇಟೆಸಾಹಿತ್ಯವನ್ನು ನಿರೂಪಿಸಿದ್ದಾರೆ. ಲೇಖಕ ತನ್ನ ಬಾಲ್ಯದ ನೆನಪುಗಳನ್ನು ಸ್ವಾತಂತ್ರ್ಯ ಪೂರ್ವ ಹಂತದಿಂದ ಇಂದಿನವರೆಗೆ ಹಂಚಿಕೊಂಡಿದ್ದಾರೆ. ಸ್ವತಃ ಲೇಖಕರೇ ಹುಲಿ, ಕಾಡುಬೆಕ್ಕು, ಕಾಡುಕೋಳಿಗಳನ್ನು ಮತ್ತು ಬೇಟೆಯ ಸಾಹಸದ ಮಜಲುಗಳನ್ನು ಅನುಭವಿಸಿದ್ದಾರೆ.

ರಾಮಪ್ಪಗೌಡರು ಮಲೆನಾಡಿನಲ್ಲಿ ಜನಿಸಿ, ಕೃಷಿಕರಾಗಿ ತುಂಗಾನದಿದಂಡೆಯ ಮೇಲೆ ತೀರ್ಥಹಳ್ಳಿ, ಕೊಪ್ಪ, ಹೊಸಕೇರಿ, ಕುತಿನಹಳ್ಳಿ, ಹಾಲುಮತ್ತೂರು ಮುಂತಾದ ಕಡೆ ಬೆಳೆಗೆ ಹಾನಿಯನ್ನುಂಟು ಮಾಡುವ ಪ್ರಾಣಿಗಳ ಬೇಟೆ ಮೊದಲಿನಿಂದಲೂ ಇಷ್ಟವಾದುದಾಗಿದೆ. ಶಿಕಾರಿ ಎಂದರೆ ಸಾಹಸ ಪ್ರದರ್ಶನದ ರಸನಿಮಿಷಗಳಿಂದ ಅಡಕವಾಗಿರುವ ಕಾಡುಪ್ರಾಣಿಗಳ ಬೇಟೆಯಾಗಿದೆ. ಇದರಲ್ಲಿ ಧೈರ್ಯ, ಭಯ,ಸಿಟ್ಟು, ಹಾಸ್ಯ, ಬುದ್ಧಿಕೌಶಲ್ಯಕ್ಕೆ ಅವಕಾಶವೀಯುವ ಪ್ರಸಂಗಗಳಲ್ಲದೆ, ಮಾಂಸದ ಔತಣವೂ ದೊರೆಯುವ ಅವಕಾಶವುಂಟು. ಶಿಕಾರಿಯು ಹಳ್ಳಿಗರ ಹವ್ಯಾಸವೂ ಹೌದು. ಅಂದಿನ ದಿನಗಳಲ್ಲಿ ಅವಿದ್ಯಾವಂತರೇ ಮಲೆನಾಡಿನಲ್ಲಿ ಶಿಕಾರಿಮಾಡುವ ಹವ್ಯಾಸದವರಾದ್ದರಿಂದ ಹಾಗೂ ಬಡವರೇ ಹೆಚ್ಚಾಗಿ ಇದ್ದುದರಿಂದ ಮಾಂಸದ ಆಸೆಗೆ ಆತುರಪಡುವವರೇ ಹೊರತು ಸಾಹಸಮಯವಾದ ಸನ್ನಿವೇಶಗಳನ್ನು ಸಂಗ್ರಹಿಸಲು ಯಾರೂ ಪ್ರಯತ್ನ ಮಾಡಲಿಲ್ಲ. ಇದು ಕಾಲಕಾಲಕ್ಕೆ ಬದಲಾಗಿರಬೇಕು ಎಂದು ಗೌಡರು ಮನಬಿಚ್ಚಿ ತನ್ನ ಅನುಭವದ ಸಂಗತಿಗಳನ್ನು ತಿಳಿಸಿದ್ದಾರೆ. ಅನುಬಂಧದಲ್ಲಿ ಬೇಟೆಯ ವಿಧಗಳು, ಬೇಟೆಯಲ್ಲಿ ಉಪಯೋಗಿಸಿದ ಕೋವಿಗಳು, ಹಳುಸೋಯುವುದು, ಬೇಟೆಯ ಇತರ ವಿಷಯಗಳು ಚರ್ಚಿತಗೊಂಡಿವೆ.

೧೨. ಶಿಕಾರಿಯ ಸೀಳುನೋಟ : ಪ್ರಭಾಕರ ಶಿಶಿಲ ಅವರು ಬದ್ದಡ್ಕ ಅಪ್ಪಯ್ಯಗೌಡರ ಸಾಹಸಕಥನವನ್ನು ರಚಿಸಿದ್ದಾರೆ. ಈ ಕೃತಿಯಲ್ಲಿ ೧೦ ಅಧ್ಯಾಯಗಳಿವೆ. ನಾನೂ ಬೇಟೆಗಾರನಾದೆ, ಸತ್ತಹುಲಿರಾಯನು, ಭೂತನುಡಿಯಿತು ಭವಿಷ್ಯ, ಮಾನಿಷಾದ, ಕತ್ತಲಲ್ಲಿ ಕಂಡ ಕಣ್ಣು, ಮನೆಗೆ ಬಂದ ಮಾರಿ, ಅನಪೇಕ್ಷಿತ ಬೇಟೆ, ಮುಖಾಮುಖಿ, ಪೂಮಲೆಯಲ್ಲಿ ಮಹಿಷಮರ್ದನ ಮತ್ತು ನೆನಪುಗಳ ಮೆರವಣಿಗೆ.

ದಕ್ಷಿಣಕನ್ನಡದ ಸುಳ್ಯ ಪರಿಸರವು ೨೦ನೇ ಶತಮಾನದ ಆದಿಭಾಗದಲ್ಲಿ ಕ್ರೂರಮೃಗಗಳಿಂದ ಕೂಡಿದ ಅರಣ್ಯವಾಗಿತ್ತು. ಇಲ್ಲಿನ ಜನಜೀವನವೇ ಕಷ್ಟಸಾಧ್ಯವಾಗಿತ್ತೆಂದು ಕಥಾನಕದಿಂದ ತಿಳಿದು ಬರುತ್ತದೆ. ಪ್ರಾಣಿಗಳ ಹಾವಳಿ ವಿಪರೀತವಾದಾಗ, ಅವುಗಳನ್ನು ಕೊಲ್ಲಲು ಸರ್ಕಾರ ಅನುಮತಿ ಕೊಡುತ್ತಿತ್ತು. ಹೀಗೆ ಅಪ್ಪಯ್ಯಗೌಡರು ನೂರಕ್ಕೂ

ಹೆಚ್ಚು ಹುಲಿ, ಇನ್ನೂರಕ್ಕೂ ಹೆಚ್ಚು ಕಾಡೆಮ್ಮೆ-ಕಾಡುಕೋಣ, ಅಪಾರ ಸಂಖ್ಯೆಯ ಜಿಂಕೆ, ಮೊಲಗಳನ್ನು ಬೇಟೆಯಾಡಿದ ಸಾಹಸ ಇದರಲ್ಲಿದೆ. ಅವರೇ ಹೇಳಿರುವಂತೆ 'ಪರಿಸರ' ನನ್ನನ್ನು ಬೇಟೆಗಾರನಾಗಿ ರೂಪಿಸಿತು ಎಂದಿದ್ದಾರೆ. ಹೊಲ ಹೂಳುವ ಎತ್ತುಗಳನ್ನು ಕೊಲ್ಲುವಾಗ ಹುಲಿಕಾಟವನ್ನು ತಾಳಲಾರದೆ ಕೊಲ್ಲಲಾಯಿತು. ಬೆಳೆದ ಬೆಳೆ ಉಳಿಸಿಕೊಳ್ಳಲಾಗದೆ ರೈತರ ಗೋಳಾಟ, ಬೇಟೆ ನಾಯಿಗಳ ಕಣ್ಮರೆ ಈ ಕಾರಣದಿಂದ ಅಪ್ಪಯ್ಯಗೌಡರು ಸಿಡಿದೆದ್ದರು. ಇವರೊಂದಿಗೆ ಕುಡೆಕಲ್ಲು ದೇವಯ್ಯಗೌಡರು ಆಗಿನ ಕಾಲದ ಪ್ರಖ್ಯಾತ ಬೇಟೆಗಾರರಲ್ಲಿ ಒಬ್ಬರಾಗಿದ್ದರು. ಅವರು ಇಂಗ್ಲೆಂಡ್‌ನಿಂದ ತಯಾರಾದ ಡಬ್ಬಲ್ ಬ್ಯಾರಲ್ ಕೇಪಿನ ಕೋವಿ ಮತ್ತು ತಂದೆಯ ಶಿಕಾರಿ ಪ್ರೌಢಿಮೆಗೆ ಮೆಚ್ಚಿ ಕೊಡಗಿನ ಕುಟ್ಟೆಟ್ಟ ಸುಬ್ಬಯ್ಯ ಕೊಟ್ಟದ್ದ ಕೋವಿ ಇವರಿಗೆ ದೊರಕಿತು.

ಇವರು ೧೨ನೇ ವಯಸ್ಸಿನಲ್ಲಿ ಬೇಟೆಗೆ ಪ್ರವೇಶಿಸಿದಾಗ ಜೊತೆಗೆ ಬೇಟೆನಾಯಿಗಳಿದ್ದವು. ಕಡವೆಯೊಂದರ ಬೇಟೆ ಆಯಿತು. 'ಹುಲಿಯನ್ನು ಬೇಟೆಯಾಡದಾತ ಪೂರ್ಣ ಪ್ರಮಾಣದ ಬೇಟೆಗಾರನಲ್ಲ' ಎಂಬ ವಾದವು ಗೌಡರಲ್ಲಿತ್ತು. ಹೇಗೇ ಆದರೂ ಹುಲಿಬೇಟೆ ಬಿಡಬಾರದೆಂದು ಮುನ್ನುಗ್ಗಿದ್ದರು. ಲೈಟು ಶಿಕಾರಿಯಲ್ಲಿ ಇವರಿಗೆ ಆಸಕ್ತಿಯಿರಲಿಲ್ಲ. ಬೇಟೆಯನ್ನು ಗೌಡರು ಸಾಹಸ ಎಂದು ಪರಿಗಣಿಸಿ, ಕ್ರೌರ್ಯದ ಬಗ್ಗೆ ಆನಂತರ ನೊಂದುಕೊಂಡರೂ ಫಲವೇನು? ಸ್ವಾತಂತ್ರ್ಯಪೂರ್ವದಲ್ಲಿ ಇವರು ರೈತರಾಗಿ, ಜೇನು ಬೆಳೆಗಾರರಾಗಿ, ಹುಚ್ಚು ನಾಯಿ ಕಡಿತಕ್ಕೆ ಔಷಧಿ ನೀಡಿ ಒಂದೇ -ಎರಡೇ ಇವರ ವೃತ್ತಿ-ಉಪವೃತ್ತಿಗಳು. ಇವುಗಳ ಮಧ್ಯೆಯೂ ಅವರು ಭಯಂಕರವಾದ ಬೇಟೆ ಜೀವನ ನಡೆಸುತ್ತಿದ್ದರು.

೧೩. ಕುವೆಂಪು ಸಾಹಿತ್ಯಲ್ಲಿ ಬೇಟೆ : 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ಮತ್ತು ಪ್ರಬಂಧ ಸಂಕಲನವಾದ 'ಮಲೆನಾಡಿನ ಚಿತ್ರಗಳು' ಎಂಬುದರಲ್ಲಿ ಬೇಟೆ ಚಿತ್ರಣವನ್ನು ಅಲ್ಲಲ್ಲಿ ಕಾಣಬಹುದು. ಕುವೆಂಪುರವರು 'ಕಾನೂರು ಹೆಗ್ಗಡತಿ' ಯಲ್ಲಿ ಬಲತ್ಕಾರವಾಗಿ ಎಂಬಂತೆನೂ ಬೇಟೆಯನ್ನು ಉಲ್ಲೇಖಿಸಿಲ್ಲ, ಅಲ್ಲಿ ಸಹಜವಾಗಿ ಬಂದಿದೆ. ಇಲ್ಲಿ ಬರುವ ಬೈಲುಕೆರೆಯಲ್ಲಿ ಚನ್ನಯ್ಯನ ಮೀನುಬೇಟೆ ಒಂದು ಸೊಗಸಾದ ವಾಸ್ತವಿಕ ಚಿತ್ರಣ. ಈ ಚನ್ನಯ್ಯ ಕೊವಿ ಹಿಡಿದು ಮರದ ಕೊಂಬೆಯೇರಿ ಎರಡು ಮೀನುಗಳನ್ನು ಹೊಡೆಯಬೇಕೆಂಬ ಸಾಹಸ ಅಮೋಘವೆನಿಸಿದೆ. ಕತ್ತಲಗಿರಿ ಕಾಡಿನಲ್ಲಿ ಒಂಟಿಗ ಹೋರಿ ಹಂದಿಯೊಂದನ್ನು ಬೇಟೆಯಾಡುವುದು, ಯಾವುದೋ ಒಂದು ಕೆಸರಿನ ಗುಂಡಿಯಲ್ಲಿ ಅಪಾಯಕಾರಿ ದೈತ್ಯ ಹೊರಳುತ್ತಿದ್ದುದನ್ನು ವರ್ಣಿಸಿದ್ದಾರೆ. ಈ ಹಂದಿಯ ಪ್ರತಿಯೊಂದು ಭಾಗಗಳನ್ನು ಚಿತ್ರಿಸಿದ್ದಾರೆ. ಪುಟ್ಟಣ್ಣ ಎಂಬುವ ಭೂಮಿ ಹುಣ್ಣಿಮೆಯಂದು ಕಣೆ ಹಂದಿಯನ್ನು ಗುಹೆಯ ದ್ವಾರದಲ್ಲಿ ಕಚ ಪಚ ಕೊಚ್ಚಿ ಕೊಂದ ಚಿತ್ರಣ ಹಳ್ಳಿಗಾಡಿನ ಬೇಟೆ ಸಾಹಸವನ್ನು ತಿಳಿಸುತ್ತದೆ. ಬೇಸಗೆಯಲ್ಲಿ ನಡುಗಾಡಿನ ಸರಲಿನಲ್ಲಿ ಬೈರಸಿದ್ದರು ನಡೆಸುವ ಏಡಿಶಿಕಾರಿ, ಮಲೆಯ ಇಳಿಜಾರು ಕಣಿವೆಗಳಲ್ಲಿ ನೀರಿಗಿಳಿದು ಕಲ್ಲು ಮುಗಿಚಿ ಬೈರಸಿದ್ದರು ಮುಖಕ್ಕೆ ಕಣ್ಣಿಗೆ ಆದ ಕೆಸರು, ಕೋವಿ ಎತ್ತಿಕಟ್ಟ ಹುಲಿ ಹೊಡೆಯುವ ಪ್ರಾಣಿಗಳನ್ನು ಅವುಗಳ ಹೆಜ್ಜೆಯ ಆಧಾರದಲ್ಲಿ ಬೇಟೆಯಾಡುವ ತಂತ್ರ ಇಲ್ಲಿದೆ. ಮೀನಿಗಾಗಿ ಬೈರ ಎಂಬುವನು ಹೊಂಡ ತೋಣಕುವುದು, ಜಾನಪದ ಬೇಟೆಯ ಮಾದರಿಯದು. ಇವನು ಬಂದಾಗ ಕಪ್ಪೆಗಳು ಬರ ಬರನೆ ಸರಿಯುವುದು ಕೆಲವು ಮೀನು ಹಿಡಿಯುವ ವಿಧಾನ ಮಲೆನಾಡಿನ ಚಿತ್ರಣ ಇಲ್ಲಿದೆ. ಕೃಷ್ಣಪ್ಪನ ಹುಲಿಬೇಟೆ, ಪುಟ್ಟಣ್ಣ ಕಣೆ ಹಂದಿ ಬೇಟೆಗಳಲ್ಲಿ ಪ್ರಕೃತಿಯೊಂದಿಗಿನ ಶೌರ್ಯ ಸಾಹಸ ವಿರೋಚಿತ ಅನುಭವ, ಐತ ಚಿಕ್ಕವನಿದ್ದಾಗ ಹಿರಿಯ ಅಣ್ಣಂದಿರೊಂದಿಗೆ ಹುಲಿಬೇಟೆಗೆ ಹೋದಾಗ ಆದ ಅನುಭವ ಎದ್ದು ಕಾಣುತ್ತದೆ. ಬೇಟೆಗೆಂದು ಹೋದ ಸೋಮು ಅಪಾಯಕಾರಿ ಪ್ರಾಣಿಗೆ ಹೆದರಿ ಮರ ಏರಲಾಗದೆ ವಿಲವಿಲನೆ ಒದ್ದಾಡುವ ಪರಿಸ್ಥಿತಿಯಿದೆ.

ಕುವೆಂಪು ಅವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬೇಟೆಯ ರಸಕ್ಷಣಗಳು, ವ್ಯಾಪಕಪ್ರಮಾಣದಲ್ಲಿ ಪ್ರಸ್ತಾಪಿಸಿದ್ದಾರೆ. ದೊಡ್ಡ ದೊಡ್ಡ ಕಾಡುಗಳಲ್ಲಿ ಬೇಟೆಯಾಡುವಾಗ ಮಾಡಬೇಕಾದ ಸಿದ್ಧತೆ ; ಕಾಡಿನಲ್ಲಿ ಕೋವಿ-ಸೋವತರ ಸ್ಥಾನ, ಪ್ರಾಣಿಗಳು ಸುಳಿದಾಡುವ ಕಿಂಡಿಗಳಿವೆ. ಹಂದಿಬಲೆ, ಮಿಗದಬಲೆ, ಮೊಲದಬಲೆಗಳ ಜೋಡಣೆಯಲ್ಲಿನ ತಂತ್ರ ಅದ್ಭುತವಾಗಿ ಚಿತ್ರಿತವಾಗಿವೆ. 'ಕಪ್ಪೆಗೋಲೂ' ಎಂಬುದು ಮಲೆನಾಡಿನ ಜಲಚರಗಳನ್ನು ಹಿಡಿಯಲು ಬಳಸುವ ವಿಧಾನವಾಗಿತ್ತು.

ಇಲ್ಲಿ ಕಿರಿಯರ ಬೇಟೆ ಆಸಕ್ತಿ ಗಮನಿಸಲಾಗಿದೆ. ನಾಯಿಯ ಪಾತ್ರ ಬಹಳ ಮುಖ್ಯವಾದದ್ದು. ಮೊದಲೇ ತಿಳಿಸಿದಂತೆ ಮಲೆನಾಡಿನಲ್ಲಿ ಬೇಟೆಯ ನಾಯಿಗೆ ಮಹತ್ವದ ಸ್ಥಾನವಿದೆ. ಮಲೆನಾಡಿನ ಬೇಟೆ ಎಂದರೆ ನಾಯಿಯ ಮೂಲಕವೇ ಬೇಟೆ ಆರಂಭವಾಗುವುದು. ಅನಂತರ ಕೋವಿಗೆ ೨ ನೇ ಸ್ಥಾನವಿದೆ. ಕಾನೂರು ಹೆಗ್ಗಡತಿಯಲ್ಲಿ ಬರುವ ಪುಟ್ಟನನಾಯಿಯ ಟೈಗರ್, ಇದೇ ರೀತಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಹುಲಿಯ ಎಂಬುದು ಅತ್ಯುತ್ತಮ ಬೇಟೆನಾಯಿ. ಈ ನಾಯಿಗಳ ಸಾಹಸ, ಬಲ್ಲುಗಳ ಪಾತ್ರ, ಸೋವಿ ಎಬ್ಬಿಸುವುದು ಇತ್ಯಾದಿ ಸಂಗತಿಗಳು ಕಂಡುಬರುತ್ತವೆ.

ಕುವೆಂಪು ಅವರ 'ಮಲೆನಾಡಿನ ಚಿತ್ರಗಳು' ಪ್ರಬಂಧ ಸಂಕಲನದಲ್ಲಿ ಹಾಸ್ಯದ ಚಟಾಕಿ, 'ಕಾಡಿನಲ್ಲಿ ಕಳೆದ ಒಂದಿರುಳು' ಬಂದಾನಾ ಹುಲಿರಾಯ, ಪುಟ್ಟಾಚಾರಿಯ ಕಾಡುಕೋಳಿ, ಜೇನು ಬೇಟೆ ಮೊದಲಾದ ಅಧ್ಯಾಯಗಳಲ್ಲಿ ಬೇಟೆ ಕುರಿತ ವಿವರಗಳಿವೆ. ಸಾರಿಕೆಬೇಟೆ, ಮರಸುಬೇಟೆಯಲ್ಲಿ ಕೋವಿ-ತೋಟಾಗಳ ಬಳಕೆ ಸಣ್ಣ ಪುಟ್ಟ ವಸ್ತುಗಳ ಮಾಹಿತಿಯಿದೆ. ಕುವೆಂಪು ಬರೆದ ಕಥನ ಕಾವ್ಯ 'ನಾಗಿ'ಯಲ್ಲಿ ಬೇಟೆ ಚಿತ್ರಣವಿದೆ. ಅವರ 'ನೆನಪಿನ ದೋಣಿಯಲ್ಲಿ'ಎಂಬ ಆತ್ಮಕಥೆಯಲ್ಲಿಯು ಬೇಟೆ ಅನುಭವವನ್ನು ಹಂಚಿಕೊಂಡಿದ್ದಾರೆ.

೧೪. **ಊರೊಸಗೆ :** ಇದು ಕೆ.ಕುಶಾಲಪ್ಪಗೌಡರ ಅನುಭವ ಕಥನಕೃತಿಯಾಗಿದೆ. ಇದರಲ್ಲಿ ಬಾಲ್ಯದ ನೆನಪಿನ ಚಿತ್ರಗಳೊಂದಿಗೆ ಬೇಟೆಯ ಪ್ರಸಂಗಗಳಿವೆ. ಪಯಸ್ವಿನಿ ಹೊಳೆಯಲ್ಲಿ ಲೇಖಕ ಮೀನುಬೇಟೆಯನ್ನು ತಮ್ಮ ಮನೆ ಹತ್ತಿರದ ಪ್ರಯೋಗಿಸಿದ್ದು, ಗೆಳೆಯರೊಂದಿಗೆ ಕಲ್ಲು ಸರಕುಗಳಲ್ಲಿ ಮೀನು ಹುಡುಕುವ ವಿವಿಧ ರೀತಿಯ ವಿಧಾನಗಳಿವೆ. ಬೇಟೆಯನ್ನು ಸಾಂಕೇತಿಕವಾಗಿ ಕಣ್ಣಪ್ಪನಿಗೆ ಹೋಲಿಸಲಾಗಿದೆ. ಸ್ವಾರಸ್ಯಕರವಾದ ಮುಖ, ಮೀನುಬೇಟೆಯ ತಂತ್ರ-ಅಪಾಯದ ಬಗ್ಗೆ ವಿಪುಲ ಮಾಹಿತಿ ಊರೊಸಗೆಯಿಂದ ಸಿಗುವುದು. ವಿಷವಾಗುವ ಪದಾರ್ಥಗಳನ್ನು ಮೀನುಗಳಿಗೆ ನೀರಿನಲ್ಲಿ ಬೆರೆಸುವುದು ಇತ್ಯಾದಿ ವಿಷಯಗಳು ತಿಳಿದು ಬರುತ್ತವೆ.

೧೫. **ಮಲೆನಾಡಿನ ಶಿಕಾರಿ :** ಡಾ.ಎಂ.ಪಿ. ಮಂಜಪ್ಪಶೆಟ್ಟಿ ಅವರು ಬರೆದ ಕೃತಿಯಾಗಿದೆ. ಬೇಟೆ ಕನ್ನಡಿಗರ ವ್ಯಾಪಕ ಅನುಭವದ ಒಂದು ಭಾಗ. ಇವರು ಬೇಟೆ ಬೇರೆ, ಬೇಟೆ ಸಾಹಿತ್ಯ ಬೇರೆ ಎಂಬುದನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಮುನ್ನುಡಿಯಲ್ಲಿ ಡಾ.ಹಾ.ಮಾ. ನಾಯಕರು 'ಮನುಷ್ಯನ ಸ್ವಾರ್ಥಗಳಿಂದಾಗಿ ಈಗ ಕಾಡೆಲ್ಲ ನಾಡಾಗುತ್ತಿದೆ. ಇದರಿಂದ ಪ್ರಾಣಿ, ಪಕ್ಷಿಗಳಿಗೆ ನಿಲ್ಲಲು ನೆಲೆಯಿಲ್ಲದಂತಾಗಿದೆ. ಈಗ ಕಾಡಿನ ಸಂಪತ್ತು ಕಡಿಮೆಯಾಗುತ್ತಿರುವುದರ ಜೊತೆಗೇ, ಪ್ರಾಣಿಪಕ್ಷಿಗಳ ಕುಲವೂ ನಶಿಸುತ್ತದೆ. ಪ್ರತಿಷ್ಠೆಗಾಗಿ, ವಿನೋದಕ್ಕಾಗಿ, ಆಹಾರಕ್ಕಾಗಿ ನಾನಾ ಬಗೆಯ ಸ್ವಾರ್ಥಗಳಿಗಾಗಿ ಕಾಡುಪ್ರಾಣಿಗಳ ಕಗ್ಗೊಲೆ ನಡೆಯುತ್ತಿದೆ ಮತ್ತು ಶಿಕಾರಿ ನನ್ನ ದೃಷ್ಟಿಯಲ್ಲಿ ಯಾವಾಗಲೂ ಅಮಾನವೀಯವಾದದ್ದು' ಎಂದು ಹೇಳಿದ್ದಾರೆ. ಬೇಟೆನಾಯಿಯ ಬೊಗಳುವಿಕೆ, ಒದರಿಕೆಯವರು ಬೊಬ್ಬೆ, ಕಿರುಚಾಟ, ಬೇಟೆಗಾರರನ್ನು ಬೆನ್ನಟ್ಟ

ಬರುತ್ತವೆ. ಶಿಕಾರಿಯ ತಂತ್ರ ಈ ಕೃತಿಯ ಕೇಂದ್ರ ಬಿಂದು. ಏಡಿ, ಮೀನು, ಪಕ್ಷಿ, ಪ್ರಾಣಿ ಮತ್ತು ಜೇನು ಇವುಗಳ ಶಿಕಾರಿಯ ವಿವಿಧ ಬಗೆಗಳನ್ನು ಕೊಟ್ಟಿದ್ದಾರೆ. ಮಲೆನಾಡು ಒಂದು ಭೌಗೋಳಿಕ ವಿಭಾಗವಾಗಿದ್ದು, ಜೀವನ ವಿಧಾನ, ಸಂಪ್ರದಾಯ,ಭಾಷೆ, ಆಚಾರ-ವಿಚಾರ, ಉಡುಗೆ-ತೊಡುಗೆ ಮೊದಲಾದ ವಿಚಾರಗಳಲ್ಲಿ ವ್ಯತ್ಯಾಸವಿದೆ. ಚಿಕ್ಕಮಗಳೂರು, ಹಾಸನ, ಕೊಡಗು, ದಕ್ಷಿಣಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮಲೆನಾಡಿನ ಶಿಕಾರಿ ಪದ್ಧತಿಗಳ ವಿವರಣೆಯಿದೆ. ಮೀನು ಶಿಕಾರಿ ಕತ್ತಿಯಿಂದ ಕಡಿಯುವುದು ತೀರ್ಥಹಳ್ಳಿ ನಗರ ಭಾಗದಲ್ಲಿದೆ.

ತನ್ನ ಮನೆಯ ಪರಿಸರದಲ್ಲಿ ಬೇಟೆಯನಾಡುವುದನ್ನು ಕಲಿತು, ನಾನಾ ಬಗೆಯ ಪ್ರಾಣಿ, ಪಕ್ಷಿ, ಮೊಲ, (ರಾಗಿ)ಹುಲಿ, ಕಾಟಿ ಮತ್ತು ಆನೆಯಂಥ ಬಲಿಷ್ಟ ಕಾಡುಮೃಗಗಳನ್ನುಳಿದು, ಏಡಿ, ಮೀನು ಹಕ್ಕಿಗಳಿಂದಾರಂಭಿಸಿ ಹಂದಿಯವರೆಗೆ ಬೇಟೆಯಾಡಿದ್ದಾರೆ. ಏಡಿಶಿಕಾರಿ, ಮೀನುಶಿಕಾರಿ, ಪಕ್ಷಿಶಿಕಾರಿ, ಪ್ರಾಣಿಶಿಕಾರಿ ಮತ್ತು ಜೇನು ಶಿಕಾರಿಗಳೆಂದು ಐದು ಅಧ್ಯಾಯಗಳಿವೆ. ಇದರಲ್ಲಿ ಹಂದಿಶಿಕಾರಿ ಬಗ್ಗೆ ಹೆಚ್ಚಿನ ವಿವರವಿದೆ. ಆನೆ,ಹುಲಿ,ಕರಡಿಗಳ ಉಪದ್ರವ, ಶಿಕಾರಿ ಸಾಧನಗಳು, ಕೋವಿಗಳು, ಶಿಕಾರಿಪದಕೋಶ ಇತರ ಸಂಗತಿಗಳಿವೆ. ಶಿಕಾರಿ ಅಧ್ಯಾಯದಲ್ಲಿ ಗೋರಿ ಒಡ್ಡುವುದು, ಹತ್ತು ಮೀನು ಹಿಡಿಯುವುದು, ಮೀನುಗುಂಡಿ, ಉಗ್ಗುವುದು, ದೊಣೆಗಳಲ್ಲಿ ಹಿಡಿಯುವುದು, ಕತ್ತಿಯಿಂದ ಹಿಡಿಯುವುದು, ಹೊಳೆ ಮತ್ತು ಹಳ್ಳದ ಶಿಕಾರಿ, ಕಲ್ಲೇಡಿ ಶಿಕಾರಿ, ಗೆದ್ದಲು ಕದಡುವುದು, ಕಲ್ಲು ಮಗುಚುವುದು, ಹೊಲಸು ತೋರಿಸುವುದು. ಮೀನುಶಿಕಾರಿಯಲ್ಲಿ ಗದ್ದೆ ಮೀನು ಶಿಕಾರಿ, ಗದ್ದೆ ನೀರೊಡೆಯುವುದು, ಕಡಹಾಕುವುದು, ಕಡ್ಲುಕಟ್ಟುವುದು, ಬಲೆಒಡ್ಡುವುದು, ಗುಂಡಿಉಗ್ಗುವುದು, ತೋಟ ಹಾಕುವುದು, ಡೈನ್‌ಮೇಟ್ ಹಾಕುವುದು, ಕತ್ತಿಯಿಂದ ಕಡಿಯುವುದು, ಗಾಳ ಹಾಕುವುದು, ಕಟ್ಟುಗಾಳ ಹಾಕುವುದು, ಫಿಷರ್ ಗಾಳ ಹಾಕುವುದು, ಏವು ಕಟ್ಟುವುದು ಅಥವಾ ಒಡ್ಡು ಕಟ್ಟುವುದು, ಪಕ್ಷಿ ಶಿಕಾರಿ ಉಳ್ಳ ಒಡ್ಡುವುದು, ಹಾರುವುಳ್ಳ ಅಥವಾ ಸೇಣುವುಳ್ಳ ಒಡ್ಡುವುದು, ಕಣಿ ಇಡುವುದು, ಮೇಣ ಹಾಕುವುದು, ತಟ್ಟೆ ಬಲ್ಲಿನಿಂದ ಹೊಡೆಯುವುದು (ಕಾಡುಕೋಳಿ, ಮೊಲ, ಅಳಿಲು, ಕಾಡುಬೆಕ್ಕು) ಚಾಟಿ ಬಲ್ಲಿನಿಂದ ಹೊಡೆಯುವುದು, ಕವಣೆಯಿಂದ ಹೊಡೆಯುವುದು, ಕತ್ತರಿ ಒಡ್ಡುವುದು, ಗೂಡುಗಳನ್ನು ಒಡೆಯುವುದು, ಸುಡಕ್ಕಿ ಬೇಟೆ, ಬಲೆ ಹಾಕುವುದು, ಕೋವಿಯಿಂದ ಹೊಡೆಯುವುದು, ಕಾಡುಕೋಳಿ ಶಿಕಾರಿ, ಸಾರಿಕೆ ಶಿಕಾರಿ, ಕುಳಿತ ಕೋಳಿ, ಮರಸು ಕೋಳಿ ಹೊಡೆಯುವುದು, ಉಳ್ಳ ಒಡ್ಡುವುದು, ತಟ್ಟೆ ಇಡಿಚಲು ಒಡ್ಡುವುದು, ಹಾರಿಸಿ ಒಡೆಯುವುದು ಇತ್ಯಾದಿ ಸಂಗತಿಗಳಿವೆ. ಪ್ರಾಣಿಬೇಟೆಯಲ್ಲಿ ಜಿಂಕೆ, ಸಾರಂಗ, ಕಾಡುಕುರಿ, ಕಡಮುಂಗಿಸಿ, ಕಬ್ಬೆಕ್ಕು, ಹಾರುಬೆಕ್ಕು, ಪುಣುಗಿ ಬೆಕ್ಕು, ಬರ್ಕನ ಬೆಕ್ಕು, ಸೇಂದಿ ಬೆಕ್ಕು, ಕಣೆ ಹಂದಿ, ಮುಳ್ಳು ಹಂದಿ, ಚಿಪ್ಪಿಗನ ಹಂದಿ, ಕೆಂದಳಿಲು, ಬೆಟ್ಟಳಿಲು, ಬೆಟ್ಟಣ್ಣಸ ಉಡ, ಹುಲಿಬೆಕ್ಕು, ಕೋತಿ, ಹೆಗ್ಗಣ, ಇಲಿ, ಗುಳ್ಳೆ ನರಿ, ಕಂಕನರಿ, ನರಿ, ಬೊಳ್ಳು ಗುಳ್ಳೆನರಿ, ಮುಳ್ಳಿಲಿ, ಬಾವಲಿ, ಮೊಲ, ಕೂರ್ಪಂದಿ, ಆಮೆ, ಸಿಂಹ, ಹುಲಿ, ಕುರ್ಕ, ಚಿರತೆ, ತೋಳ, ಪಿಳ್ಳೆನಾಯಿ, ಆಳುಗೂಸ, ಮುಸಿಯ, ಕರಡಿ, ಕಾಡೆಮ್ಮೆ, ಕಾಡುಕೋಣ, ಕಾಟ, ದೊಡ್ಡು, ಕಾಡುಹಂದಿ, ಹುಲಿಬೆಕ್ಕು, ಹುಚ್ಚುಗುಳ್ಳೇನರಿ, ಕಿರುಬ, ನೀರುನಾಯಿ, ಮಂಡಲದ ಹಾವು, ಎರಡು ತಲೆ ಹಾವು, ಬೆಳ್ಳಿನಾಗರ, ಹಳದಿನಾಗರ, ತಾಳಿಹಾವು, ಹಸುರು ನಾಗರ, ಕೊಳಕು ಮಂಡಲ, ಹೆಬ್ಬಾವು, ಬುಲಾರಿಬುಡ್ಡ, ಹಾವುರಾಣಿ, ಬೆಳ್ಳಿ ಕಟ್ಟುವ ಹಾವು, ಕಾಳಿಂಗಸರ್ಪ, ನಾಗರಹಾವು, ಓತಿಕ್ಯಾತ, ಗೊಸುಂಬೆ, ಕಪ್ಪಡುಸುಂಟ, ಬಾಲಚೇಳು, ಕೊಂಡಿಚೇಳು, ಸಾವಿರಕಾಲು ಚೇಳು, ಮೊಸಳೆ, ಇತ್ಯಾದಿ ಪ್ರಾಣಿ-ಪಕ್ಷಿಗಳ ವಿವರವಿದೆ.

ಮರಸುಬೇಟೆ ಜನಪ್ರಿಯವಾದದ್ದು. ಮರೆಮಾಡಿಕೊಂಡು ಅಡಗಿ ಕುಳಿತು, ಕಾಡುಪ್ರಾಣಿಗಳನ್ನು ಕೊಲ್ಲುವುದಕ್ಕೆ ಮರಸುಬೇಟೆ ಎಂದು ಹೆಸರು. ಗುದ್ದಿಗೆ ಹೊಗೆ ಹಾಕುವುದು, ಸಾರಿಕೆ ಶಿಕಾರಿ, ಬಲೆ ಒಡ್ಡುವುದು, ಪೊಟರೆ

ಒಡೆಯುವುದು, ಜಿಂಕೆ ಬೇಟೆಯ ಒಂದು ಅಮಾನವೀಯ ವಿಧಾನ, ಇಲಿಶಿಕಾರಿ, ಒಡುಗು ಹೂಡುವುದು, ಬಲಕ್ಕೆ ನೀರನ್ನು ತುಂಬುವುದು, ಬಲವನ್ನು ಅಗೆಯುವುದು, ಇಲಿ ಕತ್ತರಿ ಒಡ್ಡುವುದು, ಇಲಿ ಬೋನು ಒಡ್ಡುವುದು, ಹಂದಿಶಿಕಾರಿ, ಕಂದಕ ಕಡಿಯುವುದು, ಸಿಡಿಮದ್ದು ಇಡುವುದು ತಂತಿಉಳ್ಳ ಒಡ್ಡುವುದು, ನಾಯಿಗಳಿಂದ ಹಿಡಿಸುವುದು, ಇಡಿಚಲು ಒಡ್ಡುವುದು ಬೆಳದಿಂಗಳ ಬೇಟೆ, ಅಟ್ಟಸಿಕೊಂಡು ಹೋಗಿ ಕೊಲ್ಲುವುದು, ಕೋವಿ ಕಟ್ಟುವುದು, ಮಂಚಿಗೆ ಕಾಯುವುದು, ಹುಲಿ ಮತ್ತು ಹಂದಿ ಕಾಳಗದಲ್ಲಿ, ವಿದ್ಯುತ್ ಸ್ಪರ್ಶಮಾಡಿಸುವುದು, ಹುಲಿ ಬೇಟೆ, ಕೋವಿ ಕಟ್ಟುವುದು, ಅಟ್ಟಳಿಗೆ ಮೇಲೆ ಕುಳಿತು ಹೊಡೆಯುವುದು, ಒದರಿ ಹೊಡೆಯುವುದು, ವಿಷಹಾಕುವುದು, ಹುಲಿಬೋನು ಒಡ್ಡುವುದು, ಕದ್ದಿಂಗಳ ಬೇಟೆ, ದೀಹವನ್ನು ಒಡ್ಡುವುದು, ಹಕ್ಕಿಪಿಕ್ಕಿಗಳ ಹಕ್ಕಿ ಶಿಕಾರಿ, ಜೇನು ಶಿಕಾರಿ, ಹೆಜ್ಜೇನು ಶಿಕಾರಿ, ತುಡುವೆ ಜೇನು ಶಿಕಾರಿ, ಕೋಲು ಜೇನು ಶಿಕಾರಿ, ಮಿಸರಿ ಜೇನು ಶಿಕಾರಿ ಮುಂತಾದ ಬೇಟೆ ವಿವರಗಳನ್ನು ಚಿತ್ರಿಸಿದ್ದಾರೆ.

೧೬. ಕೆ.ಪಿ.ಪೂರ್ಣಚಂದ್ರತೇಜಸ್ವಿ : ತೇಜಸ್ವಿ ಕನ್ನಡದ ಕಥೆ, ಕಾದಂಬರಿ, ವಿಚಾರ ಲೇಖನಗಳ ಮೂಲಕ ಪರಿಸರ ಕುರಿತು ಬರೆದಿರುವ ಕೃತಿಗಳಲ್ಲಿ ಬೇಟೆಯನ್ನು ವ್ಯಾಪಕವಾಗಿ ತಿಳಿಸಿದ್ದಾರೆ. ಪ್ರಮುಖವಾಗಿ ಬೇಟೆ,ಮೀನುಗಾರಿಕೆ, ಚಿತ್ರಕಲೆ, ಪರಿಸರದ ಏರು-ಪೇರು, ಪ್ರಾಣಿ-ಪಕ್ಷಿ-ಕೀಟಜಗತ್ತು ಇತರ ಮಾನವನ ಹೋರಾಟದ ಅಂಶಗಳನ್ನು ತಮ್ಮ ಕೃತಿಗಳಲ್ಲಿ ತಿಳಿಸಿರುವರು.

೧೬.೧. ತಿರುಗೂರಿನ ಗಯ್ಯಾಳಿಗಳು (೧೯೯೧) : ಇದು ಕಥಾಸಂಕಲನ. 'ಮಾಯಾಮೃಗ' ಎನ್ನುವ ಅಧ್ಯಾಯದಲ್ಲಿ ಕೃಷ್ಣೇಗೌಡರ ಆನೆ ಮೂಡಿಗೆರೆ ಬಲೆಗೆ ಬಿದ್ದು ಮಿಸುಕಾಡುವ ಮೃಗದ ಹೋಲಿಕೆ ನೀಡಿದ್ದಾರೆ. ಇದರಲ್ಲಿ ನಾಯಿಯ ಪಾತ್ರ, ಮಾನವನ ಆಳವಾದ ಭಯದ ಪ್ರವೃತ್ತಿ, ಬೇಟೆಯ ವಿವಿಧ ಸಂಗತಿಗಳನ್ನು ತಿಳಿಸಿದ್ದಾರೆ. ಪ್ರಾಣಿ, ಪಕ್ಷಿ, ಕೀಟ ಜಗತ್ತು ಬದುಕಲು ನಡೆಸುವ ಹೋರಾಟ ವಿಸ್ಮಯಗಳನ್ನು ಚಿತ್ರಿಸುವ ಸೃಜತೆಯನ್ನು ತೇಜಸ್ವಿ ಮಾಡಿರುವರು.

೧೬.೨. ಜುಗಾರಿಕ್ರಾಸ್ : ತೇಜಸ್ವಿಯವರು ಇತ್ತೀಚೆಗೆ ಬರೆದ ಕೃತಿ. ಮಲೆನಾಡಿನ ಕಾಡಿನೊಳಗೆ ೫೦ಕೆ.ಜಿ.ಏಲಕ್ಕಿ ಮೂಟೆ ಇಟ್ಟುಕೊಂಡು ಯುವ ದಂಪತಿಗಳಾದ ಸುರೇಶ ಮತ್ತು ಗೌರಿಯರು ತಮಗೆ ತಿಳಿಯದಂತೆ ಕಳ್ಳ ಸಾಗಣೆದಾರರ ರಹಸ್ಯ ಜಾಲದಲ್ಲಿ ಸಿಲುಕಿ ಬರುವ ಚಿತ್ರಣವಿದೆ. ಇಲ್ಲಿಂದ ಬೇಟೆಯಾಡುವ ಪಿತೂರಿಗಳು ಹಾಗೂ ತಪ್ಪಿಸಿಕೊಳ್ಳುವ ಗೌರಿ-ಸುರೇಶರ ಆತಂತ ಕಾದಂಬರಿಯ ಕೊನೆಯ ತನಕ ಓದುಗನಲ್ಲಿ ಕುತೂಹಲ ಮೂಡಿಸುತ್ತದೆ.

೧೬.೩. ಕರ್ವಾಲೋ : ಇದು ಪ್ರಾಚೀನ ಪ್ರಾಣಿಯನ್ನು ಸಂಶೋಧಿಸುವ ಕಥೆಯನ್ನೊಳಗೊಂಡ ಕಾದಂಬರಿ. ಇದರಲ್ಲಿ ಮೂಡಿಗೆರೆಯ ಜೇನು ಸೊಸೈಟಿ, ಮಂದಣ್ಣ, ಬಿರ್ಯಾನಿ ಕರಿಯಪ್ಪ, ಹಾವುಗೊಲ್ಲರ ಎಂಗ್ಟ, ಬೇಟೆಯ ನಿಪುಣತೆಯ ಕಿವಿ (ನಾಯಿ) ಪ್ರಮುಖ ವಿಷಯ-ಪಾತ್ರಗಳಾಗಿವೆ. ಕರ್ವಾಲೋ ಎಂಬ ಅಧಿಕಾರಿ 'ಓತಿಕ್ಯಾತ'ವನ್ನು ಹುಡುಕುವ, ಬೇಟೆಯ ಶೋಧನೆಯನ್ನು ಕಾದಂಬರಿಯಲ್ಲಿ ತಿಳಿಸಿದ್ದಾರೆ.

೧೬.೪. ಕಾಡಿನ ಕಥೆಗಳು : ಕೆನತ್ ಆಂಡರ್‌ಸನ್ ಅವರು ಬರೆದ ಅನುಭವ ಕೃತಿಗಳನ್ನು ಇವರು ಕನ್ನಡಿಸಿದ್ದಾರೆ. ೧) ಕಾಡಿನ ಕಥೆಗಳು - ಭಾಗ-೧ (೧೯೯೩), ೨) ಕಾಡಿನ ಕಥೆಗಳು ಭಾಗ-೨ (೧೯೯೩), ೩) ಕಾಡಿನ ಕಥೆಗಳು ಭಾಗ-೩ (೧೯೯೪) ಮತ್ತು ರುದ್ರಪ್ರಯಾಗದ ನರಭಕ್ಷಕ (೧೯೯೪)-ಇವು ಇವರ ಅನುವಾದ ಕೃತಿಗಳು.

ಮೂರು ಕೃತಿಗಳಲ್ಲಿ ಬೆಳ್ಳಂದೂರಿನ ನರಭಕ್ಷಕ, ಪೆದ್ದಚೆರುವಿನ ರಾಕ್ಷಸ, ದಿಗುವ ಮೆಟ್ಟದ ಕೊಲೆಗಡುಕ ಎಂಬ ೩ ಭಾಗಗಳನ್ನು ಪೂರ್ಣಚಂದ್ರ ತೇಜಸ್ವಿಯವರು ವಿಂಗಡಿಸಿದ್ದಾರೆ. ಇವುಗಳಲ್ಲಿ ಮಾನವನಿಗೆ ಅವಶ್ಯಕವಾದ ಬೇಟೆ

ಸಾಹಸದ ಪ್ರಸಂಗಗಳಿವೆ. ಬೇಟೆಯ ವಿಕಾಸ, ಮನರಂಜನೆ ಕಂಡುಬರುತ್ತದೆ. ಕಾಡಿನಕತೆಗಳ ಸಾಹಸದ ಸಂದರ್ಭವು ಸಹ ಸಮಕಾಲಿನದೇ ಆಗಿದೆ. ಜನಸಂಖ್ಯೆ ದ್ವಿಗುಣಗೊಂಡಂತೆ ವಸತಿ, ಆಹಾರದ ಸಮಸ್ಯೆ ಉಲ್ಬಣಗೊಳ್ಳುತ್ತದೆ. ಆಗ ಬೇಟೆ ಆಡುವುದು, ಕ್ರೂರಮೃಗಗಳು ಕಾಡಿನಿಂದ ನಾಡಿಗೆ ಧಾವಿಸುವುದು ಸ್ವಾಭಾವಿಕವಾದದು.

ಕಾಡಿನಕಥೆಗಳು ಭಾಗ-೧, ಬೆಳ್ಳಂದೂರಿನ ನರಭಕ್ಷಕ ೧೯೯೭ರಲ್ಲಿ ಮರುಮುದ್ರಣ ಕಂಡಿದೆ. ಇದು ಕೆನೆತ್ ಆಂಡರ್‌ಸನ್ ಕಥೆಗಳ ಸಂಗ್ರಹದ ರೂಪಾಂತರವಾಗಿದೆ. ೩ ಭಾಗಗಳಿದ್ದು : ಅವುಗಳಲ್ಲಿ ಉಪಭಾಗಗಳನ್ನಾಗಿ ಮಾಡಿಕೊಂಡಿದ್ದಾರೆ. ಬೆಳ್ಳಂದೂರಿನ ನರಭಕ್ಷಕ, ಪಾತಾಳದಿಂದೆದ್ದ ಪಿಶಾಚಿ, ನರಭಕ್ಷಕನ ನಿರೀಕ್ಷೆಯಲ್ಲಿ, ಕತ್ತಲಲ್ಲಿ ಕೇಳಿದ ಚೀತ್ಕಾರ, ಹೆಣಕ್ಕೆ ಜೀವ ಬಂತೇ ಪ್ರಮುಖವಾಗಿವೆ.

ಷೇರ್‌ಖಾನ್ II ವಿಭಾಗದಲ್ಲಿ ಗುರಪ್ಪನ ಹಣೆಬರಹ, ದಾರಿಯಲ್ಲಿ ಅದೃಶ್ಯ ವೈರಿ, ರಕ್ತದ ಜಾಡಿನಲ್ಲಿ III, ವೈನಾಡಿನ ನರಭಕ್ಷಕ ಕಥೆಯಿದೆ. ಧೀರ ಯೋಧನ ಸಾಹಸ, ಮೃತ ದೇಹದ ಸಮೀಪದಲ್ಲಿ, ತಿಮ್ಮಪ್ಪಯ್ಯನ ಯುದ್ಧ ನೃತ್ಯವಿದ್ದು, ಅಧ್ಯಾಯ-೧ರಲ್ಲಿ ಶಿವಮೊಗ್ಗ ಪರಿಸರದ ಕಾಡಿನ ಭಯಾನಕ ಹುಲಿಗಳ ಪರಿಚಯವಿದೆ. ಬೇಟೆ ಕುರಿತಂತೆ ಮಂತ್ರವಾದಿ, ಶಿಕಾರಿದಾರರ ಕಾಡಿನ ಬದುಕು, ಹುಲಿಯ ಜೀವನದ ಕಥೆ ಇದೆ. ಜಾನ್ಸನ್ ಮತ್ತು ಆತನ ಆಳು ಕಾಡಿಗೆ ಹೋದಾಗ ಹುಲಿಯ ಹೆಜ್ಜೆಗಳು ಸಿಗಲಿಲ್ಲ. ಮಂತ್ರವಾದಿ ಬೇಟೆಗೆ ಪ್ರೋತ್ಸಾಹಿಸುವ ಹೇಳಿಕೆ ಹೀಗಿದೆ : 'ದನವನ್ನು ಕೊಂದ ಹುಲಿ ದನದ ಶರೀರದ ತಂಟೆಗೇ ಹೋಗಿರಲಿಲ್ಲ. ಆದರೆ ದನ ಕಾಯುವವನ ಶರೀರದ ಮುಕ್ಕಾಲು ಭಾಗವನ್ನು ತಿಂದು ಮುಗಿಸಿತ್ತು'. ಶಿವಮೊಗ್ಗದ ಹತ್ತಿರದ ತ್ಯಾಗರ್ಥಿಯಲ್ಲಿ ನಡೆದ ಬೇಟೆ ಪ್ರಸಂಗವಿದೆ.

ಬ್ರಿಟಿಷ್ ಕಲೆಕ್ಟರ್ ತನ್ನ ಮನೆಗೆ ಜಂಗಲ್ ಎಂದು ಹೆಸರಿಟ್ಟ. ಅವನ ಕಾಡಿನ ಹೆಸರು ಬೆಟ್ಟ ಮಂಗಲಂ ಎಸ್ಟೇಟ್ ಎಂದು. ಇಲ್ಲಿ ಜಿಂಕೆ, ಕಾಡುಕೋಣ ಇತರ ಪ್ರಾಣಿಗಳು ಕಡಿಮೆಯಾಗಿದ್ದವು. ಗುರಪ್ಪನ ಹಣೆ ಬರೆಹದಲ್ಲಿ ಗುರಪ್ಪನ ಮೇಲೆ ಹುಲಿ ಜಗಿದಿದ್ದು, ಅರಣ್ಯಾಧಿಕಾರಿ, ಪೊಲೀಸ್, ಅಯ್ಯೂರಿನ ದಿಕ್ಕಿನ ಕಡೆ ನಡೆದ ಸಂಗತಿಗಳಿವೆ. ಶಿವನಪಳ್ಳಿ ಅರಣ್ಯ ಇಲಾಖೆಯ ಗಾರ್ಡು ಮೇಲಾಧಿಕಾರಿಗೆ ಅಯ್ಯೂರಿನ ಮದುವಣಿಗ ಗುರಪ್ಪನಿಗಾದ ಗತಿಯನ್ನು ತಿಳಿಸಿದ. ಅರಣ್ಯಾಧಿಕಾರಿ ಹುಲಿಯನ್ನು ಶಿಕ್ಷಿಸುವುದು ಗಮನಾರ್ಹ.

ಶಿವನಪಳ್ಳಿ ಕಾಡಿನ ವಾಸಿಗಳಾದ ಸೋಲಿಗರಾಗಲಿ, ಜೇನುಕುರುಬರಾಗಲಿ, ಪೂಜಾರಿಗಳಾಗಲೀ ಇರಲಿಲ್ಲ. ಷೇರ್‌ಖಾನ್ ಎಂಬ ಕಾಡಿನಕಳ್ಳ ಮರಕಡಿದು ಸಾಗಿಸುವುದು, ಪ್ರಾಣಿಗಳನ್ನು ಅಕ್ರಮವಾಗಿ ಹೊಡೆಯುವುದು, ಜೊತೆಗೆ ಕೆಲವು ಸಣ್ಣ ಪುಟ್ಟ ಡಕಾಯಿತಿಗಳಿಗೂ ಕಾರಣಕರ್ತನೆಂದು ಅನುಮಾನಿಸಲ್ಪಟ್ಟಿದ್ದ. ವೈನಾಡಿನ ನರಭಕ್ಷಕದಲ್ಲಿ ಕಾಕನಕೋಟೆಯ ಆನೆಗಳ ಪರಿಚಯ, ತಿಮ್ಮಯ್ಯನ ಯುದ್ಧ ನೃತ್ಯದಲ್ಲಿ ಚಿರತೆ-ನಾಯಿಗಳ ಪ್ರಸ್ತಾಪವಿದೆ.

೧೬.೫. ಕಾಡಿನಕಥೆಗಳು ಭಾಗ-೨ : ತೇಜಸ್ವಿಯವರ ೨ನೇ ಅನುವಾದ ಕೃತಿ. ಇದರ ೩ ವಿಭಾಗಗಳಲ್ಲಿ ಇತರ ಉಪ ವಿಭಾಗಗಳಿವೆ : ೧) ಪೆದ್ದಚೆರುವಿನ ರಾಕ್ಷಸದಲ್ಲಿ ನರಬಲಿಯ ಸರಮಾಲೆ, ಇಂಗುತಿಂದ ಮಂಗನಾದ ಹುಲಿ, ತಲೆಹರಟೆ ಕಲ್ಲ, ಆಹುತಿಯಾದಅಪ್ಪೂ ಮತ್ತು ಅಡಿವಪ್ಪ, ೨) ತಾಳವಾಡಿಯ ಮೂಕ ರಾಕ್ಷಸದಲ್ಲಿ ಕೊಳ್ಳುವವನನ್ನು ಕೊಂದವರು ಯಾರು, ನರಭಕ್ಷಕನೇ ಬಸಿಲ್ಗುದುರೆಯೇ : ಅತ್ತ ನರಭಕ್ಷಕ! ಇತ್ತ ಕಾಡಾನೆ, ನಟನೆಗೆ ಮೋಸ ಹೋದ ಹುಲಿ ಇತ್ಯಾದಿ ಸಂಗತಿಗಳಿವೆ. ೩) ೩ನೇ ಅಧ್ಯಾಯದಲ್ಲಿ ಲಕ್ಕವಳ್ಳಿಯ ಹೆಬ್ಬುಲಿ ಕಥೆಯನ್ನು ತಿಳಿಸಿದ್ದಾರೆ.

ಪೆದ್ದಚೆರುವಿನ ರಾಕ್ಷಸ ಕಥೆ ಆರಂಭವಾಗುವುದು ವಿಜಯವಾಡ - ಗುಂತಕಲ್ಲು ರೈಲು ಮಾರ್ಗದಲ್ಲಿ. ನಿಬಿಡ ಅರಣ್ಯದಲ್ಲಿ ಹುಲಿ, ಜಿಂಕೆ, ಕಾಡುಹಂದಿಗಳನ್ನು ಶಿಕಾರಿ ಮಾಡಲು ಅಸಮರ್ಥತೆಯನ್ನು ತೋಡಿಕೊಂಡಿದ್ದಾನೆ. ಶ್ರೀಶೈಲ ಸ್ಥಳವು ಕಾಡುಪ್ರಾಣಿಗಳ ಸ್ವರ್ಗವಾಗಿತ್ತು. ಕಾಡಿನಲ್ಲಿ ಪ್ರಾಣಿಗಳ ಪರಿಚಯ, ಬೇಟೆ, ಭರ್ಚಿ, ಬಿಲ್ಲು-ಬಾಣ ಹಿಡಿದು ಶಿಕಾರಿಗೆ ಹೋಗುವ ದೃಶ್ಯ, ಜೇನು ಕೀಳುವ ಕ್ರಮ ಮುಖ್ಯವಾಗಿವೆ. ಬ್ರಿಟಿಷರ ಅಧಿಕಾರಿ ಅರಣ್ಯದಲ್ಲಿ ಹೋದರೆ ಚಂಚುಗಳಿಗೆ ಗಾಬರಿಯಾಗುತ್ತಿತ್ತು. ಲಕ್ಕವಳ್ಳಿ ಹೆಬ್ಬುಲಿ ಅಧ್ಯಾಯದಲ್ಲಿ ಶಿವಮೊಗ್ಗ-ಚಿಕ್ಕಮಗಳೂರು ಜಿಲ್ಲೆಗಳ ಗಡಿಭಾಗದ ಅರಣ್ಯದಲ್ಲಿ ಹುಲಿಗಳ ಪರಿಚಯಿದೆ (ತರೀಕೆರೆ). ಕಮ್ಮಣ್ಣುಗುಂಡಿಯ ಹೆಬ್ಬುಲಿಯ ಕತೆ (ಉಂಮ್ಮಿಬೈಲ್ ಅರಣ್ಯದ ಹುಲಿ) ತರೀಕೆರೆ-ಲಕ್ಕವಳ್ಳಿ ರಸ್ತೆಯ ಕಾಡಿನಲ್ಲಿ ಸೇರಿಕೊಂಡು ದನಗಳ ಮೇಯಿಸುವ ಲಕ್ಕವಳ್ಳಿಯಲ್ಲಿ ನರಭಕ್ಷಕ ಹುಲಿ ಕಾವಲುಗಾರರನ್ನು ಕೊಂದ ವಿಷಯಗಳಿವೆ.

೧೬.೬. ಕಾಡಿನ ಕಥೆಗಳು-೩ : ತೇಜಸ್ವಿಯವರು ಅನುವಾದಿಸಿದ ೩ನೇ ಕೃತಿ. ಇದರಲ್ಲಿ ಅಲೀಮನ ನಾಯಿಯ ಕಥೆ: ಗುಂತಕಲ್ಲಿನ ರೈಲ್ವೆ ಜಂಕ್ಷನ್ ಮಾರ್ಗ ನಂದ್ಯಾಲ್-ಬಸವಪುರ, ಚೆಲಮಗಳೂರು-ಕಣಿವೆ ಹತ್ತಿರ ದಿಗುವ ಮೆಟ್ಟ ರೈಲ್ವೆ ನಿಲ್ದಾಣದಿಂದ ಕಥೆ ಆರಂಭ. ರಾತ್ರಿ ಟಾರ್ಚಿನ ಶಿಕಾರಿ, ಕಾಳ್ಗಿಚ್ಚಿನ ಪರಿಣಾಮ, ಚಿರತೆ ಇತ್ಯಾದಿ ಸಂಗತಿಗಳಿವೆ. ಆಂಡರ್‌ಸನ್ ಹೇಳಿರುವಂತೆ 'ಅನೇಕರು ನನಗೆ ಕೇಳುತ್ತಾರೆ, ಯಾಕೆ ನಾನು ಇಂಡಿಯಾ ದೇಶ ಬಿಟ್ಟು ಆಸ್ಟ್ರೇಲಿಯಾ ಅಥವಾ ಕೆನಡಾ ಅಥವಾ ಇಂಗ್ಲೆಂಡಿಗೆ ಹೋಗಬಾರದು ಎಂದು - ನಾನು ಉತ್ತರಿಸಲು ಯತ್ನಿಸಿದ್ದೇನೆ. ಆದರೆ ಇದುವರೆಗೂ ಸಮಂಜಸ ಉತ್ತರ ಕೊಡಲಾಗಿಲ್ಲ. ಈ ಯೋಜನೆ ಆ ದಿಗುವಮೆಟ್ಟಡವಿಯ ಆರಾಮ ಕುರ್ಚಿಯಲ್ಲಿ ಕುಳಿತಿದ್ದಾಗ ಮತ್ತೆ ನನ್ನ ತಲೆಯೊಳಗೆ ಬಂತು. ಕೆನಡಾದಲ್ಲೇ ಆಗಲಿ ಆಸ್ಟ್ರೇಲಿಯಾದಲ್ಲೇ ಆಗಲಿ ಇಂಗ್ಲೆಂಡಿನಲ್ಲೇ ಆಗಲಿ ಇಂಥ ಸನ್ನಿವೇಶ ಇದೆಯೇ? ಬೆಂಗಳೂರಿನ ತಣ್ಣಗಿನ ಹವೆಯಿಂದ ಕೆಲವೇ ಗಂಟೆಗಳ ರೈಲು ಪ್ರಯಾಣದ ನಂತರ ಪರ್ವತಮಯವಾದ ಸೆಖೆಯ ಊರೊಂದಕ್ಕೆ ಬರಲು ಸಾಧ್ಯವೆ? ಎಂದು ಹೇಳಿದ ಇತ್ಯಾದಿ ಸಂಗತಿಗಳಿವೆ.

ಕಾಡು ಸಂಗೀತಮಯವಾಗಿರಲು ನಿಶಾಚರ ಪ್ರಾಣಿಗಳು ಕಾರಣ (ಗೂಬೆ). ಚೆಂಚೂ ಜನರ ಬದುಕು, ಇತರ ಆದಿವಾಸಿಗಳ ಚಿತ್ರಣ ವಿಚಿತ್ರವಾಗಿದೆ. ಅರಣ್ಯೋತ್ಪನ್ನ, ಜನಜೀವನ ಪ್ರತಿಬಿಂಬವಾಗಿದೆ. ಇದು ಯಾವುದೋ ಈಗ ತಾನೆ ತಾರುಣ್ಯಕ್ಕೆ ಕಾಲಿಟ್ಟ ಹುಲಿ ಇರಬಹುದು, ತಾಯಿಂದ ಬೇಟೆಯ ವಿಧಾನಗಳಲ್ಲಿ ಸರಿಯಾದ ಶಿಕ್ಷಣ ಪಡೆಯುವ ಮೊದಲೆ ತಾಯಿಯನ್ನು ಕಳೆದುಕೊಂಡಿದ್ದಿರಬಹುದು ಅಥವಾ ಯಾರೋ ಬೇಟೆಗಾರರ ಗುಂಡಿಗೆ ಸಿಕ್ಕು ಗಾಯವಾಗಿ ಬೇರೇನನ್ನು ಶಿಕಾರಿ ಮಾಡಲು ಅಸಮರ್ಥವಾಗಿರಬಹುದು ಎಂದಿದ್ದಾರೆ.

೧೭. ಯಾರಬೇಟೆ ಮತ್ತು ಇತರ ಪ್ರಸಂಗಗಳು : ಬಿ.ಆರ್. ಜೋಯಪ್ಪ ಅವರ ಬೇಟೆ ಬಗ್ಗೆ ಸುದೀರ್ಘ ವಿವರಣೆ ಕುರಿತ ಕೃತಿಯಾಗಿದೆ. ಬೇಟೆಯನ್ನು ಕುರಿತಂತೆ ದಕ್ಷಿಣ ಕರ್ನಾಟಕದಲ್ಲಿಯೇ ಅತೀ ಹೆಚ್ಚು ಕೃತಿಗಳು ಪ್ರಕಟವಾಗಿವೆ. ಹೋಲಿಸಿಕೊಂಡರೆ, ಉತ್ತರ ಕರ್ನಾಟಕದಲ್ಲಿ ಕಡಿಮೆ ಎನ್ನಬಹುದು. ಕೃತಿಯ ಮುನ್ನುಡಿಯಲ್ಲಿ ಡಾ.ಪ್ರಭುಶಂಕರರು 'ಬೇಟೆ ಘಟನೆಗಳಲ್ಲಿ ರೋಮಾಂಚನ, ರೌದ್ರ, ಕರುಣ, ಅದ್ಭುತ, ಹಾಸ್ಯ, ಪ್ರಧಾನವಾದ ರಸಗಳ ಬಗ್ಗೆ ಹೇಳಿದ್ದಾರೆ. ಕುವೆಂಪು ಅವರ 'ಕಾನೂರು ಹೆಗ್ಗಡಿತಿಯಲ್ಲಿ' ಬೇಟೆ ಪರಿಚಯವಿರುವುದನ್ನು ತಿಳಿಸಿದ್ದಾರೆ. ಜೀಮ್‌ಕಾರ್ಬೆಟ್, ಕೆದಂಬಾಡಿ ಜತ್ತಪ್ಪ ರೈ ಮತ್ತು ಕಾಡಿನ ಪರಿಚಯ, ಮರಗಿಡಗಳ, ಹಕ್ಕಿ ಪ್ರಾಣಿಗಳಾದ ಕಾಡುಹಂದಿ, ಆನೆ, ಮುಂತಾದ ಪ್ರಾಣಿಗಳ ಪರಿಚಯವಿದೆ. ಕಡವೆ ಬೇಟೆಗಾರರು, ವಸ್ತುನಿಷ್ಠ ಘಟನೆಗಳ ನಿರೂಪಣೆ-ಪ್ರಾಣಿಗಳಲ್ಲೆಲ್ಲ ಅತ್ಯಂತ ಕ್ರೂರಿಯಾದ ಪ್ರಾಣಿ ಮನುಷ್ಯ. ಬೇಟೆಯ ಅನುಭವದ ಕಣಜ ತುಂಬಿದೆ ಎಂದು ಅವರು ಹೇಳುತ್ತಾರೆ.

ಬೇಟೆಯಾಡುವುದು ಪ್ರಾಣಿಯ ಸಹಜ ಗುಣ. ಗರ್ಭವಾದ, ಮರಿಹಾಕಿದ ಮಲಗಿದ ಪ್ರಾಣಿ ಆಗಲಿ ಬೇಟೆಗಾರ ಬೇಟೆ ಸುಲಭವಾಗಿ ಸಿಕ್ಕಿತಲ್ಲಾ ಎಂದು ಖುಷಿಯಿಂದ ಕೊಲ್ಲುತ್ತಾನೆ. ಗೇಣುಹೊಟ್ಟೆಗೆ ಅನನ್ಯ ಸಂಕುಲ ಅಡಗಿ ಹೋಗಿದೆ. ಕೆಂಜೆರಿ, ಉಡ, ಚಿಪ್ಪುಹಂದಿ ಇಂತಹ ಪ್ರಾಣಿಗಳು ಉಳಿದಿಲ್ಲ. ಬೇಟೆ ಒಂದು ಸಾಹಸ ರಂಜನೆಯಾಗಿದೆ.

ಇದರಲ್ಲಿ ೧೪ ಅಧ್ಯಾಯಗಳಿವೆ. ಕೂಡುಬೇಟೆ, ಕುಕ್ಕಾ, ಯಾರಬೇಟೆ? ಹಾಲುಹರಿದಿತ್ತು, ಮಗು ಹಸಿದಿತ್ತು, ರಾತ್ರಿ ಬೇಟೆಯ ಶೂರ, ತೊರೆಯಲ್ಲಿ ಮೊಲದ ಬೇಟೆ, ಮರುಕದ ಕರುಳು, ತಲೆ ಕೆಳಗಾದ ಕೋವಿ, ನಾಯಿ-ಮನುಷ್ಯರ ನಡುವೆ, ಹಕ್ಕಿ ಗಂಡಿ, ನೋವು, ಹುಲಿಮೀಸೆ, ಕೆಂಚನೂ ಮತ್ತು ಸೆಳೆತ ಎಂಬ ಅಧ್ಯಾಯಗಳಲ್ಲಿ ಸಮಗ್ರವಾಗಿ ಬೇಟೆಯನ್ನು ವಿಶ್ಲೇಷಿಸಿದ್ದಾರೆ. ಕೂಡು ಬೇಟೆ : ಮಲೆನಾಡಿನ ಹಬ್ಬದ, ವಿರಾಮದ ಮೋಜಿನ ಆಟವೆಂದು ಲೇಖಕರು ಹೇಳಿದ್ದಾರೆ. ಬೇಟೆಗಾರನಲ್ಲದೆ, ನಾಯಿ ಸಹ ಹಕ್ಕಿಕೋಳಿ ಮುಂತಾದವುಗಳನ್ನು ಬೇಟೆಯಾಡುವುದು ತಿಳಿದುಬರುತ್ತದೆ. ಕೋವಿಗಳ ಮೂಲಕ ಬೇಟೆಯಾಡುವುದು ಪ್ರಧಾನವಾಗಿ ಕಂಡುಬರುತ್ತದೆ. ಇವರ ಬೇಟೆಗೆ ಕೊಡಗು ಜಿಲ್ಲೆಯೇ ವ್ಯಾಪ್ತಿಯಾಗಿದೆ. ಹೀಗಾಗಿ ಸಮಗ್ರ ಕರ್ನಾಟಕವನ್ನು ನೋಡಿಲ್ಲ. ಹಂದಿಯನ್ನು ನಾಯಿ ಜಗ್ಗಾಡುವುದು, ಆ ಕಾಡಿನಲ್ಲಿ ಜಿಂಕೆ, ಕಡಿವೆಗಳು ಕಡಿಮೆ, ಹಂದಿ, ಕಾಡುಕುರಿ, ಮುಳ್ಳು ಹಂದಿಗಳಿರುವ ಕಾಡು ಜಾಸ್ತಿ. ಹಂದಿಬೇಟೆಯಲ್ಲಿ ಹಂದಿ ವ್ಯಕ್ತಿಯನ್ನು ತಿರುಗಿ ಕೋರೆಯಿಂದ ತಿವಿಯಿತು. ಗಾಯಗಳಾಗಿ, ಕೈಲ್ ಎಂಬ ಕೊಡಗಿನ ಹಬ್ಬದಲ್ಲಿ ಕಾಡುಮಾಂಸ ಸೇವನೆ ಹಂದಿಮಾಂಸ, ಕಡುಬು,ಬಟ್ಟಲಿಟ್ಟು, ಕಳ್ಳು ಬೇಕೆ ಬೇಕು. ಹಬ್ಬದ ಪೂರ್ವಸಿದ್ಧತೆಯಲ್ಲಿ ಕೂಡು ಬೇಟೆಯಾಡುತ್ತಾರೆ. ಪಾಲಿಲ್ಲದೆ ಸುಟ್ಟು ತಿನ್ನುವುದು ಪ್ರಚಲಿತದಲ್ಲಿದೆ. ಕಾಡು ಕುಂಗಿ ಹೊಡೆದ ನಂತರ, ಕೂಡು ಬೇಟೆಯನ್ನು ಕೋರ್ಟು ಕಚೇರಿಗಳಿಂದ ಕೈಬಿಡಲಾಯಿತು.

ಕುಕ್ಕಾ ಅಧ್ಯಾಯದಲ್ಲಿ ನಾಯಿ, ಕಪಿ, ಇಲಿ, ಬಸವನಹುಳು, ಅಡಿಕೆ ಹುಳು ಬಗ್ಗೆ ತಿಳಿಸಲಾಗಿದೆ. ಹಂದಿಯ ಬೇಟೆ ಸಮಗ್ರವಾಗಿ ಬಂದಿದೆ. ಮುಂಗಾರಿನಲ್ಲಿ ಬೇಟೆ ಒಳ್ಳೆಯದೆಂಬ ನಂಬಿಕೆಯಿದೆ. ರಾತ್ರಿ ಟಾರ್ಚ್ ಹಿಡಿದು ಬೇಟೆಯಾಡುವುದು ರೋಮಾಂಚನಕಾರಿಯಾದುದು. ಯಾರ ಬೇಟೆ : ದಟ್ಟ ಕಾಡು, ಮರಗಳೊಂದಿಗೆ ಬೇಟೆ ಅನುಭವ ತಿಳಿಸಿದ್ದಾರೆ. ಹಂದಿಯ ಬೇಟೆ ವ್ಯಾಪಕವಾಗಿದೆ. ಕೋಣದಂಥ ಹಂದಿ, ಕೊಡಗಿನ ಬೇಟೆ ವಿಧಾನಗಳು, ಬೇಟೆಗಾರರಾದ ಮಾಚಯ್ಯ, ಸಣ್ಣಯ್ಯ ಕಂಡುಬರುತ್ತಾರೆ. ಬೇಟೆ ಸಂದರ್ಭ, ವಿಧಾನ, ಪರಿಕರ ಇತ್ಯಾದಿ ವಿಷಯಗಳನ್ನು ಸಮಗ್ರವಾಗಿ ನಿರೂಪಿಸಿದ್ದಾರೆ.

೧೮. **ಇತರೆ :** ವಾಲ್ಮೀಕಿ ರಾಮಾಯಣ, ವ್ಯಾಸರ ಮಹಾಭಾರತ ಕಥಾವಸ್ತುವನ್ನು ಇಂದಿನವರೆಗೂ ಬೇಟೆಯ ಕೃತಿಗಳಲ್ಲಿ ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ. ಪ್ರಾಚೀನ, ಮಧ್ಯಕಾಲ ಮತ್ತು ಆಧುನಿಕ ಕನ್ನಡಸಾಹಿತ್ಯ ಕ್ಷೇತ್ರದಲ್ಲಿ ಈ ಕುರಿತಂತೆ ಮಾಹಿತಿ ಲಭ್ಯವಾಗಿದೆ. ಈ ಶತಮಾನದ ಮಧ್ಯಭಾಗದಲ್ಲಿ ಕುವೆಂಪು ಅವರ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು,ಮಲೆನಾಡಿನ ಚಿತ್ರಗಳು, ನೆನಪಿನ ದೋಣಿಯಲ್ಲಿ, ಪೂರ್ಣಚಂದ್ರ ತೇಜಸ್ವಿ ಅವರ ಕಥೆ, ಕಾದಂಬರಿಗಳಲ್ಲಿ ಮಲೆನಾಡಿನ ಬೇಟೆಯ ಪ್ರಸಂಗಗಳು ನಿರೂಪಿತವಾಗಿವೆ. ಜ.ವೆಂಕಟಯ್ಯನವರ ಕಾದಂಬರಿಗಳಲ್ಲಿ ನೀಲಗಿರಿ ಭಾಗದ ಸೋಲಿಗರು ಮಾಡುವ ಶಿಕಾರಿಯ ಪ್ರಸ್ತಾಪ, ಬೆನಕನಹಳ್ಳಿ ಜಿ.ನಾಯಕ್ ಅವರ ಮೇಲು ಶಿಕಾರಿಗಳು ಕೃತಿಯಲ್ಲಿ ಹಕ್ಕಿ ಶಿಕಾರಿ ಬಗ್ಗೆ, ಡಾ.ಅಂಬಳಿಕೆ ಹಿರಿಯಣ್ಣನ ಮಲೆನಾಡಿನ ಒಕ್ಕಲಿಗರ ಸಂಪ್ರದಾಯಗಳಲ್ಲಿ ಬೇಟೆಯ ವಿವರಗಳನ್ನು ಪತ್ತೆ ಹಚ್ಚಿದ್ದಾರೆ. ಸಿ.ಎಚ್ ಬಸಪ್ಪನವರ್ ರಚಿಸಿರುವ ಹುಲಿಸಾಮ್ರಾಜ್ಯ ಕೃತಿಯಲ್ಲಿ ಹತ್ತು ಅಧ್ಯಾಯಗಳಿವೆ (ಬಂದಾನ ಹುಲಿರಾಯ). ಇಲ್ಲಿ ಹುಲಿಗಳ ಪರಿಚಯ, ಶರೀರ ರಚನೆ, ಗುಣಗಳು, ವಾಸಸ್ಥಾನ, ಆಹಾರ, ಬೇಟೆ,

ಸಂತತಿ, ಅಭಿವೃದ್ಧಿ, ಇತರ ಸಂಗತಿಗಳನ್ನು ಬಹು ವಿಶಾಲವಾಗಿ ಚರ್ಚಿಸಿದ್ದಾರೆ. ಪ್ರತಿಯೊಂದು ಪುಟವು ಬೇಟೆಯ ಸಂದರ್ಭವನ್ನು, ಪ್ರಾಣಿಗಳ ಜನ ಜೀವನವನ್ನು ಹೊಂದಿದೆ. ಹೀಗಾಗಿ ಹುಲಿ ಮತ್ತು ಇತರ ಪ್ರಾಣಿಗಳ ಬೇಟೆ,ಮಾನವನು ಆಡುವ ಹುಲಿಯ ಬೇಟೆ ಇತರ ವಿಷಯಗಳನ್ನು ವಿಸ್ತಾರವಾಗಿ ಚಿತ್ರಿಸಿದ್ದಾರೆ.

ಬೇಟೆ ಕುರಿತ ಸ್ವತಂತ್ರ ಕೃತಿ ಮೈ ತಾಳಿದ್ದು ಇತ್ತೀಚೆಗೆ ಕೆದಂಬಾಡಿ ಜತ್ತಪ್ಪ ರೈಯಿಂದ. ಇವರ ಬೇಟೆಯ ನೆನಪುಗಳು, ಈಡೊಂದು ಹುಲಿಯೆರಡು, ಬೇಟೆಯ ಉರುಳು ಕೃತಿಗಳು ಇತರ ಕೃತಿಗಳಿಗೆ ಮಾದರಿಯಾಗಿ, ನಾಂದಿಯಾಗಿದ್ದವೆನ್ನಬಹುದು. ಬಿ.ಡಿ.ಸುಬ್ಬಯ್ಯನವರು ಸಹ ಬೇಟೆ ಕೃಷಿ ಮಾಡಿದ್ದಾರೆ. ಬಡ್ಡಕ್ಕ ಅಪ್ಪಯ್ಯಗೌಡ, ಪ್ರಭಾಕರ ಶಿಶಿಲ, ಕೈಂತಜೆ ವಿಷ್ಣುಭಟ್ಟ, ಅಜ್ಜಂಪುರದ ಕೃಷ್ಣಸ್ವಾಮಿ (ವನಸಿರಿ ಮತ್ತು ಖಗಸಿರಿ) ಮುಂತಾದವರು ಬೇಟೆ ಕುರಿತು ಕಥೆ, ಕಾದಂಬರಿ, ನಾಟಕಗಳನ್ನು ಬರೆದಿದ್ದಾರೆ. ಆಧುನಿಕವಾಗಿ ಭಾವಗೀತೆ, ಪ್ರಣಯಗೀತೆಗಳಲ್ಲೂ ಬೇಟೆಯನ್ನು ಪ್ರಸ್ತಾಪಿಸಿದ್ದಾರೆ. ಗೋಕಾಕರು 'ಬೇಡತಿ' ಮತ್ತು ಪು.ತಿ.ನ. ಅವರು 'ಶಬರಿ' ಎನ್ನುವ ಕವಿತೆಗಳನ್ನು ರಚಿಸಿದ್ದಾರೆ. ಚಂದ್ರಶೇಖರ ಕಂಬಾರರು 'ಈವರೆಗೆ ಹೇಳತೀನಿ ಕೇಳ' ಕವನ ಸಂಕಲನದಲ್ಲಿ 'ಚಂದಿರನ ಬೇಟೆ ಹೋದ ಮತ್ತು ಬ್ಯಾಡರ ಹುಡುಗ ಬ್ಯಾಟ್ಯಾಡಿದ' ಕವಿತೆಗಳು ಗಮನಾರ್ಹವಾದವು.

ಬೆಟಗೇರಿ ಕೃಷ್ಣಶರ್ಮರ ಸಣ್ಣಕಥೆಗಳಲ್ಲಿ ಬೇಟೆ ಉಲ್ಲೇಖವಿದೆ. ಕೃಷ್ಣಕುಮಾರ ಕಲ್ಲೂರರ ನಾಟಕದಲ್ಲಿ ಬೇಡ, ತಳವಾರನ ಪಾತ್ರ, ಡಾ.ಆರ್.ಸಿ.ಮುದ್ದೇಬಿಹಾಳರ 'ಸಿಂಧೂರ ಲಕ್ಷ್ಮಣ' ಮಹಾಕಾವ್ಯದಲ್ಲಿ ಬೇಟೆ ಉಲ್ಲೇಖವಿದೆ. ತ.ರಾ.ಸು, ಹು.ಶ್ರೀ.ಜೋಯಿಸರು, ತಿ.ತಾ.ಶರ್ಮ, ಎಂ.ಎಸ್.ಪುಟ್ಟಣ್ಣ, ಕಪರಾಳ ಕೃಷ್ಣರಾವ್‌ರ ಕೃತಿಗಳಲ್ಲಿ ಬೇಟೆಯ ಅದ್ಭುತ ಸಂದರ್ಭಗಳಿವೆ.

ಆಚಾರ್ಯ ಸಿದ್ಧಾರ್ಥನಂದಸ್ವಾಮಿಗಳ 'ವಾಲ್ಮೀಕಿ ಮತ ಧರ್ಮ', ಪಂಡಿತ ರೇವಣಸಿದ್ಧಸ್ವಾಮಿಗಳ 'ವಾಲ್ಮೀಕರ ಪುರಾಣವು', ಹರತಿ ವೀರನಾಯಕರ ದುರ್ಗದಧವಳಕೀರ್ತಿ ಮತ್ತು ಕನ್ನಡದ ಕಲಿನಾಡು, ಪ್ರೊ.ವಜ್ರಮಟ್ಟಿ ಅವರ ಎಚ್ಚೆತ್ತಏಕಲವ್ಯ, ಬಿ.ಎಸ್.ಗದ್ದಗಿನಮಠ ಅವರ ಕುಮಾರರಾಮನ ದುಂದುಮೆ, ವಿ.ರಂಗನಾಯಕ ಅವರ ವಾಲ್ಮೀಕಿ ವಂಶಪಾವನಿ ಮತ್ತು ಕೆರೂರ ವಾಸುದೇವಾಚಾರ್ಯರು ವಾಲ್ಮೀಕಿ ವಿಜಯ ಎನ್ನುವ ಪೌರಾಣಿಕ ಕಾದಂಬರಿಗಳಲ್ಲಿ ಬೇಟೆ ಬಗ್ಗೆ ತಿಳಿಸಿದ್ದಾರೆ. ಸಿ.ಕೆ.ನಾಗರಾಜುರವರ 'ಏಕಲವ್ಯ ದರ್ಶನ', ಶ್ರೀ ಸದ್ಗುರು ನಿತ್ಯಾನಂದ ಪ್ರಸಾದಿತ ಮತ್ತು ರಂಗದಾಸ್‌ರ ಶ್ರೀ ವಾಲ್ಮೀಕಿ ದರ್ಶನ ಮತ್ತು ಅವರ ಧರ್ಮ ಸಂದೇಶ, ಮೇಘಮಿತ್ರ ಅವರ ಎಚ್ಚೆತ್ತ ಏಕಲವ್ಯ (ನಾಟಕ), ರಾಮಾಯಣದ ರಾಮಚಂದ್ರರಾವ್ ಅವರ ವಾಲ್ಮೀಕಿ ಹೃದಯ, ಪಿ.ಬಿ.ದೇಸಾಯಿಯವರ ಮದಗಜಮಲ್ಲ, ಎಂ.ಜಿ.ಈಶ್ವರಪ್ಪನವರ ಮ್ಯಾಸಬೇಡರು, ಕೃಷ್ಣಮೂರ್ತಿ ಹನೂರರ ಮ್ಯಾಸಬೇಡರ ಸಂಸ್ಕೃತಿ, ಕರಿಶೆಟ್ಟಿ ರುದ್ರಪ್ಪನವರ ಮ್ಯಾಸನಾಯಕರು: ಒಂದು ಜನಾಂಗಿಕ ಅಧ್ಯಯನ, ಮ್ಯಾಸನಾಯಕರ ಗೃಹವಾಸ್ತುಶಿಲ್ಪ ಎಂ.ಪಿ.ವೀಣಾ ಅವರ ಎಂ. ಫಿಲ್ ಪ್ರಬಂಧ, ಶಂಬಾಜೋಶಿಗಳ : ಹಾಲುಮತ ದರ್ಶನ, ಕರ್ನಾಟಕ ಕ್ಷತ್ರಿಯರು, ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ಎಸ್.ಕೆ.ರಾಮಚಂದ್ರರಾಯರ ತಿರುಪತಿ ತಿಮ್ಮಪ್ಪ, ಇತರ ಕೃತಿಗಳಲ್ಲಿ ಬೇಟೆ-ಬೇಡರ ಉಲ್ಲೇಖವಿದೆ.

ರಾಹುಲ ಸಾಂಕೃತ್ಯಾಯನನ ದಿವೋದಾಸ, ವೋಲ್ಗಾ-ಗಂಗಾ ಮತ್ತು ಜಯಯೌಧೇಯ, ಶಂಕರಮೊಕಾಶಿ ಪುಣೇಕರರ ಅವಧೇಶ್ವರಿ ಕಾದಂಬರಿಗಳಲ್ಲಿ ವೇದಗಳ ಕಾಲದ ಬೇಡ, ಬಿಲ್ಲರ ಸಂಸ್ಕೃತಿ, ವೃತ್ತಿಗಳ ಪರಿಚಯವಿದೆ. ಹೆಳವನಕಟ್ಟೆ ಗಿರಿಯಮ್ಮ ಚಂದ್ರಹಾಸನ ಕಥೆಯಲ್ಲಿ ಬೇಟೆಯ ವರ್ಣನೆಯಿದೆ. ಇತ್ತೀಚಿಗೆ ಡಿ.ಎಸ್. ಸುಧೀರ್ 'ಬೇಟೆ' ಎನ್ನುವ ಕಥಾಸಂಕಲನವನ್ನು ಪ್ರಕಟಿಸಿದ್ದಾರೆ.

ಶಿಷ್ಟ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಚುಟುಕು ಸಾಹಿತ್ಯದಲ್ಲಿಂದು ಬೇಟೆಯ ವರ್ಣನೆಗಳು ವಿಭಿನ್ನವಾಗಿ ಕಂಡುಬರುತ್ತವೆ. ಅರಣ್ಯ ಇಲಾಖೆಯವರು ರಸ್ತೆ ಬದಿ, ಅರಣ್ಯಗಳಲ್ಲಿ ನಾಮಫಲಕಗಳನ್ನು ನೇತುಹಾಕಿ ಕಾಡನ್ನು ಬೆಳೆಸಿ, ನಾಡನ್ನು ಉಳಿಸಿ, ವನ್ಯಪ್ರಾಣಿಗಳನ್ನು ಸಂರಕ್ಷಿಸಿ ಎಂದು ಘೋಷಣೆಗಳನ್ನು ಬರೆಸಿದ್ದಾರೆ.

ಮೇಲಿನ ಕೃತಿಗಳನ್ನು ಅವಲೋಕಿಸಿದಾಗ ಎರಡು ರೀತಿಯ ಬೇಟೆ ವಿಧಾನಗಳ ಕಂಡುಬರುತ್ತವೆ. ಲೌಕಿಕ ಮತ್ತೊಂದು ಅಲೌಕಿಕ ಬೇಟೆ. ಮಹಾಕಾವ್ಯಗಳು ಬಹುತೇಕ ಹದಿನೆಂಟು ವರ್ಣನೆಗಳಿಂದ ಕೂಡಿವೆ. ಹೀಗಾಗಿ ಲೌಕಿಕ ಬೇಟೆ ಜನಸಾಮಾನ್ಯರ ಬೇಟೆಯಾಗಿದ್ದರೆ, ಅಲೌಕಿಕ ಬೇಟೆ ಕಿರಾತಾರ್ಜುನೀಯದಿಂದ ಕೂಡಿದೆ. ಪಂಪ ಪುರಾಣ ವಸ್ತುವಿನಲ್ಲಿ ಬೇಟೆಯನ್ನು ಔಚಿತ್ಯ ಪೂರ್ಣವಾಗಿ ತಂದಿದ್ದಾನೆ. ಹೀಗೆ ಪ್ರಾಚೀನ ಕವಿಗಳು ಬೇಟೆಯ ಪರವಿದ್ದರೆ, ಷಡಕ್ಷರದೇವ ಬೇಟೆಯನ್ನು ಪಾಪಕೃತ್ಯವೆಂದು ವಿರೋಧಿಸಿ ಪ್ರಾಣಿಗಳ ಬಗೆಗೆ ಸಹನೆ ವ್ಯಕ್ತಪಡಿಸಿದ್ದಾನೆ. ಕವಿಗಳು ಕಥಾವಸ್ತುವಿಗೆ ತಕ್ಕಂತೆ ಬೇಟೆಯನ್ನು ನಿರೂಪಿಸಿದ್ದು, ಬೇಟೆ ಪ್ರಸಂಗಗಳು ವಾಸ್ತವತೆಗೆ ಹತ್ತಿರವಾದಂತಿವೆ. ಕ್ರಮೇಣ ದುಷ್ಟಮೃಗಗಳ ಹಾವಳಿಯನ್ನು ತಪ್ಪಿಸಲು ಬೇಟೆಯ ಅನಿವಾರ್ಯತೆಯನ್ನು ಒಪ್ಪಲಾಗಿದೆ. ಈ ಕ್ರಮ ಹಿಂದಿನಿಂದಲೂ ಇದ್ದರೂ ಇಂದಿಗೂ ಪ್ರಸ್ತುತವಾಗಿದೆ. ಪ್ರಾಚೀನ ಕವಿಗಳು ಕಾವ್ಯ ಲಕ್ಷಣಗಳಲ್ಲಿ ಬೇಟೆಯನ್ನು ನಿರೂಪಿಸಿದರೆ, ಆಧುನಿಕರ ಸಾಹಿತ್ಯದಲ್ಲಿ ಕತೆ, ಕಾದಂಬರಿ, ಲೇಖನಗಳ ಮೂಲಕ ಬೇಟೆ ಹಿಂಸೆಯೆಂದೇ ಪ್ರತಿಪಾದಿಸಿದ್ದಾರೆ. ಇವರು ವನ್ಯಪ್ರಾಣಿಗಳ ಪರವಾಗಿದ್ದು ಬೇಟೆಗೆ ಕಡಿವಾಣ ಬದ್ದ ಸಂಗತಿಗಳನ್ನು ಚರ್ಚಿಸಿದ್ದಾರೆ. ಬೇಟೆಯ ಜೊತೆ ಜೊತೆಗೆ ಬೆಳೆದು ಬಂದ ಬೇಡರ ಸ್ಥಿತಿ-ಗತಿಯನ್ನು ದಾಖಲಿಸಿದ್ದಾರೆ. ಇವರೆಲ್ಲ ಮನೋಭೂಮಿಕೆ ಬೇಟೆಯನ್ನು ಆಹಾರದ ಮಾಧ್ಯಮವೆಂದು ಬಗೆಗಿದ್ದರೂ, ಕೊನೆಕೊನೆಗೆ ಹಿಂಸೆ ಎಂದು ಪರಿವರ್ತನೆಗೊಂಡ ಅಂಶಗಳನ್ನು ತೋರಿಸುತ್ತಾರೆ. ಆ ಮೂಲಕ ಉಪಯೋಗ, ಪರಿಣಾಮ ಇತರ ಅನೇಕ ಸಂಗತಿಗಳು ಬೇಟೆ ವ್ಯಾಪ್ತಿಯಲ್ಲಿ ಮಾನವನ ಪ್ರವೃತ್ತಿಗಳನ್ನು ಬದಲಾಯಿಸುವಲ್ಲಿ ಯಶಸ್ವಿಯಾಗಿವೆ.

೨.೪. ವೃತ್ತಿ ಮತ್ತು ಜಾತಿ-ವರ್ಗಗಳ ವರ್ಗೀಕರಣ : ಕಾವ್ಯಗಳ ಹಿನ್ನೆಲೆಯಲ್ಲಿ

ಕಾವ್ಯದಲ್ಲಿ ಒಂದು ಜನಸಮುದಾಯದ ವೃತ್ತಿ ಮತ್ತು ಇತರ ಜಾತಿಗಳ ಉಲ್ಲೇಖವನ್ನು ಕಾಣುವುದು ಕಷ್ಟ. ಪ್ರತಿಯೊಂದು ಕಾವ್ಯವು ಎಲ್ಲ ಜಾತಿ-ವರ್ಗಗಳ ವಿವರಗಳನ್ನು ತಿಳಿಸಲಾರದು. ಅಷ್ಟಾದಶವರ್ಣನೆಯ ಕಾವ್ಯ, ಅಲೌಕಿಕತೆಯಿಂದ ಕೂಡಿದ್ದರೆ, ಲೌಕಿಕ ವಿಚಾರಗಳ ಮಹಾಪೂರಕ್ಕೆ ಕಡಿವಾಣವಿರುತ್ತದೆ. ಸಂಸ್ಕೃತ ಮತ್ತು ಕೆಲವು ಕನ್ನಡ ಕಾವ್ಯಗಳಲ್ಲಿ ಬೇಟೆ ವೃತ್ತಿ ಮತ್ತು ಜಾತಿವರ್ಗಗಳ ಉಲ್ಲೇಖವಿದೆ. ಪ್ರಮುಖವಾಗಿ ಬೇಟೆ, ಪಶುಪಾಲನೆ, ಕೃಷಿಯನ್ನು ಬೆಳಕಿಗೆ ತರುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ವೃತ್ತಿಯಲ್ಲಿ ಬಂದು ಬೇಟೆಗಾರ, ರಾಜ, ಮಂತ್ರಿ, ತಳವಾರ, ಇತರ ಯಾವುದೇ ಒಂದು ರೀತಿಯ ಪದವಿ ಉದ್ಯೋಗವನ್ನು ಅವಲಂಬಿಸಿರುತ್ತಾರೆ. ಹೀಗೆ ಏನೆಲ್ಲಾ ಇದ್ದರೂ ಕೆಲವು ವೃತ್ತಿಗಳನ್ನು ಅವಲೋಕಿಸುವುದು ಅಗತ್ಯ. ಈ ಬೇಟೆಗಾರರಿಗೆ ಶಬರ, ಕಿರಾತ, ಬೇಡರು, ಕಂಕ, ನೈಷಧ, ಪುಳಿಂದ ಮುಂತಾದ ಹೆಸರುಗಳಿಂದ ಕರೆದಿರುವರು. ಸಾಮಾನ್ಯವಾಗಿ ಇವರನ್ನು ಪುರಾಣಗಳ ಕಾಲದಿಂದ ಮೇಲಿನಂತೆ ಗುರುತಿಸುವರು.

ಕಿರಾತ : ಕಿರಾತರು ಇತಿಹಾಸ ಪೂರ್ವಕಾಲದಲ್ಲಿ ಉತ್ತರ ಭಾರತದಲ್ಲಿ ಅನಾಗರಿಕರಂತೆ ವಾಸಿಸುತ್ತಿದ್ದರು. ಪಂಜಾಬ್, ಮಧ್ಯಭಾರತ, ಉತ್ತರಖಂಡದ ಅರಣ್ಯ ಗುಹೆಗಳಲ್ಲಿ ವ್ಯಾಪಕವಾಗಿದ್ದರು. ಗ್ರೀಕ್-ರೋಮರ ಕಾಲಕ್ಕೆ ಭಾರತದಲ್ಲಿದ್ದರು. ಹಿಮಾಲಯ ಮತ್ತು ಉಪಹಿಮಾಲಯ ಪ್ರದೇಶ, ಅರಣ್ಯ ಬಯಲು, ಪರ್ವತ, ಗಂಗಾಬಯಲಿನ ಅನಾರ್ಯ ಗುಂಪಿಗೆ ಕಿರಾತರೆಂದು ಹೆಸರು. ಬೇಟೆಯಾಡುವಾಗ ನವಿಲುಗರಿಗಳನ್ನು ತಲೆಗೆ ಕಟ್ಟಿಕೊಳ್ಳುತ್ತಿದ್ದು ಕೆಲವರಿಗೆ ಬೇಟೆಯೇ ಮುಖ್ಯ ಕೆಲಸವಾಗಿತ್ತು. ಕಿರಾತದೇಶದ ದೊರೆಗಳ ವಂಶದವರಾಗಿದ್ದುದರಿಂದಲೂ, ಕಂಕಾಳ ಸಹಕೇತು ಗೋತ್ರದಲ್ಲಿ ಕಿರಾತರೆಂಬ ಹೆಸರಿನ ಶಾಖೆಯವರಿರುವದರಿಂದಲೂ ಕಿರಾತರೆಂಬ ಹೆಸರು ರೂಢಿಯಾಗಿ ಬಂದಿರುತ್ತದೆ.

ಶಬರ : 'ಶಬರ' ಎಂದರೆ ನೀರು ಮತ್ತು ಶಿವನೆಂದು, • ಉತ್ತಮ ವ್ಯವಹಾರಯುಕ್ತನೆಂತಲೂ ಆಗುತ್ತದೆ. 'ಪೂರ್ವದಲ್ಲಿ ಈ ಜನಾಂಗದವರು ಅರಣ್ಯಗಳಲ್ಲಿ ವಾಸಮಾಡುತ್ತಾ ಕ್ಷತ್ರಿಯವೃತ್ತಿಯಿಂದ ಬಿಲ್ಲು ಬಾಣಗಳನ್ನು ಧರಿಸಿ ಮೃಗಗಳಿಗೂ ಪಥಿಕರಿಗೂ ತೊಂದರೆ ಮಾಡುತ್ತಿದ್ದ ದುಷ್ಟಮೃಗಗಳನ್ನು ಕೊಂದು ಉಪಕಾರ ಮಾಡುತ್ತಿದ್ದರು. ಮಧ್ಯಮ ಪಾಂಡವನಾದ ಅರ್ಜುನನು ಪಾಶುಪತಾಸ್ತ್ರವನ್ನು ಪಡೆಯಲು ಇಂದ್ರಕೀಲ ಪರ್ವತದಲ್ಲಿ ಶಿವನನ್ನು ಕುರಿತು ತಪಸ್ಸು ಮಾಡಲು ಶಿವಪಾರ್ವತಿ ಮತ್ತು ಪ್ರಮಥ ಗಣಗಳು ಶಬರವೇಷಗಳನ್ನು ಧರಿಸಿ ದುಷ್ಟಮೃಗಗಳನ್ನು ಬೇಟೆಯಾಡುತ್ತಾ, ಸತ್ತ ಹಂದಿಗಾಗಿ ಅರ್ಜುನನೊಡನೆ ಯುದ್ಧಮಾಡಿ ಅರ್ಜುನನ ಭಕ್ತಿ ಸಾಹಸಗಳಿಗೆ ಮೆಚ್ಚಿ ಪಾಶುಪತಾಸ್ತ್ರವನ್ನು ಕೊಟ್ಟನು. ಪರಮೇಶ್ವರನು ಶಬರನಾಗಿ ನಟಿಸಿದ್ದರಿಂದ ಇದು ಉತ್ತಮ ವ್ಯವಹಾರಯುಕ್ತವಾದ ಹೆಸರಾಗಿರುತ್ತದೆ[೨೦]

ಕಂಕ : ಕುಚೇಷ್ಟೆಗೆ ಏನು ತಿಳಿಯದವರನ್ನು ಕಂಕ ಎಂದು ಮೂದಲಿಸುತ್ತಾರೆ. ಇಲ್ಲಿ 'ಕಂ' ಎಂದರೆ ಸಮಸ್ತ ವಿಷಯಗಳನ್ನು 'ಕ' ಎಂದರೆ ತಿಳಿದವನಿಗೆ-ಕಂಕನೆಂದು ಹೆಸರು. ಪಾಂಡವರು ಅಜ್ಞಾತವಾಸ ಮಾಡಿದಾಗ ಧರ್ಮರಾಯನು ಕಂಕಭಟ್ಟನೆಂಬ ಹೆಸರನ್ನು ಸ್ವೀಕರಿಸಿದನು. ಅಲ್ಲದೆ ಕಿನ್ನರ ಗೋತ್ರದಲ್ಲಿ ಕಂಕ ಎಂಬ ಒಂದು ಶಾಖೆಯವರು ಇರುವುದರಿಂದ ಈ ಹೆಸರು ರೂಢಿಯಾಗಿ ಬಂದಿರುತ್ತದೆ.[೨೧]

ನೈಷಧರು : ನಿಷಧ ದೇಶದ ರಾಜನಾದ ನಳ ಚಕ್ರವರ್ತಿಯ ವಂಶದವರಾದ್ದರಿಂದ ನೈಷಧರೆಂಬ ಹೆಸರು ವಾಡಿಕೆಯಾಗಿ ಬಂದಿದೆ.

ಕುಳಿಂದರು : ಕುಳಿಂದ ದೇಶದ ರಾಜರ ವಂಶಸ್ಥರಾಗಿಯೂ, ಕುರಂಗಸಹಕೇತು ಗೋತ್ರದಲ್ಲಿ ಕುಳಿಂದರೆಂಬ ಶಾಖೆಯವರಿರುವುದರಿಂದಲೂ ಈ ಹೆಸರು ರೂಢಿಯಲ್ಲಿರುವುದು.[೭೨]

ಹೀಗೆ ನಾನಾ ಹೆಸರುಗಳನ್ನು ಇಟ್ಟುಕೊಂಡರೂ ಬೇಡರು ಮೂಲತಃ ಬೇಟೆ ಪ್ರವೃತ್ತಿಯುಳ್ಳ ಜನ. ಬೇಟೆ, ಪಶುಪಾಲನೆಯಲ್ಲಿ ಅಪ್ರತಿಮ ಸಾಧನೆ ತೋರಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಹೀಗಾಗಿ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಬೇಡರ ವಿವಿಧ ವೃತ್ತಿಗಳನ್ನು ದಾಖಲಿಸಿದ್ದಾರೆ. ಭಾರತದ ಸಾಹಿತ್ಯದಲ್ಲಿಯೇ ಮೊದಲಿಗೆ ಗುರುತಿಸಿರುವುದು ಕಂಡುಬಂದರೂ ಕನ್ನಡ ಸಾಹಿತ್ಯ ಕೃತಿಗಳಲ್ಲಿ, ವಿವಿಧ ಕಾಲಘಟ್ಟಕ್ಕೆ ತಕ್ಕಂತೆ ವೃತ್ತಿಗಳು ಸ್ಥಿತ್ಯಂತರಗೊಳ್ಳುತ್ತವೆ. ಐತಿಹಾಸಿಕವಾಗಿ ರಾಜ್ಯಳಿಕೆ ಮಾಡುವುದೇ ಇವರ ಸಾಹಸಮಯವಾದ ಪ್ರವೃತ್ತಿಯನ್ನು ಪ್ರತಿನಿಧಿಸಿದೆ.

ಬೇಟೆಯನ್ನು ಜೀವನದ ಉಸಿರೆಂದು ನಂಬಿ ಜೀವಿಸುತ್ತಿರುವ ಅನೇಕ ಬುಡಕಟ್ಟುಗಳಿವೆ. ಇವರಲ್ಲಿ ಬೇಡರು ಪೂರ್ವಜರ, ತಲೆಮಾರುಗಳಿಂದ ಬಂದ ಬೇಟೆ ವೃತ್ತಿಯೆಂದು ರೂಢಿಸಿಕೊಂಡಿದ್ದಾರೆ. ಇವರ ಬೇಟೆಯನ್ನು ಕವಿಗಳು ಎರಡು ದೃಷ್ಟಿಯಿಂದ ಕಾವ್ಯದಲ್ಲಿ ತಿಳಿಸಿದ್ದಾರೆ. ಒಂದು ಲೌಕಿಕ ಮತ್ತೊಂದು ಅಲೌಕಿಕ. ಭಿನ್ನವಾಗಿ ನೋಡಿದಾಗ ರಾಮಾಯಣ ಬರೆದ ವಾಲ್ಮೀಕಿ ಈ ಜನಾಂಗಕ್ಕೆ ಸೇರಿದವನು. ವೃದ್ಧಳಾದ ಶಬರಿ ಶ್ರೀ ರಾಮನಿಗೆ ಬೋರೆಹಣ್ಣುಗಳನ್ನು ಕಿಷ್ಕಿಂಧೆಯಲ್ಲಿ ಕೊಟ್ಟದ್ದು ಆಹಾರ ಸಂಗ್ರಹಣೆ ಹಂತವನ್ನು ಸೂಚಿಸುವುದು ಸ್ಪಷ್ಟ. ಬೇಡರು ಬೇಟೆಯಲ್ಲಿ ಪರಿಣಿತರಾಗಿದ್ದು, ಬೇಟೆಯ ಸಂಶೋಧಕರಲ್ಲದೆ, ಮಾರ್ಗದರ್ಶಕರಾಗಿದ್ದು, ಬೇಟೆಯ ಸರ್ವತಂತ್ರ ಅರಿತು ನುರಿತ ಅನುಭವವಿರುವ ಕಷ್ಟಸಹಿಷ್ಣುಮತಿಗಳಾಗಿದ್ದರು. ಬೇಡರ ಕಣ್ಣಪ್ಪನೆಂಬ ಶಿವಭಕ್ತ ಬೇಟೆಯಲ್ಲಿ ಅಪ್ರತಿಮ ಸಾಹಸಿ. ಶಿವನಿಗೆ ತನ್ನೆರಡು ಕಣ್ಣುಗಳನ್ನರ್ಪಿಸಿ ಮಹಾಧಾನಿಯಾಗಿರುವನು.

ಮಹಾಭಾರತದ ಕಥೆಯಲ್ಲಿ ಬರುವಂತೆ ಪಾಂಡವರ ಪ್ರತಿಯೊಬ್ಬನಿಗೂ ಒಂದೊಂದು ಪ್ರತ್ಯೇಕ 'ಬೇಡರಪಡೆ' ಇದ್ದಿತೆಂದು ಹೇಳಲಾಗಿದೆ. ಸಹದೇವ ದಿಗ್ವಿಜಯದಲ್ಲಿ ದಕ್ಷಿಣದೇಶದಲ್ಲಿದ್ದ ಬೇಡರ ಅರಸರಿಂದ ಕಾಣಿಕೆ ತೆಗೆದುಕೊಂಡನೆಂದು ಹೇಳಿದೆ. ದಕ್ಷಿಣದ ಪೈನಗಂಗಾತೀರದ ಸುತ್ತಿನ ಪ್ರದೇಶಕ್ಕೆ ಬೇಡರ ದೊರೆಯು ಅಧಿಪತಿಯಾಗಿ ಸುಖದಿಂದ ರಾಜ್ಯವಾಳಿದನೆಂದೂ ಸೂರ್ಪಕರಿಂದ ರತ್ನಗಿರಿಯವರೆಗಿನ ಪ್ರದೇಶವು ಬೇಡರ ರಾಜ್ಯವಾಗಿದ್ದಿತೆಂದು ಹೇಳಲಾಗಿದೆ. ಇವರನ್ನು ಮಹಾಭಾರತದಲ್ಲಿ ಪುಲಿಂದ,ನಿಷಾಧ, ವ್ಯಾಧ, ಇತರ ಹೆಸರುಗಳಿಂದ ಗುರುತಿಸಿದ್ದಾರೆ. 'ಏಕಲವ್ಯನು ನಿಷಾಧ ರಾಜನ ಮಗನಾಗಿದ್ದನೆಂಬ ಸಂಗತಿ ಪ್ರಸಿದ್ಧವಾದುದು'. ಈತ (ಉಚ್ಚ ಜಾತಿಯ ಯಾವ ಗುರುತೂ ಇಲ್ಲದೆ) ಧನುರ್ವಿದ್ಯೆಯಲ್ಲಿ ಪಾರಂಗತನಾಗಿದ್ದನು. ಏಕಲವ್ಯ ಕ್ಷತ್ರಿಯರಿಗಿಂತ ಮಿಗಿಲಾದ ಬಿಲ್ಲುಗಾರನಾಗಿದ್ದು, ಇವನ ಧನುರ್ವಿದ್ಯೆಗೆ ದ್ರೋಣನೇ ತಲೆದೂಗುತ್ತಿದ್ದನಂತೆ. ಹೀಗಾಗಿ ಇಂಥ ಸಾಹಸಿಯಿಂದ ದ್ರೋಣ ಹೆಬ್ಬೆರಳನ್ನು ಕಾಣಿಕೆಯಾಗಿ ಪಡೆದದ್ದು ಒಡೆದು ಆಳುವ ಗುಣವನ್ನು ಸಂಕೇತಿಸುವುದು.

ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಒಂದಾದ ಕಿರಾತರುದ್ರಲೀಲೆ ಮಹಾಭಾರತದಲ್ಲಿ ಬಂದಿದೆ. ಶಿವನು ಕಿರಾತ ರೂಪವನ್ನು, ಪಾರ್ವತಿ ಕಿರಾತೆಯಾಗಿ ಬೇಡ ವೇಷದಿಂದ ಬಂದು ಮೂಕದಾನವನ್ನು ಸಂಹರಿಸಿ, ಅರ್ಜುನನಿಗೆ ಪಾಶುಪತಾಸ್ತ್ರ ದಾನಮಾಡುವ ಪ್ರಸಂಗ ಪ್ರಮುಖವಾದದು. ಇದರಿಂದ ಅಂದಿನ ಕಾಲದ ಬೇಡರ ಜನಜೀವನ, ಸ್ಥಿತಿ-ಗತಿ, ಉಡುಗೆ-ತೊಡುಗೆ ಮುಂತಾದ ಸಂಗತಿಗಳನ್ನು ತಿಳಿಯಬಹುದು.

ಅರಣ್ಯಪರ್ವದಲ್ಲಿ ಬರುವ ಧರ್ಮವ್ಯಾಧನ ಕತೆ ಜನಪ್ರಿಯವಾದುದು. ಗೋಮಾಂಸಹಾರದ ವಿಷಯಕ್ಕೆ ತೀವ್ರವಾದ ಮತಭೇದಗಳು ಹುಟ್ಟಿಕೊಂಡ ತರುವಾಯ ಸೃಷ್ಟಿಸಲ್ಪಟ್ಟಂತೆ ಈ ಕತೆ ಕಾಣುತ್ತದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ಪರ್ವತ ಯುದ್ಧಗಳಲ್ಲಿ ನಿಷ್ಣಾತರಾಗಿದ್ದವರು ಬೇಡರು' ಎಂದಿದ್ದಾನೆ.

ಕನ್ನಡದ ಪ್ರಥಮ ಗದ್ಯ ಕೃತಿಯಾದ ವಡ್ಡಾರಾಧನೆಯಲ್ಲಿ ಶಿವಕೋಟ್ಯಾಚಾರ್ಯ ಬೇಡರನ್ನು ಉಲ್ಲೇಖಿಸಿದ್ದಾನೆ. ೧೫ನೇ ಕಥೆಯಾದ ಚಿಲಾತಪುತ್ರನ ಕಥೆಯಿದೆ. ಸಂಸ್ಕೃತದ ಚಿಲಾತಪುತ್ರ ಎಂಬುದು ಪ್ರಾಕೃತರೂಪ 'ಕಿರಾತಪುತ್ರ' ಎಂದಾಗಿರಬೇಕು. ವಿದ್ಯುಚ್ಚೋರನೆಂಬ ಋಷಿಯ ಕಥೆಯ ಸುದಾಮೆ ಉಪಕಥೆಯಲ್ಲಿ ತಳವಾರನ ಪಾತ್ರ ಬಂದಿದೆ. ಇಲ್ಲಿ ಜೈನ ಧರ್ಮವು ಬೇಡ ಜನಾಂಗದ ಬಗೆಗೆ ಒಲವು ತೋರಿಸಿದ್ದು ವಾಸ್ತವಿಕವಾದುದು. ಇಲ್ಲಿ ತಳವಾರನೆಂದರೆ ನಗರ ರಕ್ಷಕ, ದೊಡ್ಡ ಅಧಿಕಾರಿಯಂತೆ, ಕಳ್ಳರನ್ನು ಹಿಡಿದು ಶಿಕ್ಷಿಸುವುದು ಇತರ ಆರಕ್ಷಕ ಶೌರ್ಯಗಳು ಅವನ ಕರ್ತವ್ಯಗಳಾಗಿದ್ದವು.

ಪಂಪಭಾರತದಲ್ಲಿ ಬೇಟೆಗಾರನೊಬ್ಬ ಬಂದು ಅರ್ಜನನನ್ನು ಬೇಟೆಗೆ ಆಹ್ವಾನಿಸುವುದು, ಬೇಡರ ನಾಯಕ ಶಿಕಾರಿಯಲ್ಲಿನ ಸೂಕ್ಷ್ಮ ತಿಳುವಳಿಕೆ ಕೊಡುವುದು ಗಮನೀಯ ಅಂಶ. ಹರಿಹರನ ಗಿರಿಜಾಕಲ್ಯಾಣದಲ್ಲಿ ಬೇಟೆ, ಬೇಟೆಗಾರ, ಬೇಡರಪಡೆ, ಬೇಡರ ಬಾಣಪ್ರಯೋಗ, ಬೇಡ-ಬೇಡತಿಯರ ಶೃಂಗಾರ ಪ್ರಣಯಕಲಹದ ಚಿತ್ರಣ ಕಂಡುಬರುತ್ತದೆ.

ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಪರೀಕ್ಷಿಸಲಿಕ್ಕಾಗಿ ಕಾಡಿನಲ್ಲಿ ಕ್ರೂರ ಮೃಗಗಳನ್ನು ಸೃಷ್ಟಿಸುತ್ತಾನೆ. ಅವುಗಳನ್ನು ಹೊರದೂಡಲು ಹರಿಶ್ಚಂದ್ರ ಕಾಡಿಗೆ ಹೊರಡುವಾಗ ಬೇಡರನ್ನು ಕರೆತರಲು 'ಕರೆಕರೆ ಸಮಸ್ತ ಬೇಂಟೆಯ ಸಬರ ಜಾಲಮಂ' ಎಂದಿದೆ. ಇಲ್ಲಿ ಶಬರ ಎಂದರೆ ಬೇಡ, ಜಾಲಮಂ ಎಂದರೆ ಸಮೂಹ. ಬೇಡರದಂಡು, ಕಿರಾತರನ್ನು ಅವರ ಮಡದಿಯರು ಮರದ ನೆರಳಿನಲ್ಲಿ ಮಲಗಿಸಿ ಶೂಶ್ರೂಷೆ ಮಾಡುವ ದೃಶ್ಯ, ಈ ಬೇಡ, ಬೇಡತಿಯರ ಚೆಲುವು, ಬೇಡರಪಡೆ ಮುಂತಾದ ಸಂಗತಿಗಳಿವೆ. ಜನ್ನನು ಸಹ ಯಶೋಧರಚರಿತೆಯಲ್ಲಿ ಬೇಡರ ಬಗ್ಗೆ ತಿಳಿಸಿದ್ದಾನೆ. ಕೇಶಿರಾಜ ಶಬ್ದಮಣಿದರ್ಪಣದಲ್ಲಿ ಬೇಡ-ಬೇಡತಿಯರ ಲೈಂಗಿಕ ಚಿತ್ರಣವನ್ನು ಚಿತ್ರಿಸುತ್ತಾ : ಇಲ್ಲಿ ಚೆಲುವೆಯ ಯೌವ್ವನವು ವರ್ಧಿಸಿದಂತೆ ಬೇಡನ ಶಕ್ತಿಗುಂದುವುದು, ದುರ್ಬಲನಾಗುವುದು ಕಾಣುತ್ತೇವೆ. ವಿರೂಪಾಕ್ಷಪಂಡಿತನು ಚೆನ್ನಬಸವಪುರಾಣದಲ್ಲಿ ಬೇಟೆ, ಬೇಟೆಗಾರರ ವರ್ಣನೆಯನ್ನು ಮಾಡಿದ್ದಾನೆ. ದೇವರಾಜನು ಸೊಬಗಿನಸೋನೆ ಸಾಂಗತ್ಯದಲ್ಲಿ ಬೇಡರು ಸಿಂಹವನ್ನು ಹೆದರಿಸಿ ಅಟ್ಟುವುದು, ಬೇಟೆಯಾಡುವ ಪ್ರಾಣಿಗಳನ್ನು ಚಿತ್ರಿಸಲಾಗಿದೆ. ಷಡಕ್ಷರದೇವ, ರಾಜಶೇಖರ ವಿಳಾಸದಲ್ಲಿ ಪುಳಿಂದನಾಯಕ ಬೇಟೆಗೆ ಒಗ್ಗೂಡುವ ಸಂದರ್ಭ, ಶಬರನಾಯಕ, ಬೇಟೆಗಾರರ ಪಡೆ ಮತ್ತು ಶಬರಶಂಕರವಿಳಾಸದಲ್ಲಿ ಶಿವನು ಶಬರ ವೇಷಧಾರಿಯಾಗುವುದಿದೆ. ಇವನು ವೃಷಭೇಂದ್ರವಿಜಯದಲ್ಲಿ ಬೇಡರ ಕಣ್ಣಪ್ಪನ ಬಗ್ಗೆ ಕಾವ್ಯ ಹೆಣೆದಿದ್ದಾನೆ.

ಕರ್ಣಪಾರ್ಯನ ನೇಮಿನಾಥಪುರಾಣದಲ್ಲಿ ವಿಂಧ್ಯಕನೆಂಬ ಬೇಡ, ವಾಗುರೆ ಎಂಬ ಬೇಡತಿಯರ ಸಂದರ್ಭಗಳು ಬರುತ್ತವೆ. ಈ ದಂಪತಿಗಳಿಬ್ಬರೂ ಚಾರಣಯತಿಗಳಿಂದ ಧರ್ಮಬೋಧನೆಯನ್ನು ಸ್ವೀಕರಿಸಿ ಪರಿವರ್ತನೆಗೊಂಡರು. ಚೌಂಡರಸನ ಅಭಿನವ ದಶಕುಮಾರಚರಿತೆಯಲ್ಲಿ ಪುಳಿಂದ ನಾಯಕನು ಕಾಡು-ಪ್ರಾಣಿಗಳ ಉಪಟಳವನ್ನು ತಾಳಲಾಗದೆ ರಾಜನಲ್ಲಿಗೆ ಬಂದು ವನ್ಯಪ್ರಾಣಿಗಳ ಸಂಖ್ಯೆ ಹೆಚ್ಚಾಗಿದ್ದು, ಋಷಿಗಳ ಆಶ್ರಮವನ್ನು ಬಾಧಿಸುತ್ತವೆಂದು ಬೇಟೆಗೆ ಸ್ವಾಗತಿಸುತ್ತಾನೆ. ಕುಮಾರವಾಲ್ಮೀಕಿಯ ತೊರವೆರಾಮಾಯಣದಲ್ಲಿ ಇಂದ್ರನು ಕಿರಾತ ರೂಪ ಧರಿಸುವುದು, ಇಂದ್ರಾದಿ

ದೇವತೆಗಳು ಬೇಡರ ವೇಷಧರಿಸಿ ರಾಮನಲ್ಲಿಗೆ ಬಂದು ಕಾಣಿಕೆ ನೀಡಿ ಬೇಟೆಗೆ ಸ್ವಾಗತಿಸುತ್ತಾರೆ. ಹೀಗೆ ಅತಿಮಾನುಷ ಕಲ್ಪನೆಯು ಬೇಡರ ಬಗೆಗೆ ಬರುತ್ತದೆ. ನಂಜುಂಡಕವಿಯು ರಾಮನಾಥಚರಿತೆಯಲ್ಲಿ ಕುಮಾರರಾಮನು ಯುದ್ಧಕ್ಕೆ ಹೊರಡುವಾಗ ಅವನ ಜೊತೆ ಹೋರಾಡಲು ಸಿದ್ಧವಾಗುತ್ತಿರುವ ಬೇಡರನ್ನು ಕುರಿತು 'ಚಲ್ಲಣ ತೊಟ್ಟು ಜೋಡು ಬಡದೆ ಮೆರೆಯೆ ನಡೆತಂದರು ಎನ್ನಲಾಗಿದೆ. ಸಡಗರದಿಂದ ಸಂಗರಕೆ ಎಂದು ಬೇಡರನ್ನು ಪ್ರಶಂಸಿಸಿದ್ದಾನೆ. ಇದರಿಂದ ಬೇಡ ಜನಾಂಗದ ಬೇಟೆ, ಅಲೆಮಾರಿ ವ್ಯವಸ್ಥೆ ತಿಳಿಯುತ್ತದೆ. ಬೇಟೆಯಾಡಿ ಬಳಲಿ ಬಂದ ಬೇಡರನ್ನು ತಮ್ಮ ಮಡದಿಯರು ಶುಶ್ರೂಷೆ ಮಾಡುವ ದೃಶ್ಯವಿದೆ. ಲೋಕೈಕ ವೀರನಾಗಿ, ಅಸಮಾನ್ಯ ಶೂರನಾಗಿದ್ದ ಕುಮಾರರಾಮ ಯಾವುದೇ ದೊಡ್ಡ ರಾಜ್ಯದಲ್ಲಿ ಹುಟ್ಟದಿದ್ದರೂ ಎಲ್ಲರ ಗೌರವಕ್ಕೆ ಪಾತ್ರನಾದುದು ವಿಸ್ಮಯಕಾರಿ. ಇವನ 'ಪರನಾರೀ ಸೋದರತ್ವ'ದ ಆದರ್ಶಕ್ಕೆ ಇಂದು ಬೇಡರು ಅವನನ್ನು ಕುಲದೇವರನ್ನಾಗಿ ಮಾಡಿಕೊಂಡಿದ್ದಾರೆ. ಪರಾಕ್ರಮಿ,ಸಂಯಮಿ, ಸಚ್ಚಾರಿತ್ರ್ಯ ಮುಂತಾದ ಗುಣಗಳಿರುವ ಇತರರ ಉಲ್ಲೇಖ ಸಿಗುವುದು ವಿರಳ.[೭೩] ಕನಕದಾಸನ ಮೋಹನ ತರಂಗಿಣಿ, ನಳಚರಿತ್ರೆಯಲ್ಲಿ ಪುಳಿಂದ ನಾಯಕನೊಬ್ಬ ಬಂದು ಮಹಾರಾಜನಿಗೆ ಹಣ್ಣು ಹಂಪಲುಗಳನ್ನು ಕಾಣಿಕೆ ನೀಡಿ ಬೇಟೆಗೆ ಅಹ್ವಾನಿಸುವ ದೃಶ್ಯವಿದ್ದು, ಬೇಡಪಡೆಯೊಂದಿಗೆ ಸಿದ್ಧತೆ ಆಗುತ್ತದೆ. ಮೋಹನತರಂಗಿಣಿಯಲ್ಲಿ ಬೇಡರಪಡೆ, ಬೇಡರು ಹಂದಿಯ ಬೇಟೆ ಸಂದರ್ಭದಲ್ಲಿ ನಾಯಿಗಳನ್ನು ಕರೆದೊಯ್ಯುವುದು, ಬೇಡ-ಬೇಡತಿಯರು ಅನಿರುದ್ಧನ ಮುಂದೆ ಕುಣಿಯುವ ಚಿತ್ರವಿದೆ. ತಿರುಮಲಾರ್ಯನ ಚಿಕ್ಕದೇವರಾಜನ ವಂಶಾವಳಿಯಲ್ಲಿ ಬೇಡರ ಉಲ್ಲೇಖವಿದೆ. ಲಕ್ಷ್ಮಯ್ಯನ ಮದನಮೋಹಿನಿಯ ಕಥೆಯಲ್ಲಿ ಯುವ ಬೇಡನ ಚಿತ್ರಣವುಂಟು. ಕನ್ನಡ ಕಾವ್ಯಗಳಲ್ಲಿ ಬೇಟೆಯ ಸಂದರ್ಭ ಹೀಗೆ ಬರುತ್ತದೆ: ಕಾಡುಮೃಗಗಳ ಹಾವಳಿ ವಿಪರೀತವಾದಾಗ, ಬೇಟೆಗಾರರು ರಾಜನ ಮೊರೆ ಹೋಗುತ್ತಿದ್ದರು. ಆತನು ಸಕಲಸಿದ್ಧತೆಗಳೊಡನೆ ಆ ಬೇಟೆಗಾರರ ಸಹಾಯದಿಂದ ಬೇಟೆಯಾಡುತ್ತಿದ್ದ. ರಾಜನಿಗೆ ಅದು ವಿನೋದವಾಗಿದ್ದರೆ, ಬೇಟೆಗಾರರಿಗೆ ಜೀವನಾವಶ್ಯಕ ವೃತ್ತಿಯಾಗಿತ್ತು. ಇವರೇ ಅದರಲ್ಲಿ ಪ್ರವೀಣರಾಗಿದ್ದರಿಂದ ಅವಲಂಬಿಸಬೇಕಾಯಿತು. 'ರಾಜರು ಇತರ ಪ್ರತಿಷ್ಠಿತ ವರ್ಗದ ಜನರು, ಬೇಡ ಜನಾಂಗದವರನ್ನು ಪರಿಶಿಷ್ಟರು, ಅನಾಗರಿಕರು ಎಂದು ಪರಿಗಣಿಸಿದುದಕ್ಕೆ ಅವರು ಸಾಂಸ್ಕೃತಿಕವಾಗಿ ಕೆಳಗಿನ ಸ್ತರದವರು ಎನ್ನುವ ಕಾರಣ ಮುಖ್ಯವಾಗಿರಬೇಕು.[೭೪] ಹೀಗೆ ಬೇಡರು ಬೇಟೆಯೊಂದಿಗೆ ಇತರ ಕಸುಬುಗಳಿದ್ದ ಬಗೆ ತಿಳಿದುಬರುತ್ತದೆ.

ಪ್ರಾಚೀನ ಕಾಲದ ಕೃತಿಗಳಲ್ಲಿಯೂ ಬೇಡ ಜನಾಂಗದ ಉಲ್ಲೇಖವಿದೆ. ಅಮರಸಿಂಹನ ಅಮರಕೋಶದಲ್ಲಿ ಮ್ಲೇಚ್ಛ ಜಾತಿಗಳೆಂದು ಮಾಡಿರುವ ಪಟ್ಟಿಯಲ್ಲಿ ಕಿರಾತ, ಶಬರ, ವ್ಯಾಧ, ವಾಗುರಿ, ನಿಷಾದ ಭಟ, ಪುಲಿಂದ, ಲುಬ್ಧಕ ಇವಿಷ್ಟನ್ನೂ ಸೇರಿಸಿದ್ದಾನೆ.[೭೫] ಆದಿಕವಿ ವಾಲ್ಮೀಕಿ ತನ್ನ ರಾಮಾಯಣದಲ್ಲಿ ಶಬರಿ ಬಗ್ಗೆ ಪ್ರಸ್ತಾಪಿಸಿದ್ದಾನೆ. ಶಬರಿಯು ಶ್ರೀರಾಮನ ಆಗಮನಕ್ಕಾಗಿ ಕಾಯುವುದು, ಶ್ರೀರಾಮನ ಆಪ್ತಮಿತ್ರನಾದ ಗುಹನು ಬೇಡನಾಗಿದ್ದನೆಂಬ ಸಂಗತಿ ತಿಳಿದು ಬರುತ್ತದೆ. ಮಹಾಭಾರತದಲ್ಲಿ ಧರ್ಮವ್ಯಾಧ ಮತ್ತು ಏಕಲವ್ಯ ಹಾಗೂ ಜೈನ ಆರಾಧನಾಗ್ರಂಥಗಳಲ್ಲಿ ಬರುವ ಚಿರಾತಪುತ್ರ ಮುಂತಾದವರು ಈ ಜನಾಂಗದ ಪ್ರತಿನಿಧಿಗಳಾಗಿದ್ದರು. ತಮಿಳುನಾಡಿನ ಭಕ್ತಿ ಆಂದೋಲನದಲ್ಲಿ, ತಮಿಳು ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಿತವಾದ ವಿಷ್ಣುಭಕ್ತರಾದ ಪರಕಾಲ ಮತ್ತು ಶಿವಭಕ್ತನಾದ ಬೇಡರ ಕಣ್ಣಪ್ಪ ಇವರು ಬೇಡ ಜನಾಂಗದವರು. ಚೆನ್ನಬಸವಪುರಾಣದಲ್ಲಿ ವಿರೂಪಾಕ್ಷಪಂಡಿತನು ಹೇಳಿರುವ ತಳವಾರ ರಾಮಯ್ಯ ಎಂಬ ವ್ಯಕ್ತಿ ಬಹುಶಃ ವಚನಕಾರನಾದ ತಳವಾರ ಕಾಮಿದೇವನಿರಬೇಕು. ದುರುಗ ಮುರಗಿಯರು ಬೇಡ ಜನಾಂಗದ ಉಪಪಂಗಡವೆಂದು ತಿಳಿದುಬಂದಿದೆ. ಢಕ್ಕೆಯ ಮಾರಯ್ಯ ಅಥವಾ ಢಕ್ಕೆಯ ಬೊಮ್ಮಯ್ಯನೆಂಬ ಪ್ರಮುಖ

ವಚನಕಾರ ಈ ಜನಾಂಗದವನು. ನಯಸೇನನು ದಾರಿಗಟ್ಟಿ ಲೂಟಿ ಮಾಡುತ್ತಿದ್ದ ಬೇಡರನ್ನು ಹೆಸರಿಸಿದ್ದಾನೆ.[೭೬] ವಿವಿಧ ಕಾಲಘಟ್ಟಗಳಲ್ಲಿ ಕಂಡುಬರುವ ಬೇಡರು ಯಾವುದೇ ಒಂದು ವೃತ್ತಿಗೆ ಸೀಮಿತವಾಗಿರಲಿಲ್ಲ ಎಂಬುದಕ್ಕೆ ಮೇಲಿನ ಉಲ್ಲೇಖನಗಳೇ ಸಾಕ್ಷಿ.

ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಕೋಲುಶಾಂತಯ್ಯನು ಬಸವಣ್ಣನವರಲ್ಲಿ 'ಕೊಲುವಿಡಿದು ಮಾಲಗಾರ ನಿಯೋಗ' ನಡೆಸುತ್ತಿದ್ದನೆಂದು ಹೇಳಲಾಗಿದೆ. ಮಾಲಗಾರ ನಿಯೋಗ ಎಂದರೆ ಕೋಲುಕಾರಿಕೆ. ಹೀಗೆಂದರೆ ರಾಜನ ಆಸ್ಥಾನ, ದೇವಾಲಯ ಮುಂತಾದೆಡೆಗಳಲ್ಲಿ ದಂಡಾಧಿಕಾರಿಗಳಾಗಿ ಸೇವೆ ಸಲ್ಲಿಸುವ ಕೈಂಕರ್ಯವಿದ್ದು ಕೋಲುಶಾಂತಯ್ಯ ಒಬ್ಬ ಬೇಡ ಜಾತಿಯ ಶರಣನೆಂದು ಎಂ.ಬಿ.ನೇಗಿನಹಾಳ ಅವರು ಹೇಳಿದ್ದಾರೆ.[೭೭] ಇದು ಹೊಸ ಸಂಗತಿ. ಈ ಕೋಲುಶಾಂತಯ್ಯನ ಸಮಕಾಲೀನನಾದ ತಿಪ್ಪೇಸ್ವಾಮಿ ನಾಯಕನಹಟ್ಟಿಯಲ್ಲಿ ಜೀವೈಕ್ಯ ಸಮಾಧಿಯಾಗಿದ್ದಾನೆ. ಈತನು ಬೇಡ ಶರಣನೆಂದು ಬೇಡರು ಕರೆದುಕೊಂಡಿದ್ದಾರೆ. ಜನರ ರೂಢಿ ಮತ್ತು ಸಂಪ್ರದಾಯ ಹಾಗೂ ಜನಪದ ಗೀತೆಗಳಲ್ಲಿ ಈ ಸಂಗತಿ ಹೊರಬೀಳುತ್ತದೆ. ನಂತರ 'ಪಡಿದಾರಿ ಉತ್ತಣ್ಣ, ಹಾರಿ ಬಸವಯ್ಯ, ಉಗ್ಗಡಿಸುವ ಗಬ್ಬದೇವಯ್ಯ, ಮುಕ್ತಿನಾಥಯ್ಯ, ರಕ್ಕಸ ಬೊಮ್ಮಯ್ಯ ಅಂಥವರಲ್ಲಿ ಕೆಲವರು ಕೊಟ್ಟೂರು ಬಸವೇಶ್ವರ ಪುರಾಣದಲ್ಲಿ ಬರುವ ಮೋಳಿಗೆಯ ಚಿಕ್ಕಯ್ಯ ಕೂಡ ಇದೇ ಜನಾಂಗದವನು. ಈತ ಮೊದಲು ಬೇಟೆಯಾಡುವವನಾಗಿದ್ದು ತರುವಾಯ ಕಟ್ಟಿಗೆ ತರುವ ಕಾಯಕ ಕೈಗೊಂಡಿದ್ದನು.[೭೮]

ದಾಸಬೇಡರಾಗಿದ್ದವರು ಸಹ ನಾಯಕ ಎಂದು ಕರೆದುಕೊಂಡಿದ್ದಾರೆ. ಕನಕದಾಸರು ಈ ದಾಸಬೇಡರಿಗೆ ಸೇರಿದವರು. ೧೮ನೇ ಶತಮಾನದ ತಾಳೆಗರಿ ಪ್ರತಿಯಲ್ಲಿ ಕನಕನ ಜಾತಿ ಪ್ರಸ್ತಾಪಗೊಂಡಿದೆ. ಕನಕದಾಸರ ಬಗ್ಗೆ ಸಂಶೋಧನೆ ಮಾಡಿದ ದೇವೇಂದ್ರ ಮಾಧವನವರು 'ಕನಕದಾಸರು ಬೇಡ ಜನಾಂಗದವರು' ಎಂಬ ಪುಸ್ತಕ ಪ್ರಕಟಿಸಿದ್ದಾರೆ. ಬೇಡರಲ್ಲಿ ಬೋಡಿದಾಸರಿ, ಮುಂಡಾಸು ದಾಸರಿ, ಗಗ್ಗರಿದಾಸರಿ ಎಂಬ ಬೆಡಗುಗಳಿವೆ. ಇವರು ವೈಷ್ಣವ ಪಂಥಕ್ಕೆ ಸೇರಿದವರು.

ಲಕ್ಕಣ್ಣದಂಡೇಶನು ಶಿವತತ್ವಚಿಂತಾಮಣಿಯಲ್ಲಿ (ಲಕ್ಕಣ್ಣಹಳ್ಳಿ) ಸುಗ್ಗನಹಳ್ಳಿ ಮಹಲಿಂಗದೇವಯ್ಯ ಮತ್ತು ಚಂಪಾವತಿಯು ವೀರಬೇಡ ಜನಾಂಗದ ಶರಣರೆಂದು ತಿಳಿದುಬರುತ್ತದೆ. ಸೋಮನಾಥ ಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ಹೇಳಿರುವ ಮಾತಂಗತಮ್ಮ ಅಥವಾ ನನ್ನಯ್ಯನೆಂಬ ಶಿವಭಕ್ತನ ಹೆಸರನ್ನು ಕೂಡ ಇಲ್ಲಿ ಸ್ಮರಿಸಬಹುದು. ಸಿದ್ಧನಂಜೇಶನ ಗುರುರಾಜ ಚಾರಿತ್ರದಲ್ಲಿ ದೇವನಾಯಕನೆಂಬ ಶಿವಭಕ್ತನು ಅಂತ್ಯಜ ಜಾತಿಯಲ್ಲಿ ಹುಟ್ಟಿದ ಒಬ್ಬ ಚಿಕ್ಕ ರಾಜನೆಂದು ತಿಳಿಸಿದ್ದಾನೆ. ಈತನು ಬೇಡ ಜನಾಂಗದ ಶಿವಭಕ್ತನೆಂದು ಊಹಿಸಿದ್ದಾರೆ. ನಂತರ ಬ್ರಿಟೀಷರ ವರದಿ, ಇತರ ಕೃತಿಗಳಲ್ಲಿ ವೃತ್ತಿ, ಜಾತಿವರ್ಗೀಕರಣವನ್ನು ನೋಡಬಹುದು.

೧೮೯೩ರಲ್ಲಿನ ಬೇಡರ ಜನಸಂಖ್ಯೆ ಪ್ರಮಾಣ[೭೯] :

	ಧಾರವಾಡ	ಬೆಳಗಾವಿ	ವಿಜಾಪುರ	ಕಾನಾಡಾ
ಪು	೨೬,೩೪೪	೧೮,೬೪೯	೧೦೪೯೦	೫೨೧
ಸ್ತ್ರೀ	೨೭,೯೧೦	೧೮,೬೨೮	೧೦೭೭೨	೪೪೬
ಒಟ್ಟು	೫೪,೭೫೪	೩೭,೨೭೭	೨೧,೨೬೨	೯೬೭

ಇದೇ ಕಾಲಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ೩೪,೦೦೦, ಚಿತ್ರದುರ್ಗ ಜಿಲ್ಲೆಯಲ್ಲಿ ೬೫,೦೦೦ಕ್ಕೂ ಹೆಚ್ಚು ಬೇಡ ಜನಾಂಗದ ಜನಸಂಖ್ಯೆ ಇತ್ತು. ಎರಡನೇ ಹಿಂದುಳಿದ ವರ್ಗಗಳ ಆಯೋಗದಲ್ಲಿ ತಿಳಿಸಿರುವಂತೆ (ನಾಗನಗೌಡ ಸಮಿತಿ ವರದಿ) ಕರ್ನಾಟಕದ ಬೇಡರ ಜನಸಂಖ್ಯೆ ೧೦,೦೨,೧೦೦ ರಷ್ಟು ಅಂದರೆ ಶೇ.೪.೭೪ರಷ್ಟು ಇದ್ದಾರೆ. ಶೈಕ್ಷಣಿಕ ಶೇ.೧.೨ರಷ್ಟು ಮುಂದುವರೆದಿದ್ದರು. ಪ್ರಸ್ತುತ ಬೇಡ, ನಾಯಕರ ಜನಸಂಖ್ಯೆ ೬೫ಲಕ್ಷ ಎಂದು ತಿಳಿದು ಬರುತ್ತದೆ. ಸಾಮಾನ್ಯವಾಗಿ ಇಂದು ಕರ್ನಾಟಕದ ಬೇಡರನ್ನು ವಿವಿಧ ವೃತ್ತಿ, ವರ್ಗ, ಪಂಗಡಗಳಿಗೆ ತಕ್ಕಂತೆ ವರ್ಗೀಕರಿಸಲಾಗಿದೆ. ಬಹುತೇಕ ಕನ್ನಡ ಕಾವ್ಯಗಳಲ್ಲಿ ಬೇಟೆ ಮುಖ್ಯವಾಗಿ ಕಂಡುಬಂದರೂ, ಇದಕ್ಕೆ ಪೂರಕವಾದ ಇತರ ಕಸಬುಗಳಿದ್ದವು. ಆಧುನಿಕವಾಗಿ ಕೃಷಿಯನ್ನವಲಂಬಿಸಿದ ಬೇಡರು, ಇತರ ಕ್ಷೇತ್ರಗಳಿಗೂ ಪದಾರ್ಪಣೆ ಮಾಡಿದ್ದಾರೆ.

ಟಿಪ್ಪಣಿಗಳು

೧. ಕನ್ನಡದಲ್ಲಿ ಬೇಟೆ ಸಾಹಿತ್ಯ, ೧೯೯೫, ಪು.೮
೨. ನೋಡಿ: ಕರ್ನಾಟಕ ಚರಿತ್ರೆ ಸಂಪುಟ-೧, ಪು.೯೫
೩. ಇಂಟರ್ ನ್ಯಾಷನಲ್ ಎನ್‌ಸೈಕ್ಲೊಪಿಡಿಯಾ ಆಫ್ ದಿ ಸೋಷಿಯಲ್ ಸೈನ್ಸಸ್, ಸಂ ೭, ೧೯೬೮, ಪು.೯
೪. ಅದೇ: ಪು. ೯
೫. ಅದೇ: ಪು. ೧೦
೬. ಅದೇ: ಪು. ೧೧
೭. ಅದೇ:ಪು. ೧೩
೮. ಅದೇ : ಪು.೧೫
೯. ಅದೇ: ಪು. ೧೭
೧೦.ಅದೇ: ಪು.೧೮, ಭಾರತದಲ್ಲಿಯೂ ಸಹಾ ರಾಗಿ, ಮೆಕ್ಕೇಜೋಳ, ಅವರೆ ಹುರುಳಿಗಳಿಗೆ ದೀರ್ಘಕಾಲದ ಇತಿಹಾಸವಿದೆ.
೧೧. ಅದೇ: ಪು. ೨೨
೧೨. ಅದೇ: ಪು. ೨೨
೧೩. ದಿ ಸ್ಟೋನ್ ಏಜ್ ಇನ್ ಇಂಡಿಯ, ೧೯೮೮, ಪು.೧೧
೧೪. ಅಂಥ್ರೋಪಲಾಜಿ : ದಿ ಸ್ಟಡಿ ಆಫ್ ಮ್ಯಾನ್, ೧೯೭೯, ಪು.೨೬೯
೧೫. ವಿಲಿಯಂ ಡಿ. ಹಾಲ್ಸ್ : ಮೆರಿಟ ಸ್ಟೂಡೆಂಟ್ಸ್ ಎನ್‌ಸೈಕ್ಲೋಪಿಡಿಯಾ, ಪು. ೬
೧೬. ದಿ ನ್ಯೂ ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕಾ, ವಾ ೬, ೧೯೯೨, ಪು. ೧೬೦
೧೭. ಅದೇ: ಪು.೧೬೦
೧೮. ಅದೇ: ಪು.೧೬೦
೧೯. ನೋಡಿ ಅದೇ: ಪು. ೧೬೦
೨೦. ಚಿಲ್ಡ್ರನ್ಸ್ ಬ್ರಿಟಾನಿಕಾ, ವಾ-೯, ಪು. ೨೨೦
೨೧. ಟಿಮ್ ಇಂಗೊಲ್ಡ್ : ಹಂಟರ್ಸ್, ಪೆಸ್ಟ್ರಲಿಸ್ಟ್ ಅಂಡ್ ರೆಂಚರ್ಸ್, ೧೯೮೮, ಪು. ೧೪೪
೨೨. ಚಾರ್ಲ್‌ಸ್ ಅನ್ಸಡೆಲ್ (ಎಡಿ) : ದಿ ಮಾಡ್ರನ್ ಎನ್‌ಸೈಕ್ಲೋಪಿಡಿಯಾ ಆಫ್ ಯೂನಿವರ್ಸಲ್ ಇನಫರ್‌ಮೇಷನ್, ೧೯೯೦, ಪು. ೪೩
೨೩. ಚಿಲ್ಡ್ರನ್ಸ್ ಎನ್‌ಸೈಕ್ಲೋಪಿಡಿಯಾ, ವಾ- ೯ ಪು. ೨೨೧
೨೪. ಎಚ್. ಶಾಂತವೀರಪ್ಪ : ಹಿಮಖಂಡದಲ್ಲಿ ಮಾನವ, ೧೯೯೧, ಪು. ೧-೧೧
೨೫. ನೋಡಿ: ಪಿ.ಟಿ.ಶ್ರೀನಿವಾಸ ಅಯ್ಯಂಗಾರ್: ದಿ ಸ್ಟೋನ್ ಏಜ್ ಇನ್ ಇಂಡಿಯಾ, ಪು. ೧೧

೨೬. ಕರ್ನಾಟಕ ಚರಿತ್ರೆ ಸಂಪುಟ-೪, ಪು.೨೮೮

೨೭. ಕನ್ನಡದಲ್ಲಿ ಬೇಟೆ ಸಾಹಿತ್ಯ, ಪು.೧೬

೨೮. ಕೆ.ಎಸ್.ಸಿಂಗ್ : ದಿ ಷೆಡ್ಯುಲ್ಡ್‌ಟ್ರೈಬ್ಸ್, ಪು.೧೦೭+೧೧೬೯

೨೯. ಎಲ್.ಕೆ.ಅಯ್ಯರ್ : ದಿ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್, ಪು. ೧೪೭

೩೦. ನೋಡಿ: ಕೆ.ಎಸ್.ಸಿಂಗ್ : ದಿ ಷೆಡ್ಯುಲ್ಡ ಟ್ರೈಬ್ಸ್, ಪು.೪

೩೧. ನೋಡಿ: ಎಸ್.ಸಿ. ರಾಯ್‌ಚೌಧರಿ : ಸೋಷಿಯಲ್ ಕಲ್ಚರಲ್ ಅಂಡ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ೧೯೯೫, ಪು. ೭

೩೨. ನೋಡಿ: ಜ.ಪಿ.ಸಿಂಗ್ : ಕಿರಾತಾಸ್ ಇನ್ ಏನ್ಷಿಯಂಟ್ ಇಂಡಿಯಾ, ೧೯೯೦, ಪು.೭-೪೬೫

೩೩. ಸಮಗ್ರ ಭಾರತ ದರ್ಶನ, ಪು.೧೨

೩೪. ಕನ್ನಡದಲ್ಲಿ ಬೇಟೆ ಸಾಹಿತ್ಯ, ಪು. ೧೦

೩೫. ಆರ್.ಎಸ್.ಶರ್ಮಾ: ಪ್ರಾಚೀನ ಭಾರತ, ೧೯೯೭, ಪು.೩೩

೩೬. ಅದೇ: ಪು.೩೭

೩೭. ಅದೇ: ಪು.೩೯

೩೮. ಅದೇ: ಪು.೩೯

೩೯. ಅದೇ: ಪು.೪೫

೪೦. ಸಮಗ್ರ ಭಾರತ ದರ್ಶನ, ಪು.೧೭

೪೧. ಆರ್.ಎಸ್. ಶರ್ಮಾ: ಪ್ರಾಚೀನಭಾರತ, ೧೯೯೭, ಪು.೮೭

೪೨. ಅದೇ: ಪು. ೭೦

೪೩. ಅದೇ: ಪು.೯೬

೪೪. ಅದೇ: ಪು. ೧೨೧

೪೫. ಅದೇ: ಪು.೧೩೯

೪೬. ಅದೇ: ಪು. ೧೩೭

೪೭. ಅದೇ: ಪು. ೧೪೦

೪೮. ಅದೇ: ಪು. ೧೪೮

೪೯. ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಪು. ೨೯೨

೫೦. ಜನ್ನನ ಯಶೋಧರ ಚರಿತೆ, ೧೯೭೭, ಪು. ೧೭

೫೧. ಕುಮ್ಮಟ ಕೇಸರಿ, ೧೯೬೩, ಪು. ೭೭

೫೨. ರಾಮನಾಥ ಚರಿತೆ, ೪-೭೭೬, ಪು. ೮೦

೫೩. ಕರ್ನಾಟಕ ಚರಿತ್ರೆ ಸಂಪುಟ-೩, ಪು. ೩೬೨

೫೪. ಅದೇ: ಪು. ೩೬೬

೫೫. ಅದೇ: ಪು. ೩೭೦

೫೬. ರಾಮನಾಥ ಚರಿತೆ, ೨೭-೩೩, ೪

೫೭. ಎ.ಕ.೧೧, ಎಂ.ಕೆ.೩೨, ೧೨೫

೫೮. ಇತಿಹಾಸ ದರ್ಶನ-೧೧, ಪು. ೬೧

೫೯. ಮೊಲಕೊಡ್ಡಿದ ಬಲೆಯೊಳ್ ಮೃಗರಾಜಂ ತೊಡರ್ಗುಮೆ, ಶಾಂತಿಪುರಾಣ, ೩-೯೩

೬೦. ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿನ ಜನ ಜೀವನಚಿತ್ರ, ಪು. ೪೯೩

೬೧. ಪ್ರವಾಸಿಕಂಡ ಇಂಡಿಯಾ, ಸಂ.೭, ಪು. ೧೫೮

೬೨. ಸೊಬಗಿನ ಸೋನೆ ೨೩-೧೭, ಬಲೆಯಿಂದ ಜಂಕೆಯನ್ನು ಹಿಡಿಯುವವರ ಕೇರಿಗಳಿದ್ದವು

೬೩. ಮಹಾದೇವಿಯಕ್ಕ ಪುರಾಣ, ೩೧-೨೯

೬೪. ಮೋಹನತರಂಗಿಣಿ, ೧೯-೧೪

೬೫. ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿನ ಜನಜೀವನ ಚಿತ್ರ, ಪು.೨೭

೬೬. ಸೊಂಡೂರ ಶ್ರೀಕುಮಾರಸ್ವಾಮಿ ಚರಿತ್ರೆ, ಪು.೧೧೪-೧೧೫

೬೭. ನೋಡಿ: ಮುನ್ನೆಡೆಯ ಕೂಡ್ಲಿಗಿ, ಪು. ೨೭

೬೮. ಕನ್ನಡದಲ್ಲಿ ಬೇಟೆ ಸಾಹಿತ್ಯ, ಪು. ೨

೬೯. ಕನ್ನಡದಲ್ಲಿ ಬೇಟೆ ಸಾಹಿತ್ಯ, ಪು.೬೫

೭೦. ವಾಲ್ಮೀಕಿ ವಂಶಪಾವನಿ, ಪು.೩೧

೭೧. ಅದೇ : ಪು.೩೨

೭೨. ಅದೇ : ಪು.೩೨

೭೩. ಜ.ವರದರಾಜರಾವ್ : ಕುಮಾರರಾಮನ ಸಾಂಗತ್ಯಗಳು, ಪು.೧೮೩

೭೪. ಅನ್ವಯಿಕ ಜಾನಪದ, ಪು.೧೮

೭೫. ವಾಲ್ಮೀಕಿ ಜ್ಯೋತಿ, ೧೯೮೯, ಪು. ೨೬

೭೬. ಧರ್ಮಾಮೃತ, ಪು. ೬-೧೩೨

೭೭. ವಾಲ್ಮೀಕಿ ಜ್ಯೋತಿ, ೧೯೮೯, ಪು. ೨೭

೭೮. ಅದೇ : ಪು. ೨೭, ಹೀಗೆ ಬೇಡರಲ್ಲಿ ಶರಣರು ಕಂಡುಬರುವರು. ಉದಾ : ಜಗಳೂರು ಪಾಪನಾಯಕ

೭೯. ಬಾಂಬೆ ಕರ್ನಾಟಕ ಗ್ಯಾಸೆಟಿಯರ್, ೧೯೫೯

* * *

ಅಧ್ಯಾಯ-೩

ಬೇಡ ಜನಾಂಗದ ಚಾರಿತ್ರಿಕ ಹಿನ್ನೆಲೆ

ಬೇಡ ಜನಾಂಗದ ಚಾರಿತ್ರಿಕ ಹಿನ್ನೆಲೆ

ಈ ಅಧ್ಯಾಯದಲ್ಲಿ 'ಬೇಡ' ಪದದ ನಿಷ್ಪತ್ತಿ, ಅರ್ಥ, ಮೂಲ, ವಿಸ್ತರಣೆ, ಜನಾಂಗದ ಲಕ್ಷಣಗಳು ವಾಸಿಸುವ ಪರಿಸರ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿ-ಗತಿ ಮೊದಲಾದ ಅಂಶಗಳನ್ನು ವಿಶ್ಲೇಷಿಸಲಾಗುತ್ತದೆ.

'ಮಾನವನ' ಉಗಮದ ನಂತರದಲ್ಲಿ ಎಲ್ಲರೂ ಬೇಟೆಗಾರರೇ ಆಗಿದ್ದರು. ನಂತರ ಒಂದೊಂದು ಜನಸಮುದಾಯ ಗಳು ವಿಕಾಸವನ್ನು ಕಂಡುಕೊಂಡು ಶ್ರೇಣೀಕೃತವಾಗಿ ಬೆಳೆಯಲಾರಂಭಿಸಿದವು. ಇವರಲ್ಲಿ ಬೇಡರ ಇತಿಹಾಸವು ದಾಖಲಾಗಿಲ್ಲವಾದ್ದರಿಂದ ತಮ್ಮ ಪ್ರಾಚೀನತೆಯನ್ನು ಮೌಖಿಕವಾಗಿ ವ್ಯಕ್ತಪಡಿಸುವುದುಂಟು. ಆದಿಯಿಂದಲೂ ಬೇಡರು ಬೆವರು ಸುರಿಸಿ ಆಹಾರ ಪಡೆಯುತ್ತಿದ್ದಾರೆ. ಧೈರ್ಯ, ಶೌರ್ಯ, ರಕ್ತ ಧಮನಿಗಳಲ್ಲಿನ ವಿಶೇಷಗುಣ ಹಾಸುಹೊಕ್ಕಾಗಿ ಬಂದಿದೆ. ಮಾನವ ಜನಾಂಗಗಳಲ್ಲಿ ಬೇಡರು ಪ್ರೊಟೊ ಆಸ್ಟ್ರಲಾಯಿಡ್ ಜನಾಂಗಕ್ಕೆ ಸೇರಿದ್ದು, ಭಾರತದಲ್ಲಿ ಇವರು ಮೂಲ ದ್ರಾವಿಡರಾಗಿದ್ದಾರೆ. ಬೇಡರು ಆದಿ ಜನಸಮುದಾಯಕ್ಕೆ ಸೇರಿದ್ದು, ಹಾವನೂರು ವರದಿ ಪ್ರಕಾರ ಕರ್ನಾಟಕದಲ್ಲಿ ೧೭ ಪರ್ಯಾಯ ಹೆಸರುಗಳಿಂದ ಕರೆಯುತ್ತಾರೆ.

ಭಾರತ ಉಪಖಂಡದಲ್ಲಿ ಬೇಡ ಬುಡಕಟ್ಟು ಸಮುದಾಯ ಕುರಿತಂತೆ ಸಮಗ್ರವಾದ ಸಂಶೋಧನೆ ನಡೆದಿಲ್ಲ. ಬ್ರಿಟಿಷರ ಸಂದರ್ಭದಲ್ಲಿ ಸ್ಥಿತಿ-ಗತಿ ಬಗ್ಗೆ ಬರೆವಣಿಗೆಗಳಿವೆ. ಆನಂತರ ಅಲ್ಲಲ್ಲಿ ಉಲ್ಲೇಖಗಳನ್ನು ಬೇಡಜನಾಂಗದ ಸಂಶೋಧಕರಲ್ಲದೇ ಇತರರು ಕೃಷಿಮಾಡಿದ್ದಾರೆ. ಬೇಟೆಯಿಂದ ಜೀವನಾರಂಭಿಸಿದ ಬೇಡರ ಬದುಕು ವಿವಿಧ ಮಜಲುಗಳಿಂದ ಕೂಡಿದೆ.

'ಬೇಡ' ಎಂದರೆ ಬೇಟೆಗಾರ ಎಂದರ್ಥ. ಬೇಟೆಯನ್ನು ವೃತ್ತಿಯಾಗಿ ಉಳ್ಳ ಭಿಲ್ಲ ಜಾತಿಗೆ ಸೇರಿದವನು ಎಂದಾಗುತ್ತದೆ. ಬೇಟೆಯನ್ನು ತಮಿಳಿನಲ್ಲಿ ವೇಟ್ಟೈ ಎಂದು, ತೆಲುಗಿನಲ್ಲಿ ವ್ಯಾಟ(ಯಾಟ)ಎಂದು ಕರೆದಿದ್ದಾರೆ. ಬೇಟೆಯಾಡುವರನ್ನು ಬೇಡರು ಎಂದು ಕರೆದಿರುವುದು ವೃತ್ತಿಯಿಂದಲೇ ಇರಬೇಕು. ಬೇಟೆಗೂ ಬೇಡರಿಗೂ ಅವಿನಾಭಾವ ಸಂಬಂಧವಿದೆ. ಬೇಡರ ಅರ್ಥವನ್ನು ಬೇ+ಡರ್ = ಬೇಡರ್ ಯಾವುದಕ್ಕೂ ಅಂಜದವರು ಎನ್ನುತ್ತಾರೆ. ಇವರಿಗೆ ಪುಳಿಂದ, ಬಿಲ್ಲ, ಕಿರಾತ, ವ್ಯಾಧ, ವನಚರ, ಶಬರ, ವಾಲ್ಮೀಕಿ, ನಿಷಾದ, ತಳವಾರ, ನಾಯಕ, ಕಣ್ಣಪ್ಪನ ಮಕ್ಕಳು ಇತ್ಯಾದಿಯಾದ ಪರ್ಯಾಯ ಹೆಸರುಗಳಿವೆ. ಸಂಸ್ಕೃತದ ವ್ಯಾದ ಕನ್ನಡದಲ್ಲಿ ಬ್ಯಾಡ > ಬೇಡ ಆಗಿರಬೇಕು. ಹೀಗೆ ಬೇಂದ್, ವೇದನ್, ಬೋಯ ಪರ್ಯಾಯ ಜಾತಿಪದಗಳು ಕಂಡುಬರುತ್ತವೆ. ಇವುಗಳಲ್ಲಿ ಕಿರಾತ ಹಂತ ಮೊದಲನೆಯದು. ಇಲ್ಲಿ ಅನಾಗರಿಕವಾಗಿ ವರ್ತಿಸುತ್ತಿದ್ದು ಹಿಂಸೆ, ಕಿರುಕಳ ಕೊಡುತ್ತಿದ್ದರು. ಈ ಪ್ರವೃತ್ತಿಯನ್ನು ಇಂದಿನ ರಾಜಕೀಯ ಇತರ ವ್ಯಕ್ತಿಗಳಿಗೆ ಕಿರಾತಕನಂತೆ ಮಾಡುವೆಯೆಂದು ಹೋಲಿಸುತ್ತಾರೆ. ಕಿರಾತಕರು ನವಿಲುಗರಿ, ಮರದತೊಗಟೆ ಇತ್ಯಾದಿ ಧರಿಸುತ್ತಿದ್ದರು. ಶಬರರು-ತಳಿರಸೊಪ್ಪು, ವ್ಯಾಧ- ಭರ್ಜಿಗಳನ್ನು, ಪುಳಿಂದರು- ಕತ್ತಿ, ಭರ್ಜಿಗಳನ್ನು, ಲುಬ್ದರು- ಕುಡಗೋಲು, ಬೆಂಚರು-ಕತ್ತಿ, ಗುರಾಣಿ, ಬಲ್ಲರು-ಬಿಲ್ಲು ಬಾಣ, ರಾವಲ ಬಲ್ಲರು- ಸಾವಿರ ಕುದುರೆ ಸೈನ್ಯದ ಅಧಿಪತ್ಯ ವಹಿಸುತ್ತಿದ್ದರು.

ಸಾಂಸ್ಕೃತಿಕ ಹಿನ್ನೆಲೆ :

ತಮ್ಮ ಹಸಿವಿನ ದಾಹಕ್ಕಾಗಿ ತಲೆಮಾರುಗಳಿಂದ ಬೇಟೆಯನ್ನು ವೃತ್ತಿಯನ್ನಾಗಿಸಿಕೊಂಡು ಬದುಕುಳಿದವರೇ ಬೇಡರು. ಬಿಲ್ಲು ಬಾಣಗಳನ್ನು ಹಿಡಿದು ಕಾಡುಪ್ರಾಣಿಗಳನ್ನು ಬೇಟೆಯಾಡಿ ಜೀವಿಸುತ್ತಿದ್ದರು. 'ಬೇಡರು ಶೌರ್ಯ, ಸಾಮರ್ಥ್ಯ, ಸ್ವಾಮಿನಿಷ್ಠೆಗೆ ಹೆಸರಾದವರು. ಆಗಿನ ಮಹಾರಾಜರು ತಮ್ಮ ಸೈನ್ಯದಲ್ಲಿ ಬಿಲ್ಲುಗಾರ ತಂಡದವರ ನಾಯಕರನ್ನಾಗಿ ನೇಮಿಸಿಕೊಳ್ಳುತ್ತಿದ್ದರು.[೧] ಬೇಟೆಯನ್ನು ನಂಬಿ ಬದುಕುವ ಬೇಡರು ಕರ್ನಾಟಕದ ಮೂಲ ನಿವಾಸಿಗಳು. ಕಾಡು, ಬೆಟ್ಟ, ಗುಡ್ಡಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಪ್ರತಿದಿನ ಬೇಟೆಗೆ ಬಿಲ್ಲು, ಬಾಣ, ಭರ್ಜಿಗಳ, ಬೇಟೆಯ ತಂತ್ರದಿಂದ ಬಲೆಗಳನ್ನು ಬಳಸಿ ಪ್ರಾಣಿಗಳನ್ನು ಸೆರೆಹಿಡಿದು ಅಥವಾ ಕೊಂದು ತಿಂದು ಜೀವಿಸುತ್ತಾರೆ.[೨] ನಾಯಕ ಅಥವಾ ಬೇಡರು ಆದಿಕಾಲದಿಂದಲೂ ಪರಾಕ್ರಮಶಾಲಿಗಳು, ಶೂರರೂ,ಸ್ವಾಭಿಮಾನಿಗಳು, ಯಾವುದಕ್ಕೂ ಅನ್ಯರನ್ನು ಯಾಚಿಸುವುದಿಲ್ಲದವರು. ಧೈರ್ಯ, ಶೌರ್ಯ, ರಕ್ತ ದಮನಿಗಳಲ್ಲಿ ಹರಿಯುತ್ತದೆ. ಈ ಜನಾಂಗದ ಇತಿಹಾಸ ತುಂಬಾ ಹಳೆಯದಾಗಿದ್ದು, ಬೇಡರೆಂದರೆ ಕರ್ನಾಟಕದ ರಜಪೂತರೆಂದು ಕರೆದಿದ್ದಾರೆ. ಏಕೆಂದರೆ ಕ್ಷಾತ್ರ ತೇಜಸ್ಸಿನಲ್ಲಿ 'ಉತ್ತರದಲ್ಲಿ ರಜಪೂತರು, ಮಧ್ಯದಲ್ಲಿ ಮರಾಠರು, ದಕ್ಷಿಣದಲ್ಲಿ ನಾಯಕರು' ಪ್ರಮುಖರಾಗಿ ಕಂಡುಬರುತ್ತಾರೆ. ಈ ಬೇಡರು ಮಹಿಳೆಯರ ಮಾನರಕ್ಷಣೆ, ಪ್ರಜೆಗಳ ಪ್ರಾಣರಕ್ಷಣೆ, ಹಿಂದೂ ಧರ್ಮದ ರಕ್ಷಣೆಗೆ ಪ್ರಾಣವಿಟ್ಟ ಜನಾಂಗ, ಯೋಧರಾಗಿ ದೇಶರಕ್ಷಣೆ, ಧರ್ಮರಕ್ಷಣೆ ಮಾಡಿರುವುದು ಸಿಮೋಲ್ಲಂಘನೆಯಾಗಿದೆ.[೩]

ಬೇಡ ಜನಾಂಗವನ್ನು ಕುರಿತು ಅಧ್ಯಯನ ಮಾಡುವಾಗ ಇತಿಹಾಸ ಕೆದಕುವುದು ಬಹು ದೊಡ್ಡ ಸಾಹಸ. ಇವರ ಉಲ್ಲೇಖ, ಪ್ರಸ್ತಾಪ, ಪ್ರಸಂಗಗಳು ಇಲ್ಲಿ ವಿಶ್ಲೇಷಣೆಗೊಳಪಡುತ್ತವೆ. 'ಕರ್ನಾಟಕದ ಬೇಡರು ಸೇರಿದಂತೆ ಆಧುನಿಕ ಕಾಲಕ್ಕೆ ಮಧ್ಯಭಾರತದ ಥಕಾಯಿತ ಜನಾಂಗವನ್ನು ಅಥವಾ ಅಸ್ಸಾಮಿನ ನಾಗಾ ಜನರನ್ನು ಬಹುಮಟ್ಟಿಗೆ ಹೋಲುವ ಕೆಲವು ಜನಾಂಗಗಳು ಪ್ರಾಚೀನ ಕರ್ನಾಟಕದಲ್ಲಿದ್ದವು. ಇವರೇ ಗುಡ್ಡ, ಬೆಟ್ಟ, ಕಾಡುಗಳಲ್ಲಿ ವಾಸಿಸುತ್ತಿದ್ದ ಬೇಡರು, ಮಲೆಪರು ಮತ್ತು ಕುರುಬರು. ಇವರಲ್ಲಿ ಬೇಡರು ಬೇಟೆಗಾರರಾಗಿದ್ದು, ರಾಜಕೀಯವಾಗಿ ತೊಂದರೆ ಕೊಡುತ್ತಿದ್ದ ಜನಾಂಗವಿದು ಎಂದು ಎಂ. ಚಿದಾನಂದಮೂರ್ತಿ ಹೇಳಿದ್ದಾರೆ.[೪]

ಕನ್ನಡನಾಡಿನ ಅನೇಕ ಶಾಸನಗಳಲ್ಲಿ ಬೇಡರ ಉಲ್ಲೇಖ ಕಂಡುಬರುತ್ತದೆ. ಬೇಡರನ್ನು ಶಾಸನಗಳಲ್ಲಿ ಮಳೆಪರೆಂದು ಕರೆದಿದ್ದಾರೆ. ಈ ಬುಡಕಟ್ಟಿನಲ್ಲಿ 'ಬೇಡರಪಡೆ'ಗಳು ಬಂದು ತುರುಗಳನ್ನು ಅಪಹರಿಸಿದ ನಿದರ್ಶನಗಳು ಶಾಸನಗಳಲ್ಲಿವೆ.[೫]

ಬೇಡರ ಉಲ್ಲೇಖ ಬರುವ ಮೊದಲ ಶಾಸನವೆಂದರೆ ಗದ್ದೆಮನೆ (ಶಿವಮೊಗ್ಗ ಜಿ. ಸಾಗರ. ತಾ||) ಶಾಸನ. ೭ನೇ ಶತಮಾನದಿಂದ ಇವರ ಪ್ರತ್ಯೇಕ ರಾಜ್ಯಗಳೇ ಇದ್ದುವೆಂದು ಇದರಿಂದ ತಿಳಿದು ಬರುತ್ತದೆ : 'ಸ್ವಸ್ತಿಶ್ರೀ ಶೀಲ ಆದಿತ್ಯನ್ ದಿಶಾವನ್ ಭಾರ್ಗವನ್ ಅಗಳ ಕಣ್ಣನ್ ಪೇರಾಳ್ಕೆವರೆ ಪೆಟ್ಟಣಿಸತ್ಯಾಂಕನ್ ಅಟ್ಟುಳ್ವಭಟನ್, ಬೆದರೆ ಮಹೇನ್ದ್ರನ್ ಬೇಡರಾಯರ ಮಲಪ್ಪರ್ ಕಾಳೆಗದೊಳೆವಿರಿದು ಸ್ವರ್ಗ್ಗಾಲಯಕ್ಕೇರ್ದ್ದಿದನ್' ಎಂದು ತಿಳಿದುಬರುತ್ತದೆ. ಬೇಡರಾಯ ಎಂದರೆ ಬೇಡರ ರಾಜನ ಉಲ್ಲೇಖವಿದೆ. ಶೀಲಆದಿತ್ಯ ಕನೂಜಿನ ಪ್ರಸಿದ್ಧ ದೊರೆ ಹರ್ಷವರ್ಧನ ಎನ್ನಲಾಗಿದೆ. ಪೆಟ್ಟಣಿ ಸತ್ಯಾಂಕ ಅಥವಾ ಬೇಲಳೆಯ ಮಾಳನೆಂಬುವನು ಬೇಡರಾಯರು ಮತ್ತು ಮಲೆಪರ ಜತೆಗಿನ ಕಾಳಗದಲ್ಲಿ ಮಡಿದು ವೀರಸ್ವರ್ಗ ಪಡೆದನೆಂಬುದು, ಬೇಡರ ರಾಜ್ಯಗಳಿದ್ದುದು, ಶಾಸನದ ಅಭಿಪ್ರಾಯ ಎಂದು ಎಂ.ಬಿ.ನೇಗಿನಹಾಳ ಅವರು ಹೇಳಿದ್ದಾರೆ.[೬] ಇವರನ್ನು ಮಲೆಪರು, ಮಲೆವರ್ ಮುಂತಾದ ಹೆಸರುಗಳಿಂದ ಕರೆದಿದ್ದಾರೆ.

'ಹೊಯ್ಸಳರು ತಮ್ಮನ್ನು 'ಮಲೆಪರೊಳ್ ಗಂಡ' ಎಂದು ಕರೆದುಕೊಂಡಿದ್ದಾರೆ. ಮೂಲಪುರುಷನಾದ ಸಳನು ಬೇಟೆಯಾಡಿ ಬಂದ ತರುವಾಯ ವಾಸಂತಿಕಾದೇವಿಯ ಗುಡಿಯಲ್ಲಿ ಏರಿಬಂದ ಹುಲಿಯನ್ನು ಕೊಂದನೆಂದು ಹೇಳಿಕೊಂಡಿರುವುದು ಇವರು ಬೇಡರೇ ಎಂದು (ಯಾದವರು ಎಂದು ಕರೆಯಲಾಗುತ್ತದೆ) ಸಂಕೇತಿಸುತ್ತದೆ. ಆದರೂ ಬುಡಕಟ್ಟುಗಳಾದ ಇವರನ್ನು 'ಮಹೇಂದ್ರ ಎಂಬುವನು ಬಹುಶಃ ಪಲ್ಲವರ ೧ನೇ ಮಹೇಂದ್ರವರ್ಮನು ಶಿಲಾದಿತ್ಯನೊಡನೆ ಹೋರಾಡುವಾಗ ಬೇಡರನ್ನು, ಮಲೆಪರನ್ನು ತನ್ನ ಸಹಾಯಕ್ಕೆ ತೆಗೆದುಕೊಂಡನೆಂದು ಶಾಸನವೊಂದರಲ್ಲಿ ಉಲ್ಲೇಖಿತಗೊಂಡಿದೆ.[೨] ಈ ಬೇಡರು ಕಾಡಿನ ಅಂಚುಗಳಲ್ಲಿಯೂ, ಬಯಲುನಾಡಿನ ಊರುಗಳಲ್ಲಿಯೂ ವಾಸಿಸುತ್ತಿದ್ದುದುಂಟು. ಈ ಬೇಡರಪಡೆಗಳಂತೆ ಕುರುಂಬರಪಡೆಗಳು ಇದ್ದಂತೆ ಆಧಾರಗಳಿಲ್ಲ. ಬೇಟೆಯಲ್ಲಿ ನಿಷ್ಣಾತನಾಗಿದ್ದ ತಿಪ್ಪನಾಯಕನನ್ನು ಕೆಲವು ಶಾಸನಗಳು ಉಲ್ಲೇಖಿಸಿವೆ.

ಬೇಡರನ್ನು ಉಲ್ಲೇಖಿಸುವ ಶಾಸನಗಳಿರುವುದು ಹೆಚ್ಚಾಗಿ ಮಲೆನಾಡಿನಲ್ಲಿ. ಇವರು ವಿವಿಧ ರೀತಿಯಲ್ಲಿ ವರ್ತಿಸಿದ, ಹೋರಾಡಿದ ವಿರೋಚಿತ ಎಷ್ಟೋ ಸಂದರ್ಭಗಳು ಮರೆಯಾಗಿದ್ದು, ಕೆಲವು ಮಾತ್ರ ಶಾಸನಗಳಲ್ಲಿವೆ. 'ಚೀಲಗೌಡನೆಂಬುವನು, ಕಲ್ಲಕೆರೆಯ ಬೇಡರಿರೆದು ಹೋಹಲಿ ಹುಯ್ಯಲ ಹರಿದು ಆ ಬೇಡರನ್ತಾಗಿ. ತುರುವಂಮಗುಳ್ಚುಯ ತುಳಬಳ ಪರಾಕ್ರಮನಾಗಿ ತಂನ ಸಾಹಸದಿಂ ಖರ್ಗ್ಗಖೇಠಕ ದೋಳು ಕಿರಾತ ಪಡೆಯಂ ಕೊಂದು ಆಗ್ರಾಮ ಸಂತೋಷಂ ಮಾಡಿ ಬಂದು ಜನ ಪೂಜಿತನುಮಪ್ಪ ಚೀಲಗಉಡನು ಬೀರ ಶ್ರೀಯಂ ತಾಳ್ದು!! ಕಲ್ಲಕೆರೆಯಲ್ಲಿ ತುರುವಂ ಬಲ್ಲಣ ಕಲಿ ಛಲಿನೆಚರರ್ಪ್ಪರಿಯಿಸೆ, ತಳಲ್ಲದಿಡೆ ಪುಯ್ಯಲಂ ಕೀಳ್ವಲ್ಲಿಯ ಪೂರಮಟ್ಟು ಕೋಳ, ಕೆರೆಯಧಿನಾಥಂ ತುರುಗೊಳೊಳು. ಪೆಣ್ಬುಯ್ಯಲೊಳೆರೆವಸದೊಳು ನೆಂಟರೆಡೆರೋ ಳಣದಣ್ಣ ತಳಚೀಲಗಉಡಂ ನೆರೆಗಲಿ ತರೆಸಂದು ತಾಗಿದಂ ವನ ಭರತಂ' ಎಂದು ವೀರನ ಪರೋಪಕಾರ ಮನೋಧರ್ಮವನ್ನು ಕೀರ್ತಿಸುವ ವಿಷಯ ವೀರಗಲ್ಲೊಂದರಿಂದ ತಿಳಿದುಬರುತ್ತದೆ. ಬೇಡರು ಕಳ್ಳರೆಂಬುದಕ್ಕೆ ಮತ್ತೊಂದು ನಿದರ್ಶನ : ' ಚೀಲಗವುಡ ಎಂಬುವನು ಒಂದು ಊರಿನ ಹಸುಗಳನ್ನು ಬೇಡರು ಹೊಡೆದುಕೊಂಡು ಹೋಗುವಾಗ ಅವರನ್ನು ಹಿಂಬಾಲಿಸಿ ಸದೆಬಡಿದು ತುರುಗಳನ್ನು ಹಿಂತಿರುಗಿಸಿ ಆ ಗ್ರಾಮವನ್ನು ಸಂತೋಷ ಪಡಿಸುವುದು ತಿಳಿಯುತ್ತದೆ'.[೮]

ಮಧ್ಯಕಾಲದಲ್ಲಿನ ಬೇಡರ ಉಪಟಳವಿರುವ ಶಾಸನ ವೀರಗಲ್ಲಿನ ವಿವರ ತಿಳಿದುಬರುತ್ತದೆ. ಮೇಲಿನಂತೆ ಬೇಡರು ಮಾಡುವ ಉಪಟಳವನ್ನು ಸಹಿಸದೆ ಅವರನ್ನು ಶಿಕ್ಷಿಸಬೇಕೆಂದು ಅರಸನು ವೀರಂಣ ಒಡೆಯರನ್ನು ಕಳುಹಿಸಿದಾಗ ತಿರುಕಗವುಡನು 'ನಾವು ಆಡಿದ ಭಾಷೆಗೆ ತಪ್ಪುವರಲ್ಲ ಶ್ರೀವೀರ ಪ್ರತಾಪ ಹರಿಹರ ಮಹಾರಾಜರು, ಶ್ರೀ ಮನ್ಮಹಾಪ್ರಧಾನ ಗುಂಡಪ ಡಂಣಾಯಕರು ಮೂವರ ರಾಯರ ಗಂಡನೆಂಬ ಬಿರುದನ್ನು ಕೊಟ್ಟು ಯಿದಾರು ನಂದು ಬರಿದು ಪಾಡು ಎಹಗೆಯಿದ್ದಿತು ಆ ಉಪಾಧಿಯಲಿ ಬೇಡರ ದಳವಂ ಮುರೆಯಲಿಕ್ಕುವೆನು ಎಂದುಪಚರಿಸಿ', ಬೇಡರ ಮೇಲೆ ತಾನೇ ಹೋಗುತ್ತಾನೆ. ಇದರಿಂದ ಹೊಯ್ಸಳ, ವಿಜಯನಗರ ಮತ್ತು ಶ್ರೀರಾಮಪುರದ ಅರಸರುಗಳು ಬೇಡಪಡೆಗಳನ್ನು ಇಟ್ಟುಕೊಂಡ ವಿವರ ಸಿಗುತ್ತದೆ. ಬೇಡರ ಇತಿಹಾಸವನ್ನು ಅರಿಯುವಲ್ಲಿ ಅವರಲ್ಲಿದ್ದ ಪಿತೃ ಆರಾಧನೆ ತಿಳಿಯುವುದು ಸೂಕ್ತ. ಬೇಡರು ಕ್ರಮೇಣವಾಗಿ ಇವನ್ನು ಗುಡಿಗಳಾಗಿ ಪರಿವರ್ತಿಸಿಕೊಳ್ಳುತ್ತಾರೆ. ಪುರಾಣ ಕಾಲದಲ್ಲಿ ರಾಜರಿಗೆ ಮಲೆಪರು ಸಿಂಹಸ್ವಪ್ನ ಸಮಾನರಾಗಿರದಿದ್ದರೂ ತಲೆ ನೋವಂತೂ ಆಗಿದ್ದರು. ಸಾಮಾನ್ಯ ಜನರಿಗೂ ಈ ಮಲೆಪರೂ, ಬೇಡರು, ಕುರುಂಬರೂ ದುಃಸ್ವಪ್ನವಾಗಿದ್ದರು.[೯]

ಕ್ರಿ.ಶ.೧೨೧೬ರ ವೀರಗಲ್ಲಿನಲ್ಲಿ ಸಿಂದರಾಜನಾದ ಈಶ್ವರ ದೇವರಸನು ತನ್ನ ಪಟ್ಟ ಸಾಹಣಿಯಾದ ಚಣ್ಣನಿಗೆ ಬೇಡರು ತುರುಗಳನ್ನು ಅಪಹರಿಸಿಕೊಂಡು ಹೋದರೆಂದು ತಿಳಿಸಿದಾಗ ಅವನು ಕೋಪದಿಂದ ಯಮನಾಗುತ್ತಾನೆಂಬ ಉಲ್ಲೇಖವಿದೆ.[೧೦] ಬೇಡರ ಮೂಲ -ಉಪವೃತ್ತಿಗಳಲ್ಲೊಂದಾದ ದರೋಡೆ, ಕಳ್ಳತನಗಳು, ಶಾಸನಗಳಲ್ಲಿ ಹೇರಳವಾಗಿ ಸಿಗುತ್ತವೆ. 'ಪಯಿಂಗಳ ಸಂವತ್ಸರದಲ್ಲಿ ಆಲುಹಳ್ಳಿಯ ಬೇಡರು ಮಾರಂಡಹಳ್ಳಿ ಲೂಟಿಮಾಡಿಕೊಂಡು ಹೋಗುವಾಗ ನಡೆದ ಜಗಳದಲ್ಲಿ ಹನುಮನೆಂಬುವನು ಹೋರಾಡಿ ಸಾಯುತ್ತಾನೆ. ಹೀಗಾಗಿ ಹನುಮನ ಅಣ್ಣನಿಗೆ ಅಕ್ಷಯ ಸಂವತ್ಸರದ ವೈಶಾಖ ಶು ೧೦ರಲ್ಲು ಏಕ್ಕಲೇರಿ ಚಂನಂಣನಮ ಊರಕೊಡಿಗೆ'ಯನ್ನು ಕೊಡುತ್ತಾರೆ. ಮಧ್ಯಕಾಲೀನ ಸಂದರ್ಭದಲ್ಲಿ ಮೇಲಿನ ವೃತ್ತಿ ಶಾಶ್ವತವಾಗಿರುವಂತೆ ಕಂಡುಬಂದರೂ ನಂತರದ ದಿನಗಳಲ್ಲಿ ಬದಲಾಯಿತು.

ಶಾತವಾಹನರ ನಂತರ ಇಕ್ಷ್ವಾಕು ವಂಶದ ಕಾಲದಿಂದಲೂ ತಳವಾರ ಎಂಬ ಪದ್ಧತಿ ರೂಢಿಗೆ ಬಂದಂತೆ ಕಂಡುಬರುತ್ತದೆ. ಇಂದಿಗೂ ಕರ್ನಾಟಕದ ಕೆಲವು ಗ್ರಾಮಗಳಲ್ಲಿ ಇದನ್ನು ಉಳಿಸಿಕೊಂಡು ಬಂದಿದ್ದಾರೆ. ಪರಿವಾರ, ಬೋವ, ತಳವಾರ(ತಲಕಾರ) ಎಂಬ ಸೇವನಿರತ ವೃತ್ತಿಗಳನ್ನು ಉಲ್ಲೇಖಿಸಿದೆ. ಶಾಸನಗಳಲ್ಲಿ 'ತಳಾರಗೂಲಿ'(೧೦೪೨) ಎಂದಿದೆ.[೧೧] ನಂತರ ತಳವಾರ ಎಂಬ ವೃತ್ತಿಗಾರಿಕೆ ಪ್ರಬಲವಾಗಿ ಬೆಳೆಯಿತು.

ಬೇಡರು ಹುಲಿಬೇಟೆಯಾಡಿದ ವಿವರ ನೀಡುವ ವೀರಗಲ್ಲುಗಳು ಕಂಡುಬರುವುದು ಗಮನಾರ್ಹ. ಶಿವಮೊಗ್ಗ ಜಿಲ್ಲೆ, ಸೊರಬ ತಾಲೂಕಿನ ಕುಪ್ಪಟೂರು, ಶಿಕಾರಿಪುರ ತಾಲೂಕಿನ ಬಳ್ಳಿಗಾವೆ, ಕೋಲಾರ ಜಿಲ್ಲೆ, ತಾಲೂಕಿನ ಸೋಮಾಂಬುಧಿ ಅಗ್ರಹಾರ, ಮುಳುಬಾಗಿಲು ತಾಲೂಕಿನ ಕಂಬಳದಾನ, ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಶ್ರವಣಗುಡಿ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಬಾಗಳಿ ಮುಂತಾದವು.

ವಿವಾಹ ಸಂದರ್ಭದಲ್ಲಿ ಆಯಾ ಜಾತಿಗಳವರು ಜಾತಿಯ, ವೃತ್ತಿಯ ಬಹುಶಃ ಸಮಾನದ ಮನೆಗಳಲ್ಲಿ ಮದುವೆಯಾಗುತ್ತಿದ್ದರು. ಉದಾ : ವಿಷ್ಣುವರ್ಧನನ ನೆಚ್ಚಿನರಾದ ಬೇಂಟೆಯ ತಿಪ್ಪೆಯನಾಯಕನಿಗೆ ಸೋವೆ ನಾಯಕಿತಿ, ಮಾಚವೆ ನಾಯಕಿತಿ ಎಂಬ ಹೆಂಡರಿದ್ದರು.[೧೨] ಬೇಡರು ಬಹು ಸಾಹಸಿಗರು. ಹಿಡಿದ ಕಾರ್ಯವನ್ನು ಮಾಡುವುದರಲ್ಲಿ ಪ್ರವೀಣರು. ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕಿನ ಕೋನಸಾಗರದ ಬಳಿ ಕಪ್ಪಡಬಂಡಹಟ್ಟಿಯಲ್ಲಿ ಯರಮಂಚಯ್ಯನ ಮಗ ಪೆದ್ದಯ್ಯನ (ಬೇಡರ ವೀರ ಹುಲಿಯೊಡನೆ ಹೋರಾಡಿ ಮಡಿದ) ವೀರಗಲ್ಲನ್ನು ನೆಡಲಾಗಿದೆ. ಬೇಟೆಯ ವೀರಗಲ್ಲುಗಳಲ್ಲಿ ಹೆಚ್ಚಾಗಿ ಹಂದಿಯ ಬೇಟೆಗೆ ಸಂಬಂಧಿಸಿವೆ. ಆತಕೂರು, ಯಲಹಂಕ, ನೆಲವಾಗಿಲು, ವಣಕನಹಳ್ಳಿ, ಮಡಕಶಿರಾ ಮುಂತಾದವು ಉದಾಹರಣೆಯಾಗಿವೆ.

ಕ್ರಿ.ಶ.೩ನೇ ಶತಮಾನದ ನಾಣ್ಯಗಳಲ್ಲಿ ಬೇಡ ರಾಜನ ಉಲ್ಲೇಖವಿದ್ದು, ಇದನ್ನು ಧರ್ಮಸ್ಥಳದ ವಸ್ತುಸಂಗ್ರಹಾಲಯದಲ್ಲಿಡಲಾಗಿದೆ. ಹೀಗೆ ಕರ್ನಾಟಕದಲ್ಲಿ ಎಲ್ಲ ಆಳರಸರ ವಿವಿಧ ಕಾಲಘಟ್ಟಗಳಲ್ಲಿ ವಾಸ್ತುಶಿಲ್ಪ, ಗುಡಿ-ಗುಂಡಾರ, ವೀರಗಲ್ಲು, ಮಾಸ್ತಿಕಲ್ಲುಗಳಲ್ಲಿ ಬೇಟೆ-ಬೇಡರ ಉಲ್ಲೇಖವಿದೆ. ಚಿತ್ರದುರ್ಗ ಜಿಲ್ಲೆ ಗಂಜಿಗಟ್ಟೆಯಲ್ಲಿ ಗಾದರಿಪಾಲನಾಯಕ ಹುಲಿಯೊಡನೆ ಹೋರಾಡಿ ಮಡಿದಾಗ ಕಂಚವ್ವ-ಕಾಮವ್ವರುಗಳು ಸತಿಸಹಗಮನ ಕೈಗೊಳ್ಳುವ ಮಾಸ್ತಿಕಲ್ಲಿದೆ. ಮೊಳಕಾಲ್ಮೂರು ತಾಲ್ಲೂಕಿನ ಕೋನಸಾಗರ, ಹಿರೇಹಳ್ಳಿ, ಬಿ.ಜಿ.ಕೆರೆ ಮುಂತಾದ ಕಡೆ ಇತರ ವೀರಗಲ್ಲುಗಳಿವೆ. ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ಕಮಲಾಪುರದ ಗುರಿಕಾರ ಕಾಟಯ್ಯನ ಬಳಿ ಕಂಚಿನ ಪತ್ರದಲ್ಲಿ 'ಮ್ಯಾಸಬ್ಯಾಡ್ಕಿ ನಾಯಕತ'ನವನ್ನು ತಿಳಿಸಲಾಗಿದೆ.

ಮೇಲೆ ಜನಸಾಮಾನ್ಯರ ಪಾತ್ರವನ್ನು ಚಿತ್ರಿಸಿದಂತೆ, ಇಲ್ಲಿ ರಾಜಕೀಯ ಚುಕ್ಕಾಣಿ ಹಿಡಿದ ಬೇಡರ ಬದುಕನ್ನು ನೋಡಬೇಕಾಗಿದೆ. ಭಾರತ ಉಪಖಂಡದ ದಕ್ಷಿಣ ಭಾಗದಲ್ಲಿ ಬೇಡರ ಪ್ರಾಬಲ್ಯ ಒಂದು ಕಾಲಕ್ಕೆ ದಟ್ಟವಾಗಿತ್ತು. ಆ ಮೂಲಕ ರಾಜಕೀಯದಲ್ಲಿ ಏಳಿಗೆಯಾಗಿ ಪಾಳೆಯಗಾರರೆನಿಸಿಕೊಂಡದ್ದು ಆನಂತರ ಇವರು ಆಳ್ವಿಕೆ ನಡೆಸಿದ ಅವಧಿಯಲ್ಲಿ ನಿರ್ಮಾಣವಾದ ಕೋಟೆ, ಕೊತ್ತಲು, ದೇವಾಲಯಗಳಿಂದು ಬೆಟ್ಟ-ಗುಡ್ಡಗಳಲ್ಲಿ ಕಂಡುಬರುವುದುಂಟು.

ಇವರಿಗೆ ದ್ರಾವಿಡ ಭಾಷೆಯಲ್ಲಿ ವೇಡನ್, ವೇಂದನ್, ವೆಟ್ಟುವನ್, ಹಳಗನ್ನಡದಲ್ಲಿ ವೇಡರ್, ವೇಳರ್, ವಿದಿರ್, ಬಿಲ್ಲ, ಬೇಂಟೆಯವರ್, ಬೇಂಟೆಕಾರ, ವಿಯದರ್, ಬಿಯದರ್, ಕುಣಿಂದರ್, ಕೋವರ್ ಎಂದು ಸಂವಾದಿ ಪದಗಳುಂಟು. ಸಾಹಿತ್ಯದಲ್ಲಿ ಪುಳಿಂದ, ಭಿಲ್ಲ, ಕಿರಾತ, ವ್ಯಾಧ, ದೊರೆ, ಶಬರ, ನಿಷಾಧ ಇತರ ಹೆಸರುಗಳಿರುವುದು ಸ್ಪಷ್ಟ. ಕರ್ನಾಟಕದಲ್ಲಿ ಇಂದು ನಾಯಕ, ಬೇಡ, ವಾಲ್ಮೀಕಿ ಎಂದು ಕರೆಯುವ ರೂಢಿಯಿದೆ.

ಇಬ್ಬರಿಗಿಂತ ಹೆಚ್ಚಾಗಿ ಸುಸಂಘಟಿತರಾಗಿ ಇವರು ದೊಡ್ಡ ರಾಜರನ್ನೇ ಸೋಲಿಸುತ್ತಿದ್ದರಂತೆ. ಈ ಬೇಡರು ದುರ್ಗಮವಾದ ಬೆಟ್ಟ-ಗುಡ್ಡಗಳಲ್ಲಿ ವಾಸಿಸುತ್ತ ಒಂದು ರೀತಿಯಲ್ಲಿ ನಾಗರಿಕತೆಯಿಂದ ದೂರವಾಗಿ ಸ್ವಾತಂತ್ರ್ಯ ಪ್ರಿಯರಾಗಿ ಬಾಳುತ್ತಿದ್ದರು.[೧೩] ನಾಗರಿಕತೆಯ ಸುಳಿವನ್ನೇ ಕಾಣದ ಅನಾಗರಿಕರಾದ ಕೋಲರು, ಭೀಲರು, ಗೊಂಡರು, ಸಂತಾಲರಿಂದ ಹಿಡಿದು ಅತ್ಯಾಧುನಿಕ ನಾಗರಿಕತೆಯಿಂದ ಕೂಡಿದ ಪಟ್ಟಣಗರಲ್ಲಿ ಬೇಡರು ಸಹಾ ಇರುತ್ತಿದ್ದರು.

ಬೇಡರ ಚಾರಿತ್ರಿಕ ಹಿನ್ನೆಲೆ ಬಹು ಹಿಂದಿನದು. ಆದಿಶಿಲಾಯುಗದಿಂದ ಆಹಾರಕ್ಕೆ ಅಲೆದಾಡಿ,ಅನೇಕ ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಒಳಪಟ್ಟದ್ದಾರೆ. ಮೌರ್ಯ, ಶಾತವಾಹನ, ಕದಂಬ ಮತ್ತು ಬದಾಮಿ ಚಾಲುಕ್ಯರುಗಳ ಕಾಲದಲ್ಲಿದ್ದ ಬೇಡರ ಬದುಕನ್ನು ಅಲ್ಲಲ್ಲಿ ಸೂಕ್ಷ್ಮವಾಗಿ ತಿಳಿಸಿದ್ದಾರೆ. ರಾಷ್ಟ್ರಕೂಟರ ಕಾಲಕ್ಕೆ 'ನಾಯಕ' ಎನ್ನುವ ವೃತ್ತಿಯಾಧಾರಿತ ಬಿರುದು ಜನ್ಮತಾಳಿದಂತಿದೆ. ವಿಜಯನಗರ ಕಾಲದಲ್ಲಿ ಸಾಮಂತ ಅರಸರು, ಸೈನ್ಯಾಧಿಕಾರಿಗಳು, ಅಮರನಾಯಕರು ಸ್ವಾತಂತ್ರ್ಯರಾಗಬಯಸಿದರು. ಆಗ ಬೇಡರ ಪಾಳೆಯಪಟ್ಟುಗಳು ಹೆಚ್ಚಾಗತೊಡಗಿದವು. ಬ್ರಿಟಿಷರ ಆಳ್ವಿಕೆಯಲ್ಲಿ ಪಾಳೆಯಪಟ್ಟುಗಳನ್ನು ಕಳೆದುಕೊಂಡು ತಳವಾರಿಕೆ, ನಿರಗಂಟಿ, ಸೈನಿಕ ಇತ್ಯಾದಿ ಸಣ್ಣ ಪುಟ್ಟ ಹುದ್ದೆಗಳಲ್ಲಿ ಮುಂದುವರೆದುದು ದುರದೃಷ್ಟಕರವೆನಿಸಿದೆ.

'ಬೇಡ ಜನಾಂಗದ ಪ್ರಾಚೀನತೆ ಚರಿತ್ರೆ ಕನಿಷ್ಠ ೧೨-೧೩ನೇ ಶತಮಾನದಷ್ಟಾದರೂ ಹಿಂದಿನ ಕಾಲದವರೆಗೆ ಹೋಗುವದು. ಬೇಡರೆಂದರೆ ಕರ್ನಾಟಕದ ರಜಪೂತರು. ಅರಸನ ಮಕ್ಕಳು ಎಂದು ಹೇಳಿಕೊಳ್ಳುವಂತೆ ಈ ಬೇಡರು ತಾವು ದೊರೆ ಮಕ್ಕಳು, ಕನ್ನಯ್ಯನವರು, ಶ್ರೀ ಕೃಷ್ಣ ಪರಿವಾರದವರು ಎಂದು ಕರೆದುಕೊಂಡಿರುವುದನ್ನು ಬೆಳಕಿಗೆ ತರಲಾಗಿದೆ. ಪರಿವಾರದವರು ಮೈಸೂರು ಪ್ರದೇಶದಲ್ಲಿ ವಾಸವಾಗಿದ್ದು ನಾಯಕರೆಂದು ಕರೆದುಕೊಳ್ಳುತ್ತಾರೆ. ಮೊಘಲರ ಕಾಲದ ಕರ್ನಾಟಕದ ಬೇಡರ ಸ್ಥಿತಿಯನ್ನು ದೇಸಾಯಿ ಪಾಂಡುರಂಗರಾಯರು ವಿವರಿಸಿದ್ದಾರೆ.[೧೪]

ಈ ಬೇಡರು ಮೊದಲಿನಿಂದಲೂ ದಂಡಿನ ಊಳಿಗಕ್ಕಾಗಿ ಮೀಸಲಾಗಿ ನಿಂತಿದ್ದ ಕ್ಷಾತ್ರ ವೀರಜನಾಂಗ. ಮಹಮದೀಯರ ಧಾಳಿಯಿಂದ ತತ್ತರಿಸಿ ಆಂಧ್ರ, ಕರ್ನಾಟಕದಲ್ಲಿ ಮತ್ತು ಮಹಾರಾಷ್ಟ್ರಗಳ ಕೆಲಭಾಗಗಳಲ್ಲಿಯೂ ನೆಲಸಿದರು. ವಿಜಯನಗರ ಸ್ಥಾಪನೆಯ ಪೂರ್ವದಲ್ಲಿ ಮಹಮ್ಮದೀಯರ ಧಾಳಿಯನ್ನು ಎದುರಿಸಿ, ಕೆಲ ಕಾಲ ತಡೆದು ನಿಲ್ಲಿಸಿ, ಸ್ವರಾಜ್ಯ ಮತ್ತು ಸ್ವಧರ್ಮ ರಕ್ಷಣೆಯ ಆದರ್ಶವನ್ನು ಎತ್ತಿ ಹಿಡಿದು ವಿಜಯನಗರ ಸ್ಥಾಪನೆಗೆ

ಮಾರ್ಗತೋರಿಸಿಕೊಟ್ಟ, ವೀರ ಕಂಪಿಲರಾಯ ಹಾಗೂ ಆತನ ಕುಮಾರನಾದ ಗಂಡುಗಲಿ ಕುಮಾರರಾಮನಾಥನು ಈ ಬೇಡರ ಜಾತಿಯವರೆ ಆಗಿದ್ದರೆಂಬ ಹೆಗ್ಗಳಿಕೆ ಇವರದು.[೧೫] ಪೂವಾಲಿ ಕುಲದ ಮುಮ್ಮಡಿಸಿಂಗ ಶಬರನಾಯಕನಾಗಿದ್ದ. ಕುಮಾರರಾಮನ ತಾಯಿ ಹರಿಯಲದೇವಿ ಗುಜ್ಜಲ ವಂಶದ ರಾಜಕುಮಾರಿ. ನಾಯಕರಲ್ಲಿ ಗುಜ್ಜಲರು, ಪೂವುಲರು, ಮಳಿಲಾರು ಎಂಬ ಬೆಡಗುಗಳಿದ್ದು ಇವರು ರಾಜಕೀಯವಾಗಿ ಬಲಾಢ್ಯರಾಗಿದ್ದರು. ಕರ್ನಾಟಕದ ಅತ್ಯಂತ ಚಿಕ್ಕ ರಾಜ್ಯವಾದ ಕುಮ್ಮಟದುರ್ಗವು ಇತಿಹಾಸದಲ್ಲಿ ಅಗ್ರಸ್ಥಾನ ಪಡೆದಿದೆ. ಮುಸಲ್ಮಾನರಂಥ ಪ್ರಬಲರನ್ನು ಹೊಡೆದೋಡಿಸಿ ರಾಜ್ಯ ವಿಸ್ತರಿಸಿದ ಕೀರ್ತಿ ಇವರದು. ನಂತರ ಹಕ್ಕ- ಬುಕ್ಕರು ಸಮೀಪದ ಗುಡ್ಡ - ಬೆಟ್ಟಗಳಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದರು. ಭಾರತೀಯ ಸಂಸ್ಕೃತಿಗೆ ಅಸ್ತಿಭಾರ ಹಾಕಿದ ಸಾಮ್ರಾಜ್ಯ ವಿಜಯನಗರಕ್ಕೆ ಅಡಿಗಲ್ಲು ಕುಮ್ಮಟರಾಜ್ಯ ಎಂದರೆ ಅತಿಶಯೋಕ್ತಿಯಲ್ಲ. ಡಾ.ಭಂಡಾರಕರ್, ಡಾ.ವಿ.ಎಸ್.ಸ್ಮಿತ್,ಪಂಡಿತ ರಾಮಕೃಷ್ಣಶಾಸ್ತ್ರಿ ಮುಂತಾದವರು 'ಹಕ್ಕ - ಬುಕ್ಕ'ರು ಪ್ರತಾಪರುದ್ರನ ಸೇನೆಯಲ್ಲಿದ್ದವರೆಂಬುದು, ಪ್ರತಾಪರುದ್ರನು ಪರಾಭವಗೊಂಡಾಗ ಕಂಪಿಲಿಗೆ ಹೋಗಿ ಸೇರಿಕೊಂಡರೆಂದೂ, ಕಂಪಿಲರಾಯನು ಬೇಡರ ಜಾತಿಗೆ ಸೇರಿದವನೆಂದೂ, ಹಕ್ಕ-ಬುಕ್ಕರೂ ಕೂಡಾ ಕಂಪಿಲರಾಯನ ಜಾತಿಯವರೇ ಆಗಿದ್ದರೆಂದೂ, ಮೇಲ್ಕಾಣಿಸಿದ ವಿದ್ವಾಂಸರ ಅಭಿಪ್ರಾಯವಾಗಿದೆ.

ವಿಜಯನಗರ ಸೈನ್ಯದಲ್ಲಿ ಬಹುಸಂಖ್ಯೆಯಲ್ಲಿ ಬೇಡರ ಕಾಲಾಳು ಪಡೆಯಿತ್ತು. ಇದರ ಅವನತಿ ನಂತರ ಈ ಬೇಡ ಸೈನಿಕರ ಮುಖಂಡರು ಸ್ವತಂತ್ರವಾದ ಪಾಳೆಯಪಟ್ಟುಗಳನ್ನು ಕಟ್ಟಿಕೊಂಡರು. ಪಾಳೆಯಗಾರರು ರಾಜ್ಯಕಟ್ಟ ಹೋರಾಟ ನಡೆಸಿದ ಸಣ್ಣ-ಪುಟ್ಟ ಸಂಸ್ಥಾನದವರಾಗಿದ್ದಾರೆ. ಇವರು ಕಾಣಿಸಿಕೊಳ್ಳುವುದು ವಿಜಯನಗರದ ತರುವಾಯ. ಅದಕ್ಕೆ ಮೊದಲು ಎಲ್ಲೂ ತಮ್ಮನ್ನು ಪಾಳೆಯಗಾರರೆಂದು ಕರೆದುಕೊಳ್ಳುವುದರ ಬಗ್ಗೆ ಉಲ್ಲೇಖಗಳಿಲ್ಲ. ವಿಜಯನಗರದ ಸಂದರ್ಭದಲ್ಲಿ ಅಮರನಾಯಕ ಅಥವಾ ನಾಯಕರಾಗಿ ಕರೆಸಿಕೊಂಡಿದ್ದಾರೆ. ಸಾಮಾನ್ಯ ನಂಬಿಕೆಯಂತೆ ದಂಡಿನೊಡನೆ ಪಾಳೆಯ ಅಥವಾ ಗುಂಪನ್ನು ಕದನಕ್ಕೆ ಸಿದ್ಧವಾಗಿರುವ ಸಮುದಾಯದವರನ್ನು ಪಾಳೆಯಗಾರರು ಎಂದು ಕರೆಯಲಾಗಿದೆ.[೧೬]

ಚಿಕ್ಕ ಪುಟ್ಟ ಪ್ರದೇಶಗಳಲ್ಲಿ ಭೀಕರ ಆಳ್ವಿಕೆ ನಡೆಸಿದವರು ಪಾಳೆಯಗಾರರು. ಇವರನ್ನು ದೊರೆ, ಒಡೆಯ ಮತ್ತು ಪ್ರಭುಗಳೆಂದು ಕರೆದಿರುವರು. ಇವರು ಶಿಷ್ಟರನ್ನು ರಕ್ಷಿಸುತ್ತ, ದುಷ್ಟರನ್ನು ಶಿಕ್ಷಿಸುತ್ತ ತಮ್ಮ ರಾಜನ ನಿರ್ದೇಶನದಂತೆ ಆಳ್ವಿಕೆ ನಡೆಸುತ್ತಿದ್ದರು. ವಿಜಯನಗರ ದಂಡು ಹೋದ ಸ್ಥಳಗಳಲ್ಲಿ ವಸತಿ ಹೂಡುತ್ತ, ತಂಗಿರುತ್ತಿದ್ದ ಸ್ಥಳಗಳಲ್ಲಿ ನಾಯಕರು, ಸೈನಿಕರು ಕ್ರಮೇಣ ಪಾಳೆಯಗಾರರಾದರು ಎನ್ನಲಾಗಿದೆ.

೧೫-೧೬ನೇ ಶತಮಾನದಲ್ಲಿ ಪಾಳೆಯಗಾರರ ಏಳಿಗೆಯಾದರೂ, ಪಾಳೆಯಗಾರ ಪದ ಪ್ರಯೋಗ ಸ್ಪಷ್ಟವಾಗಿ ೧೭ನೇ ಶತಮಾನದಿಂದ ಶಾಸನಗಳಲ್ಲಿದೆ. ಪಾಳೆಯಗಾರರೆಂದು ಮೊದಲಿಗೆ ಬೇಡರೇ ಆಳಿದವರು, ತರುವಾಯ ಇತರ ಸಮುದಾಯಗಳಲ್ಲಿ ಸಮನಾದ ನಾಯಕರು ಪಾಳೆಯಗಾರ ಪದವಿಗಳನ್ನು ಅಲಂಕರಿಸಿದ್ದಾರೆ. ಇಲ್ಲಿ ಜಾತಿ, ವರ್ಗ, ಶೌರ್ಯ, ಸಾಹಸಗಳ ಮೂಲಕ ಪಾಳೆಯಗಾರಿಕೆ ಮಾನದಂಡ ಹುದ್ದೆಯಾಗಿತ್ತು. ಇಂದಿಗೂ ಪಾಳೆಯಗಾರರಂತೆ ಮೆರೆಯುತ್ತಾನೆಂದು ಅಧಿಕಾರಿ, ಕೆಲವ್ಯಕ್ತಿಗಳಿಗೆ ಕರೆಯುವುದುಂಟು.

ರಾಜಕೀಯವಾಗಿ ಈ ಪಾಳೆಯಗಾರರು ಆಳ್ವಿಕೆ ನಡೆಸಿ ನಾಗರಿಕತೆ ಮೆರೆಸಿದ್ದು, ನಾಯಕ ಸಮುದಾಯದವರು. ಇದಕ್ಕೆ ಸಮವಾಗಿ ಕಾಡಿನಲ್ಲಿ ವಾಸಿಸುತ್ತ ಸಂಸ್ಕೃತಿಯನ್ನು ಗಟ್ಟಿಗೊಳಿಸಿಕೊಳ್ಳುವಂತೆ ಶ್ರಮಿಸಿ ಬೇಟೆ, ಪಶುಪಾಲನೆಯಲ್ಲಿ ತೊಡಗಿಸಿಕೊಂಡವರು ಮ್ಯಾಸಬೇಡರು. ಹೀಗೆ ಇವರಿಬ್ಬರಲ್ಲಿ ಸಾಂಸ್ಕೃತಿಕ ಭಿನ್ನತೆಗಳು ಕಂಡುಬರುತ್ತವೆ. ಪ್ರಮುಖವಾಗಿ

ನಾಯಕನಹಟ್ಟಿ ಮತ್ತು ಚಿತ್ರದುರ್ಗ ಮಾತ್ರ ಮ್ಯಾಸಬೇಡರ ಸಂಸ್ಥಾನಗಳು ಎನ್ನಲಾಗುವುದು. ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿ ಛಿದ್ರವಾಗಿದ್ದ ನಾಯಕ ಜನಾಂಗ ತಾಳಿಕೋಟೆಯುದ್ಧದ ಸಂದರ್ಭದಲ್ಲಿ ಒಂದಾಯಿತು. ಅನಂತರ ಎರಡು ಪಂಗಡಗಳಾಗಿ ಹೋಳಾಯಿತೆಂದು ಹೇಳಲಾಗುತ್ತದೆ.

ವಿಜಯನಗರದ ಅರಸರು ಮುಸಲ್ಮಾನರ ವಿರುದ್ಧ ಹೋರಾಡಲು ಬೇಡಪಡೆಯವರನ್ನು ಬಳಸುತ್ತಿದ್ದುದು ಈ ಜನಾಂಗದ ಪರಾಕ್ರಮದ ಶೌರ್ಯ, ಹೆಗ್ಗಳಿಕೆ. ರೈಸ್‌ರವರು ತಮ್ಮ ಗ್ಯಾಸೆಟಿಯರ್‌ನಲ್ಲಿ 'ತಾಳಿಕೋಟೆ ಯುದ್ಧದಲ್ಲಿ ಬೇಡ ಜನಾಂಗದ ೭೨ ಸಂಸ್ಥಾನದ ನಾಯಕರು ಶಕ್ತಿ ಸಾಹಸ ತೋರಿಸಿ ಕಷ್ಟಕ್ಕೀಡಾದುದು ಚರಿತ್ರೆ ಪುಟಗಳಲ್ಲಿ ರಾರಾಜಸುತ್ತದೆ ಎಂದಾಗ, ವಿಜಯನಗರದ ದೊರೆಗಳು ಬೇಡರನ್ನು ಹೆಚ್ಚಾಗಿ ಸೈನ್ಯದಲ್ಲಿ ತೊಡಗಿಸಿಕೊಂಡಿರಬೇಕು. ಗಿರಿ-ಬೆಟ್ಟ, ಕಣಿವೆ ಅಲ್ಲದೆ ಆಯಕಟ್ಟಿನ ನೆಲೆಗಳಲ್ಲಿ ಪಾಳೆಯಗಳಿಗೆ ಪಾಳೆಯಗಾರಿಕೆ ಅಧಿಕಾರ ನೀಡಿದ್ದರು. ಇದಕ್ಕೆ ಉದಾಹರಣೆ : ಗುಡೇಕೋಟೆ, ಜರಿಮಲೆ, ಹರಪನಹಳ್ಳಿ ಮುಂತಾದವು.[೧೨] ಇತರ ಪಾಳೆಯಪಟ್ಟುಗಳೆಂದರೆ: ಆನೆಗುಂದಿ, ಚಿತ್ರದುರ್ಗ, ರತ್ನಗಿರಿ, ನಿಡಗಲ್ಲು, ಶಿರಾ, ಬಳ್ಳಾರಿ, ಮೊಳಕಾಲ್ಮೂರು, ರಾಯದುರ್ಗ, ಪೆನುಗೊಂಡ, ಮದಮಸೂರು, ಇಕ್ಕೇರಿ, ಸ್ವಾದಿ, ಚಂದಾವರ, ಬದನೂರು, ಮುಂಡಿಕೋಟೆ, ಮಟ್ಟಿ, ಕಡಪೆ, ತಲಕೇರಿ (ತಲಚೇರಿ), ಹಾಗಲವಾಡಿ, ಹರತಿಕೋಟೆ, ಬೆಳಗುತ್ತಿ, ಕಂಪಲಿ, ಮಂಗಳೂರು, ಬಸವಾಪಟ್ಟಣ, ಬೇಲೂರು, ತರೀಕೆರೆ, ಹಲಲೆಕೋಟೆ, ಬಾಣವಾರ, ಚಿಕ್ಕನಾಯಕನಹಳ್ಳಿ, ಕೊಲ್ಲಾಪುರ, ಬಂಕಾಪುರ, ನಂದೀಯಾಳ, ದಾವನಹಳ್ಳಿ, ಕಿತ್ತೂರು, ತಂಜಾವೂರು, ಸುರಪುರ, ಬಾದಾಮಿ, ದೊರಮಲೆ, ಗೋವನೂರು, ನಸ್ನಿವಾಳ, ಮಿಡಿಗೇರೆ, ಪಾವಗಡ, ಶಿವರ, ಐಮಂಗಲ, ಪುರವರ, ಬಾಗೂರು, ಗುತ್ತಿ, ಚೆನ್ನಪಟ್ಟಣ, ಮಲೇದುರ್ಗ, ಕನಕಗಿರಿ, ಗುರೆಗುಂಟ, ಲೇಪಾಕ್ಷಿ, ಮಧುರೆ, ಆದವಾನಿ, ಚಂದ್ರಗಿರಿ, ದೊಡ್ಡೇರಿ, ತಲಕಾಡು, ರಾಯಚೂರು, ರಾಣ್ಯ, ಹದಿನಾಡು, ಯಳಂದೂರು, ಕಾರುಗನಹಳ್ಳಿ, ಹುಳಿಯಾರು, ಕೊರಟಗಿ, ಹೊನ್ನುಡುಕಿ, ಹಂಪನಹಳ್ಳಿ, ಕರಜಗಿ, ಹುಚ್ಚಂಗಿದುರ್ಗ, ಮತ್ತೋಡು, ನಾಯಕನಹಟ್ಟಿ ಮುಂತಾದವು ಕಂಡುಬರುತ್ತವೆ.[೧೩]

ಹಿಂದೊಮ್ಮೆ ಮೊಗಲ್ ಸೈನ್ಯ ಮತ್ತು ಬೇಡರ ಸೈನ್ಯ ಒಂದಕ್ಕೊಂದು ವಾನಗೇರಿ ಗುಡ್ಡದಲ್ಲಿ ಎದುರಾಗಿ ಶೂರತನದಿಂದ ಹೋರಾಡಿದ ದೃಶ್ಯಕಂಡ ಔರಂಗಜೇಬನು ಬೇಡರ ಶೌರ್ಯ,ಸಾಹಸಗಳಿಗೆ ಮೆಚ್ಚಿ ' ಏ ಕಿಸಿಸೆ ನಹಿ ಡರನೇ ವಾಲೆ ಲೋಗ್ ಬೇಡರ್ ಲೋಗ್ ಹೈ' ಎಂದು ಉರ್ದುವಿನಲ್ಲಿ ನುಡಿದದ್ದು 'ಬೇಡರ್' ಎಂಬ ಶಬ್ದವು ಕನ್ನಡಕ್ಕೆ ಪ್ರಯೋಗವಾಗಿದೆ ಎನ್ನಲಾಗಿದೆ.[೧೪] ಆದರೆ ಪಂಚದ್ರಾವಿಡ ಭಾಷೆಗಳಲ್ಲಿ ಈಗಾಗಲೇ 'ಬೇಡ' ಎಂದು ಪ್ರಯೋಗವಾಗಿರುವುದರಿಂದ ಇದನ್ನು ತಳ್ಳಿಹಾಕಬಹುದು.

ಮೈಸೂರು ಪ್ರಾಂತ್ಯದಲ್ಲಿ ಬ್ರಿಟಿಷರ ಆಡಳಿತಕ್ಕಿಂತ ಮೊದಲು ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಆಳ್ವಿಕೆ ನಡೆಸುವ ಸಂದರ್ಭದಲ್ಲಿ ಸೈನ್ಯಕ್ಕೆ ಹೆಚ್ಚಾಗಿ ಬೇಡರನ್ನು ನೇಮಿಸಿಕೊಳ್ಳುತ್ತಿದ್ದರು. ಆಗ ಕಪ್ಪಲದುರ್ಗದ ಉತ್ತರದ ಗುಡ್ಡಗಾಡಿನಲ್ಲಿ, ಹೊಲಗಳಲ್ಲಿ ಬೇಡರು ಉಳುಮೆ ಮಾಡುತ್ತಿದ್ದರು. ಟಿಪ್ಪು ತನ್ನ ಆಳ್ವಿಕೆಯಲ್ಲಿ ಇವರನ್ನು ೧೨ ಪಗೋಡಗಳ ಸಂಬಳಕ್ಕೆ ಸೈನಿಕ ವೃತ್ತಿಗೆ ನೇಮಿಸಿದ. ಇಷ್ಟ ಬಂದಾಗ ಯುದ್ಧಕ್ಕೆ ಬಳಸಿಕೊಳ್ಳುತ್ತಿದ್ದ. ಈ ಬೇಡ ಜನಾಂಗದ ಅಸಾಮಾನ್ಯ ಸೈನ್ಯದಿಂದ ಬೇಡ ಪಾಳೆಯಗಾರರನ್ನೇ ಸೋಲಿಸಿದ್ದು ವಿಪರ್ಯಾಸ. ಮುಳ್ಳನ್ನು ಮುಳ್ಳಿನಿಂದಲೇ ಕೀಳು ಎನ್ನುವಂತೆ ಹೈದರಾಲಿ, ಸಿರಾ, ನಿಡುಗಲ್ಲು, ರಾಯದುರ್ಗ ಮತ್ತು ಚಿತ್ರದುರ್ಗದ ಕೋಟೆಗಳನ್ನು ವಶಪಡಿಸಿಕೊಂಡ. ಇಲ್ಲಿ ಬೇಡ ಸೈನಿಕರು ಸ್ವಾಮಿನಿಷ್ಠೆಯಿಂದ ಹೋರಾಡಿ, ನಿಸ್ವಾರ್ಥದಿಂದ ಗೆಲುವು ತಂದು ಕೊಟ್ಟದ್ದು ಅಪೂರ್ವ ಸಾಹಸ. ಬೇಡರ

ಸಾಧನೆ ಕುರಿತು ವಿಲಿಯಂ ಸ್ಮಿತ್ ಅವರು 'ಜಗತ್ತಿನಲ್ಲಿ ಬೇಡರಷ್ಟು ಶೂರರು ಸಿಗಬಹುದು ಆದರೆ ಬೇಡರಿಗಿಂತ ಶೂರರು ದೊರೆಯಲಾರರು' ಎಂದಿದ್ದಾರೆ.[೨೦]

ಮದ್ರಾಸ್ ಅಧಿಪತ್ಯದ ಪ್ರಥಮ ಕಲೆಕ್ಟರ್ ಆಗಿದ್ದ ಸರ್.ಥಾಮಸ್ ಮನ್ರೋ ೧೮೦೦ರಲ್ಲಿ ಸುಮಾರು ೮೦ಮಂದಿ ಪಾಳೆಯಗಾರರನ್ನು ಕಪ್ಪ-ಕಾಣಿಕೆ ಒಪ್ಪಿಸುವಂತೆ ಯಾದಿ ಸಿದ್ದಪಡಿಸಿದನು. ಅದರಂತೆ ಇವರು ಅವನ ಅಧೀನಕ್ಕೆ ಒಳಗಾಗಿ ಇಂತಿಷ್ಟು ಕಾಣಿಕೆ ಸಲ್ಲಿಸುತ್ತಾ ಬಂದರು. ಬ್ರಿಟಿಷರ ಆಡಳಿತ ನೀತಿಗಳಿಂದ ಕೆಲವರು ಪಾಳೆಯಪಟ್ಟುಗಳನ್ನು ಕಳೆದುಕೊಂಡು ವಂಚಿತರಾದರೂ ತಳವಾರಿಕೆ, ಗೌಡ, ಪಟೇಲರಾಗಿ ಸಮಾಧಾನಗೊಂಡಿದ್ದು ವಿಶೇಷ. ಆದರೂ ಬೇಟೆ, ಪಶುಪಾಲನೆ, ಕೃಷಿ, ತಳವಾರಿಕೆ, ಒಲೆಕಾರಿಕೆ ಪ್ರಧಾನ ವೃತ್ತಿಗಳಿದ್ದವು.

ಶಸ್ತ್ರಾಸ್ತ್ರಗಳನ್ನು ಹೊಂದಿರುವ ಜನಗಳಿಂದ ಮುಂದೆ ತಮಗೆ ಅಪಾಯ ಉಂಟಾಗಬಹುದೆಂಬ ಭಯದಿಂದ ೧೮೫೭ರಲ್ಲಿ ನಿಶ್ಶಸ್ತ್ರೀಕರಣ ಕಾಯ್ದೆಯನ್ನು ಜಾರಿಗೆ ತಂದಾಗ, ಮೊಟ್ಟಮೊದಲು ವಿರೋಧಿಸಿದವರು ಬೇಡರು. ಸ್ವಾಭಿಮಾನಿ ದೇಶಭಕ್ತರು ಮತ್ತು ಆಧುನಿಕತೆ ತಿಳಿದ ಹಲಗಲಿ ಬೇಡರು ಬ್ರಿಟೀಷರ ಶಸ್ತ್ರಾಸ್ತ್ರ ನೀತಿಯನ್ನು ವಿರೋಧಿಸಿ ಹೋರಾಟ ನಡೆಸಿದರು. ಇದು ದೇಶದ್ಯಾಂತ ಸುದ್ದಿ ಮಾಡಿತು. ಅಂಜದೇ, ಅಳುಕದೇ ಹೋರಾಡಿ ಅವರು ವೀರಮರಣವನ್ನಪ್ಪಿದ್ದು ಮೊದಲ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿಯಾಯಿತು. ಇದು ಭಾರತೀಯ ಬುಡಕಟ್ಟು ಜನರ ಹೋರಾಟಗಳಲ್ಲಿ ಮರೆಯಲಾರದ ಘಟನೆ.

ಇವರಂತೆ ವೀರ ಸಿಂಧೂರಲಕ್ಷ್ಮಣನು ಸಹ ಬ್ರಿಟಿಷರ ವಿರುದ್ಧ ಹಗೆತನ ತೀರಿಸಿಕೊಳ್ಳಲು, ಹೊರದೂಡಲು ಸತತ ಹೋರಾಟ ನಡೆಸಿ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದನು. ಕೊನೆಯಲ್ಲಿ ಬ್ರಿಟಿಷರು ಇವನನ್ನು ಗಲ್ಲಿಗೇರಿಸಿ ಸಾಯಿಸಿದ್ದು ದುರದೃಷ್ಟಕರ. ಹಲಗಲಿ ಬೇಡರ ಮತ್ತು ಸಿಂಧೂರ ಲಕ್ಷ್ಮಣನ ಲಾವಣಿಗಳು ಇಂದಿಗೂ ಜನರ ಬಾಯಲ್ಲಿ ನರ್ತಿಸುತ್ತಿವೆ.[೨೧]

ಬೇಡರು ಆದಿಕಾಲದಿಂದಲೂ ಯುದ್ಧಕಲೆಯನ್ನು ಬಲ್ಲವರು. ಧೀರಯೋಧರೂ ಹಾಗೂ ಕರ್ನಾಟಕದಲ್ಲಿಯ ಸೈನಿಕ ಜನಾಂಗ (Martial race)ಗಳಲ್ಲಿ ಬಹು ಮುಖ್ಯರಾಗಿದ್ದರು. ಬೇಡರನ್ನು ಸೂರ್ಯ ಮತ್ತು ಚಂದ್ರವಂಶೀಯರೆಂದು ವರ್ಗೀಕರಿಸಿದ್ದಾರೆ.

ಬೇಡರ ಪರಿವರ್ತಿತ ಜೀವನದಿಂದ ಮೊದಲಿನ ಕಾಲದಲ್ಲಿದ್ದ ಬೇಟೆಗಾರಿಕೆಗೆ ಈಗ ಪೆಟ್ಟು ಬಿದ್ದಿದೆ. ಬೇಟೆಯು ಕಾನೂನಿನ ನಿಯಂತ್ರಣಕ್ಕೆ ಬಂದು ನಿಷಿದ್ದ ಮಾಡಿದಾಗ ಬೇಡರು ಪರಿತಪಿಸುವಂತಾಯಿತು. ಆದರೂ ಹಿಂದಿನಂತೆ ಜೇನುತುಪ್ಪ, ಆನೆಯ ಕೋರೆಗಳು,ಕಾಡುಕೋಣ, ಪ್ರಾಣಿಗಳ ಕೋಡುಗಳು, ಚರ್ಮ, ನವಿಲುಗರಿ, ಪುನುಗಿನ ಬೆಕ್ಕು, ಗಿಡದ ಅಂಟು ಹಾಗೂ ಕವಳೆ, ಬೋರೆ, ನೇರಲೆ ಮುಂತಾದ ಹಣ್ಣುಗಳನ್ನು ತಂದು ಮಾರುವುದು ಸಾಮಾನ್ಯವಾಗಿದೆ. ಕ್ರಮೇಣ ಆರ್ಥಿಕ ಸದೃಢತೆಯಿಂದ ಸಾಮಾಜಿಕ ಭದ್ರತೆಗೆ ನಾಂದಿಹಾಡಿ ವಿವಿಧ ವೃತ್ತಿಗಳನ್ನು ಅವಲಂಭಿಸಿರುವುದು ಸ್ವಾಗತಾರ್ಹ.

ಇಂದು ಬೇಡರು ನಾನಾ ವೃತ್ತಿ ಹೆಸರುಗಳಿಂದ ಜೀವಿಸುತ್ತಿದ್ದಾರೆ. ನಾಯಕ, ನಾಯಕ ಮಕ್ಕಳು ನಾಯಕವಾಡಿ, ಪಾಳೆಯಗಾರರು ಇವು ಸೈನಿಕ ಜನಾಂಗ ಎಂದು ಸಂಕೇತಿಸುತ್ತಿವೆ. ವಾಲ್ಮೀಕಿ,ರಾಮೋಶಿ ಎಂಬುವು ಸಾಂಸ್ಕೃತಿಕ ಸ್ತರ

ಸೂಚಿಸಲು ಹೇಳಿಕೊಳ್ಳುವ ಹೆಸರುಗಳು. ವಾಲ್ಮೀಕಿ ರಾಮಾಯಣದಲ್ಲಿ ರಾಮನ ವಂಶದವರೆಂದು ಹೇಳಿಕೊಳ್ಳುವವರು ರಾಮೋಶಿ (ರಾಮವಂಶೀಯರು) ಎಂದು ಕರೆದುಕೊಂಡಿದ್ದಾರೆ. ಬೇಟೆ ಮತ್ತು ಯುದ್ಧಗಳಲ್ಲಿ ರಾಜನ ಜತೆಗೆ ಯಾವತ್ತೂ ಹೋಗುತ್ತಿದ್ದರಿಂದ ಈ ರೀತಿ ಕರೆದಿರಬೇಕು.[೨೨]

ಉತ್ತರ ಮತ್ತು ಮಧ್ಯ ಕರ್ನಾಟಕದಲ್ಲಿ ಬೇಡರು ಹೆಚ್ಚಾಗಿ ವಾಸಿಸುತ್ತಿದ್ದು, ನಾನಾ ಪರ್ಯಾಯ ಹೆಸರುಗಳಿಂದ ಖ್ಯಾತರಾಗಿದ್ದಾರೆ. ದಕ್ಷಿಣ ಕನ್ನಡದಲ್ಲಿ ಬಲ್ಲವರು ಎಂಬ ಜನಾಂಗದವರು ಇದ್ದಾರೆ.[೨೩] ಇವರು ಸಹ ಬೇಡರಂತೆ ಬೇಟೆಗಾರರು, ಬಲ್ಲು ವಿದ್ಯೆಯಲ್ಲಿ ಪ್ರವೀಣರು.

ಬೇಡರು ಯುದ್ಧದಲ್ಲಿ ಪ್ರವೀಣರು, ಶೂರತನದಿಂದ ಹೋರಾಡಿ ಜಯಗಳನ್ನು ತಂದುಕೊಟ್ಟು ಶೌರ್ಯ-ಸಾಹಸಗಳಿಗೆ ಮೆಚ್ಚಿ ಬಿಜಾಪುರದ ಆದಿಲ್ ಶಾಹಿ ಸುಲ್ತಾನ ಖಡ್ಗವನ್ನು ಇವರಿಗೆ ಬಹುಮಾನವಾಗಿ ಕೊಟ್ಟನೆಂದು, ಅದನ್ನು ಉರ್ದುವಿನಲ್ಲಿ 'ತಲವಾರ್' ಎಂದು ಕರೆದು, ಅದನ್ನು ಪಡೆದವರಿಗೆ ತಲವಾರ್>ತಳ್‌ವಾರ>ತಳವಾರ ಎಂದು ಕರೆದುಕೊಂಡಿದ್ದಾರೆ. ಜಾತಿ ಸೂಚಕ ಪದವಲ್ಲ ಎಂದಾಗ ಬಿರುದನ್ನು ಜಾತಿಗೆ ಧರಿಸಿರುವುದು ಅಪೂರ್ವವಾದುದು. ಆದರೂ'ತಳವಾರ' ಎಂಬ ಶಬ್ದವು ೯ನೇ ಶತಮಾನದ ವಡ್ಡಾರಾಧನೆಗೂ ಪೂರ್ವದಲ್ಲಿತ್ತು. ಇತಿಹಾಸದಲ್ಲಿ ತಿಳಿದುಬರುವಂತೆ ಇಕ್ಷ್ವಾಕು ವಂಶದಲ್ಲಿ ಮಹಾ ತಳವಾರನೆಂಬ ಪದವಿ ಇದ್ದಿತು. ಅಲ್ಲಿಂದ ಸಹಸ್ರಾರು ಉದಾಹರಣೆಗಳಿರುವಾಗ ಒಬ್ಬ ೧೬-೧೭ನೇ ಶತಮಾನದ ಆದಿಲ್‌ಶಾಹಿ ದೊರೆ ಕೊಟ್ಟ ಬಿರುದಿನಿಂದ ಈ ಜನಾಂಗಕ್ಕೆ 'ತಳವಾರ' ಎಂದು ಬಂದಿದೆ ಎಂಬುದನ್ನು ಒಪ್ಪುವಂತಿಲ್ಲ.

ಕರ್ನಾಟಕದಲ್ಲಿ ಸದ್ಯ ಸುಮಾರು ೭೦ಲಕ್ಷ ಬೇಡರಿದ್ದಾರೆ. ನೆರೆಯ ರಾಜ್ಯಗಳಾದ ಮಹಾರಾಷ್ಟ್ರದಲ್ಲಿ ರಾಮೋಶಿ, ಬೇರಡ ಜನರಿದ್ದು ಅವರಿಗೆ, ಎಂದಿಗೂ ಹೆದರದ ಬೇರಡ್,ಬೇಡರ್ ಎನ್ನಲಾಗಿದೆ. ತಮಿಳುನಾಡಿನಲ್ಲಿ ಇವರಿಗೆ 'ವೇದನ್' ಎಂದು, ಆಂಧ್ರಪ್ರದೇಶದ ತೆಲುಗು ಭಾಷೆಯಲ್ಲಿ 'ಭೋಯಾ' ಎಂತಲೂ ಕೇರಳದ ಮಲೆಯಾಳಿ ಭಾಷೆಯಲ್ಲಿ 'ನಾಯರ್' ಎಂದು ಇಂದಿಗೂ ಕರೆಯುವ ರೂಢಿಯಿದೆ. ಬೇಡರ ಜಾತಿ ಅರಣ್ಯ ಪ್ರದೇಶದಲ್ಲಿ ವ್ಯಾಪಕವಾಗಿ ನೆಲಸಿರುವುದರಿಂದ 'ರಾಣವಾಸಿ'ಗಳೆಂದು ಮರಾಠಿಯಲ್ಲಿ ಕರೆಯುವರು. ರಾಣ ಎಂದರೆ ಅರಣ್ಯ, ವಾಸಿ ಎಂದರೆ ವಾಸಿಸುವರೆಂದು ತಿಳಿಸಲಾಗಿದೆ. ಹೀಗಾಗಿ ಬೇಡ ಜನಾಂಗ ಆದಿಯಿಂದಲೂ ಕಾಡುಗಳಲ್ಲಿ ವಾಸಿಸುತ್ತಿದ್ದರೆಂಬುದಕ್ಕೆ ಇದೊಂದು ನಿದರ್ಶನ. ಕರ್ನಾಟಕದ ಚಿತ್ರದುರ್ಗ, ತುಮಕೂರು, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ದಾವಣಗೆರೆ, ಧಾರವಾಡ ಮುಂತಾದ ಕಡೆ ಇವರು ಹೆಚ್ಚಾಗಿ ವಾಸಿಸುತ್ತಿದ್ದಾರೆ.[೨೪]

ವಸಾಹತು ಸಂದರ್ಭದಲ್ಲಿ ವಿವಿಧ ಭಾಗಗಳಲ್ಲಿರುವ ಎಲ್ಲ ಬೇಡರು ಒಂದೇ ರೀತಿಯಲ್ಲಿ ಇರಲಿಲ್ಲ. ಹೀಗಾಗಿ ಹಿಂದಿನ ಜೀವನ ವಿಧಾನಗಳು ಬದಲಾಗಿದೆ. ಕರ್ನಾಟಕವನ್ನು ಎರಡು ಭಾಗಗಳಾಗಿ ಮಾಡಲಾಗುವುದು : ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ. ಉತ್ತರ ಕರ್ನಾಟಕದಲ್ಲಿ ಹೈದರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕ ಎಂದು ಇಬ್ಭಾಗಿಸಿಕೊಂಡು ನೋಡಲಾಗುವುದು. ಮದ್ರಾಸ್ ಕರ್ನಾಟಕ ಎಂದಾಗ ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಲೆಗಳೆರಡು ಉಳಿಯುತ್ತವೆ. ಇಲ್ಲಿ ಕರಾವಳಿ, ಮಲೆನಾಡು, ಬಯಲುಸೀಮೆ, ಹಳೆಮೈಸೂರು, ಕರ್ನಾಟಕಾಂಧ್ರ ಎಂದು ಗುರುತಿಸುತ್ತಾರೆ.

ಸ್ವಾತಂತ್ರ್ಯ ಹೋರಾಟ, ಏಕೀಕರಣದ ಸಂದರ್ಭದಲ್ಲಿ ಬೇಡ ಜನಾಂಗದ ಪಾತ್ರ ದೊಡ್ಡದು. ತರುವಾಯ ರಾಜಕೀಯವಾಗಿ ಬೆಳೆಯಲು ಹವಣಿಸಿದ್ದು ದೇವರಾಜ ಅರಸು ಮುಖ್ಯಮಂತ್ರಿಯಾದ ಅವಧಿಯಲ್ಲಿ (೧೯೭೪).

ಎಲ್.ಜಿ.ಹಾವನೂರು ವರದಿಯಿಂದ ಬೇಡರು ಎಂದರೆ ನಾಯಕರನ್ನು ಮಾತ್ರ ಪರಿಶಿಷ್ಟವರ್ಗದಲ್ಲಿ ಸೇರಿಸಲಾಯಿತು. ರಾಜಕೀಯವಾಗಿಯೂ ಇಂದು ಬೇಡರ ಮುಖಂಡರು ರಾಜ್ಯದಲ್ಲಿ ವ್ಯಾಪಕವಾಗಿದ್ದು, ದೇಶದ ಚುಕ್ಕಾಣಿ ಹಿಡಿಯಲು ಹಂಬಲಿಸುತ್ತಾರೆ. ವಾಲ್ಮೀಕಿ ಜನಾಂಗದ ಅಭಿವೃದ್ಧಿಗೆ ರಾಜನಹಳ್ಳಿ ಮತ್ತು ಬೆಂಗಳೂರುಗಳಲ್ಲಿ ಎರಡು ಮಠಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಬೇಡರ ಪ್ರಗತಿ ಹೇಳಿಕೊಳ್ಳುವಂತೆ ಫಲಿಸಿಕ್ಕಿಲ್ಲ.

ಬೇಡರ ಸಾಂಸ್ಕೃತಿಕ ಲಕ್ಷಣಗಳು

ಮೇಲಿನಂತೆ ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ವಾಸಿಸುವ ಬೇಡರ ಲಕ್ಷಣಗಳನ್ನು ನೋಡಬಹುದು. ಬಾಂಬೆ ಗ್ಯಾಜೆಟಿಯರ್‌ನಲ್ಲಿ ತಿಳಿಸಿರುವಂತೆ 'ಬೇಡರು,ಕುರುಬರು, ಕಬ್ಬಲಿಗರೂ ದಕ್ಷಿಣ ಹಿಂದೂಸ್ಥಾನದ ಮೂಲನಿವಾಸಿಗಳಾಗುತ್ತಾರೆ. ಕುರುಬರಿಗೂ ಬೇಡರಿಗೂ ಸಾಮ್ಯವೇನಂದರೆ, ಕಪ್ಪು ಮೈಬಣ್ಣ, ಕಸುವುಳ್ಳ, ಮೈಕಟ್ಟು, ಗರಡೀಸಾಧಕ, ಕುಸ್ತಿಗಳ ಪ್ರೀತಿ, ಪೀಡಿಸುವಂಥ ದೇವತೆಗಳ ಮುಖ್ಯ ಆರಾಧನೆ, ಇತ್ಯಾದಿ. ಕುರುಬರು ಶಾಂತರು, ಬೇಡರು ಉಗ್ರಸ್ವಭಾವದವರು; ಕುರುಬರಿಗೆ ಮಾಂಸಾಹಾರದಲ್ಲಿ ವಿಶೇಷ ಪ್ರೀತಿ ಇರಲಿಲ್ಲ, ಬೇಡರು ಬೆಕ್ಕು, ಮಂಗ,ಇಲಿ, ಇಂಥಾ ಪ್ರಾಣಗಳನ್ನು ಸಹ ತಿನ್ನುತ್ತಿದ್ದರು.[೨೫] ಇಂದು ಆ ಚಿತ್ರಣ ಬದಲಾಗಿದೆ.

ಮಹಾರಾಷ್ಟ್ರ ಭಾಗದಲ್ಲಿ ಬೇಡರಿಗೆ ರಾಮೋಶಿ ಎಂದು, ಖಾನದೇಶದ ಉತ್ತರದಲ್ಲಿ ಬೇಡರಿಗೆ ಭಿಲ್ಲರೆಂದು ಕರೆಯುವರು. ವಿಜಯನಗರದ ಸ್ಥಾಪನೆ ಮುನ್ನ ತೆಲುಗು ಪ್ರದೇಶದಲ್ಲಿ ಬೇಡರ ಸಂಸ್ಥಾನಗಳಿದ್ದವು. ಹೆಸರಾದ ಸುರಪುರದ ನಾಯಕನು ಬೇಡನೇ ಆಗಿದ್ದನು. ಮೈಸೂರು ಸೀಮೆಯ ಪಾಳೆಯಗಾರರೆಲ್ಲರು ಬಹುತೇಕ ಬೇಡರೇ ಇದ್ದಾರೆ. 'ಬನವಾಸಿಯ ಕದಂಬ ಅರಸರು ಬೇಡರಿರಬಹುದುದೆಂದು ಬುಕಾನಾನ್‌ನೆಂಬ ಶೋಧಕನು ಊಹಿಸುತ್ತಾನೆ. ಪೇಶವಾಯಿಯ ಕಡೆಯಲ್ಲಿ ಬೆಳಗಾವಿಯ ಹತ್ತಿರ ಚಿಕ್ಕಲದಿನ್ನೆ ಎಂಬಲ್ಲಿ ಬೇಡರದೊಂದು ಸಣ್ಣ ಸಂಸ್ಥಾನವಿತ್ತು. ಹೆಸರಾದ ಸಂಗೊಳ್ಳಿ ರಾಯಣ್ಣನು ಬೇಡನಿದ್ದನೆಂದು ಹೇಳಲಾಗಿದೆ ಇದು ಪರಿಶೀಲನಾರ್ಹ.[೨೬]

ಬೇಡರಲ್ಲಿ ಮರಗೀ ಬೇಡರು, ದಾಸಬೇಡರು, ನಾಯಕ ಮಕ್ಕಳು ಎಂಬ ಒಳ ಜಾತಿಗಳಿರುತ್ತವೆ. ಇವರೊಳಗೆ ಊಟದ ಬಳಕೆಯಾಗುವುದಿಲ್ಲ. ಬೇಡರು ಮುಸಲ್ಮಾನರಲ್ಲಿ ಉಣ್ಣುವರು. ಬೇಡರ ಕುಲದೇವತೆ ದುರುಗಮ್ಮ ಅಥವಾ ಮರಿಯಮ್ಮ. ಆದರೆ ಇವರು ಎಲ್ಲಮ್ಮ, ವೆಂಕಟರಮಣ, ಹನುಮಂತ, ಮುಂತಾದ ದೇವತೆಗಳಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಮರಗಿಬೇಡರು ದುರುಗಮ್ಮನ ಪೂರ್ಣಭಕ್ತರು. ಅವರು ದುರಗಿಮರಗಿಯ ಸಂದುಕವನ್ನು ತಲೆಯ ಮೇಲೆ ಹೊತ್ತುಕೊಂಡು ಮನೆ ಮನೆ ಭಿಕ್ಷೆ ಬೇಡುತ್ತ ತಿರುಗುತ್ತಾರೆ. ದಾಸಬೇಡರು ವೆಂಕಟರಮಣನ ಇಲ್ಲವೆ ಹನುಮಂತನ ದಾಸರಾಗಿ, ನಾಮ ಹಚ್ಚಿಕೊಂಡು ತಂಬೂರಿ ಹಿಡಿದು ಹಾಡುತ್ತ ಭಿಕ್ಷೆ ಬೇಡುತ್ತಾರೆ. ಸಿಂದೀ (ಸರಾಯಿ) ಕುಡಿಯುವುದರಲ್ಲಿ ಸಿಕ್ಕಂಥ ಮಾಂಸ ತಿನ್ನುವುದರಲ್ಲಿಯೂ ಬೇಡರು ಹೆಸರಾಗಿದ್ದಾರೆ. ಇವರು ಲಗ್ನದ ಕೆಲಸಗಳನ್ನು ತಮ್ಮಲ್ಲಿಯೇ ಮಾಡಿಕೊಳ್ಳುತ್ತಾರೆ. ಮದುಮಕ್ಕಳು ಹನುಮಂತನ ಗುಡಿಗೆ ಹೋಗಿ ಬಂದ ಬಳಿಕ ಮದುಮಗನನ್ನು ಕಲ್ಲಿನ ಮೇಲೆ, ಜೋಳದ ಬುಟ್ಟಿಯಲ್ಲಿ ಮದುಮಗಳನ್ನು ನಿಲ್ಲಿಸಿ ಅಂತ·ಹಟ ಹಿಡಿದು ಅಕ್ಕೀ ಕಾಳು ಹಾಕುವರು. ಮದುವೆ ಜರುಗಿದ ನಂತರ ನಾಗಬಲಿ ಅಥವಾ ಹಾವಿನ ಪೂಜೆಯನ್ನು ಮಾಡುವರು. ವಿಧವೆ ಲಗ್ನಕ್ಕೆ ಅಡ್ಡಿ ಇಲ್ಲ. ವಿಧವೆ ಮಗ ವಿಧವೆ ಮಗಳನ್ನು ಮದುವೆಯಾಗಬೇಕು. ವಿಧವೆ ಮಕ್ಕಳು ಮುತ್ತೈದೆಗಳ ಮಕ್ಕಳ ಕಾರ್ಯದಲ್ಲಿ ಕೆಲಸಕ್ಕೆ ಬಾರರು. ಬೇಡರಲ್ಲಿ ಬಹು ಜನರು ಹೆಣಗಳನ್ನು ಸುಡುತ್ತಾರೆ ಎನ್ನಲಾಗಿದೆ. ಇಂದು ಮಧ್ಯಕರ್ನಾಟಕದಲ್ಲಿ ಹೂಳುವುದು ಹೆಚ್ಚು.

ಕಾಕಪಿಂಡ, ಶ್ರಾದ್ಧಮಾಡುವ ರೂಢಿಯಿದೆ. ಬೇಡರ ವಸತಿ ಇರುವಲ್ಲಿ ಕಟ್ಟೇಮನಿ ಎಂಬ ಹಿರೆಮನೆತನವಿರುತ್ತದೆ. ಕಟ್ಟಿಮನಿ ಹಿರಿಯನು ಜಾತಿಯ ವ್ಯಾಜ್ಯಗಳನ್ನು ನಿರ್ವಹಿಸುವವನು. ಪೂರ್ವದಲ್ಲಿ ಹೆಂಗಸರು ಹಾದರ ಮಾಡಿದರೆ ಆಕೆಯ ತಲೆ ಬೋಳಿಸುತ್ತಿದ್ದರು; ಆದರೆ ಈಗ ಸುಧಾರಣೆಗೊಂಡು ೫ ಕೂದಲುಗಳನ್ನಷ್ಟೆ ತೆಗೆಯುವರು. ಬೇಡರ ಮಕ್ಕಳು ಶಾಲೆಗೆ ಹೋಗುವುದು ಕಡಿಮೆ. ಮದ್ರಾಸ್ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಮತ್ತು ಮಧ್ಯಕರ್ನಾಟಕ ಬೇಡರಿಗೆ ಹೋಲಿಸಿಕೊಂಡರೆ ಇವರು ತೀರಾ ಭಿನ್ನವೆಂಬಂತೆ ಕಂಡುಬರುವರು. ಇಂದು ಸಾಮಾನ್ಯವಾಗಿಯೇ ಹೊಂದಿಕೊಂಡಿದ್ದಾರೆ.

ಬೇಡರು ಈಗ ಒಕ್ಕಲುತನ, ಬೇಟೆ,ಕೂಲಿ, ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಇವರಲ್ಲಿ ಕೂಲಿಕಾರರೇ ಹೆಚ್ಚು. ದಸರೆ, ಯುಗಾದಿ, ಮುಂತಾದ ಹಬ್ಬಗಳ ಮರುದಿವಸ ಬೇಡರು ಬೇಟೆಗೆ ಹೊರಟು ಮೊಲ,ನರಿ,ಚಿಗರೆ ಮಿಕ ಮುಂತಾದವುಗಳನ್ನು ಹೊಡೆದು ತರುವರು. ಬೇಟೆಯ ನಾಯಿಗಳನ್ನು ಮನೆಯಲ್ಲಿ ಸಾಕುತ್ತಾರೆ. ಇಂಗ್ಲಿಷ್ ಸರ್ಕಾರದ ಆಳ್ವಿಕೆ ಬರುವ ಪೂರ್ವದಲ್ಲಿ ಬೇಡರು ದಾರಿಕಾರರನ್ನು ಸುಲಿಯುವರು, ದರೋಡೆ ಹಾಕುವರು, ದನಗಳನ್ನು ಕದಿಯುವವರು ಆಗಿದ್ದರು. ಈಗಲೂ ಬೇಡರು ಕಳ್ಳರೆಂದು 'ಪಾಚ್ಛಾಪುರ, ಹಲಗಲಿ, ಸುತಗಟ್ಟ, ಗೊರವನಕೊಳ್ಳ, ಮುಂತಾದ ಹಳ್ಳಿಗಳಲ್ಲಿ ಹೆಸರಾಗಿದ್ದಾರೆ. ಗ್ರಾಮದಲ್ಲಿ ಕುರುಬಗೇರಿ ಇರುವಂತೆ ಬೇಡರಗೇರಿಯು ಇರುತ್ತದೆ. ಹಳ್ಳಿಗಳ ತಾಳವಾರರೂ ಸೇತ ಸನದಿಗಳೂ ಬಹುಜನರು ಬೇಡರಿರುತ್ತಾರೆ. ಅವರಿಗೆ ವಂಶಪರಂಪರೆಯಿಂದ ಇನಾಂ ಭೂಮಿಗಳಿವೆ. ಈ ಸಂಗತಿಗಳು ಧಾರವಾಡ, ಬೆಳಗಾವಿ, ವಿಜಾಪುರ, ಉತ್ತರ ಕರ್ನಾಟಕ ಜಿಲ್ಲೆಗಳಿಗೆ ಸಂಬಂಧಿಸಿದರೂ, ಕರ್ನಾಟಕದ ಇತರ ಭಾಗಗಳಲ್ಲಿರುವ ಬೇಡರ ಲಕ್ಷಣಗಳಿಗೂ ಇವುಗಳಿಗೂ ಸಾಮ್ಯತೆಗಳಿವೆ ಎಂಬುದು ಸ್ಪಷ್ಟ. ಈಗಾಗಲೇ ಚಿತ್ರದುರ್ಗ ಸೇರಿದಂತೆ ದಕ್ಷಿಣ ಕರ್ನಾಟಕ, ಮಧ್ಯಕರ್ನಾಟಕದ ಬೇಡರ ಕುರಿತು ಅಧ್ಯಯನವಾಗಿರುವುದರಿಂದ ಬಾಂಬೆ ಕರ್ನಾಟಕದ ಬೇಡರ ಸ್ಥಿತಿ ಮೇಲಿನಂತೆ ನೋಡಲಾಗಿದೆ.

ಟಿಪ್ಪಣಿಗಳು

೧. ವಾಲ್ಮೀಕಿ ಸಂದೇಶ, ೧೫-೭-೧೯೮೩, ಪು.೧೨

೨. ಅದೇ : ಪು.೯

೩. ರಾಷ್ಟ್ರಸೇವೆಯಲ್ಲಿ ನಾಯಕ ಜನಾಂಗ, ಪು. ೧

೪. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೨೯೫

೫. ಎ.ಕ..VI, ಟಿ.ಕೆ,೮೪, ೧೨೦೯

೬. ಹರತಿಸಿರಿ, ಪು: ೩೨೮ ಮತ್ತು ನೋಡಿ : ಇತಿಹಾಸದದ ದರ್ಶನ, ಸಂ-೯, ೧೯೯೪ ಪು. ೪೬

೭. ಎಂ.ಎ.ಆರ್.೧೯೨೩, ಸಿ.೭೦೦ ಎ.ಡಿ, ಪು.೮೩

೮. ಎ.ಕ.VI, ಟಿ.ಕೆ.೮೪, ೧೨೦೯

೯. ಎ.ಕ.VIII ಎನ್.ಆರ್.೨೯.೧೨೨೮ ಮತ್ತು ಆರ್.ಶೇಷಶಾಸ್ತ್ರಿ :ಕರ್ನಾಟಕದ ವೀರಗಲ್ಲುಗಳು, ಪು.೬೫

೧೦. ಎ.ಕ.XI ಸಿ.ಡಿ.೭೫, ೯೪೧ ಎ.ಡಿ. ಮತ್ತು ಎ.ಕ.VI ಟಿ.ಕೆ.೬೩, ಸಿ. ೧೧೨೪

೧೧. ಸೌ.ಇ.ಇ.ವಾ.III, ಪಾರ್ಟ್-೧, ನಂ.೭೫ ಮತ್ತು ನೋಡಿ : ವಾಲ್ಮೀಕಿ ಸಂದೇಶ, ೧೫-೧೩-೧೯೮೯, ಪು.೯

೧೨. ಎ.ಕ.V.ಬ.೧೨೦೨, ೧೧೩೮ ಎ.ಡಿ.

೧೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೨೯೮

೧೪. ಪಿ.ಬಿ.ದೇಸಾಯಿ : ಮದಗಜಮಲ್ಲ, ಪು.೧+೭೮

೧೫. ವಾಲ್ಮೀಕಿ ಬಂಧು, ಮೇ.೧೯೯೯, ಪು.೧೧

೧೬. ಎನ್.ವೆಂಕಟರಮಣಯ್ಯ : ವಿಜಯನಗರ ಆರಿಜನ್ ಆಫ್ ದಿ ಸಿಟಿ ಅಂಡ್ ದಿ ಏಂಪೈರ್, ೧೯೯೦, ಪು.೨

೧೭. ಚಿತ್ರದುರ್ಗ ಡಿಸ್ಟ್ರಿಕ್ ಗ್ಯಾಸೆಟಿಯರ್, ೧೯೬೭, ಪು.೧೦೯

೧೮. ವಾಲ್ಮೀಕಿ ಸ್ಮರಣ ಸಂಚಿಕೆ, ೧೮.೨.೧೯೭೩, ಪು.೨

೧೯. ವಾಲ್ಮೀಕಿ ಬಂಧು, ೧೯೯೬, ಪು.೯

೨೦. ನೋಡಿ. ಎಡ್ಗರ್ ಥರ್ಸ್ಟನ್, ಕೆ.ರಂಗಾಚಾರಿ : ಕ್ಯಾಸ್ಟ್ಸ್ ಆಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ವಾ-೧, ೧೯೮೭, ಪು.೧೮೦

೨೧. ನೋಡಿ : ಆರ್.ಸಿ.ಮುದ್ದೇಬಿಹಾಳ : ವೀರಸಿಂಧೂರ ಲಕ್ಷ್ಮಣ ಮಹಾಕಾವ್ಯ, ೧೯೯೩, ರಸಬಳ್ಳಿ ಪ್ರಕಾಶನ, ಬಿಜಾಪುರ

೨೨. ವಾಲ್ಮೀಕಿ ಸಂದೇಶ, ೧೫-೧೨-೧೯೮೩, ಪು.೯

೨೩. ಬಿ.ಎ.ವಿವೇಕ ರೈ : ಅನ್ವಯಿಕ ಜಾನಪದ, ಪು.೧೮

೨೪. ನೋಡಿ : ಎಡ್ಗರ್ ಥರ್ಸ್ಟನ್ : ಕ್ಯಾಸ್ಟ್ಸ್ ಆಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ವಾ-೧, ೧೯೮೭, ಪು. ೧೮೦-೨೦೭

೨೫. ಬಾಂಬೆ ಗ್ಯಾಸೆಟಿಯರ್, ಭಾಗ-೩, ಪು. ೧೯೯

೨೬. ಅದೇ : ಪು. ೧೯೯

***

ಅಧ್ಯಾಯ -೪

ಕನ್ನಡಕಾವ್ಯಗಳು ನಿರೂಪಿಸುವ ಬೇಟೆ ಮತ್ತು ಬೇಡರ ಕಥಾಪ್ರಸಂಗಗಳು

೪.೧. ಕಾವ್ಯಗಳು

೪.೨. ಮೌಖಿಕ ಸಾಹಿತ್ಯ

ಕನ್ನಡಕಾವ್ಯಗಳು ನಿರೂಪಿಸುವ ಬೇಟೆ ಮತ್ತು ಬೇಡರ ಕಥಾಪ್ರಸಂಗಗಳು

೪.೧ ಕಾವ್ಯಗಳು

ಕನ್ನಡ ಕಾವ್ಯಗಳಲ್ಲಿ ಬೇಟೆ ಮತ್ತು ಬೇಡರ ಪ್ರಸಂಗ ಕಥೆಗೆ ಪೂರಕವಾಗಿ ಕಂಡುಬರುತ್ತದೆ. ಈ ಪ್ರಸಂಗವನ್ನು ಕವಿ ಸೃಷ್ಟಿಸಿರುವ ಸಂದರ್ಭಗಳೆಂದು ಹೇಳಬಹುದು. ಸಮಯ, ಅವಕಾಶ ಮತ್ತು ಪ್ರಕರಣಗಳು ಅದರ ಸ್ವರೂಪಕ್ಕೆ ಅನುಗುಣವಾಗಿ ನಿಲ್ಲುತ್ತವೆ. ಆದಿಯಿಂದ ಮಾನವ ಗುಹೆ, ಬಂಡೆ, ಶಿಲ್ಪಗಳ ಮೂಲಕ ತನ್ನ ಅನುಭವಗಳನ್ನು ಕೆತ್ತಿ ತೋರ್ಪಡಿಸಿದ್ದಾನೆ. ಇವುಗಳಲ್ಲಿ ನಿಜವಾದ ಘಟನೆ, ಸಂದರ್ಭ ಇತರ ವಿವರವನ್ನು ತಿಳಿಯುವುದು ಕಷ್ಟ. ಗುಡುಗು, ಮಿಂಚು, ಸಿಡಿಲು, ಕಾಟ್ಗಿಚ್ಚು, ಗಾಳಿ, ಮಳೆ, ಕಾಡುಮೃಗಗಳ ಉಪಟಳ, ಇತರೆ ಕೃತಕ ಮತ್ತು ಸ್ವಾಭಾವಿಕ ಸನ್ನಿವೇಶಗಳನ್ನು ತಿಳಿಸುವುದು ಸಾಧ್ಯವಾಗದೇ ಇರಬಹುದು. ಇಂತಹ ಸಂದರ್ಭಗಳನ್ನು ದಾಖಲಿಸುವ ಕಾರ್ಯ ಪೂರ್ಣವಾಗಿ ನಡೆದಿಲ್ಲ. ಕವಿಗಳು ಮಾತ್ರ ತಮ್ಮ ಕಾವ್ಯಗಳಲ್ಲಿ ಕೆಲವು ವಿವರಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಸಮಾಜದ ಎಲ್ಲ ವಿವರಗಳನ್ನು ತಿಳಿಯುವುದು ಕಷ್ಟಸಾಧ್ಯ. ಆಶ್ರಯದಾತ ಕವಿ ರಾಜನನ್ನು ಹೊಗಳುವಾಗ, ಕಾವ್ಯದ ನಾಯಕ ರಾಜನಾಗಿರುವ ಸಂದರ್ಭದಲ್ಲಿ ಆಶಯಗಳ ಮೋಡಿಗೆ ಬಲಿಯಾಗಿರುತ್ತಾನೆ. ಹೀಗಾಗಿ ಅರಸನ ಋಣ ತೀರಿಸಲು ವರ್ಣನೆ ಮೂಲಕ ವೈಭವೀಕರಿಸಿರಬೇಕು. ಆ ಮೂಲಕ ಸೂಕ್ಷ್ಮವಾಗಿ ಅಂದಿನ ಸಮಾಜದ ನಾನಾ ಅವಸ್ಥೆಗಳನ್ನು ತಿಳಿಯಲು ಸಾಧ್ಯವಿದೆ. ಇವು ಸಮಕಾಲೀನ ಸಮಾಜದ ಸಾಂಸ್ಕೃತಿಕ ಅಂಶಗಳೆಂಬುದನ್ನು ಮರೆಯುವಂತಿಲ್ಲ.

ಬೇಟೆಯ ಸಂದರ್ಭಗಳನ್ನು ಶಿಲ್ಪ, ಶಾಸನ, ವೀರಗಲ್ಲು ಇತರ ಪುರಾತತ್ವ ಆಧಾರಗಳಲ್ಲಿ ತಿಳಿಸಿರುವ ವಿಧಾನವೇ ಬೇರೆ. ಕಾವ್ಯದಲ್ಲಿ ಬರುವ ಬೇಟೆಯ ಸ್ವರೂಪವೇ ಬೇರೆ. ಪುರಾತತ್ವ ಆಧಾರಗಳಲ್ಲಿ ಬೇಟೆ ಸರ್ವರಿಗೂ ಆಹಾರ ಮಾಧ್ಯಮವಾಗಿದೆ. ಅಲ್ಲಿ ರಾಜ- ಪ್ರಜೆಗಳಿಗೆ ವ್ಯತ್ಯಾಸವೇ ಇಲ್ಲ. ಕಾವ್ಯದಲ್ಲಿ ಬೇಟೆಗಾರನಾಗುವ ರಾಜನು ಕಾವ್ಯದ ನಾಯಕನು ಆಗಿರಬಹುದು. ಇಲ್ಲಿ ರಾಜನನ್ನು ಬೇಟೆಗಾರರು ಬೇಟೆಗೆ ಕರೆತರುತ್ತಾರೆ. ಇಂಥ ಬೇಟೆ ಪ್ರಜೆಗಳ ರಕ್ಷಣೆಗಾಗಿ, ಆಹಾರಕ್ಕಾಗಿ, ಸ್ವಯಂರಕ್ಷಣೆಗಾಗಿ, ಮನೋರಂಜನೆಗಾಗಿ ಸೀಮಿತವಾದಂತಿದೆ. ಇದನ್ನು ಲೌಕಿಕ ಬೇಟೆ ಎನ್ನಬಹುದು. ಏಕೆಂದರೆ ರಕ್ಷಣೆಗಾಗಿ ದುಷ್ಟಪ್ರಾಣಿಗಳನ್ನು ಕೊಲ್ಲುವ ಇತರ ಸಂಗತಿಗಳು ಗಮನಾರ್ಹ. ಕಿರಾತಾರ್ಜುನೀಯ ಪ್ರಸಂಗದಲ್ಲಿ ಶಿವ-ಅರ್ಜುನರ ಬೇಟೆ, ಯುದ್ಧಮಾಡುವ ಸಂದರ್ಭ ಅಲೌಕಿಕ ಬೇಟೆಯಾಗಿದೆ.

ಕರ್ನಾಟಕವನ್ನಾಳಿದ ರಾಜವಂಶಗಳಲ್ಲಿ ರಾಜಾಶ್ರಯವಿದ್ದ ಮತ್ತು ರಾಜಾಶ್ರಯವಿಲ್ಲದ ಕವಿಗಳೂ ಇದ್ದರು. ಒಟ್ಟು ಇವರ ಕಾವ್ಯಗಳಲ್ಲಿ ಬೇಟೆ ಸಂದರ್ಭ ವ್ಯಕ್ತಗೊಂಡ ಬಗೆಯನ್ನು ಕಾಲಾನುಕ್ರಮಕ್ಕೆ ತಕ್ಕಂತೆ ವಿವರಿಸಬಹುದು. ರಾಷ್ಟ್ರಕೂಟರ ಕಾಲದಲ್ಲಿ ನೃಪತುಂಗ, ಶಿವಕೋಟ್ಯಾಚಾರ್ಯ, ಪಂಪ, ಪೊನ್ನ, ತ್ರಿವಿಕ್ರಮ, ಅಸಗ, ಕುಮುದೇಂದು, ಶಂಕರಾಚಾರ್ಯ ಮೊದಲಾದವರು ಕಂಡುಬರುತ್ತಾರೆ. ಪಂಪನ ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯದಲ್ಲಿ ಬೇಟೆ ಸಂದರ್ಭ ಎರಡು ರೀತಿಯಲ್ಲಿ ಮೂಡಿದೆ. ಲೌಕಿಕ : ಜನರು ಆಹಾರ, ರಕ್ಷಣೆ, ಮನೋರಂಜನೆಗೆಂದು ಬೇಟೆಯಾಡಿದರೆ, ಹದಿನೆಂಟು ವರ್ಣನೆಗಳ ನಿಮಿತ್ತ ಮೃಗಯಾದಲ್ಲಿ ಕಿರಾತಾರ್ಜುನೀಯ ಪ್ರಸಂಗವನ್ನು ಕವಿ ತಂದಿದ್ದಾನೆ.

ಕಲ್ಯಾಣ ಚಾಲುಕ್ಯರ ಅವಧಿಯಲ್ಲಿ ರನ್ನ, ಶ್ರೀಧರಾಚಾರ್ಯ, ೨ನೇ ಸೋಮೇಶ್ವರ, ಬಲ್ಹಣ, ವಿಜ್ಞಾನೇಶ್ವರ, ವಾದಿರಾಜ, ಒಂದನೇ ನಾಗವರ್ಮ, ೨ನೇ ಜಗದೇಕಮಲ್ಲ, ಚಂದ್ರರಾಜ, ನಾಗಚಂದ್ರ, ಬ್ರಹ್ಮಶಿವ, ನಯಸೇನ, ದೇವರದಾಸಿಮಯ್ಯ, ಸಕಲೇಶಮಾದರಸ, ದುರ್ಗಸಿಂಹ, ಶಾಂತಿನಾಥ ಮತ್ತು ೨ನೇ ಚಾವುಂಡರಾಯ ಪ್ರಮುಖ ಕವಿಗಳಾಗಿದ್ದಾರೆ. ನಾಗವರ್ಮ, ರನ್ನ ಇತರ ಕವಿಗಳನ್ನು ಪ್ರಾತಿನಿಧಿಕವಾಗಿಟ್ಟುಕೊಂಡು ಆ ಕಾಲದ ಬೇಟೆ ಸಂದರ್ಭಗಳನ್ನು ಸಮೀಕ್ಷಿಸಲಾಗಿದೆ.

ಕಲ್ಯಾಣದ ಕಲಚೂರ್ಯರಲ್ಲಿ ಬಸವೇಶ್ವರ, ಸಿದ್ಧರಾಮ, ಆಯ್ದಕ್ಕಿರಾಮಯ್ಯ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಉರಿಲಿಂಗಪೆದ್ದಿ, ಚೆನ್ನಬಸವ, ಅಕ್ಕಮಹಾದೇವಿ, ಅಕ್ಕನಾಗಲಾಂಬಿಕೆ ಮತ್ತು ಅಲ್ಲಮಪ್ರಭು ಮೊದಲಾದ ವಚನಕಾರರು ಕಂಡುಬರುತ್ತಾರೆ. ಇವರು ಜೀವನಾದರ್ಶಕ್ಕೆ ರೀತಿ, ನೀತಿ, ತಾತ್ವಿಕತೆಯನ್ನು ಬೋಧಿಸಿದ್ದಾರೆ. ವಿಚಾರ, ಮಾತುಗಳು ವಚನಗಳ ರೂಪದಲ್ಲಿವೆ; ಈ ವಚನಗಳಲ್ಲಿ ಬೇಟೆ ರೂಪಕವಾಗಿ ಬರುತ್ತದೆ. ಪ್ರಾಸಂಗಿಕವಾಗಿ ಎರಡು ವಚನಗಳನ್ನಷ್ಟೆ ಇಲ್ಲಿ (ಬಸವಣ್ಣ, ಅಕ್ಕಮಹಾದೇವಿ) ವಿಶ್ಲೇಷಿಸಲಾಗುವುದು.

ಹೊಯ್ಸಳರ ಅವಧಿಯು ಎಲ್ಲ ರಂಗಗಳಲ್ಲಿಯೂ ಪಕ್ವವಾಗಿರುವಂತೆ, ಬೇಟೆ ಉತ್ತುಂಗ ಶಿಖರ ತಲುಪಿದ್ದಿತು. ಇಲ್ಲಿ ಜನಸಾಮಾನ್ಯರ ಮತ್ತು ಅಳರಸರ ಬೇಟೆಯನ್ನು ಕವಿಗಳು ಕನ್ನಡ ಕಾವ್ಯಗಳಲ್ಲಿ ತಿಳಿಸಿದ್ದಾರೆ. ನಾಗಚಂದ್ರ, ಕಂತಿ, ನಯಸೇನ, ಜಗದಳಸೋಮನಾಥ, ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ರುದ್ರಭಟ್ಟ, ನೇಮಿಚಂದ್ರ, ಜನ್ನ, ಮಲ್ಲಿಕಾರ್ಜುನ, ಕೇಶಿರಾಜ, ೨ನೇ ನಾಗವರ್ಮ, ಆಂಡಯ್ಯ, ಮಹಾಬಲ, ಆಚಣ್ಣ, ನರಹರಿತೀರ್ಥ, ಚೌಂಡರಸ ಮೊದಲಾದ ಕವಿಗಳಿದ್ದರು.

ಕಾಡಿನ ಮೃಗಬಾಧೆಯನ್ನು ತಪ್ಪಿಸಲು ರಾಜನಲ್ಲಿಗೆ ಬರುವ ಸಂದರ್ಭ ಬಹುತೇಕ ಮಧ್ಯಕಾಲೀನ ಕಾವ್ಯಗಳಲ್ಲಿ ಬರುತ್ತದೆ. ಬೇಡರಪಡೆ, ಪುಳಿಂದನಾಯಕ, ಶಬರಬಲ, ಯುದ್ಧರಂಗ, ಶುಶ್ರೂಷೆ, ಕಾಡು, ಮಾಯಾವರಾಹ, ಪ್ರಣಯ ಕಲಹ, ವಿರಹತಾಪ, ರಾಜನಬೇಟೆ, ಭವಾವಳಿ, ಲೈಂಗಿಕತೆ, ವಿನೋದ ಇತ್ಯಾದಿ ಸಂದರ್ಭಗಳು ಲೌಕಿಕ ಬೇಟೆಯಲ್ಲಿ ಬರುತ್ತವೆ. ಇದಕ್ಕೆ ಪ್ರಜಾರಕ್ಷಣೆಯ ಬೇಟೆಯೆಂದು ಕರೆಯಬಹುದು. ಅನುಕೂಲಕ್ಕಾಗಿ ಹರಿಶ್ಚಂದ್ರಕಾವ್ಯ, ಗಿರಿಜಾಕಲ್ಯಾಣ, ಜಗನ್ನಾಥವಿಜಯ, ನೇಮಿನಾಥಪುರಾಣ, ಯಶೋಧರಚರಿತೆ, ಶಬ್ದಮಣಿದರ್ಪಣ, ಕರ್ನಾಟಕ ಕಾದಂಬರಿಗಳಲ್ಲಿನ ಮೇಲಿನ ಸಂದರ್ಭಗಳನ್ನು ಸಮೀಕ್ಷಿಸಬಹುದಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಬೇಟೆಗಾರಿಕೆ ವ್ಯಾಪಕವಾಗಿತ್ತು. ಪ್ರಜೆಗಳ ಮೂಲಕ ರಾಜ ಬೇಟೆಯಾಡುವ ಹವ್ಯಾಸ ಇಮ್ಮಡಿಗೊಂಡಿದ್ದು ಇಲ್ಲಿಂದಲೇ ಇರಬೇಕು. ಬೇಡರಗುಂಪು (ಬೇಟೆಕಾರ) ಪ್ರತ್ಯೇಕವಾಗಿದ್ದ ಬಗ್ಗೆ ಆಧಾರಗಳಿವೆ. ಇವರಿಗೆ ರಾಜ ಪ್ರೋತ್ಸಾಹ ಕೊಟ್ಟು, ವಿವಿಧ ರೀತಿಯ ರಾಜಮನ್ನಣೆಗೆ ಪಾತ್ರರನ್ನಾಗಿ ಮಾಡಿದ್ದ. ಕಾವ್ಯದಲ್ಲಿ ಬೇಟೆ ವರ್ಣಿತಗೊಂಡಂತೆ, ದೇವಾಲಯದ ಕಂಬಗಳು, ಶಿಲ್ಪ, ಶಾಸನ ಮೊದಲಾದವುಗಳಲ್ಲಿ ಬೇಟೆ ನೆನಪು ಉಳಿದುಬಂತು. ಈ ಕಾಲದಲ್ಲಿ ವಿದ್ಯಾರಣ್ಯ, ಸಾಯಣ, ಶ್ರೀನಾಥ, ಲಕ್ಕಣ್ಣ ದಂಡೇಶ, ಸಾಳುವ ತಿಮ್ಮ, ಕನಕದಾಸ, ಪುರಂದರದಾಸ, ಚಾಮರಸ, ರತ್ನಾಕರವರ್ಣಿ, ಕುಮಾರವ್ಯಾಸ, ಕುಮಾರವಾಲ್ಮೀಕಿ, ಲಕ್ಷ್ಮೀಶ, ವಿರೂಪಾಕ್ಷ ಪಂಡಿತ ಮೊದಲಾದ ಕವಿಗಳಿದ್ದರು.ವಿದೇಶಿ ಯಾತ್ರಿಕರ ಬೇಟೆ ಅನುಭವಗಳನ್ನು ತಿಳಿಸಲಾಗಿದೆ. ಕುಮಾರವ್ಯಾಸ ಭಾರತ, ಚೆನ್ನಬಸವ ಪುರಾಣಗಳಲ್ಲಿ ಬರುವ ಕಿರಾತಾರ್ಜುನೀಯ ಪ್ರಸಂಗವನ್ನು ಬಿಟ್ಟರೆ, ಉಳಿದ ಕಾವ್ಯಗಳಲ್ಲಿ ಪ್ರಜಾರಕ್ಷಣೆಯ ಬೇಟೆ

ಕಾಣಿಸಿಕೊಳ್ಳುತ್ತದೆ. ಮೋಹನತರಂಗಿಣಿ, ತೊರವೆರಾಮಾಯಣ, ಜೈಮಿನಿಭಾರತ ಕಾವ್ಯಗಳಲ್ಲಿನ ಬೇಟೆ-ಬೇಡರ ಸಂದರ್ಭಗಳು ಗಮನಾರ್ಹವಾಗಿವೆ.

ವಿಜಯನಗರೋತ್ತರ (ಪಾಳೆಯಗಾರರ) ಅವಧಿಯಲ್ಲಿ ಕವಿಗಳು ಕಾವ್ಯ ರಚಿಸಿದ್ದು ಸ್ಪಷ್ಟ. ತಿರುಮಲಾರ್ಯ, ರಂಗನಾಥ ದೀಕ್ಷಿತ, ಮುಮ್ಮಡಿ ಕೃಷ್ಣರಾಜ ಒಡೆಯರ್, ಸರ್ವಜ್ಞ, ಬಸವಪ್ಪನಾಯಕ, ಲಿಂಗಪ್ಪಕವಿ, ಯಳಂದೂರು ಷಡಕ್ಷರದೇವ, ನಂಜುಂಡ ಇತರರನ್ನು ಹೆಸರಿಸಬಹುದು. ಷಡಕ್ಷರದೇವನ ಶಬರಶಂಕರವಿಳಾಸವನ್ನು ಪ್ರಧಾನವಾಗಿ ನೋಡಲಾಗಿದ್ದು, ಕಿರಾತಾರ್ಜುನೀಯ ಪ್ರಸಂಗ ಈ ಕೃತಿಗೆ ಒಂದು ವಿಶಿಷ್ಟತೆಯನ್ನು ತಂದುಕೊಟ್ಟಿದೆ. ಸರ್ವಜ್ಞನ ತ್ರಿಪದಿ, ನಂಜುಂಡನ ಕುಮಾರರಾಮನ ಸಾಂಗತ್ಯ, ಇತರ ಕೃತಿಗಳಲ್ಲಿ ಬೇಟೆಯ ಸಂದರ್ಭಗಳನ್ನು ಸಮೀಕ್ಷಿಸುವ ಅಗತ್ಯವಿದೆ.

ವಿವಿಧ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆಯ ಸಂದರ್ಭಗಳು ಆ ಕಾಲದ ಸಾಮಾಜಿಕ ಲಕ್ಷಣಗಳಾಗಿರಬಹುದು. ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ಬೇಟೆಯ ಪ್ರಸ್ತಾಪ ಸೂಕ್ಷ್ಮತೆ, ಕಾಮ ಪ್ರಚೋದನೆಗೆ ಸಂಬಂಧಿಸಿದಂತೆ ಕಥೆಗೆ ಮತ್ತೊಂದು ತಿರುವನ್ನು ಕೊಡುತ್ತದೆ. ಬೇಟೆ ಪರಾಕ್ರಮ, ತಂತ್ರೋಪಾಯ, ಮೈಬಳಲಿಕೆಯಿಂದ ಹೆಣ್ಣಿನೊಂದಿಗೆ ಮಿಲನ ಕಾವ್ಯಕಥೆಗಳಲ್ಲಿ ಸಾಮಾನ್ಯವಾಗಿರುತ್ತದೆ. ದುಷ್ಯಂತ, ಶಂತನು, ಹರಿಶ್ಚಂದ್ರ ಇತರರು ಬೇಟೆಯ ನಂತರ ಹೆಣ್ಣನ್ನು ಕಾಣುತ್ತಾರೆ. ನಳ, ಧರ್ಮರಾಯ, ಕುಮಾರರಾಮ ಇವರು ಪಗಡೆ ಮತ್ತು ಚೆಂಡಾಟ ಆಡಿದ ನಂತರ ದುರಂತಕ್ಕೊಳಗಾಗುತ್ತಾರೆ. ಬೇಡರು ಮಾತ್ರ ಸರ್ವಕಾಲಕ್ಕೂ ಪ್ರಕೃತಿ ಸಂಪತ್ತಿಗಾಗಿ ಕಾಡಿನಲ್ಲಿ ಬೇಡತಿಯರೊಂದಿಗೆ ಕಾಲ ಕಳೆಯುತ್ತಿದ್ದರು.

ಇಲ್ಲಿ ಆಯ್ದ ಕೆಲಕಾವ್ಯಗಳಲ್ಲಿ ಬೇಟೆ-ಬೇಡರ ಸಂದರ್ಭಗಳನ್ನು ಕವಿ ಮತ್ತು ಕಾವ್ಯಗಳ ಕಾಲಾನುಕ್ರಮಣಿಕೆಯಂತೆ ವಿವರಿಸಲಾಗಿದೆ. ಬೇಟೆಯ ಸಂದರ್ಭಗಳು ಕಾವ್ಯಗಳಿಗೆ ಒಂದು ವಿಶಿಷ್ಟ ಮೆರಗನ್ನು ತಂದುಕೊಟ್ಟಿದೆ. ಶೈವಪುರಾಣಗಳ ಪ್ರಕಾರ ಶಿವ ಬೇಟೆಗೆ ಹೋಗಬೇಕು. ಬೇಟೆಯಾಡಿ ಬಂದ ನಂತರ ಗೌರಿ ಬಾಗಿಲು ತೆಗೆಯುವುದಿಲ್ಲ. ಹೀಗೆ ಇಬ್ಬರಲ್ಲಿ ಸಂವಾದ ನಡೆಯುತ್ತದೆ. ಶೈವಕವಿಗಳು ಶಿವನನ್ನು ವೈಭವೀಕರಿಸಲು ಕಿರಾತಾರ್ಜುನೀಯಕ್ಕೆ ಮನಸೋಲುತ್ತಾರೆ. ಹೀಗೆ ಮಹಾಕಾವ್ಯದಲ್ಲಿ ನವರಸ, ಹದಿನೆಂಟು ವರ್ಣನೆಗಳು ಬರುವಾಗ ಮೃಗಯಾವು ಕಿರಾತಾರ್ಜುನೀಯ ಪ್ರಸಂಗವನ್ನು ಒಳಗೊಂಡಿರುತ್ತದೆ. ಪಂಪನ ವಿಕ್ರಮಾರ್ಜುನವಿಜಯ, ಕುಮಾರವ್ಯಾಸ ಭಾರತ, ಚೆನ್ನಬಸವಪುರಾಣ ಮತ್ತು ಶಬರಶಂಕರವಿಳಾಸ ಕಾವ್ಯಗಳಲ್ಲಿನ ಸಂದರ್ಭಗಳನ್ನಿಲ್ಲಿ ವಿವರಿಸಲಾಗಿದೆ.

ಪ್ರಜಾರಕ್ಷಣೆ ಅಥವಾ ಲೌಕಿಕಬೇಟೆ ಜನಸಾಮಾನ್ಯರ ಬೇಟೆ ಚಿತ್ರಣವನ್ನೇ ಹೆಚ್ಚಾಗಿ ಸಂಕೇತಿಸುತ್ತದೆ. ಸಂದರ್ಭಗಳು ನಾನಾ ರೂಪದಲ್ಲಿವೆ. ಹರಿಶ್ಚಂದ್ರಕಾವ್ಯದಲ್ಲಿ ಮಾಯಾವರಾಹ, ಶಬರ ಬಲ, ಬೇಡರಪಡೆ, ಯುದ್ಧರಂಗ ಇತ್ಯಾದಿ ಪ್ರಸಂಗಗಳಲ್ಲಿ ಬೇಟೆ ಸಂದರ್ಭ ಗುರುತಿಸಬಹುದು. ಕರ್ಣಪಾರ್ಯನ ನೇಮಿನಾಥ ಪುರಾಣದಲ್ಲಿ ಋಷಿದಂಪತಿಗಳಿಬ್ಬರನ್ನು ಕಾಡುಜಿಂಕೆಗಳೆಂದು ಬಗೆದು ಬೇಟೆಯಾಡಿದ ಪ್ರಾಯಶ್ಚಿತ್ತಕ್ಕಾಗಿ ಧರ್ಮಬೋಧೆ ಅಥವಾ ದೀಕ್ಷೆ ಪಡೆಯುವ ಸನ್ನಿವೇಶವಿದೆ. ಹರಿಹರನ ಗಿರಿಜಾಕಲ್ಯಾಣದಲ್ಲಿ ಪುಳಿಂದನಾಯಕ, ಬೇಟೆಗಾರರು, ಕಾಡು, ಇತರ ವರ್ಣನೆಗಳಿವೆ. ಲಕ್ಷ್ಮೀಶನ ಜೈಮಿನಿಭಾರತದಲ್ಲಿ ಬೇಟೆ ಸಪ್ತವ್ಯಸನ, ಭಾವ ಸೌಂದರ್ಯ, ಋಷಿಯ ತಪಸ್ಸು, ಭಿಲ್ಲರ ಸಮೂಹ, ಬೇಟೆನಾಯಿ, ಪ್ರಾಣಿ ಬಲಿ, ಖಗಮೃಗ, ಬೇಟೆಗಾರರು ಮೊದಲಾದ ಬೇಟೆ ಸಂದರ್ಭಗಳಿವೆ. ಚೌಂಡರಸ ಬೇಡರಹಳ್ಳಿ, ಕಾಡಿನ ಮೃಗಬಾಧೆಯನ್ನು ನಳಚಂಪು, ಅಭಿನವದಶಕುಮಾರ ಚರಿತೆಗಳಲ್ಲಿ ತಿಳಿಸಿದ್ದಾನೆ. ವಿರೂಪಾಕ್ಷ

ಪಂಡಿತನು ಮೊಗವಾಡಗಳನ್ನು ಪ್ರಥಮವಾಗಿ ಉಲ್ಲೇಖಿಸಿದ್ದು ಗಮನಾರ್ಹ. ಜನ್ನನು ಯಶೋಧರಚರಿತೆಯಲ್ಲಿ ಭವಾವಳಿಯನ್ನು ಹೇಳುವಾಗ ಬೇಟೆ ಪ್ರಸಂಗ ಬಂದಿದೆ. ದೇವ(ಪ)ರಾಜನ ಸೊಬಗಿನಸೋನೆಯಲ್ಲಿ ರಾಜನಬೇಟೆ, ಬೇಟೆಯ ಕಥೆ, ಹಿಂಸಾಕೃತ್ಯದ ವರ್ಣನೆ, ಕಾಡಿನ ಮೃಗಬಾಧೆ ಬಗ್ಗೆ ಬೇಟೆ ಸಂದರ್ಭಗಳಿವೆ. ಕುಮಾರ ವಾಲ್ಮೀಕಿ ತೊರವೆರಾಮಾಯಣದಲ್ಲಿ ಬೇಡರ ವೇಷ, ಕಾಡಿನ ಮೃಗಬಾಧೆ ಬಗ್ಗೆ ಹೇಳುತ್ತಾನೆ. ಕನಕದಾಸ ಮೋಹನ ತರಂಗಿಣಿಯಲ್ಲಿ ಬೇಟೆ ನೃತ್ಯ, ನಳಚರಿತ್ರೆಯಲ್ಲಿ ಬೇಡರಪಡೆ, ಪುಳಿಂದನಾಯಕನ ಸಂದರ್ಭವಿದೆ. ಜನ್ನನ ಅನಂತನಾಥಪುರಾಣದಲ್ಲಿ ವಿರಹಾವಸ್ಥೆಯಿದ್ದರೆ, ಮಲ್ಲಿಕಾರ್ಜುನ ಸೂಕ್ತಿ ಸುಧಾರ್ಣವದಲ್ಲಿ ವಿನೋದ, ರುದ್ರಭಟ್ಟನ ಜಗನ್ನಾಥ ವಿಜಯದಲ್ಲಿ ರತಿಕ್ರೀಡೆ, ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಬೇಡ - ಬೇಡತಿಯರ ಲೈಂಗಿಕತೆ, ಚಿಕ್ಕದೇವರಾಜನ ವಂಶಾವಳಿಯಲ್ಲಿ ಬೇಟೆ ಮೂಲಕ ಅಧಿಕಾರ ಕಸಿದುಕೊಳ್ಳುವ ಸಂದರ್ಭಗಳಿವೆ. ಷಡಕ್ಷರದೇವ ತನ್ನ ಮೂರು ಕೃತಿಗಳಲ್ಲಿ ಬೇಡರ ಪಡೆ, ಕಿರಾತರೂಪ, ದೇವಪಡೆ, ಬೇಡಪಡೆ, ಕಿರಾತರತಿ, ಬೇಟೆಗಾರರು, ಮುನಿಯುವುದು, ಮೃಗಯಾವಿಹಾರ, ಕಿರಾತ ಲೀಲೆ, ಬೇಡರಕಣ್ಣಪ್ಪ ಇತರ ಪ್ರಸಂಗಗಳನ್ನು ಚಿತ್ರಿಸಿದ್ದಾನೆ. ನಂಜುಂಡನ ರಾಮನಾಥಚರಿತೆಯಲ್ಲಿ ಶುಶ್ರೂಷೆ ಮೂಲಕ ಬೇಟೆ ಗಮನ ಸೆಳೆಯುತ್ತದೆ. ಸರ್ವಜ್ಞನು ಬೇಡನ ತುಂಟತನದ ಬಗ್ಗೆ ತಿಳಿಸಿದ್ದಾನೆ.

ಬೇಟೆ ಆಹಾರವಾದಂತೆ ವಿನೋದ ಮತ್ತು ರಕ್ಷಣೆಗೆ ಪೂರಕವಾಗಿತ್ತು. ಮಾನವ ಮತ್ತು ನಿಸರ್ಗದಕೊಂಡಿಯೇ ಬೇಟೆ. ಪ್ರಕೃತಿ ಸಂಪತ್ತಿನ ಹಂಚಿಕೆ ಪ್ರಮುಖ ಸಂಗತಿ. ಕ್ರೀಡೆ, ವಲಸೆ, ಸಂಸ್ಕೃತಿ, ಜನಸಂಖ್ಯೆ, ಪ್ರಾಣಿಗಳ ವರ್ತನೆ, ಸಾಮಾಜಿಕ ಪದ್ಧತಿ, ಹಿಂಸೆ, ಪ್ರಾಣಿಗಳಆರಾಧನೆ, ನಾನಾ ಬಗೆಯ ಲಕ್ಷಣಗಳನ್ನು ಕಾಣಬಹುದು.

ಈ ಅಧ್ಯಾಯದಲ್ಲಿ ಮೊದಲಿಗೆ ಆಯ್ದ ಕಾವ್ಯಗಳಲ್ಲಿನ ಲೌಕಿಕ ಬೇಟೆಯನ್ನು ತಿಳಿಸಲಾಗುವುಗುವುದು. ಹೀಗೆ ಪ್ರಜಾರಕ್ಷಣೆಗೆಂದು ಬೇಡರು ಮತ್ತು ರಾಜನು ಭಾಗವಹಿಸುವ ಬೇಟೆ, ಪ್ರಜೆಗಳ ಪಾತ್ರ, ಹಂಚಿಕೆ ಮೊದಲಾದ ಅಂಶಗಳನ್ನು ಚರ್ಚಿಸಲಾಗುವುದು. ಎರಡನೇ ಭಾಗದಲ್ಲಿ ಕಾವ್ಯದಲ್ಲಿ ಅಂತರ್ಗತವಾದ ಕಿರಾತಾರ್ಜುನೀಯ ಪ್ರಸಂಗವನ್ನು ಕುರಿತು ಮೇಲೆ ಹೇಳಿದಂತೆ ತಿಳಿಸಲಾಗುವುದು.

೧. ಆಯ್ದ ಕಾವ್ಯಗಳಲ್ಲಿ ಲೌಕಿಕ ಬೇಟೆ

೧. ಪಂಪನ ವಿಕ್ರಮಾರ್ಜುನ ವಿಜಯ : ಪಂಪನು ಬೇಟೆಯನ್ನು ಎರಡು ರೀತಿಯಲ್ಲಿ ನಿರೂಪಿಸಿದ್ದಾನೆ: ಒಂದು (ಅಲೌಕಿಕ) ಕಿರಾತಾರ್ಜುನೀಯ ಪ್ರಸಂಗ. ಮತ್ತೊಂದು (ಲೌಕಿಕ) ಪ್ರಜಾರಕ್ಷಣೆ, ಆಹಾರಕ್ಕಾಗಿ ಬೇಟೆ. ಈ ಸಾಮಾನ್ಯ ಬೇಟೆಯನ್ನು ಅರಸ ಮತ್ತು ಬೇಡರು ಕೈಗೊಂಡದ್ದು ಸ್ಪಷ್ಟ. ಪಂಪನ ಕಾಲಕ್ಕೆ ಕ್ಷಾತ್ರವೃತ್ತಿಗಳಲ್ಲಿ ಬೇಟೆ ಪ್ರಬಲವಾಗಿತ್ತು. ಹೀಗಾಗಿ ಬೇಟೆಯನ್ನು ನೈಜವಾಗಿ ಚಿತ್ರಿಸಿದ್ದಾನೆ. ಇವನು ವ್ಯಾಸಭಾರತದ ಕಥಾವಸ್ತುವನ್ನೇ ಆಯ್ದುಕೊಂಡರೂ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿಂದ್ದುಟು. ಪಂಪನು ಬೇಟೆಯ ಮೂಲಕ ನಾನಾ ಬದಲಾವಣೆ, ಅನಾಹುತ, ಪರಿಣಾಮಗಳ ಚಿತ್ರಣವನ್ನು ಕೊಟ್ಟಿದ್ದಾನೆಂಬುದು ಗಮನಾರ್ಹ.

ಒಂದಾನೊಂದು ಸಮಯದಲ್ಲಿ ಶಂತನು ಮೃಗಯಾ ವ್ಯಾಜದಿಂದ ಸಂಚರಿಸುತ್ತಿರುವಲ್ಲಿ ಯೋಜನಗಂಧಿಯ ವಾಸನೆ ಬಡಿದು, ಮನಸೋತು ಆಕೆಯನ್ನರಸಿ ಕಂಡು ಪ್ರೇಮಾತಿಶಯದಿಂದ ಆಕೆಯನ್ನು ಪಿಶಾಚಿ ಹಿಡಿದಂತೆ ತನ್ನೊಡನೆ ಬಾರೆಂದು ಕರೆಯಲು, ಆಕೆಯು ನಾಚಿ, ತನ್ನ ತಂದೆಯನ್ನು ಕೇಳಿರೆಂದು ಹೇಳಿದಳು. ಆಕೆಯ ತಂದೆ ದಾಶರಾಜನಲ್ಲಿಗೆ ಹೆಣ್ಣನ್ನು ಕೇಳಲು ಶಂತನು ಹೆಗ್ಗಡೆಗಳನ್ನು ಕಳುಹಿಸಿದನು. ಪಟ್ಟಕ್ಕೆ ಯೋಗ್ಯವಾದ ಮಗನಿರುವಾಗ ಮಗಳನ್ನು ಕೊಡೆನೆಂದು

ಹೇಳಿದ. ತನ್ನ ಮಗಳಲ್ಲಿ ಹುಟ್ಟಿದ ಮಗನನ್ನು ಹಿರಿಯ ಮಗನೆಂದು ಭಾವಿಸಿ ಪಟ್ಟಕಟ್ಟಿದರೆ ಮಗಳನ್ನು ಕೊಡುವುದಾಗಿ ದಾಶರಾಜನು ಹೇಳಲು ಆ ಸಂಗತಿಯನ್ನು ಮಂತ್ರಿಗಳು ದೊರೆಗೆ ಅರಿಕೆ ಮಾಡಿದರು.[೧] ಪರಾಕ್ರಮಶಾಲಿ ಗಾಂಗೇಯನಿರುವಾಗ ತನ್ನ ತೀಟೆಗಾಗಿ ಪ್ರಿಯದಾಕೆಯ ಮಗನಿಗೆ ರಾಜ್ಯಕೊಟ್ಟನೆಂಬ ಅಪಖ್ಯಾತಿ ಲೋಕಕ್ಕೆಲ್ಲಾ ಹರಡುತ್ತದೆಂದು ದೊರೆ ಮನಸ್ಸು ಬದಲಾಯಿಸಿದ. ಇದನ್ನರಿತ ಗಾಂಗೇಯ ದಾಶರಾಜನಲ್ಲಿಗೆ ಬಂದು ನಾನು ಮದುವೆ ಮಾಡಿಕೊಳ್ಳೆನೆಂದೂ ನಿನ್ನ ಮಗಳಲ್ಲಿ ಹುಟ್ಟಿದ ಮಕ್ಕಳೇ ಅರ್ಹರೆಂದು ಪ್ರಮಾಣ ಮಾಡಿ ಸತ್ಯವತಿಯನ್ನು ತಂದು ತಂದೆಗೆ ಮದುವೆ ಮಾಡುವನು. ಶಂತನು ಬೇಟೆಗೆ ಹೋಗದಿದ್ದರೆ ಈ ಸಂದರ್ಭ ಒದಗಿ ಬರುತ್ತಿರಲಿಕ್ಕಿಲ್ಲ.

ಕುಂತಿಗೆ ಸ್ವಯಂವರ ಏರ್ಪಡಿಸಿದಾಗ ಅನೇಕ ಮಂದಿ ರಾಜಕುಮಾರರ ನಡುವೆ ಅವಳು ಪಾಂಡುರಾಜನಿಗೆ ಮಾಲೆ ಹಾಕಿದಳು. ಈಕೆಯೊಂದಿಗೆ ಮದ್ರರಾಜನ ಮಗಳು ಮಾದ್ರಿಯನ್ನು ಗಾಂಗೇಯನು ಪಾಂಡುರಾಜನಿಗೆ ಮದುವೆ ಮಾಡಿ, ಧೃತರಾಷ್ಟ್ರ ಅಂಗಹೀನನಾದ್ದರಿಂದ ರಾಜ್ಯ ಪಟ್ಟಾಭಿಷೇಕವನ್ನು ಪಾಂಡುರಾಜನಿಗೆ ಕಟ್ಟಿದ. ಹೀಗೆ ಸುಖದಿಂದ ರಾಜ್ಯಭಾರ ಮಾಡುವಾಗ ಒಂದು ದಿನ ಬೇಟೆಯಾಡಲೆಂದು ಅಡವಿಗೆ ಹೋದನು:

> ಇನಿಯಳನಳ್ತಿಯಿಂದೆ ಮೃಗಿಮಾಡಿ ಮನೋಜ ಸುಖಕ್ಕೆ ಸೋಲ್ತಲಂ ।
> ಪಿನೆ ನೆರೆಯಲ್ಕೆ ದಿವ್ಯಮುನಿಯುಂ ಮೃಗಮಾಗಿ ಮರಲ್ದು ಕೂಡೆ ಮೆ ॥
> ಲ್ಲನೆ ಮೃಗಮೆಂದು ಸಾರ್ದು ನೆರನಂ ನಡೆ ನೋಡಿ ನರೇಂದ್ರನೆಚ್ಚು ಭೋಂ
> ಕನೆ ಮೃಗಬಾರಿಯಂ ತನಗೆ ಮಾಣದೆ ತಂದನದೊಂದು ಮಾರಿಯಂ ।
>
> ॥೧೧-೨೭॥

ಅಲ್ಲೊಬ್ಬ ಮುನಿಯು ತನ್ನ ಪ್ರಿಯೆಯೊಡನೆ ಕೂಡಲಪೇಕ್ಷಿಸಿ ಅವಳನ್ನು ಹೆಣ್ಣು ಜಿಂಕೆಯನ್ನಾಗಿ ಮಾಡಿ ತಾನೂ ಜಿಂಕೆಯಾಗಿ ಕೂಡಿರಲು, ಪಾಂಡುವು ಇವುಗಳನ್ನು ನೈಜ ಜಿಂಕೆಗಳೆಂದು ಬಗೆದು ಕೂಡಲೆ ಬಾಣ ಪ್ರಯೋಗ ಮಾಡಿದ. ಆ ಬಾಣ ಮುನಿಯ ಕಣ್ಣಲ್ಲಿಯೂ, ಎದೆಯಲ್ಲಿಯೂ ಕಾಣಿಸಿಕೊಳ್ಳಲು, ಮುನಿಕೋಪದಿಂದ ಹೊಡೆದವನನ್ನು ಯಾರೆಂದು ನೋಡಲು ಪಾಂಡು ಬಿಲ್ಲು - ಬಾಣಗಳನ್ನು ನೆಲಕ್ಕೆಸೆದು ನಿಂತಿದ್ದ. ಮುನಿ ಆವನಿಗೆ 'ರತಿಕೇಳಿಗೆಂದು ಪ್ರಿಯೆಯೊಡನೆ ಕೂಡಿದ್ದ ನನ್ನನ್ನು ಅನ್ಯಾಯವಾಗಿ ಬಾಣದಿಂದ ಹೊಡೆದುದಕ್ಕೆ ದಂಡವಾಗಿ, ನೀನು ನಿನ್ನ ಪ್ರಿಯೆಯೊಡನೆ ಪ್ರೇಮದಿಂದ ಕೂಡಿದೊಡನೆಯೇ ಸಾಯುವೆ ಹೋಗು' ಎಂದು ರೌದ್ರಶಾಪ ಕೊಡುತ್ತಾನೆ. ಪಾಂಡುರಾಜ ಸಂತೋಷ ಪಡುವಾಗ ಬೇಟೆಯಾಡಿದ್ದು ರಾಜಧರ್ಮ. ಜಿಂಕೆಗಳೆರಡು ಋಷಿದಂಪತಿಗಳೆಂಬುದು ತಿಳಿದಿರಲಾರ. ಬೇಟೆಗಾರನಿಗೆ ಏನೇ ಆದರೂ ಒಟ್ಟು ಬೇಟೆ ಪ್ರಾಣಿಯೇ ಮುಖ್ಯ. ಇವನು ಬೇಟೆ ವ್ಯಾಮೋಹಿತನಾಗಿದ್ದು, ನಂತರ ಶಾಪಪರಿಹಾರಕ್ಕೆ ಪರ್ಯಾಯಕ್ರಮ ಕೈಗೊಳ್ಳುವ ಸಂದರ್ಭವಿದೆ.

ಶಂತನ ಕಡೆಯವರು ಒಮ್ಮೆ (ಗೌತಮ) ತಪೋವನಕ್ಕೆ ಬೇಟೆಯಾಡಲು ಬಂದಾಗ ಮುನೀಂದ್ರನ ಇಂದ್ರಿಯದಲ್ಲಿ ಹುಟ್ಟಿದ ಒಂದು ಹೆಣ್ಣು ಮತ್ತು ಗಂಡು ಕೂಸುಗಳನ್ನೂ ಅವರ ಪಕ್ಕದಲ್ಲಿದ್ದ ದಿವ್ಯ ಧನುಸ್ಸನ್ನೂ, ಬಾಣವನ್ನು ಕಂಡು ಅವೆಲ್ಲವನ್ನು ತೆಗೆದುಕೊಂಡು ಹೋಗಿ ಶಂತನಿಗೆ ತೋರಿಸಲು ಅವನು ಕೃಪ, ಕೃಪೆಯೆಂಬ ಹೆಸರನ್ನಿಡುತ್ತಾನೆ (೩೧-೪೫). ಬೇಟೆ ನೆಪದಿಂದ ಅಪರಿಚಿತನ ಮಕ್ಕಳನ್ನು ರಕ್ಷಿಸುವ ಪರಿ ಸಮಯೋಚಿತವಾಗಿದೆ.

ಪಾಂಡವರೂ - ಕೌರವರೂ ಸೇರಿ ಊರ ಹೊರಗಡೆ ಬೇಟೆಯಾಡುವ ಚಿತ್ರಣವನ್ನು ಕವಿ ಸೊಗಸಾಗಿ ವರ್ಣಿಸಿದ್ದಾನೆ (೫-೫೩-೫೩). ತೃತೀಯಾಶ್ವಾಸದಲ್ಲಿ ಬೇಟೆಯ ಸಂದರ್ಭ ಹೀಗಿದೆ: ಪಾಂಡವರು ಊರೂರು

ಅಲೆದಾಡುವಾಗ ಧರ್ಮರಾಯ ತಮ್ಮಂದಿರು ಮತ್ತು ಕುಂತಿಯೊಂದಿಗೆ ಹೀಗೆಂದನು : ಪುರೋಚನ ಎಂಬ ದೆವ್ವವು ಸುಯೋಧನನ ಅನುಜ್ಞೆಯ ಮೇರೆಗೆ ನಮ್ಮನ್ನು ಆದರಿಸುವುದು ಮೋಸವಿರಬೇಕು. ನಾವು ಇದನ್ನರಿಯದಂತಿರುತ್ತ ಬೇಟೆಯ ನೆಪದಿಂದ ದಾರಿಗಳನ್ನು ಹುಡುಕೋಣವೆಂದು ಆಲೋಚಿಸಿ ಪಾಂಡವರು ನಿತ್ಯವೂ ಬೇಟೆಗಾಗಿ ಹೋಗುತ್ತಿರಲು ಪುರೋಚನು ಹೊರಗೆ ಜೋಕೆಯಿಂದ ಕಾದುಕೊಂಡಿದ್ದನು. ಇಲ್ಲಿ ಬೇಟೆಯ ಮೂಲಕ ಪಾಂಡವರು ಪಾರಾಗುವ ಪ್ರಯತ್ನವಿದೆ. ನಂತರ ಒಬ್ಬ ಬೇಡತಿ ಮತ್ತು ಐದು ಮಂದಿ ಮಕ್ಕಳು ಊಟ ಮಾಡಿ ಮಲಗಿದಾಗ ಭೀಮಸೇನ ಪುರೋಚನ ಕೋಣೆಗೆ ಬೆಂಕಿ ಹಚ್ಚುತ್ತಾನೆ. ಈ ಬೇಡತಿ ಮತ್ತು ಐವರು ಮಕ್ಕಳು ಕುಂತಿ- ಪಾಂಡವರೆಂದು ತಿಳಿದು ಧೃತರಾಷ್ಟ್ರನಿಗೆ ತಿಳಿಸುವ ದೃಶ್ಯವಿದೆ. ಪಂಪ ಪರಿಸರ ಪ್ರೇಮಿಯಂತೆ ಕಾಡಿನ, ಪ್ರಾಣಿಗಳ ಸೊಬಗನ್ನು ವಾಸ್ತವಿಕವಾಗಿ ಕಂಡಿರುವನು.

ಐದನೇ ಆಶ್ವಾಸದಲ್ಲಿ ವನಪಾಲಕರು ಅರ್ಜುನನ್ನು ಬೇಟೆಗೆ ಆಹ್ವಾನಿಸುವ ಸಂದರ್ಭ ಮಹತ್ವದ್ದು. ಅಭಿಮನ್ಯು ಜನಿಸಿ ಎಲ್ಲರೂ ಸುಖದಿಂದಿರುವಾಗ ವಸಂತ ಬಂತು. ಆಗ ಬೇಟೆಗಾರನೊಬ್ಬ ಬಂದು ಅರ್ಜುನನಲ್ಲಿ :

> ಬಂದು ಪೊಡವಟ್ಟು ಕಂಡಿಂ ।
> ತೆಂದಂ ಪೊಲನುಡುಗಿ ಬಂದುದುಡಿದುದು ಪುಲ್ಕಾ ॥
> ಡುಂ ದಲೆಲೆಯಿಕ್ಕಿ ಘಳಿಲೆನೆ ।
> ನಿಂದುವು ತಣಿದುವು ಮೃಗಂಗಳೆತ್ತಲುಮೀಗಳ್ (೩-೩೭-೧೩೦)

ಎಂದು ಬಂದ ಬೇಟೆಗಾರನಿಗೆ ಅರ್ಜುನ ಬಹುಮಾನ ಕೊಡುತ್ತಾನೆ. ಇದು ಅವರಿಗೆ ಎಲ್ಲ ರಾಜರು ಕೊಡುವ ಗೌರವವೂ ಆಗಿತ್ತು. ಆ ಬೇಟೆಗಾರ ದೃಢಕಾಯದ ನಾಯಕನಾಗಿದ್ದ. ತೊಟ್ಟಂಥ ಎಕ್ಕಡ, ಮರದ ಬಲ್ಲು, ಹಣೆಯ ಕಟ್ಟು, ಬೇಟೆಯ ದಮಟೆ, ಚಕ್ಕದಾದ ಕತ್ತಿ, ಉತ್ತರೀಯದಿಂದ ಕೂಡಿದ ಅಂಗಿಗಳನ್ನು ಧರಿಸಿದ್ದ. ಹಿಂದೆ ಪ್ರಕೃತಿ ರಕ್ಷಣೆ ರಾಜನ ಹೊಣೆಯಾಗಿತ್ತು. ರಾಜನು ಹೆಸರಿಗಷ್ಟೆ ಬೇಟೆಗಾರ, ಮಿಕ್ಕಂತೆ ಬೇಡರೆ ಬೇಟೆಯಾಡುತ್ತಿದ್ದರು. ಇಲ್ಲಿ ರಾಜನು ವಿನೋದಕ್ಕಾಗಿ ಪ್ರಾಣರಕ್ಷಕನೆಂದು ಕವಿ ಕಾಣುತ್ತಾನೆ. ಬೇಟೆಗಾರರ ಲಕ್ಷಣಗಳು ವಿಶಿಷ್ಟವಾಗಿದ್ದವು (೫-೩೭). ಬೇಟೆಗಾರ ಸಾಹಸವಂತನಾಗಿದ್ದ. ಬೇಟೆಗೆ ಸೂಕ್ತವಾದ ಕಾಡನ್ನು ತಿಳಿಸುವ ಸಂದರ್ಭ ಬರುತ್ತದೆ :

> ಸುಳಿಯದು ಗಾಳಿ ಮೃಗಂ ಕೆ ।
> ಯ್ವಳಿಗಳ ಮೇತದೊಳೆ ತಣಿದಪುವು ಪಂದಿಗಳುಂ ॥
> ಪಳನ ವಿರಿಕ್ಕಿದುವಾಳಂ ।
> ಪಲು ಪರಿದಾಡಲ್ಕ ರಂಬೆಡಂಗವನಿಪತೀ (೫-೩೮-೧೩೦).

ಗಾಳಿ ಬೀಸಿದರೆ ಬಿಟ್ಟ ಬಾಣ ಗುರಿ ತಪ್ಪುತ್ತದೆ. ಗಾಳಿ ಇಲ್ಲದುದು ಬೇಟೆಗೆ ತಕ್ಕ ಸಮಯ ಎಂಬುದರ ಸೂಚನೆ. ಬೇಟೆಗೆ ಗ್ರೀಷ್ಮ ಋತು ಉತ್ತಮ ಕಾಲ. ಪೈರನ್ನು ಕಟಾವು ಮಾಡಿದಾಗ ಹಂದಿ ಇತರ ಪ್ರಾಣಿಗಳಿಗೆ ಆಶ್ರಯ, ಆಹಾರ ತಪ್ಪುತ್ತದೆ. ಬಯಲು ಪ್ರದೇಶದಲ್ಲಿ ಬೇಟೆ ಆಕರ್ಷಣೆ ಪಡೆಯುತ್ತದೆ. ಆಗಿನ ಕಾಲದ ಬೇಟೆಯು ಪಂಪನ ಕಾವ್ಯದಲ್ಲಿ ವಾಸ್ತವಿಕ ಚಿತ್ರಣದಂತಿದೆ.

ಮುಳ್ಳುಹಂದಿಗೆ ಬಾಣ ಬಿಟ್ಟಾಗ ಜಾರುವುದು ಸಹಜ. ಪೊದೆ ಮತ್ತು ದೇಹದ ಬಣ್ಣ ಒಂದೇ ಆಗಿರುತ್ತದೆ. ಬೇಟೆಗಾರ ಹಂದಿಗಳಿಗೆ ರೋಮಗಳೇ ಇಲ್ಲ, ಬೇಟೆಗೆ ಸೂಕ್ತಕಾಲ ಎಂದು ಅರ್ಜುನನಲ್ಲಿ ವಿನಂತಿಸಿಕೊಳ್ಳುತ್ತಾನೆ

(೫-೪೧-೧೩೧). ಇದನ್ನು ತುಳುನಾಡಿನಲ್ಲಿ 'ಕೆಡ್ವಾಸ' ಮತ್ತು ಬಯಲು ಸೀಮೆಯಲ್ಲಿ ಹಂದಿಬೇಟೆಗೆ ಹೊರಡುವಾಗ ಮನೆಮನೆಗೆ ಸಾರುವ ಪ್ರಸಂಗಕ್ಕೆ ಹೋಲಿಸಬಹುದು.

ಬೇಟೆ ಸಂದರ್ಭಲ್ಲಿ, ಗಾಳಿ ಬೀಸುವ ದಿಕ್ಕು, ನುಸುಳುವ ಪ್ರಾಣಿ, ಬರುವ-ಹೋಗುವ ಚಿತ್ರಣವಿದೆ. ಬೇಟೆಗಾರರ ನಾಯಕ ಸೂಕ್ಷ್ಮತೆಗಳ ಬಗ್ಗೆ ತಿಳಿಸುತ್ತಾನೆ. ವನಪಾಲಕನಾಗಿ ಬೇಡನಾಯಕನ ಕರ್ತವ್ಯ ದೊಡ್ಡದು. ರಾಜನನ್ನು ಬೇಟೆಗೆ ಕರೆತಂದು ತಾವೂ ಬೇಟೆಯಾಡುವ ಉದ್ದೇಶ ಬೇಟೆಗೆ ಸಾಕಷ್ಟು ಬೇಡಿಕೆ ಇತ್ತೆಂಬುದರ ಸಂಕೇತ :

ಮೃಗಮಂ ಗಾಳಿಯನಿರ್ಕೆಯಂ ಪಕ್ಕೆಯಂ ಗಣೆದಮಂ ಕಂಡಿಯಂ ಮಾರ್ಕಂಡಿಯಂ ।
ಪುಗಿಲಂ ಪೋಗಂ ಬಾರಿಯಂ ಸನ್ನೆಯಂ ನೂರುವಮರ್ಚುವ ನಿಲ್ವೆಡೆಯಂ ॥
ಬಗೆಯುಂ ತೆಗೆಯನಲ್ಲಾಟಮಂ ಕಾಟಮಂ ನೋವುದಂ ಸಾವುದನೆಲ್ಲಂದದಿಂ
ಬಗೆದಾಗಳರಸರೊಳೆಲ್ಲ ಕೇಳ್ ನೀಂ ಬಲ್ಲೆ ಬೇಂಟೆಗಾರರೊಳೆಲ್ಲವಾನೆ ಬಲ್ಲೆಂ

(೫-೪೩-೧೩೧).

'ಮೃಗಮಂ ಗಾಳಿಯನಿರ್ಕೆಯಂ ಪಕ್ಕೆಯಂಗಣೆದಮಂ' ಎಂದು ಪ್ರಕೃತಿಯಲ್ಲಿ ಬೇಟೆಯ ವಾತಾವರಣವನ್ನು ಸಂಕೇತಿಸುತ್ತದೆ. ಬೇಟೆಗಾರ ಆಯ ನೋಡಲು ಸ್ಥಳ, ಹವಾಮಾನದ ಅಗತ್ಯವಿದೆ. ಬಾಣಕ್ಕೆ ಗಾಳಿಯ ಪರಿಣಾಮದಿಂದ ಗುರಿ ತಪ್ಪಬಹುದು. ಗಾಳಿ ಬೀಸುವ ದಿಕ್ಕನ್ನು ಅರಿತು ಬೇಟೆಯಾಡಲು ನಿರ್ಧರಿಸುತ್ತಾರೆಂಬ ಪಂಪನ ತಿಳುವಳಿಕೆ ಸರಿಯಾಗಿದೆ.

ಇತರ ಪದ್ಯಗಳಲ್ಲಿ ಮೃಗಯಾ ವಿನೋದವಿರುವ ಅನೇಕ ಬೇಟೆ ವಿಧಾನಗಳಾದ ಪೆರ್ವೇಂಟೆ, ಕಿರುವೇಂಟೆ, ದೀಪದ ಬೇಟೆ, ಹಂದಿಬೇಟೆಯ ಸಂದರ್ಭಗಳಿವೆ. ಪೆರ್ವೇಂಟೆಯಲ್ಲಿ ಬೇಟೆಗಾರ ನೆಲದ ತಗ್ಗು-ದಿನ್ನೆ, ಗಾಳಿ ಬೀಸುವ ದಿಕ್ಕು ಮತ್ತು ಕಾಲಾಳು ಕುದುರೆಗಳೊಂದಿಗೆ ವನಪ್ರವೇಶ ಮಾಡುವ ವಿಧಾನವನ್ನು ಸೂಚಿಸುತ್ತದೆ. ರಾತ್ರಿ ಹೊತ್ತು ಬೇಟೆಯಾಡಿದರೆ 'ದೀಪದ ಬೇಟೆ' ಎಂದು ಕರೆದಿದ್ದಾನೆ.[೨] ರಾತ್ರಿ ಹೊತ್ತಿನ ಬೇಟೆಗೆ ಅಧಾರ್ಮಿಕ ಶಿಕಾರಿ ಎನ್ನುತ್ತಾರೆ. ನಿಶಾಚರ ಪ್ರಾಣಿಗಳು ರಾತ್ರಿಯಲ್ಲಿ ಬೇಟೆಗೆ ಬಲಿಯಾಗುವುದು ಕಷ್ಟ. ರಾತ್ರಿ ಕಣ್ಣು ಕಾಣುವುದರಿಂದ ಕದ್ದು ಬೇಟೆಯಾಡುವ ಉಪಾಯಗಳಿವೆ.

ಕಾಡುಪ್ರಾಣಿಗಳಲ್ಲಿ ಹಂದಿ ಬಲಿಷ್ಟವಾದುದು. ಬೇಡನಲ್ಲದೆ ಇತರರಿಗೆ ಇದನ್ನು ಪಳಗಿಸುವ ತಾಕತ್ತು ಕಡಿಮೆ. ಪಂಪನು ಅನೇಕ ವಿಧದ ಹಂದಿಗಳನ್ನು ಹೆಸರಿಸಿದರೂ ಬೇಟೆಯೋಗ್ಯ ಹಂದಿಗೆ ಮನಸೋಲುತ್ತಾನೆ. ಕಿರುವೇಂಟೆಯಲ್ಲಿ ಮೆದುವಾದ ನೆಲದ ಮೇಲೆ ಮೃಗದ ಹೆಜ್ಜೆಯನ್ನು ಗುರುತಿಸಿ, ಆ ಹೆಜ್ಜೆಯ ದಿಕ್ಕನ್ನೂ ಹೊಸತು - ಹಳೆಯದನ್ನು ಪತ್ತೆ ಹಚ್ಚಿ ಬೇಟೆಯಾಡುತ್ತಾರೆ. ಇಲ್ಲಿ ಶಕ್ತಿ- ಯುಕ್ತಿ ಪ್ರಮುಖವಾದುದು. ಪಂಪ ಬೇಟೆಯ ನಾಯಿಗಳನ್ನು ಕುರಿತು ಹೇಳಿರುವುದು ಸ್ಪಷ್ಟ.

ಯಮುನಾನದಿ, ಗಂಗಾನದಿ ತೀರದ ಪ್ರದೇಶಗಳಲ್ಲಿ ಬೇಟೆಯ ಪ್ರಾಣಿಗಳನ್ನು ಪಂಪನು ಚಿತ್ರಿಸಿದ್ದಾನೆ. ಹಿಮಾಲಯ, ವಿಂಧ್ಯಾಪರ್ವತಗಳಲ್ಲಿ ಬೇಟೆಗಾರರ ವಿವರಗಳನ್ನು ಪರೋಕ್ಷವಾಗಿ ತಿಳಿಯಬಹುದು. ಬೇಟೆ ಇಲ್ಲಿ ಯುದ್ಧವಿದ್ಯೆಯಯಾಗಿ ಕಂಡುಬರುತ್ತದೆ. ಇಂದ್ರಕೀಲದಲ್ಲಿ ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆಯುವುದು ಅಲೌಕಿಕ ಬೇಟೆ. ಪೂರ್ವಯೋಜಿತವಾದ ಕಥೆಯಲ್ಲಿ ಮಾಯಾವರಾಹ ಚಿತ್ರಣ ಇದೆ.

ಸಪ್ತಮಾಶ್ವಾಸದಲ್ಲಿ ವನಾಧಿಪನಾದ ಕಿಮೀರನೆಂಬ ದೈತ್ಯನು ಕಾಡಿನ ಬೇಡರಂತೆ ಸಂಚರಿಸುವುದು, ದುರ್ಯೋಧನನ ದಾಯಾದಿಗಳು ದ್ವೈತವನದಲ್ಲಿ ಬೇಟೆ ನಿಮಿತ್ತ ಬೀಡುಬಿಟ್ಟ ಸಂಗತಿ ಗಮನಾರ್ಹ. ಪಾಂಡವರು ವನವಾಸದಲ್ಲಿದ್ದಾಗ ದುರ್ಯೋಧನನ ರಾಜ್ಯಭಾರ ತಿಳಿದುಬರಲು ಕಿರಾತ ದೂತನನ್ನೂ ಕಳುಹಿಸುತ್ತಾರೆ. ಹೀಗೆ ಬೇಡರು ಬೇಟೆಯಾಡುವುದರ ಜತೆಗೆ ವಾರ್ತೆ ತಿಳಿಸುವ ಹುದ್ದೆಯನ್ನೂ ಹೊಂದಿದ್ದರೆನ್ನಬಹುದು.

ಅಷ್ಟಮಾಶ್ವಾಸದಲ್ಲಿ ಶಂಭು ಬೇಡನಾಗಿ, ಗಿರಿಜೆ ಬೇಡತಿಯ ರೂಪ ತಾಳಿ ಗುಹನನ್ನು ಕಿರಾತ ಬಲದ ನಾಯಕನನ್ನಾಗಿಯೂ ಮಾಡಿಕೊಳ್ಳುವ ಸಂದರ್ಭವಿದೆ. ಒಂಭತ್ತನೇ ಆಶ್ವಾಸದಲ್ಲಿ ಕೃಷ್ಣನು ಕರ್ಣನ ಮನಃ ಪರಿವರ್ತಿಸಲು ಬಂದು : ನಿನ್ನ ತಾಯಿ ಕುಂತಿ, ಪಾಂಡುನಂದನರು ನಿನ್ನ ಸಹೋದರರೆಂದು, ಇತರ ಪೂರ್ವವೃತ್ತಾಂತಗಳನ್ನು ಹೇಳಿದ ನಂತರ ದುರ್ಯೋಧನನು ನಿನ್ನನ್ನು ಯಾವುದರಿಂದ ನಂಬಿದನೆಂದರೆ, ನೀನೂ ಆತನೂ ಒಂದು ಬಾರಿ ಗಂಗಾನದಿ ತೀರದಲ್ಲಿ ಬೇಟೆಯಾಡುತ್ತಿರುವಾಗ ಆ ಸಮೀಪದ ತಾಪಸಾಶ್ರಮದಲ್ಲಿ ಸತ್ಯಂತಪರೆಂಬ ದಿವ್ಯಜ್ಞಾನಿಗಳನ್ನು ಕಂಡೆರಗಿದ ನಿಮ್ಮಿಬ್ಬರನ್ನು ಆ ಜ್ಞಾನಿಯು ಹರಸಿ ನಿನಗೆ ಮೊದಲು ಆಸನವನ್ನು ತರಿಸಿಕೊಡುತ್ತಾನೆ:

> ಆನಿರೆ ನೀಮಿದೇಕೆ ದಯೆಗೆಯ್ದಿರೊ ಮೀಂಗುಲಿಗಂಗೆ ಪೇಳಿಮೆಂ ।
> ದಾ ನರನಾಥನಂ ತಿಳಿಪೆ ತನ್ಮುನಿ ಭೂಭುಜನೆಯ್ದೆ ನಂಬ ಕಾ ॥
> ನೀನ ಸಮಂತು ಪಾಟಸುವೆನೊಯ್ಯನೆ ಮುಳ್ಳೊಳೆ ಮುಳ್ಳನೆಂದು ತಾ ।
> ನೀ ನಯದಿಂದೆ ಪೆರ್ಚೆ ಪೊರೆದಳ್ಕಿಲೊಳಂದೊಡನುಂಡನಲ್ಲನೇ ॥ (೯:೬೭:೨೩೮)

ಸುಯೋಧನನು ಖೇದಗೊಂಡು ನಿನ್ನನ್ನು ಹೋಗಹೇಳಿ ನಾನಿರುವಲ್ಲಿಗೆ ತಾವಿದೇಕೆ ಆ ಮೀಂಗುಲಿಗನಿಗೆ ದಯೆಗೆಯ್ದಿರಿ? ಹೇಳಿರಿ ಎಂದಾಗ ಇದ್ದ ವಿಷಯ ತಿಳಿಸಿದ ನಂತರ 'ಮುಳ್ಳನ್ನು ಮುಳ್ಳಿಂದಲೆ ತೆಗೆಯುವ' ತಂತ್ರವನ್ನು ದುರ್ಯೋಧನ ಹೊಂದಿದ್ದ ಎಂದು ಕರ್ಣನಿಗೆ ಕೃಷ್ಣ ವಿವರಿಸುತ್ತಾನೆ.

ಹೀಗೆ ಪಂಪನು ಬೇಟೆಯನ್ನು ಲೌಕಿಕ, ಅಲೌಕಿಕವಾಗಿ ಚಿತ್ರಿಸಿ ಕಥೆಗೆ ಭಂಗಬಾರದಂತೆ ವರ್ಣನಾ ಕೌಶಲ್ಯಕ್ಕೆ ಮೀರಿಯು ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿರುವುದಕ್ಕೆ ಕರ್ಣ-ದುರ್ಯೋಧನನ ಬೇಟೆ ಉತ್ತಮ ಉದಾಹರಣೆ. ವಿರೋಧಿ ಕೂಟದ ವ್ಯಕ್ತಿ ಮನಃ ಪರಿವರ್ತಿಸುವಾಗ ಕೃಷ್ಣ ಹೇಳುವ ಮೇಲಿನ ಕಥೆ ರೋಚಕವಾದದು. ಪಂಪನ ಧಾರ್ಮಿಕ ಕೃತಿಯಾದ ಆದಿಪುರಾಣದಲ್ಲಿಯೂ ಬೇಟೆ ಪ್ರಸಂಗ ಬರುತ್ತದೆ :

> ಬೇಡವಡೆ ಮಸುರಿ ಕೊಂಡೇ
> ಸಾಡೆ ಸುರುಳ್ದಗಿದು ಕೊಡೆಯ ಚರ್ಮದ ಮರೆಯೊಳ್ ।
> ಗೂಡುಗೊಳುತಿರ್ದು ಶೌರ್ಯ
> ಕ್ರೀಡೆಯ ದಿಗ್ವಿಜಯಮೆಸೆದುದೆಮ್ಮಗ್ರಜನಾ ॥ (೧೪-೭೨-೩೧೩).

ಎಂದು ಬೇಡರ ಸೇನೆ ಪ್ರಾಣಿಗಳನ್ನು ಮುತ್ತಿಗೆ ಹಾಕಿ ಶೌರ್ಯ, ಪರಾಕ್ರಮ ಮೆರೆಸಿದ ಬಗೆ ತಿಳಿಸಿದ್ದಾನೆ.

ಶಿವಕೋಟ್ಯಾಚಾರ್ಯನ ವಡ್ಡಾರಾಧನೆ : ವಡ್ಡಾರಾಧನೆ ಕನ್ನಡದ ಮೊದಲ ಗದ್ಯ ಕಾವ್ಯ. ಆ ಕೃತಿಯಲ್ಲೂ ಸಮಕಾಲೀನ ಬೇಟೆಯ ಸಂದರ್ಭಗಳನ್ನು ಗುರುತಿಸಬಹುದಾಗಿದೆ. ಇಲ್ಲಿ ಹತ್ತೊಂಬತ್ತು ಕಥೆಗಳು ಅನಾವರಣಗೊಂಡಿವೆ. ಸುಕುಮಾರಸ್ವಾಮಿ ಕಥೆಯಲ್ಲಿ ಸೋಮಶರ್ಮನೆಂಬ ಮಂತ್ರಿಯ ಮಕ್ಕಳಾದ ಅಗ್ನಿಭೂತಿ, ವಾಯುಭೂತಿಯರಿಬ್ಬರು ತಂದೆ ಪಡೆದ ಕಸಬನ್ನು ಮಾಡದೆ ಸಪ್ತವ್ಯಸನಿಗಳಾಗಿದ್ದರು. ಸಪ್ತವ್ಯಸನಗಳಲ್ಲಿ ಬೇಟೆಯೂ ಒಂದು. ಬೇಟೆಯ ಮೂಲಕ ಮಂತ್ರಿ ಮಕ್ಕಳು ಸಂಪತ್ತನ್ನು ವೃಥಾ ವ್ಯಯಿಸುತ್ತಿದ್ದರು.

ಇದರಲ್ಲಿನ ಲಲಿತಘಟೆ ಕಥೆಯಲ್ಲಿ ಬೇಟೆ ಸಂದರ್ಭ ಹೀಗಿದೆ: ಲಲಿತಘಟೆ ಈರ್ವರೂ ಒಂದು ದಿನ 'ಶ್ರೀಕಾಂತ' ಎಂಬ ಬೆಟ್ಟ ಪ್ರದೇಶಕ್ಕೆ ಬೇಟೆಗೆ ಹೋಗಿ , ಅಭಯಘೋಷ ಎಂಬ ಋಷಿಯ ತಪಸ್ಸಿನ ಪರಿಣಾಮ ಬೇಟೆ ಆಗಲಿಲ್ಲ. ಮರಳಿಬಂದು ಒಂದು ವಾರಬಿಟ್ಟು ಪುನಃ ಬೇಟೆಗೆ ಹೋಗುತ್ತಾರೆ. ಆ ದಿನ ಮೃಗವೆಂದು ತಿಳಿದು ಅಭಯಘೋಷರಿಗೇ ಬಾಣ ಪ್ರಯೋಗಿಸುವ ಪ್ರಸಂಗವಿದೆ. ಹೀಗೆ ಬಿಟ್ಟ ಬಾಣ ಅರ್ಥದಲ್ಲಿ ತುಂಡಾಗುವುದು.

ಚಿಲಾತಪುತ(ತ್ರಾ)ನ ಕಥೆಯಲ್ಲಿ ಉಪಶ್ರೇಣಿಕನೆಂಬ ರಾಜ ಕುದುರೆ ಮೇಲೇರಿ ಹಂದಿಬೇಟೆಗೆ ಹೋಗುವ ಸಂದರ್ಭವಿದೆ. ಬೇಟೆಯೇ ಕಾರಣವಾಗಿ ರಾಜನು ಬೇಡರ ನಾಯಕನಾದ ಮಹಾಕಾಳನ ಮಗಳನ್ನು ಮದುವೆಯಾಗುತ್ತಾನೆ. ಬೇಡರ ನಾಯಕ ಆನೆಯದಂತ, ಹುಲಿಯ ಚರ್ಮ, ಚಮರೀಮೃಗಗಳನ್ನು ಕಾಣಿಕೆ ನೀಡುತ್ತಾನೆ. ಇವನ ವನಕ್ರೀಡೆಯನ್ನು ನಾನಾ ಬಗೆಯಾಗಿ ತಿಳಿಸಲಾಗಿದೆ.

೬.ನಾಗವರ್ಮನ ಕರ್ಣಾಟಕ ಕಾದಂಬರಿ: ನಾಗವರ್ಮನ ಕರ್ಣಾಟಕ ಕಾದಂಬರಿಯಲ್ಲಿ ಚಂದ್ರಾಪೀಡನು ಬೇಟೆಯಲ್ಲಿ ಕಂಡ ಅಚ್ಛೋದ ಸರೋವರದ ವರ್ಣನೆ ರಮಣೀಯವಾಗಿದೆ. ಗಿಳಿಯು ಜನಿಸಿದ ಅರಣ್ಯ, ಮಹಾವೃಕ್ಷ ಸಮೂಹ, ಬೇಡರ ಆಗಮನಗಳನ್ನು ಕವಿ ನವರಸ, ಅಷ್ಟಾದಶ ವರ್ಣನೆಗೆ ಮಾರುಹೋಗಿ ಬೇಟೆ ಪ್ರಸಂಗ ತರುತ್ತಾನೆ. ಕವಿ ಗಿಳಿಯ ಮೂಲಕ ವಿಂಧ್ಯಾಚಲ ಅಡವಿ, ಪಂಪಸರೋವರ ಪಕ್ಕದ ಮರದಲ್ಲಿರುವ ಮರ ತನ್ನ ನಿವಾಸವೆಂದು ಅದರ ಕಥೆಯನ್ನು ತಿಳಿಯುತ್ತಾನೆ. ತನ್ನ ಪೂರ್ವ ವೃತ್ತಾಂತವನ್ನು ರಾಜನಿಗೆ ಅದು ಹೀಗೆ ಹೇಳಿತು: ಒಂದು ಬೂರುಗದ ಮರವಿದೆ. ಅಲ್ಲಿ ಗಿಳಿಗಳು ನೆಲಸಿದ್ದವು. ನನ್ನ ತಾಯಿ ತೀರಿಕೊಂಡಾಗಿನಿಂದ ತಂದೆ ವೃದ್ಧನಾದರೂ ಸಾಕುತ್ತಿದ್ದ. ಅವರಲ್ಲೊಬ್ಬ ಮುದಿ ಬೇಡನು ಆ ಬೂರುಗದ ಮರವನ್ನು ಹತ್ತಿ ಮರಿಗಳೆನ್ನದೆ ಮುದಿಗಿಳಿಗಳೆನ್ನದೆ ಗಿಳಿಗಳ ಗಂಟಲನ್ನು ಮುರಿದು ನೆಲಕ್ಕೀಡಾಡುತ್ತಿದ್ದನು. ತಂದೆ ನನ್ನ ಸ್ಥಿತಿ ನೋಡಿ ಅಳುತ್ತಾ, ಹೇಗೆ ರಕ್ಷಿಸಲೆಂದು ಸಂಕಟಗೊಂಡಿತು. ಆ ಬೇಡನು ನಾವಿದ್ದಗೂಡಿಗೆ ಕೈ ಹಾಕಿ ನನ್ನ ತಂದೆಯ ಗಂಟಲನ್ನು ಮುರಿದು ನೆಲಕ್ಕೀಡಾಡಿದನು. ಆಗ ನಾನು ತಪ್ಪಿಸಿಕೊಂಡು ನಾನಾ ತರಹದ ಸಂಕಷ್ಟಗಳನ್ನೆದುರಿಸಿದೆ ಎನ್ನುತ್ತದೆ.

ಚಂದ್ರಾಪೀಡನು ವಯಸ್ಸಿಗೆ ಬಂದು ಯುವರಾಜ್ಯಾಭಿಷೇಕ ಮಾಡಿಸಿಕೊಂಡ. ತರುವಾಯ ದಿಗ್ವಿಜಯ ಮಾಡಿ ಬರುವಾಗ ಇಂದ್ರಾಯುಧ ಕುದುರೆಯೇರಿ ಒಂದು ದಿನ ಬೇಟೆಗೆ ಹೋಗಿದ್ದ. ಅಲ್ಲಿ ಕುದುರೆಯ ಮುಖವನ್ನುಳ್ಳ ವಿಲಕ್ಷಣ ಕಿನ್ನರ ಮಿಥುನವು ಕಂಡ ಕೂಡಲೇ ಬೆನ್ನಟ್ಟಿದ. ಅವು ಸಿಗದೇ ಕೈಲಾಸ ಶಿಖರವನ್ನೇರಿ ಕಣ್ಮರೆಯಾದವು. ಇಲ್ಲಿ ರಾಜಕುಮಾರನ ಸಾಹಸ ಪರೀಕ್ಷೆಗಾಗಿ ಕವಿ ಹೀಗೆ ವರ್ಣಿಸಿದ್ದಾನೆ. ಬಹುದೂರ ಬಂದ ರಾಜಕುಮಾರ ಅಡವಿ, ಬೆಟ್ಟ, ಗುಡ್ಡ ಅಲೆದು ದಣಿದು ಬಾಯಾರಿ ನೀರಿಗಾಗಿ ಹುಡುಕಾಡಿದ ನಂತರ ಅಚ್ಛೋದಸರೋವರ ಸಿಕ್ಕಿತು. ನೀರು ಕುಡಿಯಲು ಇಂಪಾದ ಗಾನ ಕೇಳಿ, ಹೋಗಿ ನೋಡಲಾಗಿ ನವ ಯುವತಿ, ಮಹಾಸಾಧ್ವಿ ತಪಸ್ಸು ಮಾಡುತ್ತಿದ್ದಳು. ಅವಳ ವೃತ್ತಾಂತವನ್ನು ಕೇಳುತ್ತಾನೆ. ಕಥೆಯಲ್ಲಿ ಭವಾವಳಿ ಪರಿವರ್ತನೆ ಸ್ಥಿತಿಗಳನ್ನು ಸೃಷ್ಟಿಸಿದೆ. ಚಂದ್ರಾಪೀಡ ಅಚ್ಛೋದಸರೋವರದಲ್ಲಿ ಮಹಾಶ್ವೇತೆಯನ್ನು ಕಂಡು ಆಕೆಯಿಂದ ಕಾದಂಬರಿ ಸ್ನೇಹವನ್ನು ಗಳಿಸುತ್ತಾನೆ. ಮಹಾಶ್ವೇತೆಯ ಪೂರ್ವವೃತ್ತಾಂತವನ್ನು ಕೇಳುತ್ತಾನೆ. 'ಪುಂಡರೀಕನು ವೈಶಂಪಾಯನನಾಗಿ ಹುಟ್ಟಿ ಮಹಾಶ್ವೇತೆಯನ್ನು ಮೋಹಿಸುತ್ತಾನೆ. ಆಕೆ ಶಪಿಸಲು ಗಿಳಿಯಾಗಿ ಹುಟ್ಟಿ, ಶಾಪಮುಕ್ತನಾಗಿ ಅವಳನ್ನು ಮದುವೆಯಾಗುತ್ತಾನೆ. ಹೀಗೆ ಭವಾಳಿಯಲ್ಲಿ ಕಥೆ ವಿಸ್ತಾರವಾಗಿದೆ.

೪. ಕರ್ಣಪಾರ್ಯನ ನೇಮಿನಾಥಪುರಾಣ : ನೇಮಿನಾಥಪುರಾಣದಲ್ಲಿ ಅಷ್ಟಾದಶ ವರ್ಣನೆ ನಿಮಿತ್ತ ಬೇಟೆ ಬಂದಿದೆ. ಮಗಧ ದೇಶದ ಕಾಡೊಂದರಲ್ಲಿ ವಿಂಧ್ಯಕನೆಂಬ ಬೇಡನೂ, ವಾಗುರೆಯೆಂಬ ಬೇಡತಿಯರಿದ್ದರು. ವಿಂಧ್ಯಕ ಮಹಾಸಾಹಸಿ ಬೇಟೆಗಾರ. ಒಮ್ಮೆ ಬೇಟೆಯಲ್ಲಿ ಚಾರಣಯತಿ ದಂಪತಿಗಳನ್ನು ಮೃಗವೆಂದು ಬಗೆದು ಬಾಣ ಹೂಡುವುದು, ವಾಗುರೆ ಅದನ್ನು ತಡೆಯುವ ಸಂದರ್ಭವಿದೆ. ಜೈನಕವಿ ಕರ್ಣಪಾರ್ಯನು ಬೇಡ ದಂಪತಿಗಳು ಚಾರಣಯತಿಗಳಿಂದ ಧರ್ಮಬೋಧೆಯನ್ನು ಸ್ವೀಕರಿಸಿದ ಬಗ್ಗೆ ಮತ್ತು ಅಹಿಂಸೆ ಪ್ರತಿಪಾದನೆಗೆ ಒತ್ತುಕೊಟ್ಟಿದ್ದಾನೆ.

೫. ವಚನಗಳು : ವಚನಗಳ ಕಾಲಕ್ಕೆ ಬೇಟೆ ಒಂದು ಸ್ವರೂಪವಾಗಿ ಜೀವನಾದರ್ಶಕ್ಕೆ ಮಾದರಿಯಾಗಿ ಬಳಕೆಯಾಯಿತು. ಹಿಂಸೆಯನ್ನು ತಿರಸ್ಕರಿಸುವ ಮನೋಧರ್ಮ ಜನ್ಮತಾಳಿತು. ಸಿದ್ಧರಾಮ, ಅಕ್ಕಮಹಾದೇವಿ, ಬಸವಣ್ಣ, ಚೆನ್ನಬಸವಣ್ಣ, ಡೋಹರ ಕಕ್ಕಯ್ಯ, ಶರಣ ಹರಳಯ್ಯ ಮೊದಲಾದವರ ವಚನಗಳಲ್ಲಿ ಬೇಟೆ ರೂಪಕವಾಗಿ ಪ್ರಯೋಗವಾಗಿದೆ. ಒಂದೆರೆಡು ವಚನಗಳ ಉಲ್ಲೇಖನವನ್ನಿಲ್ಲಿ ಮಾಡಲಾಗಿದೆ. ದಯಯೇ ಧರ್ಮದ ಮೂಲ ಎಂದು ಬಸವಣ್ಣನವರು ಪ್ರಾಣಿಗಳ ಬಗೆಗಿನ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ಅಂತರಂಗದ ಶುದ್ಧಿಗಾಗಿ ಅವರ ವಚನಗಳಲ್ಲಿ ನೀತಿ, ಧರ್ಮ, ಸಹಜೀವನದ ಉಲ್ಲೇಖಗಳು ಗಮನಾರ್ಹ. ಅಂತರಂಗಯುದ್ಧದ ವೀರಾಲಾಪದ ಉಪಮೆರೂಪಕಗಳಲ್ಲಿ ಧ್ವನಿ ಪೂರ್ಣವಾಗಿ ತಮ್ಮ ಸಾಧನೆಯ ಅನುಭಾವವನ್ನು ಶಬ್ದ ಸೋಪಾನವಾಗಿ ಕಟ್ಟಿದ್ದಾರೆ. ಬಸವಣ್ಣನವರು ಬಳಸಿರುವ ಬೇಟೆಯ ರೂಪಕ ಶಕ್ತಿಯುತವಾಗಿದ್ದು ತುಂಬಾ ಅರ್ಥವತ್ತಾಗಿದೆ:

ಬೆಟ್ಟಕ್ಕೆ ಬೆಳ್ಳಾರ ಸುತ್ತಿತಯ್ಯಾ
ಪಾಪದ ಬಲೆಯ ತಂದು ಮುಂದೆ ಒಡ್ಡಿದಿರಯ್ಯಾ
ಬೇಟೆಕಾರನು ಮೃಗವಟ್ಟಿ ಬರಲು ಮೃಗ ಗೋರಿಗೊಳಗಾಗದಯ್ಯಾ

ಹರನೊಡ್ಡಿದ ಬಲೆಯಲ್ಲಿ ಸಿಲುಕಿದ ಮೃಗವು ಕೂಡಲ ಸಂಗಮದೇವರಿಗೆ ಒಗರವಾಯ್ತು. ಇಲ್ಲಿ ಪಾಪ-ಪುಣ್ಯಕ್ಕೆ ಬೇಟೆ ಎಂಬುದು ಅವನತಿ ರೂಪವನ್ನು ತೋರಿಸುವಂತಿದೆ. ಬಲೆ ಪಾಪದ ಸಂಕೇತ. ಬೇಟೆಗಾರನ ಬಲೆಗೆ ಬೀಳದ ಬೇಟೆ, ಶಿವನ ಬಲೆಗೆ ಬಿದ್ದು ಕೂಡಲಸಂಗಮದೇವನಿಗೆ ಬೇಯಿಸಿದ ಆಹಾರವಾಯ್ತು ಎನ್ನುತ್ತಾ ಬೇಟೆಯನ್ನು ತಿರಸ್ಕರಿಸಿದ್ದಾನೆ. ಬಸವಣ್ಣನವರ ಕಾಲದಲ್ಲಿ ಗ್ರಾಮದೇವತೆಗೆ ಬಲಿಕೊಡುವ ಚಿತ್ರಣ ಕಂಡುಬರುತ್ತದೆ.[೩]

ಹಬ್ಬಕ್ಕೆ ತಂದ ಹರಕೆಯಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು
ಕೊಂದಹ ರೆಂಬುದನರಿಯದೆ
ಬೆಂದ ಒಡಲ ಹೊರೆವುತ್ತಲದೆ
ಅಂದಂದೆ ಹುಟ್ಟಿತ್ತು, ಅಂದಂದೆ ಹೊಂದಿತ್ತು
ಕೊಂದವರುಳಿವರೆ ಕೂಡಲಸಂಗಮದೇವಾ (೧೨೯-೩೫).

ಅಕ್ಕಮಹಾದೇವಿಯವರು ಸಹ ನಿಸರ್ಗ ಪ್ರೇಮಿಗಳಾಗಿದ್ದರೆಂಬುದಕ್ಕೆ :

ಬೆಟ್ಟದ ಮೇಲೊಂದು ಮನೆಯ ಮಾಡಿ,
ಮೃಗಗಳಿಗಂಜಿದಡೆಂತಯ್ಯಾ ?
ಸಮುದ್ರದ ತಡಿಯಲೊಂದು ಮನೆಯ ಮಾಡಿ,

ನೊರೆತೆರೆಗಳಿಗಂಜಿದಡೆಂತಯ್ಯಾ ?

ಸಂತೆಯೊಳಗೊಂದು ಮನೆಮಾಡಿ,

ಶಬ್ದಕ್ಕೆ ನಾಚಿದೊಡೆಂತಯ್ಯಾ... ? ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ, ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದೆಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.[೪] ಈ ವಚನ ಪ್ರಕೃತಿ ಪ್ರೇಮಕ್ಕೆ ರುಜುವಾತಾಗಿದೆ. ಆ ಕಾಲದಲ್ಲಿದ್ದ ಕಾಡುಪ್ರಾಣಿಗಳ ಬಗೆಗಿದ್ದ ಭೀತಿ ನಿವಾರಣೆಗೆ ಅಕ್ಕಮಹಾದೇವಿಯವರ ವಚನ ಪೂರಕವಾಗಿತ್ತೆನ್ನಬಹುದು.

ಬಸವಣ್ಣನವರ ಕಾಲವೇ ಭಕ್ತಿಯುಗದ ಉನ್ನತ ಶಿಖರವಾಗಿತ್ತು. ಮಾನವನಿಗೆ ಆದರ್ಶವನ್ನು ತಿಳಿಸುವ ಸಲುವಾಗಿ ಏನೆಲ್ಲ ಪ್ರಯತ್ನಗಳು ನಡೆದಿವೆ. ಹೀಗೆ ಜೇಡರದಾಸಿಮಯ್ಯ, ಅಲ್ಲಮಪ್ರಭು, ಸಿದ್ಧರಾಮ ಇತರ ವಚನಕಾರರ ವಚನಗಳಲ್ಲಿಯೂ ಬೇಟೆ - ಬೇಡರ ಸಂದರ್ಭಗಳಿವೆ. ಇಲ್ಲಿ ಪ್ರಾಸಂಗಿಕವಾಗಿ ವಚನಗಳನ್ನು ಪ್ರಸ್ತಾಪಿಸಲಾಗಿದೆ. ಕಾವ್ಯಗಳಿಗಿಂತ ವಚನಗಳಲ್ಲಿ ಬೇಟೆ ಭಿನ್ನ ಸ್ವರೂಪದಲ್ಲಿದೆ. ಅಲ್ಲಿ ಅಷ್ಟದಶವರ್ಣನೆ, ವ್ಯಸನವಾಗಿ ಬಂದರೆ ಇಲ್ಲಿ ಮಾನವನ ಜೀವನಕ್ಕೆ ನೀತಿ ಬೋಧನೆಯಾಗಿ, ರೂಪಕವಾಗಿ ಕಂಡುಬರುತ್ತವೆ.

೬. ಹರಿಹರನ ಗಿರಿಜಾಕಲ್ಯಾಣ : ಹರಿಹರನನ್ನು ರಗಳೆಯ ಕವಿಯೆಂದು ಮೂದಲಿಸಿದ್ದರಿಂದ ಗಿರಿಜಾಕಲ್ಯಾಣವೆಂಬ ಚಂಪೂಕಾವ್ಯ ರಚಿಸಿದನಂತೆ. ಗಿರಿಜಾಕಲ್ಯಾಣದಲ್ಲಿನ ಕಥಾನಾಯಕಿ ಗಿರಿಜೆ. ಇದು ಪೂರ್ಣವಾಗಿ ಅವಳ ಕಥೆಯಾಗಿದೆ. ಶಿವನ ಪಾತ್ರ ಅದಕ್ಕೆ ಪೋಷಣೆಯಂತಿದೆ. ಹದಿನೆಂಟು ವರ್ಣನೆಗಳ ನಿಮಿತ್ತ ಪರ್ವತ ಮತ್ತು ಮೃಗಯಾಗಳನ್ನು ತರಲು ಕವಿ ಪ್ರಯತ್ನಿಸಿದ್ದಾನೆ.

ಗಿರಿಜಾಕಲ್ಯಾಣದಲ್ಲಿ ಬರುವ ಬೇಟೆಗಾರನ ಚಿತ್ರಣ : ಭೀಕರ ಸ್ವರೂಪದ ಮುಖ, ರೌದ್ರ ಸ್ವಭಾವದ ಮದಿಸಿರುವ ಕಣ್ಣುಗಳು, ಕಡುಕಪ್ಪುದೇಹ, ಕಠಿಣ ಸ್ವಭಾವ, ಗಟ್ಟಿಯಾದ ಬಿಲ್ಲುಗಳು, ಭಯಂಕರವಾದ ಅಂಬುಗಳು, ನಿಷ್ಠುರವಾದ ಕೂಗಾಟಗಳು ವಿಚಿತ್ರವಾಗಿರುವುದು ಕಂಡುಬರುತ್ತವೆ.

ಅದರೊಳ್ ಭೀಕರಕಾಲಕಿಂಕರನಿಭಂ ಭೀಷ್ಮಾನನಂ ರೌದ್ರಸಂ
ಮದನೇತ್ರಂ ಘನಕೃಷ್ಣಕಾಯಕಠಿನಂ ಕಾಠಿನ್ಯಧರ್ಮಂ ಭಯ
ಪ್ರದ ಬಾಣಾವಳಿ ನಿಷ್ಠುರಧ್ವನಿಚಯಂ ನಾನಾಮೃಗಾಯುಷ್ಯದಾ
ಪದಲಂಕಾರದಿ ನೊಪ್ಪೆ ಲುಬ್ಧಕ ಕುಲಂ ತೀವಿರ್ಪುದಂತಾವಗಂ (೧-೭೮).

ಬೇಡರ ವೃತ್ತಿ ಬೇಟೆಯಾಗಿದ್ದು, ವಿವಿಧ ಕಾರಣಗಳಿಗಾಗಿ ಬೇಡರ ಪಡೆಯಿದ್ದ ಬಗೆಯನ್ನು ಚಿತ್ರಿಸಿದ್ದಾನೆ.

ಹರಿಹರ ತೀರಾ ಭಿನ್ನವಾದ ರೀತಿಯಲ್ಲಿ ಹಂದಿಬೇಟೆಯ ವರ್ಣನೆ ಮಾಡಿದ್ದಾನೆ. ಸಿಂಹ, ಹುಲಿಗಳ ಬೇಟೆಯನ್ನು ಉಲ್ಲೇಖಿಸಿರುವನು. ಕಾಡಿನಲ್ಲಿ ಜಿಂಕೆ ಕುಣಿದಾಡಿಕೊಂಡು ಓಡುತ್ತಿರುವುದನ್ನು ಕಂಡು ಬೇಡರು ಬಾಣ ಹೂಡುತ್ತಾರೆ. ಆ ಜಿಂಕೆಗಾಗಿ ಬೇಡರು ತಮ್ಮಲ್ಲಿ ಕಾದಾಡಿಕೊಂಡು ಅದನ್ನು ಪಡೆಯಲು ಉತ್ಸುಕರಾಗಿದ್ದರು. ಜಿಂಕೆ ದೇಹ ಸೇರಿದ ಬೇಡರ ಬಾಣಗಳಿಂದ ಅದು ಮುಳ್ಳುಹಂದಿಯಂತೆ ಕಾಣಬರುತ್ತಿತ್ತು. ಹಂದಿಯೊಂದು ಬೇಟೆ ನಾಯಿಯನ್ನು ಕೊಂದಾಗ ಅದರ ಸ್ಥಿತಿ ಬಹಳ ದುಃಖಮಯವಾಗಿತ್ತು :

ನಟ್ಟಡವಿಯೊಳಗೆ ಮುಳಿಸಿಂ
ಮುಟ್ಟುವ ನಾಯ್ಗಳನೆ ತುಂಡಿಸಲ್ಕೆಂದುರೆ ಕಿ

ಗುರ್ಟುತೆ ಮುಂದಟ್ಟುತೆ ಪಿಂ

ದಟ್ಟುತೆ ಸೂಕರನಡರ್ದು ಸಾರ್ದುದು ಮೆಳೆಯಂ (೧:೧೦೨)

ಬೇಟೆಗಾರ ನಾನು ಅದನ್ನು ಹಾಸಿಗೆಯಲ್ಲಿ ಮಲಗಿಸಿ, ಹಾಲುಹಾಕಿ ನನ್ನ ಜತೆಗೆ ಸಾಕಿಕೊಂಡು ಬೆಳೆಸಿದ್ದೆ, ಇಂಥ ಮುದ್ದಿನ ನಾಯಿಯನ್ನು ಹಂದಿ ಕೊಂದಿತಲ್ಲ ಎಂದು ಬೇಡ ದುಃಖಿಸುತ್ತಾ, ಕೊಂದ ಹಂದಿಯನ್ನು ಕೊಲ್ಲುವೆನೆಂದು ಪಣತೊಡುತ್ತಾನಲ್ಲದೆ, ಅದರಿಂದ ತಾನು ಅವಸಾನ ಹೊಂದುವನು :

ಅಳ್ಕಿ ಪುಳಿಂದಂ ಕಾಣುತೆ

ತಳ್ಕೈಸಿಯೆಕೊಂಡು ಶುನಕನೆರಡುಂ ಕಡಿಯಂ

ಕಾಳ್ಕುರ್ಚು ತಗುಳ್ದ ತೆರದಂ

ನಿಳ್ಕೈಸದೆ ನೊಂದು ಬೆಂದು ಬಳಲುತ್ತೆಂದಂ (೧:೧೦೬).

ಇಲ್ಲಿ ಯೌವನಕ್ಕೆ ಬಂದ ಬೇಡ - ಬೇಡತಿಯರ ಶೃಂಗಾರ - ಪ್ರಣಯವು ಬೇಟೆಯ ನೆಪದಲ್ಲಿ ವ್ಯಕ್ತವಾಗಿದೆ. ಅವರು ಕೂಡುವುದಕ್ಕೆ ಕತ್ತಲೆ ಇರುವ ಏಕಾಂತ ಸ್ಥಳವನ್ನು ಹುಡುಕುತ್ತಾರೆ. ಕಾಡಿನಲ್ಲಿ ಅಂಥ ಸ್ಥಳ ದೊರಕಿದರೂ ಯಾರಾದರೂ ನೋಡಬಹುದೆಂಬ ಹೆದರಿಕೆಯೂ ಇತ್ತು. ಪ್ರಣಯ ಕಲಹದ ಬೇಡ - ಬೇಡತಿಯರ ಜಗಳವಾಡುವ ಅಪೂರ್ವ ಸಂದರ್ಭವಿದೆ. ಕಾರಣ ಬೇಟೆಯಾಡಿ ಬಂದ ಬೇಡರ ದೇಹದಲ್ಲಿ ಪ್ರಾಣಿಗಳಿಂದಾದ ಗಾಯಗಳನ್ನು ನೋಡಿ ಬೇಡತಿಯರು ಅವು ಪರಸ್ತ್ರೀಯಿಂದ ರತಿ ಸಮಯದಲ್ಲಿ ಆದ ಗಾಯಗಳೆಂದು ಸಂಶಯಪಟ್ಟು ಜಗಳವಾಡುತ್ತಾರೆ. ಇವನ ಸಮಕಾಲೀನನಾದ ಶೇಕಿರಾಳ ಪೆರಿಯಾಪುರಾಣದಲ್ಲಿ (ತಮಿಳು) ಬೇಟೆಯನ್ನು ಒಂದು ನೀಚ ವೃತ್ತಿಯೆಂದು ತಿಳಿಸಿರುವನು. ಹರಿಹರ ನೈಜವೆಂಬಂತೆ ಬೇಟೆಯನ್ನು ಚಿತ್ರಿಸಿರುವುದು ಸ್ಪಷ್ಟ.

೬.೧. ನೇಮಿಚಂದ್ರನ ಲೀಲಾವತಿಪ್ರಬಂಧಂ : 'ಲೀಲಾವತಿ' ಒಂದು ಶೃಂಗಾರ ಕಾವ್ಯ. ಬನವಾಸಿಯ ರಾಜಕುಮಾರ ಕಂದರ್ಪದೇವನು ತನ್ನ ಕನಸಿನಲ್ಲಿ ಕಂಡ ಸುಂದರಿಯನ್ನು ಅರಸುತ್ತಾ ಇತರರೊಡನೆ ದೇಶಾಂತರ ಹೊರಡುತ್ತಾನೆ. ಇವನಂತೆ ಲೀಲಾವತಿಯು ಕನಸಿನಲ್ಲಿ ಕಂಡ ಪುರುಷನನ್ನು ಕರೆತರಲು ದೂತರನ್ನು ಕಳುಹಿಸುತ್ತಾಳೆ. ಅಡೆ-ತಡೆಗಳ ನಡುವೆ, ಕೊನೆಗೆ ಇವರಿಬ್ಬರ ಮಿಲನವಾಗುತ್ತದೆ. 'ಸ್ತ್ರೀ ರೂಪಮೆ ರೂಪಂ ಶೃಂಗಾರಮೆ ರಸಂ' ಎಂದು ಕವಿ ಶೃಂಗಾರಕ್ಕೆ ಜೋತು ಬದ್ದು ಕಥೆಯಲ್ಲಿ ಗಂಭೀರವಾದ ಘಟನೆ, ಪ್ರಸಂಗಗಳನ್ನು ತೇಲಿಸಿರುವುದು ಸ್ಪಷ್ಟ.

ರಾಜಕುಮಾರನು ಲೀಲಾವತಿಯನ್ನು ಹುಡುಕುತ್ತಾ, ಎಲ್ಲ ಕಡೆ ಸಂಚರಿಸಿ ಅವಳ ನೆನಕೆಯಲ್ಲಿಯೇ ನಾನು ಸತ್ತು ಹೋಗುತ್ತೇನೆ ಎನ್ನುವನು. ಅವಳನ್ನು ತಂದುಕೊಡುವವರು ಯಾರು ? ಮನ್ಮಥನ ಗೋರಿ ಬೇಟೆಯಿಂದ ತಪ್ಪಿಸಿಕೊಳ್ಳುವುದು ಹೇಗೆಂದು ಪರಿಪರಿಯಾಗಿ ಚಿಂತಿಸಿ ಪಯಣಿಸಿದ. ಇವನು ಹಗಲಿನಲ್ಲಿ ಗ್ರಾಮ, ನಗರ, ಖರ್ವಡ ದಾಟ ರಾತ್ರಿಯಾದೊಡನೆ ಆಶ್ರಮಗಳಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ. ಶರತ್ಕಾಲವು ದೇಶಾಟನೆಗೆ ಸೂಕ್ತವಾಗಿತ್ತು. ಅವನು ಪ್ರಕೃತಿ ಸೊಬಗನ್ನು ಸವಿಯುತ್ತ ದಾರಿಯಲ್ಲಿ ಬುತ್ತಿಯನ್ನು ಉಣ್ಣುತ್ತ ಪಾಮರಿಯರ ಚೆಲುವನ್ನೀಯುತ್ತ ಮುಂದೆ ಮುಂದೆ ಹೋದಾಗ ಗೊಲ್ಲರ ದೊಡ್ಡಿಯನ್ನು ಹೊಕ್ಕು ರಾತ್ರಿ ವಿಶ್ರಮಿಸಿಕೊಂಡನು. ಹೀಗಿರುವಾಗ ಬೆಳಗಿನ ಹೊತ್ತು ಹಂದಿಯೊಂದು ದೊಡ್ಡಿಗೆ ನುಗ್ಗಿ ಗೊಲ್ಲರನ್ನು ಕೊಂದು, ದನಗಳನ್ನು ಗಾಯಗೊಳಿಸಿ ಎಲ್ಲೆಲ್ಲೂ ಹಾಹಾಕಾರವನ್ನುಂಟುಮಾಡಿತು. ಆ ಹಂದಿಯನ್ನಟ್ಟಿಕೊಂಡು ಬಂದ ಬೇಟೆಗಾರರ ಬೊಬ್ಬೆ ಅಂಬರಕ್ಕೇರಿತೆಂದು ಕವಿ ತಿಳಿಸುತ್ತಾನೆ. ಎಚ್ಚೆತ್ತ ರಾಜಕುಮಾರ ಆ ಹಂದಿಗೆ ಬಾಣ ಪ್ರಯೋಗ ಮಾಡಿದಾಗ ಅದು ತಪ್ಪಿಸಿಕೊಂಡು ಬೆಟ್ಟ ಗುಡ್ಡಗಳ

ಇರುಕಿನಲ್ಲಿ ಮರೆಯಾಯಿತು. ಕಂದರ್ಪದೇವ ಗಿಳಿ ಹೇಳಿದ ಕಥೆ ಕೇಳಿ ನಾಗಾಲೋಟದಲ್ಲಿ ವಿಹರಿಸುತ್ತಿದ್ದ. ಹೀಗೆ ನದಿ, ಬೆಟ್ಟ, ಅರಣ್ಯ ಅಲೆದ ತರುವಾಯ ದಾರಿಯಲ್ಲಿ ಸಿಕ್ಕಿದ ವನ್ಯಮೃಗಗಳನ್ನು, ಪುಳಿಂದಿಯರನ್ನು ನೋಡುತ್ತ, ಯಕ್ಷನಿಗೆ ಕೈ ಮುಗಿದು ಮುಂದೆ ನಡೆದನು. ಹೀಗೆ ಲೀಲಾವತಿಪ್ರಬಂಧದಲ್ಲಿ ಬೇಟೆಯ ಪ್ರಸಂಗದ ಪ್ರಸ್ತಾಪ ರಾಜ- ರಾಣಿಯರ ಪಾತ್ರಗಳೊಂದಿಗೆ ಶ್ರೀಮಂತಗೊಂಡಿದೆ.

೭.೨. ನೇಮಿನಾಥಪುರಾಣ : ನೇಮಿನಾಥಪುರಾಣದಲ್ಲಿ ಪೂರ್ವಭವಾವಳಿಗೆ ಸಂಬಂಧಿಸಿದ ಕಥೆಯಿದೆ. ರಘು ಮಹಾರಾಜನ ನಗರವಾದ ಕೌಶಾಂಬಿಯಲ್ಲಿ ಸುಮುಖನೆಂಬ ಶ್ರೇಷ್ಠಿಯಿದ್ದ. ಕಳಿಂಗದೇಶದ ದಂತಪುರದ ವರ್ತಕ ವೀರದತ್ತ ಬೇಡರ ಭಯದಿಂದ ವನಮಾಲೆಯೆಂಬ ಪತ್ನಿಯೊಡನೆ ಸುಮುಖನ ಆಶ್ರಯದಲ್ಲಿದ್ದ. ಸುಮುಖ ವ್ಯಾಪಾರ ನಿಮಿತ್ತದಿಂದ ವೀರದತ್ತನನ್ನು ಹನ್ನೆರಡು ವರ್ಷ ದೂರ ದೇಶಕ್ಕೆ ಕಳಿಸಿ, ಅವನ ಹೆಂಡತಿ ವನಮಾಲೆಯನ್ನು ಅಪಹರಿಸುತ್ತಾನೆ. ಇವರಿಬ್ಬರ ಕಾಮವಿಕಾರ ಕತೆ ಕೇಳಿ ವೀರದತ್ತ ದೀಕ್ಷೆಪಡೆದು ಚಿತ್ರಾಂಗದ ದೇವನಾಗಿ ಜನ್ಮಧಾರಣೆ ಮಾಡಿಕೊಂಡ. ಬೇಡರ ಭಯಕ್ಕೆ ಹೆದರಿ ರಕ್ಷಣೆಗೆಂದು ಅರಸನಲ್ಲಿಗೆ ಬಂದಾಗ ಬೇಡರಿಗಿಂತಲೂ ಅವನು ಕೀಳಾಗಿ ನಡೆದುಕೊಂಡ ಸಂದರ್ಭ ಜೈನಕಥೆಗಳಲ್ಲಿ ಗಂಭೀರ ಸ್ಥಾನಗಳಿಸಿದೆ.

ಅಯೋಧ್ಯಾನಗರದ ರಾಜ ಅನಂತವೀರ್ಯ, ರಾಜಶ್ರೇಷ್ಠಿ ಸುರೇಂದ್ರದತ್ತ, ದಾನ ಧರ್ಮಗಳಲ್ಲಿರುತ್ತಾರೆ. ರುದ್ರದತ್ತನೆಂಬ ಬ್ರಾಹ್ಮಣನ ಬಳಿ ಸಾಕಷ್ಟು ದ್ರವ್ಯವನ್ನಿಟ್ಟು ೧೨ ವರ್ಷ ವ್ಯಾಪಾರಕ್ಕೆಂದು ಹೊರಡುತ್ತಾನೆ. ಪರಸ್ತ್ರೀ, ಪರಧನ ವ್ಯಸನಿಗನಾದ ಬ್ರಾಹ್ಮಣನು ದ್ರವ್ಯವನ್ನು ಪೋಲುಮಾಡಿ ಕಳ್ಳತನ ಮಾಡುವಾಗ ತಳವಾರನ ಕೈಗೆ ಸಿಕ್ಕಿಕೊಂಡ. ಬ್ರಾಹ್ಮಣನೆಂದು ಮುಕ್ತನಾಗಿ ಬೇಡರ ಗುಂಪು ಸೇರುತ್ತಾನೆ. ಇಂತಹ ಅನೇಕ ಘಟನೆಗಳಲ್ಲಿ ಭಾಗವಹಿಸಿ ಮರಣಹೊಂದಿದ.

ನೇಮಿಚಂದ್ರ ತನ್ನ ಕಾವ್ಯದಲ್ಲಿ ಬೇಡರ ವರ್ಣನೆ ಮೂಲಕ ಅಪೂರ್ವ ಕೌಶಲ್ಯ ತೋರಿಸಿದ್ದಾನೆ. ವಿಂಧ್ಯಕ - ವಾಗುರೆಯೆಂಬ ಬೇಡ - ಬೇಡತಿಯರ ಚಿತ್ರಣ ಅಭೂತಪೂರ್ವವಾದುದು. ವಿಂಧ್ಯಕ ಚಾಪವಿದ್ಯೆಯಲ್ಲಿ ಅರ್ಜುನ, ರೂಪದಲ್ಲಿ ಕೃಷ್ಣ. ವಾಗುರಿಯ ಮೊಲೆವಟ್ಟದ ಮೇಲಣ ಬಿಂಬಫಲದ ರಸವನ್ನು ಹೀರಿದ ಅವನಿಗೆ ಅಡವಿಯ ಹಣ್ಣು ರುಚಿಸಲಿಲ್ಲವಂತೆ. ಅವಳ ಕಣ್ಣುಗಳು ಕತ್ತಲಲ್ಲಿ ಮಿಂಚುತ್ತಿದ್ದವು. ಕಿರಾತ ವೇಷದ ಶಿವಭವಾನಿಯರಂತಿದ್ದ ಆ ವ್ಯಾಧ ದಂಪತಿಗಳು ಒಮ್ಮೆ ವಸಂತೋದಯ ಸಮಯದಲ್ಲಿ ಮೃಗಯಾಸಕ್ತರಾಗಿ ನಟ್ಟಡವಿಗೆ ಹೋಗುತ್ತಾರೆ. ಬೆಚ್ಚಿ ನೋಡುತ್ತಿದ್ದ ಹುಲ್ಲೆಗಳಲ್ಲಿ ನಲ್ಲಳ ಕೊಲ್ಲಿ ನೋಟವನ್ನು ಕಂಡು, ಕಾಡಾನೆಯ ಕುಂಭಸ್ಥಳಗಳಲ್ಲಿ ಕಾಮಿನಿಯ ಮೊಲೆವೆಳಗಳನ್ನು ಗುರುತಿಸಿ, ನವಿಲುಗಳ ವಾಗುರೆ ಪ್ರಕೃತಿಸಿರಿ ಸೊಬಗನ್ನು ಕಂಡು ಪ್ರಾಣಗಳನ್ನು ಕೊಲ್ಲುವುದಿಲ್ಲ. ವಾಗುರೆ ಗಂಡನ ದಾರಿ ಹಿಡಿಯುತ್ತಾಳೆ. ಹಳ್ಳಿಯ ಬೇಡತಿಯರು 'ನೀನುಂ ನಿನ್ನ ಗಂಡನುಂ ಪುಲಿಯಂತಿರ್ದು ನರಿಯಂತಿರೇರ್ಕೆದಪಿರ್' ಎಂದು ವಾಗುರೆಯನ್ನು ಕೆಣಕಿದಾಗ ಅವಳು ಕಂಬನಿದುಂಬಕೊಂಡು ಹೀಗೆ ನುಡಿಯುತ್ತಾಳೆ :

ತುಡೆಕೋಲಂ ಮುನಿಗಳೊಕಾದ ಫಲಮಂಕ್ಕೆ ಕೆಯ್ಕೊಳುಂಡಪ್ಪೆನಾ
ದಡಿಗರ್ ಮಂತ್ರಿಸಿ ಕಟ್ಟಿದರ್ಕಲಿಯ ಕಯ್ಕಂ ಬಾಯುಮಂ ಕಟ್ಟಿನಾಂ
ಪಿಡಿಯಂ ಪಕ್ಕಿಗಳಂ ಮೃಗಕ್ಕೆ ಬಿಡಲೊಲ್ಲಂ ನಾಯ್ಗಳಂ ಜೇನುಮಂ
ಬಡಿಯಂ ಗಾಣಮನಿಕ್ಕನೊಕ್ಕ ನಿನಿಯಂ ತನ್ನಿಕ್ಕೆಯಂ ಬಾದ್ಯೆಯಂ (೫-೭೪:೧೧೧೩)

ವಿಂಧ್ಯಾಟವಿಯಲ್ಲಿ ಮೃಗ, ಪಕ್ಷಿಗಳ ಬೇಟೆ ಮತ್ತು ಇತರ ಕ್ರೀಡೆಗಳ ಪ್ರಸಂಗವನ್ನು ಇವನು ವರ್ಣಿಸಿದ್ದಾನೆ.

೮. ಜನ್ನನ ಯಶೋಧರಚರಿತೆ : ಜನ್ನ ಕವಿಯ ವಿರಚಿತ 'ಯಶೋಧರಚರಿತೆ' ಯಲ್ಲಿ ಭವಾವಳಿರೂಪದ ಬೇಟೆ ಸಂದರ್ಭಗಳನ್ನು ಗುರುತಿಸಬಹುದು. 'ಮಾರಿದತ್ತನೆಂಬ ರಾಜನು ಮಾರಿಗೆ ಬಲಿ ಕೊಡುವುದಕ್ಕಾಗಿ ಇಬ್ಬರು ಕುಲೀನರಾದ ಹುಡುಗರನ್ನು ಹಿಡಿದು ತರಿಸಿದಾಗ ಅವರು ಹೇಳಿದ ಪೂರ್ವಕಥೆಯಿಂದ ಪರಹಿಂಸಾಸಕ್ತಿಯನ್ನು ಬಿಟ್ಟು ಅವರನ್ನು ಬಿಡುಗಡೆ ಮಾಡಿ ತಪಸ್ಸು ಮಾಡುವುದೇ ಇದರ ಕಥಾಸಾರ. ಯಶೋಧರನು ಅಭಯರುಚಿಯಾಗಿದ್ದ ಜನ್ಮದ ಅವಧಿಯಲ್ಲಿ ನಡೆದ ಘಟನೆ ಕುರಿತು ಈ ಕೃತಿ ಬೆಳಕು ಚೆಲ್ಲುತ್ತದೆ.

ಅಯೋಧ್ಯಾದೇಶ, ರಾಜಪುರದ ಮಾರಿದತ್ತನೆಂಬ ರಾಜ ಚಂಡಮಾರಿದೇವತೆಯ ತೃಪ್ತಿಗಾಗಿ ನರಬಲಿ ಕೊಡುವುದಕ್ಕೆಂದು ಇಬ್ಬರನ್ನು ಹಿಡಿದು ತರಿಸುತ್ತಾನೆ. ಅವರಲ್ಲೊಬ್ಬನಾದ ಅಭಯರುಚಿ ಕುಮಾರನು 'ನಿರ್ಮಲ ಧರ್ಮದಿಂದ ಪಾಲಿಸು ಧರೆಯಂ' ಎನ್ನುವನು. ಇದರ ಹಿನ್ನೆಲೆ : ಉಜ್ಜನಿಯ ಯಶೌಘರಾಜನ ಮಡದಿಯ ಚಂದ್ರಮತಿಗೆ ಹುಟ್ಟಿದವನೇ ಯಶೋಧರ. ಅವನ ಪತ್ನಿ ಅಮೃತಮತಿ. ಮಂಚದ ಮೇಲೆ ಇಬ್ಬರು ಮಲಗಿರುವಾಗ ಗಜಶಾಲೆಯ ಮಾವಟಗನ ಹಾಡಿನ ಇಂಚರ ಕೇಳಿ ತನ್ನ ಮನಸ್ಸನ್ನು ಅವನಿಗೆ ಒಪ್ಪಿಸುತ್ತಾಳೆ. ಅಷ್ಟಾವಕ್ರನ ವಿಕಾರ ಹೇಯವಾಗಿತ್ತು. ಆದರೆ ಅವಳು ಅಂತವನನ್ನು 'ಪೊಲ್ಲಮೆಯ ಲೇಸು ನಲ್ಲರ ಮೆಯ್ಯೊಳ್' ಎನ್ನುತ್ತಾಳೆ. ಅಮೃತಮತಿ ಮಾವಟಿಗನೊಂದಿಗೆ ಪ್ರತಿದಿನ ಹೋಗುತ್ತಿದ್ದಳು. ಯಶೋಧರ ಅವರಿಬ್ಬರನ್ನು ಕೊಲ್ಲದೆ ತಾಯಿಗೆ ಮೇಲಿನ ವಿಷಯ ತಿಳಿಸುತ್ತಾನೆ. ಅವಳು ಕನಸಿನ ಘಟನೆಯೆಂದು ಪ್ರಾಣಿಕೊಟ್ಟು ಶಾಂತಿ ಮಾಡುವ ಸಲುವಾಗಿ ಹಿಟ್ಟಿನ ಕೋಳಿ ಬಲಿಕೊಡಲು ಅವರು ನಿರ್ಧರಿಸುತ್ತಾರೆ.

ಇಬ್ಬರು ಹಲವು ಸಲ ಜನ್ಮವೆತ್ತಿ ಕಡೆಗೆ ಯಶೋಮತಿಗೆ ಅಭಯರುಚಿ, ಅಭಯಮತಿ ಬಂದು ಅವಳಿಗಾಗಿ ಚಂಡಕರ್ಮನು ಅವರನ್ನು ಹಿಡಿದು, ಚಂಡಮಾರೀ ದೇವತೆಯ ಮನೆಗೊಯ್ದಾಗ ಅಭಯರುಚಿ ಈ ಕಥೆ ಹೇಳುತ್ತಾನೆ. ಯಶೋಧರನು ಅಮೃತಮತಿಯಲ್ಲಿ ಆಸಕ್ತನಾಗಿದ್ದನೇ ಹೊರತು, ಅಮೃತಮತಿ ಅವನಲ್ಲಿ ಅನುರಕ್ತೆಯಾಗಿರಲಿಲ್ಲ ಎಂಬುದಕ್ಕೆ ಉದಾ :

ಅಮೃತಮತಿ ಗಡ ಯಶೋಧರ
ನ ಮನಃಪ್ರಿಯೆ ಆಕೆ ದೀವಮಾಗೆ ಪುಳಿಂದಂ
ಸುಮನೋಬಾಣಂ ತದ್ಭೂ
ರಮಣನನೊಲಿದಂತೆ ಗೋರಿಗೊಳಿಸುತ್ತಿರ್ಕುಂ (ಪು.೬)

ಯಶೋಧರನು ಅಮೃತಮತಿಯಿಂದ ಆಕರ್ಷಿತನಾಗಿದ್ದನೆ ಏಕೆ ? ಕಾಮನ ಪ್ರಭಾವದಿಂದ ಎಂಬುದು ಸ್ಪಷ್ಟ. ಎಂದರೆ ಯಶೋಧರನಲ್ಲಿ ಕಾಮುಕತೆಯಿತ್ತೆಂದು ಸೂಚಿಸುವಂತಿದೆ. ಹಾಗೆಯೇ ಅಮೃತಮತಿ ಆತನನ್ನು ಒಲಿದಿದ್ದಳೆ? ಬೇಟೆಗಾರನ ದೀವಕ್ಕೆ (ಬೇಟೆ ಹಿಡಿಯುವ ಪ್ರಾಣಿ) ತನ್ನಿಂದಾಗಿ ಗೊರಿಗೊಳ್ಳುವ ಪ್ರಾಣಿಯಲ್ಲಿ ಪ್ರೀತಿ ಮತ್ತು ಆಸಕ್ತಿ ಉಳಿಯುವುದೇ ? ಮಾತ್ರವಲ್ಲ, ಬೇಟೆಗಾರನು ಅದೇ ದಿನದಲ್ಲಿ ಇನ್ನೊಂದು ಪ್ರಾಣಿಯನ್ನಾಕರ್ಷಿಸುವುದಕ್ಕೆ ಬಳಸುತ್ತಾನೆ. ಆ ಪ್ರಾಣಿಯೂ ಹಾನಿಗೊಳಗಾಗುತ್ತದೆ. ಇದನ್ನು ನೋಡಿದರೆ ಯಶೋಧರನು ಅಮೃತಮತಿಯಲ್ಲಿ ಆಸಕ್ತನಾಗಿದ್ದನೇ ಹೊರತು, ಅಮೃತಮತಿ ಅವನಲ್ಲಿ ಅನುರಕ್ತೆಯಾಗಿದ್ದಳೆಂಬುದನ್ನು ಒತ್ತಿ ಹೇಳುವಂತಿಲ್ಲ. ಇಲ್ಲಿ ಹೆಣ್ಣಿನ ಕಾಮದ ತೃಷೆಯನ್ನು ಕವಿ ಹೃದಯ ಶ್ರೀಮಂತಿಕೆಯಿಂದ ವರ್ಣಿಸಿದ್ದಾನೆ.

ಯಶೋಧರ ಚಂದ್ರಮತಿ ಸಂಕಲ್ಪ ಹಿಡಿದು ಆರುಬಾರಿ ಜನ್ಮವೆತ್ತಿ ಕೊನೆಗೆ ಮನುಷ್ಯ ಜನ್ಮಕ್ಕೆ ಕಾಲಿಟ್ಟಾಗ ಅಭಯರುಚಿ, ಅಭಯಮತಿಗಳಾಗಿದ್ದರು. ಯಶೋಧರನ ಮಗ ಯಶೋಮತಿ ಬೇಟೆಯ ಸೆವದಿಂದ ಎಷ್ಟು ಜೀವ ಹಿಂಸೆ ಮಾಡಿಲ್ಲ ?

ನಿಂದು ನರಪತಿ ತಳಾರಂ
ಗೆಂದಂ ನೀನ್ ಬರಿಸು ಮನುಜಯುಗಮಂ ಮುನ್ನಂ
ಕೊಂದರ್ಚಿಸುವೆಂ ಪೂಜೆಯೊ
ಳೆಂದಿನ ಪರಿ ತಪ್ಪೆ ದೇವಿ ತಪ್ಪದೆ ಮಾಣಳ್ (೪೧:೨೫).

ತನ್ನ ತಳಾರನನ್ನು ಕರೆದು, ನೀನು ಈಗಲೇ ಮನುಷ್ಯಯುಗ್ಮವನ್ನು ಬರಿಸು. ಎಂದಿನಂತೆ ಮೊದಲು ನಾನೇ ಅವರನ್ನು ಬಲಿಕೊಟ್ಟು ಅರ್ಚಿಸಬೇಕಾಗಿದೆ. ಪದ್ಧತಿ ಪ್ರಕಾರ ನಡೆದುಕೊಳ್ಳದಿದ್ದರೆ ದೇವಿ ಸಿಟ್ಟಾದೀತು. ಪರಿಣಾಮವಾಗಿ ಅವಳೂ ನಮ್ಮ ವಿಷಯದಲ್ಲಿ ತಪ್ಪಿ ನಡೆಯದಿರಲಾರಳು. ಆದುದರಿಂದ ತ್ವರೆ ಮಾಡು ಎನ್ನುತ್ತಾನೆ. ರಾಜನು ಹೇಳಿದ ಪ್ರಕಾರ ಚಂಡಕರ್ಮನೆಂಬ ತಳಾರನು ಮಾರಿಗೆ ಬಲಿಕೊಡಲು ಬುದ್ಧಿವಂತ ಸುಂದರ ಮಕ್ಕಳನ್ನು ಹುಡುಕುತ್ತಿದ್ದನು. ಒಂದು ಕಡೆ ಸುದಾತ್ತಚಾರ್ಯರ ೫೦೦ ಮಂದಿ ಶಿಷ್ಯರಿದ್ದರು. ಇಬ್ಬರು ಮಕ್ಕಳನ್ನು ಕರೆದು ಭಿಕ್ಷೆ ತರುವಂತೆ ಕಳುಹಿಸಿಕೊಟ್ಟರು. ಆ ಬಾಲಕರು ಗುರುಗಳ ಪಾದಕ್ಕೆ ನಮಸ್ಕರಿಸಿ ಅಲ್ಲಿಂದ ಹೊರಟರು. ಅಷ್ಟರಲ್ಲಿ ಎರಡು ಎಳೆಯ ಜಿಂಕೆಮರಿಗಳನ್ನು ಹುಲಿಯು ಹಿಡಿಯುವಂತೆ, ಅವರನ್ನು ಚಂಡಕರ್ಮನು ಹಿಡಿದನು :

ಅನಿತೆಸೆವ ಚಂದ್ರಮತಿಗಂ
ಜನಪತಿಗಂ ಪುಟ್ಟದಂ ಯಶೋಧರನೆಂಬಂ
ಜನಮೋಹನಬಾಣಂ ಕ
ಬ್ಬಿನ ಬಲ್ಗಂ ನನೆಯ ನಾರಿಗಂ ಪುಟ್ಟದವೊಲ್ (೨-೫-೩೫)

ಅಷ್ಟೊಂದು ಪ್ರೇಮದಿಂದ ಶೋಭಿಸುತ್ತಿದ್ದ ಚಂದ್ರಮತಿಗೂ ಯಶೌಘಸಿಗೂ ಯಶೋಧರನೆಂಬುವನು ಮಗನಾಗಿ ಹುಟ್ಟದನು. ಕಬ್ಬಿನ ಬಲ್ಲಿಗೂ ನನೆಯ ಹಗ್ಗಕ್ಕೂ ಜನಮೋಹನ ಬಾಣವು ಹುಟ್ಟುವಂತಿತ್ತು. ಯಶೋಧರನ ಮನದನ್ನೆಯೇ ಅಮೃತಮತಿ. ಬೇಟೆಗಾರನಾದ ಕಾಮನಿಗೆ ಆ ಭೂಪತಿಯನ್ನು ಆಕರ್ಷಿಸಿ ಸೆರೆ ಹಿಡಿಯುವ ಮನಸ್ಸಾಯಿತು. ಅವನು ಅಮೃತಮತಿಯನ್ನೇ ದೀವವನ್ನಾಗಿ ಮಾಡಿ ಮೋಹಗೊಳ್ಳುವಂತೆ ಮಾಡಿದನು. ಯಶೋಧರನು ಅಮೃತಮತಿಯನ್ನು ಬಹುವಾಗಿ ಮೆಚ್ಚಿಕೊಂಡಿದ್ದ.

ಯಶೋಧರನಿಗೆ ಉಂಡ ಊಟ ಉಪವಾಸದಂತೆ, ಪಥ್ಯದಂತೆ, ಮರಣವೆಂಬಂತೆ ಆಯಿತು. ಹೀಗೆ ಮೊಟ್ಟೆಯೊಡೆದು ಮರಿಯಾಯಿತು ಆ ಜೀವ. ಅಲ್ಲಿಂದ ಮುಂದೆ ಹರಿಯುವಷ್ಟು ಅದಕ್ಕೆ ಶಕ್ತಿಯುಂಟಾಗಿರಲಿಲ್ಲ. ಎಳೆಯಗರಿಗಳೂ ಮೂಡಿರಲಿಲ್ಲ. ಕಾಲುಗಳಿಗೆ ಬಲವೂ ಬಂದಿರಲಿಲ್ಲ. ಮರಿ ಸರಿಯಾಗಿ ಕಣ್ಣು ತೆರೆಯಲೂ ಇಲ್ಲ. ಈ ಅವಸ್ಥೆಯಲ್ಲಿದ್ದಾಗ ಯಮನ ದೂತನಂತೆ ಬೇಡನೊಬ್ಬನು ಬೇಟೆಯಾಡುತ್ತ ಆ ಕಾಡನ್ನು ಮುತ್ತಿದನು. ಬಂದವನೇ ಆ ಬೇಟೆಗಾರನು ಮರಿಯೊಡನಿದ್ದ ತಾಯಿಯನ್ನು ಓಡಿಸಿಬಿಟ್ಟನು. ಮರಿಯನ್ನು ಮಾತ್ರ ಬಿಡಲಿಲ್ಲ. ಅದನ್ನು ಹಿಡಿದು ತಂದು ತನ್ನ ಹೆಂಡತಿಯ ಕೈಗಿತ್ತು ಸಾಕುವಂತೆ ಹೇಳಿದನು. ನವಿಲು ನವರತ್ನ ಪಂಜರದೊಳಗೆ ಕುಣಿದಾಡಿ ಚೆಲುವು ಲೋಕವನ್ನೆಲ್ಲ ಮೀರಿಸಿತ್ತು. ಸತ್ತ ಚಂದ್ರಮತಿಯು ಕರಹಟದಲ್ಲಿ ಒಂದು ಬೇಟೆಯ ನಾಯಿಯಾಗಿ ಹುಟ್ಟಿಕೊಂಡಳು. ಈ ನಾಯಿ,

ನವಿಲನ್ನು ಬೇರೆ ಬೇರೆಯಾಗಿ ರಾಜನಿಗೆ ತಂದು ಒಪ್ಪಿಸಿದರು. ಹೀಗೆ ತಾಯಿ ಮಕ್ಕಳು ಅರಮನೆಯನ್ನು ಸೇರಿದರು. ನಂತರ ಕಥೆ ಮುಂದುವರೆಯುತ್ತದೆ.

ಚಂದ್ರಮತಿಯು ಕೊನೆಗೆ ಆಡಾಗಿ ಜನಿಸಿದಳು. ತಾಯಿಗೂ ಬೆದೆಯ ಕಾಲವಾದಾಗ, ಸೊಕ್ಕಿದ ಹೋತವು ಅದಕ್ಕೆ ಹತ್ತಿತು. ಸತ್ತ ಆಡು ತಾಯಿಯ ಬಸಿರನ್ನು ಸೇರಿಕೊಂಡಿತು. ಹೀಗೆ ಆಡು ಸಂಚರಿಸುತಿತ್ತು. ಒಮ್ಮೆ ಯಶೋಮತಿ ಬೇಟೆಗೆ ಹೋಗಿದ್ದನು. ಅವನಿಗೆ ಅಲ್ಲಿ ಒಂದು ಪ್ರಾಣಿಯೂ ಸಿಕ್ಕಲಿಲ್ಲವಾದ ಕಾರಣ, ಮಾಂಸ ಬೇಕಾಗಿದ್ದುದರಿಂದ ಎದುರು ಕಾಣಸಿಕ್ಕಿದ ಗರ್ಭಿಣಿಯಾದ ಆಡನ್ನೇ ಬಾಣಬಿಟ್ಟು ಕೊಂದಿಕ್ಕಿದನು (೩-೫೫:೬೬-೬೭).

ಒರ್ಮೆ ಯಶೋಮತಿ ಮೃಗಯಾ
ನರ್ಮಮನಂ ಪರಸಿ ನಡೆದು ಮೃಗಮಂ ಪಡೆದೊಂ
ದೆರ್ಮೆಯ ಪೋರಿಯನಿಕ್ಕಿದು
ನೂರ್ಮಾರಿಗೆ ಮತ್ತಮದನೆ ಮಹಳಕ್ಕಿತ್ತಂ (೩-೫೭-೬೭)

ಯಶೋಮತಿಗೆ ಮತ್ತೊಮ್ಮೆ ಬೇಟೆಯಾಡುವ ಅಭಿಲಾಷೆ ತೀವ್ರವಾಯಿತು. ಅವನು ಮಾರಿಗೆ ಹರಕೆ ಹೇಳಿ ಮುಂದುವರಿದನು. ಅಲ್ಲಿ ಅವನಿಗೆ ಜಿಂಕೆಯೊಂದು ಸಿಕ್ಕಿತು. ಅನಂತರ ಅವನು ಒಂದು ಕೋಣವನ್ನು ಕೊಂದು ಊರ ಮಾರಿಗೆ ಬಲಿಕೊಟ್ಟ ನಂತರ ಮಹಾಲಯಕ್ಕಾಗಿ ಕೊಟ್ಟನು.

ಜನ್ನ ಕವಿ ಜೈನನಾಗಿದ್ದು, ಕಾವ್ಯದ ಮನೋಧರ್ಮದಲ್ಲಿ ಅಹಿಂಸೆಯ ಪ್ರತಿಪಾದಕನಾಗಿದ್ದಾನೆ. ಇಲ್ಲಿ ಭವಾವಳಿಯ ಮೂಲಕ ಬೇಟೆಯಾಡುವುದು, ಬಲಿ ಮೂಲಕ ಹಿಟ್ಟನಕೋಳಿಯನ್ನು ಸಾಂಕೇತಿಕವಾಗಿ ತರುವುದು, ಕವಿಯ ವರ್ಣನಾ ಸಂಪತ್ತನ್ನೇ ಪ್ರತಿನಿಧಿಸಿದೆ. ಜನ್ನ ಕವಿಯಂತೆ ೯ ನೇ ಶತಮಾನದ ವಡ್ಡಾರಾಧನೆಯಲ್ಲಿ ಶಿವಕೋಟ್ಯಾಚಾರ್ಯನು ಭವಾವಳಿಯನ್ನು ಕಥೆಯಲ್ಲಿ ತರುವಾಗ ಕಥೆ, ಉಪಕಥೆಗಳಲ್ಲಿ ಬೇಟೆ, ತಳವಾರನ ಪಾತ್ರ ತಂದಿದ್ದಾನೆ. ಹೀಗೆ ಜೈನರಲ್ಲಿ ಪ್ರಚಲಿತವಿದ್ದ ರೂಢಿ- ಸಂಪ್ರದಾಯಗಳನ್ನು ಭವಾವಳಿಯ ಮೂಲಕ ಕಾವ್ಯಗಳಲ್ಲಿ ವ್ಯಾಪಕವಾಗಿ ಇತರರು ಪ್ರಯೋಗಿಸಿದ್ದಾರೆ.

೮.೨. ಅನಂತನಾಥಪುರಾಣ :ಇಲ್ಲಿ ಬರುವ ಬಲದೇವ, ವಾಸುದೇವರ ಪೂರ್ವಜನ್ಮ, ಸುನಂದೆಯೆಂಬ ತ್ರಿಲೋಕ ಸುಂದರಿಯ ಕಥೆ ಸೊಗಸಾಗಿದೆ. ಸುನಂದೆ ದೀಪವಾಗಿ, ಮನ್ಮಥನೇ ಬೇಟೆಗಾರನಾಗುವ ಚಂಡಶಾಸನ ಪಡುತ್ತಿರುವ ವಿರಹಾವಸ್ಥೆ ಚಿತ್ರ ಇಲ್ಲಿದೆ. ಇದರಲ್ಲಿ ಅಹಿಂಸೆ ಪ್ರತಿಪಾದನೆ ಕವಿಯ ಉದ್ದೇಶವಾಗಿದೆ. ಸುನಂದೆಯನ್ನು ಅಂತಃಪುರದಲ್ಲಿ ಅನೇಕ ಬಾರಿ ರಮಣೀಯ ಭಂಗಿಗಳಲ್ಲಿ ನೋಡಿದ ಚಂಡಶಾಸನನಿಗೆ, ಪ್ರೇಮ-ಕಾಮಗಳೆರಡೂ ಉಕ್ಕುವವು. ಅನೇಕ ಬಾರಿ ಇಂಥ ಸಂದರ್ಭಗಳೊದಗಿ ಚಂಡಶಾಸನನು ಅವಳನ್ನು ಪ್ರೀತಿಸಿದರೂ, ಅವಳು ಪತಿವ್ರತಾ ಶಿರೋಮಣಿಯಾಗಿ ಅವನಿಗೆ ಸೋಲಲಿಲ್ಲ. ಸುಷೇಣ, ಚಂಡಶಾಸನನು ಒಂದು ದಿನ ಬೇಟೆಗೆಂದು ಅರಣ್ಯಕ್ಕೆ ಹೋಗುವರು. ಬಳಲಿದಾಗ ಒಂದೆಡೆ ನಿಂತ ಚಂಡಶಾಸನರು, ವನಭೋಜನದ ಸಾಮಗ್ರಿಗಳೊಂದಿಗಿನ ಸುನಂದೆಯನ್ನು ಕಾಣುವನು. ಅವಳ ಆಕರ್ಷಕ ಭಂಗಿಗೆ ಉನ್ಮತ್ತನಾಗಿ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಸುಷೇಣನಿಗೆ ಗೊತ್ತಾಗದಂತೆ ಹೊರಟುಹೋಗುವನು.

ಸುನಂದೆಯ ಸ್ಥಿತಿ ರಾವಣನಿಗೆ ಸಿಕ್ಕ ಸೀತೆಯಂತಾಯಿತು. ಚಂಡಶಾಸನನು ಅವಳನ್ನೊಲಿಸಿಕೊಳ್ಳಲು ಏನೆಲ್ಲಾ ಪ್ರಯತ್ನಪಟ್ಟರೂ ವಿಫಲನಾದ. ಸುಷೇಣನು ಯುದ್ಧದಲ್ಲಿ ಮಡಿದನೆಂಬ ಸುಳ್ಳು ಸುದ್ದಿಯನ್ನು ಹಬ್ಬಿಸಿ, ಅವನ

ಉಡುಗೆ-ತೊಡುಗೆ ಇತರ ವಸ್ತುಗಳನ್ನು ಸುನಂದೆಗೆ ತೋರಿಸುವನು. ಅವಳು ಈ ಸುದ್ದಿ ಕೇಳಿ ಪ್ರಾಣ ತ್ಯಾಗ ಮಾಡುವಳು. ಕುಟಿಲತೆಯೊಂದಿಗೆ ಚಂಡಶಾಸನನಿಗೆ ಪ್ರಾಣ ಸಂಕಟವಾಯಿತು. ಮೋಹಕ, ತ್ರಿಲೋಕ ಸುಂದರಿ ಸುನಂದೆಯ ತ್ಯಾಗ, ಇನ್ನೊಂದೆಡೆ ಗೆಳೆಯನಿಗೆ ದ್ರೋಹವೆಸಗಿದ್ದು ದಾರಿ ತೋಚದಂತಾಯಿತು. ಸುನಂದೆಯೊಂದಿಗೆ ಚಂಡಶಾಸನನು ಪ್ರಾಣತ್ಯಾಗ ಮಾಡುವುದು ಗಮನಾರ್ಹ. ಅಹಿಂಸಾ ಪ್ರತಿಪಾದನೆಯಲ್ಲಿ ಈ ಕಥೆ ನೀತಿಯನ್ನೊಳಗೊಂಡಿದೆ.

೯. ಕೇಶಿರಾಜನ ಶಬ್ದಮಣಿದರ್ಪಣ : ಕೇಶಿರಾಜನು 'ಶಬ್ದಮಣಿದರ್ಪಣ'ದಲ್ಲಿ ಮೃಗಯಾವಿಹಾರದ ಒಂದು ಪದ್ಯವನ್ನು ಉಲ್ಲೇಖಿಸಿದ್ದಾನೆ. ಈ ಪದ್ಯದ ಕೃತಿ, ಕರ್ತೃವನ್ನು ತಿಳಿಸಿಲ್ಲವಾದರೂ, ವ್ಯಾಕರಣಕ್ಕೆ ಹೊಂದಿಕೊಳ್ಳುವ ಉದ್ದೇಶಕ್ಕೆ ಬಳಸಿಕೊಂಡಿರಬೇಕು. ಎರಡನೇ ನಾಗವರ್ಮನ (೧೦೪೫) ಕಾವ್ಯಾವಲೋಕನದಲ್ಲಿ ಈ ಪದ್ಯ ಮೊದಲು ಕಾಣಿಸಿಕೊಳ್ಳುತ್ತದೆ. ಇವರಿಬ್ಬರಂತೆ (ನಾಗವರ್ಮ, ಕೇಶಿರಾಜ) ಭಟ್ಟಾಕಳಂಕನು ಶಬ್ದಾನುಶಾಸನದಲ್ಲಿ ಇದನ್ನು ಉಲ್ಲೇಖಿಸಿದ್ದಾನೆ :

ಎನಿತ್ತೆನಿತ್ತೆಂಬುಜಪತ್ರ ನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ
ಅನಿತ್ತನಿತ್ತಂ ವನದೊಳ್ ವನೇಚರಂ
ತನತ್ತು ಬಿಲ್ಲಾನ ದನಂತೆ ಕೀಸುವಂ.

ಬೇಟೆಯನ್ನೇ ಉಸಿರೆಂದು, ಕಾಡನ್ನೆ ಸಂಪತ್ತೆಂದು ಬಗೆದಿರುವ ಬೇಡ - ಬೇಡತಿಯರ ಲೈಂಗಿಕ ಸಂದರ್ಭವು ಕುತೂಹಲವಾಗಿದೆ. ಚೆಲುವೆಯಾದ ಪ್ರಿಯತಮೆಯ ಯೌವನವು ವರ್ಧಿಸಿದಂತೆಲ್ಲ ಬೇಡನು ಅತ್ಯಾಸಕ್ತನಾಗಿ ದುರ್ಬಲನಾಗುತ್ತಾನೆ. ಆರಂಭದಲ್ಲಿ ಲೀಲಾಜಾಲವಾಗಿ ಬಾಗಿಸಿ ಪ್ರಯೋಗಿಸುತ್ತಿದ್ದ ಬಿಲ್ಲನ್ನು ಕ್ರಮೇಣ ಎತ್ತುವುದಕ್ಕೂ ಬೇಡನಿಗೆ ಕಷ್ಟವಾಗುತ್ತದೆ. ಬೇಡನು ಬಿಲ್ಲನ್ನು ಪ್ರಯೋಗಿಸಬೇಕಾದದು ಅನಿವಾರ್ಯ. ಬೇಡತಿಯರ ಎದೆ ತುಂಬಿ ಬಂದಂತೆ ಬೇಡ ಅಷ್ಟಷ್ಟೂ ತನ್ನ ಬಿಲ್ಲನ್ನು ಹೆರೆಹೆರೆದು ತೆಳುಗೊಳಿಸುತ್ತಿದ್ದ.

೧೦. ಚೌಂಡರಸನ ನಳಚಂಪು : ರಾಜನಾದವನು ತನ್ನ ಪ್ರಜೆಗಳ ಕೋರಿಕೆಯಂತೆ ಬೇಟೆಯಾಡುವುದೇ ಪ್ರಜಾರಕ್ಷಣೆ ಬೇಟೆ. ಚೌಂಡರಸ ವಿರಚಿತ ನಳಚಂಪುನಲ್ಲಿ ಬೇಟೆಯ ಪ್ರಸ್ತಾಪ ಕಂಡುಬರುತ್ತದೆ. ಸಂಸ್ಕೃತದಲ್ಲಿ ಶ್ರೀ ಹರ್ಷನ 'ನೈಷಧೀಯ ಚರಿತ್ರೆ'ಯು ಪಂಚಮಹಾಕಾವ್ಯಗಳಲ್ಲೊಂದು. . ಇಲ್ಲಿ ಮಹಾಭಾರತದ ನಲೋಪಾಖ್ಯಾನದಲ್ಲಿ ನಳ ದಮಯಂತಿಯರ ಪವಿತ್ರ ಪ್ರೇಮದ ಸಾತ್ವಿಕ ರೂಪದ ಚಿತ್ರಣವಿದೆ. ನಳಚಂಪು ಮಹಾಭಾರತದ ನಲೋಪಾಖ್ಯಾನದೊಂದಿಗೆ ಹೋಲಿಸಿದಾಗ ಪ್ರಭಾವ ಬೀರಿದ್ದು ಸ್ಪಷ್ಟವಾಗುತ್ತದೆ. ಭಾರತದಲ್ಲಿ ನಳನು ಉಪವನದಲ್ಲಿ ಸಂಚರಿಸುತ್ತಿರುವಾಗ ಹಂಸವನ್ನು ಸಂಧಿಸುವನು. ನಳಚಂಪುವಿನಲ್ಲಿ ಆತನು ಪ್ರಜಾ ರಕ್ಷಣೆಯ ಸಲುವಾಗಿ ದುಷ್ಟ ಪ್ರಾಣಿಗಳನ್ನು ಸಂಹರಿಸಲು ಬೇಟೆಗೆ ಹೋಗಿದ್ದಾಗ ದಣಿದು ಸರೋವರದ ಸಮೀಪಕ್ಕೆ ಬರಲು ಆಗ ಹಂಸವನ್ನು ಕಂಡು ಅದರೊಂದಿಗೆ ಏಕಾಂತದಲ್ಲಿ ಸಂಭಾಷಿಸುವನು.

ಅರಣ್ಯದಲ್ಲಿ ನಿರಾಶ್ರಿತಳಾದ ದಮಯಂತಿ ಅಜಗರನ (ಹೆಬ್ಬಾವು) ದವಡೆಯಿಂದ ಪಾರಾಗಿ ವನಚರನೊಬ್ಬನ ಕೈಗೆ ಸಿಕ್ಕಿಬಿದ್ದು, ಆ ಕಾಮುಕನ ದೆಸೆಯಿಂದ ಇನ್ನೂ ಹೆಚ್ಚಾಗಿ ಭೀತಿಗ್ರಸ್ತಳಾಗುವಳು. ಪ್ರಾಣಭಯಕ್ಕೆ ಹೆಬ್ಬಾವಿನಿಂದ ತಪ್ಪಿಸಿಕೊಂಡರೆ ಬೇಡನಿಂದಲೂ ಅಪಾಯವಿದ್ದ ಬಗೆ ಆ ಕಾಲದ ಚಿತ್ರಣವು ಅತಿಶಯವಲ್ಲದಂತಿದೆ. ಕೊನೆಗೆ ಋಷಿಗಳ

ನೆರವಿನೊಂದಿಗೆ ಆ ಕಷ್ಟದಿಂದ ಬಿಡುಗಡೆ ಪಡೆಯುವಳು. ನಳನ ಕಥೆಗೆ ಪ್ರಾಧಾನ್ಯ ದೊರೆತಿರುವ ನಳಚಂಪು'ವಿನಲ್ಲಿ ವನಚರನನ್ನು ಹೊರತು ಉಳಿದ ಕಥಾಪ್ರಸಂಗಗಳು ಲೋಪವಾಗಿವೆ :

ಏತೆರದಿಂ ಮೃಗಾಕ್ಷಿ ದಮಯಂತಿಯ ಸಂಗಮದಪ್ಪುದೆಂದು ನಿ
ಶ್ಚೇತನನಾಗಿ ರಾಜ್ಯ ಸುಖಮಂ ಬಗೆಗೊಳ್ಳದೆ ತನ್ನ ಬಾಳ್ಕೆಯಿ
ನ್ನೇತರದೆಂಬ ಮೆಯ್ಮರುಕದಿಂ ನವಚಿತ್ರಪಟಂಬೊಲಿರ್ಪನಾ
ಭೂತಳವಲ್ಲಭಂ ವಿರಹವಿಸ್ಮೃತಿ ಕೇವಳಮೇ ಧರಿತ್ರಿಯೊಳ್ (೬೩-೧೨).

ಆತ್ಮ ಸಂತಾಪವೆಂತಿದ್ದರೂ ಕರ್ತವ್ಯ ನಿರತನಾದ ರಾಜನು ಓಲಗ ಶಾಲೆಗೆ ಬರಲು, ಕಾಡುಮೃಗಗಳ ಹಾವಳಿಯನ್ನು ತಪ್ಪಿಸಬೇಕೆಂದು ದೈನ್ಯರಾಗಿ ಬಂದುನಿಂತಿದ್ದ ಬೇಟೆಯ ನಾಯಕರನ್ನು ಕಂಡನು. ಅವರ ಕೋರಿಕೆಗೆ ಕಿವಿಗೊಟ್ಟು ಸಕಲ ಸನ್ನದ್ಧನಾಗಿ ಅವರೊಂದಿಗೇ ಬೇಟೆಗೆ ಹೊರಟ.

ಆ ಬೇಟೆಯ ಮಧ್ಯದಲ್ಲಿಯೂ ಮನ್ಮಥನು ನಳನ ಹೃದಯದಲ್ಲಿ ನೆಲಸಿ ಆತನನ್ನೇ ಬೇಟೆಯಾಡಿ ಕಾಡುವುದನ್ನು ಬಿಡಲಿಲ್ಲ. ಆ ಅರಣ್ಯ ಮಧ್ಯದಲ್ಲಿ ಕಾಮತಪ್ತವಾಗಿದ್ದ ಗಂಡು ಜಿಂಕೆಯೊಂದು ತನ್ನ ಸಖಿಯನ್ನು ಕಂಡು ಬೆನ್ನಟ್ಟಿ ಹೋಗಲು ಅದರ ಇಂಗಿತವನ್ನರಿತ ರಾಜನ ಹೃದಯದಲ್ಲಿ ಅದುಮಿಟ್ಟಿದ್ದ ತಾಪ ಭುಗ್ಗನೆದ್ದಿತು. ಮಹಾರಾಜನು ಅದನ್ನು ಪ್ರಯತ್ನಪೂರ್ವಕವಾಗಿ ತಡೆಹಿಡಿದನು. ಈ ಚಿತ್ರ ಸ್ಥಿತಿಯನ್ನು ಕವಿ ಹೀಗೆ ಚಿತ್ರಿಸಿದ್ದಾನೆ:

ಅದನೀಕ್ಷಿಸಿ ನಳನರಪತಿ
ಯಿದು ಮತ್ಸಖಿಯೆಂದೊಡಾಕ್ಷಣಂ ಕಡುಪಿಂದಂ
ಹೃದಯದ ತಾಪಂ ಪೆರ್ಚಲ್
ಪದುಳಿಸಿಕೊಂಡಂ ಮಗುಳ್ದು ಧೀರೋದಾತ್ತಂ (೬೩-೧೩)

ಬೇಟೆಯ ಆರ್ಭಟವೆಲ್ಲ ಮುಗಿದು ಬಳಸಿದ ಬೇಡಪಡೆ ಬಾಯಾರಿಕೆಯಿಂದ ಕಂಗೆಟ್ಟಿರಲು, ಎದುರಿನಲ್ಲಿ ಒಂದು ಹೂಗೊಳವು ಕಂಡುಬಂದಿತು. ಇತರರ ಪಾಲಿಗೆ ಅದು ನೀರಡಿಕೆಯನ್ನು ನಿವಾರಿಸಿಕೊಳ್ಳುವ ನೀರ ಜಾಕರವೆನ್ನಿಸಿದರೆ, ನಳನಿಗೆ ಆತನ ಹೃದಯ ಸಂತಾಪವನ್ನು ಹೋಗಲಾಡಿಸುವ ಹಿತಸಾಧನವೆನ್ನಿಸಿತು. ಮಹಾರಾಜನು ಆ ಸರೋವರದಲ್ಲಿ ಇಳಿದು, ತನ್ನ ಬಳಲಿಕೆಯನ್ನು ಪರಿಹರಿಸಿಕೊಂಡು ಹಾಗೆಯೇ ದೃಷ್ಟಿಹಾಯಿಸುತ್ತಿರಲು, ಆಗ ಆತನ ಕಣ್ಣಿಗೆ ಅತ್ಯಂತ ಅಪೂರ್ವವಾದ ಹಂಸವೊಂದು ಗೋಚರವಾಯಿತು. ನೋಡಿದ ರಾಜನು ಬೆರಗಾಗಿ ಹಂಸವನ್ನು ಹಿಡಿದನು. ರಾಜನಿಗೂ ಹಂಸಕ್ಕೂ ಮಾತುಕತೆಯಾಯಿತು. ಸವಾಲುಹಾಕಿ ಉಪದೇಶವಾಣಿಯನ್ನು ಅದರಿಂದ ನಳಮಹಾರಾಜನು ಕೇಳಿದನು. ಮಹಾರಾಜನ ಔದಾರ್ಯಕ್ಕೆ ಹಂಸವು ತಲೆದೂಗಿ, ಪ್ರತಿ ಉಪಕಾರ ಮಾಡಲು ಕುಂಡಿನಪುರದಲ್ಲಿ ದಮಯಂತಿ ಆತನನ್ನು ವರಿಸುವಂತೆ ಮಾಡುವೆನೆಂದು ಭರವಸೆ ನೀಡಿತು. ಅದರ ಸಂಸ್ಕಾರಕ್ಕೆ ಮನಸೋತ ರಾಜ ತನ್ನಲ್ಲಿಯೇ 'ಎತ್ತಣ ಬೇಂಟೆಯೆತ್ತಣ ಸರೋವರವೆತ್ತಣ ಹಂಸನಾಡೆತ (ಮ?)ಚಿತ್ತದ ತಾಪಮಂ ತಿಳಿವುದೆತ್ತಣದು' ಎಂದು ಭಾವಿಸುತ್ತ ವಿದರ್ಭಾಭಿಮುಖನಾದನು.

ನಳ ದಂಪತಿಗಳು ಕಾಡಿನಲ್ಲಿ ಪಟ್ಟಶ್ರಮ ಪಾಡು ಹೇಳತೀರದು. ಇಬ್ಬರು ಮಲಗಿ ನಿದ್ರಿಸುತ್ತಿದ್ದಾಗ ನಳನಿಗೆ ನಟ್ಟಿರುಳಿನಲ್ಲಿ ಎಚ್ಚರವಾಗಿ ಸದ್ದುಮಾಡದೆ, ನಲ್ಲೆಯನ್ನು ತೊರೆದು ಏಕಾಂಗಿಯಾಗಿ ಹೊರಟನು. ಎಚ್ಚೆತ್ತ ದಮಯಂತಿಗೆ ನಲ್ಲನಿಲ್ಲದಿರುವುದು ಕಂಡು ಕಣ್ಣಿಗೆ ಕತ್ತಲೆಯಾಯಿತು. ಬಿಕ್ಕಿ ಬಿಕ್ಕಿ ಅತ್ತಳು. ಗಂಡ ಅಡವಿಪಾಲು ಮಾಡಿ ಹೋದನಲ್ಲ

ಎಂದು ಗೋಳಾಡಿದಳು. ತನ್ನ ದುಸ್ಥಿತಿಗೆ ನಾನೇ ಕಾರಣ ಎಂದುಕೊಂಡಳು. ಪರಿಸ್ಥಿತಿ ಹೀಗಿರುವಾಗ ಬೇಡನೊಬ್ಬನು ಆಕೆಯ ಕಡೆಗೆ ತನ್ನ ಕಾಮುಕ ದೃಷ್ಟಿಯನ್ನು ಬೀರಲು, ಆಕೆಗೆ ದೇವತೆಗಳಿತ್ತ ವರಪ್ರಸಾದ ಬೇಡಲು ಅವನು ಸುಟ್ಟು ಬೂದಿಯಾಗುತ್ತಾನೆ.

ನಳಮಹಾರಾಜನು ಆಸ್ಥಾನದಲ್ಲಿರುವಾಗ ಮಂಟಪಕ್ಕೆ ಬೇಟೆಯ ನಾಯಕರು ವಿಕ್ರಮದಿಂದ ನಿಂತು ಮೃಗ ಸಮೂಹದ ದುಷ್ಟಬಾಧೆಯನ್ನು ಮಹಾರಾಜನಲ್ಲಿ ಪ್ರೀತಿಯಿಂದ ವಿಜ್ಞಾಪಿಸಿದರು :

ಮರೆ ಹುಲಿ ಪಂದಿ ಪೆರ್ಗರಡಿ ತೋಳನಸಂಕೆಯ ಪುಲ್ಲೆವಿಂಡು ಬೆ
ಳ್ಗೆರಳೆ ಕರುತ್ತ ಕೊಂಡಗುರೆಯೆಯ್ಕ ಮೃಗಂ ಕಡುಕೋರ್ಬಕಾನನಾಂ
ತರದ ಕುಟೀರವಂ ಬೆಳೆದ ಕೆಯ್ಗಳನಂತಿರಲೀಯವಂತವಂ
ನಿರಸನ ಗೈದಿಸಲ್ ನೆರೆವ ಬೇಂಟೆಗೆ ಕಾಲಮಿದುರ್ವರೇಶ್ವರಾ (ಅದೇ :೬೫-೪೪)

ಜಿಂಕೆ, ಹುಲಿ,ಹಂದಿ, ದೊಡ್ಡಕರಡಿ, ತೋಳನಭೀತಿಗೊಳಗಾದ ಹುಲ್ಲೆಗಳ ಹಿಂಡು, ಬಿಳಿ ಜಿಂಕೆ, ವೀರಾವೇಶದಿಂದ ಗುರಿಯಿಟ್ಟು ನುಗ್ಗುವ ಮುಳ್ಳುಹಂದಿಗಳು ವಿಶೇಷವಾಗಿ ಕೊಬ್ಬಿ ಕಾಡಿನಲ್ಲಿರುವ ಗುಡಿಸಲುಗಳನ್ನು, ಬೆಳೆ ಬೆಳೆದಿರುವ ಗದ್ದೆಗಳನ್ನು ಉಳಿಯಗೊಡುತ್ತಿಲ್ಲ. ಅವುಗಳನ್ನು ಸಂಹರಿಸಲು ಬೇಟೆಗೆ ಒಡಗೂಡುವ ಕಾಲವಿದು. ಮಹಾರಾಜನೇ ಬೇಟೆಗೆ ಸಿದ್ಧನಾಗು ಎನ್ನುವರು.

ಮಹಾರಾಜನು ಮೃಗಗಳ ಬೇಟೆಯ ಆನಂದದ ಸುಖವನ್ನು ನೋಡಲು ಬಯಸುತ್ತಾನೆ. ಸಾಳುವ ವೇಗವನ್ನು, ತೊಗರನನ್ನು, ಹೆಗ್ಗಾಳನನ್ನು, ಜೂಗನನ್ನು ತರುವಂತೆ ತಿಳಿಸಿ. ನಾಯಿಗಳಾದ ಸೀಗುರಿಗನನ್ನು ಗದುಗನನ್ನು ಹಾಗೂ ಇತರ ದೊಡ್ಡ ದೊಡ್ಡ ನಾಯಿಗಳನ್ನು ಬೇಗ ಬೇಗನೇ ಬರುವಂತೆ ಹೇಳಿರಿ ಎನ್ನಲು ಮಡಿಸಿದ ಕಿವಿಗಳು, ಸಣ್ಣ ಸಣ್ಣ ಕೂದಲುಗಳು, ಸಣ್ಣ ನಡುಗಳು, ಮೊನಚಾದ ಬಾಲಗಳು, ಉಗ್ರವಾದ ಕೋಪ, ಸಿಡಿಲಶಬ್ದ, ಕಪ್ಪಾದ ಮುಖಗಳುಳ್ಳ ಒಡಲು ಆನೆಯಾಗಿರುವ ನಾಯಿಗಳನ್ನು ನೃಪಾಲನು ನೋಡಿದನು.[*] ಇದು ಪ್ರಜಾರಕ್ಷಣೆಯ ಬೇಟೆ ಸಂದರ್ಭ. ರಾಜನಾದವನು ಬಾಧೆಯನ್ನು ತಪ್ಪಿಸುವ ಹೊಣೆ ಹೊತ್ತಿದರು ರಾಜನೊಂದಿಗೆ ಬೇಟೆಗಾರರು ಆ ಕೆಲಸ ಮಾಡುತ್ತಿದ್ದರು.

ಅಸಾಧಾರಣವಾದ ನಾಯಿಗಳನ್ನು ಹಿಡಿದುಕೊಂಡು ಬೇಟೆಗಾರರು ಮಹಾರಾಜನನ್ನು ಕರೆದರು. ದೊಡ್ಡದಾದ ಈಟಿ, ಹೊರೆಹೊತ್ತ ದೊಡ್ಡಬಲೆ, ಬಟ್ಟೆಯತೆರೆ, ಕೊಂಬು, ಹಗ್ಗ, ಸೆಳೆತದ ಹುಲಿಗಳು, ಬೇಟೆಯಾಡುವ ಮೃಗವನ್ನು ಆಕರ್ಷಿಸುವ ಪ್ರಾಣಿ, ಕವಲೊಡೆದ ಬಾಣಗಳೊಡನೆ ಬೇಟೆಗಾರರ ಸಮೂಹವು ಸಂಭ್ರಮದಿಂದ ಸೇರಿದ್ದಿತು. ಬೇಟೆಗಾರನನ್ನು ನೋಡಿ ಬೇಟೆಯ ನೆಪದಲ್ಲಿ ವಿರಹದ ವ್ಯಾಕುಲವನ್ನು ಅಷ್ಟರಮಟ್ಟಿಗೆ ನಿವಾರಿಸಿಕೊಂಡು ಮಹಾರಾಜನು ಅಡವಿಯವರೊಂದಿಗೆ ನಡೆದು ದೊಡ್ಡ ಅರಣ್ಯವನ್ನು ಪ್ರವೇಶಿಸಿ ಬೇಟೆಗೆ ಸಿದ್ಧವಾಗಿದ್ದನ್ನು, ನಾನಾ ತರಹದ ಪ್ರಾಣಿ, ಮರಗಿಡಗಳನ್ನು ಕವಿ ವರ್ಣಿಸಿದ್ದಾನೆ (೭೦-೭೧).

ನಳಮಹಾರಾಜ ಮತ್ತು ಬೇಟೆಗಾರರು ಗುಂಪಾಗಿರುವ ಹುಲ್ಲೆ, ಮುಳ್ಳು ಹಂದಿ, ಪೊದೆಯಲ್ಲಿ ಅಡಗಿರುವ ಹುಲಿ, ದೊಡ್ಡ ಕರಡಿ ಮುಂತಾದವುಗಳನ್ನು ಕೊಲ್ಲಲು ಮುಂದಾದರು. ಬೇಟೆಗಾರರ ತಂಡವು ಮಹಾರಾಜನ ಅಪ್ಪಣೆಯಂತೆ ತೋಳ್ಬಲದಿಂದ ಕೆಳಕ್ಕುರುಳಿಸಿದ ಭೀತಿಗೊಂಡ ಪ್ರಾಣಿಗಳ ಮಾಂಸ ಕಂಡಗಳನ್ನು ಹೊರೆಕಟ್ಟಿ ಹೊತ್ತುಕೊಂಡು ನೀರಕಡೆಯಿಂದ ಬರುತ್ತಿರಲು, ತಾವರೆ, ನೈದಿಲೆ, ಚಕ್ರವಾಕ, ಹಂಸಗಳು ಸಾಲುಗಟ್ಟಿರಲು ಆಶ್ಚರ್ಯಕರವಾದ ಒಂದು ಹೂಗೊಳವು ಮುಂದೆ ಕಂಡುಬಂದಿತು.

ಚೌಂಡರಸನು ನಳಚಂಪುವಿನಲ್ಲಿ ವರ್ಣಿಸಲ್ಪಟ್ಟ ರಾಜನ ವಿಚಾರ, ದಮಯಂತಿ, ಸೌಂದರ್ಯ, ಪ್ರೇಮ, ವಿವಾಹ, ನಿಸರ್ಗದ ಮೂಲಕ ಬೇಟೆಯನ್ನು ವರ್ಣಿಸುವುದು ಅತ್ಯಂತ ಉತ್ಕೃಷ್ಟ ಮನಸ್ಸನ್ನು ಪ್ರತಿನಿಧಿಸುತ್ತದೆ. ನಂತರ ನವದಾವಾಗ್ನಿಯೆಂಬ ಮಹಾರಾಜನು ದೊಡ್ಡ ಬಲೆಯನ್ನು ಬೀಸಿ ಪ್ರಾಣಿಗಳನ್ನು ಎಬ್ಬಿಸಿ ಬೇಟೆ ಆಡುತ್ತಾನೆ. ಅವನು ಕೋಪದಿಂದ ಹೆಜ್ಜೆ ಇಟ್ಟನು. ಹೀಗೆ ಬೇಟೆಯ ಸಂದರ್ಭಗಳಿಂದ ನಾನಾ ತರದ ಘಟನೆಗಳು ಸಂಭವಿಸುತ್ತವೆ. ಆದರೂ ಮೂಲ ಉದ್ದೇಶಕ್ಕೆ ಎಲ್ಲೂ ಧಕ್ಕೆಯಾಗದಂತೆ ಕವಿ ಕಾವ್ಯ ಹೆಣೆದಿದ್ದಾನೆ. ಪ್ರಜಾರಕ್ಷಣೆಯ ಬೇಟೆ ನೆಪಕ್ಕಷ್ಟೇ, ರಾಜನು ಪ್ರತಿನಿಧಿಸುವುದರೊಂದಿಗೆ ಬೇಟೆಗಾರರಿಗೆ ಹುರುಪು ತುಂಬುತ್ತಿದ್ದಾರೆ. ನಿಷಧ ದೇಶದ ಒಡೆಯ ನಳನ ಬಗ್ಗೆ ಅನೇಕ ಕಾವ್ಯಗಳು ಹುಟ್ಟಿಕೊಂಡಿವೆ. ಕನಕದಾಸರ ನಳಚರಿತ್ರೆಯು ಇದೇ ಕಥಾವಸ್ತುವನ್ನು ಹೊಂದಿದೆ.

೧೦.೨. **ಚೌಂಡರಸನ ಅಭಿನವ ದಶಕುಮಾರಚರಿತೆ** :ದಂಡಿಯ ಪ್ರಭಾವವನ್ನು ಅಭಿನವ ದಶಕುಮಾರಚರಿತೆಯಲ್ಲಿ ನೋಡಬಹುದು. ಇಲ್ಲಿ ಪ್ರಜಾರಕ್ಷಣೆಯ ಬೇಟೆ ಸಂದರ್ಭವಿದೆ. ಪುಳಿಂದ ನಾಯಕ ಕಾಡು ಪ್ರಾಣಿಗಳ ಹಾವಳಿಯನ್ನು ತಡೆಯಲು ರಾಜನಲ್ಲಿ ಮೊರೆಹೋಗುತ್ತಾನೆ. ನಂತರ ಕಾಡುಪ್ರಾಣಿಗಳ ದಂಡು ಮಿತಿಮೀರಿದ್ದು, ಋಷಿಗಳ ಆಶ್ರಮವನ್ನು ಬಾಧಿಸುವವು. ಬೇಟೆಯಾಡಲು ಇದು ಉತ್ತಮ ಕಾಲ ಎಂದು ಬೇಟೆಗಾರ ಹೇಳುತ್ತಿದ್ದ. ಇದು ಅನಿವಾರ್ಯತೆಯ ಸಂಕೇತವಾಗಿದೆ. ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಇಂತಹ ಸಂದರ್ಭ ಬರುತ್ತದೆ. ಬೇಟೆಗಾರರೊಂದಿಗಿನ ಬೇಟೆನಾಯಿಗಳನ್ನು ಕುರಿತು :

> ರಾಹುವಿನಂತೆ ಯಕ್ಷ ಪತಿವೈರಿ ನಿಶೀಧಿನಿಯಂತೆ ಪುಂಡರೀ
> ಕಾ ಹಿತಕಾರಿ ದುಷ್ಟ ಶಿಶುಪಾಲಕನಂತಿರೆ ಕೃಷ್ಣಘಾರತೇ
> ಜೋಹರ ಕಾರಣಂ ಕುರುಕುಲಾಧಿಪತನಂತೆ ವೃಕೋದಕಾರಿ ಕೇಳ್
> ಸಾಹಸಮಲ್ಲನೇನ್ನರ್ದವಂಕದ ಜಾಯಿಲು ಸುರ್ವ ರಾಧಿಕಾ.

ರಾಜ ಬೇಟೆಯಲ್ಲಿ, ಅತಿಭೀತಿಯಿಂದ ಕೂಡಿದ ಜಿಂಕೆಯೊಂದನ್ನು ಕಾಣುವನು. ಅದರ ಕುತ್ತಿಗೆ, ನೆಟ್ಟಗಾದ ಕಿವಿ, ನಡುಗುವ ಶರೀರ, ಕಡೆ ಬಾಯಿಯಲ್ಲಿ ಸಿಕ್ಕಿಕೊಂಡಿರುವ ಹುಲ್ಲಿ, ನೆಸಳು, ಚಂಚಲವಾದ ಕಣ್ಣು ಇತರ ಲಕ್ಷಣಗಳನ್ನು ಕವಿ ತಿಳಿಸಿದ್ದಾನೆ. ಬೇಟೆಯಾಡಿದ ನಂತರ ಬೇಡರಹಳ್ಳಿಯ ಚಿತ್ರಣ ಹೇಗಿರುತ್ತದೆಂಬುದು ಇಲ್ಲಿದೆ. ದೊಡ್ಡಗಾತ್ರದ ಬಲೆಗಳು, ಬಾಣ ಇತರ ಸಂಗತಿಗಳು ಪ್ರಾಣಬಲಿಯನ್ನು ಕೊಡುವ ಸಂದರ್ಭ ಗಮನಾರ್ಹ.

ಇಲ್ಲಿ ರಾಜನು ಬೇಟೆಗೆ ಹೋದಾಗ ಅಪಹಾರವರ್ಮನೆಂಬ ಶಿಶು ಸಿಗುವುದು. ಮತ್ತೊಂದು ದಿನ ವಾಮದೇವನ ಶಿಷ್ಯನು ಬೇಡರಬಳಿಯಿದ್ದ ಉಪಹಾರವರ್ಮನನ್ನು ರಕ್ಷಿಸಿಕೊಂಡು ಬಂದು ರಾಜ ಹಂಸನಿಗೆ ಕೊಡುವನು. ಅಪಾರವರ್ಮ ಹಾಗೂ ಉಪಹಾರವರ್ಮರಿಬ್ಬರೂ ಮಗಧರಾಜನ ಮಿತ್ರನಾದ ಪ್ರಹಾರ ವರ್ಮನ ಮಕ್ಕಳೆಂಬುದು ಸ್ಪಷ್ಟ.

೧೧. **ರಾಘವಾಂಕನ ಹರಿಶ್ಚಂದ್ರಕಾವ್ಯ** : ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿ ವಿಸ್ತಾರವಾದ ಮೃಗಯಾ ವರ್ಣನೆಯಿದೆ. ಕೃತಿಯ ಆರನೇ ಸ್ಥಲದಲ್ಲಿ ಮಾಯಾ ವರಾಹವನ್ನು ಹರಿಶ್ಚಂದ್ರ ಮಹಾರಾಜ ಬೇಟೆಯಾಡುತ್ತಾನೆ. ಇದು ಪ್ರಜಾ ರಕ್ಷಣೆ ಬೇಟೆಯ ಸ್ವರೂಪದ್ದು. ಇವನ ರಾಜ್ಯದಲ್ಲೆಲ್ಲ ಒಮ್ಮೆ ವ್ಯಾಪಕವಾಗಿ ದುಷ್ಟ ಮೃಗಗಳ ಉಪಟಳ ಆರಂಭವಾಗುತ್ತದೆ. ಪ್ರಜೆಗಳೆಲ್ಲ ಕೂಡಿ ಹರಿಶ್ಚಂದ್ರ ಮಹಾರಾಜನಲ್ಲಿಗೆ ಬಂದು, 'ಖಗಮೃಗಗಳ ಕಾಟವಿದೆ. ಧರೆಯೊಳಗೆ ಬೆಳಸಿಲ್ಲ, ಬಿತ್ತಿಲ್ಲ ನೀರಿಲ್ಲ..... ಎಂದು ಕಾಡುಮೃಗಗಳನ್ನು ಹೊರಗಟ್ಟಬೇಕೆಂದು ವಿನಂತಿಸಿಕೊಂಡಿದ್ದರು. ರಾಜ ಪ್ರಜೆಗಳ ರಕ್ಷಣೆಗಾಗಿ ಬೇಟೆಗೆ ಸಿದ್ಧನಾಗಿದ್ದು, ಬೇಟೆಯ ಗುಂಪಿನ ಪುಳಿಂದ ಲಕ್ಷಣಗಳನ್ನು ಕವಿ ಹೀಗೆ ವರ್ಣಿಸಿದ್ದಾನೆ:

ಕಾರೊಡಲು ಮೇಗಡರ್ದ ಮೆಯ್ನಿವಿರು ಕೆಂಗಲಿಪ
ತೋರುಗಣ್ಣು ಕೆಮ್ಮೀಸೆ ಗುಜುರುದಲೆ ಬಳೆದ ಕಾ
ಳೋರಗನನೇಳಿಸುವ ತೋಳ್ ನಾರಿ ಹೊಡೆದೊಡೆದ ಹಣ್ಣು ಮೇಲಣ ಕೈ ಪೊಡೆ
ಪೇರುರಂ ಕಿಳಿಯನಡು ಕೊಬ್ಬಿಡು ಪೆಗಲು ಪಿಡಿದ
ಕೂರಂಬು ದೀರ್ಘಧನುವೆರಸಿ ನೆರೆದುದು ಕಾನ
ದಾರಿಗಳೆನಿಪ್ಪ ಶಬರಾಧಿಪರು ಕರ್ಬೊಗೆಯ ಕಾಂತಿ ಸಭೆಯಂ ಮುಸುಕಲು (೫-೨).

ಈ ರೀತಿ ಬೇಟೆಗಾರರ ಗುಂಪು ರಾಜನಿಗೆ ಕಾಣಿಕೆ ನೀಡುತ್ತದೆ. ಅದರಲ್ಲಿ ಮೀನಿನಗೊಂಚಲು, ಸಾರಂಗ, ದಮರಿ, ಜಿಂಕೆಯತೊಡೆ, ಆನೆಯದಂತ, ಚಮರಿ, ಜೇನು, ನವಿಲುಗರಿ, ಸಿಂಹದ ಉಗುರು, ಹುಲಿಯ ಚರ್ಮ, ಹಂದಿಯ ಮರಿ ಮುಂತಾದವು ಸೇರಿವೆ.

ಬೇಡರ ದಂಡಿನೊಂದಿಗೆ ಬೇಟೆನಾಯಿಗಳು ಇದ್ದವು. ಅವುಗಳ ಹೆಸರುಗಳೆಂದರೆ : ಹರಿಣದಲ್ಲಣ, ಹುಲಿಬಾಕ, ಸೂಕರ ಮೃತ್ಯು, ಸಾರಂಗಮರ್ದನ, ಮಾರೆಮಾರಿ, ಸಿಂಹಪ್ರಕರ ಶರಭ, ಭಲ್ಲೂಕಮಲ್ಲ, ಕಾಡುಕೋಣ ಕಂಟಕ. ರಾಘವಾಂಕ ಕಂಡ ಬೇಟೆಯ ೨೪ ವಿಧದ ಬಲೆಗಳು ಇಂತಿವೆ :

ತಡಿವಲೆ ತಟ್ಟವಲೆ ಹಾಸುವಲೆ ಬೀಸುವಲೆ
ಕೊಡತಿವಲೆ ಕೋಲುವಲೆ ತಳ್ಳಿವಲೆ ಬಳ್ಳಿವಲೆ
ತೊಡಕುವಲೆ ಸಿಲುಕುವಲೆ ಹಾರುವಲೆ, ಜಾರುವಲೆ
ಬಡಿಗೆವಲೆ ಪಾಚುವಲೆ ಗಾಢವಲೆ ಗೂಢವಲೆ
ಮಡಿಕೆವಲೆ ಮಂದಸಿನವಲೆ ಹೋರೆಗಳ ಬೇಡವಡ.....

ಇವುಗಳನ್ನು ಬಳಸುವ ವಿಧಾನವನ್ನು ಹೇಳಿಲ್ಲ. ಶಿಕಾರಿಗೆ ಬಳಸುವ (೫-೮) ಇಷ್ಟೊಂದು ಬಲೆಗಳ ಉಲ್ಲೇಖ ಇತರ ಕಾವ್ಯಗಳಲ್ಲಿ ಕಂಡುಬರುವುದು ಕಡಿಮೆ. ಗಾಣ, ಕೂಳಿ ಬಿಲ್ಲು- ಬಾಣ, ಅತಿಯಾದ ಕೆಸರು, ಉರುಳು, ಬೀಸು ಕಣ್ಣು ಇತರ ಉಪಕರಣಗಳ ವಿವರವಿದೆ.

ಗಿಡುಗ, ಜಿಂಕೆ, ಹುಲಿ, ಸಿಂಹ, ತೋರೆತ್ತು, ಗಿಡುಗಗಳನ್ನು ಹಿಡಿಯುತ್ತಿದ್ದ ವಿವರವಿದೆ. ಬೇಟೆಯಲ್ಲಿ ಬೇಡರನ್ನು ಅತಿಶಯೋಕ್ತಿಯಾಗಿ ಚಿತ್ರಿಸಿರುವುದುಂಟು. ರಾಘವಾಂಕನ ಬೇಟೆ ಸಂದರ್ಭ ಯುದ್ಧರಂಗವನ್ನು ಸಂಕೇತಿಸುತ್ತದೆ. ಬೇಟೆಯಲ್ಲಿ ಕೈಕಾಲು ಕಳೆದುಕೊಂಡ ಬೇಡರ ಸ್ಥಿತಿ ಶೋಚನೀಯವಾಗಿತ್ತು. ಹುಲಿ, ಸಿಂಹ, ಹಂದಿಗಳಿಂದ ಅವರಿಗೆ ಗಾಯಗಳಾಗಿದ್ದವು. ಗಾಯಗೊಂಡ ಬೇಡರನ್ನು ಬೇಡತಿಯರು ಶುಶ್ರೂಷೆ ಮಾಡುತ್ತಿದ್ದರು. ಬೇಡ - ಬೇಡತಿಯರ ಚೆಲುವು, ಯೌವ್ವನ, ಶೃಂಗಾರಗಳ ಬಗ್ಗೆ :

ಓವಿ ಹೀಲಿಯನುಟ್ಟು ತಳಿರ ಮೇಲುದನುರಕೆ
ತೀವಿ ಗುಂಜಾಭರಣಮಂ ತೊಟ್ಟು ಕೇದಗೆಯ
ಹೂವಿನೆಸಳಳೊಲೆಯಂ ತಿರುಪಿ ಶಿಲೆಯೊರಳಿಕ್ಕಿ ದಂತದೊನಕೆ ಗಳನಾಂತು
ಸುವ್ವಿ ವಲ್ಲನೆ ಸುವ್ವಿ ಸುವ್ವಿ ಕಾನನ ವಿಜಯ

ಸುವ್ವಿ ಬಲು ಬಿಗುಗಯ್ಯ ಸುವ್ವಿ ಮೃಗಕುಲಮಥನ

ಸುವ್ವಿಯೆಂದಲ್ಲಿಯ ಪುಳಿಂದಿಯರು ಪಾಡಿ ಚಳಿಸಿದರು ಬಿದಿರಕ್ಕಿಗಳನು.

ಇತರ ಪದ್ಯಗಳ ಮೂಲಕ ದಟ್ಟವಾದ ಕಾಡಲ್ಲಿ ಹರಿಶ್ಚಂದ್ರನು ಬೇಡರ ಪಡೆಯ ಸಹಕಾರದೊಂದಿಗೆ ಬೇಟೆಯಾಡುತ್ತಾನೆ.

ಹಸಿದ ಕಿರಾತರು ಬೇಟೆಯಲ್ಲಿ ಉತ್ಸುಕರಾಗಿ ಪ್ರಾಣಿ - ಪಕ್ಷಿಗಳ ಧ್ವನಿ ಅನುಸರಿಸಿ ನುಗ್ಗುತ್ತಾರೆ. ಲಾವುಗೆ, ಹರಕೆ, ಗೌಜು, ಟಿಟ್ಟಿಭ, ಕೋಗಿಲೆ, ತುರುವೆ, ಗಣ್ಣು, ಹಂಸೆ, ರಾಗಧರ ಇತರ ಪಕ್ಷಿಗಳ ಸ್ವರ ಹಿಡಿದು ಬೇಟೆಯಾಡುತ್ತಾರೆ. ಇರುಗೂಳಿ, ಹೆಗ್ಗೂಳಿ, ಕಿರುಗೂಳಿ ಎಂಬ ಕೂಳೆಗಳ ಬೇಟೆಯ ಬಗ್ಗೆ ರಾಘವಾಂಕ ತಿಳಿಸಿದ್ದಾನೆ. ಮೀನಿನ ಬೇಟೆ ಬಗ್ಗೆ :

ಕೋರುವ ಸೀಗುಡಿ ಗೆಂಡೆಕಚ್ಚು ಹಣ್ಣಲುಬಸಿಗ

ಗೀಳಲು ಬಂಗಡೆ ಹಾವು ಜಳಬಾಳೆ ಕುಕಿಲು ಹೆ

ಗ್ಗರುಗಣೆಮಣಿಗಣ್ಣ ತೂತು ತೆಂಪಲು ಸಿಸಿಲು ಬೊಂಪು ಸವಿ ಬಾಯಗೊದಳೆ

ಗರು ಮೆರೆವ ಕಾಗೇಂಡೆಯಯ್ಯರೆಗ ದೊಂಡಿಕೆಂ

ಗರುಹರಳು ಹಾರುವಂ ಹಿರಿಯ ಷಡು ಸಕ್ಕರಿಗ

ಸಿರುಲು ಹಂದೆಗೆ ನಾನೆಮೊಗನೆಂಬ ಪರಿಪರಿಯ ಮೀನ್ಗಳಂಗು ದಿಗೆಯ್ದರು. ಎಂದು ತಿಳಿಸಿದ್ದಾನೆ.

ಗೋರಿವೇಂಟೆ, ಪಳಹರದಬೇಟೆ, ಪಟಬೇಟೆ, ವಿದ್ಯಾಧರರಬೇಟೆ, ಚಿತ್ರಬೇಟೆ, ಅಂಟುಜಲಬೇಟೆ, ತೋಹಿನ ಬೇಟೆ, ಘನಸೋಹು ಬೇಟೆ, ಇತರ ಬೇಟೆ ವಿಧಗಳು ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿವೆ.

ಹರಿಶ್ಚಂದ್ರನು ಕೌಶಿಕ ಮುನೀಶ್ವರ ಸೃಷ್ಟಿಸಿದ ಮಾಯಾ ವರಾಹದ ಬೇಟೆಯನ್ನಾಡುವುದು ಆರನೇ ಸ್ಥಲದಲ್ಲಿದೆ. ಆ ಮಾಯಾವರಾಹವು ಅರಸನ ಬೇಟೆಗಾರರ ಗುಂಪನ್ನು ಕೆಡಹಿದಡೆ ಕೋಪಾಗ್ನಿ ಮೂಡಿ ಬೆನ್ನಟ್ಟುವ ಹರಿಶ್ಚಂದ್ರ ನೃಪನ ಕೊಂಡೋಡಿ ಬಂದಡಗಿತ್ತು ಕೌಶಿಕನ ಬನದೊಳಗೆ ಮಾಯಾ ವರಾಹ' ಎಂದು ವಿವಿಧ ರೀತಿಯ ಅರವತ್ತು ಪದ್ಯಗಳಲ್ಲಿ ವರ್ಣಿತಗೊಂಡಿದೆ.

ಹರಿಶ್ಚಂದ್ರನು ವಿಶ್ವಾಮಿತ್ರನ ಆಶ್ರಮಕ್ಕೆ ಧಾವಿಸುತ್ತಾನೆ. ಅಲ್ಲಿ ಕೌಶಿಕನಿಂದ ಸೃಷ್ಟಿಯಾದ ಮಾಯವರಾಹ ಅತಿ ಬಲವನ್ನು ಹೊಂದಿತ್ತು. ಇದನ್ನು ಹರಿಶ್ಚಂದ್ರನಿಂದ ಮಾತ್ರ ಪಳಗಿಸಲು ಸಾಧ್ಯ ಎನ್ನುವಂತೆ ಕವಿ ವರ್ಣಿಸಿರುವುದು ಇಂತಿದೆ :

ಮಸೆದ ದಾಡೆಯ ಕುಡಿಗಳಿಂದ ಕಿಡಿ ಸುರಿಯೆ ಘೂ

ರ್ಮಿಸುವ ಮೂಗಿಂದ ಕರ್ಬೊಗೆ ನೆಗೆಯೆ ಮುನಿದು ನಿ

ಟ್ಟಿಸುವ ಕೆಂಗಣ ಕಡೆಯಿಂದ ದಳ್ಳುರಿ ಸೂಸೆ ಕೊರಳೊಲೆದ ಮುಸುಡು

ಕುಸಿದ ತಲೆನೆಗೆದ ಬೆನ್ ನಟ್ಟ ರೋಮಾಳಿಮಿ

ಳ್ಳಿಸುವ ಬಾಲಂ ಕಾವು ಕೋಪವಂ ಮೀರೆಗ

ರ್ಜಿಸಿ ಬೀದಿವರಿದು ತೊತ್ತಳದುಳಿದು ಕೊಂದು ಕೂಗಿಡಿಸಿತ್ತು ಲುಬ್ಧಕರನು (೬-೨೭)

ಕವಿಯ ವಾಸ್ತವಿಕ ಬೇಟೆಯ ಚಿತ್ರಣವು ಮನಸೂರೆಗೊಳ್ಳುವಂತಿದೆ. ಹರಿಶ್ಚಂದ್ರ ರಥದ ಮೂಲಕ ವಿವಿಧ ಆಯುಧಗಳನ್ನು ಬಳಸಿ ಮೃತ್ಯದೇವತೆಗೆ ಔತಣ ನೀಡುವಂತೆ ಹಂದಿ ಬೇಟೆಯಾಡುತ್ತಾನೆ. ರಾಘವಾಂಕ ಸಾಂಪ್ರದಾಯಿಕ ಲಕ್ಷಣಗಳ ಮೂಲಕ ವಾಸ್ತವಿಕತೆಯನ್ನು ಮೆರೆಸಿರುವುದು ಗಮನಾರ್ಹ.

ರಾಘವಾಂಕನು ಮೃಗಯಾವನ್ನಿಲ್ಲಿ ವ್ಯಸನವಾಗಿಸಿದ್ದಾನೆ. ಹರಿಶ್ಚಂದ್ರ ಮತ್ತು ವಿಶ್ವಾಮಿತ್ರರನ್ನು ವಿವಿಧ ರೂಪದಲ್ಲಿ ಚಿತ್ರಿಸಲಾಗಿದೆ. ಹರಿಶ್ಚಂದ್ರನಿಗೆ ವಿಶ್ವಮಿತ್ರನ ಕಾಟ ಆರಂಭದಿಂದಲೂ ಇತ್ತು. ತರುವಾಯ ಮಾಯಾಮೃಗಗಳು ದೇಶದ ಪ್ರಜೆಗಳನ್ನು ಹಿಂಸಿಸುತ್ತವೆ. ಇವುಗಳ ಬೇಟೆಗೆ ರಾಜ, ರಾಣಿ (ಚಂದ್ರಮತಿ) ಹಾಗೂ ಶಬರಜಾಲ ಅಡವಿಗೆ ಹೋಗುವುದು. ಬೇಡರು ಉದ್ವೇಗ, ಉತ್ಸಾಹದಿಂದ ಬೊಬ್ಬೆಹಾಕುತ್ತ, ಹುಲಿ, ಕರಡಿ, ಸಿಂಹ, ಮೊಲಗಳ, ಹೆಜ್ಜೆ ಗುರುತುಗಳನ್ನು ಹಿಡಿಯುತ್ತ, ಬೇಟೆಯ ತಂತ್ರಗಳನ್ನು ರೂಪಿಸುತ್ತ ಹೊರಡುವ ಚಿತ್ರವಿದೆ. ವಿಶ್ವಾಮಿತ್ರ ಸೃಷ್ಟಿಸಿದ ಮಾಯಾ ವರಾಹಕ್ಕೆ ಹರಿಶ್ಚಂದ್ರ ಪರಿವಾರ ಬೇಟೆಗೋಗುತ್ತದೆ. ಇಲ್ಲಿ ರಾಜನು ಪ್ರಜೆಗಳ ರಕ್ಷಣೆಗಾಗಿ ಬೇಟೆಯಾಡುತ್ತಿದ್ದನೆಂಬುದು ಗಮನಾರ್ಹ.

೧೨. **ದೇಪರಾಜನ ಸೊಬಗಿನಸೋನೆ** :'ದೇವ(ಪ)ರಾಜನ ಸೊಬಗಿನಸೋನೆ' ಪ್ರಥಮ ಸಾಂಗತ್ಯ ಕೃತಿ. ಇಲ್ಲಿ ಏಳು ಕಥೆಗಳಿವೆ : ಸುರಭಾವತಿ, ಕಂಜರೆ, ವಸಂತೆ, ಸುರಭಿ ಶೇಖರ, ನಾಗರಪಕ್ಷಿ, ಒರಗೆ ಮತ್ತು ಪತ್ರಿಣೆಯರ ಕಥೆಗಳು. ಇಲ್ಲಿ ಬೇಟೆಯ ಸಂದರ್ಭಗಳು ಕಂಜರೆ, ವಸಂತೆ, ಸುರಭಿಶೇಖರ ಕಥೆಗಳಲ್ಲಿವೆ.

ಇದರಲ್ಲಿ ಪ್ರಜಾರಕ್ಷಣೆಯ ಬೇಟೆ ಪ್ರಸಂಗವಿದೆ. ಸೌಂದರ್ಯ ಎಂಬುವನು ಕಾಶ್ಮೀರದ ರಾಜ. ಇವನು ರಾಜ್ಯವಾಳುತ್ತಿರುವಾಗ, ಒಮ್ಮೆ ಬೇಟೆಗಾರ ಬಂದು ಗಂಡು ಸಿಂಹವೊಂದು ಹೊಲಕ್ಕೆ ನುಗ್ಗಿ (ಬಾಧೆ) ತೊಂದರೆ ಕೊಡುವ ಬಗ್ಗೆ ಹೇಳುತ್ತಾನೆ. ರಾಜ ಬಿಲ್ಲು ಹಿಡಿದು ಬೇಟೆಗೆ ಸಿದ್ಧನಾಗಿ ಸಿಂಹದ ಶಿಕಾರಿಗೆ ತೊಡಗುವನು. ಇಲ್ಲಿ ಪರಿವಾರದವರು ಬಲೆ ಬೀಸಿ ಸಿಂಹವನ್ನು ಸುತ್ತುಗಟ್ಟುತ್ತಾರೆ. ಕೊಂಬುಕಹಳೆ ಮೊಳಗಿ, ಬೇಡರ ಕೂಗಾಟ, ಹಾರಾಟಗಳಿಂದ ಸಿಂಹವನ್ನು ರಾಜನತ್ತ ಸೋವುತ್ತಾರೆ. ಸಿಂಹದೊಡನೆ ಹೋರಾಡಿ ರಾಜ ಗೆಲ್ಲುತ್ತಾನೆ.

ಸಿಂಹವೊಂದು ಬೇಡರ ಪಡೆಗೆ ಸಿಕ್ಕಿಹಾಕಿಕೊಂಡು, ಜೀವಭಯದಿಂದ ಬೇಟೆಗಾರನಿಗೆ ತೊಂದರೆಯನ್ನುಂಟು ಮಾಡುವ ಸಂದರ್ಭ ಹೀಗಿದೆ :

> ಮತ್ತೆ ಕೇಳದು ಕೆಲಬರ ಕೂರುಗುರಿಂದ
> ಕತ್ತರಿಸಿತು ಕೆಲ ಕೆಲಬಲ
> ನೆತ್ತರ ನೀಂಟ ಕೆಲರಕವಿದಟ್ಟ
> ತೊತ್ತಳದುಳಿದುದು ಜಸಗಂಡ (೫-೫೧).

ಇತರ ಪದ್ಯಗಳಲ್ಲಿ ಕವಿ ಬೇಡರು, ಗಿಳಿ, ಗೀಜಗ, ಗೌಜು, ಸೋರೆ ಮೊದಲಾದ ಹಕ್ಕಿಗಳನ್ನು ನೆಲ್ಲಿಕಾಯಿಗಳನ್ನುದುರಿಸುವಂತೆ ಕಾಡಿನೊಳಗೆ ಆನೆ, ಕರಡಿ, ಸಿಂಹ, ಕಾಡು ಕೋಣ, ಜಿಂಕೆ, ಸಾರಂಗ, ಒಂಟೆ ಮೊದಲಾದ ಪ್ರಾಣಿಗಳು ಸತ್ತುಬಿದ್ದದ್ದು ಕಾಡು ಯಮನ ಮನೆಯಂತೆ ಗೋಚರಿಸುತ್ತಿತ್ತೆಂದೂ ವರ್ಣಿಸಿದ್ದಾನೆ.

೧೩. **ಕುಮಾರ ವಾಲ್ಮೀಕಿಯ ತೊರವೆರಾಮಾಯಣ :** ತೊರವೆರಾಮಾಯಣದಲ್ಲಿ ಕುಮಾರ ವಾಲ್ಮೀಕಿ ಶಂಭುಕಾಸುರ ವಧೆಗಾಗಿ ಬೇಟೆ ಸಂದರ್ಭ ತಂದಿದ್ದಾನೆ. ಶಂಭುಕಾಸುರ ಇಂದ್ರಪದವಿಗಾಗಿ ತಪಸ್ಸು ಮಾಡುವುದು, ಇವನನ್ನು ಕೊಲ್ಲಲು ಇಂದ್ರನು ನಾರದ ಮತ್ತು ಸುರಾಚಾರ್ಯರ ಅಭಿಪ್ರಾಯದಂತೆ ದೇವರೂಪವನ್ನು ತ್ಯಜಿಸಿ, ಕಿರಾತರೂಪವನ್ನು ತಾಳುವನು. ಇಂದ್ರನೊಂದಿಗೆ ದೇವತೆಗಳೂ ಬೇಟೆಗಾರರ ವೇಷ ತೊಡುವರು.

ಇಲ್ಲಿಯೂ ಪ್ರಜಾರಕ್ಷಣೆಯ ಬೇಟೆ ಚಿತ್ರಣವಿದೆ. ತಪಸ್ವಿಗಳು ರಾಮನಲ್ಲಿಗೆ ಬಂದು ಕಾಡಿನಲ್ಲಿ ಮೃಗಬಾಧೆ ಹೆಚ್ಚಾಗಿದೆ ಎನ್ನುವರು. ಕೂಡಲೇ ರಾಮ, ತಮ್ಮ ಲಕ್ಷ್ಮಣನನ್ನು ಮೃಗಬೇಟೆಗೆ ಕಳಿಸುವ ದೃಶ್ಯವಿದೆ. ಆ ಸಮಯಕ್ಕೆ ವಿಷ್ಣು ಮಾಯಾ ವರಾಹವನ್ನು ಸೃಷ್ಟಿಸುತ್ತಾನೆ. ಅದು ನುಗ್ಗಿ ಬಂದು ಶಂಭುಕಾಸುರನನ್ನು ಹಿಂದಕ್ಕೆ ಹಾಕಿ ಮುಂದೆ ನಿಂತಾಗ,

ಲಕ್ಷ್ಮಣ ಬಾಣದಿಂದ ಹೊಡೆದಾಗ, ಬಾಣವು ಹಂದಿಯನ್ನು ಸೀಳಿಕೊಂಡು ಹುತ್ತವನ್ನು ಬಗಿದು ಶಂಭುಕಾಸುರನನ್ನು ಕೊಲ್ಲುವುದು. ಇಂದ್ರಾದಿ ದೇವತೆಗಳು ಬೇಡರ ವೇಷದ ರೂಪ ಪಡೆದು ರಾಮನಲ್ಲಿಗೆ ಬಂದು ಕಾಣಿಕೆ ನೀಡಿ, ಗೌರವಿಸಿ ಬೇಟೆಗೆ ಬರಬೇಕೆಂದು ವಿನಂತಿಸುವ ಸಂದರ್ಭವಿದೆ. ಕಾಡುಹಂದಿಯ ಕೋರೆಯಹಲ್ಲು, ಜಂಕೆ ಮರಿ, ಕಸ್ತೂರಿಮೃಗ, ಶಾರ್ದೂಲದ ಚರ್ಮ, ಸಿಂಹದ ಉಗುರು, ಬಗಿದುಕಟ್ಟಿದ ಬಿಲ್ಲು ಬಾಣ, ಅರಗೂಳಿ, ಕೋತಿಮರಿ, ಆನೆಕುಂಭಸ್ಥಳದ ಮುತ್ತುಗಳು ಇತ್ಯಾದಿಯನ್ನು ಬೇಡರು ರಾಮನಿಗೆ ನೀಡಿ ಗೌರವಿಸುತ್ತಾರೆ.

೧೪. ಕನಕದಾಸ : ಕನಕದಾಸ ದಾಸಪರಂಪರೆಯಲ್ಲಿ ಅಗ್ರಗಣ್ಯ. ಇವನು ಕೀರ್ತನೆಗಳಲ್ಲಿ ಸಸ್ಯ, ಪ್ರಾಣಿಗಳ ಜೀವನದ ಬಗ್ಗೆ ತಿಳಿಸುತ್ತಾನೆ. ಇದಕ್ಕೆ ಸಂಬಂಧಿಸಿದ ಒಂದು ಪದ್ಯ ಹೀಗಿದೆ :

ಬೆಟ್ಟದಾ ತುದಿಯಲ್ಲಿ ಹುಟ್ಟಿದಾ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ ||೧||
ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರ ವಿತ್ತವರು ಯಾರೊ
ಹಡೆದ ಜನನಿ ತೆರದೆ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ.[೬]

ಕನಕದಾಸರ ವೃತ್ತಿಯೇ ಮೂಲತಃ ಬೇಟೆ. ಹೀಗಾಗಿ ಬೇಟೆ ಬಗ್ಗೆ ಪ್ರಾಯೋಗಿಕವಾಗಿ ಚಿತ್ರಿಸಿದ್ದಾನೆಂದರೆ ತಪ್ಪಲ್ಲ. ಇವನ ಮೋಹನತರಂಗಿಣಿ, ನಳಚರಿತ್ರೆಗಳಲ್ಲಿ ಮೃಗಯಾ ಪ್ರಸಂಗವು ಬಂದಿದೆ.

೧೪:೧. ನಳಚರಿತ್ರೆ : ಇದರಲ್ಲಿ ನಳ ಮಹಾರಾಜನು ದಮಯಂತಿಯನ್ನು ಮದುವೆಯಾಗುವ ಮೊದಲು ಅವಳ ಒಂದೊಂದೇ ಗುಣವನ್ನು ಹೇಳುತ್ತಾ ವಿರಹದಿಂದ ಬಳಲುವನು. ಆಗ ಬೇಡ ಪಡೆಯೊಂದಿಗೆ ಪುಳಿಂದ ನಾಯಕನೊಬ್ಬ ಬಂದು ಮಹಾರಾಜನಿಗೆ ಹಣ್ಣು- ಹಂಪಲುಗಳನ್ನು ಕೊಟ್ಟು ಇಂದು ದೊಡ್ಡದೊಂದು ಮೃಗಬೇಟೆಯಿದೆ, ಅದಕ್ಕೆ ತಾವು ದಯಮಾಡಿಸಬೇಕೆಂದು ಕೇಳಿಕೊಂಡಾಗ, ರಾಜ ಆ ಪಡೆಯೊಂದಿಗೆ ಸಿದ್ಧತೆ ನಡೆಸುವ ರೀತಿ :

ಅರಸ ಕೇಳ್ ಶಶಿಕುಲ ಶಿರೋಮಣಿ
ಧರಿಸಿದನು ನವರತುನ ಮಯದಾ
ಭರಣಗಳ ದಿವ್ಯಾಂಬರಾಧಿ ಸುಗಂಧ ಲೇಪದಲಿ
ತರಿಸಿಯೇರಿದ ವಾಯುವೇಗದ
ತುರಗವನ್ನು ಸಂದಣಿಪ ಮೋಹರ
ತೆರಳಿತಗಣಿತ ವಾದ್ಯದಲ್ಲಿ ನೆಲಬಿರಿಯಲ್ಲೆತಂದ (೨-೧೧).

ಇಲ್ಲಿ ಬೇಟೆಗೆ ಕುದುರೆ ಬಳಸಿದ ರಾಜನ ಉಲ್ಲೇಖ ಗಮನಾರ್ಹ. ಕನಕದಾಸರು ಆ ಕಾಲದ ಬೇಟೆಯನ್ನು ವಾಸ್ತವಿಕ ಅನುಭವದೊಂದಿದೆ ತಿಳಿಸಿದ್ದಾರೆ. ಚೌಂಡರಸನ ನಳಚಂಪೂವಿನ ಕಥಾವಸ್ತುವಿನಂತೆ ಇಲ್ಲಿ ಮಾರ್ಪಾಟುಗಳಿಗೆ ಒಳಗಾಗಿದೆ. ಇಲ್ಲಿ ಪ್ರಜಾರಕ್ಷಣೆಯ ಬೇಟೆ ವಿಶಿಷ್ಟವಾಗಿರುವುದು ಸ್ಪಷ್ಟ.

೧೪:೨. ಮೋಹನತರಂಗಿಣಿ : ಹದಿನೆಂಟು ವರ್ಣನೆಗಳ ನಿಮಿತ್ತ ಇಲ್ಲಿ ಬೇಟೆ ಬಂದಿದೆ. ಇದಕ್ಕೆ ಕೃಷ್ಣಚರಿತೆಯೆಂದು ಕರೆಯುವರು. ಅನಿರುದ್ಧನ ಬೇಟೆ ಪ್ರಸಂಗದ ಬಗ್ಗೆ ಒಂದು ಸಂಧಿಯಿದೆ. ಬೇಟೆನಾಯಿ, ಬೇಡರಪಡೆಗಳ ಉಲ್ಲೇಖ ಮಹತ್ವದ್ದಾಗಿದೆ. ಧೈರ್ಯಶಾಲಿ ನಾಯಿಗಳನ್ನು ಬೇಡರು ಬೇಟೆಯಲ್ಲಿ ಬಳಸುತ್ತಿದ್ದರು. ಉಡ, ಮೊಲ, ನರಿ, ಜಿಂಕೆ, ಸಾರಂಗ ಇತರ ಪ್ರಾಣಿಗಳ ಬೇಟೆ ನಡೆಯುತ್ತಿತ್ತು. ಬೇಟೆ ನಾಯಿಯೊಂದು ಚಂದ್ರನ ಒಡಲ ಮೊಲವನ್ನು ಕಂಡು ಮೊಗವೆತ್ತಿ ಬೊಗಳಿತು ಎನ್ನುವ ವರ್ಣನೆ, ಮನ ಮಿಡಿಯುವಂತಿದೆ. ಕನಕದಾಸರು ಮೊದಲಿಗೆ ಅನಿರುದ್ಧನ ಮುಂದೆ ನಡೆಯುವ ಬೇಟೆ ನೃತ್ಯವನ್ನು ತಿಳಿಸಿರುವುದು ಮುಖ್ಯವೆನಿಸಿದೆ. ಎರಡು ಕೃತಿಗಳಲ್ಲಿ ಲೌಕಿಕ ಮತ್ತು ಅಲೌಕಿಕತೆಗಳ ಬೇಟೆ ಪ್ರಸ್ತಾಪವಿದೆ.

೧೫. ನಂಜುಂಡನ ರಾಮನಾಥಚರಿತೆ : ನಂಜುಂಡನ 'ರಾಮನಾಥಚರಿತೆ' ಮೊದಲ ಚಾರಿತ್ರಿಕ ಕಾವ್ಯವಾಗಿದೆ. ಇಲ್ಲಿ ಸಮಕಾಲೀನ ಸಮಾಜದ ಪೂರ್ಣ ಚಿತ್ರಣ, ಶಿಕಾರಿಯ ವಿಧಾನಗಳಲ್ಲಿ 'ತಡೆ ಬೇಟೆ' ಉಲ್ಲೇಖವಿದೆ. ತಡೆಬೇಟೆಯೆಂದರೆ, ರಾತ್ರಿ ಅಥವಾ ಹಗಲು ಹೊತ್ತು ಕಾಡಿನಲ್ಲಿ ಸಂಚರಿಸುವ ಪ್ರಾಣಿಗಳ ಹಾದಿಯನ್ನು ಅರಿತು, ಅಲ್ಲಿ ಕಾಣದಂತೆ ಕಾದು ಕುಳಿತು, ಬೇಟೆಯಾಡುವುದಾಗಿದೆ. ಇದಕ್ಕೆ ಮರಸು ಬೇಟೆ ಎಂತಲೂ ಕರೆಯುವರು. ಹೇಗೆಂದರೆ : ಪ್ರಾಣಿಗಳು ಸುಳಿದಾಡುವಲ್ಲಿ ' ಕಾವಲುಮನೆ' ನಿರ್ಮಿಸಿ ಅದರೊಳಗಿಂದ ಮೃಗಗಳಿಗೆ ಬಾಣಪ್ರಯೋಗಿಸಿ ಕೊಲ್ಲವುದಾಗಿದೆ. ರಾಮನಾಥಚರಿತೆಯಲ್ಲಿ ಬೇಟೆಗೆಂದು ರಾಜನಿಗೆ ಕಾವಲುಮನೆ ಕಟ್ಟುವ, ಸೇವಕರ ಸಾಮಗ್ರಿಗಳ ಒಟ್ಟಾಗಿಸುವ ಸಂದರ್ಭವಿದೆ:

> ಗುಡಿ ಗೂಡಾರ ಸರಾತಿ ಪೆಟ್ಟಿಗೆ ಗಿಂಡಿ
> ಪಡಿಗ ಮೇಲ್ಲಾಸು ಮಂಚಗಳ
> ಗಡನೆ ಮೆಯ್ದಿತು ರಾಯನ ದಿಯಮದೊಳಂದು
> ತಡಬೇಂಟೆಯ ಸಮಕಟ್ಟು

ಇಲ್ಲಿಯೂ ಸಹ ಬಳಲಿದ ಬೇಡರಿಗೆ ಮಡದಿಯರು ಉಪಚರಿಸಿ, ಶುಶ್ರೂಷೆ ಮಾಡುವ ಸಂದರ್ಭವಿದೆ. ಕ್ರೂರಪ್ರಾಣಿಗಳಿಂದ ಆದ ಗಾಯ, ನೋವುಗಳಿಂದ ಬಳಲಿ ನರಳುತ್ತಿರುವ ಬೇಡರನ್ನು (ಶಬರ) ನೆರಳಿನಲ್ಲಿ ಮಲಗಿಸಿ ಬೇಡತಿಯರು ಚಿಕಿತ್ಸೆ ನೀಡುವುದು ಗಮನಾರ್ಹ. ಅವರಿಗಾದ ಗಾಯಗಳಿಂದ ರಕ್ತ ಸೋರಿ ಹೋಗದಂತೆ ಬೇಡತಿಯರು ತಾಂಬೂಲದಿಂದ ಗಾಯವನ್ನು ಒತ್ತಿಕಟ್ಟದರೆಂಬ ವಾಸ್ತವಿಕ ಚಿತ್ರಣವಿದೆ. ಇಂದಿಗೂ ಬುಡಕಟ್ಟುಗಳಲ್ಲಿ, ಈ ಪದ್ಧತಿ ರೂಢಿಯಲ್ಲಿದೆ.

೧೬. ಲಕ್ಷ್ಮೀಶನ ಜೈಮಿನಿಭಾರತ : ಲಕ್ಷ್ಮೀಶ ಜೈಮಿನಿ ಭಾರತದಲ್ಲಿ ವಿವಿಧ ರೀತಿಯ ಬೇಟೆಯ ನಾಯಿಗಳ ಲಕ್ಷಣಗಳನ್ನು ತಿಳಿಸಿದ್ದಾನೆ :

> ಉಬ್ಬಿದುರು ದೇರದೆಗೆದೊಡಲ ಬಾಗಿದ ಬೆನ್ನ
> ಪಬ್ಬುಗೆಯ ಪಚ್ಚಳದ ಸೆಡೆದ ಬಾಲದ ಕೊನೆಯ
> ಕೊಬ್ಬಿದ ಕೊರಳ ಸಣ್ಣ ಜಂಘಗಳ ಕೊಂಕುಗುರ ಮಡಗಿವಿಯ ಕಿಡಿ ಗಂಗಳ
> ಹೆಬ್ಬಲ್ಲಿ ಬಡುವಾಯ ದೇಲ್ವ ಕೆನ್ನಾಲಗೆಯ

ಗಬ್ಬ ನಾಯ್ಗಳ ಹಾಸ ನುಗಿದು ಬಿಡೆಪಂದಿಗಳ

ನಬ್ಬರಿಸಿ ತುಡುಕಿದುವು ಕೇಸರಿಯ ಮೇಲ್ವಾಯ್ದಡರ್ದು ಪುಲಿಯಂ ಕೊಂದವು.

ಬೇಟೆಗಾರರಿಬ್ಬರು ಒಂದೇ ಹುಲಿಯನ್ನು ಬಾಣದಿಂದ ಹೊಡೆಯಲು ಹೋಗಿ ಹುಲಿಯೊಂದಿಗೆ ಹೋರಾಡಿ ಮಡಿದ ಸಂದರ್ಭವಿದೆ. ಸಿಂಹವೊಂದು ಬೇಡತಿಯನ್ನು ಆನೆ ಎಂದು ಮೇಲೆ ಬೀಳಲು ಹವಣಿಸುತ್ತದೆ. ನಡುವನ್ನು ನೋಡಿ ಸಿಂಹವೆಂದು ಸುಮ್ಮನಾಗುವಷ್ಟರಲ್ಲಿ, ಅವಳ ಕಣ್ಣುಗಳನ್ನು ನೋಡಿ ಹುಲ್ಲೆಯೆಂದು ಬಗೆದು ಹಾರಿ ಬೀಳಲು ಬೇಡನು ಬಾಣದಿಂದ ಅದನ್ನು ಹೊಡೆದು ಕೊಲ್ಲುತ್ತಾನೆ.

೧೭. **ಷಡಕ್ಷರದೇವನ ರಾಜಶೇಖರವಿಳಾಸ :** ಇದು ಶಿವನ ಪಂಚಾಕ್ಷರಿಯ ಮಹತ್ವವನ್ನು ತಿಳಿಸುವ ಕಾವ್ಯವಾಗಿದೆ. ರಾಜಕುಮಾರನಾದ ರಾಜಶೇಖರನು ಯುದ್ಧದಲ್ಲಿ ಜಯ, ಜಲ, ವನ, ವಿಹಾರಗಳಲ್ಲಿ ಮಗ್ನನಾಗಿದ್ದ. ವಾಸ್ತವ ಬೇಟೆಚಿತ್ರ ಇವನ ಕೃತಿಯಲ್ಲಿದೆ. ಬೇಡ ಬೇಟೆಗೆ ಸಿದ್ಧನಾಗುವ ಸಂದರ್ಭ, ಶಕ್ತಿ ಸ್ವರೂಪ ಹೀಗಿದೆ : ಶುಭ್ರವಾದ ಹಲ್ಲು, ಕೊಂಕಿದ ಹುಬ್ಬು, ಮೋಡದಂತೆ ಕಪ್ಪಾದ ದೇಹ, ಕೆಂಪಾದ ಕಣ್ಣು, ದಪ್ಪಮೀಸೆ, ಆನೆಯ ಕುಂಭಸ್ಥಳದ ಮುತ್ತಿನ ಸರ, ಕೈಯಲ್ಲಿ ಬಿಲ್ಲು ಬಾಣಗಳು, ಕಾಲಲ್ಲಿ ಚಪ್ಪಲಿ, ಬೇಟೆನಾಯಿಗಳೊಂದಿಗೆ ಬೇಡರ ನಾಯಕರ ಬೇಟೆಗೆಂದು ಹೋಗುತ್ತಾನೆ. ಇವರೊಂದಿಗೆ ನಾನಾ ಬಗೆಯ ಬೇಟೆಯ ಪರಿಕರಗಳಿದ್ದವು. ಪ್ರಾಣಿಗಳ ಹೆಜ್ಜೆ ಗುರುತು ಹಿಡಿದು ಬೇಟೆಯಾಡುತ್ತಿದ್ದ ಬಗೆ

ಇದು ಕರಿಪೋದ ತಾಣವಿದು ಸೈರಿಭ ಮೆಯ್ದಿದ ದಾರಿ ನೋಳ್ಪಡಿಂ
ತಿದು ಪುಲಿಯಿರ್ದ ಬಲ್ಮೆಳೆಯಿಕ್ಕೆಲ ನೇಳ್ಗಡಿಯಿಟ್ಟ ಬಟ್ಟೆ ನೋ
ಡಿದು ಹರಿನಿಂದ ಪಟ್ಟೆಯಿದೆ ಪೊಕ್ಕೆ ಮುದಾಂಬುವಿದ್ಯಾಸ್ಯ ಫೇನ ಮಿಂ
ತಿದೆ ತನಿಗರ್ಬುತಳ್ತಿದೆ ಕಿಸರ್ಪರಿಗೊಂಡ ಹಸ್ತಿ ಮೌಕ್ತಿಕಂ (೫-೮೧).

ನಡೆದು ಹೋದ ಪ್ರಾಣಿಗಳ ಹೆಜ್ಜೆ - ಗುರುತುಗಳನ್ನಿಡು ಬೇಡಪಡೆ ಅವುಗಳ ಅಡಗಿಸಿದ ನೆಲೆಗಳನ್ನು ನೋಡಿ ಕೊಲ್ಲುತ್ತಾರೆ. ಸೋವತರ ದಾಳಿಗೆ ಪ್ರಾಣಿಗಳು ಬಲಿಯಾಗುತ್ತಿದ್ದವು. ಮೊಲ, ಜಂಕೆಮರಿ, ಆನೆ, ಹೆಬ್ಬುಲಿ, ಖಡ್ಗಮೃಗ, ತೋಳ, ಸಿಂಹ ಮತ್ತು ಪಕ್ಷಿಗಳನ್ನು ಬೇಟೆಗಾರರು ಸೋವಿ ಕೊಲ್ಲುತ್ತಿದ್ದರು. ಬೇಟೆಗಾರರು ಬೇಹುಗಾರರು-ಸೋವತರು ಪ್ರಾಣಿಗಳ ಚಲನವಲನಗಳನ್ನು ಅರಿತು ಸಂಕೇತ-ಸಂಜ್ಞೆಗಳೊಂದಿಗೆ ವ್ಯವಹರಿಸುತ್ತಿದ್ದರು. ಇದಕ್ಕೆ ಸನ್ನೇಬೇಟೆ ಎಂದಿದ್ದಾರೆ. ಬೇಟೆನಾಯಿಗಳಿಗೆ ಒಡೆಯನ ಹೆಸರಿಡುತ್ತಿದ್ದರು.

ಷಡಕ್ಷರನ ಬೇಟೆ ವರ್ಣನೆ ವೀರರಸ ಪ್ರತಿಪಾದನೆಯಂತಿದೆ. ಕಿರಾತರತಿ ಪ್ರಸಂಗದಲ್ಲಿ ಶೃಂಗಾರದ ರಸಮಿಳಿತವಿದೆ. ಒಬ್ಬ ಸುಂದರ ಯುವ ಬೇಡನ ಹೆಂಡತಿ ಹಿಂದಿನ ದಿನ ಮುನಿದಿದ್ದಳಾದರೂ, ಮನೆಯಲ್ಲಿರದೆ ಬೇಟೆಗೆ ಇನಿಯನೊಂದಿಗಿರುವಳು. ಕಾಡಿನಲ್ಲಿ ಹುಲಿಯೊಂದು ಇವಳಿಗೆ ಘರ್ಜಿಸುತ್ತದೆ. ಹೆದರಿದ ಅವಳು ಇನಿಯನನ್ನಪ್ಪಿಕೊಳ್ಳುವಳು. ಅವನು ಹುಲಿಗೆ ಬಾಣದಿಂದ ಹೊಡೆದಾಗ ಅವಳ ಬಿಗಿಅಪ್ಪುಗೆಯಿಂದ ಬಾಣದ ಗುರಿ ತಪ್ಪುತ್ತದೆ. ಬೇಟೆಯನ್ನು ಕವಿ ಪಾಪವೆಂದು ಕರೆದಿರುವನು. ಬೇಟೆ ಪ್ರಸಂಗವನ್ನೇ ಕುರಿತ ಶಬರ ಶಂಕರ ವಿಳಾಸದಲ್ಲಿ ಅಲೌಕಿಕ ಬೇಟೆಯ ಚಿತ್ರಣವಿದೆ.

೧೭ :೨. **ವೃಷಭೇಂದ್ರವಿಜಯ:** ಇದರಲ್ಲಿ ಎಂಬತ್ತು ಜನ ಶಿವಶರಣರ ಜೀವನ ಚಿತ್ರಣವಿದೆ. ಶಿವಶರಣಗಣದಲ್ಲಿ ಬೇಡರ ಕಣ್ಣಪ್ಪನೂ ಒಬ್ಬ ಬೇಟೆಗಾರ. ಕಣ್ಣಪ್ಪನೊಂದಿಗೆ ಬೆಳ್ಳಾರೆ ಬಲೆ, ಬಡಿಕೋಲು, ಗಾಳ, ಅಂಟು ಬಲೆ ಇತರ

ಪರಿಕರಗಳನ್ನಿಡಿದ ಬೇಡರ ಪಡೆ ಪ್ರತಿನಿತ್ಯ ಬೇಟೆಗೆ ಹೋಗುತ್ತಿತ್ತು. ವಿವಿಧ ಪ್ರಾಣಿ, ಆಯುಧಗಳಲ್ಲದೆ ಬೇಟೆ ಪ್ರಸಂಗಗಳನ್ನು ಕವಿ ವರ್ಣಿಸಿದ್ದಾನೆ.

೧೮. ಸರ್ವಜ್ಞ : ಸರ್ವಜ್ಞನು ವಚನಗಳಲ್ಲಿ ಮಾನವ, ಪ್ರಾಣಿ, ಸಸ್ಯ ಹೀಗೆ ಭೂಮಿಯ ಮೇಲಿನ ಯಾವುದೇ ವಸ್ತುವನ್ನು ಬಿಡದೆ ದಾಖಲಿಸಿದ್ದಾನೆ. ಆ ಮೂಲಕ ಇವನ ತ್ರಿಪದಿಗಳು ಜನಪ್ರಿಯವಾಗಿವೆ. ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಹೇಳದ ವಿಚಾರವಿಲ್ಲವೆಂದು ಹೇಳಬಹುದು. ಬೇಡ- ಬೇಟೆಯ ರೂಪಕವನ್ನು ವಚನಗಳಲ್ಲಿ ಬಳಸಿರುವುದು ಬೇಡನ ಧೈರ್ಯವನ್ನು ಸಾಂಕೇತಿಸುವ ಪದ್ಯ ಹೀಗಿದೆ :

ಎಂಟು ಪಟ್ಟದ ಮೇಲೆ ತುಂಟ ಬೇಡನುಹುಟ್ಟಿ
ನಂಟಾರನ್ನೆಲ್ಲ ಸದೆಬಡಿದು ಶ್ರೀರಂಗದಲ್ಲಿ
ಮಂಟಪಾ ಹೋದನಯ್ಯ ಸರ್ವಜ್ಞ.

ಬೇಡರು ಹುಟ್ಟಿ ಸಾಧಿಸುವ ಅದ್ಭುತ ಕಾರ್ಯಗಳನ್ನು ಸರ್ವಜ್ಞ ತನ್ನ ಕಾಲದ ಇತಿ-ಮಿತಿ, ಸ್ಥಿತಿ-ಗತಿಗಳೊಂದಿಗೆ ಎತ್ತಿ ತೋರಿಸಿದ್ದಾನೆ.

೧೯. ತಿರುಮಲಾರ್ಯನ ಚಿಕ್ಕದೇವರಾಜವಂಶಾವಳೀ: ತಿರುಮಲಾರ್ಯನ ಚಿಕ್ಕದೇವರಾಜವಂಶಾವಳೀಯಲ್ಲಿ ಬೇಟೆ ಸಂದರ್ಭ ಹೀಗಿದೆ : ರಾಜನ ಅಧಿಕಾರ ಕಬಳಿಸಲು ಬೇಟೆ ಪಾತ್ರವೇ ಕಾರಣ. ರಾಜನನ್ನು ಬೇಟೆಯ ಮೂಲಕ ಮೆಚ್ಚಿಸಿ ಶಿಕಾರಿಯ ಹುಚ್ಚು ಹಿಡಿಸಿ ಆ ಮೂಲಕ ರಾಜ್ಯದ ಅಧಿಕಾರ ಕಸಿಯುವ ಸೇನಾನಿಯ ಕುಟಿಲತೆ ಒಳಸಂಚು ಇಲ್ಲಿ ಅನಾವರಣಗೊಂಡಿದೆ. ಸೈನಿಕರು, ಅಧಿಕಾರಿಗಳು ವಿಲಾಸಕ್ಕಾಗಿ ಮಿತ್ರರೊಂದಿಗೆ ಸೇರಿ ಬೇಟೆಯ ಕೋವಿಗಳನ್ನು ಉಪಯೋಗಿಸಿ ದೇವಾಲಯದ ಪ್ರಾಕಾರ, ಮಂಟಪ, ವಿಮಾನ, ಗೋಪುರಗಳಲ್ಲಿ ನೆಲಸಿದ ಹಕ್ಕಿಗಳನ್ನು ಬೇಟೆಯಾಡುತ್ತಾರೆ. ಅವು ಗರ್ಭಗೃಹ ಹೊಕ್ಕರೂ ಬಿಡದೆ ಸಾಯಿಸುತ್ತಿದ್ದರು. ಮೊದಲಿಗೆ ಆಧುನಿಕ ಕೋವಿಯನ್ನು ಬಳಸಿದ ವಿವರವಿದೆ.

೨೦. ಮುಮ್ಮಡಿ ಕೃಷ್ಣರಾಜಒಡೆಯರ್‌ರ ಸೌಗಂಧಿಕಪರಿಣಯ : ಮುಮ್ಮಡಿ ಕೃಷ್ಣರಾಜನ ಸೌಗಂಧಿಕಪರಿಣಯ ಭಾಮಿನಿ ಷಟ್ಪದಿಯ ಕೃತಿ. ಸುಗಂಧರಾಜನು ಮೃಗ ವಿಹಾರಕ್ಕೊರಡುವ ಸಂದರ್ಭವಿದೆ. ರಾಜ ವೈಭವದಿಂದ ಸೈನ್ಯ ಸಮೇತನಾಗಿ ಹೊರಟು ಬೇಟೆಗಾಗಿ ಸೋವತರಿಗೆ ಬೇಟೆ ಪರಿಣಿತಿ ಸಂಚನ್ನು ಹೇಳುತ್ತಾನೆ. ಕಾಡಿನ ವಾದ್ಯಧ್ವನಿಯನ್ನು ನಿಲ್ಲಿಸುವಂತೆ, ಕುದುರೆಗಳು ಕೆನೆಯಂತೆ ಬಾಯಿಗೆ ಕಟ್ಟುಗಳನ್ನು ಬಿಗಿಯುವಂತೆ ಆಳುಗಳಿಗೆ ಎಚ್ಚರಿಸುತ್ತಾನೆ. ಬೇಟೆಗಾರರು ಕಾಡಿನೊಳಗೆ ಬೊಬ್ಬಿಡದೆ ಪರಸ್ಪರ ಸಂಜ್ಞೆಯಿಂದಲೇ ವ್ಯವಹರಿಸುವ ದೃಶ್ಯವಿದೆ. ಪ್ರಾಣಿಗಳ ಚಲನ-ವಲನ ನೆಲಸಿದ ಸ್ಥಳಗಳ ಜಾಡು ಇತ್ಯಾದಿ ಸಂಗತಿಗಳಿವೆ. ಇಲ್ಲಿ ಬೇಟೆಯಾಡುವ ತಂತ್ರಗಳು ವಿವಿಧ ರೀತಿಯಲ್ಲಿವೆ :

ಅಶ್ವಿನಾ - ಕುದುರೆಯ ಮೇಲೇರಿ ಬೇಟೆಯಾಡುವುದು
ಸಜಾಲ- ಬಲೆಯ ಮೂಲಕ ಬೇಟೆಯಾಡುವುದು
ಕಾವ್ಯಾ - ವಿಭಿನ್ನ ತಂತ್ರ- ಸಂಚುಗಳನ್ನು ಹೂಡಿ ಬೇಟೆಯಾಡುವುದು
ಯಾವಶ್ರೀ-ಪ್ರಾಣಿಗಳ ಹಾದಿ-ಚಹರೆಯನ್ನು ಅನುಸರಿಸಿ ಅಭ್ಯಸಿಸಿ ಬೇಟೆಯಾಡುವುದು
ಸಾತ್ರೇಕ್ಷೆ- ಪ್ರಾಣಿಗಳ ಇರುವಿಕೆಯನ್ನು ಅರಿತು ಗುರಿಯಿಟ್ಟು ಅಸ್ತ್ರವನ್ನು ಅಲ್ಲಿಗೆ ಎಸೆದುಕೊಲ್ಲುವುದು

ಶ್ವಗಣಿಕಾ- ನಾಯಿಗಳನ್ನು ಪ್ರಾಣಿಗಳ ಮೇಲೆ ಬಿಟ್ಟು ಆ ಮೂಲಕ ಅವುಗಳನ್ನು ಅಡ್ಡಗಟ್ಟಿ ಶಸ್ತ್ರ

ಪ್ರಯೋಗಿಸಲಾಗುತ್ತದೆ. ಮೇಲಿನ ವಿಧಾನಗಳನ್ನು ಅನುಸರಿಸಿದರೆ ಧರ್ಮಾರ್ಥ ಕಾಮ, ಮೋಕ್ಷಗಳು ಸಿದ್ಧಿಸುತ್ತವೆಂದು ಕೃತಿಕಾರ ಹೇಳಿದ್ದಾನೆ.[೨]

ಕನ್ನಡ ಸಾಹಿತ್ಯದಲ್ಲಿ ಅನೇಕ ಕಾವ್ಯಗಳು ರಚನೆಗೊಂಡಿದ್ದು, ಇವುಗಳಲ್ಲಿ ಮಹಾಕಾವ್ಯಗಳೆಂದು ಕರೆಸಿಕೊಂಡಿವ ಕೃತಿಗಳಲ್ಲಿ ಬೇಟೆ ಸಂದರ್ಭ ಕಾವ್ಯ ಲಕ್ಷಣವಾಗಿದೆ. ಮಹಾಭಾರತ ಮತ್ತು ರಾಮಾಯಣದ ಕಥಾ ವಸ್ತುವಿನಲ್ಲಿ ವನವಾಸ, ಕಾಡಿನ ಬದುಕಿನೊಂದಿಗೆ ಬೇಟೆ ಬೆಸೆದುಕೊಂಡಿದೆ. ಸೀತೆ ಸುಂದರ ಜಂಕೆಗೆ ಮರುಳಾಗದಿದ್ದರೆ ಅವಳನ್ನು ರಾವಣ ಅಪಹರಿಸುತ್ತಿರಲಿಲ್ಲ. ರಾಮ ಜಂಕೆ ಬೇಟೆಗೆ ಹೋಗುವುದು ಇಲ್ಲಿನ ಬೇಟೆ ಸಂದರ್ಭವಾಗಿದೆ. ಹೀಗೆ ನಾನಾ ಕಾರಣಗಳಿಗಾಗಿ ಬೇಟೆ ನಿರೂಪಿತವಾಗಿದೆ.

ಇನ್ನು ಅನೇಕ ಕಾವ್ಯಗಳಲ್ಲಿ ಕಂಡುಕಾಣದ ಸಂದರ್ಭಗಳಿವೆ. ಪೊನ್ನನ ಭುವನೈಕ್ಯರಾಮಾಭ್ಯುದಯ, ಶಾಂತಿಪುರಾಣ, ರನ್ನನ ಅಜಿತಪುರಾಣ, ಸಾಹಸಭೀಮವಿಜಯ, ಚಾವುಂಡರಾಯನ ತ್ರಿಷಷ್ಟಿ ಲಕ್ಷಣ ಮಹಾಪುರಾಣವೆಂಬ ಗದ್ಯಕಾವ್ಯ, ದುರ್ಗಸಿಂಹನ ಪಂಚತಂತ್ರ, ಶಾಂತಿನಾಥನ 'ಸುಕುಮಾರ ಚರಿತಂ', ನಾಗಚಂದ್ರನ ಮಲ್ಲಿನಾಥಪುರಾಣ ಮತ್ತು ರಾಮಚಂದ್ರಚರಿತಪುರಾಣ, ನಯಸೇನನ ಧರ್ಮಾಮೃತ, ಬ್ರಹ್ಮಶಿವನ ಸಮಯಪರೀಕ್ಷೆ ಪ್ರಮುಖ ಕೃತಿಗಳಾಗಿವೆ. ಎರಡನೇ ಸೋಮೇಶ್ವರನ ಮಾನಸೋಲ್ಲಾಸದಲ್ಲಿ ಬೇಟೆ ಬಂದಿದೆ. ವಚನಕಾರರಾದ ದೇವರದಾಸಿಮಯ್ಯ, ಸಕಲೇಶ ಮಾದರಸ, ಪ್ರಭುದೇವ, ಚೆನ್ನಬಸವಣ್ಣ, ಸಿದ್ಧರಾಮ, ಮುಗ್ಗೆಯ ಮಾಯಿದೇವ ಮೊದಲಾದವರು ಬೇಟೆಯನ್ನು ರೂಪಕವಾಗಿ ವಚನಗಳಲ್ಲಿ ಬಳಸಿದ್ದಾರೆ. ಚಾಮರಸ, ಕೆರೆಯ ಪದ್ಮರಸ, ಕುಮುದೇಂದು, ಭೀಮಕವಿ, ಪದ್ಮಣಾಂಕ, ರುದ್ರಭಟ್ಟ, ಎರಡನೇ ನಾಗವರ್ಮ, ಆಂಡಯ್ಯ, ಮಲ್ಲಿಕಾರ್ಜುನ (ಸೂಕ್ತಿಸುಧಾರ್ಣವ), ನರಹರಿತೀರ್ಥ, ವ್ಯಾಸರಾಯ, ವಾದಿರಾಜ ಮೊದಲಾದವರ ಕೃತಿಗಳಲ್ಲಿ ಬೇಟೆ- ಬೇಡರ ಸಂದರ್ಭಗಳ ನಿರೂಪಣೆಯಿದೆ. ಮಂಗರಾಜನ ಖಂಗೇದ್ರಮಣಿದರ್ಪಣ, ಲಕ್ಷ್ಮೀಶನ ಜೈಮಿನಿಭಾರತ, ಸೋಮನಾಥಕವಿಯ ಅಕ್ರೂರಚರಿತೆ, ಲಕ್ಕಣ್ಣ ದಂಡೇಶನ ಶಿವತತ್ವಚಿಂತಾಮಣಿ, ಮುದ್ದಣ್ಣನ ರಾಮಾಶ್ವಮೇಧ ಮತ್ತು ಬಸವಪ್ಪ ಶಾಸ್ತ್ರೀಯ ದಮಯಂತಿಸ್ವಯಂವರ ಮತ್ತು ಶಾಕುಂತಲ (ನಾಟಕ) ಇತರ ಕಾವ್ಯಗಳಲ್ಲಿ ಮೂರ್ತ ಮತ್ತು ಅಮೂರ್ತ ಬೇಟೆಯ ಸಂದರ್ಭಗಳನ್ನು ಆಯಾಕಾಲ, ಪರಿಸರದ ಅಗತ್ಯಕ್ಕೆ ತಕ್ಕಂತೆ ಬಳಸಿದ್ದಾರೆ. ಕಾವ್ಯಗಳಲ್ಲಿ ಬೇಟೆ- ಬೇಡರ ಸಂದರ್ಭಗಳು ಪ್ರಧಾನವಲ್ಲವಾದರೂ, ಕಥೆಯ ಬೆಳವಣಿಗೆಗೆ ಕವಿ ಪೂರಕವಾದ ಅಂಶಗಳಿಗೆ ಮಾರು ಹೋಗುವುದು ಸಹಜ. ಕವಿ ಸೃಷ್ಟಿಸಿದ ಬೇಟೆ ಸಂದರ್ಭ ಹದಿನೆಂಟು ವರ್ಣನೆ, ಸಪ್ತವ್ಯಸನ ಮತ್ತು ನವರಸಗಳಲ್ಲದೆ ಇತರೆ ಸಂಗತಿಗಳನ್ನು ತೆರೆದಿಡುವ ಹೃದಯ ವೈಶಾಲ್ಯತೆಯನ್ನು ಕಾಣಬಹುದು. ಕಾವ್ಯರಂಜನೆ, ವೈಭವೀಕರಣಗೊಂಡರೂ, ವಾಸ್ತವ ಜೀವನದ ಅಂಶಗಳು ಹಾಸುಹೊಕ್ಕಾಗಿರುತ್ತವೆಂಬುದು ಸ್ಪಷ್ಟ.

೨. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನೀಯ ಪ್ರಸಂಗ

ಬೇಟೆಯನ್ನು ಲೌಕಿಕ ಮತ್ತು ಅಲೌಕಿಕವೆಂದು ವಿಂಗಡಿಸಿದಾಗ : ಲೌಕಿಕದಲ್ಲಿ ಬೇಟೆಯು ವಾಸ್ತವವಾಗಿದ್ದು, ಜನಸಾಮಾನ್ಯರು ಸ್ವಯಂರಕ್ಷಣೆ, ಆಹಾರ, ಮನೋರಂಜನೆಗಾಗಿ ರೂಢಿಸಿಕೊಂಡಿದ್ದರು. ಅಲೌಕಿಕವು ಆಧ್ಯಾತ್ಮಿಕ, ಅತಿಮಾನುಷ ಕಲ್ಪನೆಯಿಂದ ಹದಿನೆಂಟು ವರ್ಣನೆಗಳು ಬರುವ ಸಂದರ್ಭದಲ್ಲಿ 'ಮೃಗಯಾ' ಬರುತ್ತದೆ. ಕವಿಗಳು ಅಲೌಕಿಕತೆಗೆ ಮಾರುಹೋಗಿ ಮಹಾಭಾರತದ 'ಕಿರಾತಾರ್ಜುನೀಯ' ಪ್ರಸಂಗವನ್ನು ತಂದಿದ್ದಾರೆ. ಅರ್ಜುನ ಶಿವನನ್ನು

ಆರಾಧಿಸುವ ರೀತಿಯೇ ಒಂದು ಹೊಸ ವಿಧಾನ. ಶೂರನಾದವನು ತನ್ನ ಪೌರುಷ ಪ್ರದರ್ಶನದಿಂದ ಎದುರಾಳಿಯನ್ನು ಮೆಚ್ಚಿಸುವ ಸಂಪ್ರದಾಯವಿದು. ತಪಸ್ಸಿನಲ್ಲಿದ್ದ ಅರ್ಜುನ ಧನುರ್ಧಾರಿಯಾಗಿ ಕಿರಾತ ವೇಷಧಾರಿಯಾದ ಶಿವನನ್ನು ಸೋಲಿಸಿದ್ದು ಕಥಾಪ್ರಸಂಗ. ಇಂಥ ಪ್ರಸಂಗವನ್ನು ಅನೇಕ ಕವಿಗಳು ತಮ್ಮ ಕಾವ್ಯಗಳಲ್ಲಿ ಬಳಸಿಕೊಂಡಿದ್ದಾರೆ. ಸಂಸ್ಕೃತದಲ್ಲಿ ಭಾರವಿಯು 'ಕಿರಾತಾರ್ಜುನೀಯ' ಎಂಬ ಉತ್ಕೃಷ್ಟ ಕಾವ್ಯ ರಚಿಸಿ ಎಲ್ಲರ ಕೀರ್ತಿಗೆ ಪಾತ್ರನಾಗಿದ್ದಾನೆ. ಕನ್ನಡದಲ್ಲಿ ಶಿವಪುರಾಣ, ಚೆನ್ನಬಸವಪುರಾಣ, ವಿಕ್ರಮಾರ್ಜುನ ವಿಜಯ, ಕುಮಾರವ್ಯಾಸಭಾರತಗಳಲ್ಲಿ ಈ ಪ್ರಸಂಗ ಬರುತ್ತದೆ. ಷಡಕ್ಷರದೇವ ಎಂಬ ಕವಿ ಭಾರವಿಯಂತೆ ಕನ್ನಡದಲ್ಲಿ 'ಶಬರಶಂಕರ ವಿಳಾಸಂ' ಎಂಬ ಮಹತ್ವದ ಕೃತಿಯನ್ನು ರಚಿಸಿದ್ದಾನೆ.

ಇಂದ್ರಕೀಲಪರ್ವತದಲ್ಲಿ ಅರ್ಜನನು ತಪ್ಸಸು ಮಾಡಿ ಪರಶಿವನಿಂದ ಪಾಶುಪತಾಸ್ತ್ರವನ್ನು ಪಡೆದುಕೊಂಡ ಪ್ರಸಂಗ ಕಿರಾತಾರ್ಜುನೀಯದ ಕಥಾವಸ್ತು. ಇಲ್ಲಿ ಮೂಕದಾನವ ಮಾಯವರಾಹವನ್ನು ಶಿವ-ಅರ್ಜುನರು ಬೇಟೆಯಾಡುತ್ತಾರೆ. ಕಿರಾತಾರ್ಜುನೀಯದ ಹಿನ್ನೆಲೆ ಬಹು ರೋಚಕದ ಸನ್ನಿವೇಶ. ಅಲೌಕಿಕತೆಯಲ್ಲಿ 'ಶಂಕರ ಶಬರ ವೇಶವನ್ನು ಧರಿಸಿ ಪಾಶುಪತಾಸ್ತ್ರಕ್ಕಾಗಿ ತಪಸ್ಸನ್ನು ಮಾಡುತ್ತಿದ್ದ ಅರ್ಜುನನನ್ನು ಉದ್ಧಾರ ಮಾಡಿದ ಕಥೆಯಾಗಿದೆ'. ಈ ಪ್ರಸಂಗಕ್ಕೆ ಮಹಾಭಾರತವೇ ಮೂಲ. ಕೌರವನ ಕಪಟತನಕ್ಕೆ ಸೋತು ವನವಾಸಕ್ಕೆ ಹೋದ ಪಾಂಡವರು ಪರಸ್ಪರ ಮಾತನಾಡುತ್ತ, ತಮ್ಮ ದುರವಸ್ಥೆ ತೊಡಿಕೊಳ್ಳುತ್ತ ದ್ವೈತವನದಲ್ಲಿ ತಂಗಿದರು. ದ್ರೌಪದಿ, ಭೀಮಸೇನರು ತಮ್ಮ ಸ್ಥಿತಿಗೆ ನೊಂದು ನಿರ್ವಿಕಾರವಾಗಿ ಕುಳಿತ ಧರ್ಮರಾಯನನ್ನು ಮತ್ತೆ ರಾಜ್ಯವನ್ನು ಪಡೆದುಕೊಳ್ಳುವ ಕ್ಷಾತ್ರ ವೃತ್ತಿಯನ್ನೇಕೆ ಕೈಗೊಳ್ಳಬಾರದೆಂದು ವಾದಿಸುವರು. ಇವರ ಮನೋಗತದ ಬಯಕೆಗೆ ಸ್ಪಂದಿಸಿದರೂ ಧರ್ಮರಾಯನು ಮತ್ತೆ ತಿಳಿಸುತ್ತಾ ಶತೃಗಳು ಪ್ರಬಲವಾಗಿರುವಾಗ ನಾವು ಈ ಕಾಡಿನಲ್ಲಿ ವನವಾಸದ ದಿನಗಳನ್ನು ಬಿಟ್ಟು ಕ್ಷಾತ್ರ ವೃತ್ತಿ ಈಗ ವಿನಾಶದ ಸ್ವರೂಪವಾಗುತ್ತದೆಂದು ಸಮಾಧಾನ ಹೇಳಿದನು. ಅದೇ ಸಮಯಕ್ಕೆ ವ್ಯಾಸ ಮಹರ್ಷಿಗಳು ಆಗಮಿಸಿ ಇವರ ಆತಿಥ್ಯವನ್ನು ಸ್ವೀಕರಿಸಿದರು. ಪಾಂಡವರ ದಾರುಣಕತೆ, ಭಯ, ಶಂಕೆಗಳನ್ನು ತಿಳಿದ ವ್ಯಾಸರು ಧರ್ಮರಾಯನಿಗೆ ಮಂತ್ರೋಪದೇಶ ಮಾಡಿ, ಅದನ್ನು ಧರ್ಮರಾಯನು ಅರ್ಜುನನಿಗೆ ಉಪದೇಶಿಸಿ, ಅವನನ್ನು ಇಂದ್ರ ಮತ್ತು ಶಿವನಿಂದ ದಿವ್ಯಾಸ್ತ್ರಗಳನ್ನು ಪಡೆಯುವ ತಪಸ್ಸಿಗೆ ನಿಯೋಜಿಸಲು ತಿಳಿಸುವನು.

ದ್ವೈತವನ ಬಿಟ್ಟು ಕಾಮ್ಯಕವನಕ್ಕೆ ತೆರಳಲು ಪಾಂಡವರಿಗೆ ವ್ಯಾಸರು ಸಲಹೆ ನೀಡಿದರು. ನಂತರ ಧರ್ಮರಾಯ ತನ್ನ ಸಹೋದರ ಅರ್ಜುನನನ್ನು ಕರೆದು 'ಭವಿಷ್ಯದಲ್ಲಿ ರಾಜ್ಯಕ್ಕಾಗಿ ಯುದ್ಧವಾದರೆ ಕೌರವರ ಪಾಳೆಯದಲ್ಲಿ ವೀರರಾದ ಭೀಷ್ಮ, ದ್ರೋಣಾದಿಗಳನ್ನು ಗೆಲ್ಲಲು ದಿವ್ಯಶಕ್ತಿಯ ಅಗತ್ಯವಿದೆಯೆಂದು ಹೇಳಿ, ಅವನನ್ನು ಇಂದ್ರಕೀಲ ಪರ್ವತಕ್ಕೆ ಹೋಗಿ ತಪಸ್ಸು ಮಾಡಿ ದಿವ್ಯಾಸ್ತ್ರಗಳನ್ನು ಪಡೆಯಲು ವ್ಯಾಸರು ತಿಳಿಸಿದ ಮಂತ್ರವನ್ನು ಇವನಿಗೆ ಉಪದೇಶಿಸಿದನು'. ಇದರಿಂದ ಪ್ರೇರಿತನಾದ ಅರ್ಜುನ ಇಂದ್ರಕೀಲದಲ್ಲಿ ತಪಸ್ಸಿಗೆ ಕುಳಿತನು. ಹೀಗೆಯೆ ಒಮ್ಮೆ ಇಂದ್ರನು ವೃದ್ಧ ವಿಪ್ರನ (ಬ್ರಾಹ್ಮಣ) ವೇಷಧರಿಸಿ ಬಂದು ಅರ್ಜುನನ ತಪಸ್ಸನ್ನು ಅಲ್ಲಗಳೆಯಲೆತ್ನಿಸಿದನು. ಯಾವ ಕಪಟತನಕ್ಕೆ ಬಲಿಯಾಗದ ಅರ್ಜುನನ ಧೈರ್ಯ ಕಂಡ ಇಂದ್ರ ಹರ್ಷಿಸಿ, ಮೈದೋರಿ ಅರ್ಜುನನು ಶಿವನನ್ನು ಕುರಿತು ತಪಸ್ಸು ಮಾಡುವಂತೆ ಸೂಚಿಸಿ ಮರೆಯಾಗುತ್ತಾನೆ. ಈ ಅರ್ಜುನನ ತಪದ ಪರಿ ನೋಡಿ ಭೀತಿಗೊಂಡ ಇಂದ್ರಕೀಲದ ಮುನಿಗಳು ಕೈಲಾಸಕ್ಕೆ ಹೋಗಿ ಶಿವನಿಗೆ ಮೊರೆಯಿಡುತ್ತಾರೆ. ಇವನ ಮನೋಗತ ಅರಿತ ಶಿವನು ಋಷಿಗಳಿಗೆ ಅಭಯವನ್ನಿತ್ತು ಕಳುಹಿಸಿದನು. ತರುವಾಯ ಶಿವನು ಪಾರ್ವತಿಯೊಡನೆ ಶಿವಗಣ, ದೇವಗಣಗಳೊಡನೆಯೂ, ಕಿರಾತ ವೇಷದಲ್ಲಿ ಇಂದ್ರಕೀಲ ಪರ್ವತದ

ತಪ್ಪಲಿಗೆ ಬರುವನು. ಅದೇ ಸಮಯಕ್ಕೆ ಮೂಕದಾನವೆಂಬ ರಾಕ್ಷಸನು ಭಯಂಕರ ವರಾಹಕಾರದಿಂದ ಅರ್ಜುನನಿದ್ದ ಜಾಗಕ್ಕೆ ಬರುತ್ತದೆ. ಅರ್ಜುನ ಮತ್ತು ಕಿರಾತ ರೂಪಿ ಶಿವ ಏಕಕಾಲದಲ್ಲಿ ಬಾಣ ಪ್ರಯೋಗ ಮಾಡಿದಾಗ ಹಂದಿ ಸತ್ತು ಬೀಳುವುದು. ಸತ್ತ ಹಂದಿಯನ್ನು ಮೊದಲು ಹೊಡೆದವರು ಯಾರು, ಯಾರ ಬಾಣದಿಂದ ಎಂಬ ವಿವಾದದಿಂದ ಕೊನೆಗೆ ಯುದ್ಧವಾಯಿತು. ತನ್ನ ಅಸ್ತ್ರಗಳೆಲ್ಲ ವಿಫಲವಾದಾಗ ಅರ್ಜುನ ಶಿವನೊಡನೆ ಮಲ್ಲಯುದ್ಧಕ್ಕೆ ತೊಡಗಿ, ಕಿರಾತ ಮುಷ್ಟಿಘಾತಕ್ಕೆ ಮೂರ್ಛೆ ಬೀಳುವನು. ಮೂರ್ಛೆ ತಿಳಿದು, ಮರಳುಲಿಂಗವನ್ನು ಪೂಜಿಸುವನು. ಹೂಗಳು ಶಬರನ ತಲೆಯಲ್ಲಿರುವುದನ್ನು ಕಂಡು ಅರ್ಜುನನು ಚಕಿತನಾದನು. ಶಿವನು ಅರ್ಜುನ ಏಳು, ನನ್ನನ್ನು ನೋಡು! ನಿನ್ನ ಧೈರ್ಯ ಶೌರ್ಯಾದಿಗಳನ್ನು ನೋಡಿ ನಾನು ಮೆಚ್ಚಿದೆ. ನಿನಗೆ ಸಮಾನರಾದ ಕ್ಷತ್ರಿಯರಿಲ್ಲ. ತೇಜಸ್ಸು, ವೀರ್ಯದಲ್ಲಿ ನನಗೆ ಸಮಾನನಾದವನು ನೀನು ಎನ್ನುತ್ತಾನೆ. ಕೂಡಲೆ ಅರ್ಜುನನಿಗೆ ಕಿರಾತನೇ ಶಿವನೆಂಬ ಸತ್ಯ ತಿಳಿಯುತ್ತದೆ. ಅರ್ಜುನ ಶಿವನ ಪಾದದ ಮೇಲೆ ಬಿದ್ದು ಹೊರಳಿ ಕ್ಷಮೆ ಯಾಚಿಸುವನು. ಶಿವ ಅರ್ಜುನನನ್ನು ಅಪ್ಪಿ, ಪರಾಕ್ರಮವನ್ನು ಮೆಚ್ಚಿಕೊಂಡು ಪಾಶುಪತಾಸ್ತ್ರವನ್ನು ಕರುಣಿಸಿ ಮರೆಯಾಗುವನು. ಸಕಲ ದೇವತೆಗಳೂ ತಮ್ಮಲ್ಲಿದ್ದ ದಿವ್ಯಾಸ್ತ್ರಗಳನ್ನು ಅರ್ಜುನನಿಗೆ ನೀಡುವರು. ಈ ಪ್ರಸಂಗವು ಭಾರತದ ಅನೇಕ ಭಾಷೆಗಳಲ್ಲಿ ವ್ಯಕ್ತಪಟ್ಟಿದೆ. ಹೀಗಾಗಿ ಸಂಸ್ಕೃತ ಮತ್ತು ಕನ್ನಡದ ಕೆಲವು ಆಯ್ದ ಕಾವ್ಯಗಳಲ್ಲಿ (ಭಾರವಿ, ಪಂಪ, ಕುಮಾರವ್ಯಾಸ, ವಿರೂಪಾಕ್ಷಪಂಡಿತ, ಷಡಕ್ಷರದೇವ) ಈ ಪ್ರಸಂಗವನ್ನು ಇಲ್ಲಿ ಸಮೀಕ್ಷಿಸಲಾಗುವುದು.

೧. ಭಾರವಿಯ ಕಿರಾತಾರ್ಜುನೀಯ : ಭಾರವಿಯ ಸಂಸ್ಕೃತ ಕಿರಾತಾರ್ಜುನೀಯದಲ್ಲಿ ಬೇಟೆಯ ಪ್ರಸಂಗದ ಸಮೃದ್ಧತೆಯನ್ನು ಕಾಣಬಹುದು. ಭಾರವಿ ಎಂದರೆ ಬೆಳಗುವ ಸೂರ್ಯ. ಇವನು ಚಾಲುಕ್ಯ ರಾಜನಾದ ವಿಷ್ಣುವರ್ಧನನ ಗೆಳೆಯನಾಗಿದ್ದ. ಒಮ್ಮೆ ವಿಷ್ಣುವರ್ಧನನೊಡನೆ ಭಾರವಿ ಬೇಟೆಗೆ ಹೋಗಿರುವಾಗ ಅವನ ಒತ್ತಾಯದಿಂದ ಅನಿವಾರ್ಯವಾಗಿ ಮಾಂಸವನ್ನು ತಿನ್ನಬೇಕಾಗಿ ಬಂದಿತು. ಆ ದೋಷದ ಪ್ರಾಯಶ್ಚಿತ್ತಕ್ಕಾಗಿ ಆತನು ತೀರ್ಥಯಾತ್ರೆ ಕೈಗೊಂಡು ದೇಶಾಟನೆ ಮಾಡಿ ಕಡೆಗೆ ದುರ್ವಿನೀತನೆಂಬ ರಾಜನ ಆಸ್ಥಾನವನ್ನು ಸೇರಿದನಂತೆ.

ಕಿರಾತಾರ್ಜುನೀಯ ಕಥೆ ಮಹಾಭಾರತದ ವಸ್ತುವಾಗಿದ್ದು, ಭಾರವಿ ಅದನ್ನು ಆಯ್ದುಕೊಂಡು ಬರೆದುದು ವಿಚಿತ್ರವಾಗಿದೆ. ಮಾವನ ಮನೆಯ ವಾಸ ಮನುಷ್ಯರಿಗೆ ಸ್ವರ್ಗದ ಹಾಗೆ - ಮೂರು ಅಥವಾ ಐದು, ಹೆಚ್ಚೆಂದರೆ ಏಳುದಿನ ಮಾತ್ರ ಇರುವುದಾದರೆ. ಆಗ ತುಪ್ಪ, ಮೊಸರು, ಹಾಲು, ಜೇನು, ಭಕ್ಷ್ಯ-ಭೋಜ್ಯ, ಬೇಕಾದಷ್ಟು ಪ್ರವಾಹದಂತೆ ಹರಿಯುತ್ತದೆ. ಆದರೆ ಒಂದೇ ಒಂದು ದಿನ ಹೆಚ್ಚಾಗಿ ನಿಂತರೂ ಪಾದರಕ್ಷೆಯ ರುಚಿಯೇ ಸಿಕ್ಕುವುದು. ಹೊಲವನ್ನು ಕಾಯುವ ಕೆಲಸ ಮಾಡುತ್ತಾ, ಭಾರವಿ ಹೊತ್ತು ಕಳೆಯಲು ಕಿರಾತಾರ್ಜುನೀಯವನ್ನು ಬರೆದ. ಬಡತನದಿಂದ ಬೇಯುತ್ತಿದ್ದ ಹೆಂಡತಿಯನ್ನು ಸಮಾಧಾನ ಪಡಿಸಲು ಒಂದು ಶ್ಲೋಕವನ್ನು ನೂರು ಹೊನ್ನುಗಳಿಗೆ ಮಾರಿಸಿದನಂತೆ.

ಭಾರವಿ ಹೆಂಡತಿಯ ಕಾಟವನ್ನು ತಾಳಲಾರದೆ ದ್ರವ್ಯಾರ್ಜನೆಗೆಂದು ಹೊರಟ. ದಾರಿ ಮಧ್ಯದಲ್ಲೊಂದು ತಾವರೆ ಕೊಳ ಕಂಡಿತು. ಅಲ್ಲಿಯೇ ಸ್ವಲ್ಪ ಪ್ರಯಾಣ ನಿಲ್ಲಿಸಿ ಒಂದು ತಾವರೆಲೆಯ ಮೇಲೆ ಆಗಲೇ ಹೇಳಿದ ಶ್ಲೋಕವನ್ನು ಬರೆದು ತೇಲಿ ಬಿಟ್ಟನು. ಇದು ಬೇಟೆಗೆಂದು ಬಂದಿದ್ದ ರಾಜನಿಗೆ ಸಿಕ್ಕಿತು. ಅವನು ಅದನ್ನು ಮೆಚ್ಚಿ ಅರಮನೆಯಲ್ಲಿ ತನ್ನನ್ನು ಕಾಣಬೇಕೆಂದು ಕವಿಗೆ ಹೇಳಿ ಕುದುರೆಯ ಮೇಲೆ ಹೊರಟುಹೋದನು. ದೊರೆ ಅರಮನೆಯಲ್ಲಿ ತನ್ನ ಮಲಗುವ ಕೋಣೆಯಲ್ಲಿಯೇ ಅದನ್ನು ಸುವರ್ಣಾಕ್ಷರಗಳಲ್ಲಿ ಕೆತ್ತಿಸಿಟ್ಟನು. ರಾಜನು ಒಂದು ದಿನ ಶಯ್ಯಾಗೃಹಕ್ಕೆ ಹಿಂದಿರುಗಿ ಬಂದಾಗ ಪತ್ನಿ ಮಂಚದ ಮೇಲೆ ಪುರುಷನೊಬ್ಬನ ಜೊತೆಯಲ್ಲಿ ಮಲಗಿ ನಿದ್ರಿಸುತ್ತಿದ್ದಳು. ಕೂಡಲೆ ಅವರಿಬ್ಬರನ್ನು ಕತ್ತರಿಸಲು

ಕತ್ತಿಯನ್ನೆತ್ತಿದಾಗ ಭಾರವಿಯ ಶ್ಲೋಕ ಕಾಣಿಸಲು, ಒಂದು ಕ್ಷಣ ತಡೆದು ಆವರನ್ನೆಬ್ಬಿಸಿದನು. ಪುರುಷನು ತನ್ನ ಪುತ್ರನೇ ಎಂಬುದು ತಿಳಿದೊಡನೆ ಅವನು ಶ್ಲೋಕದ ನೀತಿಯನ್ನು ಮತ್ತೆ ಮತ್ತೆ ಕೊಂಡಾಡಿ ಭಾರವಿಯನ್ನು ಕರೆಯಿಸಿ ಸನ್ಮಾನ ಮಾಡಿದನು.

ಭಾರವಿ ಮಹಾಭಾರತದ ಕಥಾವಸ್ತುವನ್ನು ಆಯ್ದುಕೊಂಡು, ವನಪರ್ವತದಲ್ಲಿ ಬರುವ ಕೆಲವೇ ಭಾಗವನ್ನು ಚಿತ್ರಿಸಿದ್ದಾನೆ. "ಪಾಶುಪತಾಸ್ತ್ರವನ್ನು ಪಡೆಯಲು ಅರ್ಜುನನು ಹೊರಡುವ ಸನ್ನಿವೇಶ, ಅದರ ಹಿನ್ನಲೆ, ಅರ್ಜುನನ ತಪಸ್ಸಾಧನೆ ಮತ್ತು ಸಿದ್ಧಿ - ಇದೇ ಕಾವ್ಯದ ಮುಖ್ಯ ಸೂತ್ರ." ಭಾರವಿಯು ತನ್ನ ಕಾವ್ಯವನ್ನು ಹದಿನೆಂಟು ಅಧ್ಯಾಯಗಳಲ್ಲಿ, ಹದಿನೆಂಟು ವಿಧವಾದ ವರ್ಣನೆಗಳಲ್ಲಿ ರಚಿಸಿದ್ದಾನೆ. ಜೂಜಾಡಿ ರಾಜ್ಯ ಭ್ರಷ್ಟರಾದ ಪಾಂಡವರು ಪ್ರತಿಜ್ಞಾಪಾಲನೆಗಾಗಿ ದ್ವೈತವನಕ್ಕೆ ಬಂದಿದ್ದಾರೆ. ಅವರಿಗೆ ಕೌರವರಿಂದಾದ ಅನ್ಯಾಯವೂ, ಅಪಮಾನವೂ ಒಳಗೊಳಗೇ ಶೂಲದಂತೆ ಕೊರೆಯುತ್ತಿದ್ದು, ಮತ್ತೆ ರಾಜ್ಯ ಪಡೆಯಲು ಹವಣಿಸುತ್ತಾರೆ. ದುರ್ಯೋಧನನಲ್ಲಿ ಬದಲಾವಣೆಗಳೇನಾಗಿವೆಂಬುದನ್ನು ಅರಿಯಲು ಒಬ್ಬ ವನೇಚರನನ್ನು ಗೂಢವಾಗಿ ಹಸ್ತಿನಾವತಿಗೆ ಕಳುಹಿಸುತ್ತಾರೆ.

ಸರ್ಗ ಆರರಲ್ಲಿ ಇಂದ್ರಕೀಲ ಪರ್ವತಕ್ಕೆ ಅರ್ಜುನ ಹತ್ತುವ ವರ್ಣನೆ, ತಪಸ್ಸಿನ ವರ್ಣನೆ, ವನರಕ್ಷಕರು ತಮ್ಮ ಒಡೆಯನಾದ ದೇವೇಂದ್ರನಿಗೆ ಮೊರೆಯಿಡುತ್ತಾರೆ. ಅವನು (ಇಂದ್ರನು) ತಪಸ್ಸನ್ನು ಮುರಿಯಲು ಅಪ್ಸರ ಸ್ತ್ರೀಯರನ್ನು ಕುಳುಹಿಸುವುದು, ಗಂಧರ್ವರು ಮತ್ತು ಅಪ್ಸರ ಸ್ತ್ರೀಯರು ಇಂದ್ರಕೀಲದಲ್ಲಿ ಬೀಡು ಬಿಡುವುದು, ಪುಷ್ಪಾಚಯ ಮತ್ತು ಜಲಕ್ರೀಡೆಗಳ ವರ್ಣನೆ ಎಂಟನೇ ಸರ್ಗದಲ್ಲಿದೆ. ಅರ್ಜುನ ಶಿವನನ್ನು ಕುರಿತು ತಪಸ್ಸು ಮಾಡುವುದು, ಸಿದ್ಧತಾಪಸರಿಗೆ ಅವರಿಂದ ಒದಗಿದ ಬೇಗೆ ; ಅವರು ಶಿವನಲ್ಲಿ ಮೊರೆಯಿಡುವುದು; ಶಿವನು ಅವರನ್ನು ಕಳುಹಿಸಿ ಹಂದಿಯ ರೂಪದಿಂದ ಅರ್ಜುನನ್ನು ಕೊಲ್ಲ ಬರುತ್ತಿದ್ದ ಮೂಕನೆಂಬ ರಾಕ್ಷಸನನ್ನು ಕೊಂದು ಭಕ್ತಾನುಗ್ರಹ ಮಾಡುವ ಉದ್ದೇಶದಿಂದ ಕಿರಾತ ರೂಪಿನಲ್ಲಿ ಬೇಡವಡೆಯೊಡನೆ ಅರ್ಜುನನ ಆಶ್ರಮಕ್ಕೆ ಬರುತ್ತಾನೆ.

ಸರ್ಗ ಹದಿನೇಳರಲ್ಲಿ ಕಿರಾತಾರ್ಜುನರ ಯುದ್ಧ ವರ್ಣನೆಯಿದೆ. ಕಿರಾತಾರ್ಜುನರ ಬಾಹುಯುದ್ಧ; ಅರ್ಜುನನ ಸಾಹಸಕ್ಕೆ ಮೆಚ್ಚಿ ಶಿವನು ಪ್ರತ್ಯಕ್ಷನಾಗುತ್ತಾನೆ. ಇಂದ್ರಾದಿಗಳೂ ಬರುತ್ತಾರೆ. ಅರ್ಜುನನು ಭಗವಂತನ ಸ್ತೋತ್ರ ಮಾಡಿ ವರಗಳನ್ನು ಬೇಡಿದಾಗ, ಪಾಶುಪತಾಸ್ತ್ರವನ್ನು ಶಿವನು ಅರ್ಜುನನಿಗೆ ಉಪದೇಶಿಸುತ್ತಾನೆ. ಇಂದ್ರಾದಿಗಳೂ ದಿವ್ಯಾಸ್ತ್ರಗಳನ್ನು ಕೊಡುತ್ತಾರೆ. ಕೃತ ಕೃತ್ಯನಾದ ಅರ್ಜುನನು ಯುಧಿಷ್ಠರನಲ್ಲಿಗೆ ಬರುವ ದೃಶ್ಯವಿದೆ.

ಮಹಾಭಾರತದ ಜಾಡನ್ನೇ ತುಳಿದ ಭಾರವಿ ಲಕ್ಷಣ, ಪ್ರಸಂಗಗಳಲ್ಲಿ ಬದಲಾವಣೆ ಮಾಡಿಕೊಂಡಿದ್ದಾನೆ. ಧರ್ಮರಾಯ, ದ್ರೌಪದಿ ಮತ್ತು ಭೀಮರ ಮಧ್ಯೆ ದ್ವೈತವನದಲ್ಲಿ ನಡೆವ ಸಂವಾದಕ್ಕೆ ಇಲ್ಲಿ ಜೀವಕಳೆ ತುಂಬ ವ್ಯಾಸರ ದೃಷ್ಟಿಯನ್ನು ಪ್ರಬಲಗೊಳಿಸುತ್ತಾನೆ. ವ್ಯಾಸರು ಮಂತ್ರವನ್ನು ಮೂಲದಲ್ಲಿ ಮೊದಲು ಧರ್ಮರಾಯನಿಗೆ ಉಪದೇಶಿಸಿದರೆಂದೂ, ಧರ್ಮರಾಯ ಅನಂತರ ಅರ್ಜುನನಿಗೆ ಉಪದೇಶಿಸಿದನೆಂದೂ ಇದೆ. ಆದರೆ ಭಾರವಿಯಲ್ಲಿ ವ್ಯಾಸರು ಅರ್ಜುನನಿಗೆ ನೇರವಾಗಿ ಉಪದೇಶಿಸಿದರೆಂದು ಬರುತ್ತದೆ. ಮಹಾಭಾರತದಲ್ಲಿ ಅರ್ಜುನನು ಮಕ್ಷನಬಲದಿಂದ ಇಂದ್ರಕೀಲಕ್ಕೆ ಹೋದನೆಂದಿದ್ದರೆ ಭಾರವಿಯ ಕಾವ್ಯದಲ್ಲಿ ಮಕ್ಷನ ಸಹಾಯದಿಂದ ಇಂದ್ರಕೀಲಕ್ಕೆ ಹೋದನೆಂದು ಇದೆ. ಹಿಮಾಲಯ, ಗಂಧಮಾದನ, ಇಂದ್ರಕೀಲಗಳ ವರ್ಣನೆಯನ್ನು ಭಾರವಿಯ ವಿಸ್ತಾರವಾಗಿ ಮಹಾಕಾವ್ಯದ ಶೈಲಿಯಲ್ಲಿ ರಚಿಸಿದ್ದಾನೆ. ಅರ್ಜುನನ ತಪದಾರಂಭದಲ್ಲೇ ಇಂದ್ರನು ವಿಪ್ರವೇಷದಲ್ಲಿ ಅರ್ಜುನನ ಸ್ಥೈರ್ಯವನ್ನು ಮೂಲಭಾರತದಲ್ಲಿ

ಪರೀಕ್ಷಿಸುತ್ತಾನೆ. ಆದರೆ ಭಾರವಿಯಲ್ಲಿ ಇಂದ್ರನಿಂದ ನಿಯೋಜಿತರಾದ ರಂಭಾಪ್ಸರೆಯರು ಬಂದು ಅರ್ಜುನನ ತಪೋಭಂಗಕ್ಕೆ ಯತ್ನಿಸಿ ವಿಫಲರಾಗುತ್ತಾರೆ. ಮಹಾಭಾರತದಲ್ಲಿ ಶಿವನು ಗಣಗಳೊಂದಿಗೆ ಬಂದರೂ ಯುದ್ಧ ನಡೆಯುವುದು ಕಿರಾತ ಮತ್ತು ಅರ್ಜುನ ಇಬ್ಬರಿಗೆ ಮಾತ್ರ, ಉಳಿದವರೆಲ್ಲ ಪ್ರೇಕ್ಷಕರು. ಆದರೆ ಭಾರವಿಯಲ್ಲಿ ಅರ್ಜುನನಿಗೂ ಕಿರಾತ - ಕಿರಾತ ಗಣಗಳಿಗೂ ಸಾಮೂಹಿಕ ಯುದ್ಧ ಜರುಗುತ್ತದೆ. ಕೊನೆಯ ಕಾಳಗವು ಭಾರವಿಯಲ್ಲಿ ವಿಶಿಷ್ಟರೂಪ ತಾಳಿದೆ. ಇಲ್ಲಿ ಶಿವನ ಮುಷ್ಟಿಘಾತದಿಂದ ಮೂರ್ಛೆಹೋದ ಅರ್ಜುನನಿಗೆ ಎಚ್ಚರವಾದಾಗ ತಾನು ಯಾವ ಹೂಗಳಿಂದ ಶಿವಲಿಂಗವನ್ನು ಪೂಜಿಸಿದ್ದನೋ ಅವು ಕಿರಾತನ ಮುಡಿಯಲ್ಲಿರುವುದು ಕಂಡು, ಕಿರಾತನೇ ಶಿವನೆಂಬುದು ಅರಿವಾಗುತ್ತದೆ. ಆದರೆ ಭಾರವಿಯು ಕಿರಾತನ ಹತಿಯಿಂದ ತನ್ನ ಕಾಲ ಮೇಲೆ ಬಿದ್ದ ಅರ್ಜುನನಿಗೆ ಕೂಡಲೇ ಶಿವನು ಸುಪ್ರೀತನಾಗಿ ಮೈದೋರುವುದು ಗಮನಾರ್ಹ.

೨. **ಪಂಪನ ವಿಕ್ರಮಾರ್ಜುನವಿಜಯ :** ಪಂಪನ ವಿಕ್ರಮಾರ್ಜುನವಿಜಯದಲ್ಲಿ ಅರ್ಜುನನ ವಿಜಯದ ಅಂಶ ಪ್ರಧಾನವಾಗಿದೆ. ಕವಿಗಳಿಗೆ ಕಿರಾತಾರ್ಜುನೀಯ ಶಿವಲೀಲೆಯಾಗಿ ತೋರಿದರೆ, ಪಂಪನಿಗೆ ಧಾರ್ಮಿಕ ದೃಷ್ಟಿಗಿಂತ ಲೌಕಿಕದ ಉಜ್ವಲ ದೃಷ್ಟಿ ಮುಖ್ಯವಾಗಿದೆ. ಪಂಪನು ಮೂಲಭಾರತ, ಅಲ್ಲಲ್ಲಿ ಭಾರವಿಯ ಕಾವ್ಯದ ನೆರಳನ್ನು ಆಶ್ರಯಿಸಿರುವುದು ಸ್ಪಷ್ಟ. ಆದರೂ ಅದು ಸ್ವತಂತ್ರ ಸೃಷ್ಟಿಯಾಗಿದೆ.

ದ್ವೈತವನಕ್ಕೆ ವ್ಯಾಸರು ಬರುವುದು, ಅರ್ಜುನನಿಗೆ ಪಾಶುಪತಾಸ್ತ್ರ, ಮಂತ್ರೋಪದೇಶ ಕೊಟ್ಟು ಮಾಡುವುದಾಗಿತ್ತು. ಅರ್ಜುನ ಗುಹ್ಯಕನ ಹೆಗಲನ್ನೇರಿ ವಿದ್ಯಾಧರನಂತೆ ಕೈಲಾಸದ ತಪ್ಪಲಿಗೆ ಬರುತ್ತಾನೆ. ಅರ್ಜುನನು ಇಂದ್ರನ ಸಿಂಹಾಸನಕ್ಕಾಗಿ ತಪಸ್ಸು ಮಾಡುವನೆಂದು ಹೆದರಿದ ಇಂದ್ರನು ರಂಭಾಪ್ಸರೆಯರನ್ನು ತಪೋಭಂಗ ಮಾಡಲು ಕಳುಹಿಸುವನು. ಬಂದ ರಂಭಾಪ್ಸರೆಯರು ತಪೋಭಂಗ ಮಾಡುವಲ್ಲಿ ವಿಫಲರಾಗಿ ಹಿಂದಿರುಗುವರು. ಇಂದ್ರನೇ ವಿಪ್ರವೇಷದಲ್ಲಿ ಬಂದು ಅರ್ಜುನನ ತಪೋನಿಶ್ಚಲತೆಯನ್ನು ಮತ್ತು ಉದ್ದೇಶವನ್ನು ಅರಿತು ಹರ್ಷಿತನಾಗಿ ಆಶೀರ್ವದಿಸಿದನು. ಅರ್ಜುನನ ತಪಸ್ಸಿನಿಂದ ಭಯಭೀತರಾದ ಋಷಿಗಳ ಪ್ರಾರ್ಥನೆಯ ಮೇಲೆ ಪರಶಿವನು ಅರ್ಜುನನಿಂದಲೇ ವರಾಹ ರೂಪದಲ್ಲಿದ್ದ ಮೂಕದಾನವನನ್ನು ಕೊಲ್ಲಿಸಿ, ಅವನ ಬಲ್ಲಾಳತನವನ್ನು ಪರೀಕ್ಷಿಸಲು ಕಿರಾತ ವೇಷವನ್ನು ತಾಳಿ ಗಿರಿಜೆ ಮತ್ತು ಗಣಸಮೂಹದೊಡನೆ ಅಲ್ಲಿಗೆ ಬರುತ್ತಾನೆ. ಮೂಕದಾನವ ಅರ್ಜುನ ಮತ್ತು ಶಿವನಿಂದ ಏಕಕಾಲದಲ್ಲಿ ಬಿಡಲ್ಪಟ್ಟ ಬಾಣಗಳಿಂದ ಮೃತ ಹೊಂದುತ್ತದೆ. ಆ ಹಂದಿ ಕೊಂದವರು ಯಾರೆಂದು ವಿವಾದ ಬೆಳೆದು ಸಾಮೂಹಿಕ ಯುದ್ಧವಾಗಿ ಅರ್ಜುನನ ಪರಾಕ್ರಮದಿಂದ ಕಿರಾತಸೇನೆ ನುಚ್ಚು ನೂರಾಗುತ್ತದೆ. ನಂತರ ಮಲ್ಲಕಾಳಗದಲ್ಲಿ ಅರಿಗನು (ಅರ್ಜುನನು) ಹರನನ್ನು ನೆಲಕ್ಕೆ ಕೆಡವಿ ಗಂಟಲನ್ನು ಮೆಟ್ಟುತ್ತಾನೆ. ಆಗ ಶಿವನು ತನ್ನ ಸ್ವಸ್ವರೂಪವನ್ನು ತೋರಲು ಅರ್ಜುನನು ಬೆದರಿ ತಾನು ಮಾಡಿದ ಅಪರಾಧಕ್ಕಾಗಿ ಕ್ಷಮೆಯನ್ನು ಯಾಚಿಸಿದಾಗ ಶಿವನು ಅವನ ಪರಾಕ್ರಮಕ್ಕೆ ಮೆಚ್ಚಿ ಪಾಶುಪತಾಸ್ತ್ರವನ್ನು ಕೊಡುವ ಸಂದರ್ಭವಿದೆ.

ಪಂಪನು ತನ್ನ ಕಥಾನಾಯಕ ಶಿವನೊಡನೆ ಕಾದಿ ಸೋತನೆಂದು ತಿಳಿಸಲು ಇಚ್ಛಿಸುವುದಿಲ್ಲ. ಊರ್ವಶಿ ಮೊದಲಾದ ದಿವ್ಯಸ್ತ್ರೀಯರು ಅರ್ಜುನನನ್ನು ಮರಳು ಮಾಡದೆ ಅವನ ಹಾವಭಾವ ಗುಂಡು ಗಾಡಿಗೆ ತಾವೇ ಮರುಳಾದರು. ಪಂಪನು ಅರ್ಜುನನ ಗುಣ, ಶಕ್ತಿಆದರ್ಶವನ್ನು, ಕಾಮಾರಿಯನ್ನು ಜಯಿಸಬಹುದೆಂಬ ಸಾಧ್ಯತೆ ಸೂಚಿಸಿದ ನಾಯಕನ ಹಿರಿಮೆ ಹೊಗಳುವನು. ಪಂಪ, ಭಾರವಿ ಕಾವ್ಯದಿಂದ ಪ್ರಭಾವಿತನಾದರೂ ಕೊನೆಯಲ್ಲಿ ತನ್ನ ಮನೋಧರ್ಮ, ಉದ್ದೇಶಗಳೆರೆಡು ಸ್ವತಂತ್ರವಾಗಿ ನಿರೂಪಿಸಿದ್ದಾನೆ.

ಪಂಪನು ವಿಕ್ರಮಾರ್ಜುನವಿಜಯದ ಅಷ್ಟಮಾಶ್ವಾಸದಲ್ಲಿ ಕಿರಾತಾರ್ಜುನೀಯ ಪ್ರಸಂಗವನ್ನು ತಂದಿದ್ದಾನೆ. ಇಲ್ಲಿ ಪಾರಾಶರಮುನಿಯು ಹೇಳಿದಂತೆ ಶಂಕರನನ್ನು ಆರಾಧಿಸಲು ಅರ್ಜುನ ಅಡವಿಗೆ ಬರುತ್ತಾನೆ. ಅವನ ತಪೋಜ್ವಾಲೆಯಿಂದ ಇಂದ್ರಕೀಲದ ತಪಸ್ವಿಗಳು ತಪಗಳು ಬೆಂದು ನಾಶವಾಗಲು ಎಲ್ಲರೂ ಕೈಲಾಸಕ್ಕೆ ಹೋಗಿ ಅರ್ಜುನನ ತಪಃ ಪ್ರಭಾವವನ್ನು ಈಶ್ವರನಿಗೆ ತಿಳಿಸಿದ ಬಗೆ ಹೀಗಿದೆ: "ವ|| ಅಂತು ಗ್ರೋಗ್ರತಪಂಗೆಯ್ಕೆ ತತ್ತಪಸ್ತಪನ ವಿಪುಳ ಮರೀಚಿಗಳ್ ತಮಗೆ ತಪೋವಿಘಾತಮಂ ಮಾಡುವುದುಮಿಂದ್ರಕೀಲ ನಗೇಂದ್ರದ . ತಪೋಧನರೆಲ್ಲಂ ನೆರೆದು ಬಂದು ಕೈಲಾಸದೊಳ್ ವಿಳಾಸಂಬೆರಸು ಗಿರಿಜೆಯೊಳ್ ತಳ್ತಿರ್ದ ಬಾಳೇಂದು ಚೂಡಾಮಣಿಗೆ ಸಾಮಂತ ಚೂಡಾಮಣಿಯ ತಪಃ ಪ್ರಭಾವಮನಿಂತೆಂದು ಬಿನ್ನಪಂಗೆಯ್ದರ್" ಎಂದು ತಿಳಿದು ಬರುತ್ತದೆ.

ಈಶ್ವರನು ದಿವ್ಯಜ್ಞಾನದಿಂದ ಅರ್ಜುನನನ್ನರಿತು ನಕ್ಕು ಬಲ್ಲೆ ಎಂದು ಮುನಿಗಳನ್ನು ಕಳುಹಿಸಿದನು. ದೇವೇಂದ್ರನು ಮೂಕದಾನವನಿಂದಾದ ಕೇಡನ್ನು ತನ್ನೊಡನೆ ವಿಜ್ಞಾಪಿಸಿಕೊಂಡಿದ್ದುದನ್ನು ನೆನೆದು ಮೂಕದಾನವನು ಆದಿವರಾಹ ರೂಪದಲ್ಲಿರುವುದನ್ನರಿತು ಅರ್ಜುನನಿಂದ ಆ ದೈತ್ಯನನ್ನು ಕೊಲ್ಲಿಸುವೆನೆಂದೂ ಅರ್ಜನನೊಡನೆ ಮಾಯಾಯುದ್ಧ ಮಾಡಿ ಅವನ ಸಾಹಸ, ಛಲ, ಬಲ, ಬಲ್ಲಾಳ್ತನಗಳ ಶಕ್ತಿಯನ್ನು ಪರೀಕ್ಷಿಸುವೆನೆಂದೂ ತರುವಾಯ ಅವನಿಗೆ ವರದನಾಗುನೆಂದೂ ಮನಸ್ಸಿನಲ್ಲಿ ಗೊತ್ತುಮಾಡಿಕೊಂಡನು :

ವನಚರನಾಗಿ ಶಂಭು ಗಿರಿಜಾತೆಯನೋತು ಪುಳಿಂದಿ ಮಾಡಿ ನ |
ಚ್ಚಿನ ಗುಹನ ಕಿರಾತಬಲ ನಾಯಕನಾಗಿರೆ ಮಾಡಿ ಭೂತಮು ||
ಳ್ಳನಿತು ಮನೆಯ್ದೆಬೇಡವಡೆ ಮಾಡಿ ಯುಗಾಂತ ಪಯೋಧರಾಳಿ ಭೋಂ|
ಕನೆ ಕವಿವಂದದಿಂ ಕವಿದನಾ ಬನಮಂ ಮೃಗಯಾ ನಿಧಾನಮಂ (೧೪ : ೧೯೬)

ನಂತರ ಶಂಭುವು ಬೇಡನ ರೂಪವನ್ನು ತಾಳಿ ಗಿರಿಜೆಯನ್ನು ಬೇಡತಿಯನ್ನಾಗಿಯೂ, ಗುಹನನ್ನು ಕಿರಾತ ಬಲ ನಾಯಕನನ್ನಾಗಿಯೂ ಎಲ್ಲ ಭೂತಗಳನ್ನು ಬೇಡವಡೆಯನ್ನಾಗಿಯೂ ಮಾಡಿ ಪ್ರಳಯ ಕಾಲದ ಮೇಘವು ಮುತ್ತುವಂತೆ ಆ ವನವನ್ನು ಮುತ್ತಿದನು. ಈ ಪಡೆಯ ಕಳ ಕಳಕ್ಕೆ ಮೂಕದಾನವನು ಕೆರಳಿ ಅತಿ ಭಯಂಕರನಾಗಿ ಸಮುದ್ರಗಳು ಕಲಕುವಂತೆಯೂ ಮಂದರ ಪರ್ವತವು ಅಲುಗುವಂತೆಯೂ ಹೊರಳಾಡಿ ನಕ್ಷತ್ರಗಳು ಉದಿರುವಂತೆ ದಾಡೆಯನ್ನಪ್ಪಳಿಸಿ ನೆಲವನ್ನಲ್ಲಾಡಿಸುತ್ತ ಹೊರಡಲು, ಹಿಂದುಗಡೆಯಿಂದ ಕೃತಕ ಕಿರಾತನು ಅವನನ್ನಟ್ಟಿಸಿಕೊಂಡು ತನ್ನ ಕಡೆಗೆ ಬರುತ್ತಿರುವುದನ್ನು ಧನಂಜಯನು ಕಂಡು ಗಾಂಡೀವಕ್ಕೆ ಅಮೋಘವಾದ ಒಂದು ಬಾಣವನ್ನು ಹೂಡಿ ಆ ಹಂದಿಯ ಮೇಲೆಸೆದನು. ಆ ಬಾಣವು ಹಂದಿಯ ಮುಸುಡಿಯಿಂದ ಬಾಲದವರೆಗೂ ಒಳಗೆ. ಚುಚ್ಚಿಕೊಂಡಿತು; ವೃಷಾಂಕನೆಸೆದ ಬಾಣವು ಹಂದಿಯ ಒಡಲನ್ನು ಸೀಳಿತು. ಇದನ್ನು ಕಂಡು ದೇವತೆಗಳಿಗೆಲ್ಲ ಬಹಳ ಸಂತೋಷವಾಯಿತು.[೮]

ಸತ್ತುಬಿದ್ದ ಮೂಕದಾನವನ ಮೈಯ್ಯಲ್ಲಿದ್ದ ತನ್ನ ಬಾಣವನ್ನು ಅರ್ಜುನನು ತೆಗೆದು ತನ್ನ ಬತ್ತಳಿಕೆಯಲ್ಲಿಟ್ಟುಕೊಂಡು, ಹತ್ತಿರವಿದ್ದ ಪೂಗೊಳಕ್ಕೆ ಹೋಗಿ ಕೈ ಕಾಲನ್ನು ತೊಳೆದುಕೊಂಡು ಬಂದು, ಮರಳಿ ಏಕಪಾದ ತಪದಲ್ಲಿ ನಿಲ್ಲಲು ಆತನ ಬಳಿಗೆ ಗುಹನು ಬಂದು, 'ಅಯ್ಯಾ ತಪಸಿಗಳೆ! ನಿಮ್ಮ ವೇಷವು ವಿಚಿತ್ರವಾಗಿರುವುದು; ನೀವು ತಪಸ್ಸು ಮಾಡುತ್ತಿರುವವರಾದರೂ, ಇಲ್ಲದವರಾದರೂ ನಮ್ಮರಸರು ಹಂದಿಗೆ ಹೊಡೆದ ಬಾಣವನ್ನು ನಿಮ್ಮಿಂದ ತರುವಂತೆ ನನ್ನನ್ನು ಕಳುಹಿಸಿರುವರು ; ತಿಳಿಯದೆ ನೀವು ತಂದಿದ್ದರೂ ನನ್ನೊಡನೆ ಅದನ್ನು ನಮ್ಮರಸರಿಗೆ ಕಳುಹಿಸಿಕೊಡಿರಿ. ನೀವು ತಿಳಿದವರಾಗಿದ್ದರೂ ನಿಮ್ಮಂತೆ ಇತರರೊಡವೆಯನ್ನು ಬಚ್ಚಿಟ್ಟುಕೊಳ್ಳುವವರನ್ನು ಲೋಕದಲ್ಲಿ ಕಾಣೆನು' ಎಂದು

ಕಿರಾತದೂತನು ಮಿತಿ ಮೀರಿ ನುಡಿದುದಕ್ಕೆ ಪರಾಕ್ರಮಧವಳನು ಕೊಪಗೊಂಡು ಹೀಗೆಂದನು : ಮೃಗಗಳನ್ನು ಕೊಲ್ಲುವುದಕ್ಕೆ ಬೇಡನಿಗೆ ಒಂದು ದಸಿಯು ಸಾಕು ; ಲೋಕಗಳನ್ನೆಲ್ಲ ಅಲ್ಲಾಡಿಸುವ ನನ್ನ ಉಗ್ರಸ್ತ್ರದ ಹೆಸರನ್ನು ಹೇಳುವುದಕ್ಕಾದರೂ ತಿಳಿಯದ ಆ ಖಳನು ತನ್ನ ಶಕ್ತಿಯನ್ನರಿಯನು. ಎಲೈ ಬೇಡನೆ ! ಇಂತಹ ಜಂಭದ ಮಾತೂ ಕೋಪದ ಮಾತೂ ನನ್ನನ್ನು ಅಲ್ಲಾಡಿಸವು ; ಛಲದಿಂದ ಹೋರಾಡಬೇಕೆಂಬ ಆಸೆಯಿದ್ದಲ್ಲಿ ನಿನ್ನೊಡೆಯನನ್ನು ಬರಹೇಳು. ಹೀಗೆಂದು ಅರ್ಜನನು ಕಿರಾತದೂತನನ್ನು ಹಿಯ್ಯಾಳಿಸಿ ನುಡಿಯಲು ಆ ದೂತನು ಹೋಗಿ ಆ ಮಾತುಗಳೆಲ್ಲವನ್ನೂ ಹಾಗೆಯೇ ಕಪಟ ಕಿರಾತನಿಗೆ ತಿಳಿಸಿದನು. ಆತನು ಮಾಯಾ ಯುದ್ಧವನ್ನು ಹೂಡಲು ಬಗೆದು ಅಗಾಧವಾದ ಸೈನ್ಯವನ್ನು ತಂದೊಡ್ಡಲು ಪರ ಸೈನ್ಯ ಭೈರವನು ಮಹಾಪ್ರಳಯ ಭೈರವನಂತೆ ಬಂದು ತಾಗಿ ಸೈನ್ಯವೆಲ್ಲವನ್ನು ನಾಶಗೊಳಿಸಿದನು. ಆಗ ಹರನು ಕೋಪಗೊಂಡು ಅರ್ಜುನನೊಡನೆ ದ್ವಂದ್ವಯುದ್ಧಕ್ಕೆ ನಿಂತನು.

ಇಬ್ಬರು ಬಹಳ ಹೊತ್ತು ಗಾಯಗಳಾಗುವಂತೆ ಯುದ್ಧಮಾಡುವುದು, ಕಡೆಗೆ ಅರ್ಜನನು ಹರನನ್ನು ನೆಲಕ್ಕೆ ಕೆಡವಿ ಗಂಟಲನ್ನು ಮೆಟ್ಟಿದನು. ಆಗ ಶಿವನು ಅದುವರೆಗೂ ಕಾಣದಿದ್ದ ತನ್ನ ಹಣೆಗಣ್ಣನ್ನು ಎದೆಯಲ್ಲಿ ಸರ್ಪವನ್ನು, ಕೈಯಲ್ಲಿ ಬಿಲ್ಲನ್ನು, ತಲೆಯಲ್ಲಿ ತೊರೆಯನ್ನು, ತೊರೆಯ ಪಕ್ಕದಲ್ಲಿ ಚಂದ್ರನನ್ನು, ಮುಂಗೊರಳಲ್ಲಿ ಕರೆಯನ್ನು ಅರ್ಜುನನಿಗೆ ಪ್ರೀತಿಯಿಂದ ತೋರಿಸಲು ಅವನು ಮೃಡನಡಿಗೆರಗಿ, ಸಕಲ ಲೋಕ ಪೂಜಿತನೆ! ನೀನೆಂದು ಸ್ವಲ್ಪವೂ ಅರಿಯದೆ ನಾನು ಮಾಡಿದ ಅಪರಾಧವನ್ನು ಹೇಗೆ ನೀಗಲಿ ? ಅಪ್ಪಣೆಕೊಡು ಎಂದು ವಿನಯದಿಂದ ಪರಾಕ್ರಮಧವಳನ ಪರಾಕ್ರಮಕ್ಕೂ ವಿನಯಕ್ಕೆ ಮೆಚ್ಚಿ ವರವನ್ನು ಬೇಡಿಕೊಳ್ಳೆಂದನು. ಅರ್ಜುನನು ಪಾಶುಪತಾಸ್ತ್ರವನ್ನು ದಯೆ ಮಾಡಬೇಕೆಂದು ಕೇಳಿಕೊಳ್ಳಲು ಹರನು ಆತನ ತಪಶ್ಶಕ್ತಿಗೂ ಭಕ್ತಿಗೂ ಮೆಚ್ಚಿ ಅದನ್ನು ಮೆಚ್ಚುಗೊಟ್ಟು ವಿನಾಶಿತ ರಿಪುವಾಗೆಂದು ಹರಸಿದನು :

> ಕ್ಲೇಶದ ಫಳಮೆರ್ದೆಗೊಳ್ಳದೆ |
> (ಈ)ಶಂ ಮನಮೊಸೆದು ನೆಗಳ್ದ ದಿವ್ಯಾಸ್ತ್ರಮನಾ ||
> ಪಾಶುಪತಾಸ್ತ್ರಮನಿತ್ತು ವಿ |
> ನಾಶಿತರಿಪುವಕ್ಕೆ ಹರಿಗನೆಂದಂ ದಯೆಯಿಂ (ಪು: ೫೮ ಮತ್ತು ಪ: ೨೬ ಪು: ೧೯೯).

ಜೊತೆಗೆಯೇ ಪಕ್ಕದಲ್ಲಿದ್ದ ಗೌರೀದೇವಿಯು ಸಹ ಅಂಜಲಿಕಾಸ್ತ್ರವನ್ನು, ಮುವ್ವತ್ತುಮೂರು ದೇವತೆಗಳೂ ತಂತಮ್ಮ ನಚ್ಚಿನಂಬುಗಳನ್ನು ಕೊಡಲು ಗುಣಾರ್ಣವನು ಸಂಪೂರ್ಣ ಮನೋರಥನಾದನು. ತಕ್ಷಣ ಇಂದ್ರನು ಅರ್ಜುನನೊಡನಿದ್ದ ಪ್ರೀತಿಗೆ ಪುಷ್ಪವೃಷ್ಟಿ ಆನಂದ ಬಾಷ್ಪ ವೃಷ್ಟಿಯನ್ನು ಸುರಿಸಿ, ಉಗ್ರ ತಪಸ್ಸಿನಿಂದ ದೈಹಿಕ ಶ್ರಮ ಆಗಿದೆ ನಿವಾರಣೆಗಾಗಿ ಅಮರಾವತಿಗೆ ಹೋಗೋಣವೆಂದು ಹೋದರು. ಅಲ್ಲಿ ದೇವೇಂದ್ರನು ಅರ್ಜುನನನ್ನು ನಾನಾ ಬಗೆಯಾಗಿ ಕೊಂಡಾಡಿದನು. ನಂತರ ಕೋಟ ರಕ್ಕಸರನ್ನು ಗೆಲ್ಲುವೆ ಎಂದು ಮಾತಳಿಯೆಂಬ ಸಾರಥಿ ವಿವಿಧ ಅಸ್ತ್ರ, ರಥ ಕೊಟ್ಟನು.

ಮಾರ್ಕಂಡೇಯನೆಂಬ ದಿವ್ಯಜ್ಞಾನಿಗಳ ಉಪದೇಶದಂತೆ ದ್ರೌಪದಿ ಬಯಕೆಪಟ್ಟ ಸೌಗಂಧಿಕ ಪುಷ್ಪ ತರಲು ಗಂಧ ಮಾದನಗಿರಿಗೆ ಭೀಮ ಹೋದನು. ಅಲ್ಲಿ ಬೇಂಟೆಯ ನೆಪದಿಂದ ಜಟಾಸುರನನ್ನು ಕೊಂದು ವೃದ್ಧ ವಾನರೊಂದಿಗಿದ್ದ. ಇತ್ತ ಧರ್ಮಪುತ್ರ, ದ್ರೌಪದಿ ಸೇರಿದಂತೆ ಎಲ್ಲರೂ ಅರ್ಜುನನ ಬರುವಿಕೆಯನ್ನು ಕಾಯುತ್ತಾರೆ. ಹೀಗೆ ಕಿರಾತಾರ್ಜುನೀಯ ಪ್ರಸಂಗದಲ್ಲಿ ನಾನಾ ಸಂಗತಿಗಳನ್ನು ಕವಿ ಚರ್ಚಿಸಿದ್ದಾನೆ. ಅರ್ಜುನನು ಶಿವನಿಂದ ಪಾಶುಪತಾಸ್ತ್ರ ಪಡೆದ ಮೇಲೆ, ಸೈಂಧವನನ್ನು ಕೊಲ್ಲುವುದಕ್ಕಾಗಿ ಅದರ ಮುಷ್ಟಿಯನ್ನು ಬೇಡುವುದಕ್ಕೆ ಮರಳಿ ಶಿವನ ಬಳಿಗೆ ಆತನನ್ನು

ಕೃಷ್ಣನು ಕರೆದುಕೊಂಡು ಹೋದಂತೆ ಹೇಳುವುದು ಸಹ ವ್ಯಾಸಭಾರತದಲ್ಲಿಲ್ಲವಾದರೂ ಪಂಪ ಸೂಚಿಸಿದ್ದಾನೆ. ಇವನ ಈ ಪ್ರಸಂಗವನ್ನು ಭಾವೋದ್ರೇಕದಿಂದ ಪ್ರಯೋಗಿಸಿದ್ದು, ಅರ್ಜುನನ ಪೌರುಷ, ಪ್ರತಾಪವನ್ನು ಪಂಪ ತಿಳಿಸಿರುವುದು ಮಹತ್ವವೆನಿಸಿದೆ.

ಪಂಪ ಒಬ್ಬ ಆಶ್ರಯದಾತನನ್ನು ಅರ್ಜುನನ ಸ್ಥಾನ ತುಂಬಿ ಕಥಾವಸ್ತುವನ್ನು ತನ್ನಿಚ್ಛೆಯಂತೆ ಬಳಸಿಕೊಂಡಿದ್ದಾನೆ. ತನ್ನ ವಿಕ್ರಮಾರ್ಜುನವಿಜಯದಲ್ಲಿ ಅರಿಕೇಸರಿಯನ್ನು ಅರ್ಜುನನೊಂದಿಗೆ ಸಮೀಕರಿಸಲಾಗಿದೆ. ಕಾವ್ಯವಸ್ತು ಪುರಾಣಕಥೆಯಾದರೂ, ಸಮಕಾಲೀನ ಜಗತ್ತನ್ನು ಪ್ರತಿಬಿಂಬಿಸುವಲ್ಲಿ ಪಂಪ ವಾಸ್ತವತೆಗೆ ಮಾರುಹೋಗಿದ್ದಾನೆ.

೩. ಕುಮಾರವ್ಯಾಸಭಾರತ ಅಥವಾ ಕರ್ನಾಟ ಭಾರತ ಕಥಾಮಂಜರಿ :ಕುಮಾರವ್ಯಾಸನು 'ಕಿರಾತಾರ್ಜುನೀಯ' ಪ್ರಸಂಗವನ್ನು ವಿಸ್ತಾರವಾಗಿ ತಿಳಿಸುತ್ತಾನೆ. ಮೂಲಭಾರತವನ್ನು ಅನುಸರಿಸಿ ಕಥೆಯನ್ನು ನೈಜವೆಂಬಂತೆ ಕನ್ನಡಿಸಿರುವನು. ವ್ಯಾಸರು ಅರ್ಜುನನಿಗೆ ಮಾಡುವ ಹಿತೋಪದೇಶ, ಅರ್ಜುನನ ವರ್ಣನೆ, ಯುದ್ಧದವರ್ಣನೆ, ಶಿವನನ್ನು ಕುರಿತು ಮಾಡುವ ಸ್ತೋತ್ರ ಮಹಾಕಾವ್ಯದುದ್ದಕ್ಕೂ ವಿವರವಾಗಿ ಬರುತ್ತದೆ. ಶಿವನಭಕ್ತಿಪ್ರಿಯತೆ, ಅರ್ಜುನನ ಪರಾಕ್ರಮ ಇತರ ಅಂಶಗಳು ಅತ್ಯುತ್ತಮವಾಗಿ ಚಿತ್ರಿತವಾಗಿವೆ. ಮೂಲ ಭಾರತದಲ್ಲಿರುವಂತೆ ವೇದವ್ಯಾಸರು ಧರ್ಮರಾಯನ ಮುಖೇನ ಅರ್ಜುನನಿಗೆ ಮಂತ್ರೋಪದೇಶ ಮಾಡುವರು. ಅರ್ಜುನನು ತಪಸ್ಸನ್ನಾಚರಿಸುವಾಗ ಪರೀಕ್ಷಾರ್ಥವಾಗಿ ದೇವೇಂದ್ರನೇ ಬರುತ್ತಾನೆ. ಹೀಗೆ ಕವಿ ಎಲ್ಲಿಯೂ ಎಡವದೆ ಕೆಲವು ಬದಲಾವಣೆಗಳೊಂದಿಗೆ ಕಾವ್ಯ ಹೆಣೆದಿದ್ದಾನೆ. 'ತಪೋಭಂಗಕ್ಕಾಗಿ ರಂಭಾಪ್ಸರೆಯರೆಲ್ಲ, ಮುಷ್ಟಿಯುದ್ಧದಲ್ಲಿ ಶಿವನಿಂದ ಪೆಟ್ಟು ತಿಂದ ಅರ್ಜನನು ಶಿವಕರುಣೆಗಾಗಿ ಮಳಲ ಲಿಂಗಾರ್ಚನೆ ಮಾಡಿ ಪುನಃ ಯುದ್ಧಕ್ಕೆ ಬಂದಾಗ ತಾನು ಅರ್ಪಿಸಿದ ಪುಷ್ಪಮಾಲೆಯು ಕಿರಾತನ ಮಂಡೆಯ ಮೇಲಿರುವುದನ್ನು ಕಂಡು ಚಕಿತನಾಗಿ ಮತ್ತೆ ಪರೀಕ್ಷೆಮಾಡುವೆನೆಂದು ಎರಡನೆಯ ಬಾರಿ ಅರ್ಚಿಸಿ ಅನಂತರ ಕಿರಾತನೇ ಶಿವನೆಂಬ ಸತ್ಯವನ್ನು ಅರಿಯುವ ಪ್ರಸಂಗವನ್ನು ಕುಮಾರವ್ಯಾಸನು ಮನೋಜ್ಞವಾಗಿ ವರ್ಣಿಸಿದ್ದಾನೆ.

ಕುಮಾರವ್ಯಾಸ ಭಾರತದ ಅರಣ್ಯಪರ್ವದಲ್ಲಿ ಬರುವ ಇಂದ್ರಕೀಲ ವಿಜಯ ಮಹತ್ತರವಾದುದು. ಈ ಪ್ರಸಂಗವನ್ನು ಸುಮಾರು ೭೩ ಪದ್ಯಗಳಲ್ಲಿ ವರ್ಣಿಸಲಾಗಿದೆ. ಭಾರವಿ ಮತ್ತು ಪಂಪನಂತೆ ಕುಮಾರವ್ಯಾಸನು ಸಹ ಹದಿನೆಂಟು ವರ್ಣನೆಗಳಲ್ಲಿ ಮೃಗಯಾವನ್ನು ತಂದಿದ್ದು ಕಿರಾತಾರ್ಜುನೀಯ ಪ್ರಸಂಗ ರೋಚಕವಾಗಿದೆ.

ಕಿರಾತರ ಒಂದು ಪ್ರತ್ಯೇಕ ನಾಡು, ರಾಜ್ಯ, ಸಂಸ್ಥಾನಗಳಿದ್ದ ಬಗೆ ಮತ್ತು ಕರ್ನಾಟಕದ ಉಲ್ಲೇಖವಿರುವ ಬಗೆಯನ್ನು ಕುಮಾರವ್ಯಾಸ ಭಾರತದ ಗದಾಪರ್ವದ ಧರ್ಮರಾಜನ ಪಟ್ಟಾಭಿಷೇಕದ ವಿಭಾಗದಲ್ಲಿ ಹೇಳಲಾಗಿದೆ:

ಗೌಳಬರ್ಬರ ಮಗಧ ಸಿಂಧು ನೇ
ಪಾಳವಾಂಧ್ರ ವಿದೇಹಕುರು ಮಳಿ
ಯಾಳವತ್ಸತ್ರಿಗರ್ತ ಮತ್ಸ್ಯ ವಿದರ್ಭ ಕರ್ನಾಟ ಕಾಂಬೋಜ |
ಮಾಳವಾಂಗಕಿರಾತವಲಿ ಬಂ
ಗಾಳ ಜೋನೆಗಚೀನಖರ್ಪರ
ಚೋಳ ಕೊಡಗನೃಪಾಲ ಕೊಂಕಣಕರುಶಮಹಾರಾಷ್ಟ್ರ.[೯]

ಹನ್ನೆರಡು ವರ್ಷ ವನವಾಸದಲ್ಲಿದ್ದ ಪಾಂಡವರು ವಿವಿಧ ಬಗೆಯಾಗಿ ಪರ್ಯಾಲೋಚಿಸುತ್ತಿರುವಾಗ ದ್ರೌಪದಿ ಪಾಂಡು ಪುತ್ರರನ್ನು ತಮ್ಮ ಹಕ್ಕು- ಅಧಿಕಾರಗಳನ್ನು ಪಡೆಯಲು ತಂತ್ರಗಳನ್ನು ರೂಪಿಸುತ್ತಾಳೆ. ಇವಳ ಸಲಹೆಯೇ

ಕಿರಾತಾರ್ಜುನೀಯ ಪ್ರಸಂಗಕ್ಕೆ ಕಾರಣವಾದಂತಿದೆ. ನಂತರ ಹಿರಿಯರ ಆದೇಶದಂತೆ ಅರ್ಜುನನು ಇಂದ್ರಕೀಲ ಪರ್ವತವನ್ನು ಹೊಕ್ಕ ಬಗೆ ಹೀಗಿದೆ :

ಅರಸ ಕೇಳ್ಳೆ ಬರುತ ಭಾರತ
ವರುಷವನು ದಾಂಟಿದನು ತಂಪಿನ
ಗಿರಿಯ ತಪ್ಪಲನಿಳಿದನಾ ಹರಿವರುಷಸೀಮೆಯಲಿ
ಬೆರಸಿದನು ಬಳಿಕುತ್ತರೋತ್ತರ
ಸರಣಿಯಲಿ ಸೈನಡೆದು ಹೊಕ್ಕನು
ಸುರ ನಿವೇಶವನಿಂದ್ರಕೀಲ ಮಹಾವನಾಂತರವ (೨೨ ಪು:೧೭೬)

ಇಂದ್ರಕೀಲವನ್ನು ಹೊಕ್ಕ ಧನಂಜಯ (ಅರ್ಜುನ) ಗಿಳಿ, ಕೋಗಿಲೆಗಳ ಮಧುರಗಾನ, ಹಂಸ, ನವಿಲು, ಪಾರಿವಾಳ, ದುಂಬಿಗಳ ಝೇಂಕಾರ ಕಂಡು ಸಂತೋಷಪಟ್ಟ.

ಶಿವ ಕಿರಾತನಾಗಿ ವೇಷಭೂಷಣಗಳ ತೊಟ್ಟ ಬಗ್ಗೆ ಕವಿ ಕಾಣುವ ದೃಶ್ಯ ಅಪರಮಿತವಾಗಿದೆ :

ತೆಗೆದು ತಲೆಮಾಲೆಯನು ಹಸುರಂ
ಗಿಗಳ ತೊಟ್ಟನು ಸುತ್ತುವರೆ ಹೀ
ಲಿಗಳ ಹರಹಿನ ಪಾರಿವದ ಚಲ್ಲಣವವೆಂಠಣಿಸಿ !
ಬಿಗಿ ಜಡೆಯ ಶಶಿ ಮುಸುಕೆಪತ್ರಾ
ಳಿಗಳ ಕಟ್ಟಿ ಕಿರಾತವೇಷದ
ವಿಗಡ ದೇವರದೇವ ಕೊಂಡನು ಚಾಪಮಾರ್ಗಣವ (೩೪:೧೮೦).

ಕಿರಾತನು ಹೊರಡುವಾಗ ಅವನೊಂದಿಗಿದ್ದ ಬಡಿಗೆ, ಕೋಲು, ನಾಯಿ, ಬಲೆ ಮುಂತಾದವುಗಳನ್ನು ಕವಿ ಈ ಪದ್ಯದಲ್ಲಿ ಸೆರೆಹಿಡಿದಿದ್ದಾನೆ :

ಚಾಳಿಸಿದ ಹದವಿಲ್ಲುಗಳ ಬಡಿ
ಗೋಲುಗಳ ಸಂಕಲೆಯ ನಾಯ್ಗಳ
ಕೋಲುವಲೆಗಳ ಕಣ್ಣಿವಲೆ ದಡಿವಲೆಯ ನಿಡುವಲೆಯ
ಕಾಲುಗಣ್ಣಿಯ ಹೆಬ್ಬಲೆಯ ಬೆ
ಳ್ಳಾಲಹೊರೆಗಳೆಗಳಂಟಿನ
ಗಾಳಿಗೊಂಬಿನ ಬೇಟೆಗಾರರು ಬಳಸಿದರು ಶಿವನ (೩೫ : ಪು: ೧೮೦)

ಮೂಕದಾನವೆಂಬ ಇಂಬಹಲ್ಲಿನ ಹಂದಿಯು ನಿರ್ಭಯವಾಗಿ ವಿಹರಿಸುತಿತ್ತು. ಹಂದಿಯೂ ಬಾಣಗಳಿಗೆ ಸಿಗುವಂತಿತ್ತು. "ಹಂದಿಯನ್ನು ತಡೆ ನಾಯ್ಗಳ ಬಡು" ಎನ್ನುವ ಮಾತು ಕೇಳಿ ಬರುತ್ತಿತ್ತು. ಅದಕ್ಕೆ ನಾಯಿಗಳ ದಾಳಿಯಿಂದ ಗಾಯಗಳಾದವು. ಹೀಗಿದ್ದ ಸಂದರ್ಭವನ್ನು ನೋಡಿ ಬಾಣ ಹೂಡಿದನು :

ಇದುವೆ ಸಮಯವಲಾ ಎನುತ ಹೂ
ಡಿದನು ಬಾಣವನುಗಿದು ಪೂರಾ

ಯದಲಿ ತೂಗಿ ಪಿನಾಕಿ ಯೆಚ್ಚನು ಮೂಕದಾನವನ I
ಒದೆದು ಹಾಯ್ದುದು ಬಾಣಗರೆದೋ
ರೆದುದು ಬದಿಯಲಿ ಕೊಡಹಿ ಛೀಳಿಡು
ತದು ಧನಂಜಯನತ್ತ ಹರಿದುದು ಹೊತ್ತ ಕಣೆಸಹಿತ (೪೧: ೧೮೩)

ಅರ್ಜುನನು ಹಂದಿಗೆ ಬಾಣಬಿಟ್ಟ ಕೂಡಲೆ ಕಾಲ ಕೊಡವಿ ಅವನೆದುರಲ್ಲಿ ಸತ್ತುಬಿದ್ದಿತು. ಆಗ ಸತ್ತ ಹಂದಿಗಾಗಿ ಶಿವ ಮತ್ತು ಅರ್ಜುನರಲ್ಲಿ ಕಾದಾಟ ಆರಂಭವಾಯಿತು :

ಬಂದನೀಶ್ವರ ನಾವು ಕೆಡಹಿದ
ಹಂದಿ ನಮ್ಮದು ತೆಗೆಯಿ ಎನೆನರ
ನೆಂದನೆಮ್ಮಂಬಿನಲಿ ಬಿದ್ದುದು ಸಾರು ನೀನೆನಲು।
ಬಂದುದೇಕಾಮಿಷವಿರೋಧದ
ಕಂದು ಪಾರ್ಥನ ಚಿತ್ತದಲಿ ಬಾ
ಲೇಂದುಧರನೆಂದೆತ್ತ ಬಲ್ಲನು ಕೆಣಕಿದನು ಶಿವನ (೪೩ : ೧೮೩)

ಕಿರಾತನೆ ನನ್ನ ಮದೀಯ ಬಾಣಕ್ಕೆ ನೀ ಮೃಗವಾಗದಿರು, ಪೊದೆಯ ನದಿ, ಮೊಲ, ಹಕ್ಕಿಗಳನ್ನು ಜಯಿಸಿದ ಗುರುವನ್ನು ನೀನು ಅಗ್ಗಳಿಕೆಯಿಂದ ಅಂಜುವಂತೆ ಮಾಡಿದೆ ಎಂದು ಭುಜಬಲ ಪರಾಕ್ರಮವನ್ನು ಇಬ್ಬರು ಚಪ್ಪರಿಸಿದರು. ಅರ್ಜುನನ ಭುಜಬಲ ಪರಾಕ್ರಮ ಧೈರ್ಯವನ್ನು ಶಿವ ಪಾರ್ವತಿಗೆ ವಿವರಿಸಿದ.

ವ್ಯಂಗ ಮಾತೇಕೆ ಬೇಡ (ಶಬರ) ನಾವು ಆಡಂಬರದ ತಪಸಿಗಳೆಂಬುದು ನಿಜ. ನಿನ್ನೊಡನೆ ಸತ್ತ ಮೃಗದ ಕಾದಾಟವೇಕೆ ಎಂದು ಶಿವನು ಬೇಡ ಶಿಷ್ಯನಿಗೆ ಹೇಳಿದ. ಅಷ್ಟಕ್ಕೆ ನಿಲ್ಲದೆ ಪರ್ವತಕ್ಕೆ ಮಂಜು ಆವರಿಸಿದರೆ ಅಂಜುವುದೇ, ಭಯಂಕರವಾದ ವಿಷವನ್ನು ನೊಣನೆಕ್ಕುವುದೇ, ಸಮುದ್ರದ ತಳದಲ್ಲಿರುವ ಬೆಂಕಿ ಸುಡುವುದೇ? ತಾವರೆ ದಂಟು ಕಟ್ಟು ಒಡೆಯುವುದೇ, ಆನೆಜೋಡಿಗಳಂತೆ ತುಂತುರು ಮಳೆಯಲ್ಲಿ ಜಾರುವೆನೆಂದು ಗಂಗಾಧರ (ಶಿವ) ಹೇಳಿದನು.

ಶಿವನು ಅರ್ಜುನನನ್ನು ನೆಲಕ್ಕುರುಳುವಂತೆ ಹೊಡೆಯುತ್ತಾನೆ. ಮಲ್ಲಯುದ್ಧದಲ್ಲಿ ಕೇವಲ ಹಿಡಿಕೆ ಯುದ್ಧ ಮಾಡಿ ಸಹಿಸಿಕೊಳ್ಳುವ ಸನ್ನಾಹ. ಆಟೋಪ ನಾಶವಾಗಲಿಲ್ಲ ಮತ್ತೇ ಯುದ್ಧ ಮಾಡಬೇಕೆಂಬ ಚಪಲ ಹೆಚ್ಚಾಯಿತು. ಪುಳಿಂದನಾದ ಬೇಡನೇ ನನ್ನೊಡನೆ ಯುದ್ಧಮಾಡಲು ಕಳ್ಳತನವೇಕೆ ? ಮಲ್ಲಯುದ್ಧದಲ್ಲಿ ಬಲವಾದ ಆಯುಧ, ಪಟ್ಟಿಗಳೊಂದಿಗೆ ಬಂದು ಅರ್ಜುನನ ಹಗೆಗಳ ವಿರುದ್ಧ ಯುದ್ಧಕ್ಕೆ ನಿಂತನು.

ಅರ್ಜುನನು ಶಿವನ ಏಟುಗಳಿಗೆ ಬೆರಗಾಗಿ ದೇವದಾನವನೋ, ದೇವೇಂದ್ರನೋ, ಶಿವನೋ, ವಿಷ್ಣುವೊ, ಮಹಾದೇವನೋ, ಕಿರಾತನೋ ಯಾರು ನೀನು ಎಂದು ಮತ್ತೆ ಯುದ್ಧಕ್ಕೆ ನಿಂತ :

ನಿನಗೆ ನಾ ಬೆರಗಾದೆ ನೀನಿಂ
ದೆನಗೆ ಮೆಚ್ಚಿದೆ ದೇವದಾನವ
ಜನರೆನಗೆ ಪಾಡಲ್ಲ ನೀ ಹಲ್ಲಣಿಸಿದ್ಯೆ ನಮ್ಮ I

೨ವನೊ ಮೇಣ್ ದೇವೇಂದ್ರನೋ ಹರ
ತನುಜನೋ ಹರಿಯೋ ಮಹಾದೇ
ವನೊ ಕಿರಾತನೊ ನೀನೆನುತ ಮತ್ತೆರಗಿದನು ಶಿವನ (೫೮ : ೧೮೮).

ಅರ್ಜುನನಿಗೆ ಮೂಗಿನ ಹೊರಭಾಗದಲ್ಲಿ ರಕ್ತ ಸುರಿಯಿತು. ಅಕಟಕಟ ತಪ್ಪಾಯಿತು ಎಂದು ಮರುಗಿದನು. ಎಲ್ಲ ಪರಿ ಹೋರಾಟಗಳು ಮುಗಿದಾಗ ಅರ್ಜುನ ಮಳಲಲಿಂಗವ ಮಾಡಿ ನಿರ್ಗುಣ ಸಂಪನ್ನನಾಗಿ ಕಣಗಿಲೆ, ಕಕ್ಕೆಯ ಬೆರಿ, ಮುಗುಳ ದಾಸಣದಿ, ಕುಸುಮದಿ, ಬಂಧೂಕಪುಷ್ಪ, ಬಾಗೆಹೂ, ಗೊಂಚಲು ಗೊಂಚಲಾಗಿ ಬಿಡುವ ಒಂದು ಬಗೆಯ ಕಕ್ಕೆ (ಕಾಡು) ಹೂವು. ಶಿರೀಷ ಪುಷ್ಪಗಳನ್ನು ಶಿವಲಿಂಗಕ್ಕೆ ಮುಡಿಸಿದನು. ನಂತರ ಶಿವನ ತಲೆಯಲ್ಲಿರುವುದನ್ನು ಕಂಡ.

ಕಂಡನರ್ಜುನನಾ ಕಿರಾತನ
ಮಂಡೆಯಲಿ ತಾ ಮಳಲ ಲಿಂಗದ
ಮಂಡೆಯಲಿ ಪೂಜಿಸಿದ ಬಹುವಿಧಕುಸುಮಮಂಜರಿಯ ।
ಕಂಡನಿತ್ತಲು ಮುಂದು ಪುನರಪಿ
ಕಂಡನೀ ಶಬರಂಗಿದೆತ್ತಣ
ದಂಡಿಯೋ ಹಾಯೆನುತ ಸೈವೆರಗಾದನಾ ಪಾರ್ಥ (೬೬:೧೯೧)

ಶಿವನ ಸಾಕ್ಷಾತ್ಕಾರ ಕಂಡು ಕಿರಾತನೇ ಶಿವನೆಂದು ಅರಿಯದೇ ಶಿವದ್ರೋಹ ಮಾಡಿದೆ ಎಂದು ಅರ್ಜುನ ಮರುಗಿದನು. ಸೂರ್ಯ, ಚಂದ್ರ, ನಕ್ಷತ್ರಗಳ ರಾಶಿಯಲಿ ಜಗಕ್ಕೆ ಒಡೆಯನಾದ ಶೂರ, ಪರಾಕ್ರಮಿಯಾದ ಶಿವನನ್ನು ನಾಶಮಾಡಲು, ಕಾರ್ಯನಿರತನಾಗಿದ್ದೆ, ಕಾದಾಟದಲ್ಲಿನ ಸ್ಥಿತಿಬಗ್ಗೆ ಅರ್ಜುನ ಖೇದ, ಆಘಾತ ಪಟ್ಟ. ಅರ್ಜುನನ ವಿವೇಕ ಅರಿತ ಶಿವ ಭುಜಹಿಡಿದು ಅಪ್ಪಿಕೊಂಡನು. ಆಗ ಅರ್ಜುನ ಶಿವನಿಗೆ ದೀರ್ಘದಂಡ ನಮಸ್ಕಾರ ಮಾಡಿದ. ಪರಬ್ರಹ್ಮಸ್ವರೂಪಿ, ಪರಮಾತ್ಮನಾದ ಶಿವನು ಅರ್ಜುನನಿಗೆ ಸಮೀಪ ಬಂದು ಅಪ್ಪಿಕೊಂಡಾಗ, ಅರ್ಜುನನ ಬೇಡಿಕೆ ಕೇಳಿದ ಶಿವನು :

ಸಲಿಸುವೆನು ನೀ ಬೇಡಿದುದ ನಿ
ಸ್ಖಲಿತ ವಂಜದಿರಿನ್ನು ಬೇಡೆನೆ
ಸುಲಭ ನೀ ಭಕ್ತರಿಗೆ ಭಯವಿನ್ನೇಕೆ(ನನ)ಗೆನುತ
ಸಲಿಸು ಪಾಶುಪತಾಸ್ತ್ರವನು ವೆ
ಗ್ಗಳದ ಬ್ರಹ್ಮ ಶಿರಾಸ್ತ್ರವನು ಕೈ
ಗೊಳಿಸುವುದು ಕೃಪೆಯುಳ್ಳೊಡೆಂದನು ನಗುತ ಕಲಿಪಾರ್ಥ (೮೧:೧೯೬).

ಅರ್ಜುನನ ಬಹು ಬೇಡಿಕೆಯಾದ ಪಾಶುಪತಾಸ್ತ್ರವನ್ನು ಶಿವ ದಯಪಾಲಿಸುತ್ತಾನೆ. ಆತನ ಜತೆಗಿದ್ದ ಪಾರ್ವತಿಯು ಸಹ ಅಂಜಲಿಕಾಸ್ತ್ರವನ್ನು ಕೊಟ್ಟು ಶುಭ ಹಾರೈಸುತ್ತಾಳೆ:.

ಸರಸಿಯಲಿ ಮಿಂದಾಚಮನವಿ
ಸ್ತರಣೆಯೆಲ್ಲವ ಮಾಡಿ ಶೂಲಿಯ
ಚರಣದಲಿ ಮೈಯಿಕ್ಕಿ ನಿಂದನು ಭಾವಶುದ್ಧಿಯಲಿ

ಸರಳಸಾಂಗೋಪಾಂಗಮಂತ್ರೋ
ಚ್ಚರಣ ಸಂಹೃತಿ ಮೋಕ್ಷವನು ವಿ
ಸ್ತರಿಸಿ ಸರಹಸ್ಯದಲಿ ಕೊಟ್ಟನು ಪಾಶುಪತಶರವ (೮೨: ೧೯೭)

ಹೀಗೆ ಕಿರಾತಾರ್ಜುನೀಯ ಪ್ರಸಂಗವನ್ನು ನಾನಾ ಬಗೆಯಾಗಿ ಸಾಹಿತ್ಯ ವಲಯದಲ್ಲಿ ಬಳಸಿಕೊಂಡಿದ್ದಾರೆ. ಪಾಂಡವರು ವನವಾಸ ಅನುಭವಿಸುತ್ತಿದ್ದಾಗ ವೇದವ್ಯಾಸರು ಬಂದು ಧರ್ಮರಾಜನ ಸತ್ಯಕ್ಕೆ ಚ್ಯುತಿ ಬರಲಾರದೆಂದು ಹೇಳಿ, ಅರ್ಜುನನು ಶಿವನನ್ನು ಒಲಿಸಿಕೊಂಡು ದಿವ್ಯಾಸ್ತ್ರಗಳನ್ನು ಪಡೆಯುವದು ಸೂಕ್ತವೆಂದು ಉಪದೇಶಿಸುತ್ತಾನೆ. ಅದರಂತೆ ಅರ್ಜುನ ಇಂದ್ರಕೀಲ ಪರ್ವತಕ್ಕೆ ಹೋಗಿ ಉಗ್ರ ತಪಸ್ಸು ಮಾಡಲು ಸುತ್ತಲಿನ ಋಷಿಮುನಿಗಳಿಗೆ ಅದರ ತೇಜಸ್ಸಿನಿಂದ ಚಡಿಪಡಿಕೆ ಆರಂಭವಾಗುತ್ತದೆ. ನಂತರ ಶಿವನಿಗೆ ದೂರುತ್ತಾರೆ. 'ಶಿವನು ತನ್ನ ಗಣ ಮತ್ತು ಪಾರ್ವತಿಸ್ಕಂದ ಗಣಪತಿ ಸಹಿತ ಬೇಡರ ವೇಷಧರಿಸಿ ಮೂಕದಾನವನನ್ನು ಕಾಡುಹಂದಿಯಾಗಿ ಮಾಡಿಕೊಂಡು ಕೆಣಕಿ, ಯಾರಿಗೂ ಸೋಲದ ಅರ್ಜುನನನ್ನು ಸೋಲಿಸಿ ಅವನ ಭಕ್ತಿಗೆ ಮೆಚ್ಚಿ ಪಾಶುಪತಾಸ್ತ್ರ, ಬ್ರಹ್ಮಶಿರೋಸ್ತ್ರಗಳನ್ನು ಪಾರ್ವತಿ ಅಂಜನಾಸ್ತ್ರವನ್ನು ನೀಡುತ್ತಾಳೆ.

೪. ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣ : ವಿರೂಪಾಕ್ಷಪಂಡಿತ ತನ್ನ ಕಾವ್ಯದಲ್ಲಿ ಶಿವನನ್ನು- ಶಿವಭಕ್ತರನ್ನೇ ಕಾವ್ಯವಸ್ತುವನ್ನಾಗಿ, 'ಪರಮ ಶಿವಭಕ್ತನಾದ ಚೆನ್ನಬಸವೇಶ್ವರನನ್ನು ಕಾವ್ಯದ ನಾಯಕನಾಗಿ ಮಾಡಿಕೊಂಡಿದ್ದಾನೆ'. ಜನರು ತನ್ನ ಬಳಿ ಬಂದು ಶಿವಭಕ್ತನಾದ ಚೆನ್ನಬಸವಪುರಾಣವನ್ನು ಹೇಳಲು ನೀನಲ್ಲದೆ ಅನ್ಯರಿಂದ ಸಾಧ್ಯವಿಲ್ಲವೆಂದು ಕೇಳಿಕೊಂಡಿದ್ದರಿಂದ ಆ ಕಾವ್ಯವನ್ನು ರಚಿಸಿದುದಾಗಿ ಕವಿ ಹೇಳಿಕೊಂಡಿದ್ದಾನೆ. ಎಲ್ಲ ಕವಿಗಳು ಕಾವ್ಯ ಬರೆಯುವಕಾಲದಲ್ಲಿ, ಮತಪ್ರಚಾರ ಮಾಡುತ್ತಿದ್ದಕಾಲದಲ್ಲಿ ಚೆನ್ನಬಸವೇಶ್ವರನ ಚರಿತ್ರೆಯನ್ನು ಪುರಾಣ ರೂಪದಲ್ಲಿ ಇವನು ಬರೆದ.

ಚೆನ್ನಬಸವಪುರಾಣದಲ್ಲಿ ಹೆಚ್ಚಾಗಿ ಶಿವನ ಲೀಲೆ ಮತ್ತು ಶಿವಶರಣರ ವಿಚಾರಗಳಿವೆ. ಭಕ್ತಿ, ಶ್ರದ್ಧೆ ಕವಿ ಕಥಾನಿರೂಪಣೆಯಲ್ಲಿ ಲೀನವಾಗುವುದು ಸ್ಪಷ್ಟ. ವೀರಶೈವ ಶಿವಶರಣರ ಕಥೆಗಳು ಸಂಕ್ಷಿಪ್ತತೆ, ಕಾವ್ಯದ ಅಂತ್ಯಭಾಗದಲ್ಲಿ ಬರುವ ಘಟನೆಗಳು ಸಾಮಾಜಿಕ-ಚರಿತ್ರೆಯ ಮೇಲೆ ಬೆಳಕನ್ನು ಚೆಲ್ಲುತ್ತವೆ. ೧೮ ವರ್ಣನೆಗಳಿಗೆ ಬಲಿಯಾಗಿ ಕವಿ ಆಧ್ಯಾತ್ಮಿಕತೆ ಪ್ರತಿಪಾದನೆಯಲ್ಲಿ ಲೌಕಿಕದ ಸಂದರ್ಭಗಳನ್ನು ಚಿತ್ರಿಸಿದ್ದಾನೆ. ಪ್ರಕೃತಿ ಮತ್ತು ಸ್ತ್ರೀ ವರ್ಣನೆ ಮುಂತಾದವು ಇಲ್ಲಿ ಗಮನಾರ್ಹ.

೫೩ನೇ ಸಂಧಿಯಲ್ಲಿ ವಿರೂಪಾಕ್ಷಪಂಡಿತ ಕಿರಾತಲೀಲೆಯನ್ನು ತಿಳಿಸಿದ್ದಾನೆ. ಇದರ ಕಥಾವಸ್ತು : ಇಂದ್ರಕೀಲದಲ್ಲಿ ಅರ್ಜುನನು ತಪಸ್ಸಿನಲ್ಲಿರಲು ಅದನ್ನು ತಿಳಿದು ಚಂದ್ರಶೇಖರನು ಬೇಡನಾಗಿ ಬಂದು ಅವನಿಗೆ ಕರುಣೆಯಿಂದ, ಸಂತೋಷದಿಂದ ಪಾಶುಪತ ಬಾಣವನ್ನು ಕೊಟ್ಟ ಸಂದರ್ಭ. ವಿರೂಪಾಕ್ಷನಿಗೆ ನಮಸ್ಕರಿಸಿ, ಸಿದ್ಧರಾಮನಿಗೆ ಹೇಳುವ ಮಾತು ಬರುತ್ತದೆ. 'ಹಿಂದೆ ಚಂದ್ರವಂಶದಲ್ಲಿ ಹುಟ್ಟಿದ ವಿಶಾಲಮತಿಯಾದ ಧರ್ಮರಾಜ, ಭೀಮ, ಅರ್ಜುನ, ನಕುಲ, ಸಹದೇವರೆಂಬ ಐದುಮಂದಿ ರಾಜರುಗಳು ರಾಜ್ಯವಾಳುತ್ತಿರಲು ದಾಯಾದಿಗಳಲ್ಲಿ ಪಗಡೆಯಾಟ ಸಂಭವಿಸಿತು'. ಅದರಲ್ಲಿ, ತಮ್ಮ ದೇಶ-ಕೋಶಗಳನ್ನು ಸೋತು ದಾಯಾದಿಗಳಿಗೆ ಒಪ್ಪಿಸಿ ಅತಿಯಾದ ದುಃಖದಿಂದ ಅರಣ್ಯವಾಸ ಮಾಡುತ್ತಿದ್ದರು:

ಒಂದು ದಿನಮಾ ಭೂಪರಿರ್ದ ವನಭೂಮಿಗೈ
ತಂದು ವೇದವ್ಯಾಸಮುನಿ ನುಡಿದನೆಲೆ ಭೂಪ

ಬಂದುದು ಮಹಾಪತ್ತು ನಿನಗೆ ರಿಪುವೀರರಂ ನೀಂ ಜಯಿಸಬೇಕಾದೊಡೆ
ಇಂದುಧರನಲ್ಲಿ ಪಾಶುಪತಾಸ್ತ್ರಮಿರ್ದಪುದು
ತಂದುಕೊಂಡೊಡೆ ನಿನಗೆ ಮಲೆತ ರಾಯರ್ಗಳಂ
ಕೊಂದು ಕೊಡುವುದು ಸಂದೆಗಂ ಬೇಡವೆನೆ ಮುನಿಗೆ ಧರ್ಮಸುತ ನಿಂತೆಂದನು (೫-೩- ೨೩೬).

ಒಂದು ದಿನ ಆ ರಾಜರು ವಾಸಿಸುತ್ತಿದ್ದ ಅರಣ್ಯಕ್ಕೆ ವೇದವ್ಯಾಸ ಮುನಿ ಬಂದು ರಾಜನೆ ನಿನಗೆ ದೊಡ್ಡ ವಿಪತ್ತು ಬಂದಿದೆ. ಪರಾಕ್ರಮಿಗಳಾದ ಶತ್ರುಗಳನ್ನು ಜಯಿಸಬೇಕಾದರೆ ಚಂದ್ರಶೇಖರನಲ್ಲಿರುವ ಪಾಶುಪತಾಸ್ತ್ರವನ್ನು ಪಡೆದರೆ ನಿಮ್ಮ ವಿರೋಧಿ ರಾಜರನ್ನು ಕೊಂದುಹಾಕಬಹುದೆಂದು ಹೇಳಿದನು. ಅದಕ್ಕೆ ಧರ್ಮರಾಜನು ಋಷಿಶ್ರೇಷ್ಠನೇ ಒಳ್ಳೆಯದನ್ನೇ ಹೇಳಿದೆ ಆದರೆ ನಿನ್ನದು ಭಗೀರಥ ಪ್ರಯತ್ನವಲ್ಲವೆ? ಶಿವನನ್ನು ಪ್ರತ್ಯಕ್ಷ ಮಾಡಿಕೊಳ್ಳಲು ಸಾಧ್ಯವೆ? ನಾವು ಎಷ್ಟರವರು ? ಅವನು ಬಾಣವನ್ನು ಕೊಡುತ್ತಾನೆಯೇ ? ಕೊಟ್ಟರೂ ಅದು ಶತ್ರುನಾಶ ಮಾಡುತ್ತದೆಯೇ? ಆ ಶಿವನು ನಮ್ಮಲ್ಲಿ ಯಾರಿಗೆ ಪ್ರತ್ಯಕ್ಷನಾಗುತ್ತಾನೆ? ಎಂದಾಗ: ವ್ಯಾಸಮುನಿ 'ಶಿವನು ಭಕ್ತರ ಆಸೆಯನ್ನು ಪೂರೈಸದವನೆ? ಅವನು ಕೃಪಾಕರನು. ಕೇಳು ಅಸ್ತ್ರವನ್ನು ಕೊಡತ್ತಾನೆಂದನು'. ಮುನಿಯು ಐವರಲ್ಲಿ ಅರ್ಜುನನಿಗೆ ಶಿವನು ಒಲಿಯುವನೆಂದು ಹೇಳಿದ. ಧರ್ಮರಾಜನ ಆದೇಶದಂತೆ ಅರ್ಜುನ ಮಂತ್ರವನ್ನು ನಿರೂಪಿಸಲು ಇಂದ್ರಕೀಲವನ್ನು ಸೇರಿ ಕೊಳದಲ್ಲಿ ಮುಳುಗಿ ಸ್ನಾನಮಾಡಿ ಶುಚಿಯಾಗಿ ಕಾಲಿನ ಹೆಬ್ಬೆರಳನ್ನು ನೆಲಕ್ಕೆ ಊರಿ, ತೋಳುಗಳನ್ನು ಮೇಲೆತ್ತಿ ಶಿವನ ಮೂರ್ತಿಯನ್ನು ಹೃದಯದಲ್ಲಿ ಪ್ರತಿಷ್ಠಾಪಿಸಿಕೊಳ್ಳುತ್ತಾನೆ. ಅವನ ಉಡುಪು ಹೇಗಿತ್ತೆಂದರೆ : ಕೈಯಲ್ಲಿ ಜಪಮಾಲೆ, ದೇಹದಲ್ಲೆಲ್ಲ ವಿಭೂತಿ, ಶರೀರದಲ್ಲಿ ವಿಪುಲವಾದ ರುದ್ರಾಕ್ಷಿಮಾಲೆಯ ಆಭರಣ, ಹಿಂಭಾಗದಲ್ಲಿ ಅಕ್ಷಯವಾದ ಅಸ್ತ್ರದಿಂದ ಕೂಡಿದ ಬತ್ತಳಿಕೆ, ಹೆಗಲಿನಲ್ಲಿ ಬಿಲ್ಲು, ವಿಪರೀತವಾದ ವರ್ತನೆಯಿದು ಎನ್ನಲು ತರಗೆಲೆಯನ್ನು ತಿಂದು ಕೆಲವು ದಿನಗಳು ತಪಸ್ಸು ಮಾಡಿದನು. ಅವನು ಕೆಲವು ದಿನ ದಿವ್ಯಗಾಳಿಯಿಂದ, ನೀರಿನಿಂದ, ಉಪವಾಸದಿಂದಿರಲು ಅವನ ತಪಸ್ಸಿನ ತೇಜಸ್ಸು ಆ ತಪೋವನದಲ್ಲಿ ಹೆಚ್ಚಿ ಆವರಿಸಿತು.

ಅರ್ಜನ ತಂಗಿದ್ದ ಆ ಪರಿಸರ : ಮರಗಳ ಸಮೂಹ ಉರಿದುಹೋಯಿತು. ಸುತ್ತಲೂ ಇದ್ದ ಬಳ್ಳಿಗಳ ಗುಂಪು ಸುಟ್ಟು ಕರಿಕಾಯಿತು. ಬಾಯಾರಿಕೆಯಿಂದ, ಮೋಹದಿಂದ ಗಂಡು-ಹೆಣ್ಣು ಪ್ರಾಣಿಗಳು ದೂರಸರಿದವು. ಪಕ್ಷಿ ಸಮೂಹಕ್ಕೆ ದುಃಖ ಹೆಚ್ಚಾಯಿತು. ಗಿಡ, ಮರ, ಪರ್ವತಗಳು ಉರಿಯಿಂದ ತತ್ತರಿಸಿದವು. ಸರ್ಪಗಳ ಸಮೂಹ ಹೆದರಿಕೆಯಿಂದ ಕೊಳಗಳಲ್ಲಿರದೆ ಓಡಿತು. ಕಾಪಾಡುವವರಿಲ್ಲದೆ ಋಷಿಗಳ ಸಮೂಹ ರಭಸದಿಂದ ಓಡಿಹೋಯಿತು. ಮುನಿಶ್ರೇಷ್ಠರ ಕೋಲಾಹಲವನ್ನು ಆಕಾಶದಿಂದ ದೇವಾಮುನಿಯಾದ ನಾರದನು ನೋಡಿ, ತಪಸ್ವಿಗಳು ಸಮೀಪವಾದಂತೆ, ಮುನಿಯೆ, ನೀನು ನಮ್ಮ ಕಷ್ಟವನ್ನು ಪರಿಹರಿಸು ಎಂದು ಬೇಡಿಕೊಳ್ಳಲು ನಾರದನು, ಈಶ್ವರನನ್ನು ನೋಡಿ ಕೊಂಡಾಡಿ ವಿಜ್ಞಾಪಿಸಿಕೊಂಡನು:

ಹರ ಪರಾಮರಿಸಿಂದ್ರಕೀಲದೊಳ್ ತಪಿಸುತಿಹ
ನರನವಂ ಋಷಿಯಲ್ಲ ಋಷಿಗೇಕೆ ಕೋದಂಡ
ಶರ ಖಡ್ಗ ಭೂಷಣಂಗಳ್ ದುಷ್ಟ ತಪಸಿಯ ತಪೋವಹ್ನಿ ಮಸಗಲಾಗಿ
ತೆರಳ್ದುವಾ ಮುನಿಪರ ಜಪಂ ತಪಂ ನಿತ್ಯಕ

ರ್ಮರಹಸ್ಯಮಂತ್ರಗಳೇಗುವರ್ ಪೇಳೆಂದು

ಸುರಮುನಿ ಹರಂಗೆ ಬಿನ್ನವಿಸೆ ಕೇಳ್ದರಿದು ನಸುನಗುತಭವನಿಂತೆಂದನು (೯-೨೩೮).

ಇಂದ್ರಕೀಲದಲ್ಲಿ ತಪಸ್ಸು ಮಾಡುತ್ತಿರುವ ಮನುಷ್ಯನು ಋಷಿಯಲ್ಲ. ಋಷಿಗೆ ಬಿಲ್ಲು, ಬಾಣ, ಕತ್ತಿ, ಆಭರಣಗಳೇಕೆ? ಆ ದುಷ್ಟ ತಪಸ್ವಿಯ ತಪೋಜ್ವಾಲೆ ಆವರಿಸಲು ಆ ಮುನಿಗಳ ಜಪ-ತಪ, ನಿತ್ಯಕರ್ಮ, ರಹಸ್ಯ ಮಂತ್ರಗಳು ಓಡಿಹೋದವು. ಅವರು ಏನನ್ನು ತಾನೆ ಮಾಡಲು ಸಾಧ್ಯ ಎಂದು ನಾರದ ಶಿವನಿಗೆ ವಿಜ್ಞಾಪಿಸಿಕೊಂಡನು. ಆಗ ಶಿವನು ಆತನು ನಮ್ಮ ಪರಮಭಕ್ತ. ಅವನಿಂದ ಋಷಿಗಳಿಗೆ ಯಾವ ತೊಂದರೆಯಿಲ್ಲ. ಅವರಿಗೆ ತಪೋವನವನ್ನೇ ಕೊಡುತ್ತೇವೆ. ಮುನಿಶ್ರೇಷ್ಠರ ಭೀತಿಯನ್ನು ಹೋಗಲಾಡಿಸಿ, ಹೇದರಬೇಡೆಂದು ನಂದಿಯು ಗಣ ಸಮೂಹಕ್ಕೆ ಬೇಟೆಯ ವಿಷಯವನ್ನು ತಿಳಿಸು ಎಂದು ಆಜ್ಞಾಪಿಸಲು ಶಿವನ ಅಪ್ಪಣೆಯಂತೆ ನಂದಿಯು ಡಂಗೂರ ಹೊಡೆಸಿತು.

ಕರದ ಬಲೆಗಳ ಕಾಲ ಕಣ್ಣಿಗಳ ಬಡಿಕೋಲ

ಹೊರಳಿಗಳ ಸೊಪ್ಪಿನುಡುಗೆಯ ಹಾಸುಗಳನಾಂತು

ಪರಿವ ಕುನ್ನಿಗಳ ಶಾಬರಗಣಂ ಬಿಡದೆ ಪೊರಮಟ್ಟುದಾಕ್ಷಣಮ ಭವನು

ವರಶಿರೋಮಾಲೆಯಂ ಕಳಚಿ ಚಲ್ಲಣಮನು

ಟ್ಟರದೆ ಗುಂಜಾಭರಣಮಂ ತೊಟ್ಟು ಲೀಲೆಯಿಂ

ಒರಿದೆನಿಪ ಶಾಬರವನನುಕರಿಸೆ ತದ್ರೂಪಿನಿಂದೆ ದೇವಿಯರೆಸೆದರು (೧೧-೨೩೯).

ಶಿವ-ಪಾರ್ವತಿ ಬೇಡರಾದ ರೂಪ ಲಾವಣ್ಯವನ್ನು ಕವಿ ರಂಜನೀಯವಾಗಿ ತಿಳಿಸಿದ್ದಾನೆ. ಕೈಯಲ್ಲಿ ಹಿಡಿದಿದ್ದ ಬಲೆ, ಕಾಲಿನ ಹಗ್ಗ, ದೊಣ್ಣೆಯ ರಾಶಿ, ಸೊಪ್ಪಿನ ಉಡುಗೆ, ಹಾಸುಗಳನ್ನು ಹೊತ್ತು ನಡೆಯುವ, ನಾಯಿಗಳಿಂದ ಕೂಡಿದ 'ಬೇಡರಗಣ' ಕೂಡಲೆ ಹೊರಟಿತು. ಆ ಕ್ಷಣ ಶಿವನು ಶ್ರೇಷ್ಠವಾದ ರುಂಡಮಾಲೆಯನ್ನು ತೆಗೆದು, ಚಲ್ಲಣವನ್ನುಟ್ಟು ಗುಂಜಾಭರಣವನ್ನು ತೊಟ್ಟುಕೊಂಡು ಲೀಲೆಯಿಂದ ದೊಡ್ಡದಾದ ಬೇಡರ ರೂಪವನ್ನು ಅನುಕರಿಸಲು ಆ ರೂಪದಿಂದಲೇ ಅವನ ಹೆಂಡತಿಯೂ ಪ್ರಕಾಶಿಸಿದಳು. ಅವಳ ವರ್ಣನೆಯನ್ನು ಕವಿ ಹೀಗೆ ಹೇಳಿದ್ದಾನೆ (೧೨-೨೩೯): ಹಲ್ಲು ಬಿಳಿದಾಗಿ ಹೊಳೆಯುತ್ತಿತ್ತು, ಬಾಯಿ ದಾಸವಾಳಹೂವಿನಂತೆ, ಗುಂಗುರುಕೂದಲು, ಕಣ್ಣು ಹೊಳೆಯುವ ಹೂವಿನಂತೆ, ತೆಳುವಾದಹೊಟ್ಟೆ, ನುಣುಪಾದ ತೊಡೆ, ಕೋಮಲ ಶರೀರ, ಸಣ್ಣನಡುವು, ಮುದ್ದುಮುಖ, ಕೋಮಲವಾದ ಲತೆಯಂತೆ ಬಾಗಿದ ತೋಳಿನ, ಮೃದುವಾದ ಕೈಕಾಲಿನ, ದೊಡ್ಡ ಜಘನದ, ಗಡಿಗೆ ಮೊಲೆಯ, ಗಿಳಿಯಂತಹ ಮಾತಿನ, ಶ್ರೇಷ್ಠವಾದ ರಾಜಹಂಸದ ನಡಿಗೆಯ, ಮನೋಹರವಾದ ನೀಲಕಾಂತಿಯ, ಶಂಖದಂತಿರುವ ಕುತ್ತಿಗೆಯ ನಾನಾ ಶಕ್ತಿ ದೇವತೆಯರು ಬೇಡತಿಯರಾಗಿ ಪಾರ್ವತಿಯೊಡನೆ ಹೊರಟು ಬಂದರು. ನಾಯಿ, ಕೋಲು, ಕವಣೆ, ಕತ್ತಿ, ಲೆಕ್ಕವಿಲ್ಲದಷ್ಟು ಬಾಣಗಳ ಸಮೂಹಗಳಾದುವು. ಆ ದೇವ ಪ್ರಮಥ ಗಣಗಳೇ ಬೇಡರಾಗಿ ಶಿವನನ್ನು ಸೇರಿದವು.

ಇಂದ್ರಕೀಲಕ್ಕೆ ಹೊರಟಾಗ ಶಿವನು ಹೇಗಿದ್ದನೆಂದರೆ : ನಾನಾ ವಾದ್ಯಗಳು ಮೊಳಗುತ್ತಿದ್ದವು. ಶಿವನು ಸರ್ಪದಿಂದ ಕೂಡಿ, ನರಸಿಂಹನಂತೆ ಪಂಚಾಸ್ಯಯುಕ್ತ, ಸಮುದ್ರದಂತೆ ವಿಷ್ಣುವಿನ ವಿಲಾಸದಿಂದಲೂ ಮತ್ತು ಸಿಂಹ, ಕಪಿ, ಮೊದಲಾದವುಗಳಿಂದಲೂ, ಕೊಳದಂತೆ ಕಮಲದಿಂದ ಕಂಗೊಳಿಸುತ್ತಾ, ಹುಲಿಯಿಂದ ಯುಕ್ತವೂ, ಕತ್ತಲೆಯಿಂದ ತುಂಬಿ

ಘೋರವಾದ ಅರಣ್ಯವು ಶಿವನ ಎದುರಿನಲ್ಲಿ ಶೋಭಿಸುತ್ತಿತ್ತು (೧೪-೨೪೦). ಆ ಕಾಡಿನಲ್ಲಿ ಆನೆ, ಕುದುರೆ, ಖಡ್ಗಮೃಗ, ಕರಡಿ, ಜಂಕೆ, ಹುಲಿ ಮೊದಲಾದ ಪ್ರಾಣಿ ಪಕ್ಷಿಗಳ ಸಮೂಹ, ರಥ ಮತ್ತು ಹೊಳೆವ ಮರಗಳಿಂದ ಖಡ್ಗಧಾರಿಗಳಿಂದಲೂ, ಈಟಿಗಳ ಸಮೂಹದಿಂದ, ಧ್ವಜಗಳ ಗುಂಪಿನಿಂದ, ಧನುರ್ಧಾರಿಗಳು ಮತ್ತು ಬಂಜರುಭೂಮಿಯ ಪ್ರದೇಶಗಳಿಂದಲೂ, ಬಳಿಯ ಕೊಡೆಗಳು, ಬಾಣ ಸಂಘಾತ ಮತ್ತು ಧರ್ಭೆಯ ಹುಲ್ಲಿನಿಂದಲೂ ಆವರಿಸಿ ಆ ಪರ್ವತ ರಾಜನ ದೊಡ್ಡ ಸೈನ್ಯವೆಂಬಂತೆ ಕಣ್ಣಿಗೆ ಕಾಣಿಸಿತೆಂದು ಕಣ್ಣಿಗೆ ಕಟ್ಟುವಂತೆ ಕವಿ ವರ್ಣಿಸುತ್ತಾನೆ.

ಅರ್ಜುನನು ತಪಸ್ಸು ಮಾಡುವ ಇಂದ್ರಕೀಲ ಪರ್ವತದಲ್ಲಿರುವ ಮರಗಳೆಂದರೆ : ಆಲದಮರ, ಬಸರಿಮರ, ದಿಂಡಿಗಮರ, ತಂಡಸದಮರ, ನೆಲ್ಲಿಗಿಡ, ಜಾಲಿಗಿಡ, ಹೊನ್ನೆ, ಅರಳಿ, ಅತ್ತಿ, ಅರನೆಲ್ಲಿ, ಬೇಲ, ಅರನೇರಳೆ, ಮಾವು, ಹುಣಿಸೆ, ತದಕೆ, ತೂಬರೆ, ಬೆಳವಲ, ಬಲ್ಪತ್ರೆ, ಮುತ್ತುಗ, ಅರಟಾಳ, ತಡಸು, ಕಕ್ಕೆ, ಕೋಲೆ, ಹಿಪ್ಪಲಿ ಹೇಸವ, ಬಳಲು, ಬದರಿ, ಸಾಲವೃಕ್ಷ, ಹೊನ್ನೆ, ಚೆನ್ನಂಗಿ, ಇತ್ಯಾದಿ ತಳಿಯ ಮರಗಳಿದ್ದವು. ಅದೇ ರೀತಿ ನಾನಾತರದ ಪ್ರಾಣಿ- ಪಕ್ಷಿಗಳು, ಮಾನವ ಜನಾಂಗವು ನೆಲೆಸಿತ್ತು.

ಇಲ್ಲಿನ ಬೇಟೆಗಾರರು ಬಾಣಗಳನ್ನು ಚೂಪುಗೊಳಿಸಿ ಅದರ ಹಿಂಭಾಗಕ್ಕೆ ಗರಿಯನ್ನು ಕಟ್ಟುತ್ತ, ಬಿಲ್ಲುಗಳನ್ನು ಹೆರೆದು ಅದಕ್ಕೆ ಹೆದೆಯನ್ನು ಹೂಡುತ್ತ, ಕಲ್ಲಿಬಲೆಗಳನ್ನು ಶಬ್ದ ಮಾಡುತ್ತ, ನಾಯಿಯ ಕೊರಳಪಟ್ಟಿ ಹಗ್ಗಗಳನ್ನು ಹಸನುಮಾಡುತ್ತ, ನಾಯಿಗಳ ಮೈದಡವುತ್ತ, ಬೇಟೆಯನ್ನು ಆಕರ್ಷಿಸಲು ಬಳಸುವ ಪ್ರಾಣಿಗಳು ಸಮೀಪಿಸಲು ಅವುಗಳಿಗೆ ಮೇವನ್ನು ಕೊಟ್ಟು ಕರೆದು ಬೇಟೆಗಳನ್ನು ಚೆನ್ನಾಗಿ ಕಲಿಸುತ್ತ ತಮತಮಗೆ ಅನುಕ್ರಮವಾದ ಜಾತಿ ವಿದ್ಯೆಗಳಿಂದ ಕೂಡಿದ್ದ ಬೇಟೆಗಾರರಿಂದ ಕಾಡು ತುಂಬತ್ತು ಎನ್ನಲಾಗಿದೆ.

ಬೇಟೆಗಾರರ ಶಾರೀರಕ ಲಕ್ಷಣಗಳನ್ನು ಮತ್ತು ಧರಿಸಿದ ಉಡುಪನ್ನು ಕುರಿತು ಕವಿ ಹೀಗೆ ತಿಳಿಸಿದ್ದಾನೆ:

ತಲೆನವಿರ್ ಜುಂಜುಳ್ಗಿಗಡ್ಡ ಕೆಮ್ಮಿಸೆ ಕ
ಗ್ಗಳ ಪಸುರ್ ಕೀನಿವಲ್ಲುಗಳ ಕಾರೊಡಲ ಜೋ
ಲ್ದಿಳಿವ ಬಸುಂರ ಕೂನ ಬೆನ್ನ ಕುಗ್ಗಿದ ಕೊರಲ ಬೀಟೆಗಾಲ್ ಜಗ್ಗು ನಡೆಯ
ಬಲೆ ಕಲ್ಲಿ ಕುಬ್ಬಗಳ ಪೊತ್ತ ಹೆಗಲಿನ ದಡ್ಡು
ಗಳ ಪಿಡಿದ ಬಲೆಕೋಲ ಕುಕ್ಕುರಂಗಳ ಕೆಯ್ಯೊ
ಳಳವಟ್ಟ ಗಿಡುಗ ಲಗುಡಗಳೆಸೆಯಲಲ್ಲಿ ವನಚರರಿಂದೆ ವನಮೆಸೆದುದು (೨೨- ೨೪೩).

ಗಿಡ್ಡದಾದ ತಲೆಗೂದಲಿನ, ಸುರುಳಿಯಾದ ಗಡ್ಡ, ಕೆಂಪುಮೀಸೆ, ಕಣ್ಣಲ್ಲಿನ ಪಿಸುರ, ಕಿಸಿದಹಲ್ಲು, ಕಪ್ಪು ಶರೀರ, ಜೋತು ಇಳಿದ ಹೊಟ್ಟೆ, ಗೂನುಬೆನ್ನು, ಕುಗ್ಗಿದ ಕೊರಳು, ಕಿಸಿದ ಕಾಲು, ಜಗ್ಗು ಹಾಕಿದ ನಡಿಗೆ, ಬಲೆ, ಚೀಲ, ಬತ್ತಳಿಕೆಯನ್ನು ಹೊತ್ತು ಜಡ್ಡುಗಟ್ಟಿರುವ ಹೆಗಲಿನ ಬಲೆ, ಮುಖವಾಡ, ನಾಯಿಗಳ ಕೈಯಲ್ಲಿ ಹಿಡಿದ ಗಿಡುಗ, ದೊಣ್ಣೆಗಳು ಕಾಣುತ್ತಿರಲು ಬೇಟೆಗಾರರಿಂದ ಕಾಡು ಕಂಗೊಳಿಸುತಿತ್ತೆಂದು ವಿರೂಪಾಕ್ಷಪಂಡಿತ ತಿಳಿಸಿದ್ದಾನೆ. ಬೇಡತಿಯರ ವರ್ಣನೆಯೂ ಸಹ ರೋಚಕವಾಗಿ ಬಂದಿದೆ : ಕಾಡಾನೆಯ ಕುಂಭಸ್ಥಳದ ಮುತ್ತಿನ ಆಭರಣಗಳನ್ನು ತೊಟ್ಟು, ಮಾವಿನ ಚಿಗುರನ್ನು ಉಟ್ಟು, ದಂತದ ಬಳೆಯನ್ನಿಟ್ಟು, ಹೂವಿನ ಹಚ್ಚೆಗಳಲ್ಲಿ ಅಲಂಕರಿಸಿಕೊಂಡು, ಹೊಸದಾದ ದಂತದ ಓಲೆಗಳನ್ನು ಕಿವಿಗಳಲ್ಲಿ ಹಾಕಿಕೊಂಡು, ಶ್ರೇಷ್ಠವಾದ ಗಂಧದಮರದ ಒರಳುಗಳಲ್ಲಿ ಬದಿರಿನ ಅಕ್ಕಿಯನ್ನು ಸುರಿದು ಅನಂತರ ಎತ್ತರವಾದ ಆನೆಗಳ ದಂತಗಳಿಂದ ಮಾಡಿದ ಒನಕೆಗಳನ್ನು ಹಿಡಿದು ಕುಟ್ಟುತ್ತ ಹಾಡುತ್ತಿರುವ ಬೇಡತಿಯರಿಂದ ಕಾಡು ರಂಜಿಸಿತ್ತು ಎಂದಿದ್ದಾನೆ.

ಈ ರೀತಿ ಸುಂದರ ರಮಣೀಯವಾದ ಕಾಡನ್ನು ನೋಡಿದ ಬೇಡರು ಸುಮ್ಮನಿರಲಾರದೇ ಬಗ್ಗದಬಲೆ, ತಡಿಕೆವಲೆ, ಬೀಸುಬಲೆಗಳನ್ನು ಕೈಯಲ್ಲಿ ಹಿಡಿದು, ಆಗ ಹರಗಣ, ದೇವಗಣಗಳು ಬೇಡರ ಸಮೂಹದಂತೆ ಆನೆ, ಸಿಂಹ, ಶಾರ್ದೂಲ, ಭೇರುಂಡ ಮೊದಲಾದ ನಾನಾ ವಿಧದ ಮೃಗಗಳನ್ನು, ಪಾರಿವಾಳ, ಹೆಣ್ಣುಗಿಳಿ, ಲಾವುಗೆ, ಗುಬ್ಬಿ ಮುಂತಾದ ಪಕ್ಷಿಗಳ ಸಮೂಹವನ್ನು ಹುಡುಕುತ್ತ ಬರುತ್ತಿದ್ದರು. ಬೀಸುವ ಬೇಡರ ಸಮೂಹವು ದೇವಗಣ ನೋಡಿ ಬೇಟೆಯಾಡುತ್ತಿದ್ದರು. ಈ ಕಾವ್ಯದ ಮೂಲಕ ವಿಜಯನಗರ ಕಾಲದ ಬೇಡರ ಲಕ್ಷಣಗಳು ಹೇಗಿದ್ದವೆಂಬುದನ್ನು ಇಲ್ಲಿ ನೋಡಬಹುದು. ಪ್ರಾಣಿಗಳ ಶರೀರ ಸೀಳಿದಂತೆ ಬಾಣಪ್ರಯೋಗ ಮಾಡಿದ ಮಾಯಾಬೇಡರು ಎಲ್ಲ ಪ್ರಾಣಿಗಳಿಗೆ ಔಷಧಿಯನ್ನೆರೆದರು. ಆನೆಯನ್ನು ಸಿಂಹ ಬೇಟೆಯಾಡುವುದು (೨೯-೨೧೬) ಮುಂತಾದ ಸಂಗತಿಗಳನ್ನು ಕವಿ ನೈಜವಾಗಿ ಚಿತ್ರಿಸಿದ್ದಾರೆ. 'ಮಾಯಾಬೇಡರು' ಎಂಬ ನಾಮಪದವನ್ನು ಕವಿ ಬಳಸಿದ್ದಾನೆ. ಇಲ್ಲಿ ಹುಲಿ, ಹುಲ್ಲೆ, ಜಿಂಕೆ, ಮೊಲ, ಕಾಡುಕೋಣ, ಬೆಕ್ಕು, ಮೊಲ, ಮುಳ್ಳುಹಂದಿ, ಆನೆ, ಸಾರಂಗ, ತೋಳ, ಕರಡಿ, ಕೋಲೆ, ಹಂದಿ, ಮುಂಗುಸಿ, ನರಿ, ಉಡ, ಒಂದು ರೀತಿಯ ಜಿಂಕೆ, ಇಲಿ, ಶರಭ, ಭೇರುಂಡ, ಚಮರೀ ಮೃಗಗಳನ್ನೂ, ಓಡಾಡುವ ಕಸ್ತೂರಿಮೃಗವನ್ನು, ಪುನುಗು ಬೆಕ್ಕುಗಳನ್ನು ತಡೆಯದೆ ಹಿಡಿದು ಮಾಯಾಬೇಡರು ಬೇಟೆಯಾಡುತ್ತಿದ್ದರು. ನಾನಾ ತರವಾದ ಪಕ್ಷಿ ಸಮೂಹದಲ್ಲಿ ನವಿಲು, ಹದ್ದು, ರಾಜಹಂಸ, ಕ್ರೌಂಚ, ಬಕಪಕ್ಷಿ, ಟಿಟ್ಟಿಭ, ಕೋಗಿಲೆ, ಅರಗಿಳಿ, ಪಾರಿವಾಳ, ಲಾವಗೆ, ಗುಬ್ಬಿ, ಗೂಬೆ, ಜಾತಕಪಕ್ಷಿ, ಕೊಕ್ಕರೆ, ಹಂಗವಕ್ಕಿ, ಚಕೋರಪಕ್ಷಿ, ತಿತ್ತಿರಿ, ಸಾಳುವ, ಗರುಡ, ಕಾಗೆ, ಹೊಂಗಾಗೆ, ಹುಂಜ, ಚಾಳಾಂಕಿ, ಗೌಜುಹಕ್ಕಿ, ರಣಹದ್ದು, ಭರದ್ವಾಜ ಮುಂತಾದವುಗಳನ್ನು ಮಾಯಾಬೇಡರು ಬೇಟೆಯಾಡಿದ್ದನ್ನು ತಿಳಿಸಿದ್ದಾರೆ. ಮಾಯಬೇಡರು ಆ ಕಾಲದ ನಿಪುಣ ಬೇಟೆಗಾರರಿದ್ದಿರಬೇಕು ಇವರ ಮೂಲಕ ಶಿವ-ಅರ್ಜುನರ ಬೇಟೆ ಪ್ರಸಂಗವನ್ನು ಕವಿ ಚಿತ್ರಿಸಿದ್ದಾನೆ. ಇವರು ಗುಪ್ತಚಾರರಾದ ಗಣದವರು ಶಿವನಿಗೆ ದೂರು ಕೊಡುವಂತೆ ಆ ಕಾಡಿನಲ್ಲಿ ಹಂದಿ ಅರ್ಭಟಿಸುತ್ತಿದ್ದನ್ನು, ದೇವಗಣದ ಚೀರಾಟ ಸೃಷ್ಟಿಸಲಾಯಿತು. ಮೂಕದಾನವನು ಅತಿ ಭಯಂಕರವಾಗಿ ದೇವತೆಗಳು ಸಂಕಟಪಡುವಂತೆ ಮಾಡಿದನು. ಶಿವನು ಬಾಣ ಬಿಟ್ಟು ಅರ್ಭಟಿಸಲು ಅದು ಹಂದಿಯನ್ನು ತಾಗಿತು. ಮೈಯಲ್ಲಿ ನಾಟಿದ ಬಾಣ ಸಹಿತ ಆ ಹಂದಿಯು ಬಂದು ಅರ್ಜುನನ ಮುಂದೆ ಅಬ್ಬರಿಸಲು ಆಕ್ಷಣದಲ್ಲಿ ಶಿವನನ್ನು ಕುರಿತು ಮಾಡುತ್ತಿದ್ದ ತಪಸ್ಸಿಗೆ ಭಂಗವಾಯಿತು. ವೈರಿಭೀಕರನಾದ ಅರ್ಜುನನು ಆ ಹಂದಿಯನ್ನು ನೋಡಿ ರಾಕ್ಷಸನ ವೇಷಗೊತ್ತಿದೆಯಲ್ಲ ಎಂದು ಬಾಣದಿಂದ ಹೊಡೆದನು. ಕಠಿಣವಾದ ಬಾಣದೇಹವನ್ನು ಪ್ರವೇಶಿಸಲು ಆ ಹಂದಿ ನೆಲಕ್ಕೆ ಬಿದ್ದ ಕೂಡಲೇ ಪ್ರಾಣಬಿಟ್ಟಿತು. ಹಂದಿ ಸಿಕ್ಕಿತು ಎನ್ನುತ ಶಿವನಿಂದ ಕಳಿಸಲ್ಪಟ್ಟವನು ತಕ್ಷಣ ಅದನ್ನು ಪರಾಕ್ರಮದಿಂದ ಹಿಡಿದನು.

ಮಂದಿವಾಳವೆ ನಮ್ಮ ಕೂಡೆಲೆ ಪುಳಿಂದ ನಾಂ
ಕೊಂದ ಪಂದಿಯನೊಯ್ದು ಪೈ ನಿನ್ನ ತೆತ್ತಿಗನ
ತಂದು ತೋರಾತನೇತರ ಸಮರ್ಥಂ ಕಾಣ್ಬೆನೆಂದರ್ಜುನಂ ನುಡಿಯಲು
ಇಂದುಧರನವನೆಂದ ನುಡಿಯನಾಲಿಸಿ ನಲವಿ
ನಿಂದೆ ಬಂದಂ ನರನ ಪೊರೆಗೆಲೆ ತಪಸ್ಸಿದೇ
ನೆಂದು ನುಡಿದೈ ಪಂದಿ ನಮ್ಮದೆನೆ ಗುಡುಗುಡಿಸಿ ಕಲಿಪಾರ್ಥನಿಂತೆಂದನು (೪೧-೨೫೦)

ಎಲೆ ಬೇಡನೆ ನಾನು ಕೊಂದ ಹಂದಿಯನ್ನು ತೆಗೆದುಕೊಂಡು ಹೋಗುತ್ತೀಯಲ್ಲ, ನಮ್ಮೊಂದಿಗೆ ಸೊಕ್ಕಿನ ವರ್ತನೆಯೇ? ನಿನ್ನ ಹೊಣೆಗಾರನನ್ನು ಕರೆತಂದು ತೋರಿಸು, ಅವನು ಎಷ್ಟು ಸಾಮರ್ಥ್ಯಶಾಲಿ ನೋಡುತ್ತೇನೆ ಎಂದು

ಅರ್ಜುನನು ಹೇಳಲು: ಚಂದ್ರಶೇಖರನು ಅವನ ಮಾತುಕೇಳಿ ಬಳಿಗೆ ಬಂದನು. ಎಲೈ ತಪಸ್ವಿ ಏನೆಂದು ಹೇಳಿದೆ ? ಹಂದಿ ನಮ್ಮದು ಎನ್ನಲು, ಆರ್ಭಟಿಸುತ್ತ ಶೂರ ಅರ್ಜುನ ಹೀಗೆಂದನು : ಎಲೈ ಬೇಡನೇ ಸಾಕು, ನಿನ್ನ ಪೌರುಷ ನಮ್ಮಲ್ಲಿ ನಡೆಯುತ್ತದೆಯೇ? ನನ್ನ ಬಾಣದಿಂದ ಹಂದಿ ಸತ್ತಿತು. ಜೋಪಾನವಾಗಿ ಹೋಗು, ಇಲ್ಲದಿದ್ದರೆ ಬಾಣ ಸಮೂಹವನ್ನು ತೆಗೆದುಕೋ ಎನ್ನುತ್ತ ಪಾರ್ಥನು ಬಾಣ ಬಿಡಲು ಅವನ ಬಾಣಸಮೂಹ ಶಿವನನ್ನು ತಾಕದೆ ಪ್ರದಕ್ಷಿಣೆ ಹಾಕಿತು. ಅರ್ಜುನ ನೋಡಿ ಕೋಪದಿಂದ ಭೀಕರವಾದ ಬಾಣಗಳನ್ನು ಹೂಡಿದನು. ಆರ್ಭಟಿಸಿ ಅರ್ಜುನನು ಬಾಣ ಬಿಡಲು ಅದು ವೇಗದಿಂದ ಹೋಗಿ ಶಿವನನ್ನು ಸ್ವಲ್ಪ ತಾಗಿಯೂ ತಾಗದೆ ಹಿಂದಿರುಗಿತು. ಅರ್ಜುನನು ಉದ್ವೇಗಗೊಂಡು, ಕೊಬ್ಬಿದ ಕಿರಾತನೇ ಬೀಳು ಎಂದು ಮತ್ತೆ ಮತ್ತೆ ಜೊತೆ ಜೊತೆಯಲ್ಲಿ, ತಿರುಗಿ ತಿರುಗಿ ಬಾಣಗಳಿಂದ ಮುಚ್ಚಲು ಬಾಣಗಳು ಹೆಚ್ಚಿ ದಿಕ್ಕೆತ್ತ, ಬಾಣಗಳೆಲ್ಲಿ, ಶಿವನೆಲ್ಲಿ, ಅರ್ಜುನನೆಲ್ಲಿ, ಎಲ್ಲ ಮರ ಪರ್ವತ ಸಮೂಹಗಳೆಲ್ಲಿ, ಮತ್ತೆ ಆಕಾಶವೆಲ್ಲಿ ಎನ್ನುವುದೇ ತೋರದಂತೆ ಆವರಿಸಿದವೆನ್ನುತ್ತಾನೆ.

ಅರ್ಜುನನು ಬಾಣಗಳನ್ನು ಕಡಿದು ಉರುಳಿಸುತ್ತಿದ್ದಾನೆ. ಇವನೇನು ಮದನಾರಿಯಾದ ಶಿವನೊ? ಷಣ್ಮುಖನೊ? ಪರಶುರಾಮನೊ? ರಾಮನೊ? ದ್ರೋಣನೊ? ಭೀಷ್ಮನೊ? ಕರ್ಣನೊ? ಈ ರೀತಿಯ ಬಿಲ್ವಿದ್ಯೆಯ ಸಾಮರ್ಥ್ಯ ಇನ್ನಾರಿಗಿದೆ? ಇದಕ್ಕೆ ಮಾತ್ಸರ್ಯವೇಕೆ? ಭಲಾ! ಈ ಬೇಡನಿಗೆ ಸರಿಸಮಾನನಾದವನನ್ನು ನೋಡಿಲ್ಲ! ಎನ್ನುತ್ತ ಅರ್ಜುನನು ಬತ್ತಳಿಕೆಯಿಂದ ತೀಕ್ಷ್ಣವಾದ ಬಾಣಗಳನ್ನು ತೆಗೆದು ಸರಳಮಳೆಯನ್ನೇ ಸುರಿಯಲು ಶಿವನು ಅಷ್ಟನ್ನೂ ಖಂಡಿಸಿದನು. ಕಿರಾತಾರ್ಜುನರ ಕಾಳಗವು ಘೋರ ಹಂತಕ್ಕೆ ತಲುಪಿತು. ಹೊಸ ಬಾಣಗಳನ್ನು ಬಿಡುತ್ತಾ, ಕೋಪತಾಳಿ, ಬಾಣಬಿಟ್ಟು ಮೂದಲಿಸಿದ. ಶಿವನು ಅರ್ಜುನನ ಬಾಣದ ಪರಾಕ್ರಮವನ್ನು ನಿಲ್ಲಿಸುವನು. ಅವನ ಮನಸ್ಸಿಗೆ ಆಶ್ಚರ್ಯವನ್ನುಂಟುಮಾಡುವನು. ಕಾಡುವನು, ತನಗೆ ಸೋಲು ಉಂಟಾದುದಕ್ಕೆ ಅರ್ಜುನನು ಆಕ್ಷಣ ತೀಕ್ಷ್ಣವಾದ ಬಾಣವನ್ನು ಬಿಟ್ಟು ಹೆಮ್ಮೆ ಪಡುವನು. ತೂಗುವ ಬಾಣದಿಂದ ಅದನ್ನು ಶಿವನು ಕತ್ತರಿಸುವನು, ಕಡಿಯುವನು, ತುಂಡರಿಸುವನು, ಮಂತ್ರಾಸ್ತ್ರಗಳನ್ನು ಹೂಡಿ ಕೋಪದಿಂದ ಆರ್ಭಟಿಸಿ ಬಿಡಲು ಅಷ್ಟು ಅಸ್ತ್ರಗಳನ್ನು ಶಿವನು ನುಂಗಿದನು. ಪರ್ವತಗಳ ಗುಂಪು ಮುಸುಕಲು ವಜ್ರಾಯುಧ ಅಳುಕುವುದೇ?ಕಾಡಾನೆಯ ಬಳಗ ಮುತ್ತಲು ಸಿಂಹವೇನು ಹೆದರುವುದೇ ? ಸರ್ಪಗಳ ಸಮೂಹ ತೊಡರಲು ಗರುಡನು ಬೆದರಿ ಓಡುವನೆ? ಗಿರಿಜಾಪತಿಯು ಅರ್ಜುನನ ಮಂತ್ರಾಸ್ತ್ರಗಳನ್ನು ನಾಶಗೊಳಿಸಲು ದಿವ್ಯಾಸ್ತ್ರವನ್ನು ಹೂಡಿಬಿಟ್ಟು ಅಬ್ಬರಿಸಿದನು. ಅರ್ಜುನನು ಬಿಟ್ಟ ಬಾಣಗಳನ್ನು ಶಿವನು ನುಂಗಿ ಬೀಗುವನು. ಕೋಪಗೊಂಡು ಮೂದಲಿಕೆಯ ಮಾತುಗಳನ್ನಾಡುವನು, ನೋಡುವನು, ಮತ್ತೆ ಮತ್ತೆ ತಿರುಗಿ ಪಾರ್ವತಿಗೆ ಸೂಚಿಸುವನು. ಹಾಸ್ಯದ ಮಾತುಗಳಿಂದ ಅರ್ಜುನನು ನಾಚುವಂತೆ ಮಾಡುವನು. ತಿಳಿಗೇಡಿಯೆ ನಿನ್ನ ಶೌರ್ಯ ಮಾಯವಾಯಿತೆ? ತಗ್ಗಿತೆ? ಬಾಣಗಳೂ ಮುಗಿದು ಹೋಗಿ ಮಾಯವಾದುವೆ? ಹೋದುವೆ? ಯುದ್ಧದಲ್ಲಿ ನಮಗೆ ಸರಿಯಾದ ವೀರನೆ ಧೀರನೇ ನೀನು ? ಎಂದು ಶಿವನು ಕೇಳಿದಾಗ:

ಕಾಡಬೇಡಂ ಹೀನಕುಲದವಂ ನಿನ್ನಂತೆ
ಬೇಡನಲ್ಲಾಂ ಕ್ಷತ್ರಿಯಂ ವೀರನೆನಲಾವು
ಬೇಡರೆಂಬುದು ದಿಟಂ ಮೂಲೋಕವರಿಯೆ ನೀಂ ಬೇಡಿ ತಪವಂ ಮಾಡುತೆ
ಬೇಡನಲ್ಲೆನೆ ನಗರೆ ಮರುಳೆ ತಾಪಸ ನಿನ್ನ
ಮೂಡಿಗೆಯೊಳಂಬಿಲ್ಲ ವೀರನೆಂತಹೆ ನಿನ್ನ
ನೋಡಿ ಜರೆಯೆನಲೆನ್ನ ಪಳಿವವನೆ ನೀನೆನ್ನುತ ನಿಜಚಾಪದಿಂಬಿಡಿದನು (೫೦-೨೫೩)

ಕಾಡಿನ ಬೇಡನು ಕೀಳುಜಾತಿಯವ, ನಿನ್ನಂತೆ ನಾನು ಬೇಡನಲ್ಲ, ನಾನು ಕ್ಷತ್ರಿಯ, ವೀರ ಎನ್ನಲು, ಆ ಮಾತಿಗೆ ಶಿವನು ನಾವು ಬೇಡರೆಂಬುದು ನಿಜಸಂಗತಿ. ಮೂರುಲೋಕವೂ ತಿಳಿದಿರುವಂತೆ ನೀನು ಬೇಡಿ ತಪಸ್ಸನ್ನು ಮಾಡುತ್ತ ಬೇಡನಲ್ಲ ಎಂದರೆ ನಗುವುದಿಲ್ಲವೆ? ದಡ್ಡತಪಸ್ವಿ, ನಿನ್ನ ಬತ್ತಳಿಕೆಯಲ್ಲಿ ಬಾಣವಿಲ್ಲ. ಹೇಗೆ ವೀರನಾಗುತ್ತೀಯೆ ? ನಿನ್ನ ಸ್ಥಿತಿಯನ್ನು ನೋಡಿಕೊಂಡು ನನ್ನನ್ನು ಹೀಯಾಳಿಸು ಎನ್ನಲು, ನನ್ನನ್ನು ಹಳಿಯುವವನೇ ನೀನು ಎನ್ನುತ್ತ ಅರ್ಜುನನು ತನ್ನ ಬಿಲ್ಲಿನಿಂದ ಶಿವನನ್ನು ಹೊಡೆದನು.

ಚಂದ್ರಶೇಖರನು ನಸುನಗುತ್ತ ಪಾರ್ಥನ ಕೈಯ ಬಿಲ್ಲನ್ನು ಕಿತ್ತುಕೊಳ್ಳಲು ಅರ್ಜುನನು ಮೇಲೆಬಿದ್ದು ಕತ್ತಿಯಿಂದ ಅವನನ್ನು ತಿವಿದನು. ಶಿವನು ಅದನ್ನು ಕಿತ್ತುಕೊಳ್ಳಲು ಕಲ್ಲು ಗುಂಡುಗಳಿಂದ ಮರದ ಕೊಂಬೆಯಿಂದ ಅವನು ಯುದ್ಧ ಮಾಡಿದನು. ಶಿವನು 'ಎಲೆ ತಪಸ್ವಿ ನಿನ್ನಲ್ಲಿ ಈಗ ಹೊಸದಾದ ಆಯುಧಗಳು ಇದ್ದರೆ ತೆಗೆದುಕೊಂಡು ಬಾ' ಎಂದಾಗ ಅರ್ಜುನನು 'ನಾನು ಅಸಮಾನ ಪರಾಕ್ರಮಿ, ನನಗೆ ಆಯುಧ ಏಕೆ ಬೇಕು? ಮಲ್ಲಯುದ್ಧಕ್ಕೆ ಸಿದ್ಧವಾಗು' ಎಂದನು. ಆಗ ಶಿವನು ಪಾರ್ವತಿಗೆ ನೋಡು ಅರ್ಜುನನ ಪರಾಕ್ರಮವನ್ನು ಎಂದು ಹೇಳುತ್ತಾ, ಕೈಗಳನ್ನು ಚಾಚಿ, ತೋಳುಗಳನ್ನು ತಟ್ಟಿ ಆರ್ಭಟಿಸುತ್ತ, ಒಬ್ಬರನ್ನು ಒಬ್ಬರು ತಡೆದು-ಹಿಡಿದು ಝಾಡಿಸುವ, ತೆಗೆಯುವ, ತೊಡರುಹಾಕುವ ಹಿಡಿಯುವ ನಿಯಮವನ್ನು ನೋಡುವ, ಯೋಚಿಸುವ ಭೀಕರವಾದ ಧ್ವನಿಗಳನ್ನು ಮಾಡುವ ವಿರೋಧಿಯ ಮನದ ಅಭಿಪ್ರಾಯವನ್ನು ತಿಳಿಯುವ ಜಾಣ್ಮೆ ಶಿವ ಮತ್ತು ಅರ್ಜುನರಲ್ಲಿ ಕಾಣಿಸಿತು. ಶಿವ ಬಗಿದರೆ ಅರ್ಜುನ ಬಿಡಿಸಿಕೊಳ್ಳುವನು. ಈಶ್ವರ ಹಿಮ್ಮೆಟ್ಟುವನು, ಅರ್ಜುನ ಅವನನ್ನು ಹಿಡಿಯುವನು. ಶಿವನು ಎದುರಿಗೆ ಹಾರಿದರೆ ಅರ್ಜುನ ತಪ್ಪಿಸಿಕೊಳ್ಳುವನು. ಶಿವನು ಆರ್ಭಟಿಸಿ ಮೇಲೆ ಬಿದ್ದರೆ ತೋಳ್ಬಲದಿಂದ ಬಿಡಿಸಿಕೊಳ್ಳುವ, ಹಿಡಿಯುವ, ತಡೆಯುವ ಸಾಹಸ ಅರ್ಜುನ ಮತ್ತು ಶಿವರಲ್ಲಿ ಹೊಸತಾಗಿ ಕಾಣಿಸಿತು. ಮಲ್ಲಯುದ್ಧದಲ್ಲಿ ಇಬ್ಬರ ಚಾತುರ್ಯವನ್ನು ವರ್ಣಿಸುವುದು ಅಸಾಧ್ಯ. ಈ ಬೇಡನು ನನ್ನೊಡನೆ ಯುದ್ಧ ಮಾಡುವಷ್ಟು ಪರಾಕ್ರಮಿಯೆ ಎಂದು ಅಣಕವಾಗಿ ಶಿವನನ್ನು ನಾನಾ ರೀತಿಯಲ್ಲಿ ಹೊಡೆಯಲು ಹವಣಿಸಿದನು. ಯುದ್ಧಭೂಮಿಯಲ್ಲಿ ಅರ್ಜುನನನ್ನು ಕೆಳಕ್ಕೆಡವಿ ಶಿವನು ತುಳಿಯಲು ಮೃದುವಾದ ಪಾದದ ತೂಗುವಿಕೆಯಿಂದಲೇ ಬಾಯಲ್ಲಿ, ಮೂಗಿನಲ್ಲಿ ರಕ್ತಕಾರಿತು. ಅರ್ಜುನನ ಶೋಚನೀಯ ಸ್ಥಿತಿಯಿಂದ ಶಿವನು ಮನಃ ಪರಿವರ್ತಿತನಾಗಿ ಮನದಲ್ಲಿ ಮರುಗಿದನು. ಅರ್ಜುನನ ಅಂಗಾಂಗವೆಲ್ಲ ನುಗ್ಗಿ ಮೂರ್ಛೆ ಹೋಗಿ ಮತ್ತೆ ಚೇತರಿಸಿಕೊಂಡು ಯಾವ ಜನ್ಮದ ಮಹಾಪಾಪವೋ ಎಂದು ಶಿವ, ಶೈವಧರ್ಮವನ್ನು ಹಳಿದು ಶಿವಭಕ್ತರು ಹೀಯಾಳಿಸಿದ್ದರಿಂದ ಈ ಗತಿಯಾಯಿತು ಎಂದು ಈಶ್ವರನನ್ನೇ ಮೊರೆ ಹೋಗುತ್ತಾನೆ.

ಮಳಳಿನ ಲಿಂಗವ ಮಾಡಿ ನಾನಾತರದ ಹೂಗಳನ್ನಿಟ್ಟು ಭಕ್ತಿಯಿಂದ ಪೂಜೆ ಮಾಡಿ ಶಿವಮಂತ್ರವನ್ನು ಜಪಿಸಿ ಪ್ರದಕ್ಷಿಣೆ ಮಾಡಿ, ಲಿಂಗವನ್ನು ನೋಡಿ ಸಂತೋಷದಿಂದ ಮುಕ್ಕಣ್ಣನೆ, ದಕ್ಷನ ಯಾಗವನ್ನು ನಾಶಗೊಳಿಸಿದವನೆ, ಲೋಕದ ಒಡೆಯನೇ, ಬೇಡನು ನನ್ನನ್ನು ಪರಾಭವಗೊಳಿಸಿದನು. ಇವನನ್ನು ಶಿಕ್ಷಿಸುವಷ್ಟು ಸಾಮರ್ಥ್ಯ ಕೊಡೆಂದು ಪ್ರಾರ್ಥಿಸಿದನು:

ಇತ್ತಲರ್ಜುನನಭವನಂ ಪೂಜಿಸಿದ ಕುಸುಮ
ಮತ್ತಲ್ ಕಿರಾತಮಸ್ತಕದೊಳಿರೆ ಕೌತುಕದೆ
ಮತ್ತೆ ಪೂಜಿಸಲವು ಕಿರಾತಮಂಡೆಯೊಳಿರಲ್ ಶಿವನೆಂದು ತಿಳಿದುಕೂಡೆ
ಮತ್ತನಾದೆಂ ದೇವ ಕಾಯೆನುತ್ತೆರಗೆ ನರ

ನುತ್ತಮಾಂಗವನಿರದೆ ನೆಗಪಿ ಗಿರಿಜಾಧವಂ

ಬಿತ್ತರಿಸಿದಂ ತನ್ನ ನಿಜಮೂರ್ತಿಯಂ ಶಾಬರವನುಳಿದು ಸಂತಸದೊಳು (೬೦-೨೫೭)

ಅರ್ಜುನ ಶಿವನನ್ನು ಪೂಜಿಸಿದ ಹೂಗಳು ಅತ್ತ ಬೇಡನ ತಲೆಯಲ್ಲಿ ಕಾಣಿಸಿಕೊಳ್ಳಲು ಚಕಿತನಾಗಿ ಮತ್ತೆ ಪೂಜೆ ಮಾಡಿದನು. ಅವೂ ಕಿರಾತನ ತಲೆಯಲ್ಲಿರಲು ಅವನು ಶಿವನೇ ಎಂದು ತಿಳಿದು ತಕ್ಷಣ 'ದೇವ, ನಾನು ಗರ್ವಿತನಾದೆ. ಕಾಪಾಡು ಎನ್ನುತ ಕಾಲಿಗೆ ಬಿದ್ದನು'. ಶಿವನು ಅರ್ಜುನನ ತಲೆಯನ್ನು ಹಿಡಿದೆತ್ತಿ ತನ್ನ ಬೇಡನ ರೂಪವನ್ನು ಬಿಟ್ಟು ಸಂತೋಷದಿಂದ ನಿಜಸ್ವರೂಪವನ್ನು ತೋರಿಸಿದನು. ಆ ಸ್ವರೂಪ ಹೇಗಿತ್ತೆಂದರೆ : ಬಾಲಚಂದ್ರನ, ದೇವಗಂಗೆಯ ಕೆಂಜಡೆಯ. ಐದು ಮುಖಗಳಲ್ಲಿ ಹೊಳೆಯುವ ಹದಿನೈದು ಕಣ್ಣುಗಳ, ಹತ್ತು ತೋಳುಗಳ, ಹುಲಿಯ ಚರ್ಮದ, ಡಕ್ಕೆ, ಡಮರುಗ, ಶೂಲ ಮೊದಲಾದ ಆಯುಧಗಳನ್ನು ಹಿಡಿದ ಕೈಗಳ, ಶುದ್ಧವಾದ ಸ್ಫಟಿಕದಂತೆ ಪ್ರಕಾಶಿಸುವ ದೇಹದ, ಉಜ್ವಲಿಸುವ ನೂರು ಕೋಟಿ ಸೂರ್ಯ-ಚಂದ್ರರ ತೇಜವುಳ್ಳ ತೊಡೆಯಲ್ಲಿ ಕುಳಿತಿದ್ದ ಪಾರ್ವತಿಯ ಸಮೇತ ಪಂಪಾವಿರೂಪಾಕ್ಷನು ಅರ್ಜುನನ ಎದುರಿನಲ್ಲಿ ಕಂಗೊಳಿಸಿದನು. ವೀರಭದ್ರ, ಷಣ್ಮುಖ, ನಂದಿ, ಭೃಂಗಿ, ಗಣೇಶ ಮೊದಲಾಗಿದ್ದ ನಾನಾ ಪ್ರಮಥ ವೀರರಲ್ಲಿ ಬೇಡರೂಪವನ್ನು ಬಿಟ್ಟು ನಿಜರೂಪದಿಂದ ಶಿವನನ್ನು ಬಳಸಿರಲು, ಪರಾಶರ, ಅತ್ರಿ, ಅಂಗೀರಸ, ಕೌಶಿಕ ಮಹಾಋಷಿ, ವಶಿಷ್ಠಾಧಿಗಳು ಶಿವನ ಎದುರಿನಲ್ಲಿ ಜಯಕಾರ ಮಾಡಿದರು. ಶಿವನ ಬಿರುದುಗಳನ್ನು ಸ್ಮರಿಸುತ್ತಾ ವಿವಿಧ ರೀತಿಯ ಪರಾಕ್ರಮಗಳನ್ನು ಹೊಗಳುತ್ತಾ ಅರ್ಜುನನು ಲೋಕಪೂಜನೆ ಕಾಪಾಡು, ನನ್ನ ಅಪರಾಧವನ್ನು ಮನ್ನಿಸು, ಲೋಕಕ್ಕೆಲ್ಲ ಆರಾಧನೆ ಮಾಡು, ನಿನ್ನ ಭಕ್ತನನ್ನು ಕೈ ಬಿಡಬೇಡ ಎಂದು ಬೇಡಿಕೊಂಡನು. ಶಿವನು ಅರ್ಜುನನ ಬಿಲ್ಲು, ಬಾಣಗಳನ್ನು ಹಿಂದಕ್ಕೆ ಕೊಟ್ಟನು. ಅರ್ಜುನನು ಶಿವನಿಗೆ ಪಾಶುಪತಾಸ್ತ್ರವನ್ನು ಕೇಳಲು ಅವನು ದಯಪಾಲಿಸಿದನು. ಪಾರ್ವತಿಯು ಸಹ ಅಂಜನಾಸ್ತ್ರವನ್ನು ಕೊಟ್ಟಳು.

ವಿರೂಪಾಕ್ಷಪಂಡಿತನು ಯಾರೊಬ್ಬ ಆಶ್ರಯದಾತನನ್ನೂ ಕಾವ್ಯದ ನಾಯಕನಾಗಿ ಮಾಡಿಕೊಳ್ಳದೆ, ನೆಲೆಸಿರುವ ಸ್ಥಳದ ಪಂಪಾವಿರೂಪಾಕ್ಷನನ್ನು ಸ್ತುತಿಸುತ್ತಾನೆ. ಇವನ ಒಲವು ಹೆಚ್ಚಾಗಿ ಶಿವನ ಮೇಲಿರುತ್ತದೆ. ವರ್ಣನೆಯು ಸಹಾ ಶಿವ ಮತ್ತು ಅವನ ಪರಿವಾರಕ್ಕೆ ಮೀಸಲಿದೆ. ಹೀಗಾಗಿ ಅರ್ಜುನನ ನಿಜವಾದ ಪರಾಕ್ರಮ ಇವನಲ್ಲಿ ಯಥೇಚ್ಛವಾಗಿ ರೂಪಗೊಂಡಂತಿಲ್ಲ. ಶೈವಧರ್ಮದ ನೆರಳಲ್ಲಿಯೇ ಕಥೆ ಸಮಕಾಲೀನ ಸಂದರ್ಭಗಳನ್ನು ಒಳಗೊಂಡಿದೆ. ಪಂಪ ಮತ್ತು ಕುಮಾರವ್ಯಾಸರಿಗಿಂತ ಭಿನ್ನವಾದ ಕಥಾ ಹಂದರವನ್ನು ಸೃಷ್ಟಿಸಿಕೊಳ್ಳುತ್ತಾನೆ.

೫. ಷಡಕ್ಷರದೇವನ ಶಬರಶಂಕರವಿಳಾಸ : ಷಡಕ್ಷರದೇವ ಹದಿನೆಂಟು ವರ್ಣನೆಗಳ ನಿಮಿತ್ತ ಕಿರಾತಾರ್ಜುನೀಯ ಪ್ರಸಂಗವನ್ನು ತಂದಿರುವುದು ಗಮನಾರ್ಹ. ಈ ಕೃತಿಯಲ್ಲಿ ಶಿವನ ಲೀಲೆ ಮಾನವ ರೂಪದಲ್ಲಿ ಪ್ರಕಟಗೊಳ್ಳುವುದು ಮೂರನೇ ಹಾಗೂ ಕೊನೆಯ ಸನ್ನಿವೇಶ. ಮಾನವನು ದೇವರೆಡೆಗೆ ಸಾಗುವ ಪ್ರಯತ್ನ, ಇಲ್ಲಿ ದೈವತ್ವ ಮಾನವನ ರೂಪದಲ್ಲಿದೆ. ಷಡಕ್ಷರದೇವನ ಶಬರಶಂಕರವಿಳಾಸದ ೩ನೇ ಆಶ್ವಾಸವು ಪೂರ್ಣವಾಗಿ ಬೇಡರ ಜೀವನದ ವಿವಿಧ ಮುಖಗಳನ್ನು ಪರಿಚಯಿಸುತ್ತದೆ. ಅವರ ರೀತಿ, ನೀತಿ, ಉಡುಗೆ, ತೊಡುಗೆ, ಸ್ವಭಾವ, ಯುದ್ಧ ಸಾಮಗ್ರಿಗಳು, ಯುದ್ಧಮಾಡುವ ರೀತಿ, ದೇವತೆಗಳು ಬೇಡರ ವೇಷಧರಿಸುವುದು ಸ್ಪಷ್ಟ. ಹೀಗಾಗಿ ಇದನ್ನು ಬೇಡರ ಕತೆಯನ್ನು ಹೇಳುವ ಕೃತಿ ಎನ್ನಬಹುದು.

ಇಲ್ಲಿ ಅರ್ಜುನ ಮತ್ತು ಶಿವ ಮಾಡಿದ ಯುದ್ಧದ ಸನ್ನಿವೇಶ ಬಹುಮುಖ್ಯವಾದದು. ನರ ಮತ್ತು ಮುಷ್ಟಿ ಎಂಬ ಎರಡು ಯುದ್ಧಗಳಿವೆ. ಶಿವನ ಮುಷ್ಟಿ ಯುದ್ಧಕ್ಕೆ ಅರ್ಜುನನು ನೆಲಕ್ಕೆ ಬಿದ್ದುದನ್ನು ಗಮನಿಸಿ ಆತ ಸೋತನೆಂದು

ಮೂಲಭಾರತದಲ್ಲಿ ಹೇಳಲಾಗಿದೆ. ಪರಸ್ಪರವಾಗಿ ಶಿವನು ಆಕಾಶಕ್ಕೆ ಜಗಿದು ಅರ್ಜುನನಿಗೆ ದೊಡ್ಡ ಆಘಾತ ಮಾಡಲು ಪ್ರಯತ್ನಿಸುತ್ತಿದ್ದಾಗ, ಅರ್ಜುನನು ಶಿವನ ಕಾಲನ್ನು ಹಿಡಿದು ಜಗ್ಗಿ ನೆಲಕ್ಕಪ್ಪಳಿಸಲು ಪ್ರಯತ್ನಿಸಿದಾಗ ಶಿವನು ಪ್ರತ್ಯಕ್ಷನಾದನೆಂದು ಕಿರಾತಾರ್ಜುನೀಯದಲ್ಲಿ ತಿಳಿಸಲಾಗಿದೆ. ಪಂಪನ ಪ್ರಕಾರ ತನ್ನ ಕಥಾ ನಾಯಕನಾದ ಅರ್ಜುನನನ್ನು ಗೆಲ್ಲಿಸುವುದು ಅವನ ಇಚ್ಛೆಯಾಗಿರುವಂತಿದೆ. ಅರ್ಜುನನು ಶಿವನ ಗಂಟಲನ್ನು ಮೆಟ್ಟಿದನೆಂದು ಹೇಳುತ್ತಾನೆ. ಶಿವನ ಹೊಡೆತಕ್ಕೆ ಅರ್ಜುನನ ಬಾಯಿ ಮೂಗಿನಲ್ಲಿ ರಕ್ತಸ್ರಾವವಾಯಿತು. ಅವನು ನಿಶ್ಶಕ್ತನಾದ, ತಾನು ಶಿವಧ್ಯಾನವನ್ನು ಮರೆತುದುದೇ ಮೂಲಕಾರಣವೆಂದು ಬಗೆದು ಶಿವನನ್ನೊಲಿಸಿಕೊಳ್ಳಲು ಮಳಲಲಿಂಗದ ಪೂಜೆಗೆ ಕೈಹಾಕುವನು. ತಲೆಮೇಲೆ ಮುಡಿಸಿದ ಹೂಗಳು ಬೇಡನ ತಲೆಯ ಮೇಲೆ ಕಾಣಿಸಿಕೊಳ್ಳುತ್ತವೆ. ಆಗ ಅರ್ಜುನ ಕಿರಾತನೇ ಶಿವನೆಂದು ಅರಿತುಕೊಂಡು ಮೊರೆ ಹೋಗುವನು. ಶಿವನು ಪ್ರತ್ಯಕ್ಷನಾಗಿ ಪಾಶುಪತಾಸ್ತ್ರವನ್ನು ನೀಡಿದರೆ, ಪಾರ್ವತಿಯು ಬ್ರಹ್ಮಶಿರೋಸ್ತ್ರವನ್ನು ಕೊಡುವಳು. ಷಡಕ್ಷರನು, ವಿರೂಪಾಕ್ಷ ಪಂಡಿತನ ಧಾಟಿಯಲ್ಲಿಯೇ ಶಿವ-ಅರ್ಜನ ಪಾತ್ರಗಳನ್ನು ಚಿತ್ರಿಸುತ್ತಾನೆ.

ಶಿವನ ಒಲುಮೆಗೆ ಅರ್ಜುನನ ತಪಸ್ಸು :'ಅರೆ ಮುಗುಳ್ಪಕ್ಕಿಗಳ್ಮಿಡು ಕುಗೂರದ ಚಂದುಟಿ ನಿಶ್ಚಲಾಂಗ ಮುರ್ವರೆಯೊಳೆತಳ್ತ ಕಾಲ್ದಿದಿ ಸಮುದ್ಧೃತ ಬಾಹುಗೆ ಬಂದ ಚಾಪಭಾಸುರತರ ಖಡ್ಗಮಗ್ಗದ ಕರಾಲಿ ಯಡಾಯುಧ ಮಾಳ್ದ ಬೆನ್ನ ವಿಸ್ಫುರಿತ ನಿಷಂಗೊಮೊಪ್ಪಿ' ಪೊಸವೇಷದ ತಾವಸನೊಪ್ಪಿ ತೋರಿದಂ' ಮುನಿಯು ಅನಿಮಿಷ ದೃಷ್ಟಿಯ ಲಕ್ಷ್ಯಾನು ಸಂಧಾನದಿಂದ ಜಪಿಸುತ್ತ ಚೆಂದುಟಿಯನ್ನು ಕದಲಿಸುತ್ತ, ಮೈಯನ್ನ ಚಲಿಸದೆ, ತುದಿಗಾಲನ್ನೇರಿ, ಊರ್ಧ್ವ ಬಾಹುವಾಗಿ ಧನುರ್ಬಾಣಗಳೊಡನೆ ಋಷಿ ಲಕ್ಷಣ ವೀರಲಕ್ಷಣವುಳ್ಳವನಾಗಿ ತೋರಿದನು. ಕಿರಾತಧಾರಿ ಶಿವ ನೇರವಾಗಿ ಅರ್ಜುನನಿಗೆ ಪಾಶುಪತಾಸ್ತ್ರ ಕೊಡದೆ ಯುದ್ಧಮಾಡಿ ಅವನ ಶೌರ್ಯವನ್ನು ಲೋಕಕ್ಕೆ ಪ್ರಕಟಿಸುವುದು, ಪಾಶುಪತಾಸ್ತ್ರವನ್ನು ನೀಡುವುದು ಶಿವನ ಆಶಯ. ಯುದ್ಧ ಅರ್ಜುನ-ಶಿವನ ನಡುವೆ ಸಂಭವಿಸುವುದು ವಿಚಿತ್ರ. ಮೂಕಾಸುರನೆಂಬ ರಾಕ್ಷಸ ಹಂದಿವೇಷಧರಿಸಿ, ಬೇಡಪಡೆಯನ್ನು ನುಂಗಲು ಹಾತೊರೆಯುತ್ತದೆ. ಶಿವ ಮತ್ತು ಅರ್ಜುನನನ್ನು ಸಂದಿಸುವ ಸಂದಿ ಉಗ್ರಹಿ ಈ ಕಾಡುಹಂದಿ. ಸತ್ತ ಕಿರಾತನಿಗೆ ಪ್ರಾಣಕೊಟ್ಟ ಸಂದರ್ಭವಿದೆ. ಶಿವನು ಬಾಣದಿಂದ ಹಂದಿಗೆ ಹೊಡೆದಾಗ ನರಳುತ್ತಹಂದಿ ಓಡತೊಡಗಿತು. ಸಮೀಪದಲ್ಲಿ ತಪೋನಿರತನಾದ ಅರ್ಜುನ ಭಯಾನಕ ರಣ ಶಬ್ದವನ್ನು ಮಾಡುತ್ತ ಬೊಬ್ಬರಿವ ಬೇಡರ ಅಬ್ಬರವನ್ನು ಕೇಳಿ ಇದಾವ ದೆಸೆಯಿಂದ ಬರುತ್ತದೆ ಎಂದು ತಪಸ್ವಿಯಾದ ಅರ್ಜುನನು ತಪಸ್ಸನ್ನು ನಿಲ್ಲಿಸಿ ಕಣ್ತೆರೆದು ಭೀಕರವಾದ, ಆಕಾರವುಳ್ಳ ಮಹಾ ವರಾಹವನ್ನು ನೋಡಿ ಕ್ಷತ್ರಿಯ ಆಚಾರದಂತೆ ಬತ್ತಳಿಕೆಯಿಂದ ಬಾಣ ತೆಗೆದು ಹೊಡೆದನು. ಶಿವನ ಬಾಣಕ್ಕೆ ಸಾಯದ ಹಂದಿ ಅರ್ಜುನನ ಬಾಣಕ್ಕೆ ಸತ್ತಿತು. ಮುಖ್ಯವಾದ ಕಥಾಭಾಗ ಇದೇ. ಶಿವನಿಗಿದು ಸದಾವಕಾಶವಾಯಿತು. ಶಂಕರನು ಅಲ್ಲಿಗೆ ಬಂದು ಈ ಹಂದಿಯು ನಮ್ಮದು ನಾನು ಕೊಂದಿದ್ದೇನೆ ಈಚೆಗೆ ಎಳೆ ಎಂದು ಭೂತಗಣಕ್ಕೆ ಹೇಳುವುದನ್ನು ಕೇಳುತ್ತ ಪಾರ್ಥನು ಆ ಕಿರಾತನು ಈಶ್ವರನೆಂಬುದನ್ನು ಅರಿಯದೆ, ಈ ಹಂದಿಯು ನನ್ನ ಬಾಣದಿಂದಲೇ ಸತ್ತಿದ್ದು ಎಂದು ಕಿರಾತನನ್ನು ಪ್ರಬಲವಾಗಿ ರೇಗಿಸಿದನು. ಇಲ್ಲಿ ಸಂಘರ್ಷದ ಚಿತ್ರಣ ಬರುತ್ತದೆ. ಷಡಕ್ಷರದೇವನ ಮುಖ್ಯ ಉದ್ದೇಶ ಇದಾಗಿದೆ ಎಂದು ಕಾಣುತ್ತದೆ. ಶಿವನ ಬಾಣದ ಏಟಿಗೆ ಹಂದಿ ಏಕೆ ಸಾಯಲಿಲ್ಲ ? ಅರ್ಜುನನ ಏಟಿಗೆ ಏಕೆ ಸತ್ತಿತು ಎಂದು ಕವಿಯ ಉತ್ಸಾಹಕ್ಕೆ ಸಾಕ್ಷಿಯಾಗಿದೆ. ಶಿವ -ಅರ್ಜುನರ ಕಾಳಗಕ್ಕೆ ಇದೊಂದು ಸಂದರ್ಭ ಎಂಬುದು ಸ್ಪಷ್ಟ. ಶಬರ ಶಂಕರ ವಿಳಾಸದಲ್ಲಿ ಹಂದಿಯೇ (ವರಾಹ) ಕೇಂದ್ರಬಿಂದು.

ಎಲೆ ಶಬರ ಕಾಡ ಬಡನರಿ

ಮೊಲ ಪುಲ್ಲೆಗಳಲ್ಲಿ ನಿನ್ನ ಸಾಹಸಮುಂ ದೋ

ರ್ಬಲಮುಂ ಮೆರೆಗುಮದಲ್ಲದೆ

ಛಲದಂಕನೊಳೆನ್ನೊಳೆಂತು ಮೇಂ ಮೆರೆದಪುದೆ (೪ :೨೭ : ೭೫)

ಅರ್ಜುನನ ಅಹಂಕಾರ ತಾನೊಬ್ಬನೆ ಶೂರನೆಂದು ತಿಳಿದಿರುವುದನ್ನು ಶಿವನು ಅವನ ಮಾತಿಗೆ ನಸುನಕ್ಕು ಅವನ ಧೈರ್ಯವನ್ನು ಸಹಜವಾದ ಶೌರ್ಯವನ್ನು ತನ್ನ ಬಳಿಯಲ್ಲಿರುವ ಪಾರ್ವತಿಗೆ ಕಣ್ಸನ್ನೆಯಿಂದಲೆ ತೋರಿಸುತ್ತಾನೆ: ಎಲೈ ತಪಸ್ವಿಯೇ ನಿನ್ನ ಕಾರ್ಯವಂತಿರಲಿ, ಈ ನಿನ್ನ ತಪಸ್ಸು ಮತ್ತು ನಿನ್ನ ಯುದ್ಧ ಇವೆರಡು ಮೇಳವಿಸಿಕೊಂಡಿವೆಯಿಲ್ಲಿ, ಇದು ತಪಸ್ಸಿಗೆ ಸಲ್ಲದು ಎಂದು ಕಟುವಾಗಿ ನುಡಿಯಲು ಅರ್ಜುನನಿಗೆ ಪ್ರತಿಷ್ಠೆಯ ಪ್ರಶ್ನೆ. ಸಾಮಾನ್ಯ ಬೇಡ ನನ್ನಂಥ ಶೂರನನ್ನು ಹಾಸ್ಯ ಮಾಡುತ್ತಿದ್ದಾನಲ್ಲ ಎಂಬ ಭಾವನೆ ಅವನಲ್ಲಿದೆ. ಶಿವನು ಅರ್ಜುನನಿಗೆ ಪಾಶುಪತಾಸ್ತ್ರವನ್ನು ಕೊಡುವುದು ಗರ್ವಕ್ಕಾಗಿ ಅಲ್ಲ. ಆ ಗರ್ವವನ್ನು ಕಳೆದು ಮಾನವನಾಗಿ ಮಾಡುವುದು ಶಿವನ ಉದ್ದೇಶವಾಗಿದೆ. ಇದರಿಂದಾಗಿಯೇ ಮಾನವೀಯ ಕೃತಿಯೆಂದು ಈ ಕಾವ್ಯ ಖ್ಯಾತಿ ಪಡೆದಿರಬೇಕು. ಸಾಮಾನ್ಯ- ಅಸಾಮಾನ್ಯ ಎಂಬ ತಾರತಮ್ಯದ ಭಾವನೆಯಲ್ಲಿ ಮನುಷ್ಯನ ಮನಸ್ಸು ಅಡಗಿದೆ. ಒಂದೆಡೆ ಪ್ರೀತಿ, ಇನ್ನೊಂದೆಡೆ ಯುದ್ಧ ಅರ್ಥಪೂರ್ಣವಾಗಿದೆ. ಕಿರಾತನ ಪ್ರತಿಯೊಂದು ಮಾತುಗಳು ಅರ್ಜುನನ ಮನಸ್ಸಿಗೆ ಪ್ರಾಣಸಂಕಟವಾಗಿವೆ :

ಏನಾದೊಡೇನೊ ನಿನ್ನ ತ

ಪೋನೀತಿಯದಂತಿರ್ಕೆ ನಿನ್ನ ಧನುರ್ವಿ

ದ್ಯಾ ನಿಪುಣತೆಯೆಂತೆಂತನು

ಮಾನಮದೇಂ ತೋರ್ಪುದೆನ್ನೊಳಡಗಿ ನಿಸರಿವೆಂ (೪ : ೩೫ : ೭೬).

ಎಲೈ ವಿಲಕ್ಷಣ ಮುನಿಯೆ, ನಿನ್ನ ತಪಸ್ಸಿನ ನ್ಯಾಯವೂ ಹೇಗಾದರೂ ಇರಲಿ, ನಿನ್ನ ಬಿಲ್ವಿದ್ಯೆಯ ಭನ್ನಾಣವನ್ನು ನನಗೆ ತೋರಿಸು ನೋಡುತ್ತೇನೆ ಎಂದು ;ಎಲೈ, ಸುಮ್ಮನೆ ಹರಟೆಬೇಡ ಕಾಳಗಕ್ಕೆ ಬಾ, ನಿನ್ನ ತೋಳ ಬಲ್ಮೆ ನೋಡುವೆನು ಎಂದು ಶಿವನು ಕಾಳ್ಗದರಿ ಅರ್ಜುನನಿಗೆ ಆಹ್ವಾನಿಸುತ್ತಾನೆ. ಅರ್ಜುನ ಈ ಸಾಮಾನ್ಯ ಬೇಡ ನನ್ನೊಂದಿಗೆ ಯುದ್ಧ ಮಾಡುತ್ತಾನೆಂಬುದನ್ನು ತಿಳಿದು ಕೋಪಗೊಂಡನು. ಮಹಾಶೂರನಾದ ಅರ್ಜುನ ಶಿವನ ಗರ್ವ ಮುರಿಯಲು ಪಣತೊಟ್ಟ. ಕೋಪಿಷ್ಟನಾದ ಅರ್ಜುನನು ಗಾಂಢೀವಿಯಿಂದ ಬಾಣ ಹೂಡಲು ಅವನ ಆತುರವನ್ನು ಕಂಡು ಗಣಪತಿ, ಕುಮಾರ, ಪ್ರಮಥಾಳಿಗಳು ರೋಷಗೊಂಡರು :

'ಕಳಕಳಮೆನ್ಕ ಭಕ್ತನಿವನೀತ ನೊಳಾಂಪವಿನೋದಮುಂದುನಿ

ಚ್ಚಳತೆಯೊಳಿರ್ಪುದೆಂದ ವರ್ಗೆ ನೇಮಿಸಿದ್ದ ಕರುಣಾಬ್ಧಿ ಶಂತರಂ

ಇದೇನು ಕೋಲಾಹಲ ಅರ್ಜುನ ನನ್ನ ಭಕ್ತನು ಅವನೊಡನೆ ವಿನೋದದಿಂದ ಜಗಳವಾಡಬೇಕಾಗಿದೆ. ನೀವು ಸುಮ್ಮನಿರಬೇಕು ಎಂದು ದೇವತೆಗಳಿಗೆ ಶಂಕರನು ಹೇಳುವಲ್ಲಿ ಶಿವನಿಗೆ ಅರ್ಜುನನ ಮೇಲೆ ತುಂಬಾ ಪ್ರೀತಿ ಇದೆ. ಯುದ್ಧ ಆರಂಭವಾಯಿತು. ಶಿವನು ಬಿಟ್ಟ ಬಾಣಗಳು ಶಿವಾಜ್ಞೆಯಿಂದ ಅರ್ಜುನನ ಬಾಣಗಳನ್ನು ಮಾತ್ರ ಕತ್ತರಿಸಿದವೇ ಹೊರತು ಆತನ ಮೈಯನ್ನು ಗಾಯಗೊಳಿಸದೆ ಹತ್ತಿರವೇ ಬೀಳುತ್ತಿದ್ದವು. ತನ್ನ ಬಾಣಗಳು ಮುರಿದು ಬೀಳುತ್ತಿರಲು ಅರ್ಜುನನು ಸಿಟ್ಟಿನಿಂದ ಹೊಡೆದನು. ಶಿವನು ಆ ಬಾಣಗಳನ್ನು ಖಂಡಿಸಿ ತನ್ನ ಅಸ್ತ್ರಗಳಿಂದ ಹೊಡೆದ. ಆಗ ಅರ್ಜುನನು ಬೆರಳೆತ್ತಿ ಶಬರನ ಶೌರ್ಯವನ್ನು ಕೊಂಡಾಡಿದನು. ಎಲೆ ಶಬರನೇ ನಿನ್ನ ವಿಸ್ತಾರವಾದ ಭುಜಬಲ ಉತ್ತಮವಾಗಿದೆ. ಬಾಣಪ್ರಯೋಗವು ನವೀನವಾಗಿದೆ. ಬಿಲ್ಲಾಳುತನದಲ್ಲಿ ನೀನೇ ಸಮರ್ಥ ಎಂದೆಲ್ಲ ಹೇಳಿದನು.

ಅರ್ಜುನನು ತನ್ನ ಮಂತ್ರಶಕ್ತಿಯನ್ನೆಲ್ಲ ಉಪಯೋಗಿಸಿದ ಬಾಣಗಳೆಲ್ಲವನ್ನು ಕಿರಾತನು ನುಂಗಿಬಿಟ್ಟ. ಇಂಥ ಆಶ್ಚರ್ಯವನ್ನು ನೋಡಿಯೂ ಇಷ್ಟು ಶಕ್ತಿಯುಳ್ಳವನು ಸಾಧಾರಣವಾದ ಕಿರಾತವಾಗಲಾರನೆಂಬ ಸಂದೇಹವಾಗಲಿ, ಇವನಾರೆಂದು ತಿಳಿವ ವಿಚಾರವಾಗಲಿ ವಿವೇಕವು ಹುಟ್ಟಲೆ ಇಲ್ಲ. ತನ್ನ ಕಾರ್ಯ, ಕುಲದ ಬಗ್ಗೆ ಅರ್ಜುನನಲ್ಲಿ ಅಷ್ಟು ಅಭಿಮಾನ ಗರ್ವ ಅಡಗಿತ್ತು. ಅರ್ಜುನನ ಬತ್ತಳಿಕೆಯಲ್ಲಿ ಬಾಣಗಳು ಸವೆದವು. ಯುದ್ಧ ಮುಂದುವರೆದಿತ್ತು. ವಿವೇಕ ಮಲಿನವಾಯಿತು. ಅರ್ಜುನನು ಬಿಲ್ಲನ್ನೆತ್ತಿ ಹೊಡೆಯಲು, ಅದು ಹೋಗಿ ಶಿವನ ಕೊರಳಿಗೆ ಮಾಲೆಯಾಗಿ ಬಿತ್ತು. ಅರ್ಜುನನ ಕೈಯೊಳಗಿನ ಆಯುಧವೆಲ್ಲವೂ ಬರಿದಾಯಿತು. ಅಂಬುಗಳೆಲ್ಲವೂ ಶೂನ್ಯ ದೊಡ್ಡ ಬಿಲ್ಲು ಹೋಗಿಬಿಟ್ಟಿತು. ಕತ್ತಿಯು ಜಾರಿ ಹೋಯಿತು. ಅರ್ಜುನ ದಂತಗಳಿಲ್ಲದ ಆನೆಯ ಹಾಗೆ ಇದ್ದನು. ಆದರೂ ಶಿವನಿಗೆ ಹೆದರಿ ಬೆನ್ನು ತೋರಿಸಲಿಲ್ಲ :

ಶರಚಾಪಾಯುಧಮೆಲ್ಲಮುಂ ಜಗುಳ್ದೊಡೇಂ ಬೆನ್ನಿತ್ತನೇ ಸಾಧ್ವಸಾಂ
ಕುರಮಂ ತಾಳ್ದನೆ ಪಾರ್ಥನಂದಮಮ ಶೌರ್ಯೋದ್ರೇಕದಿಂದುರ್ಬಪೇ
ರ್ಮರಗೊಂಬಂ ಮುರಿದಿಟ್ಟನಾತ್ಮಕರದಿಂ ಕೀಳ್ತಿತ್ತಿ ಕಲ್ಗುಂಡ ಬ
ಲ್ಸರಿಯಂ ಸೂಸಿದನಂತದಂ ಕಡಿದನೊಂದಂಬಿಂದೆ ಮೃತ್ಯುಂಜಯಂ (೪ : ೬೨ : ೮೨)

ಶೌರ್ಯದ ಉದ್ರೇಕದಿಂದ ಉಬ್ಬಿ ದೊಡ್ಡಮರದ ಕೊಂಬನ್ನು ಮುರಿದು ಹಾಕಿದನು. ತನ್ನ ಕೈಯಿಂದ ಕಲ್ಲು ಗುಂಡುಗಳ ಮಳೆಯನ್ನೇ ಸುರಿಸಿದ. ಇತ್ತ ಮೃತ್ಯುಂಜಯನು ಆ ಮರದ ಕೊಂಬನ್ನು ಮತ್ತು ಕಲ್ಲು ಮಳೆಯನ್ನು ಬಾಣದಿಂದ ಕಡಿದನು :

ಇನಿತೊಂದುರ್ಬಟೆಯೇಂ ಪುಳಿಂದ ಬಿಡು ನಿನ್ನೀಬಿಂಕಮಂ ಮಾರ್ಗ್ಗೆ ಶ
ಸ್ತ್ರ ನಿಶಾತಾಸ್ತ್ರನಿಕಾಯದಿಂ ನೆಗಳ್ವಯುದ್ಧಂ ಮುಷ್ಟಿಯುದ್ಧಕ್ಕೆ ನಿಂ
ದನುವಾಗೀಗಳೆ ತೋರ್ಪೆನೆನ್ನ ಬಲವದ್ದೋರ್ದಂಡ ಶೌರ್ಯಪ್ರವ
ರ್ತನಮಂ ನೋಡುಗೆ ನಿನ್ನ ನಚ್ಚಿನ ಕಿರಾತವ್ರಾತಮೆನ್ನಂದಮಂ (೪: ೬೫:೮೩).

ಧೈರ್ಯಗುಂದದೆ ಬೇಡ ಇಷ್ಟೊಂದು ಅರ್ಭಟವೇಕೆ ? ನಿನ್ನ ಈ ಬಿಂಕವನ್ನು ಬಿಡು ಹರಿತವಾದ ಬಾಣಗಳನ್ನು ಗುಂಪಿನಿಂದ ಮಾಡುವ ಯುದ್ಧವು ನಿಂತು ಹೋಗಲಿ! ಮುಷ್ಟಿಯುದ್ಧಕ್ಕೆ ನಿಂತು ಸಿದ್ಧನಾಗು. ಬಾಣಗಳಂತಿರುವ ನನ್ನ ತೋಳುಗಳ ಶೌರ್ಯವನ್ನು ಈಗಲೇ ತೋರಿಸುವೆನು. ನಿನ್ನ ನಚ್ಚಿನ ಕಿರಾತ ಸಮೂಹವು ನನ್ನ ಬಗೆಯನ್ನು ನೋಡಲಿ. ಎಂದು ಹೇಳಿದ ಇಂದ್ರನ ಮಗನ ನಿಸ್ಸಹಾಯ ಪರಾಕ್ರಮದ ಮಾತುಗಳನ್ನು ಕೇಳಿ ಕೂಡಿದ ಗಣಸಮೂಹವು ಅತಿ ಅಚ್ಚರಿಯನ್ನು ತಳೆದು ಸಂತೋಷವು ಹೆಚ್ಚಿ ಹೊಗಳುತ್ತಿರಲಾಗಿ ಬಳಿಯಲ್ಲಿದ್ದ ಪಾರ್ವತಿಗೆ ಶಿವನು ಹೀಗೆಂದನು : ಪಾರ್ವತಿಯೆ ಅರ್ಜುನನ ಸಾಹಸವನ್ನು ನೋಡು ನಾಲ್ಕು ತಿಂಗಳದವರೆಗೆ ತರಗಲೆಯನ್ನೇ ತಿಂದು, ಉಳಿದ ನಾಲ್ಕು ತಿಂಗಳವರೆಗೆ ಗಾಳಿಯನ್ನೇ ಆಹಾರವಾಗಿ ಸವಿದು, ನಿಗ್ರಹಿಸಿದ ಶರೀರದಿಂದ ಈ ಅರ್ಜುನನು ನನ್ನೊಡನೆ ಸಿಟ್ಟಿಗೆದ್ದು ಸರಿಯಾಗಿ ಕಾದಿದನಲ್ಲವೆ ? ಎಂಥ ಸಮರ್ಥನು! ಆಶ್ಚರ್ಯವೆಂದರೆ ಶಿವ- ಅರ್ಜುನರು ಯುದ್ಧದಲ್ಲಿ ಪರಸ್ಪರ ವಿರೋಧಿಗಳಾದರೂ, ಒಬ್ಬರ ಶೌರ್ಯವನ್ನು ಒಬ್ಬರು ಮೆಚ್ಚಿಕೊಳ್ಳುವ ರೀತಿ, ಒಬ್ಬ ಶೂರನನ್ನು ಗುರುತಿಸುವ, ಹೊಗಳುವ ರೀತಿ ಔದಾರ್ಯದ ಗುಣ ತೋರಿಸುತ್ತದೆ. ಮಾನವೀಯ ದೃಷ್ಟಿಯಲ್ಲಿ ಶಿವನಿಗೆ ಅರ್ಜುನನ ಮೇಲೆ ಅಪಾರ ಪ್ರೀತಿಯಿದೆ. ಅರ್ಜುನನ ಮಾನಸಿಕ ಹೊಯ್ದಾಟ, ಶಿವನ ಹುಸಿಯುದ್ಧ ಇವುಗಳಲ್ಲದೆ ಸಾಮಾನ್ಯ, ಅಸಾಮಾನ್ಯ ಎಂಬ ತಾರತಮ್ಯ ಭಾವನೆ ಇಲ್ಲಿದೆ :

ಕುಲಗಿರಿಯುಗ್ಮ ಮಾಳ್ದು ಪುರುಷಾಕೃತಿಯಿಂದೆ ಪಳಂಚುವಂತಿರು
ಜ್ವಲ ಬಡಬಾಬ್ಧಿ ವಹ್ನಿ ಯುಗಮಾಂತು ನರಾಂಗಮನಣ್ಮೆ ಕಾದುವಂ
ತಲಘು ಮೃಗಾಧಿ ಪದ್ವಯಮೊಡಂಬಡೆ ಮಾನವವೇಷಮುರ್ಕುಂ ಸಂ
ಚಲಿಸದೆ ಪೋರ್ವವೋಲ್ಪೊಣರ್ದರುರ್ಬೆ ವೃಷಧ್ವಜಮರ್ಕಟಧ್ವಜರ್ (೪: ೭೨:೮೫)

ಹಿಮಗಿರಿ ಬೆಟ್ಟಗಳೆರಡೂ ಪುರುಷನ ರೂಪದಿಂದ ಸಂಘಟಿಸುವ ಹಾಗೆ ಬೆಳಗುತ್ತಿರುವ ಹೆಣ್ಣುಕುದುರೆಗಳಾದ ಕಡಲಿನ ಕಿಚ್ಚುಗಳೆರಡೂ ಮನುಷ್ಯಾಕಾರವನ್ನು ಧರಿಸಿ ಫಲಾತ್ಕಾರಿಸಿ- ಕಾದುವಂತೆ, ದೊಡ್ಡ ಸಿಂಹಗಳೆರಡೂ ಮಾನವ ವೇಷವನ್ನು ತಳೆದೊಪ್ಪುವಂತೆ, ಬಿಡದೆ ಕಾದಾಡುವ ಕಿರಾತಾರ್ಜುನರು ಉಬ್ಬಿ ಹೆಣಗಾಡಿದರು. ಬಿಡದೆ ಮತ್ತೆ ವಜ್ರಾಘಾತದಂತೆ ಆ ಕಿರಾತ ರುದ್ರನನ್ನು ಅಬ್ಬರಿಸಿ ಹೊಡೆದನು. ಅಭವನು ನೋಡುತ್ತಾ ಆ ಹೊಡೆತವನ್ನು ಸೈರಿಸುತ್ತ ಸಿಟ್ಟಿಗೆದ್ದು ಗಾಂಡೀವಿಯನ್ನು ಒತ್ತಿ ತುಳಿದನು. ನೆತ್ತರವು ಬಾಯನ್ನು ತುಂಬಿ ಹೆಚ್ಚಾಗಿ ಮೂಗಿನ ಎರಡು ಹೊರಳೆಗಳಿಂದ ಹೊರಹೊಮ್ಮಿತು. ಅಯ್ಯೋ ತಪ್ಪಾಯಿತು ! ಭಕ್ತನನ್ನು ಸೋಲಿಸಿದ್ದು ಅನುಚಿತವಾಯಿತು. ಎಂದು ಮುಕ್ಕಣ್ಣನು ಮರುಗಿ ಮನದಲ್ಲಿ ಕಳವಳಿಸಿದನು. ಪ್ರೀತಿ ಮತ್ತು ಯುದ್ಧ ಎರಡೇ ಪದಗಳಲ್ಲಿ ಸಾಮರಸ್ಯವನ್ನುಂಟು ಮಾಡಿದೆ.

ಒಳಗೊಳಗೆ ಅತ್ತು ವ್ಯಾಕುಲತೆಯನ್ನು ಪ್ರಕಟಿಸಿದೆ, ಅದಗಿಸಿಕೊಂಡು ಕಿರಾತನಾದ ಈತನು ನನಗಿಂತಲೂ ಸಮರ್ಥನೆ! ಎಂದು ಆಶ್ಚರ್ಯಚಕಿತನಾದನು. ತನ್ನ ಸೋಲಿಗೆ ತಾನೇ ಮರುಕಪಡತೊಡಗಿದ. ಶಿವನ ಭಕ್ತಿಯನ್ನು ಬಿಟ್ಟೆನೋ? ಅವನ ಪಾದ ಸೇವಕರನ್ನು ಸಿಂದಿಸಿದೆನೊ ? ಶಿವದೀಕ್ಷಾ ನಿಯಮವನ್ನು ಬಿಟ್ಟೆನೊ? ನಾನು ಪುನರ್ಜನ್ಮದಲ್ಲಿ ಮಾಡಿದ ಪಾಪವು ಜಯಕ್ಕೆ ಅಡ್ಡಿಯಾಯಿತೆ ? ಶಬರನೇ ಗೆದ್ದನು, ನಾನೇ ಸೋತೆನು. ಈವರೆಗೆ ಜಯಶೀಲನಾಗಿ ವಿಜಯನೆಂಬ ಹೆಸರು ಪಡೆದಿದ್ದೆ, ಅದೂ ಹೋಯಿತಲ್ಲ ? ಜಗದೇಕವೀರನೆಂಬ ಹೆಸರು ಹಾಸ್ಯಕ್ಕೆ ಆಸ್ಪದವಾಯಿತು. ಇವನಿಂದ ಅಷ್ಟ ದಿಕ್ಕುಗಳಲ್ಲಿಯೂ ನನಗೆ ಅಪಕೀರ್ತಿ ಎಂದು ಚಿಂತಿಸುತ್ತಾ :

ಜಗದೇಕವೀರ ಶಬ್ದಂ
ನಗೆಗೆಡೆಯಾಯ್ತೆನಗೆ ಪರ್ಬಿದತ್ತೆಡ್ಡೆಸೆಯೊಳ್
ನೆಗಳ್ದ ಪಯಶಮೀ ಶಬರನಿ
ನೊಗೆದ ಪರಾಭೂತಿವೆತ್ತ ಕಾರಣದಿಂದಂ (೪ : ೯೫: ೯೦).

ತಾನೇ ಮಹಾಶೂರನೆಂದು ಮೆರೆಯುತ್ತಿದ್ದ ಅರ್ಜುನನು ಬೇಡನಿಂದ ಸೋಲಲಾಗಿ ಯಕಃಶ್ಚಿತ್ ಸಾಮಾನ್ಯ ಬೇಡನೊಡನೆ ನನಗೆ ಸೋಲು ! ಎಂದು ಪರಿತಪಿಸುವಲ್ಲಿ ಸಂಕಟದ ಕೂಗು ರಾರಾಜಿಸುತ್ತದೆ. ಹಲವು ಬಗೆಯಿಂದ ಹಲುಬಿ ವಿರೂಪಾಕ್ಷನ ಉಪೇಕ್ಷೆಯಿಂದ ನನಗೆ ಸೋಲು ತಗಲಿತೆಂದು ಅಂತರಂಗದಲ್ಲಿ ಚಿಂತಿಸಿ ಶಂಕರನ ಸೇವೆಯಿಂದ ಶರಣು ಹೊಕ್ಕು ಆತನ ದಯವನ್ನು ಪಡೆದು, ಶತ್ರುವಾದ ಕಿರಾತನನ್ನು ಸೋಲಿಸುವನೆಂದೂ ಅರ್ಜುನನು ಚಿಂತಾರ್ಪಣವನ್ನು ವಿವೇಕ ಜಲದಿಂದ ತೊಳೆದು ನಿರ್ಮಲ ಮನಸ್ಸಿಗನಾದನು.

ಉಸುಕಿನ ಲಿಂಗವನ್ನು ಪರಮ ಮೋಕ್ಷವಿಧಿಯಿಂದ ಮಾಡಿ, ಪರಮಭಕ್ತಿಯಿಂದ ಪಾರಿಜಾತ, ಬಂಧೂಕ, ಎಕ್ಕೆ, ಮುತ್ತುಗ, ಪಾದರಿ ಪುಷ್ಪಗಳನ್ನು ಮೃದುವಾದ ಬಿಲ್ವದಳಗಳನ್ನು ಕೊಯ್ದು ಅಲ್ಲಿಗೆ ತಂದನು. ವೈರಿಯನ್ನು ಜಯಿಸಲೆಂದು ಮೊರೆಯಿಟ್ಟು ಶಂಕರನನ್ನು ಪೂಜಿಸಿದನು:

ಮಣಲಲಿಂಗದ ಮಸ್ತಕಾಗ್ರಕ ಪುಷ್ಪಮಂಜರಿ ಮಾಣದಾ
ಕ್ಷಣಮೆ ತಳ್ತಡರ್ದಾ ಕಿರಾತನ ಮಂಡೆಯಲ್ಲಿರೆ ಕಂಡು ಕಾ
ರಣಮಿದೇಂ ಪೊಸತೆಂದು ಸಾದ್ಭುತ ಮಾನಸಂ ಮಗುಳ್ದೀಕ್ಷಿಸು
ತ್ತಣೆಯರಂ ಬಿಡದಿತ್ತಲಿಂಗದ ಶೂನ್ಯಶೀರ್ಷಮನುರ್ಜುನಂ (೪: ೧೦೪: ೯೩).

ಅರ್ಜುನನು ತಾನು ಲಿಂಗಕ್ಕೇರಿಸಿದ ಹೂವು ಶಿವನ (ಕಿರಾತ) ತಲೆಯ ಮೇಲಿರುವುದನ್ನು ಕಂಡು ಇದಕ್ಕೆ ಕಾರಣವೇನಿರಬಹುದೆಂದು ಯೋಚಿಸಿದನು. ಅರಿವಾಗದೆ ಆಶ್ಚರ್ಯಪಟ್ಟು ಮತ್ತೆ ಪುಷ್ಪವೇರಿಸಿ ಲಿಂಗವನ್ನು ಪೂಜಿಸಿದನು. ತಾನು ಪೂಜಿಸಿದ ಹೂವಿಲ್ಲದೆ ಲಿಂಗದ ಸರ್ಪವು ಬರಿದಾಗಿರುವುದನ್ನು ನೋಡಿ ಆಶ್ಚರ್ಯಗೊಂಡನು. ನಂತರ 'ಶಿವ ಶಿವ, ಈ ಕಿರಾತನು ದೇವ ದೇವನಾದ ಶಂಕರನಲ್ಲವೆ? ದೇವತೆಗಳೆಲ್ಲರಿಗೂ ಗುರುವಾದ ಶಿವನು ನನ್ನನ್ನು ಅನುಗ್ರಹಿಸುವುದಕ್ಕಾಗಿ ಈ ರೀತಿಯಾಗಿ ನಡೆತಂದನಲ್ಲವೆ? ತಪದ ಉದ್ವೇಗದ ಭ್ರಾಂತಿಯು ತಲೆಗೇರಲು ಭ್ರಾಂತಿಗೊಂಡು ಈತನೊಡನೆ ಕಾದಾಟಕ್ಕೆ ನಿಂತೆನು. ನನ್ನಂಥ ಮೂಢನು ಇನ್ನಾನಿರುವನು ಎಂದು ಅಂತರ್ಮುಖಿಯಾಗಿ ದುಃಖಿತನಾದ.

ಕಿರಾತನೇ ಶಿವನೆಂಬುದು ಗೊತ್ತಾದ ಮೇಲೆ ಅರ್ಜುನನಿಗೆ ತಾನು ಮಹಾಶೂರನೆಂಬ ಭಾವನೆ ಬಿಟ್ಟುಹೋಯಿತು. ರೋಮಾಂಚನವೆದ್ದು ಬೆವರಿತು, ಸಿಟ್ಟು ಶಾಂತವಾಯಿತು. ಆಶ್ಚರ್ಯವೂ, ಕುತೂಹಲವೂ, ಉಲ್ಲಾಸವೂ ಅತಿಶಯಗೊಂಡಿತು. ಸೋತನೆಂಬ ಭಯ ಮಾಯವಾಯಿತು. ಸ್ವಾಮಿಯ ಸೇವನೆಯಿಂದ ಅಕ್ಕರೆಯು ಹೆಚ್ಚಿತು. ಚಂದ್ರಶೇಖರನು ಬೇಡಾಕಾರವನ್ನು ಬಿಟ್ಟು ನಿಜಸ್ವರೂಪವನ್ನು ತಳೆದು ಅರ್ಜುನನಿಗೆ ತನ್ನ ತೋಳುಗಳಿಂದ ಮೈದಡವಿದನು. ಪ್ರಾರ್ಥನೆ, ನಿನ್ನರನೂಕ್ತೆ, ನನಗೆ ಮಂತ್ರ, ಬಿಟ್ಟಬಾಣಗಳು ಪುಷ್ಪಸಂಚಯ, ನಿನ್ನ ಸಿಟ್ಟಿನ ನೋಟದ ಹೊಳಪು ಪೂಜೆಗೆ ತಕ್ಕ ದೀವಿಗೆ, ನಿನ್ನ ಬಿಲ್ಲಿನ ಹೊಡೆತದ ಬಾಸುಳೆ ಹೂಮಾಲೆಯಾಗಿದೆ. ನಿನ್ನ ಮುಷ್ಟಿಯುದ್ಧವೂ ನನ್ನ ಚರಾಂಗಾರ್ಚನೆಯಾಗಿದೆ. ಹೀಗೆ ಇತ್ಯಾದಿಯಾಗಿ ಹೊಗಳಿ ನೀನು ಎಂದೆಂದೂ ನನ್ನ ಭಕ್ತನಾಗಿರುವೆ ಎನ್ನುತ್ತಾನೆ:

ಕರುಣಿಪುದೆನಗೆಲೆ ಕರುಣಾ
ಕರ ಪಾಶುಪತಾಸ್ತ್ರಮಂ ಮಹಾ ಬ್ರಹ್ಮ ಶಿರ
ಶ್ಶರಮಂ ಸಮಸ್ತರಿಪು ಸಂ
ಹರಮಂ ದಮೆಯೆಯಿಂದೆನುತ್ತೆ ಬೇಡುತ್ತಾಗಳ್. (೫ : ೪೪:೧೦೯).

ಓ ದಯಾನಿಧಿಯೆ ಸಕಲ ಶತ್ರು ಸಂಹಾರಕವಾದ ಪಾಶುಪತಾಸ್ತ್ರವನ್ನು ಬ್ರಹ್ಮಶಿರೋಮಂತ್ರ ಬಾಣವನ್ನು ಕರುಣಿಸು ಎಂದು ಪ್ರಾರ್ಥಿಸಿದನು. ಕೊಳದಲ್ಲಿ ಸ್ನಾನಮಾಡಿ, ಮಂತ್ರೋಪಕ ಪ್ರಾಶವನ್ನೆಸಗುತ್ತ ಸದ್ಭಕ್ತಿಯಿಂದ ಆಡಿದಾವೆರಗಿದ ಅರ್ಜುನನಿಗೆ ಕೃಪಾಪೂರ್ಣನಾದ ಶಂಕರನು ಬ್ರಹ್ಮಶಿರೋಮಂತ್ರ ಬಾಣವನ್ನು ಮತ್ತು ಪಾಶುಪತಾಸ್ತ್ರವನ್ನು ಕೊಟ್ಟನು. ಪಾರ್ವತಿಯು ಎಲೈ ಪದ್ಮಲೋಚನನ ಮೈದುನನೆ, ಪಾಂಡವನೆ, ಬಾ ನಿನ್ನ ಭಕ್ತಿ ಪರವಶತೆ ನನಗೆ ಸಂತೋಷವನ್ನುಂಟು ಮಾಡಿತು. ನಿನ್ನ ಶತ್ರು ಸಮೂಹವನ್ನು ನಿಮಿಷ ಮಾತ್ರದಲ್ಲಿ ಕೊಲ್ಲುವ ಬಾಣವನ್ನು ಕೊಡುವೆನು ತೆಗೆದುಕೊ ಎಂದು ಸುಗುಣಗಳಿಗಾಶ್ರಯಳಾದ ಗಿರಿಜಾನಂದಿನಿಯು ಧಾರಾಳವಾದ ಅಂಜನಾಸ್ತ್ರವನ್ನು ಕೊಟ್ಟಳು. ಗಾಂಢೀವಿಯಾದ ಅರ್ಜುನ ಶಿವನಿಂದ ಪ್ರಯೋಜನ ಪಡೆದ. ಶಬರಶಂಕರ ವಿಳಾಸದಲ್ಲಿ ಪ್ರೀತಿ ಮತ್ತು ಯುದ್ಧ ಅದ್ಭುತವಾಗಿ ಮೂಡಿ ಬಂದಿದೆ. ನಾನು, ನನ್ನದು ಎನ್ನುವುದರ ವಿರುದ್ಧ ಶಿವನು ಮನುಷ್ಯತ್ವದ ಅರಿವು ತಿಳಿಸುವುದು ಅವನ ಉದ್ದೇಶ. ಕಿರಾತನಾದ ಶಿವನು ಮುಗುಳು ನಗುತ್ತಲೇ ಇರುತ್ತಾನೆ. ಇದು ಬಹುದೊಡ್ಡ ಗುಣ. ಹೀಗೆ ಭಾರವಿ, ಪಂಪ, ಕುಮಾರವ್ಯಾಸ ಮತ್ತು ವಿರೂಪಾಕ್ಷಪಂಡಿತರ ಕೃತಿಗಳಲ್ಲಿ ವಿಶಿಷ್ಟವಾಗಿ ಮೂಡಿಬಂದಿರುವುದು ಗಮನಾರ್ಹ. ಕಿರಾತಾರ್ಜುನೀಯ ಪ್ರಸಂಗವನ್ನು ಜೈನ ಮತ್ತು ಶೈವಕವಿಗಳು ತಮ್ಮ ಮತ ಧರ್ಮಗಳಿಗೆ ಲೌಕಿಕ ವ್ಯಕ್ತಿ, ಆರಾಧನೆಗೆ ಮಹತ್ವ ಕೊಟ್ಟಿರುವುದು ಕಂಡುಬರುತ್ತದೆ.

೪.೨. ಮೌಖಿಕ ಸಾಹಿತ್ಯ

ಇಂದು ಸಂಸ್ಕೃತಿ ಅಧ್ಯಯನಕ್ಕೆ ಮೌಖಿಕ ಸಾಹಿತ್ಯದ ಆಕರ ಅಗತ್ಯವೆನಿಸಿದೆ. ಈ ಮೌಖಿಕ ಸಾಹಿತ್ಯ (Oral literature) ತಲೆಮಾರುಗಳಿಂದ ಅನೂಚಾನವಾಗಿ ಜನರ ಬಾಯಿಂದ ಬಾಯಿಗೆ ಬಂದ ಕಥೆ, ಕಾವ್ಯಗಳ ಬಾಯಿಪಾಠದ ರೂಪ ಎನ್ನಬಹುದು. ಲಿಖಿತ ರೂಪವಲ್ಲದ (ತೋಂಡಿ) ಸ್ಪಷ್ಟ ಚಿತ್ರಣಕೊಡುವ ಸಾಹಿತ್ಯ ಪ್ರಕಾರವನ್ನು ಮೌಖಿಕ ಎನ್ನಲಡ್ಡಿಯಿಲ್ಲ. ಮೌಖಿಕ ಸಾಹಿತ್ಯವನ್ನು ಗದ್ಯ ಮತ್ತು ಪದ್ಯವೆಂದು ವಿಂಗಡಿಸಲಾಗಿದೆ. ತಮ್ಮ ಭಾಗದ ಚಾರಿತ್ರಿಕ ಇತರ ಲಕ್ಷಣಗಳನ್ನು ಜನರು ನೋಡಿದ, ಭಾಗವಹಿಸಿದ ಸಂದರ್ಭ, ರಾಜ, ಮಂತ್ರಿ, ವೀರ ಇತರ ಸಂಗತಿಗಳನ್ನು ಮೌಖಿಕ ಸಾಹಿತ್ಯದಲ್ಲಿ ನಿರೂಪಿಸುತ್ತಾರೆ. ಇದನ್ನು ಸೋಬಾನೆ, ಲಾವಣಿ, ಕೋಲಾಟ, ವೀರಗೀತೆ, ಕಥನ ಕಾವ್ಯ, ಜನಪದ ಕಥೆ, ನಂಬಿಕೆ, ಆಚರಣೆ, ಗಾದೆ, ನಾಣ್ಣುಡಿ, ಇತ್ಯಾದಿ ಪ್ರಕಾರಗಳಲ್ಲಿ ಅವಲೋಕಿಸಬಹುದು.

ಲೌಕಿಕ ವ್ಯಕ್ತಿ, ಪುರಾಣ ಪುರುಷ, ಕಾಲ್ಪನಿಕ ವ್ಯಕ್ತಿ, ಚಾರಿತ್ರಿಕ ವ್ಯಕ್ತಿಗಳ ಬಗೆಗೆ ಕಾವ್ಯ, ಕಥೆ, ಲಾವಣಿ, ಕಟ್ಟಿ ಹಾಡುವುದು ಸಹಜ. ಒಬ್ಬ ಲೌಕಿಕ ವ್ಯಕ್ತಿಯ ಆರಾಧನೆ ಜನಪದ ಕಾವ್ಯದಿಂದ ತಿಳಿದುಬರುತ್ತದೆ. ಇಲ್ಲಿನ ವರ್ಣನೆ, ವಾಸ್ತವತೆಯ ಗೋಜು ಜನಪದರಿಗೆ ನಿಲುಕುವುದಿಲ್ಲ. ಹಾಗಾಗಿ ಕಾವ್ಯ-ಕಥೆಗೆ ತಕ್ಕಂತೆ ಹಾಡುವುದು ವಾಡಿಕೆ. ಇಂಥ ಕೆಲವು ಕಥೆ, ಕಾವ್ಯಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಶಿಷ್ಟ ಕಾವ್ಯದಲ್ಲಿ ಹದಿನೆಂಟು ವರ್ಣನೆಗಳ ನಿಮಿತ್ತ 'ಮೃಗಯಾ' ಬಂದರೂ, ಅದು ಕವಿಯ ಕಾವ್ಯ ಸಂವಿಧಾನದಂತಿದೆ. ಪ್ರಾಯೋಗಿಕತೆಯನ್ನು ಇಲ್ಲಿ ಕಾಣಲು ಅಸಾಧ್ಯ. ಸಾಧ್ಯವೆಂಬುದನ್ನು ಕವಿ ತೋರಿಸುವ ದಾಟಿಯೇ ಬೇರೆ ಇರಬಹುದು. ಏನೆಲ್ಲಾ ಇದ್ದರೂ ಜನಪದ ಸಾಹಿತ್ಯದ ಬೇಟೆ - ಬೇಡರ ಚಿತ್ರಣ ಒಂದು ಪ್ರಾಯೋಗಿಕ ರೂಪ. ಮನಸ್ಸಿಗೆ ರಂಜನೆ ನೀಡುವುದರೊಂದಿಗೆ ವಾಸ್ತವಿಕ ಜನಜೀವನದ ದೃಶ್ಯಗಳನ್ನು ವಿವಿಧ ರೂಪದಲ್ಲಿ ಮೌಖಿಕ ಸಾಹಿತ್ಯ ವ್ಯಕ್ತಪಡಿಸುತ್ತದೆ.

ಕರ್ನಾಟಕದಲ್ಲಿ ಅನೇಕ ಮೌಖಿಕ ಕಾವ್ಯಗಳಿದ್ದು, ದಾಖಲಾತಿಯು ನಡೆಯುತ್ತಿದೆ. ಈಗಾಗಲೇ ಕುಮಾರರಾಮ, ಮಲೆಯ ಮಹದೇಶ್ವರ, ಮಂಟೇಸ್ವಾಮಿ, ಎತ್ತಪ್ಪ-ಜುಂಜಪ್ಪ, ಬೊಮ್ಮಗೊಂಡ ಮೊದಲಾದ ವ್ಯಕ್ತಿಗಳ ಬಗೆ, ಕಾವ್ಯಗಳು ಬಂದಿವೆ. ಮ್ಯಾಸಬೇಡರ ವೀರರುಗಳಾದ ಗಾದರಿಪಾಲನಾಯಕ, ಜಗಳೂರುಪಾಪನಾಯಕ, ಯರಗಾಟನಾಯಕ, ಕೊಡಗಲು ಬೊಮ್ಮಯ್ಯ ಇತರರ ಬಗ್ಗೆ ಅಪ್ರಕಟಿತ ಮೌಖಿಕ ಕಾವ್ಯಗಳು ಪ್ರಚಲಿತದಲ್ಲಿವೆ. ಇವುಗಳಲ್ಲಿನ ಬೇಟೆ ಮತ್ತು ಬೇಡರ ಚಿತ್ರಣ ಅದ್ಭುತ.

ಈ ಕಾವ್ಯಗಳಲ್ಲಿ ಅಸಾಮಾನ್ಯನೆಂದು ಹೊಗಳುವಾಗ, ಗುಣಗಾನ ಮಾಡುವಾಗ ಬೇಟೆ-ಬೇಡರ ಪ್ರಸ್ತಾಪ ಸಹಜವಾದುದು. ಮಧ್ಯಕಾಲದ ನಂತರ ಇಂತಹ ಆರಾಧಿಸುವ ರೂಢಿ ಬೆಳೆದಿರಬೇಕು. ಕಥಾವಸ್ತು ಮಧ್ಯಕಾಲದ್ದಾಗಿದ್ದು ಕಾವ್ಯ ನಿರ್ಮಾಣ ಈ ಶತಮಾನದಲ್ಲಾದರೆ, ಸಾಕಷ್ಟು ಊಹಾಪೋಹಗಳೂ ಇರಬಹುದು. ಇಂದು ಮಡಿದ ಒಬ್ಬ ಗಣನೀಯ ವ್ಯಕ್ತಿ ಬಗೆಗೆ ಜೀವನ ಸಾಹಸ ಬಗ್ಗೆ ರಸವತ್ತಾದ ಕಾವ್ಯ ಕಟ್ಟುತ್ತಾರೆ ಜನಪದರು.

ಮೌಖಿಕ ಸಾಹಿತ್ಯದಲ್ಲಿ ಹೆಚ್ಚಾಗಿ ಬೇಟೆ ಸಂದರ್ಭ ದುರಂತವಾಗಿ ಕಾಣಿಸಿಕೊಳ್ಳುತ್ತದೆ. ಬೇಟೆಯಾಡಲು ಹೋದ ಅರಸ, ವ್ಯಕ್ತಿ ಅಥವಾ ಬೇಟೆಗಾರ ತಾನು ಅನಾಹುತಕ್ಕೆ ಸಿಲುಕುತ್ತಾನೆ. ತನ್ನ ರಕ್ತಸಂಬಂಧಿಕರು ಅಥವಾ ಬೇರೆಯವರಿಂದ

ಸಾವು ಸಂಭವಿಸುವುದು, ಸಾವಿನ ದವಡೆಯಿಂದ ಪಾರು ಮಾಡುವುದು ಸ್ಪಷ್ಟ. ಆಗಾಗ ರಂಜನೀಯವಾಗಿ ಅಡವಿ-ಅರಣ್ಯ ಅಲೆದು ಸುಂದರವಾದ ತಾಣದಲ್ಲಿ ಜಲಕ್ರೀಡೆಯಾಡುವುದು, ಅಪ್ಸರೆ, ಅಪೂರ್ವ ಸುಂದರ ಸ್ತ್ರೀಯರೊಡನೆ ಸಲ್ಲಾಪ, ಮಧುರ ಕ್ಷಣಗಳನ್ನು ಕಳೆಯುವುದು ಕಾವ್ಯದೊಳಗಿನ ರಸಗಳಿಗೆಗಳು. ಜನಪದ ಕಾವ್ಯದಲ್ಲಿ ಕನಸು ಕಾಣುವುದು, ಆ ಕಾಲ್ಪನಿಕ ಜಗತ್ತಿನಲ್ಲಿ ವ್ಯವಹರಿಸುವುದು ಉಟೋಪಿಯ (ಕನಸಿನ ರಾಜ್ಯದ ಕಲ್ಪನೆ)ವನ್ನು ನೆನಪಿಗೆ ತರುತ್ತದೆ.

ಮೊದಲೇ ತಿಳಿಸಿದಂತೆ ಅರಸನು ಅನಕ್ಷರಸ್ಥನಾಗಿದ್ದರೆ, ರಾಜ್ಯದ ಶಾಸನಗಳನ್ನು ಬರೆಸುವಾಗ ಅನ್ಯರ ಸಹಾಯ ಅಗತ್ಯ. ರಾಜನ ಆಜ್ಞೆ, ಶಾಸನ ಅವನಂತೆ ಬಾರದೇ ಲಿಪಿಕಾರನ ಸ್ವಂತಪಾಠವು ಬರಬಹುದು. ಆಗೊಮ್ಮೆ ಬಾಯಿಂದ ಬಾಯಿಗೆ ಬಂದ ಸಾಹಿತ್ಯವು ಅದರ ಒಳಾರ್ಥವನ್ನು ಸ್ಪಷ್ಟಪಡಿಸಬಹುದು. ಕಾಗದ, ಪೆನ್ನು ಇಲ್ಲದಿರುವಾಗ ಅರಸನು, ಜನಸಾಮಾನ್ಯರು ಕಟ್ಟಿಕೊಂಡ ಅಪೂರ್ವ ಶೋಧನೆಯೇ ಮೌಖಿಕ ಸಾಹಿತ್ಯವೆನಿಸಿದೆ.

ಐತಿಹಾಸಿಕ, ಧಾರ್ಮಿಕ, ಪುರಾಣ, ಕಾಲ್ಪನಿಕ ಮತ್ತು ಜನಪದ ಕಾವ್ಯಗಳಲ್ಲಿ ಬೇಟೆ ಅಭೂತಪೂರ್ವವಾಗಿದೆ. ಮಧ್ಯಕಾಲದ ತರುವಾಯವೇ ಇದು ಹೆಚ್ಚಿನ ಪ್ರಚಾರಕ್ಕೆ ಬಂತು. ಕುಮಾರರಾಮನನ್ನು ಬಿಟ್ಟರೆ, ಆ ಕಾಲದ ಇತರ ಯಾವ ಅರಸನ ಬಗೆಗೂ ಇಷ್ಟೊಂದು ವಿಪುಲವಾದ ಜನಪದ ಸಾಹಿತ್ಯವಿಲ್ಲ. ವಿಜಯನಗರೋತ್ತರ ಐತಿಹಾಸಿಕ ಸಂದರ್ಭಗಳು, ಬ್ರಿಟಿಷರ ಆಳ್ವಿಕೆಯಲ್ಲಿ ಹುಟ್ಟಿಕೊಂಡ ಮೌಖಿಕ ಸಾಹಿತ್ಯ ವಾಸ್ತವ ಸಮಾಜವನ್ನು ತಿಳಿಸುವಲ್ಲಿ ನೆರವಾಗಿವೆ. ಯಕ್ಷಗಾನ, ಬಯಲಾಟ, ಗಾದೆ, ನಾಣ್ಣುಡಿಗಳಲ್ಲಿ ಬೇಟೆ-ಬೇಡರ ಲಕ್ಷಣಗಳನ್ನು ಸೂಕ್ಷ್ಮವಾಗಿ ನೋಡಬಹುದು.

ಮೌಖಿಕ ಸಾಹಿತ್ಯ ಒಂದು ಕಾಲದ ಯಾವುದೇ ಚಿತ್ರಣ ಕೊಡುವ ದಾಖಲೆ ಅಥವಾ ಆಧಾರ ಎನ್ನಬಹುದು. ಹೀಗಾಗಿ ದೊರೆತ ವಸ್ತು, ವಿಷಯಗಳ ಸತ್ಯ, ಸುಳ್ಳುಗಳ ಬಗ್ಗೆ ಚರ್ಚಿಸುವುದು ಅನಗತ್ಯ. ಈಗಾಗಲೇ ಪ್ರಚಲಿತವಿರುವ ಕಾವ್ಯ, ಕಥೆಗಳಲ್ಲಿ ಬಂದಿರುವ ಸಂದರ್ಭಗಳಲ್ಲಿ ಭಿನ್ನತೆ, ವೈಶಿಷ್ಟತೆಗಳನ್ನು ನೋಡಬಹುದು. ಅನುಕೂಲಕ್ಕಾಗಿ ಮೌಖಿಕ ಸಾಹಿತ್ಯದಲ್ಲಿ ಪೌರಾಣಿಕ ಕಾವ್ಯ, ಐತಿಹಾಸಿಕ ಕಾವ್ಯ, ಲಾವಣಿ, ವೀರಗೀತೆ ಇತರ ಪ್ರಕಾರಗಳಲ್ಲಿ ಬೇಟೆ - ಬೇಡರ ವೃತ್ತಾಂತವನ್ನು ಇಲ್ಲಿ ವಿಂಗಡಿಸಿಕೊಳ್ಳಲಾಗಿದೆ.

೧. ಪೌರಾಣಿಕ ಕಾವ್ಯಗಳು

ಪುರಾಣ ವ್ಯಕ್ತಿಯ ಚರಿತ್ರೆ ಪೌರಾಣಿಕ ಕಾವ್ಯದ ಕಥಾವಸ್ತು. ಲೌಕಿಕ ಕಾವ್ಯದ ಸ್ವರೂಪವು ಪುರಾಣ ಅಂಶಗಳಿಂದ ಕೂಡಿರುವ ಸಂದರ್ಭ ಇರುತ್ತದೆ. ಹೀಗೆ ರಾಮಾಯಣದ ಒಂದು ಸಂದರ್ಭವನ್ನು ಜನಪದರು ಈ ರೀತಿಯಾಗಿ ಕಟ್ಟಿಕೊಂಡಿದ್ದಾರೆ:

ಚೆಂದಾಕೆ ರಾಮರು ಮಿರುಗದ ಬ್ಯಾಟೆಗೆ ಹೋಗಿ
ಆದಂಗ್ಹೋಗಿ ನಂದಿ ವನಸೇರಿ - ಸೀತಮ್ಮ
ಸಿರಿರಾಮರ ದಂಡ ನಡಸ್ಯಾಳು
ರಾಮರು ಬಿಟ್ಟಬಾಣ ರಾಜ್ಯಕ್ಕೆ ಹೆಸರಾದೊ
ರಾಮದೇವರ ತಮ್ಮ ಲಕ್ಷ್ಮಣ- ಬಿಟ್ಟಬಾಣ
ಮೇಲು ಲೋಕದಲಿ ಗುಡುಗೀದೊ.[೧೦]

ರಾಮಾಯಣದಂತೆ ಮಹಾಭಾರತವು ಜನಪದ ಕಾವ್ಯವಾಗಿ ಪ್ರಚಲಿತದಲ್ಲಿದೆ. ಪ್ರತಿಯೊಂದು ಪಾತ್ರ, ವ್ಯಕ್ತಿ ಬಗ್ಗೆ ಜನಪದರು ಕಟ್ಟಿಕೊಂಡ ಕಥೆಗಳು ಭಿನ್ನ, ಅಸಾಮಾನ್ಯವು. ಜನಪದ ಗೀತೆಗಳಲ್ಲಿ ಮಹಾಭಾರತ ಕಥೆಯು ಅರಣ್ಯದಲ್ಲಿ

ಅರ್ಜುನ ದ್ರೌಪದಿಯನ್ನು ಸಂದರ್ಶಿಸುವ ಸನ್ನಿವೇಶವನ್ನು ಹೀಗೆ ಚಿತ್ರಿಸಲಾಗಿದೆ :

' ಆಲದ ಮರದಡಿಯ ಅರ್ಜುನರಾಯ
ಹೋಗಿ ಬೇಟ್ಯಾಡುವಾಗ
ನಾರೀನ ಕಣ್ಣೇಲಿ ನೋಡುತಾನೆ ಅರ್ಜುನರಾಯ
.... ಇತ್ಯಾದಿ ಸಂಗತಿಗಳಿವೆ.

ಹನ್ನೆರಡು ವರ್ಷಕ್ಕೆ ಮೈನೆರೆದ ದ್ರೌಪದಿಯನ್ನು ಕಣ್ಣುಕಟ್ಟಿ ಕಾಡಿಗೆ ಬಟ್ಟಿರುತ್ತಾರೆ. ಬೇಟೆಗೆ ಹೋದ ಅರ್ಜುನ ಅವಳನ್ನು ವರಿಸಿ ತರುತ್ತಾನೆ. ಮೂಲ ಭಾರತಕ್ಕಿಂತ ಇದು ಭಿನ್ನ. ಹೀಗೆ ಪುರಾಣ ವಸ್ತುವನ್ನವಲಂಬಿಸಿ ಅನೇಕ ಪೌರಾಣಿಕ ಕಾವ್ಯಗಳು ಹುಟ್ಟಿಕೊಂಡಿವೆ.

೨. ಐತಿಹಾಸಿಕ ಕಾವ್ಯಗಳು

ಇತಿಹಾಸದ ವಸ್ತು, ವ್ಯಕ್ತಿ, ಘಟನೆಯನ್ನೊಳಗೊಂಡ ಸಂದರ್ಭಗಳ ಚಿತ್ರಣ ಇಲ್ಲಿರುತ್ತದೆ. ಕನ್ನಡ ಜನಪದ ಕ್ಷೇತ್ರದಲ್ಲಿ ನಾನಾ ವಿಧವಾದ ಕಥೆ, ಕಾವ್ಯಗಳಲ್ಲಿ ಇತಿಹಾಸದ ಹೆಗ್ಗುರುತುಗಳುಂಟು. ಕೆಲವು ವ್ಯಕ್ತಿಗಳನ್ನು ಜನಪದ ಸಾಹಿತ್ಯದ ಹಿನ್ನೆಲೆಯಲ್ಲಿ ಅವಲೋಕಿಸಬಹುದು.

೧. ಸರ್ಜಪ್ಪನಾಯಕ : ಆಳ್ವಿಕೆ ನಡೆಸಿದ ರಾಜರ ಬಗೆಗಿನ ಸಂಗತಿಗಳು ಇತಿಹಾಸ ರಚನೆಯಲ್ಲಿ ಸೇರದೆ ಜನರ ಬಾಯಲ್ಲುಳಿದಿರುವುದು ಹೆಚ್ಚು. ಹೀಗೆ ಪಾಳೆಯಗಾರರ ಬಗೆಗೆ ವಿಪುಲವಾದ ಜನಪದ ಸಾಹಿತ್ಯ ದೊರೆತಿದ್ದು, ಬೇಟೆ-ಬೇಡರ ಸಂದರ್ಭಗಳು ಜೊತೆ ಜೊತೆ ಬರುತ್ತದೆ. ಇತಿಹಾಸದಲ್ಲಿಲ್ಲದ ಸಂಗತಿಯನ್ನು ಇಲ್ಲಿ ಕಾಣಬಹುದು. ಒಬ್ಬ ವ್ಯಕ್ತಿಯ ಚಾರಿತ್ರ್ಯ ಎಷ್ಟು ಮುಖ್ಯವೋ, ಅವನ ಬಗೆಗಿನ ಕಥೆ ಕಟ್ಟುವ ಪರಿಯು ಸಹಾ ಮಹತ್ವದ್ದು. ಅನೇಕ ಚಾರಿತ್ರಿಕ ಪುರುಷರು ಕಂಡುಬಂದರೂ, ಬೇಟೆ- ಬೇಡರ ಸಂದರ್ಭಕ್ಕೆ ಸರ್ಜಪ್ಪನಾಯಕ ಉತ್ತಮ ಉದಾಹರಣೆಯಾಗಿದ್ದಾನೆ. 'ಬಸವಪಟ್ಟಣದ ಪಾಳೆಯಗಾರ ವಂಶಸ್ಥ ಹನುಮಪ್ಪ ಎಂಬುವನು ಈಗಿನ ತರೀಕೆರೆ ಇರುವ ಭಾಗದಲ್ಲಿ ಬೇಟೆಗೆ ಬಂದಾಗ ಬೇಟೆಯ ನಾಯಿಯ ಮೇಲೆ ಮೊಲವೊಂದು ಬಿದ್ದಿತು. ಇದನ್ನು ನೋಡಿ ಗಂಡುಭೂಮಿ ಎಂಬುದನ್ನು ಅರಿತು ಅಲ್ಲಿ ಊರನ್ನು ಕಟ್ಟಿಸಿದನು. ಅಲ್ಲಿ ತಾರೆಯ ಮರಗಳು ವಿಶೇಷವಾಗಿದ್ದುದರಿಂದ 'ತಾರಿಕೆರೆ' ಎಂಬ ಹೆಸರು ಆ ನಂತರ ತರಿಕೆರೆಯೆಂದಾಯಿತಂತೆ. ಹೀಗೆ ಅನೇಕ ಸ್ಥಳಗಳ ಬಗ್ಗೆ ದಂತಕಥೆಗಳು ಪ್ರಚಲಿತದಲ್ಲಿವೆ. ಪುರಾಣ, ಪ್ರತೀತಿಗಳು ನೆರವು ನೀಡುತ್ತವೆ. ಉದಾ : ಇದೇ ವಂಶದ 'ರಂಗಪ್ಪ ನಾಯಕನನ್ನು ಕೆಂದಹುಲಿ ಎದೆಯ ಮೇಲೆ ಕುಳಿತು ಕಂಡ ಕಂಡವನ್ನು ಕಿತ್ತರೂ ಏನೂ ಮಾಡಲಾಗುವುದಿಲ್ಲ. ಈ ನಾಯಕನು ಮೈಸೂರು ಭಾಗದ ಕೆಂದ ಹುಲಿ ಎಂಬ ವೀರನೊಡನೆ ಹೋರಾಡಿ ಕೆಳಗುರುಳುತ್ತಾನೆ. ಹಿರಿಯ ಮಗ ಸರ್ಜಪ್ಪನಾಯಕನ ಪರಾಕ್ರಮ ಕಂಡು, ಮೈಸೂರು ಕೋಟೆ ಮುಚ್ಚಲಾಯಿತು. ಇವನು ಕರಿಮಂಟಿ ಬಾರೆಯಲ್ಲಿ 'ಕರಿಹುಲಿ'ಯನ್ನು ಕೊಂದು ತಂದೆಗೆ ನೀರು ಚಿಮಿಕಿಸಿ ಎಚ್ಚರಗೊಳ್ಳುವಂತೆ ಮಾಡುತ್ತಾನೆ. ನಂತರ ಗರಡಿ ಮನೆಗೋಗಿ ಹುಲಿಯಾಗಿ ಬಂದು ವಿರೋಧಿಯನ್ನು ಕೊಲ್ಲುತ್ತಾನೆ.[೧೧] ಕರ್ನಾಟಕದ ಎಲ್ಲ ಪಾಳೆಯಗಾರರ ಸಾಹಸ ಪ್ರದರ್ಶನಗಳಲ್ಲಿ ಇಂತಹ ಬೇಟೆ ಪ್ರಸ್ತಾಪವಿದೆ.

ತರೀಕೆರೆ ಪಾಳೆಯಗಾರರಲ್ಲಿ ಬೇಟೆಯ ಅನುಭವಗಳು ವ್ಯಾಪಕವಾಗಿವೆ. ಅವರು ಬೇಡರಾದುದರಿಂದ ಬೇಟೆ ಅಜನ್ಮಸಿದ್ಧ ವೃತ್ತಿ ಎಂಬಂತೆ ಕಂಡುಬರುತ್ತದೆ. ಕೆಂಗಪ್ಪನಾಯಕ, ಹೀರೇ ಹನುಮಪ್ಪನಾಯಕ, ಇಮ್ಮಡಿ

ಹನುಮಪ್ಪನಾಯಕ, ನಿಚ್ಚಮದುವಣಿಗ ಹನುಮಪ್ಪನಾಯಕ, ಸರ್ಜಾಹನುಮಪ್ಪನಾಯಕ ಮತ್ತು ಸೀತಾರಾಮಪ್ಪ ನಾಯಕ ಮೊದಲಾದ ಅರಸರು ಆಳ್ವಿಕೆ ನಡೆಸಿದ್ದಾರೆ. ಒಬ್ಬೊಬ್ಬರ ಬಗೆಗೂ ನಾನಾ ರೀತಿಯ ಜನಪದ ಕಥೆಗಳು ಹುಟ್ಟಿಕೊಂಡಿವೆ. ಹೀಗೆ ಕುಮಾರರಾಮ, ಸಿರಾದರಂಗಪ್ಪನಾಯಕ, ಮದಕರಿನಾಯಕ, ಬೆಳವಡಿ ಮಲ್ಲಮ್ಮ, ಕಾರುಗನಹಳ್ಳಿ ಹಂಪಣ್ಣನಾಯಕ, ದೊಂಡಿಯ ವಾಘ ಮುಂತಾದವರು ಕಂಡುಬರುತ್ತಾರೆ.

೨. ಕಾಳಿಂಗರಾಯನಕಥೆ : ಜನಪದ ಕಾವ್ಯಗಳಲ್ಲಿ ಬೇಟೆ ಔಚಿತ್ಯಪೂರ್ಣವಾಗಿ ಬಂದಿದೆ. ಸುಖ,ದುಃಖ, ಸಂತೋಷಗೊಂಡ ವ್ಯಕ್ತಿ ಬೇಟೆ ಹವ್ಯಾಸಕ್ಕೆ ಬಲಿಯಾಗುತ್ತಾನೆ. ಯಾವುದೋ ಹಂತಕ್ಕೆ ಅವನು ತ್ಯಜಿಸಿ ಹಸನಾದ ಬದುಕಿಗೆ ಹಾತೊರೆಯುವನು. ಇಂಥಾ ಕಥೆ ಕಾಳಿಂಗರಾಯನದು. 'ಕತ್ತಲರಾಯ, ಮದರಂಬೆಯರಿಗೆ ತುಂಬಾ ವರ್ಷಗಳಿಂದ ಮಕ್ಕಳಿರಲಿಲ್ಲ. ವೃದ್ಧಾಪ್ಯ ಪ್ರಾಪ್ತಿಯಾದಾಗ ಮದರಂಬೆ ಶಿವನಲ್ಲಿ ಮೊರೆಯಿಟ್ಟು ಪುತ್ರ ಸಂತಾನದ ವರವನ್ನು ಪಡೆಯುತ್ತಾಳೆ'. ಇವಳು ಗರ್ಭಿಣಿಯಾಗಿ ೯ ತಿಂಗಳಾದಾಗ ಗಂಡುಮಗುವಿಗೆ ತಾಯಿಯಾದಳು. ಅವನಿಗೆ ಕಾಳಿಂಗರಾಯನೆಂದು ಹೆಸರಿಟ್ಟರು. ವಯಸ್ಸಾಗುತ್ತಾ ಹದಿನಾರಕ್ಕೆ ಬಂದಾಗ ಚೆಂಡಾಟ ಆಡುತ್ತಾನೆ. ಆಕಸ್ಮಿಕವಾಗಿ ಬಾವಿಗೆ ಹೋದಾಗ ವಿಧಿ ಮಾಯೆ ಕಾಳಿಂಗರಾಯನ ಮೇಲೆ ದೃಷ್ಟಿಯನ್ನು ಹರಿಸಿ ಅವನಲ್ಲಿ ಹುಲಿಯ ಬೇಟೆ ವ್ಯಾಮೋಹ ಬಿತ್ತಿದಳು.

ಅದರಂತೆ ಕಾಳಿಂಗರಾಯ ಅರಮನೆಗೆ ಬಂದು ತಾಯಿಯನ್ನು ಬೇಡಿ, ಬೇಟೆಗೆ ಹೊರಡಲು ಅನುವಾದನು. ಮದರಂಬೆ ಬೇಡವೆಂದು ಎಷ್ಟು ತಡೆದರೂ ಅವನು ನಿಲ್ಲಲಿಲ್ಲ. ಮಂತ್ರಿಯನ್ನು ಜೊತೆ ಮಾಡಿ, ಸಾಕಷ್ಟು ದಂಡನ್ನು ರಕ್ಷಣೆಗೆ ಒದಗಿಸಿ ಮದರಂಬೆ ಮಗನನ್ನು ಬೀಳ್ಕೊಟ್ಟಳು. ಕಾಳಿಂಗರಾಯ ಬೇಟೆಗೆ ಹೊರಟಾಗ ಅನೇಕ ಅಪಶಕುನಗಳಾದವು. ಹೆದರದೆ ದಂಡನ್ನು ಮುಂದುವರೆಸಿದ.

ಕಾಡಿನಲ್ಲಿ ಕಾಳಿಂಗರಾಯ ಏಳು ಮೆಟ್ಟಿನ ಹೆಬ್ಬುಲಿಯನ್ನು ಹೊಡೆದ. ಪಕ್ಷಿ, ಪ್ರಾಣಿ ಎಲ್ಲವನ್ನು ಸಾಯಿಸಿದ. ಬೇಟೆಯ ವಿವರಗಳನ್ನು ಬರೆದು ತಾಯಿಗೆ ಓಲೆಯನ್ನು ಕಳುಹಿಸಿದ. ಮೂರುದಿನ ಕಳೆಯಿತು. ಹಿಂದಿರುಗುವಂತೆ ಮಗನಿಗೆ ಓಲೆಯೊಂದನ್ನು ಕಳುಹಿಸಿದಳು ಮದರಂಬೆ. ಇಲ್ಲಿ ತಾಯಿ ಮಗುವಿನ ಪುತ್ರ ವಾತ್ಸಲ್ಯ, ವೀರನಿಷ್ಠೆ, ಪತ್ನಿ ಚೆನ್ನವ್ವ ಕಾವ್ಯದಲ್ಲಿ ಬರುತ್ತಾರೆ. ಶಿವನಿಂದ ಮದರಂಬೆ ಮಗನನ್ನು ಪಡೆದ ಸನ್ನಿವೇಶವನ್ನು ಸಾಕಷ್ಟು ವಿಸ್ತಾರವಾಗಿಯೇ ಇಲ್ಲಿ ಬೆಳೆಸಲಾಗಿದೆ. ಕಾಳಿಂಗರಾಯನ ವಿದ್ಯಾಭ್ಯಾಸ, ಅವನು ಬೇಟೆಗೆ ಹೊರಡಲು ದೊರೆತ ಪ್ರೇರಣೆ, ತಾಯಿ ಮಗನ ಬೆಂಗಾವಲಿಗೆ ಮಾಡಿದ ವ್ಯವಸ್ಥೆ, ಚಿತ್ರದ ಹುಲಿಯನ್ನು ನೋಡಿ ಕಾಳಿಂಗ ಮಡಿದ ಬಗೆ, ಮಗನ ಮರಣವನ್ನು ಕೇಳಿದ ತಾಯಿಯ ತೀವ್ರ ದುಃಖ, ಸತ್ತ ಮಗನಿಗೆ ಚೆನ್ನವ್ವೆಯನ್ನು ತರುವ ಪ್ರಸಂಗ, ಮುದ್ದುಸೊಸೆಯನ್ನು ಮದರಂಬೆ ಬರಮಾಡಿಕೊಳ್ಳುವ ರೀತಿ, ಸುಡುಗಾಡು ಚೆನ್ನಕ್ಕ ತರುವ ಪ್ರಸಂಗ ಕಾವ್ಯದಲ್ಲಿವೆ. ಹುಲಿಬೇಟೆಯ ಪಾಠಗಳು ಎರಡು ರೀತಿಯಲ್ಲಿವೆ :

ಕಟಕಟೆ ದಪ್ಪವ ನೋಡುತ್ತ ಕಾಳಿಂಗ
ಚಿತ್ರದಲೆರಡು ಹುಲಿಗಳ
ಚಿತ್ರದಲೆರಡು ಹುಲಿಗಳ ನೋಡುತ್ತ
ಪುತ್ರ ಕಾಳಿಂಗನು ಮಡಿದಾನು||

ಕೆಂಡದಂಥ ಕಣ್ಣು ಗೊಗ್ಗರನಂಥ ಮೀಸೆ
ಅರೆ ಬಂದ ಹುಲಿಯೆ ಇರಿದಂಗಾಯ್ತಲ್ಲೊ
ಅರೆ ಬಂದ ಹುಲಿಯೆ ಇರಿಯೋನ ಹೊತ್ತಿಗೆ
ನನ್ನ ಬಾಲ ಕಾಳಿಂಗ ಸಿಗ್ದೆ ಬಿದ್ದ ! - ಎಂದು ತಿಳಿದು ಬರುತ್ತದೆ.[೧೨]

೩. ಸಾರಂಗಧರನ ಕತೆ : ಕನ್ನಡದ ಜನಪ್ರಿಯ ಜಾನಪದ ಕಥೆಗಳಲ್ಲೊಂದು ಸಾರಂಗಧರನ ಕತೆ. ಇದು ಕುಮಾರರಾಮನ ಕಥೆಯನ್ನೇ ಹೋಲುತ್ತದೆ. 'ರಾಜಮಹೇಂದ್ರಪುರದ ರಾಜೇಂದ್ರದೊರೆ ಮತ್ತು ರತ್ನಾಂಗದೇವಿಯರಿಗೆ ಬಹುಕಾಲ ಮಕ್ಕಳಿರಲಿಲ್ಲ. ದಾನ, ಧರ್ಮದಿಂದ ಮಗನ ಜನನವಾಯಿತು. ಯೌವ್ವನದಲ್ಲಿ ಚಿತ್ರಾಂಗದೇವಿಪಟ್ಟಣದ ಗುಜ್ಜಲೇಶ್ವರನ ಮಗಳು ಚಿತ್ರಾಂಗದೇವಿಯನ್ನು ತಂದು ವಿವಾಹ ಮಾಡಿಸಲು ಚಿತ್ರಪಟವನ್ನು ಪರಸ್ಪರ ನೋಡಲಾಗಿ ಅವಳಲ್ಲಿ ರೂಪಕ್ಕೆ ಸೋತು ರಾಜೇಂದ್ರ ದೊರೆಯು ತಾನೇ ವಿವಾಹಕ್ಕೆ ಸಿದ್ಧನಾಗುತ್ತಾನೆ. ಆಗ ಚಂದ್ರಾಯುಧಕ್ಕೆ ಧಾರೆ ಎರೆಯುತ್ತಾರೆ (ಬುಡಕಟ್ಟು ಜನರು ಇಂದಿಗೂ ಕತ್ತಿಗೆ ಧಾರೆ ಎರೆಯುವುದು ಗಮನಾರ್ಹ). ಚಿತ್ರಾಂಗದೇವಿ ಗಂಡನ ಮನೆಗೆ ಬಂದಾಗ ಚಿತ್ರಪಟದಲ್ಲಿದ್ದ ಸ್ಫುರದ್ರೂಪಿ ತರುಣನಲ್ಲ ಎಂದು ನಿಟ್ಟುಸಿರು ಬಿಡುತ್ತಾಳೆ. ರಾಜೇಂದ್ರರೆ ಪ್ರಜೆಗಳ ಕೋರಿಕೆಯಂತೆ ಅವನು ಮೂರು ದಿನಗಳ ಬೇಟೆಗೆ ಹೋಗಬೇಕಾಗುತ್ತದೆ. ತಂದೆ ಬೇಟೆಗೆ ತೆರಳಿದ ಮೇಲೆ ಸಾರಂಗಧರ ತಾಯಿಯನ್ನು ಕಾಡಿ-ಬೇಡಿ ಮಂತ್ರಿ ಮಗನೊಡನೆ ಪಾರಿವಾಳದ ಜೂಜಾಡಲು ತಾಯಿಯ ಅರಮನೆಯಲ್ಲಿದ್ದ ಅಪೂರ್ವ ಪಾರಿವಾಳವನ್ನು ಪಡೆದುಕೊಂಡು ರಾಜಮಹೇಂದ್ರ ಪುರಿಯ ಬೀದಿಗಳಲ್ಲಿ ಬರುತ್ತಾನೆ.

ಬೇಟೆಗೋದ ಪತಿ ೩ ದಿನ ಕಳೆದರೂ ಬರಲಿಲ್ಲ. ಕಿರಿಯರಾಣಿ ಚಿತ್ರಾಂಗಿ ಅರಮನೆಯ ಉಪ್ಪರಿಗೆಯಲ್ಲಿ ನಿಂತು ಸಾರಂಗಧರನ ಮೇಲೆ ದೃಷ್ಟಿ ಹಾಯಿಸುತ್ತಾಳೆ. ಅವನನ್ನು ಅರಮನೆಗೆ ಬರುವಂತೆ ವಿಫಲ ಪ್ರಯತ್ನ ನಡೆಸಿ, ಕೊರವಂಜಿ ವೇಷ ಧರಿಸುವಳು. ಬೇಟೆಯಿಂದ ಮರಳಿ ಬಂದ ರಾಜೇಂದ್ರ ದೊರೆಗೆ ಚಿತ್ರಾಂಗಿ ಸಾರಂಗಧರ ಪುಂಡಾಟ ಮಾಡಿ ಶೀಲ ಕೆಡಿಸಿದನೆಂದು ತಾನು ಪ್ರಾಣ ಬಿಡುವಂತೆ ನಾಟಕ ಮಾಡುವುದು ಕುಮಾರರಾಮನ ಪ್ರಸಂಗವನ್ನು ನೆನಪಿಗೆ ತರುತ್ತದೆ.

೪. ಕರಿಭಂಟನಕತೆ :ಬಯಲುಸೀಮೆಯಲ್ಲಿ ಅತೀ ಜನಪ್ರಿಯವಾದುದು ಕರಿಭಂಟನಕತೆ. ಕರಿಭಂಟನಕತೆಯ ಪೌರಾಣಿಕ ನಾಟಕವನ್ನು ಚಿತ್ರದುರ್ಗ ಜಿಲ್ಲೆಯ ಹಾಯ್ಕಲ್, ನಾಯಕನಹಟ್ಟಿಯ ಹೋಬಳಿ, ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಪೂಜಾರಹಳ್ಳಿ ಗ್ರಾಮ ಮೊದಲಾದೆಡೆಗಳಲ್ಲಿ ಅಭಿನಯಿಸುತ್ತಾರೆ. ಕಥೆ ಮಾತ್ರ ವಿಶಿಷ್ಟವಾಗಿದೆ. 'ದ್ವಾರಾವತಿಯ ರಾಜಕುಮಾರ ಕರಿಭಂಟ, ಚಿತ್ರಕಲ್ಲುದುರ್ಗದ ಹುಲಿಬೇಟೆಗೆ ಹೋಗಿ ಮಡಿದ ತಂದೆಯನ್ನು ಕೊಂದ ಹುಲಿಯನ್ನು ಅರಸುತ್ತ ಸಾಗಿ ತೊಂಡನೂರು ರಕ್ಕಸಿ ಉದ್ದಂಡಿಯ ಕೈಗೆ ಸಿಕ್ಕುತ್ತಾನೆ. ಉದ್ದಂಡಿಯ ಮಗಳು ಪುಂಡರೀಕಾಕ್ಷಿ ಕರಿಭಂಟನಲ್ಲಿ ಅನುರಕ್ತಳಾಗಿ ಉಪಾಯದಿಂದ ತನ್ನ ಸೋದರಮಾವ ಬೊಮ್ಮಕ್ಕಸನನ್ನೇ ತನ್ನ ತಾಯಿಯಿಂದ ಕೊಲ್ಲಿಸುತ್ತಾಳೆ.

೩. ಸ್ತ್ರೀ ಪ್ರಧಾನ ಕಾವ್ಯಗಳು

೧. ಬಾಲನಾಗಮ್ಮನಕಥೆ:ಮೌಖಿಕ ಚರಿತ್ರೆಯಲ್ಲಿ ಮಹಿಳೆಯರ ಸಾಧನೆಗಳು ಗಮನಾರ್ಹವಾಗಿವೆ. ಇಂದಿಗೂ ಕಿತ್ತೂರು ರಾಣಿ ಚೆನ್ನಮ್ಮ, ಬೆಳವಡಿಮಲ್ಲಮ್ಮ, ಒನಕೆ ಓಬವ್ವ ಮುಂತಾದವರು ಮಹಾಸಾಧ್ವಿಯರಂತೆ ಕಂಡುಬರುತ್ತಾರೆ. ಇವರ ಬಗೆಗೆ ಜನಪದ ಕಾವ್ಯ, ಕಥೆಗಳು ಲಭ್ಯವಿವೆ. ಸಾಂಸ್ಕೃತಿಕವಾಗಿ ಜನಪದ ಕಥೆಗಳು ಸಾಮಾಜಿಕ ಸಂಘರ್ಷ, ನೈತಿಕ-ಅನೈತಿಕ ಸಂಗತಿಗಳಿಗೆ ಜನಪದರು ಒತ್ತು ಕೊಡುತ್ತಾರೆ. ಆಗ ಭಾಗೀರಥಿಯ ಕೆರೆಗೆ ಹಾರ, ಕೆರೆಹೊನ್ನಮ್ಮ,

ಮಾಸ್ತಮ್ಮ ಇತರರು ಕಾವ್ಯ ಮತ್ತು ಮಾಸ್ತಿಗಳಲ್ಲಿ ಚಿತ್ರಿತಗೊಳ್ಳುತ್ತಾರೆ. ಇಲ್ಲಿ ಶಿಲ್ಪ, ಬರವಣಿಗೆಯನ್ನು ಅರಿಯುವ ಮೊದಲು ಇವರ ನೆನಪನ್ನೆ ಕಾವ್ಯವಸ್ತುವನ್ನಾಗಿಸಿರಬೇಕು. ಹಿಂದಿನ ಪ್ರಧಾನಿ ಇಂದಿರಾಗಾಂಧಿಯವರ ಬಗೆಗೂ ಲಾವಣಿಗಳು ಹುಟ್ಟಿಕೊಂಡಿವೆ. ಬ್ರಿಟಿಷರ ಸಂದರ್ಭದಲ್ಲಿ ವಿಕ್ಟೋರಿಯ ರಾಣಿ ಮತ್ತು ಬಳ್ಳಾರಿಯ ಗಡಗಿ ವೀರಭದ್ರಪ್ಪನ ಬಗ್ಗೆ ಲಾವಣಿಯಿದೆ.

ಬಾಲನಾಗಮ್ಮ ಅಥವಾ ನಾಗರಕನ್ನೆ ಎಂಬ ಸ್ತ್ರೀ ಪಾತ್ರ ಪ್ರಧಾನ ಕಾವ್ಯಗಳಲ್ಲಿ ಬೇಟೆಯ ಉಲ್ಲೇಖವಿದೆ. 'ಬಾಲನಾಗಮ್ಮನ ಜನನ ಪೂರ್ವದ ಪ್ರಸಂಗಗಳು, ಜನನದ ಅನಂತರ ಬಾಲನಾಗಮ್ಮ ಮತ್ತು ಆರುಮಂದಿ ಸೋದರಿಯರಿಗೆ ವನವಾಸ ಪ್ರಾಪ್ತವಾದ ಬಗೆ, ಏಳು ಮಂದಿ ರಾಜಕುಮಾರರು ಬೇಟೆಗೆ ಬಂದು ಅವರನ್ನು ವರಿಸುವ ಸನ್ನಿವೇಶಗಳು, ಬಾಲನಾಗಮ್ಮನ ಗರ್ಭದಲ್ಲಿ ಜನಿಸುವ ಶಿಶುವಿಗೆ ನಾಮಕರಣ ಮಾಡಲಾಗಿ ತರಬೇಕಾಗಿದ್ದ ದೇವರಪೆಟ್ಟಿಗೆಯ ಸಂಬಂಧಪಟ್ಟಂತೆ ಸಂಘಟಿಸಿದ ಯುದ್ಧ, ಏಳುಮಂದಿ ರಾಜಕುಮಾರರೂ ಯುದ್ಧಕ್ಕೆ ತೆರಳಿದಾಗ ಬಾಲನಾಗಮ್ಮನ ಅಪಹರಣ ಇತರ ಪ್ರಸಂಗಗಳಿವೆ.

ಇನ್ನೊಂದು ಮೂಲದ ಕಥೆಯ ಪ್ರಕಾರ 'ಪಾನಗಲ್ಲಪಟ್ಟಣದ ರಾಜಕುಮಾರರು ಏಳುಮಂದಿ ಸೇರಿ ಬೇಟೆಗೆ ಬಂದು ಅವರನ್ನು ಗುರುತಿಸಿ ಕರೆದೊಯ್ದು ಲಗ್ನಮಾಡಿಕೊಳ್ಳುವ ದೃಶ್ಯ ಇದೆ. ತರುವಾಯ ಈ ಕಥೆಯಲ್ಲಿ ಯುದ್ಧವಾದಾಗ ಬೇಟೆ ಪ್ರಸ್ತಾಪ ಬರುತ್ತದೆ :

ಕೇಳೊ ಕೇಳೊ ಅಣ್ಣಯ್ಯ ನಾನೊಂದ ಹೇಳೇನು
ಮೂಡಲ ಗುಡ್ಡಕೆ ಗುಬ್ಬ ಸಾರಂಗಕೆ
ಹುಲಿ ಕರಡಿ ಬ್ಯಾಟಗೆ ಹೋಗಬೇಕು ಅಣ್ಣಾ ![೧೩]

ಮತ್ತೊಂದು ಕಥೆಯ ಪ್ರಕಾರ ಏಳುಮಂದಿ ರಾಮದೀರು ಕೂತು ಮಾತಾಡ್ಯಾರೆ ..... ನಂದಿಯದುರ್ಗಕ್ಕೆ ಬೇಟೆಗೆ ಹೋಗುತೀನಿ ಎಂದು ಬರುತ್ತದೆ. ಆಯಾ ಪ್ರಾದೇಶಿಕತೆಗೆ ತಕ್ಕಂತೆ ಕಥೆಯ ಹಂದರವನ್ನು ಆ ಭಾಗಕ್ಕೆ ತುಂಬುತ್ತಾ ತಮ್ಮ ತಮ್ಮ ಅನುಭವ, ಸ್ಥಳಗಳನ್ನು ಬೆಳಕಿಗೆ ತರುವ ಯತ್ನ ಇಲ್ಲಿದೆ. ಇಲ್ಲಿ ೭ ಮಂದಿ ಬೇಟೆಗೆ ಹೋಗುವುದು ಸಹಜ. ಬಾಲನಾಗಮ್ಮನ ಅಪಹರಣ ಏಕೆ ಆಯಿತು? ಏಳುಮಂದಿ ರಾಜಕುಮಾರರು ಪಟ್ಟಣ ಬಿಡಲು ಕಾರಣವೇನು? ಹೊರಗೆ ಬೇಟೆಗೆ ಹೋದ ೭ ಮಂದಿ ರಾಜಕುಮಾರರು ಪಟ್ಟಣಕ್ಕೆ ಮರಳಿದಾಗ ನಾಗಮ್ಮನ ಅಪಹರಣ ಇತ್ಯಾದಿ ವಿಷಯಗಳು ತಿಳಿಯುತ್ತವೆ. ಬಾಲನಾಗಮ್ಮನ ಕಥೆ ವಿಭಿನ್ನ ಪಾಠಗಳಿಂದ ಕೂಡಿದೆ. ಏಳು ಮಂದಿರಾಯರು ಸಿದ್ಧರಾಜಪಟ್ಟಣಕ್ಕೆ ದಂಡೆತ್ತಿ ಹೋದರೆ, ಇನ್ನೊಂದು ಪ್ರತಿಯಲ್ಲಿ ನಂದಿದುರ್ಗಕ್ಕೆ ಬೇಟೆಗೆ ಹೋಗುತ್ತಾರೆ. ಇತರ ಸ್ಥಳಗಳ ಉಲ್ಲೇಖ ಗಮನಾರ್ಹ. ಒಂದು ಕಥೆಯು ಏಳುಮಂದಿ ರಾಯರು ಬೇಟೆಗೆ ಹೋದ ಸಮಯವನ್ನು ಸಾಧಿಸಿ ಒಬ್ಬ ಜೋಗಿ ನಾಗರಕನ್ನೆಯನ್ನು ತರಲು ಬರುತ್ತಾನೆ. ಭಿಕ್ಷೆಯ ನೆಪದಲ್ಲಿ ಅವಳನ್ನು ಹೊರಗೆ ಬರಮಾಡಿಕೊಂಡು ಜೂಲುನಾಯಿ ಮಾಡಿಕೊಂಡು ಕರೆತರುತ್ತಾನೆ.

ಬಾಲನಾಗಮ್ಮನ ಕಥೆಗೆ ಪೂರಕವಾಗಿ ಧೀರ ಕುಮಾರ ಕಥೆಯು ನೆರವಾಗಿದೆ. ಇಲ್ಲಿ ನಂಜರಾಜ ಪಟ್ಟಣದ ಬಳಿ ಹೆಬ್ಬುಲಿಯೊಂದನ್ನು ಕೊಂದು, ಅದರ ಗುರುತನ್ನು ತಾನು ರಾಜನಿಗೆ ತೋರುವ ಮುನ್ನ ಮಡಿವಾಳನೊಬ್ಬ ತಾನೇ ಹುಲಿಯನ್ನು ಕೊಂದನೆಂದು ತಿಳಿದುಬರುತ್ತದೆ. ರಾಜನೇ ಕೊಲ್ಲಬೇಕಾದ ಹುಲಿಯನ್ನು ಸಾಮಾನ್ಯ ವ್ಯಕ್ತಿ ಕೊಂದುದರಿಂದ

ಅವನಿಗೆ ದೊರಕಬೇಕಾದ ರಾಜಮನ್ನಣೆ ಬಗ್ಗೆ ಕಥೆ ಜನ್ಮತಾಳಿದೆ. ಒಬ್ಬ ಹೆಣ್ಣನ್ನು ಪಡೆಯಲು, ಹುಲಿಯನ್ನು ಕೊಂದು ಸಾಹಸ ಪ್ರದರ್ಶಿಸುವಲ್ಲಿ ಬೇಟೆಯ ಪ್ರಸ್ತಾಪ ಗಣನೀಯ ಪಾತ್ರವಹಿಸಿದೆ.

೨. **ನೀಲವೇಣಿಯಕಥೆ:** ಇದು ಮಹಿಳೆ ಕುರಿತ ಒಂದು ಜಾನಪದ ಕಥೆ. ಕಾಡು, ಕೊಳ ಇತರ ಸಂದರ್ಭಗಳು ಪ್ರಸ್ತಾಪಗೊಂಡಿವೆ. ಒಜಯ್ಯ ಕಾಡಿನಲ್ಲಿ ನೀಲವೇಣಿಯನ್ನು ಕೂಡುವ ಸಂಚು ಮಾಡುತ್ತಾನೆ. 'ಬಂಕಾಪುರಿಯ ನೀಲಕಂಠರಾಜ ದಂಡು ದಾಳಿಯೊಡನೆ ಬೇಟೆಗೆ ಬಂದಿದ್ದವನು ಕೆಂದಾವರೆ ಕೊಳದಲ್ಲಿ ನೀರನ್ನು ಹುಡುಕಿ ಬಂದ ತನ್ನ ನಾಯಿಯ ಬೆನ್ನಿನಲ್ಲಿ ಮಾರುದ್ದ ತಲೆಗೂದಲನ್ನು ನೋಡಿದ ! ಆ ಮುಂಡೆ ರಾಣಿಯನ್ನು ತಾನು ನೋಡಲೇಬೇಕೆಂದು ಮರದ ಬಳಿಯಲ್ಲಿದ್ದ ಮಂಚದ ಮೇಲೆ ಮಲಗಿದ. ಹೀಗೆ ಕಥೆ ಮುಂದುವರೆದು ನೀಲವೇಣಿ ಪ್ರೇಮಿಸಿ ಮದುವೆಯಾಗುವ ಸಂದರ್ಭವಿದೆ.

೩. **ಕಾಡುಸಿದ್ದಮ್ಮನಕಥೆ :** ಅಪಶಕುನ, ಅತಿಮಾನುಷ ಕಲ್ಪನೆಯಿಂದ ಕೂಡಿದೆ ಈ ಕಥೆ. 'ಮುರಿದ ಸೌಟೊಂದನ್ನು ತಿಪ್ಪೆಯ ಮೇಲೆ ಎಸೆದಿರುತ್ತಾರೆ. ಅದು ದುಃಖ ಮಾಡುತ್ತಾ ಶಿವ-ಪಾರ್ವತಿಯರಿಗೆ ಮೊರೆಯಿಡುತ್ತದೆ. ಶಿವ-ಪಾರ್ವತಿಯರು ಮುರುಕು ಸೌಟನ್ನು ಒಂದು ಸುಂದರವಾದ ಹೆಣ್ಣನ್ನಾಗಿ ಪರಿವರ್ತಿಸಿ ಹುಣಸೆಯ ಮರವೊಂದರ ಬುಡದಲ್ಲಿ ಕೂರಿಸಿ ಹೋಗುತ್ತಾರೆ. ಬೇಟೆಗೆ ಹೋಗಿದ್ದ ರಾಜನೊಬ್ಬ ಆ ಮಾರ್ಗವಾಗಿ ಬಂದು ಆ ಸೊಟಗಕ್ಕನ ಸೌಂದರ್ಯಕ್ಕೆ ಬೆರಗಾಗಿ ಅವಳನ್ನು ಲಗ್ನವಾಗುತ್ತಾನೆ. ಹೆಂಡತಿಯಿದ್ದರೂ ಮಕ್ಕಳಿರಲಿಲ್ಲ, ಸೊಟಗಕ್ಕ ಗರ್ಭವತಿಯಾಗಿ ಮೂರು ಮಕ್ಕಳನ್ನು ಪಡೆಯುತ್ತಾಳೆ. ಹಿರಿಯ ರಾಣಿಯರು ಆ ಮಕ್ಕಳನ್ನು ಹಗೇವಿಗೆ ಹಾಕಿ ಕಲ್ಲುಮುಚ್ಚಿ ಸೊಟಗಕ್ಕೆ ಮೂರು ಇಟ್ಟಿಗೆಯನ್ನು ಹೆತ್ತಳೆಂದು ರಾಜನಿಗೆ ಸುಳ್ಳು ಹೇಳುತ್ತಾರೆ. ಇದಕ್ಕೆ ಸಂವಾದಿಯಂತೆ ಪುಣ್ಯದ ಲಕ್ಷ್ಮಿಕತೆ ಬರುತ್ತದೆ. 'ಒಮ್ಮೆ ರಾಜ ಬೇಟೆಯಿಂದ ಮರಳುವಾಗ ಮಂತ್ರಿ, ಪ್ರಧಾನಿ ಜೊತೆ ಬಂದು ಮರದ ಕೆಳಗೆ ಕುಳಿತುಕೊಳ್ಳುತ್ತಾರೆ. ಅಲ್ಲಿಗೆ ಬಂದ ಮೂರು ಜನ ಹುಡುಗಿಯರಲ್ಲಿ ಸರಸ-ಸಲ್ಲಾಪ ನಡೆಯುವ ಪ್ರಸಂಗಗಳಿವೆ.

೪. ವೀರಗೀತೆ, ಲಾವಣಿ, ಕಥೆ, ಇತ್ಯಾದಿ

ತುಮಕೂರು, ಚಿತ್ರದುರ್ಗ ಸೇರಿದಂತೆ ಬಯಲುಸೀಮೆಯಲ್ಲಿ ರಮ್ಯವಾದ ಲಾವಣಿಗಳು ಪ್ರಚಲಿತದಲ್ಲಿವೆ. ಜನಪದ ಕತೆಗಳಲ್ಲಿ ಹೊನ್ನಮ್ಮ ಪ್ರಸಿದ್ಧಿ. ತಬ್ಬಲಿರಾಯನ ಲಾವಣಿಯಲ್ಲಿ ಕುಸುಮಾಲೆಯ ೧೨ಜನ ಗಂಡು ಮಕ್ಕಳಲ್ಲಿ ಕೊನೆಯವನನ್ನು ಉಳಿದು ಎಲ್ಲರೂ ಮದುವೆಯಾದರು. ಕಿರಿಯ ಮಗ ತಬ್ಬಲಿರಾಯ ಯಾವ ಹೆಣ್ಣನ್ನು ಒಪ್ಪದೆ, ಹೆಣ್ಣನ್ನು ಹುಡುಕಿಕೊಂಡು ತಾನೇ ಹೊರಡುತ್ತಾನೆ. 'ಆರಂದಡವಿಯಲ್ಲಿ ಬೇಡರ ಕನ್ನಯ್ಯನ ಮಕ್ಕಳು ತಬ್ಬಲಿರಾಯನನ್ನು ನೋಡಿ ಮನೆಗೆ ಕರೆದೊಯ್ದು ಮದುವೆ ಮಾಡಿ ಅಲ್ಲೇ ಇಟ್ಟುಕೊಳ್ಳುತ್ತಾರೆ'.

ಒಮ್ಮೆ ಕನ್ನಯ್ಯನ ಆರುಮಂದಿ ಮಕ್ಕಳು ಬೇಟೆಗೆ ಹೋಗಿದ್ದಾಗ ಗುರು ತಾಯಮ್ಮ ಬಮ್ಮನಸೆಯಾದ ವಿಷಯ ಅತ್ತಿಗೆಯರಿಗೆ ತಿಳಿಯುತ್ತದೆ. ಗುರು ತಾಯಮ್ಮನ ಮೇಲಿನ ದ್ವೇಷದಿಂದ ಗಂಡಂದಿರು ಬಂದಾಗ ಸಲ್ಲದ ಮಾತನ್ನು ಹೇಳಲು ಅವರು ತೀರ್ಮಾನಿಸಿಕೊಳ್ಳುತ್ತಾರೆ. ಬೇಟೆಯಿಂದ ಮರಳಿದ ಕನ್ನಯ್ಯನ ಮಕ್ಕಳಿಗೆ :

ರಾಯರೆ ರಾಯರೆ ಸುವ್ವಲಾಲೆ
ಅವಳು ಬಮ್ಮನಸೆ ಆಗವಳೆ ಸುವ್ವಲಾಲೆ
ಕುಂಚಿಗರ ಕುಲ ಹೆಚ್ಚಿದರೆ ಸುವ್ವಲಾಲೆ

ಬೇಡರ ಕುಲಕೆ ಮಿತವಯ್ಯ ಸುವ್ವಲಾಲೆ
ಮಂದಿಲಗಿರಿ ಬೆಟ್ಟದಲ್ಲಿ ಸುವ್ವಲಾಲೆ
ಅವನ ತಲೆಯನಾದ್ರು ಕಡಿದೆ ಬನ್ನಿ ಸುವ್ವಲಾಲೆ ಎಂದು ತಿಳಿದುಬರುತ್ತದೆ.

ಮಡದಿಯರ ಮಾತನ್ನು ಕೇಳಿದ ಬೇಡರ ಕನ್ನಯ್ಯನ ಮಕ್ಕಳು ತಬ್ಬಲಿರಾಯನನ್ನು ಮಂದಗಿರಿಯ ತಪ್ಪಲಿಗೆ ಕರೆದುಕೊಂಡು ಹೋಗಿ ಕೊಲೆಮಾಡಿ ಬರುತ್ತಾರೆ.[೧೪]

ಈರೋಬ ಕಥೆಯಲ್ಲಿ ತನ್ನ ಪತಿ ಶೆಟ್ಟಿಶಂಕರರಾಯ ಮಡದಿಗೆ ಚಿನ್ನದ ಪರಿವಾಣ ತರಲೆಂದು ಘಟ್ಟದ ಕೆಳಗೆ ಹೋಗಿದ್ದವನು ಮಲಗಿದ್ದ ಹುಲಿಯನ್ನು ಕೆಣಕಿ ದುರ್ಮರಣಕ್ಕೆ ಈಡಾದ ಸುದ್ದಿ ಬಂದಿತು. ಮನೆಗೆಲಸವನ್ನು ಮುಗಿಸಿ ಕಟ್ಟೆಯ ಹಿಂದೆ ಎಮ್ಮೆ ಮೇಯಿಸುತ್ತಿದ್ದ ಈರೋಬಿಯ ಬಳಿಗೆ, ಸರಿಯಾದ ಗುರುತು ಬರುವವರೆಗೆ ಈರೋಬ ನಂಬಲಿಲ್ಲ. ಇಂತಹ ಅನೇಕ ಕಥೆಗಳು ಕರ್ನಾಟಕದ ಮೂಲೆ ಮೂಲೆಯಲ್ಲಿ ಪ್ರಚಲಿತದಲ್ಲಿವೆ.

ನವಿಲೂರಿನಲ್ಲಿ ಚಂದಯ್ಯ ಮದುವಣಿಗನಾಗಿ 'ಉಗುರೆಣ್ಣೆಮೀಯುವಾಗ ತಂಗಿ ಚೆಲುವಮ್ಮ ಬೇಡರು ತಮ್ಮ ಆಡನ್ನು ಹೊಡೆದ ಸುದ್ದಿಯನ್ನು ತರುತ್ತಾಳೆ'. ಇಲ್ಲಿ ಚಂದ್ರಯ್ಯ ಕಾಡಿಗೆ ಹೋಗಿ ಆಡುಗಳನ್ನು ಬಿಡಿಸಿಕೊಂಡು ಬರುವಾಗ ಕೊನೆಗೆ ಬೇಡರಿಂದ ಹತನಾಗುವನು.

ಜಗುನೆಯ ಜಕ್ಕಣ್ಣ ಮಗುನೆಯ ಬ್ಯಾಟೆಗಾರ ಕತೆಯಲ್ಲಿ ಭಯಂಕರವಾದ ಹಂದಿಯನ್ನು ಕೊಂದವನನ್ನು ತಾನು ವರಿಸುವುದಾಗಿ ಹೇಳಿದ್ದ ಗೌಡನ ಮಗಳು ಉಪ್ಪರಿಗೆಯ ಮೇಲೆ ತಂದು ಹಂದಿಯನ್ನು ಕೊಂದವರಾರು ಎಂಬುದನ್ನು ದೃಢಪಡಿಸಿಕೊಳ್ಳುತ್ತಾಳೆ. ಮಗುನೆಯ ಬ್ಯಾಟಗಾರ ಸಾಹಸದಿಂದ ಹೋರಾಡಿ ಹಂದಿಯನ್ನು ಕೊಂದುದಾಗಿ ಹೇಳಿಕೊಂಡು ಗೌಡನ ಮಗಳನ್ನು ಲಗ್ನವಾಗಲು ಬರುತ್ತಾನೆ. ನಿಜಸಂಗತಿಯನ್ನು ಮೊದಲೇ ಅರಿತಿದ್ದ ಗೌಡನ ಮಗಳು ಮಗುನೆಯ ಬೇಟೆಗಾರನೊಡನೆ ಕೊಂಡಕ್ಕೆ ಹಾರಿ ಪ್ರಾಣಬಿಡುತ್ತಾಳೆ.

ಹೀಗೆ ಜನಪದ ಕತೆ, ಕಾವ್ಯಗಳಲ್ಲಿ ಬೇಟೆ ದುರಂತವಾದ ಘಟನೆಯಾಗಿದೆ. ಜನಸಾಮಾನ್ಯರು ಸೇರಿದಂತೆ ಅನೇಕರು ಬೇಟೆಯಲ್ಲಿ ತೊಡಗಿದ ಉಲ್ಲೇಖ ಕಡಿಮೆ. ಆಳರಸನ ಬಗ್ಗೆ, ಪುರಾಣ ವ್ಯಕ್ತಿಯ ಬಗ್ಗೆ ಮಾಹಿತಿ ಲಭ್ಯ. ಜನಪದ ವೀರಗೀತೆ ಸಾಹಸಮಯ ವ್ಯಕ್ತಿ, ಘಟನೆ, ಪರಿಣಾಮದ ಸಂಕೇತವಾಗಿ ಕಂಡುಬರುತ್ತವೆ. ಸಾಹಸಿಯಾದವನು ಹೆಣ್ಣನ್ನು ಒಲಿಸಿಕೊಳ್ಳುವುದು, ಯುದ್ಧದಲ್ಲಿ ಜಯಗಳಿಸುವುದು, ಬೇಟೆಯಲ್ಲಿ ಪ್ರಾಣಿಯನ್ನು ಕೊಲ್ಲುವುದು, ಮುಂತಾದ ವಿರೋಚಿತ ಕ್ರೀಡೆಗಳಲ್ಲಿ ಜಯಗಳಿಸಿದವರ ಬಗೆಗೆ ವೀರತ್ವದ ಸಂಕೇತವಾಗಿ ಹಾಡುಗಳನ್ನು ಕಟ್ಟಿ ಹಾಡುತ್ತಾರೆ. ಹೀಗಾಗಿ ಕರ್ನಾಟಕದ ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಇವು ಗಮನಾರ್ಹವಾಗಿ ಕಂಡುಬರುತ್ತವೆ.

ಕುಮ್ಮಟದುರ್ಗದ ಅರಸ ಕಂಪಿಲನ ಬೇಟೆ ಅಪೂರ್ವವಾದುದು. ಕುಮಾರರಾಮನ ಜನಪದ ಕಾವ್ಯದಲ್ಲಿ ಬೇಟೆ ಉಲ್ಲೇಖ ಬರುತ್ತದೆ. ಮಲೆಯ ಮಹದೇಶ್ವರ ಮಹಾಕಾವ್ಯದ ಸಂಕಮ್ಮನ ಸಾಲಿನಲ್ಲಿ ಬೇಟೆ ಸಂದರ್ಭ, ಬೇಡರ ಕಣ್ಣಪ್ಪ ಮತ್ತು ಬೇಡರ ಪ್ರಸ್ತಾಪವಿದೆ. ಈ ದೇವರ ಪೂಜಾರಿಗಳು ಸಹಾ ಬೇಡರೇ. ಅದೇ ರೀತಿ ಮಂಟೇಸ್ವಾಮಿ ಮಹಾಕಾವ್ಯದಲ್ಲಿ ಬೇಟೆ-ಬೇಡರ ಉಲ್ಲೇಖ ಸ್ಪಷ್ಟವಾಗಿದೆ. ತುಳು ಪಾಡ್ದನಗಳಲ್ಲಿ ಕೋಟಿ ಚೆನ್ನಯ್ಯರು ಬೇಟೆಗೆ ಹೋದಾಗ ಕಾಲಿಗೆ ಮುಳ್ಳು ಚುಚ್ಚಿಕೊಳ್ಳುವುದು ಮಹತ್ವವಾಗಿದೆ.

೧. ಜಂಪಳ್ಳಿನಾಯಕ : ಇವನು ಚಿತ್ರದುರ್ಗದ ಪಾಳೆಯಗಾರ. ಬೇಟೆಯನ್ನು ಹವ್ಯಾಸವನ್ನಾಗಿ ಮಾಡಿಕೊಂಡಿದ್ದ ಮಹಾವೀರ. ಅಡವಿ, ಬೆಟ್ಟಗುಡ್ಡಗಳಲ್ಲಿ ಬೇಟೆಯಾಡಿದ ಬಗ್ಗೆ ಉಲ್ಲೇಖಗಳಿವೆ. ಜನಪದರು ಕಟ್ಟಿಕೊಂಡಿರುವ ಜನಪದ ಗೀತೆಗಳಲ್ಲಿ (ಕೋಲಾಟ ಪದ) ಬೇಟೆ ಪ್ರಸ್ತಾಪ ಬರುತ್ತದೆ :

...... ಗರಡಿ ಮನೆಗೋಗಿ ಬರುವ ಜಂಪಣ್ಣಗೆ

...... ಒಂಟಿ ಕೊರಳಿಗೆ ಗಂಟಿದ ಸರಮಾಲೆ.........

ಆನೆಯ ಕೊರಳಿಗೆ ಕೀಲು ಸರಪಣಿ ಹಾಕಿ.....

ಆರಾಳ ನಡುವೆ ಬರುವಾನೆ||ಕೋಲು||

ಚಿತ್ರದುರ್ಗದ ನಾಯಕ ಅರಸರು ಮೂಲತಃ ಬೇಟೆ ಪ್ರವೃತ್ತಿಯುಳ್ಳವರು. ಗಾದ್ರಿಮಲ್ಲೆ ಹೆಬ್ಬುಲಿ ಎಂಬ ಬಿರುದುಗಳು ಇವರ ಬೇಟೆಯ ಸಾಹಸಕ್ಕೆ ಬಂದಂತಿವೆ.

೨. ಗಾದರಿ ಪಾಲನಾಯಕ : ಗಾದರಿಪಾಲನಾಯಕ ಒಬ್ಬ ಬುಡಕಟ್ಟು ವೀರ. ಸುಮಾರು ೧೧ನೇ ಶತಮಾನದ ಪೂರ್ವದವನಿರಬೇಕು. ಇಂದು ಮ್ಯಾಸಬೇಡರು ಇವನನ್ನು ಮನೆದೇವರೆಂದು ಆರಾಧಿಸುವುದು ಗಮನಾರ್ಹ. ವಾಸ್ತವವಾಗಿ ಗಾದರಿಪಾಲನಾಯಕನು ಹುಲಿಯನ್ನು ಕೊಂದ ಪರಿಣಾಮ, ಅವನ ಸಾವು ಸಂಭವಿಸುವುದು ಇತ್ಯಾದಿ ಸಂಗತಿಗಳು ತಿಳಿದುಬರುತ್ತವೆ.

'ಗಾದರಿ' ಮಿಂಚೇರಿ ಅರಣ್ಯದಲ್ಲಿ ಸಾವಿರಾರು ಗೋವುಗಳನ್ನು ಕಾಯುತ್ತಿದ್ದ. ಇಲ್ಲಿಗೆ ಬರುವ ಮುನ್ನ ಅವನು ಬಿಳಿಮಲೆ, ಕರಿಮಲೆ, ಒಳಮಲೆ, ಹೊರಮಲೆಗೆ ಹೋಗಿ ಬರುವಾಗ ನನ್ನಿವಾಳ (ಚಳ್ಳಕೆರೆ-ತಾ||)ದಲ್ಲಿ ಪಶುಪಾಲಕನಾಗಿದ್ದ. ಹೀಗೆ ಒಮ್ಮೆ ಮಿಂಚೇರಿ ಅರಣ್ಯದಲ್ಲಿ ಹುಲಿ ದಂಪತಿಗಳೊಂದಿಗೆ ಒಪ್ಪಂದವಾಗುತ್ತದೆ. ಇದರ ಪ್ರಕಾರ ನಾವುಗಳು ವಾಸಿಸುವ ಅರಣ್ಯದಲ್ಲಿ ನೀನು ದನಕರುಗಳ ಸಮೇತ ನೆಲಸುವುದು ಕ್ಷೇಮವಲ್ಲ ಎಂದವು. ನನ್ನ ಅಪರಾಧವೇನೆಂದು ಕೇಳಿದಾಗ 'ಗಂಡು-ಹೆಣ್ಣು ಹುಲಿಗಳು ನಮಗೆ ಬೇಕಾದ ಆಹಾರಕ್ಕೆ ಎರಡು ಹೋರಿ ಕರುಗಳನ್ನು ಕೊಡಬೇಕೆಂದವು. ಹೆಣ್ಣು ಹುಲಿ ನಮಗೆ ಮಕ್ಕಳುಂಟು, ಪಶುಗಳಿಗೂ ಸಂತಾನವುಂಟು ದನಗಳನ್ನು ಕೊಲ್ಲುವುದು ಬೇಡವೆಂದು ಕೈಬಿಟ್ಟವು. ಇದರಂತೆ ಪರಸ್ಪರ ಅನ್ಯೋನ್ಯವಾಗಿ ಹೋಗಲು ಅರಣ್ಯದಲ್ಲಿ ಒಪ್ಪಂದವಾಯಿತು. ಈ ಪ್ರಕಾರ ತಾನು ಹುಲಿಯನ್ನು ಅದರ ಮಕ್ಕಳನ್ನು ಕೊಲ್ಲುವುದಿಲ್ಲ ಹುಲಿ ತನ್ನ ದನಕರುಗಳನ್ನು ಬೇಟೆಯಾಡಬಾರದೆಂದಾಯಿತು.

ಹುಲಿ ದಂಪತಿಗಳು ಬೇಟೆಗೆಂದು ಕಾಡಿಗೆ ಹೋದಾಗ, ಗಾದರಿ ಪಾಲನಾಯಕನು ದನ ಕಾಯಲು ಅರಣ್ಯಕ್ಕೆ ಹೋಗುತ್ತಾನೆ. ಹೀಗಿರುವಾಗ ಅವನ ಭಾವ ಮೈದುನರಾದ ಚಿತ್ತಯ್ಯ ಮತ್ತು ಕಾಟಯ್ಯನವರು ಅಕ್ಕಂದಿರಾದ ಕಂಚವ್ವ-ಕಾಮವ್ವರನ್ನು ನೋಡಲು ಬಂದಿದ್ದರು. ಅಕ್ಕ ತಂಗಿಯರಿರ್ವರೂ ಸಹಾ ಹಾಲು ಮಾರಲು ಹೋಗಿದ್ದರು. ಇಂತಹ ಸಂದರ್ಭದಲ್ಲಿ ಕಾಟಣ್ಣ, ಚಿತ್ತಣ್ಣ ದನದ ಗೂಡೊಳಗೆ ಬಂದು ಕರುಗಳ ಜೊತೆಯಲ್ಲಿ ಹುಲಿಮರಿಗಳು ಆಟವಾಡುತ್ತಿದ್ದವನ್ನು ನೋಡಿ, ಹಸುವಿನ ಕರುಗಳನ್ನು ತಿನ್ನದೆ ಬಿಡುವುದಿಲ್ಲವೆಂದು ತಿಳಿದು ಆ ಎರಡು ಮರಿಗಳನ್ನು ಕೊಲ್ಲುತ್ತಾರೆ.

ಸಾಯಂಕಾಲ ಮರಳಿಬಂದ ಗಾದರಿ ಪಾಲನಾಯಕನಿಗೆ ಈ ವಿಷಯ ತಿಳಿದು ದಿಗ್ಭ್ರಮೆಯಾಗುತ್ತದೆ. ನಾನು ಹುಲಿಗಳಿಗೆ ಕೊಟ್ಟ ವಚನ ತಪ್ಪಿತೆಂದು ತೀವ್ರವಾದ ಸಂಕಟಪಡುತ್ತಿರುವಾಗ ಅಲ್ಲಿಗೆ ಬಂದ ಚಿತ್ತಣ್ಣ-ಕಾಟಣ್ಣರಿಗೆ ನಡೆದ

ಘಟನೆಯನ್ನು ವಿವರಿಸಿದ. ಕೊನೆಗೆ ನಾವೇ ಆ ಹುಲಿಮರಿಗಳನ್ನು ಕೊಂದಿದ್ದು ಎನ್ನುತ್ತಾರೆ. ಇಲ್ಲವಾದರೆ ಅವು ನಮ್ಮ ಹಸುಗಳನ್ನು ಬಿಟ್ಟಾವೆ ಎಂಬ ಉತ್ತರ ಅವರದು. ನಾನು ಹುಲಿಮರಿಗಳನ್ನು ಸಾಕುವೆನೆಂದು ಹುಲಿಗಳಿಗೆ ಮಾತು ಕೊಟ್ಟಿದ್ದೆ, ನನ್ನ ಒಪ್ಪಂದ ಮುರಿದು ಬಿದ್ದಿತಲ್ಲ ಎಂದು ಗೋಳಾಡುತ್ತಾನೆ. ಕಾಟಣ್ಣ ಹೆದರಬೇಡ ಭಾವ ನನ್ನಲ್ಲಿ ಬಂದೂಕವಿದೆ ಎಂದರೂ ಪರಿಪರಿಯಾಗಿ ದುಃಖಿಸುತ್ತಾನೆ. ಮೊದಲಿನಿಂದಲೂ ಹುಲಿಗಳಿಗೆ ಮತ್ತು ಪಶುಗಳ ಗುಂಪಿಗೆ ಹೊಂದಾಣಿಕೆಯಿತ್ತು. ಸಾರಗಬೇಟೆಯಿಂದ ಆಡಿ ಗಂಡು ಹುಲಿ ಬಾಯೊಳಗೆ ಸತ್ತ ಮಿಕ ಕಚ್ಚಿಕೊಂಡು ಬಂದಾಗ ಹೆಣ್ಣು ಹುಲಿಯು ಕರು ಹಾಕಿದ ಆಕಳನ್ನು ಮತ್ತು ಕರುವನ್ನು ಕಾಯುತ್ತಿತ್ತು. ಆಗ ಪಾಲಯ್ಯನಿಗೆ ಆಕಳು ಕರು ಹಾಕಿದ ವಿಷಯ ತಿಳಿಸು ಎಂದಿತು. ಆದರಂತೆ ಗಂಡುಹುಲಿ ನೋಡಲಾಗಿ ಹುಲಿಮರಿಗಳು ಸತ್ತುಬಿದ್ದಿದ್ದವು. ಅವಿತುಕೊಂಡಿದ್ದ ಚಿತ್ತಣ್ಣ-ಕಾಟಣ್ಣನವರು ಈ ಹುಲಿಯನ್ನು ಕೊಲ್ಲಲು ವಿಫಲಯತ್ನ ನಡೆಸಿದರು.

ನಂತರ ಗಂಡುಹುಲಿ ಹೆಣ್ಣುಹುಲಿ ಹತ್ತಿರ ಬಂದು ನಾನು ಹಿಂದೆ ಹೇಳಿದುದನ್ನು ಕೇಳಲಿಲ್ಲ, ಈ ನರ ಮನುಷ್ಯ ನಮ್ಮ ಮಕ್ಕಳನ್ನು ಕೊಂದಿದ್ದಾನೆ ಎಂದು ವ್ಯಥೆ ಪಡುತ್ತಾ ಹೇಳಿತು. ಹೆಣ್ಣುಹುಲಿ ನಂಬಲಿಲ್ಲ. ಎರಡು ಹುಲಿಗಳು ಸೇರಿ ಪಾಲಯ್ಯನನ್ನು ಹುಡುಕತೊಡಗಿದವು. ಪಾಲನಾಯಕ ಸತ್ತ ಹುಲಿಮರಿಗಳನ್ನು ಬದುಕಿಸಲು ಜರಿಮಲೆಗೆ ದೇವರನ್ನು ಪ್ರಾರ್ಥಿಸಲು ಹೊರಟಿದ್ದ. ಹುಲಿಗಳಿಗೆ ಪಾಲಯ್ಯನಿಗೆ ಪರಸ್ಪರ ಮಾತುಕತೆಗಳಾಗಿ ಉಗ್ರರೂಪಕ್ಕಿಳಿದವು. ಕಂಚವ್ವ, ಕಾಮವ್ವ ಹಾಲು ಮಾರಲು ಹೋದವರು ಮರಳಿ ಬಂದಿರಲಿಲ್ಲ. ಕೊನೆಗೆ ಹುಲಿಗಳಿಗೆ ಪಾಲನಾಯಕನಿಗೆ ಯುದ್ಧವಾಗಿ ಹುಲಿಗಳು ಆ ಕಡೆ ದಡಕ್ಕೆ ಬಿದ್ದು ಸತ್ತರೆ, ಪಾಲನಾಯಕ ಮಿಂಚೇರಿ ಹಳ್ಳದ ದಡದ ಮೇಲೆ ಪ್ರಾಣ ಬಿಟ್ಟ. ನಂತರ ಇವನ ಮಡದಿಯರಿಬ್ಬರು ಸಹಗಮನ ಅನುಸರಿಸಿದರು. ಗಾದರಿ ಪಾಲನಾಯಕನ ಸಮಾಧಿ ಸಿರಿಗೆರೆ ಸಮೀಪ ಗಂಜಿಗಟ್ಟೆಯ ಮಿಂಚೇರಿ ಅರಣ್ಯದಲ್ಲಿದೆ. ಅದೇ ರೀತಿ ಮಡದಿಯರು ಸತ್ತ ಕಾರಣ ಊರಿನ ಗ್ರಾಮಸ್ಥರು (ಹೊಂಡಕ್ಕೆ ಬಿದ್ದ ಕಂಚವ್ವ, ಕಾಮವ್ವ) ಮಾಸ್ತಿಕಲ್ಲುಗಳನ್ನು ನೆಟ್ಟಿದ್ದಾರೆ. ಅದರಲ್ಲಿ ಗಾದರಿಪಾಲನಾಯಕನಿರುವುದು, ಮರಣದ ತರುವಾಯ ಇಬ್ಬರು ಚಿತೆಯೇರುವುದು ಇಲ್ಲಿನ ಕಥಾವಸ್ತು.[೧೫]

ಇವನು ಬೇಡ ಬುಡಕಟ್ಟಿನ ವೀರನಾದರೂ ಆವನನ್ನು ಆಧ್ಯಾತ್ಮಿಕ ಪುರುಷನನ್ನಾಗಿ ಇತರ ಅನುಯಾಯಿಗಳು ಮಾಡಿಕೊಂಡಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಪ್ರತಿಯೊಂದು ಬೇಡರಹಟ್ಟಿಯಲ್ಲಿ ಇವನ ದೇವಾಲಯಗಳಿವೆ. ಬಲ್ಲಿನಾಕಾರದ ಕೋಲಿಗೆ ಪೂಜೆ (ಗಾದರಿಪಾಲನಾಯಕನ ಬಲ್ಲಿಗೆ)ಸಲ್ಲಿಸುತ್ತಾರೆ.

ಗಾದರಿಪಾಲನಾಯನು ಬೇಟೆ ಆಡಿದ ಬಗೆಗೆ ಆಯಾ ಪ್ರಾದೇಶಿಕವಾಗಿ ಭಿನ್ನವಾದ ಜನಪದ ಹಾಡುಗಳನ್ನು ಕಟ್ಟಿಕೊಂಡಿದ್ದಾರೆ. ಒಂದಕ್ಕಿಂತ ಒಂದು ತೀರಾ ಭಿನ್ನವೆಂದು ಕಂಡುಬರುತ್ತವೆ ಆಶಯ ಮಾತ್ರ ಒಂದೇ. ಚಿತ್ರದುರ್ಗ ಜಿಲ್ಲೆಯ ಸಿರಿಗೆರೆ, ನಾಯಕನಹಟ್ಟಿ, ಚಳ್ಳಕೆರೆ, ಬಿ.ಜಿ.ಕೆರೆ, ಮೊಳಕಾಲ್ಮೂರುಗಳಲ್ಲಿ ಇವುಗಳನ್ನು ಹಾಡುತ್ತಾರೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಪೂಜಾರಹಳ್ಳಿ ತೋಟದ ಪಾಲಮ್ಮನವರು ಮೂಲತಃ ಗಾದರಿಪಾಲನಾಯಕ ದೇವರ ಪೂಜಾರಿಗಳ (ಚನ್ನಬಸಯ್ಯನಹಟ್ಟಿ) ಮನೆತನಕ್ಕೆ ಸೇರಿದವರು. ಇವರು ಹಾಡಿದ ಸೋಬಾನೆ ಪದವನ್ನು ಸಂಗ್ರಹಿಸಲಾಗಿದೆ :

ಕಲ್ಲೆತ್ತಿ ಧ್ವನಿ ತೋರಿದ ಪಾಲಯ್ಯ
ಬಲ್ಲಿಡಿದು ಬ್ಯಾಟ್ಯಾಡಿದ !
ಬಾಲನು ಕೊಲ್ಲಿರೆಂದು
ನಾಡಭಾಷೆವು ಮಾಡಿ

ಹೋದಾನು ಗಾದುರಿ ಮಲೇನಾಡ

ಪಾಲಣ್ಣ ಹೋದಲ್ಲಿ ಹುಲಿರಾಜ ಬದರಂದೆ ||ಕ||

ಚಿತ್ತರುಮಲೆಗುಡ್ಡಕ್ಕೆ

ಕತ್ತುಲು ಗವುದಾವೋ

ಸುಕ್ಕೆ ಬಣ್ಣದ ಹುಲಿರಾಜೋ ||ಕ||

ರಾಮೊ ರಾಮೊ ಅಂಬ

ಕೆರೆಯ ಎರಿನ ಮ್ಯಾಲೆ

ರಾಮ ಕಾಳಗವು ಗೆಲಬಂದೆ ||ಕ||

ಹೊಸ್ತಿಲಾಗಳ ಬಲ್ಲಿ

ನುಡಿದಾವೋ ಪಾಲಯ್ಯ

ಹೊಸ್ತಿಲಿಗೆ ನಿನಗೆ ಋಣವಿಲ್ಲೊ ||ಕ||

ಗಾದರಿಪಾಲನಾಯಕ ಜನಪದ ಕಥೆ ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಗದ್ಯವನ್ನು ಹೇಳುವಾಗ ಜನಪದರೂ ಎಲ್ಲೂ ಬೇಟೆಯ ಪ್ರಸ್ತಾಪವನ್ನು ಮಾಡುವುದಿಲ್ಲ. ಅಲ್ಲಿ ಹುಲಿಗಳಿಗೆ ಮತ್ತು ಪಾಲನಾಯಕನಿಗೆ ಯುದ್ಧ ನಡೆದು ಮಡಿಯುತ್ತಾರೆಂದು ತಿಳಿಸುತ್ತಾರೆ. ಜನಪದ ಕಾವ್ಯದಲ್ಲಿ ಮಾತ್ರ ಬೇಟೆ, ಪಶುಪಾಲನೆ, ವಲಸೆ ಜೀವನ, ಅವನ ವೈವಾಹಿಕ ಬದುಕು, ತಂದೆ, ತಾಯಿ, ಸಂದಿಗ್ಧ ಪರಿಸ್ಥಿತಿಗಳು ಗಮನೀಯ ಅಂಶಗಳಾಗಿವೆ. ಇದು ಬೇಟೆಯನ್ನಾಡಿದ ಸಂದರ್ಭವನ್ನು ಸ್ಪಷ್ಟವಾಗಿ ತಿಳಿಸುವ ಮ್ಯಾಸಬೇಡರ ಮೊದಲ ಕಾವ್ಯವಾಗಿದೆ.

೩. ಜಗಳೂರು ಪಾಪನಾಯಕ : ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕು ಬಹು ಪ್ರಾಚೀನಗ್ರಾಮ. ಇಂದು ತಾಲ್ಲೂಕು ಕೇಂದ್ರವಾಗಿದೆ. ಸು.೧೧ನೇ ಶತಮಾನದಲ್ಲಿ ಪಾಪನಾಯಕನೆಂಬ ಶಿವಶರಣನಿದ್ದ. ಇವನು ಬೇಡರ ದಾನಸಾಲಮ್ಮ ಮತ್ತು ಶುಕ್ಲ ಮಲ್ಲಿನಾಯಕ ವಂಶದವನು. ತಂದೆ ಕೋರಲಮಲ್ಲನಾಯಕ ತಾಯಿ ಬಾಳಾರ ಪಟ್ಟಮ್ಮ. ಇವನು ಹುಟ್ಟುವುದು ದೈವಶಕ್ತಿಯಿಂದ, ಅನಂತರ ದನ ಕಾಯುವಾಗ ನಾಗರಹಾವಿಗೆ ಸಹಾಯಮಾಡಿ ಆಯುಧಗಳನ್ನು ಪಡೆದುಕೊಳ್ಳುತ್ತಾನೆ. ದನಗಾಹಿಯಾಗಿ ದುಗ್ಗಾಣಿಗಳನ್ನು ಸಂಗ್ರಹಿಸಿಕೊಂಡು ತಿರುಪತಿ ತಿಮ್ಮಪ್ಪನ ದರ್ಶನ ಪಡೆಯುವುದು ಅಮೋಘ ಸಾಧನೆ.[೧೬] ತಿರುಪತಿಗೆ ಹೋಗುವಾಗ ಗೊಲ್ಲರೊಂದಿಗೆ ಹೋಗುವುದು, ಬೆಳಗ್ಗೆ ಮೊಸರು ಕದಿಯುವುದು ಅವರಿಗಿಂತಲೂ ಮೊದಲು ಅಲ್ಲಿ ಕಾಣಿಸಿಕೊಳ್ಳುವುದು ಒಂದು ರೀತಿಯ ಪವಾಡ ಪುರುಷನಂತೆ ಕಂಡುಬರುತ್ತಾನೆ.

ಸ್ಥಳೀಯ ಅರಸ ಜಗಳೂರಿನ ಜಗಪತಿರಾಯನು ಇವನ ಪವಾಡಗಳನ್ನು ಕಂಡು ಕಂದಕ ತೋಡಿಸಿ ಕೊಲ್ಲಿಸುವ ವಿಚಿತ್ರ ಘಟನೆ ನಡೆಯುತ್ತದೆ. ಇವನು ಮಡಿದ ಸಮಾಧಿ ಜಗಳೂರಿನ ಪಶ್ಚಿಮ ದಿಕ್ಕಿಗಿದೆ. ಅಲ್ಲಿ ದೇವಾಲಯವನ್ನು ನಿರ್ಮಿಸಲಾಗಿದೆ. ಇವನ ಹೆಸರಿನಿಂದಲೇ ಜಗಳೂರಜ್ಜನ ಕೆರೆ ನಿರ್ಮಿಸಿದರು. ವೀರಗಲ್ಲು, ಯೋಗಿಯೊಬ್ಬ ಪಾಣಿಪೀಠ ಹಿಡಿದ ಶಿಲ್ಪಗಳು ಇಲ್ಲಿ ಕಂಡುಬರುತ್ತವೆ.

ಇವನನ್ನು ಆರಾಧ್ಯ ದೇವರೆಂದು ಮ್ಯಾಸಬೇಡರು ಒಪ್ಪಿಕೊಂಡಿದ್ದಾರೆ. ಪ್ರತಿವರ್ಷ ದೀಪಾವಳಿ, ಗುಗ್ಗರಿಹಬ್ಬ

ಮತ್ತು ಶಿವರಾತ್ರಿಗೆ ಹಬ್ಬಗಳನ್ನು ಮಾಡುವರು. ವಾಸೆ ಕೊಯ್ಯವಾಗ (ಪ್ರಾಣಿ ಬಲಿ) ಗುಡಿಯಿಂದ ಹೊರಗೆ ಮೊಣಕಾಲುಗಳನ್ನು ಕಡಿಯುತ್ತಾರೆಂದು ತಿಳಿಸಲಾಗಿದೆ. ಜಾತ್ರೆ ಮಾಡುವ ಸಂದರ್ಭದಲ್ಲಿ ವಿವಿಧ ಆಚರಣೆ, ಸಂಪ್ರದಾಯಗಳನ್ನು ನೋಡಬಹುದು. ಜಗಳೂರು ಪಾಪನಾಯಕ ಒಬ್ಬ ಸಾಮಾನ್ಯ ದನಗಾಹಿ ವೀರ. ಸ್ವಪ್ರಯತ್ನದಿಂದ ಆಧ್ಯಾತ್ಮಿಕ ಶಕ್ತಿಯನ್ನು ಒಲಿಸಿಕೊಂಡು ತಿರುಪತಿ ಯಾತ್ರೆ ಮಾಡಿ ಬರುವುದು, ಆಳರಸನ ವಿರುದ್ಧ ದಂಡೇಳುವುದು ಪ್ರಮುಖ ಅಂಶಗಳು. ಜನಪದರು ಇವನ ಜೀವನ, ಸಾಧನೆಗಳ ಬಗ್ಗೆ ಹೇಳುತ್ತಾ :

ಬಲ್ಲಿಡಿದು ಬ್ಯಾಟಾಡಿದ ಪಾಪಯ್ಯ

ಕಣಿವತ್ತಿ ಆಯ ತೋರಿದ'

– ಇತ್ಯಾದಿ ಸಂಗತಿಗಳು ಕಾವ್ಯದಲ್ಲಿ ತಿಳಿದು ಬರುತ್ತವೆ. ಕಥೆಯಲ್ಲಿ ಬೇಟೆಯ ಪ್ರಸ್ತಾಪವಿಲ್ಲದಿದ್ದರೂ ಕಾವ್ಯದಲ್ಲಿ ಬೇಟೆ ಬರುತ್ತದೆ.

೪. **ಬೇಡರ ಕನ್ನ(ಣ್ಣ)ಯ್ಯನಕಥೆ :** ಪುರಾತನ ಶಿವಶರಣರಲ್ಲಿ ಬೇಡರ ಕಣ್ಣಪ್ಪನೂ ಒಬ್ಬ. ಇವನು ಕಂಚಿ, ಕಾಳಹಸ್ತಿ ಪರಿಸರದಲ್ಲಿ ಬೇಟೆಯಾಡಿಕೊಂಡು ಜೀವಿಸಿ ; ತನ್ನ ಹೆಂಡತಿ ಮಕ್ಕಳನ್ನು ಸಾಕುತ್ತಿದ್ದ. ಇವನು ಬೇಸಿಗೆಯಲ್ಲಿ ಪ್ರಾಣಿಗಳಿಗೆ ಹುಲ್ಲು ನೀರು ಹುಡುಕಿಕೊಂಡು ಬಹುದೂರ ನಡೆದನು. ಏಳು ದಿನ ಬೇಟೆಯಾಡಿದರೂ ಯಾವ ಪ್ರಾಣಿ ಕಾಣಲಿಲ್ಲ. ಮನೆಯಲ್ಲಿ ಅವನನ್ನು ನಿಂದಿಸಿದರು. ಹೆಂಡತಿ ಮಕ್ಕಳು ಕೂಡಿ ಬೇಟೆ ಇಲ್ಲದೆ ಬಂದರೆ ಬಾಣ ಬಿಟ್ಟು ನಮ್ಮನ್ನು ಕೊಲ್ಲಿ ಎಂದರು. ಮರುದಿನ ಬೇಟೆಗೆ ಹೋದಾಗ ಹೆಣ್ಣು ಜಿಂಕೆ ಎದುರಾಗುತ್ತದೆ. ಅದು ತಾಳು, ನನ್ನ ಗಂಡನೂ ಮಕ್ಕಳು ಎತ್ತಲೊ ತಪ್ಪಿಸಿಕೊಂಡು ಹೋಗಿದ್ದಾರೆ, ಅವರನ್ನು ಹುಡುಕಿ ಕರೆತರುತ್ತೇನೆ. ಆನಂತರ ನೀನು ಕೊಂದು ತಿನ್ನುವಂತೆ ಎಂದಾಗ ಕಣ್ಣಯ್ಯ ಅನುಮತಿ ಕೊಟ್ಟ. ಸಮಯವಾದ್ದರಿಂದ ಬರಿಗೈಯಲ್ಲಿ ಹಿಂದಿರುಗಲು ಆಗಲಿಲ್ಲ. ಒಂದು ಮರದ ಮೇಲೆ ಕುಳಿತುಕೊಂಡ. ಅದು ಬಿಲ್ವಪತ್ರೆಯ ಮರವಾಗಿತ್ತು, ಕೆಳಗೊಂದು ಲಿಂಗವೂ, ಪಾಣಿಪೀಠವೂ, ಬಸವಣ್ಣನ ವಿಗ್ರಹಗಳಿದ್ದವು. ಬೇಡರ ಕನ್ನಯ್ಯನು ಆ ಲಿಂಗದ ಪರಿವೇ ಇಲ್ಲದೆ ಕಾಲಿಟ್ಟು ಮರಹತ್ತಿದ. ಮರ ಹತ್ತಿದ ಕಣ್ಣಯ್ಯ ಸಮಯ ಕಳೆಯುತ್ತಾ ಮರದ ಒಂದೊಂದು ಎಲೆಯನ್ನು ಕಿತ್ತೂ ಕಿತ್ತೂ ಎಸೆಯುತ್ತಿದ್ದ. ಅದೇ ಮಾರ್ಗವಾಗಿ ಗಂಡು ಜಿಂಕೆಯು ಬರುತ್ತಿದ್ದು ಕಂಡು ಕಣ್ಣಯ್ಯ ಇಳಿದು ಬಂದು ಬಿಲ್ಲಿಗೆ ಬಾಣ ಹೂಡಿದನು. ಗಂಡು ಜಿಂಕೆಯಿದ್ದು, ಅಯ್ಯಾ ಬೇಡನೇ ಸ್ವಲ್ಪ ತಾಳು ನನ್ನ ಹೆಂಡತಿ ಮಕ್ಕಳು ಎತ್ತಲೋ ತಪ್ಪಿಸಿಕೊಂಡಿದ್ದಾರೆ. ಹುಡಿಕೊಂಡು ಇಲ್ಲಿ ಬರುವೆ ಎನ್ನುತ್ತದೆ.

ಬೇಡರ ಕನ್ನಯ್ಯನ ಮನಃಕರಗಿತು, ಅದು ತನ್ನ ಮಕ್ಕಳನ್ನು ಹುಡಿಕಿಕೊಂಡು ಬರಲು ಹೊರಟಿತು. ಎರಡನೇ ಬಾರಿ ಮರದ ಮೇಲೆ ಕುಳಿತು ಬೇಜಾರಿಗೆ ಲಿಂಗದ ಮೇಲೆ ಬಿಸಾಡಿದ ಬಿಲ್ವ ಪತ್ರೆ ಪೂಜೆ ಮಾಡಿದಂತಾಯಿತು. ಬೇಟೆ ತರುವೆನೆಂದು ಮನೆಯಲ್ಲಿ ಹೇಳಿ ಬಂದು ಸುಮಾರು ದಿನವಾಯಿತು. ಬೇಟೆ ಸಿಗಲಿಲ್ಲ ಹೆಂಡತಿ ಮಕ್ಕಳು ತಮ್ಮನ್ನೂ ಕೊಲ್ಲಲು ಹೇಳುತ್ತಾರೆ. ಹೆಣ್ಣು ಜಿಂಕೆ ಬಂದು ಕಣ್ಣಯ್ಯನ ಮುಂದೆ ನಿಂತು ನಾನು ಗಂಡ ಮತ್ತು ಮಕ್ಕಳನ್ನು ನೋಡಿಬಂದೆ. ನಿನ್ನ ಆಸೆಯನ್ನು ನೆರವೇರಿಸಿದೆ. ನನ್ನನ್ನು ಕೊಂದು ತಿನ್ನಬಹುದೆಂದಿತು. ಮರಿಜಿಂಕೆ ಬೇಡನೆ ನನ್ನ ತಾಯಿ-ತಂದೆಯನ್ನು ಕೊಲ್ಲಬೇಡ. ವಂಶಾಭಿವೃದ್ಧಿಯಾಗಬೇಕು ನನ್ನನ್ನು ಕೊಂದು ಮನೆಗೆ ತೆಗೆದುಕೊಂಡು ಹೋಗಿ ಊಟ ಮಾಡೆಂದಿತು. ಇದನ್ನೆಲ್ಲಾ ಆಲೋಚಿಸಿ ಕಣ್ಣಯ್ಯ ಅವುಗಳನ್ನು ತಿರಸ್ಕರಿಸಿ ಕಳುಹಿಸಿದ.

ಕಣ್ಣಯ್ಯನಿಗೆ ಒಬ್ಬ ವಿಭೂತಿಧಾರಿ ಬಂದು ಮನಃ ಪರಿವರ್ತಿಸಿದಾಗ ತನ್ನ ತಪ್ಪು ಅರಿವಾಯಿತು. ಆ ಪೂಜಾರಿಯನ್ನು ನೋಡಿ ಶಿವಲಿಂಗಕ್ಕೆ ಅವನಂತೆ ಪೂಜೆಮಾಡಲು ಬಾಯಲ್ಲೆ ನೀರು ತಂದು, ಕಾಡು ಹೂ ಮುಡಿಸಿ

ಪೂಜಿಸಿದ. ಮಡದಿ ಮಕ್ಕಳ ಉಪವಾಸ ಗೊತ್ತಾಗಲಿಲ್ಲ. ಶಿವನು ಒಬ್ಬ ಮುದುಕನ ವೇಷ ತೊಟ್ಟು ವಸ್ತ್ರದಲ್ಲಿ ವಜ್ರ, ವೈಢೂರ್ಯ, ಆಹಾರ ಪದಾರ್ಥ ಮನೆಯ ಮುಂದೆ ಹಾಕಿ ಬೇಡರ ಕಣ್ಣಯ್ಯನ ಮಡದಿಯನ್ನು ಕರೆದನು. ಆ ಧಾನ್ಯವನ್ನು ತಿಂದು ಅವರು ಸಂತೋಷ ಪಡೆದರು.

ಕಣ್ಣಯ್ಯ ಬೇಟೆಯನ್ನು ಕೊನೆಗೂ ತರದೆ ಮಡದಿ ಮಕ್ಕಳನ್ನು ಹಸಿವಿನಲ್ಲಿ ಕಾಯಿಸಿದ. ಶಿವಲಿಂಗದ ಮೇಲೆ ಕಾಲಿಟ್ಟು ಉರಹತ್ತಿ ಶಿವನಿಗೆ ತಪ್ಪು ಮಾಡಿದೆ ಎಂದು ಸಾಯಲು ಸಿದ್ಧನಾದ. ಮಡದಿ ಮಕ್ಕಳು ಸಂತೋಷದಿಂದ ಇದ್ದದ್ದು ಕಂಡು ಶಿವನಿಗೆ ಕಣ್ಣಪ್ಪನು ನಮಸ್ಕರಿಸಿದನು. ಆಗ ವಿಪರೀತ ಮಳೆ ಸುರಿಯುವುದು. ಶಿವಲಿಂಗ ನೆನೆಯದಂತೆ ಕಣ್ಣಪ್ಪ ಕಂಬಳಿ ಕೋರಿಯನ್ನು ಹೊದೆಸಿದ. ಹಾಗೆಯೇ ಇರುವಾಗ ಶಿವಲಿಂಗದ ಎಡಗಣ್ಣಿನಲ್ಲಿ ನೀರು ಬಂದಿತು. ವಸ್ತ್ರದಿಂದ ಅದನ್ನು ವರೆಸಿದ. ನೀರು ನಿಂತು ರಕ್ತ ಸುರಿದಾಗ, ಅವನಿಗೆ ಹೆದರಿಕೆಯಾಯಿತು. ಸ್ವಾಮಿ ಕಣ್ಣಿಗೆ ಬದಲಾಗಿ ತನ್ನ ಕಣ್ಣುಗಳನ್ನೇ ಕೊಡಲು ನಿಶ್ಚಯಿಸಿ ಬತ್ತಳಿಕೆಯಲ್ಲಿದ್ದ ಬಾಣ ತೆಗೆದು ಎಡಕಣ್ಣನ್ನು ಮೀಟಿ ತೆಗೆದು ಲಿಂಗದ ಎಡಗಣ್ಣಿನ ಕಡೆ ಇಟ್ಟ. ರಕ್ತ ನಿಂತಿತು. ನಂತರ ಸ್ವಾಮಿಯ ಬಲಗಣ್ಣಿನಿಂದ ರಕ್ತ ಸುರಿಯಿತು. ಬಲಗಾಲಿನ ಹೆಬ್ಬೆರಳನ್ನು ಸ್ವಾಮಿಯ ಬಲಗಣ್ಣಿನ ಕಡೆಗಿಟ್ಟು, ಅದೇ ಬಾಣದಿಂದ ಬಲಗಣ್ಣನ್ನು ಮೀಟಿ ಇಟ್ಟ. ಆಗ ಶಿವ ಪ್ರತ್ಯಕ್ಷನಾಗಿ ಕಣ್ಣುಗಳನ್ನು ದಯಪಾಲಿಸಿದ. ಕಣ್ಣಪ್ಪನಿಗೆ ನಿಜರೂಪ ಕಂಡು ಸಂತೋಷವಾಯಿತು. ಶಿವನು ವರ ಕೇಳಿದ ಅವನಿಗೆ ಏನನ್ನು ಕೇಳಲು ತೋಚಲಿಲ್ಲ. ಸ್ವಾಮಿ ಶಿವರಾತ್ರಿಯ ಬೆಳೆ, ಗಂಜಿ ಮಡಕೆಯ ಸುತ್ತ ಮಕ್ಕಳು, ಕಟ್ಟಿಗೆ ಬೆಳಕಿನ ಊಟ ಕರುಣಿಸು, ಅಷ್ಟೇ ಸಾಕು ಎಂದು ಕೇಳಿಕೊಂಡ. ಬೇಡರು ಇಂದಿಗೂ ಇವನನ್ನು ದೇವರೆಂದು ಪೂಜಿಸುತ್ತಾರೆ. ಇವನ ಅನುಯಾಯಿಗಳು ಬೇಟೆ, ಕಟ್ಟಿಗೆಮಾರುವುದು, ದನ ಕಾಯುವುದರಲ್ಲಿ ಕಾಲ ಕಳೆಯುತ್ತಾರೆ. ಶಿವನು ಕಿರಾತನಾಗುವುದು, ಕಣ್ಣಪ್ಪನಿಗೆ ಶಿವ ಪ್ರತ್ಯಕ್ಷನಾಗುವುದು ಹೀಗೆ ಬೇಡರ ಶೈವ ಧರ್ಮದ ಹಿನ್ನೆಲೆಯನ್ನು ಗೋಚರಿಸುವಂತಿದೆ.

೫. ಕೊಡಗಲು ಬೊಮ್ಮಯ್ಯ :ಇವನೊಬ್ಬ ಮ್ಯಾಸಬೇಡರ ಬುಡಕಟ್ಟು ವೀರ. ಇಂದಿನ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಮುತ್ತಿಗಾರಹಳ್ಳಿ ಅರಣ್ಯ ಪ್ರದೇಶವು ಇವನ ವಾಸಸ್ಥಾನವಾಗಿತ್ತು. ಕೆಲವರು ಕೊಳಗಳ ಬೊಮ್ಮನೆಂತಲೂ ಕರೆಯುವರು. ಇವನು ಮೇಧಾವಿ, ಶೂರನಲ್ಲದೆ, ಅಪ್ರತಿಮ ಬಿಲ್ಲುಗಾರನಾಗಿದ್ದನು. ಬೇಡರ ಹನ್ನೆರಡು ಪೆಟ್ಟಿಗೆ ದೇವರುಗಳನ್ನು ತರಲು ವೀಳ್ಯಾ ಹಿಡಿದಿದ್ದ ಇವನಿಗೆ ಅಪೂರ್ವ ಸುಂದರಿ ದೇವಮ್ಮ ಎಂಬ ತಂಗಿಯಿದ್ದಳು. ಅಣ್ಣನಿಗೆ ನರಕದಕೋಟೆ (ಆನೆಗುಂದಿ) ಬೇಧಿಸಲು ಪ್ರೋತ್ಸಾಹಿಸಿದಳು (೧೨ ಪೆಟ್ಟಿಗೆ ದೇವರುಗಳನ್ನು ನರಕದ ಕೋಟೆಯಲ್ಲಿ ಬಂಧನದಲ್ಲಿಟ್ಟಿದ್ದರು). ಈ ಕಾರ್ಯ ಸಾಧಿಸಿದರೆ ಕೊನೆಯವರೆಗೂ ಒಳ್ಳೆಯ ಹೆಸರು ಸಿಗುತ್ತದೆ, ದೇವಮ್ಮ ಬುಟ್ಟಗೋಲರ ಬೆಡಗಿಗೆ ಕೀರ್ತಿ ಬರುತ್ತದೆ ಎಂದಳು.

ಒಮ್ಮೆ ಕೊಡಗಲು ಬೊಮ್ಮನು ತನ್ನ ತಂಗಿಗೆ ಕಾಡಿಗೆ ಬೇಟೆಗಾಗಿ ಹೋಗಿ ಬರುತ್ತೇನೆ. ನೀನು ಇಲ್ಲಿಯೇ ಇರು ಎಂದು ಹೇಳಿ ಬಿಲ್ಲು ಬಾಣ ಹಿಡಿದು ನಡೆದ. ಅಣ್ಣ ಹೋದ ಕೂಡಲೇ ತಂಗಿ ದೇವಮ್ಮ ವೃಥಾಕಾಲ ಹರಣ ಮಾಡದೇ ಆಲೆಸೊಪ್ಪು ತರಲು ಕೊಟ್ಟಿದ್ದ ಕರಿಯಕಾಗಿನ ಸೀರೆ, ಬಿಳಿಯ ಕುಪ್ಪುಸವನ್ನು ಉಟ್ಟುಕೊಂಡು ಕಾಡಿಗೆ ನಡೆದಳು.

ಇವಳು ಗುಣವಂತೆ, ಪತಿವ್ರತೆ, ವಾಕ್‌ಶುದ್ಧಿಯುಳ್ಳವಳಾಗಿದ್ದಳು. ಸೊಪ್ಪಿಗಾಗಿ ಅಡವಿಗೆ ಬಂದ ದೇವಮ್ಮ ಸೀಗೆಪಳೆಯಲ್ಲಿ ಸೊಪ್ಪು ಬಿಡಿಸುತ್ತಿದ್ದಳು. ಬೇಟೆಗೆಂದು ಕಾಡಿಗೆ ಹೋದ ಕೊಡಗು ಬೊಮ್ಮನು ಈ ಕಡೆ ಬಂದು ಸೀಗೆ ಪೊದೆಯಲ್ಲಿ ಸಪ್ಪಳವಾದುದನ್ನು ಗಮನಿಸಿ, ಕಪ್ಪು ಬಣ್ಣ ಎದ್ದು ಕಂಡಿತು. ಬೇಟೆಯ ವ್ಯಸನಕ್ಕೀಡಾದ ಬೊಮ್ಮನು ಪೊದೆಯಲ್ಲಿರುವುದು ಕಾಡುಪ್ರಾಣಿಯೆಂದು ಬಗೆದು ಬಿಲ್ಲಿಗೆ ಬಾಣ ಏರಿಸಿ ಗುರಿಯಿಟ್ಟು ಹೊಡೆದ. ಈ ಬಾಣ ನೇರವಾಗಿ

ಪೊದೆಯಲ್ಲಿದ್ದ ತನ್ನ ತಂಗಿಯ ದೇವಮ್ಮನ ಎದೆಗೆ ನಾಟಿತು. ಕೂಡಲೇ ಅಣ್ಣಾ ಎಂದು ಕಿರಿಚಿಕೊಂಡಳು. ಹೌ ಹಾರಿದ ಬೊಮ್ಮನು ಓಡಿಬಂದು ನೋಡಲಾಗಿ, ಎದೆಯಲ್ಲಿ ಬಾಣ ನಾಟಿತ್ತು. ಕಿತ್ತು ಬಾಚಿತಬ್ಬಿಕೊಂಡಾಗ ತತ್ತರಿಸಿದ ಬಾಲಕಿ ಸ್ವತಃ ತಂಗಿ ದೇವಮ್ಮಳೆಂದು ಗುರುತಿಸಿದಾಗ ಪ್ರಾಣ ಸಂಕಟವಾಯಿತು.

ಹೆತ್ತ ತಂಗಿಯನ್ನು ಕೊಂದೆನಲ್ಲವೆಂದು ಪ್ರಾಣಸಂಕಟಕ್ಕೆ ಗುರಿಯಾದ. ಸ್ತ್ರೀ ಹತ್ಯೆ ಮಾಡಿದಕ್ಕೆ ಪಶ್ಚಾತ್ತಾಪ ಮೀರಿಹೋಗಿತ್ತು. ಕೊನೆಯುಸಿರೆಳೆಯುವ ಮುನ್ನ ದೇವಮ್ಮ ಮೂರ್ಛೆಹೋದ ಅಣ್ಣನನ್ನು ಕಂಡು 'ಅಣ್ಣಾ ವೀಳ್ಯಾವಗ್ದಾನ ಮರೆಯಬೇಡ, ಕೊಟ್ಟ ಮಾತು ಕಳೆದುಕೊಳ್ಳಬೇಡ, ದೇವರುಗಳನ್ನು, ಅಜ್ಜನವರನ್ನು ಕಾಪಾಡಿ ರಕ್ಷಿಸು' ಎಂದು ಹೇಳಿ ತೊಡೆಯ ಮೇಲೆ ಪ್ರಾಣ ಬಿಟ್ಟಳು. ಮನಷ್ಯ-ಮನುಷ್ಯನನ್ನು ಬೇಟೆಯಾಡಿದ ಉಲ್ಲೇಖ ಬೇಡರಲ್ಲಿ ಇಲ್ಲಿಯೇ ಮೊದಲಿಗೆ ಕಂಡುಬರುವುದು.

ಇವಳ ದಿವ್ಯ ಸಂದೇಶದಿಂದ ನರಕಾಸುರ ಕೋಟೆಯಲ್ಲಿದ್ದ ೧೨ ಪೆಟ್ಟಿಗೆ ದೇವರುಗಳನ್ನು ವಶಪಡಿಸಿಕೊಂಡು ಬರುವುದು. ತರುವಾಯ ದಕ್ಕಿದ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಆಳ್ವಿಕೆ ನಡೆಸುತ್ತಾನೆ. ಆಗ ಡಂಗೂರ ಹೊಡೆಸಿ, ಮೊಗ್ಗಲ ತೆರಿಗೆ, ಬೆಣ್ಣೆ ಮುದ್ದೆಗಳು, ಮೊದಲು ಹುಟ್ಟಿದ ಗಂಡು ಕರು, ಗಂಡು ಟಗರು, ಹೋತ, ಮುಂತಾದವುಗಳನ್ನು ಪ್ರತಿಯೊಬ್ಬರೂ ಕೊಡಬೇಕೆಂದು ಆದೇಶಿಸಿದ. ಬೇಸತ್ತ ಪ್ರಜೆಗಳು, ಯರಮಂಚಿನಾಯಕನ ನೇತೃತ್ವದಲ್ಲಿ ಸೇರಿ ನಾಯಕನಹಟ್ಟಿ ಸಮೀಪ ಕುದಾಪುರ (ಬೋರವನಹಟ್ಟಿ)ದಲ್ಲಿ ಚಿಂತನೆ ಸಭೆ ನಡೆಸುತ್ತಾರೆ. ಬೋರೆದೇವರಿಗೆ ಪೂಜಾಧಿಕಾರ್ಯಗಳನ್ನು ಮಾಡಿ ಕೊಡಗು ಬೊಮ್ಮನ ಅವಸಾನಕ್ಕೆ ಅಂತಿಮ ತೆರೆ ಬೀಳುತ್ತದೆ. ಇವನ ಆಳ್ವಿಕೆ ಸ್ವಲ್ಪದಿನವಾಗಿದ್ದರೂ ಕರಾಳವಾಗಿತ್ತು.

ಇವನ ಸಮಾಧಿ ಬುಕ್ಕಾಂಬುಧಿ ಸಮೀಪದಲ್ಲಿದೆ. ಬೊಮ್ಮನ ಅನುಯಾಯಿಗಳು ರಾವಲುಕುಂಟೆ, ಮುತ್ತಿಗಾರಹಳ್ಳಿಯಲ್ಲಿದ್ದಾರೆ. ಇವನು ವಾಸಿಸಿದ ಸ್ಥಳಕ್ಕೆ ಬೊಮ್ಮಗೊಂಡನಕೆರೆ ಎಂದು ಹೆಸರಿಟ್ಟರು. ಪ್ರತಿವರ್ಷಕ್ಕೊಮ್ಮೆ ಎರಡು ಬಾರಿ ಬುಟ್ಟುಗಲೋರು ಎಂಬ ಬೇಡರು ಬೊಮ್ಮದೇವರ ಹಬ್ಬ ಮಾಡುತ್ತಾರೆ. ಹಟ್ಟಿಗಳಲ್ಲಿ ಅನೇಕ ದೇವಾಲಯಗಳು ಕಂಡುಬರುತ್ತವೆ. ಈ ವಂಶದ ಬುಟ್ಟುಗಲೋರು ಯುಗಾದಿ ಬೇಟೆಗೆ ಹೋಗುವಾಗ ಬೊಮ್ಮನು ಉಪಯೋಗಿಸಿದ ಚಂದ್ರಾಯುಧ, ಕತ್ತಿ, ಸುರಾಯಿ, ಭರ್ಜಿ, ಕೊಡಲಿ, ಮೊದಲಾದ ಆಯುಧಗಳನ್ನು ತೆಗೆದುಕೊಳ್ಳುತ್ತಾರೆ.[೧೭]

೬. ದಡ್ಡಿಸೂರನಾಯಕ : ದಡ್ಡಿಸೂರನಾಯಕ ಎಂಬುವನು ಹಿರೇಹಳ್ಳಿ ಗ್ರಾಮದಲ್ಲಿದ್ದ ಮ್ಯಾಸಬೇಡರ ಒಬ್ಬ ವೀರ. ಮಧ್ಯಕಾಲದಲ್ಲಿ ಇವನು ಪಶುಪಾಲಕನಾಗಿದ್ದ. ಮಲ್ಲನಾಯಕ ಗೋತ್ರದ ಕೊಂಡ ಮಲ್ಲಿರಾಜನ ಪುತ್ರ ರಪ್ಪಲಸೂರಿಗೆ ದಡ್ಡಿಸೂರನಾಯಕ, ದಡ್ಡಿಕಾಮನಾಯಕ, ದಡ್ಡಿಯರಬಲ್ಲನಾಯಕ ಎಂಬ ೩ ಜನ ಮಕ್ಕಳಿದ್ದರು. ದಡ್ಡಿಸೂರನಾಯಕನ ಬಗ್ಗೆ ಅನೇಕ ಕಥೆಗಳಿವೆ.

ಇವನ ಕಥೆಯಲ್ಲಿ ಮನುಷ್ಯ-ಮನುಷ್ಯನನ್ನೇ ಮರೆಮಾಚಿ ಬೇಟೆಯಾಡುವ ಸಂದರ್ಭ ಬರುತ್ತದೆ. ಚಳ್ಳಕೆರೆ ತಾಲ್ಲೂಕು ಹಿರೇಹಳ್ಳಿ ಗ್ರಾಮದ ಪರಿಸರದಲ್ಲಿ ಈ ಕಥೆ ನಡೆದಿದೆ. ಹಿರಿಯನಾದ ದಡ್ಡಿಸೂರನಾಯಕ ದನಗಳ ರೊಪ್ಪವನ್ನು ಕಟ್ಟಿಕೊಂಡು ವಾಸವಾಗಿದ್ದ. ಹೀಗೆಯೇ ಇರುವಾಗ ಒಮ್ಮೆ ಗಲಗಂಟಿ ಗಾದಿನಾಯಕನ ಪತ್ನಿ ಓಬವ್ವಳನ್ನು ಮೋಹಿಸುತ್ತಾನೆ. ಅವಳಿಗೂ ಇವನ ಮೇಲೆ ಪ್ರಣಯ ಬೆಳೆದು ಪ್ರತಿ ರಾತ್ರಿ ಗಂಡನನ್ನು ಮಲಗಿಸಿ ರೊಪ್ಪಕ್ಕೆ

ಬರುತ್ತಿದ್ದಳು. ಗರ್ಭಿಣಿಯಾದರೂ ತನ್ನ ಪ್ರಿಯತಮನ ಆಲಿಂಗನವನ್ನು ಬಿಟ್ಟಿರಲಿಲ್ಲ. ಅಮವಾಸ್ಯೆಯ ದಿನ ಮಳೆಯಲ್ಲಿ ನೆನೆದುಕೊಂಡು ಕಪ್ಪು ಸೀರೆ ಧರಿಸಿ, ಕಂಬಳಿ ಹೊದ್ದುಕೊಂಡು ರೊಪ್ಪಕ್ಕೆ ಬಂದಳು.

ಧೀರ್ಘ ನಿದ್ರಾವಸ್ಥೆಯಲ್ಲಿದ್ದ ದಡ್ಡಿಸೂರನಾಯಕ ಯೂವುದೋ (ಕರಡಿ) ಕಾಡು ಪ್ರಾಣಿ ಗೋವುಗಳ ರೊಪ್ಪಕ್ಕೆ ಧಾಳಿ ಮಾಡುತ್ತದೆಂದು ಬಾಣದಿಂದ ಗುರಿಯಿಟ್ಟು ಹೊಡೆದ. ಓಬವ್ವಳ ದೇಹಕ್ಕೆ ಬಾಣ ನಾಟಿ ನೆಲಕ್ಕೆ ಬಿದ್ದಳು. ಅವಳ ಆರ್ಭಟ ಮುಗಿಲು ಮುಟ್ಟಿತ್ತು. ಕೊನೆಗೆ ಮರಣ ಹೊಂದಿದಳು. ನಾಯಕ ಅತೀವ ದುಃಖಿತನಾದ. ವಿಷಯ ತಿಳಿದ ಗಾದಿನಾಯಕನು ಬಂದು ನೋಡಲಾಗಿ ಹೆಂಡತಿ ಸತ್ತು ಹೋಗಿದ್ದಳು. ತರುವಾಯ ದಡ್ಡಿಸೂರನಾಯಕನಿಗೂ ಮತ್ತು ಇವನ ಪರಿವಾರಕ್ಕೂ ಯುದ್ಧವಾಗಿ ಗಾದಿನಾಯಕನ ಕುದುರೆ ಕಣ್ಣುಗಳನ್ನು ಕಳೆದುಕೊಂಡಿದ್ದರಿಂದ ಗೆಲುವಿನಿಂದ ಹಿಂಜರಿಯುತ್ತಾನೆ. ಬಲ್ಲನೊವನು ಗಾದಿನಾಯಕನಿಗೆ ಬಲ್ಲಿನಿಂದ ಹೊಡೆದಾಗ ಅವನು ಕೊನೆಯುಸಿರಳೆಯುವನು. ಹೀಗೆ ಜನಪದರು ದಡ್ಡಿಸೂರನಾಯಕ ಒಬ್ಬ ದೇವರೆಂದು ಪ್ರತಿವರ್ಷ ಹಬ್ಬ, ಜಾತ್ರೆಗಳನ್ನು ಮಾಡುತ್ತಾರೆ. ಯುಗಾದಿಯಲ್ಲಿ ಬೇಟೆಗೆ ಹೋಗುತ್ತಾರೆ.

೭. ಯರಮಂಚಯ್ಯ (ಪೆದ್ದಯ್ಯ) : ಯರಮಂಚಯ್ಯನು ಮ್ಯಾಸಬೇಡರ ಮಂದಲವಾರು ಗೊತ್ರದ ಕರಿನಾರು ಬೆಡಗಿನವನು. ಇವನನ್ನು ಪೆದ್ದಯ್ಯತಾತನೆಂತಲೂ ಕರೆಯುವರು. ಕುರಿಮಂದೆಗೆ ದಾಳಿಮಾಡಿದ ಚಿರತೆಯನ್ನು ಕೋನಸಾಗರದ ಗುಡ್ಡದ ಹತ್ತಿರ ಕೊಂದು, ತಾನು ಸಹಾ ಹತನಾದ ಘಟನೆ ಗಮನಾರ್ಹ. ಇದು ತೀರಾ ಇತ್ತೀಚಿನದು. ಮೊಳಕಾಲ್ಮೂರು ತಾಲ್ಲೂಕಿನ ಕೋನಸಾಗರ ಕೆರೆಯ ಕಪ್ಪದಬಂಡಹಟ್ಟಿ ಬಳಿ ವೀರಗಲ್ಲಿದೆ. ಸ್ಥಳೀಯರು ಬೇಟೆ ಬಗ್ಗೆ ಜನಪದ ಗೀತೆಗಳನ್ನು ಹಾಡುವರು. ಕರಿನಾರು ಬೆಡಗಿನವರು ಇದನ್ನು ಆರಾಧಿಸುತ್ತಾರೆ.

೮. ಸಿಂಧೂರ ಲಕ್ಷ್ಮಣ : ಸಿಂಧೂರ ಲಕ್ಷ್ಮಣ ಬ್ರಿಟೀಷರ ವಿರುದ್ಧ ಹೋರಾಡಿದ ಏಕೈಕ ಬೇಡರ ವೀರ. ಬ್ರಿಟಿಷರು ಇವನನ್ನು ಹಿಡಿಯಲು ಅನೇಕ ರೀತಿಯಲ್ಲಿ ಪ್ರಯತ್ನ ಮಾಡಿದ್ದರು ಸಿಕ್ಕಿರಲಿಲ್ಲ. ಜನಪದರು ಹಾಡುಗಳಲ್ಲಿ ಸಿಕ್ಕ ಬಗೆ, ಬೇಟೆಯ ಉಲ್ಲೇಖವನ್ನು ರೂಪಕವಾಗಿ ಹಾಡುತ್ತಾರೆ.

ಬೇಟೆಗಾರನ ಕೈಗೆ ಬೇಟೆಯು ಸಿಕ್ಕಂಗ
ಕೋಟಲೆಗೊಂಡು ಸಿಕ್ಕಾನ । ಮಲಗಾಡ
ಏಟ ಭರಪೂರ ತಿಂದಾನ॥

ಪೊಲೀಸರು ಹುಡುಕಿಕೊಂಡು ಬಂದಾಗ ಬೇಡರೇ ಇವನನ್ನು ಹಿಡಿದುಕೊಡುತ್ತಾರೆ. ಮಲಗೌಡ ಎಂಬ ಬ್ರಿಟೀಷ್‌ರ ಅನುಯಾಯಿಂದ ಏಟುತಿಂದು, ಬೇಟೆಯ ಸಿಕ್ಕಂಗೆ ಸಿಕ್ಕ ಎಂದು ಹೇಳಲಾಗಿದೆ.

೯. ಇತರೆ : ಗುಮ್ಮಳ್ಳಿಕದನ ಎಂಬ ಜನಪದ ಕಥನಗೀತೆಗಳನ್ನು ಸಂಪಾದಿಸಿರುವ ಹೆಚ್.ವಿ.ವೀರನಾಯಕರು ಸಿರಾದ ಪಾಳೆಯಗಾರ ರಂಗಪ್ಪರಾಜು ಬಗ್ಗೆ ಉಲ್ಲೇಖಿಸಿದ್ದಾರೆ : ಸಿರಾದ ಪ್ರಾಂತದಲ್ಲಿ ರಂಗಪ್ಪ ರಾಜು ಬೀಡು ಬಿಟ್ಟಿದ್ದರಿಂದ ರಂಗನಾಥದೇವರ ಕನಸಾಯಿತು. ಮರುದಿನ ಅದೇ ಭಾಗದಲ್ಲಿ ಬೇಟೆಗೆ ತೊಡಗಿರಬೇಕಾದರೆ ಮೊಲವೊಂದು ರಂಗಪ್ಪ ರಾಜುವಿನ ಕುದುರೆ ಮೇಲೆ ಎರಗಿಬಂತು. ಅದನ್ನು ಗಂಡು ಭೂಮಿ ಎಂದು ತಿಳಿಯಲಾಯಿತು. ಅನಂತರ ಆ ಸ್ಥಳದಲ್ಲಿ ರಂಗಪ್ಪನಿಗೆ ಹೇರಳ ದ್ರವ್ಯವೂ ಸಿಕ್ಕಿತು.

ರಂಗಪ್ಪರಾಜು ಬೇಟೆಯಾಡುವಾಗ ಮೊಲವೊಂದು ಬೇಟೆಯ ನಾಯಿಯ ಮೇಲೇರಿ ಬಂದಾಗ, ಗಂಡುಭೂಮಿ ಎಂದು ತಿಳಿಯುವುದು, ಅದು ಅಟ್ಟಿಸಿಕೊಂಡು ಹೋದಷ್ಟು ಜಾಗವನ್ನು ಗುರುತುಮಾಡಿ ಗಡಿವಿಸ್ತರಿಸುವುದು ಗಮನಾರ್ಹ.

ಇಂತಹ ಆಶಯಗಳು ಮಾಗಡಿ ಕೆಂಪೇಗೌಡ, ತರೀಕೆರೆ ಪಾಳೆಯಗಾರರು, ಹಕ್ಕಬುಕ್ಕರ ಬೇಟೆ, ಹರಪ್ಪನಹಳ್ಳಿ ಪಾಳೆಯಗಾರ ಬೇಟೆ ಸಂದರ್ಭಗಳಲ್ಲಿ ಕಂಡುಬರುತ್ತವೆ. ಹರತಿ ವೀರನಾಯಕರ ದುರ್ಗದ ಧವಳಕೀರ್ತಿ ಕಾದಂಬರಿಯಲ್ಲಿ ನಾಯಕ ಅರಸರ ಯುಗಾದಿ ಬೇಟೆಯ ವಿವರವನ್ನು ತಿಳಿಸಿದ್ದಾರೆ.

ಜಿ.ಶಂ.ಪರಮಶಿವಯ್ಯ ಸಂಗ್ರಹಿಸಿದ ಪಿರಿಯಾಪಟ್ಟಣದ ಕಾಳಗದಲ್ಲಿ 'ವೀರರಾಜು ಒಮ್ಮೆ ಬೇಟೆಗೆ ಹೋಗಿ ಹಿಂತಿರುಗಿ ಬಂದು ಅಂತಃಪುರಕ್ಕೆ ಬರುವಾಗ್ಗೆ ಒಂದು ಕುಪ್ಪಸ ನೋಡುತ್ತಾನೆ'. ಅದು ಮಗಳದೇ ಆದರೂ ತಿಳಿಯದೆ ಆಕೆಯನ್ನು ಮೋಹಿಸಿ, ಆ ಸುಂದರ ಕುಪ್ಪಸ ತೊಡುವವಳು ಯಾರೆಂದು ಕೇಳುತ್ತಾನೆ. ಇತ್ಯಾದಿ ವಿಷಯಗಳು ಕಂಡುಬರುತ್ತವೆ. ವೀರರಾಜ ಬೇಟೆಯಾಡಿ ಬಂದು ಮಂಚದ ಮೇಲಿರುವ ಕುಪ್ಪಸ ಕಂಡು ಅದನ್ನು ತೊಡುವವಳನ್ನು ಬಯಸುವುದು ಆಶಯ. ಕಥೆಯನ್ನು ದುರಂತ ಮಡಲಿಗೆ ಒಯ್ಯುತ್ತದೆ. ಮಗಳನ್ನೇ ಮೋಹಿಸಲು ಪರೋಕ್ಷ ಸಲಹೆ ಕೊಟ್ಟ ಆನಗೋಡು ಅಂಪೆ ಅರಸಿನ ಕಣ್ಣನ್ನೇ ಕೀಳಿಸಿದನು. ಡಾ.ಪಿ.ಕೆ. ರಾಜಶೇಖರರು ಸಂಗ್ರಹಿಸಿರುವ ಪಿರಿಯಾಪಟ್ಟಣದ ಕಾಳಗದಲ್ಲಿ ವೀರರಾಜ ಮಗಳನ್ನು ಮೋಹಿಸುವ ಪ್ರಸಂಗವಿಲ್ಲ.

ಮೊಳಕಾಲ್ಮೂರು ತಾಲೂಕಿನ ನುಂಕಮಲೆ ಭೈರವನ ಪೌರಾಣಿಕ ನಾಟಕದಲ್ಲಿ ಬೇಟೆಯ ಪ್ರಸ್ತಾಪವಿದೆ. ನಂತರ ಇದೇ ತಾಲೂಕಿನ ಮರ್ಲಹಳ್ಳಿಯ ಮಲಿಯಮ್ಮದೇವಿಯ ಪೌರಾಣಿಕ ನಾಟಕದಲ್ಲಿ

"ಕೋನಸಾಗರಗೌಡ। ಜಾಣಭಕ್ತಿಲಿ ನಡೆದು
ಸಾನುರಾಗದಿ ಇರುತ | ತಾನು ನಡೆಯುತಲಿ
ಮೈಸೂರು ದೊರೆಯಿಂದ | ಬೇಷರದಿ ಅಪ್ಪಣೆಯ
ದ್ಯಾಸದಿ ಬೇಟೆಗೇ | ಸಾಸಿರದಿ ತರಲು ||೨||

....ಭಯಭಕ್ತಿ ತೋರುತ್ತಾ, ಸ್ವಯಂಮಾಗಿ ಬೇಟೆಗೆ ಬರುವುದು ಗಮನಾರ್ಹ. ಹೀಗೆ ಕರ್ನಾಟಕದ್ಯಾಂತ ಬೇಟೆ ಬಗ್ಗೆ ಜನಪದಕಥೆ, ನಂಬಿಕೆ, ಐತಿಹ್ಯ, ಪ್ರತೀತಿ, ವಾಡಿಕೆ, ಪುರಾಣಕಥೆ, ದಂತಕಥೆ, ಸೋಬಾನೆಪದ, ಗಾದೆ, ಪಾಡ್ದನ, ಕೈಫಿಯತ್ತು, ಸ್ಥಳಪುರಾಣ, ಇತ್ಯಾದಿ ಪ್ರಕಾರಗಳನ್ನು ನೋಡಬಹುದು. ಮೌಖಿಕ ಸಾಹಿತ್ಯದಲ್ಲಿ ಐತಿಹಾಸಿಕ ಪುರುಷರ ಬಗ್ಗೆ ಬೇಟೆ ಸಂದರ್ಭಗಳು ಹೆಚ್ಚಿವೆ. ಪ್ರತಿಯೊಂದು ಪಾಳೆಯಪಟ್ಟು ರಾಜ್ಯ ಸ್ಥಾಪನೆಯ ಹಿಂದೆ ಬೇಟೆ ದಂತಕಥೆಯಾಗಿ ಬರುತ್ತದೆ. ಉದಾ : ವಿಜಯನಗರ, ಸೊಂಡೂರು, ಚಿತ್ರದುರ್ಗ, ಹರಪನಹಳ್ಳಿ, ಜರಿಮಲೆ, ತರೀಕೆರೆ ಮೊದಲಾದವುಗಳನ್ನು ಹೆಸರಿಸಬಹುದು. ಬೇಡರ ಬಗೆಗೂ ಸಮಕಾಲೀನ ವಿವರಗಳು ವಿವಿಧ ಮೌಖಿಕ ಆಕರಗಳಲ್ಲಿ ಲಭ್ಯ. ಶಿಷ್ಟಕಾವ್ಯದಲ್ಲಿ ಉದ್ದೇಶ ಪೂರ್ವಕವಾಗಿ ಬೇಟೆ, ಬೇಡರನ್ನು ತಂದರೆ, ಮೌಖಿಕದಲ್ಲಿ ವಾಸ್ತವವೆಂಬಂತೆ ಐತಿಹಾಸಿಕ ವಸ್ತುವನ್ನು ವಿಶ್ಲೇಷಿಸುತ್ತಾರೆ. ದಾಖಲೆ ಚರಿತ್ರೆಯನ್ನು ನಾಚಿಸುವಂತೆ ಇದು ಮಾಡುತ್ತದೆ. ಇದರಲ್ಲಿ ವಸ್ತುನಿಷ್ಠತೆ ಅಳತೆಗೋಲು ಆಗುವುದಿಲ್ಲ. ಅಲ್ಲಿ ಹದಿನೆಂಟು ವರ್ಣನೆಗಳ ನಿಮಿತ್ತ ಬೇಟೆ ಬಂದರೆ, ಜನಪದರು ಸಹಜವಾಗಿ ರಾಜವ್ಯಕ್ತಿಯ ಕ್ಷಾತ್ರತೇಜಸ್ಸನ್ನು ಹೆಚ್ಚಿಸಲು ಮೂಲವೃತ್ತಿಯಾದ ಬೇಟೆಯನ್ನು ಸುಲಲಿತವಾಗಿ ಕಥೆಯಲ್ಲಿ ತರುತ್ತಾರೆ.

ಟಿಪ್ಪಣಿಗಳು

೧. ಪಂಪ ಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಪು.೭೦-೧೫

೨. ಅದೇ : ಪು.೧೩೧

೩. ಡಾ.ಎಂ.ಎಂ.ಕಲಬುರ್ಗಿ (ಸಂ) : ಬಸವಣ್ಣನವರ ವಚನ ಸಂಪುಟ, ೧೯೯೩, ಪು.೩೫

೪. ಡಾ.ವೀರಣ್ಣ ರಾಜೂರ (ಸಂ) : ಶಿವಶರಣೆಯರ ವಚನ ಸಂಪುಟ, ೧೯೯೩, ಪು. ೨೫೩-೭೮

೫. ಚೌಂಡರಸನ ನಳಚಂಪು, ಪು.೬೮-೪೪

೬. ದೇ.ಜವರೇಗೌಡ ಮತ್ತು ಇತರರು : ಜನಪ್ರಿಯ ಕನಕ ಸಂಪುಟ, ೧೯೮೯, ಪು.೧೪

೭. ಕನ್ನಡದಲ್ಲಿ ಬೇಟೆ ಸಾಹಿತ್ಯ, ಪು.೬೫

೮. ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ಅಷ್ಟಮಾಶ್ವಾಸ : ೧೬, ಪು.೧೯೬

೯. ಎಂ.ವಿ.ಸೀತಾರಾಮಯ್ಯ (ಸಂ) : ಕುಮಾರವ್ಯಾಸ ಭಾರತ ಸಂಗ್ರಹ, ೧೯೯೦, ಪು.೬೨೬

೧೦. ಜಿ.ಶಂ.ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜಾನಪದ ಕಾವ್ಯ ಪ್ರಕಾರಗಳು, ೧೯೭೯, ಪು.೨೮೮

೧೧. ಅದೇ :ಪು.೩೪೫

೧೨. ಅದೇ : ಪು.೩೯೩

೧೩. ಅದೇ : ಪು.೨೬೯

೧೪. ಅದೇ : ಪು.೪೦೩

೧೫. ನೋಡಿ : ಕೃಷ್ಣಮೂರ್ತಿ ಹನೂರು : ಮ್ಯಾಸಬೇಡರ ಸಂಸ್ಕೃತಿ, ೧೯೯೩, ಪು.೨೫೮ ಮತ್ತು
ವಿರೂಪಾಕ್ಷಿ ಪೂಜಾರಹಳ್ಳಿ : ಗಾದರಿ ಪಾಲನಾಯಕ, ೧೯೯೯

೧೬. ಅದೇ : ಪು.೨೫೬

೧೭. ಬೊಮ್ಮಯ್ಯ, ೭೫, ಕೂಲಿ, ಮುತ್ತಿಗಾರಹಳ್ಳಿ, ಚಳ್ಳಕೆರೆ ತಾ||, ಇವರನ್ನು ಭೇಟಿ ಮಾಡಿದಾಗ
ಪ್ರಸ್ತುತ ಸಂಗತಿ ತಿಳಿದುಬಂತು.

* * *

ಅಧ್ಯಾಯ- ೫

ಕಾವ್ಯಗಳ ಹಿನ್ನೆಲೆಯಲ್ಲಿ ಬೇಟೆ ಮತ್ತು ಬೇಡ ಸಂಸ್ಕೃತಿ

೫.೧. ಉಡುಗೆ - ತೊಡುಗೆ

೫.೨. ನಂಬಿಕೆ, ಆಚರಣೆ

೫.೩. ಬೇಟೆಯ ಆಯುಧೋಪಕರಣ

೫.೪. ಬೇಟೆಯ ಸ್ವರೂಪ ಹಾಗೂ ವಿಧಾನ

ಕಾವ್ಯಗಳ ಹಿನ್ನೆಲೆಯಲ್ಲಿ ಬೇಟೆ ಮತ್ತು ಬೇಡ ಸಂಸ್ಕೃತಿ

ಮಧ್ಯಕಾಲೀನ ಸಂದರ್ಭದಲ್ಲಿ ಬಹು ಸಂಸ್ಕೃತಿಗಳಿರುವುದನ್ನು ಕಾಣಬಹುದು. ಈ ಸಂಸ್ಕೃತಿಗಳ ನೆರಳಲ್ಲಿ ಅನೇಕ ಸಮುದಾಯಗಳು ಬೆಳೆದು ಬಂದವು. ಭಾರತಕ್ಕೆ ವಿದೇಶಿಯರು ಪದಾರ್ಪಣೆ ಮಾಡಿದ ನಂತರ ದೇಶಿಯ ಸಂಸ್ಥಾನಗಳ ಆಳ್ವಿಕೆಯಲ್ಲಿ ಅನೇಕ ಬದಲಾವಣೆಗಳಾದಾಗ ಜನಜೀವನದ ಮೇಲೆ ನಾನಾ ರೀತಿಯ ಪರಿಣಾಮಗಳಾದದ್ದು ಸ್ಪಷ್ಟ. ಭಾರತದ ಮೇಲೆ 'ಮಹಮದೀಯರ ಆಕ್ರಮಣವಾಗಿ ಅನೇಕ ಪಲ್ಲಟಗಳುಂಟಾದವು'. ಇದರಂತೆ ಅಲ್ಲಾವುದ್ದೀನ್ ಖಿಲ್ಜಿಯ ದಕ್ಷಿಣ ದಂಡೆಯಾತ್ರೆಯಲ್ಲಿ ದ್ವಾರಸಮುದ್ರ, ಕಂಪಲಿ ರಾಜ್ಯಗಳು ಅವನತಿ ಹಾದಿ ಹಿಡಿಯುವಂತಾಯಿತು. ಆ ಅರಸರುಗಳನ್ನು ಸೋಲಿಸಿದ ನಂತರ ಇಲ್ಲಿನ ಪರಿಸ್ಥಿತಿ ಶೋಚನೀಯವೆಂಬಂತಿತ್ತು. ಚರಿತ್ರೆಯ ಘಟನೆಗಳು ಶಾಸನ, ಇತರ ವಿದೇಶಿಯರ ಬರೆವಣಿಗೆಗಳಲ್ಲಿ ಕಂಡುಬರುವಂತೆ ಕನ್ನಡ ಕಾವ್ಯಗಳಲ್ಲಿ ವಿದೇಶಿಯರ ಬಗೆಗೆ ಪ್ರಸ್ತಾಪ ಬಂದರೂ, ಹೆಚ್ಚಿನ ಪ್ರತಿಭಟನೆಗಳು ವ್ಯಕ್ತವಾದಂತಿಲ್ಲ. ಆ ಸಂದರ್ಭದಲ್ಲಿ ಪುರಾಣವಸ್ತು ಕುರಿತು ಕವಿಗಳು ಕಾವ್ಯ ರಚನೆಯಲ್ಲಿ ತೊಡಗಿದ್ದರು. ಹೀಗಾಗಿ ವಾಸ್ತವಿಕ ಸ್ಥಿತಿಯನ್ನು ಕರಾರುವಕ್ಕಾಗಿ ತಿಳಿಸುವುದು ಕಷ್ಟಸಾಧ್ಯವಾದಂತಿದೆ.

ಈ ಕಾಲದ ಜನಜೀವನವು ವೈವಿಧ್ಯಮಯವಾಗಿತ್ತೆಂಬುದು ಸ್ಪಷ್ಟ. ಕನ್ನಡ ಕಾವ್ಯಗಳ ಹಿನ್ನೆಲೆಯಲ್ಲಿ ಕಂಡುಬರುವ ಹಾಗೆ ಬೇಟೆ-ಬೇಡ ಸಂಸ್ಕೃತಿ ಉಜ್ವಲ ಸ್ಥಿತಿ ಹೊಂದಿತ್ತು. ಬೇಟೆ ಕೆಲವರಿಗೆ ಹಸಿವಿನ, ಆಹಾರದ ಮಾರ್ಗೋಪಾಯವಾಗಿತ್ತು. ಇದೇ ಬೇಡರಲ್ಲಿ ಬೇಟೆ ಪಶುಪಾಲನೆಯನ್ನಷ್ಟೆ ಅವಲಂಬಿಸದೆ ತಳವಾರ, ಸೈನಿಕ, ಮಾಂಡಲಿಕ, ದೊರೆಗಳಾಗಿ ವಿವಿಧ ವೃತ್ತಿ ಮತ್ತು ಪದವಿನಿರತ ಹುದ್ದೆಗಳಲ್ಲಿದ್ದರು. ಹೀಗಾಗಿ ಗೋಗ್ರಹಣ ನಡೆಸಿದ ಬಗೆಗೆ ಅನೇಕ ಉಲ್ಲೇಖಗಳು ಮಧ್ಯಕರ್ನಾಟಕ ಭಾಗದಲ್ಲಿ ಕಂಡುಬರುತ್ತವೆ. ಮುಮ್ಮಡಿಸಿಂಗ ಮತ್ತು ಕಂಪಲಿರಾಯನ ಕಾಲದ ಶಾಸನ, ವೀರಗಲ್ಲುಗಳಲ್ಲಿ (ಹರಿಹರ, ಹಿರಿಯೂರು, ದಾವಣಗೆರೆ, ಹೊಳಲ್ಕೆರೆ) ಬೇಡರು ತುರುಕಾಳಗ ನಡೆಸಿದ್ದಾರೆನ್ನಲಾಗಿದೆ. ವಿಜಯನಗರದ ಅವಧಿಯಲ್ಲಿ ಬೇಡರು ಯಥೇಚ್ಛವಾದ ಬೇಡರ ಪಡೆ ಹೊಂದಿದ್ದರು. ರಾಜನಿಗೆ ಪ್ರಿಯವಾದ ಬೇಟೆಯನ್ನು ತಂದೊದಗಿಸುವ ಬೇಟೆಗಾರರ ಗುಂಪುಗಳಿದ್ದವು. ಹಂಪೆಯಲ್ಲಿ ಇಂದಿಗೂ ಈ ಬೇಡರು ಬೇಟೆಯಾಡಿದ, ನೆಲಸಿದ ಸ್ಥಳಕ್ಕೆ ಬೇಟೆಕಾರರ ಹೆಬ್ಬಾಗಿಲೆಂದು ಕರೆಯಲಾಗುತ್ತದೆ. ವಿಜಯನಗರದ ನಂತರ ಕಿರು ಹುದ್ದೆಗಳಲ್ಲಿದ್ದ ಬೇಡರು ಪಾಳೆಯಗಾರರಾಗಿ ರಾಜಕೀಯ ಚಟುವಟಿಕೆಗಳನ್ನು ರೂಢಿಸಿಕೊಂಡರು. ಪ್ರತ್ಯೇಕವಾಗಿದ್ದ ಬೇಡರ ಬುಡಕಟ್ಟು ಬೇಟೆ, ಪಶುಪಾಲನೆ ಮತ್ತು ಕೃಷಿಯಿಂದಲೇ ವಿಕಾಸ ಹೊಂದಲಾರಂಭಿಸಿತು.

ಬೇಟೆ ಮತ್ತು ಬೇಡರ ಸಂಸ್ಕೃತಿಗೆ ಒಗ್ಗಿ ಬಂದ ಬೇಟೆಯನ್ನು ಆಹಾರವಾಗಿ ಪಡೆದುಕೊಳ್ಳುವಾಗ ಹಲವಾರು ಆಯಾಮಗಳನ್ನು ಕಂಡುಕೊಂಡಿದ್ದಾರೆ. ಬೇಟೆಯನ್ನು ವೃತ್ತಿಯಾಗಿಸಿಕೊಂಡಾಗ ಬೇಟೆಯ ವಿಧಾನ, ತಂತ್ರಗಳ ಮೂಲಕ ಬೇಟೆಯ ಆರಾಧನೆಯನ್ನು ರೂಢಿಸಿಕೊಂಡರು. ಇದರ ವಿಸ್ತೃತ ರೂಪವೇ ನಂಬಿಕೆ. ಹೀಗೆ ಸಂಪ್ರದಾಯಗಳು ಬೆಳೆದು 'ಬೇಟೆ'ಯ ದೇವರನ್ನೆ ಆರಾಧ್ಯ ದೈವವನ್ನಾಗಿ ಪೂಜಿಸತೊಡಗಿರಬೇಕು. ಹೀಗೆ ಬೇಟೆ ಸಂಸ್ಕೃತಿಯು 'ಬೇಡ' ಸಂಸ್ಕೃತಿಯ ಜೀವಂತಿಕೆಯಾಗಿರಬೇಕು. ಉದಾ : ಪಾಶುಪತಾಸ್ತ್ರಕ್ಕಾಗಿ ಅರ್ಜುನ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಳ್ಳುವುದು, ಹೀಗೆ ವಾಲ್ಮೀಕಿ, ಬೇಡರ ಕಣ್ಣಪ್ಪ ಮೊದಲಾದವರನ್ನು ಹೆಸರಿಸಬಹುದು.

ಮೂಲತಃ ಬೇಡರು ಬೇಟೆಯನ್ನೇ ಅವಲಂಬಿಸಿಕೊಂಡು ಬಂದಿದ್ದರು. ಆದಿಕಾಲದಿಂದ ಬಂದ ಬೇಟೆಗೆ ಮಧ್ಯಕಾಲವು ಪರಿವರ್ತನೆಯ ಘಟ್ಟವಾಯಿತು. ಆದರೂ ಬೇಟೆಯಾಡಿದ ಪ್ರಾಣಿಯನ್ನು ಹಂಚಿಕೊಳ್ಳುವುದು, ಪಶುಪಾಲನೆಯಲ್ಲಿ ಹಾಲು, ಮೊಸರು, ತುಪ್ಪ ಮಾರುವುದರಿಂದ ಒಂದೆಡೆ ನೆಲೆನಿಂತು ಹಟ್ಟಿಗಳ ನಿರ್ಮಾಣದಲ್ಲಿ ತೊಡಗಿರಬೇಕು. ತರುವಾಯ ಕುರಿಮಂದೆಗಳ ನಿರ್ಮಾಣ, ವಸ್ತುಗಳ ತಯಾರಿಕೆ, ಪಶುಸಂಗೋಪನೆಗಳಿಂದ ಅವರ ಜೀವನ ಸುಧಾರಿಸಿರಬಹುದು. ಬೇಟೆ, ಪಶುಪಾಲನೆ ಕುಟುಂಬಗಳು ಏಕಸಾಮ್ಯತೆ ಕಾಪಾಡಿಕೊಳ್ಳಲು ಹವಣಿಸಿದಾಗ ವಿವಿಧ ಕೃಷಿ ವ್ಯಾಪಾರ ಇತರ ವೃತ್ತಿಗಳಿಗೆ ಹೊಂದಿಕೊಂಡರು. ಆಗ ಸಂಪತ್ತಿನ ಹಂಚಿಕೆಗಾಗಿ ಪೈಪೋಟಿ ಬೆಳೆದಾಗ ಜನರ ಸ್ಥಿತಿ ಏರುಪೇರಾಯಿತು. ಸ್ತ್ರೀಯರ ಸ್ಥಾನಮಾನ ಇಲ್ಲಿ ಬದಲಾಯಿತು. ಪಶುಪಾಲನೆಯಲ್ಲಿ ತೊಡಗಿದ್ದ ಬೇಡರು ಕಾಲಕ್ಕನುಗುಣವಾಗಿ ಪಶುಗಳನ್ನು ಸಂಭಾಳಿಸಲು ಅರಣ್ಯದಿಂದ ಅರಣ್ಯಕ್ಕೆ ವಲಸೆ ಹೋಗುವ ಪರಿಪಾಠವನ್ನು ರೂಪಿಸಿಕೊಂಡು, ಅಲ್ಲಿಯೇ ಭೂಮಿಯ ಉಳುಮೆಯನ್ನು ಮಾಡತೊಡಗಿದರು.

ಬ್ರಿಟಿಷರು ಬರುವ ಪೂರ್ವದಲ್ಲಿ ಕರ್ನಾಟಕದ ಮೂಲಭೂತ ವೃತ್ತಿಗಳಲ್ಲಿ ವಿಕಾಸವಾಯಿತು. ರಾಜಪೋಷಣೆಯಲ್ಲಿ ಬೆಳೆದು ಬಂದ ಬೇಟೆಗೆ ಮಧ್ಯಕಾಲೀನ ಸಂದರ್ಭವು ಹದವಾಗಿತ್ತು. ಇಲ್ಲಿ ಭೌತಿಕ ಸಂಸ್ಕೃತಿಯ ಬೆಳವಣಿಗೆ ಗಮನಾರ್ಹವಾಗಿ ಬೆಳೆಯಿತು. ವಲಸೆಗಾರರ ಚಳವಳಿ, ಪರಿಸರದಲ್ಲಿ ಆಹಾರ ಸಮತೋಲನ, ಆಹಾರ ಸಂಗ್ರಹಕಾರರ ಸಂಘಟನೆ ಪ್ರಮುಖವಾಗಿ ಕಂಡುಬಂತು. ಕರ್ನಾಟಕದ ಕರಾವಳಿ ಹೊರತುಪಡಿಸಿದರೆ ಪಶ್ಚಿಮಘಟ್ಟಗಳು, ಬಯಲುಸೀಮೆಯಲ್ಲಿ ಬಹುತೇಕ ಕಾಡೇ ವ್ಯಾಪಕವಾಗಿತ್ತು. ಹೀಗಾಗಿ ಬೇಟೆ ಜನರ ಜೀವನಾವಶ್ಯಕ ವೃತ್ತಿಯಾಗಿತ್ತೆಂಬುದರಲ್ಲಿ ಎರಡು ಮಾತಿಲ್ಲ.

ಆದಿಕಾಲದಿಂದ ರೂಢಿಸಿಕೊಂಡು ಬಂದಂಥ ಉಡುಗೆ-ತೊಡಿಗೆಗಳನ್ನು ಇಲ್ಲಿ ಬದಲಾಯಿಸಿಕೊಂಡರು. ಆ ಸಂದರ್ಭವು ವಿದೇಶಿ ಸಂಸ್ಕೃತಿಗಳ ಪ್ರಭಾವಕ್ಕೊಳಗಾಗಿ ನಾನಾ ಸಂಕಷ್ಟಗಳನ್ನು ಎದುರಿಸಬೇಕಾಯಿತು. ಹಿಂದೆ ಧರಿಸುತ್ತಿದ್ದ ಮರದ ಎಲೆ, ಪ್ರಾಣಿಗಳ ಚರ್ಮದ ಬಳಕೆ ಇಲ್ಲಿ ಕಡಿಮೆಯಾಯಿತು. ಕಾವ್ಯಗಳಲ್ಲಿ ಕಿರಾತಾರ್ಜುನೀಯ ಪ್ರಸಂಗ ಬಂದಾಗ ಶಿವ-ಅರ್ಜುನರ ಉಡುಗೆ-ತೊಡುಗೆ ಸಮಕಾಲೀನ ಸಂದರ್ಭಕ್ಕಿಂತ ಹಿಂದಿನವಾಗಿವೆ. ಪ್ರಾಚೀನ ಕಾಲದಲ್ಲಿ ಜನರು ದಿಗಂಬರರಾಗಿದ್ದುದೇ ಹೆಚ್ಚು. ಹೀಗಾಗಿ ಇಂದಿಗೂ ಚಿತ್ರದುರ್ಗದ ಮೊಳಕಾಲ್ಮುರು ತಾಲೂಕಿನ ಮುತ್ತಿಗಾರ ಎತ್ತುಗಳ ಕಿಲಾರಿಗಳು ಅರೆನಗ್ನದಲ್ಲಿರುವುದನ್ನು ನೋಡಬಹುದು. ಹಿಂದಿನ ಸಮಗ್ರ ಚಿತ್ರಣವು ಯಾವ ಸ್ವರೂಪದಲ್ಲಿತ್ತೆಂದು ಹೇಳುವುದು ಕಷ್ಟ. ಬೇಟೆಯ ಮೂಲಕ ಬೆಳೆದ ನಂಬಿಕೆಗಳು ಅಪಾರ. ಅವು ಇಡೀ ಸಮುದಾಯವನ್ನು ನಿಯಂತ್ರಿಸಬಲ್ಲ ಶಕ್ತಿಗಳಾಗಿದ್ದವು. ಬೇಟೆಗೆ ಹೊರಡುವಾಗ, ಬೇಟೆಯಾಡುವಾಗ ಹಲವು ನಂಬಿಕೆಗಳು ಇದ್ದಿರಬೇಕು. ಕವಿ ಆ ಸಂದರ್ಭದಲ್ಲಿ ತನ್ನ ಆಶಯಗಳನ್ನು ನಿರೂಪಿಸಿದ್ದಾನೆ.

ಹಾಗೆಯೇ ಆಯುಧೋಪಕರಣಗಳು ಆಹಾರವನ್ನು ಪಡೆಯಲು ಕಂಡುಹಿಡಿದ ಮೊದಲ ಸಾಧನಗಳು. ಕೈಗೆ ನಿಲುಕದ ವಸ್ತು, ಪ್ರಾಣಿಗಳನ್ನು ಪಡೆಯಲು ಇವುಗಳನ್ನು ಶೋಧಿಸಲಾಯಿತು. ಶಿಲಾಯುಗದಿಂದಲೂ ಮಾನವ ಬೇಟೆಗೆ ಕಲ್ಲಿನ ಆಯುಧಗಳನ್ನು, ಕಟ್ಟಿಗೆ, ಕಬ್ಬಿಣ, ಕಂಚು (ತಾಮ್ರ, ಹಿತ್ತಾಳೆ), ಉಪಕರಣಗಳನ್ನು ಬಳಸಿರುವುದು ಕಂಡುಬಂದಿದೆ. ಮಧ್ಯಕಾಲೀನ ಸಂದರ್ಭದಲ್ಲಿ ಈ ಆಯುಧಗಳ ಉಪಯೋಗ ವ್ಯಾಪಕವಾಗಿ ಬಳಕೆಯಾಗಿದೆ.

೫.೧. ಉಡುಗೆ - ತೊಡುಗೆ

ಭೂಮಿಯ ಮೇಲೆ ಮಾನವ ಪದಾರ್ಪಣೆ ಮಾಡಿದಾಗಿನಿಂದಲೂ ಸಂಸ್ಕೃತಿ ಮತ್ತು ನಾಗರಿಕತೆಗಳ ಒಡನಾಟಕ್ಕೆ ಒಳಗಾಗಿದ್ದಾನೆ. ಈ ಎರಡರಲ್ಲಿಯೂ ತನ್ನನ್ನು ತಾನು ತಿದ್ದಿಕೊಳ್ಳುವ, ಪರಿವರ್ತನೆಗೊಳ್ಳುವ, ನಾಜೂಕಿನಿಂದ ಬದುಕುವ ಕಲೆಯನ್ನು ಕಲಿತ. ಆದಿಕಾಲದಲ್ಲಿ ಆಹಾರಕ್ಕಾಗಿ ಅಲೆದಾಡುವಾಗ ಉಡುಗೆ-ತೊಡುಗೆಗಳ ಲಕ್ಷ್ಯಕ್ಕೆ ಹೆಚ್ಚಾಗಿ ಗಮನ ಕೊಡುತ್ತಿರಲಿಕ್ಕಿಲ್ಲ. ಏಕೆಂದರೆ ಆಹಾರ ಸಂಗ್ರಹಣೆಯೇ ಅಂದು ಪ್ರಧಾನ ಅಂಗವಾಗಿತ್ತು. ಹೀಗೆ ಆಹಾರದ ಸುಧಾರಣೆ ಹೆಚ್ಚಾದಂತೆ ನಾಗರೀಕತೆಗೆ ದಾಪುಗಾಲು ಹಾಕುವಲ್ಲಿ ಅವನ ಆರ್ಥಿಕ ಸ್ಥಿತಿಯು ಸುಧಾರಿಸಿದೆ.

ಮೊದಲಿಗೆ ಮಾನವ ದಿಗಂಬರನಾಗಿದ್ದು, ಹಂತ ಹಂತವಾಗಿ ನಾಗರಿಕತೆಯೆಡೆಗೆ ಬಂದ ಹಾಗೆ ಮೃಗದ ಚರ್ಮ, ಮರದ ಸೊಪ್ಪು ಎಲೆಗಳಿಂದ ಮುಚ್ಚಿಕೊಳ್ಳುವುದನ್ನು ರೂಢಿಸಿಕೊಂಡ ಬುದ್ಧಿ ವಿಕಾಸಶೀಲತೆಯೆಡೆಗೆ ಸಾಗಿಬಂದಂತೆ ಉಡುಗೆಯನ್ನು ಮಾರ್ಪಡಿಸಿಕೊಂಡ. ಹೀಗಾಗಿ ಹುಟ್ಟನಿಂದ ವಾರ್ಧಿಕ್ಯದವರೆಗೆ ಮಾನವನ ಭೌತಿಕ ವಿಕಾಸದಲ್ಲಿನ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಅವನು ಧರಿಸುತ್ತಿದ್ದ ಉಡುಗೆ-ತೊಡುಗೆಗಳನ್ನು ಕಾವ್ಯಗಳ ಹಿನ್ನೆಲೆಯಲ್ಲಿ ನೋಡಬಹುದು.

ಶಿಲಾಯುಗದ ಮಾನವ ಕಲ್ಲು-ಪೊಟರೆ, ಗವಿ, ಕಲ್ಲಾಸರೆಗಳಲ್ಲಿ ಜೀವಿಸುತ್ತಿದ್ದಾಗ ಉಡುಗೆಗೆ ಅಷ್ಟೊಂದು ಮಹತ್ವಕೊಟ್ಟರಲಿಕ್ಕಿಲ್ಲ. ಆದರೂ ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ಆಹಾರಕ್ಕೆ ಬಳಸಿಕೊಂಡು ಉಳಿದ ಚರ್ಮವನ್ನು ತನ್ನ ದೇಹದ ಅಂಗಗಳನ್ನು ಮುಚ್ಚಿಕೊಳ್ಳಲು ಬಳಸಿಕೊಂಡ. ನಾಗರಿಕತೆಯತ್ತ ವಿಕಾಸ ಹೊಂದಿದಂತೆ ವಿವಿಧ ಪ್ರಾಣಿಗಳ ಚರ್ಮಗಳನ್ನು ಧರಿಸುವುದನ್ನು ರೂಢಿಸಿಕೊಂಡ. ಹೀಗೆಯೆ ಪ್ರಾಣಿಗಳ ಚರ್ಮಕ್ಕಿಂತ ಮೊದಲು ಮರದ ಎಲೆ, ತೊಗಟೆಗಳನ್ನು ಉಡುಪಾಗಿ ಬಳಸಿಕೊಳ್ಳುತ್ತಿದ್ದ. ಶಿಲಾಯುಗದ ಅವಸ್ಥೆಗಳನ್ನು ದಾಟದಾಗ ಮುಖ್ಯವಾಗಿ ಹುಲಿ, ಚಿಗರೆ, ಕರಡಿ ಮುಂತಾದ ಪ್ರಾಣಿಗಳ ಚರ್ಮಗಳನ್ನು ತೊಡುವುದರಲ್ಲಿ ನವೀನತೆ ಕಂಡುಕೊಂಡ. ಈ ಮಾನವನು ಉಡುಗೆಗಷ್ಟೆ ಮಹತ್ವ ಕೊಡದೆ ತೊಡಿಗೆಗೂ ಕೊಟ್ಟಿದ್ದ. ಪ್ರಾಣಿಗಳ ದಂತಗಳನ್ನು ಆಭರಣಗಳನ್ನಾಗಿ ಮಾಡಿಕೊಂಡು ಕಿವಿ, ಮೂಗು, ಕೊರಳಲ್ಲಿ ಧರಿಸುತ್ತಿದ್ದ ಮತ್ತು ಕೈಕಾಲುಗಳಲ್ಲಿ ಹಾಕಿಕೊಳ್ಳುತ್ತಿದ್ದ. ಹಾಗಾಗಿ ಪ್ರಾಣಿಗಳ ದಂತಗಳಷ್ಟೇ ಅಲ್ಲದೆ ಸಸ್ಯವರ್ಗದ ಕೆಲವು ವಸ್ತುಗಳನ್ನು, ನಿಸರ್ಗದ ವನಸ್ಪತಿಗಳನ್ನು ಬಳಸಿಕೊಳ್ಳುತ್ತಿದ್ದ. ನವಿಲುಗರಿಗಳನ್ನು ತಲೆಯ ಮುಡಿಯಲ್ಲಿ ಇಟ್ಟುಕೊಳ್ಳುವುದು ಇಂದಿಗೂ ನೋಡುತ್ತೇವೆ. ಕವಡೆ, ಕೇರುಬೀಜ, ಧಾನ್ಯಗಳು, ಹೂವುಗಳನ್ನು ಮುಡಿದುಕೊಳ್ಳುವುದು ಕಂಡುಬರುತ್ತದೆ.

ಸಿಂಧೂ ನಾಗರಿಕತೆ ಕಾಲಕ್ಕೆ ತಲೆಗೆ ಮುಂಡಾಸು (ಪೇಟ) ಸೊಂಟದ ಕೆಳಕ್ಕೆ ಪಂಚೆ ಅಥವಾ ಲಂಗೋಟಿ, ಮೈಮೇಲೆ ಸಾಧಾರಣ ಅಂಗಿ ಇವು ಭಾರತೀಯ ಉಡುಪುಗಳಾಗಿದ್ದವು. ಪ್ರಾದೇಶಿಕವಾಗಿ ಜಾತಿಸಮುದಾಯಗಳು ತಮ್ಮ ವೃತ್ತಿಗನುಗುಣವಾಗಿ ಉಡುಗೆ-ತೊಡುಗೆಗಳನ್ನು ಅನ್ವೇಷಿಸಿ ಬದಲಿಸಿದ್ದು ಕಂಡುಬರುತ್ತದೆ. ಹೀಗೆ ಧರಿಸಲು ಕಾರಣ ಮತ್ತು ಪರಿಣಾಮಗಳ ನಡುವಣ ಇಚ್ಛೆಯನ್ನು ನಾವು ಮೆಚ್ಚತಕ್ಕದ್ದು. ಸಾಧು-ಸತ್ಪುರುಷರು ನಾರುಡುಗೆಗಳನ್ನು ಉಡುತ್ತಿದ್ದರು. ಇಂದು ಆಧುನಿಕ ಉಡುಗೆ-ತೊಡುಗೆಗಳನ್ನು ಅವಲಂಬಿಸಿರುವ ಮಾನವ ಮಧ್ಯಕಾಲದಲ್ಲಿದ್ದ ಬಗೆ ವಿಶೇಷವಾಗಿರುವಂತಿದೆ. ಈ ಸಂದರ್ಭದಲ್ಲಿ ವಿದೇಶಿಯರ ಆಕ್ರಮಣದ ಪರಿಣಾಮ ದೇಶೀಯ ಸಂಸ್ಕೃತಿಯು ಪಲ್ಲಟಗೊಂಡಿತು. ಉದಾಃ ಆದಿವಾಸಿ ಬುಡಕಟ್ಟು ಮಹಿಳೆಯರು ಸೊಂಟದ ಕೆಳಗೆ ತುಂಡು ಬಟ್ಟೆಯನ್ನು ಮಾತ್ರ ಸುತ್ತುತ್ತಾರೆ. ಮುಂಡಾ, ಸಂತಾಲ,

ಓರಾನ್, ನಾಗಾಬುಡಕಟ್ಟು ಸ್ತ್ರೀಯರಂತೆ ಇತ್ತೀಚೆಗೆ ಸ್ತ್ರೀಯರು ದೇಹದ ಮೇಲ್ಭಾಗವನ್ನು ಮುಚ್ಚಿಕೊಳ್ಳುವುದು ಗಮನಾರ್ಹ. ಇವರಲ್ಲಿ ಬೇಡರು ವಿಶಿಷ್ಟವಾಗಿ ಕಂಡುಬರುವುದನ್ನು ಕಾವ್ಯಗಳಲ್ಲಿ ಅವಲೋಕಿಸಬಹುದು.

ಪಂಪನು ವಿಕ್ರಮಾರ್ಜುನವಿಜಯದಲ್ಲಿ ಬೇಟೆಗಾರರ ಲಕ್ಷಣ ತಿಳಿಸುತ್ತಾ: ದೃಢಕಾಯನಾದ ಬೇಡರನಾಯಕ ತೊಟ್ಟ ಎಕ್ಕಡ, ಕಟ್ಟಿದ ಮರದ ಬಿಲ್ಲು, ಹಣೆಯಕಟ್ಟು, ಬೇಟೆಯ ದಮಟೆ, ಚಿಕ್ಕದಾದ ಕತ್ತಿ, ಉತ್ತರೀಯದಿಂದ ಕೂಡಿದ ಅಂಗಿ ಶೋಭಾಯಮಾನವಾಗಿದ್ದವು. ಹಣೆಕಟ್ಟು ಕಟ್ಟಿಕೊಂಡು, ಬೇಟೆಯಾಡುತ್ತಿದ್ದ ಕಾಲವದು (೬-೩೬).

ಗಿರಿಜಾಕಲ್ಯಾಣದಲ್ಲಿ ಮೃಗಾಯವನ್ನು (ಪರ್ವತ ವರ್ಣನೆಯಲ್ಲಿ) ಪರೋಕ್ಷವಾಗಿ ಕವಿ ರೂಪವನ್ನು ತಿಳಿಸುವಂತೆ, ಭೀಕರ ಸ್ವರೂಪದ ಮುಖ, ರೌದ್ರ ಸ್ವಭಾವದ ಮದಿಸಿರುವ ಕಣ್ಣುಗಳು, ಕಡುಕಪ್ಪು ದೇಹ, ಕಠಿಣ ಸ್ವಭಾವ, ಗಟ್ಟಿಯಾದ ಬಿಲ್ಲುಗಳು, ಭಯಂಕರವಾದ ಅಂಬುಗಳು ನಿಷ್ಠುರವಾದ ಕೂಗಾಟಗಳು ಇತರ ವಿಷಯಗಳು ಕಂಡುಬರುತ್ತವೆ. ಕುಮಾರವಾಲ್ಮೀಕಿಯ ತೊರವೆ ರಾಮಾಯಣದಲ್ಲಿ ಶಂಭುಕಾಸುರ ಇಂದ್ರಪದವಿಗಾಗಿ ಮಾಡುವ ತಪಸ್ಸನ್ನು ಕೆಡಿಸಿ, ಕೊಲ್ಲಲು ನಾರದ ಮತ್ತು ಸುರಾಚಾರ್ಯರ ಅನುಮತಿಯೊಂದಿಗೆ ಇಂದ್ರನು ದೇವರೂಪ ತ್ಯಜಿಸಿ, ಕಿರಾತ ರೂಪವನ್ನು ಧರಿಸುವುದು, ಜೊತೆಗೆ ದೇವತೆಗಳು ಇವನೊಂದಿಗೆ ಬೇಟೆಗಾರರ ವೇಷ ತೊಡುವರು. ಶಂಭುಕಾಸುರನನ್ನು ಕೊಂದ ನಂತರ ಇಂದ್ರಾದಿದೇವತೆಗಳು ಬೇಡರ ವೇಷವನ್ನು ಧರಿಸಿ ರಾಮನಲ್ಲಿಗೆ ಬಂದು ಕಾಣಿಕೆ ಸಮೇತ ಗೌರವಿಸಿ ವಿನಂತಿಸುವ ಸನ್ನಿವೇಶವಿದೆ. ನಂಜುಂಡಕವಿಯ ರಾಮನಾಥಚರಿತೆಯಲ್ಲಿ ಶಬರ, ಶಬರಿಯರು ಶುಶ್ರೂಷೆ ಮಾಡುವ ತಾಂಬೂಲ ಹಾಕುವ ಚಿತ್ರಣ ಅಪೂರ್ವವಾದುದು.

ಕನಕದಾಸರು ಮೋಹನತರಂಗಿಣಿಯಲ್ಲಿ 'ನಳಮಹಾರಾಜ ಸರ್ವಾಲಂಕೃತನಾಗಿ ಕುದುರೆ ಮೇಲೇರಿ ಬೇಟೆಯಾಡುವ ಸಂಗತಿಯನ್ನು ತಿಳಿಸಿದ್ದಾನೆ. ಅಂದು ಬೇಟೆಸ್ವತ್ತ, ಜೂಲುನಾಯಿಗಳು, ಉಡುಗೆ-ತೊಡುಗೆಗಳನ್ನು ಇತರರು ಪ್ರಯೋಗಿಸುತ್ತಿದ್ದರು. ಕರ್ಣಪಾರ್ಯನ ನೇಮಿನಾಥಪುರಾಣದಲ್ಲಿ ವಿಂಧ್ಯಕ ಮತ್ತು ವಾಗುರೆ ಎಂಬ ಬೇಡ ದಂಪತಿಗಳ ಚಿತ್ರಣವಿದೆ. ವ್ಯಕ್ತಿಗಳಲ್ಲಷ್ಟೇ ಅಲ್ಲದೆ ಬೇಟೆಯಾಡುವ ಪ್ರಾಣಿಗೂ ಅಲಂಕರಿಸುತ್ತಿದ್ದುದು ವಿಶೇಷ. ಬೇಟೆ ನಾಯಿಗೆ ಮಾಣಿಕ್ಯ ಖಚಿತವಾದ ಕೆಂಬಟ್ಟೆಯನ್ನು ಹೊದಿಸಿದ ಬಂಗಾರದ ಕೊರಳಪಟ್ಟಿಯನ್ನು ಹೊಂದಿದ ನಾಯಿಗಳನ್ನು ಬೇಡರಪಡೆ ಹಿಡಿದುಕೊಂಡು ಬೇಟೆಗಾಗಿ ಕಾಡಿಗೆ ಹೋಗುವ ದೃಶ್ಯವಿದೆ. ಇಂತಹ ನಾಯಿಗಳಿಗೆ, ಗೂಳಿಗಳಿಗೆ ಜೂಲುಹಾಕುವಂತೆ ಹಾಕುತ್ತಿದ್ದರು.

ಷಡಕ್ಷರದೇವ ವಿರಚಿತ ರಾಜಶೇಖರವಿಳಾಸದಲ್ಲಿ ಪುಳಿಂದ ಅಥವಾ ಶಬರನಾಯಕ ಬೇಟೆಗೆ ಹೋಗುವ ಬೇಡನ ಉಡುಗೆ - ತೊಡುಗೆಯ ವರ್ಣನೆ ಹೀಗಿದೆ :ಶುಭ್ರವಾದ ಹಲ್ಲುಗಳು, ಕೊಂಕಿದ ಹುಬ್ಬು, ಮೋಡದಂತೆ ಕಪ್ಪಾದ ದೇಹ, ಕೆಂಪಾದ ಕಣ್ಣುಗಳು, ದಪ್ಪಮೀಸೆ, ಆನೆಯ ಕುಂಭಸ್ಥಳದ ಮುತ್ತಿನ ಸರ, ಕೈಯಲ್ಲಿ ಬಿಲ್ಲು-ಬಾಣಗಳು, ಕಾಲಲ್ಲಿ ಚಪ್ಪಲಿ, ಜೊತೆಗೂಡಿ ಬರುವ ಬೇಟೆನಾಯಿಗಳು' ಶಿಕಾರಿಗೆ ಮುಂದಾಗುತ್ತವೆ'.[೧] ಶಬರಶಂಕರವಿಳಾಸದ ೩ನೇ ಆಶ್ವಾಸದಲ್ಲಿ ಶಿವಪಾರ್ವತಿಯರು ಶಬರ-ಶಬರಿಯರಾಗಿ, ದೇವತೆಗಳು ಕಿರಾತ ರೂಪ ಧರಿಸಿ ಇಂದ್ರಕೀಲಕ್ಕೆ ಬಂದು ಬೇಟೆಯಾಡುವ ಚಿತ್ರಣವಿದೆ. ಶಬರಶಂಕರವಿಳಾಸವು ಶಿವಲೀಲೆಯನ್ನು ವರ್ಣಿಸುವ ಗ್ರಂಥ. ಕಥೆ ಸೂಕ್ಷ್ಮವೂ, ಅಲ್ಪವಾಗಿದ್ದರೆ, ವರ್ಣನೆಮಾತ್ರ ಬೃಹತ್ತಾಗಿದೆ. ಭಾರವಿಯ ಕಿರಾತಾರ್ಜುನೀಯ, ಪಂಪನ ವಿಕ್ರಮಾರ್ಜುನವಿಜಯ, ಕುಮಾರವ್ಯಾಸಭಾರತ ಇತರ ಕೃತಿಗಳಲ್ಲಿ ಮೇಲಿನ ವರ್ಣನೆ ಬಂದಿದ್ದರೂ, ಷಡಕ್ಷರದೇವನ ದೃಷ್ಟಿ ಭಿನ್ನವಾದುದು. ಶಂಕರನೇ ಶಬರ

ವೇಷಧಾರಿಯಾದ ನಾಯಕನಾಗಿ ಶಬರಶಂಕರವಿಳಾಸದಲ್ಲಿ ಬರುತ್ತಾನೆ. ಅರ್ಜುನನ ಪಾತ್ರ ಇಲ್ಲಿ ಪ್ರಧಾನವಲ್ಲ. ಶಿವನು ತನ್ನ ಭಕ್ತರಿಗೆ ತೋರುವ ಕರುಣೆಯ ಬಗ್ಗೆ ಹೇಳುವುದೇ ಕವಿಯ ಆಶಯ. ಶಿವಲೋಕದಿಂದ ಆರಂಭವಾದ ಕಥೆ ಅರ್ಜುನನಿಗೆ ಶಿವಾನುಗ್ರಹವಾಗುವವರೆಗೆ ಕೊನೆಗೊಳ್ಳುತ್ತದೆ. ಶಿವನ ಸಭೆಯ ವರ್ಣನೆ ಮೂರು ಆಶ್ವಾಸನೆಗಳಲ್ಲಿ ವ್ಯಾಪಿಸಿದೆ.

ಕೃತಿಯ ೩ನೇ ಆಶ್ವಾಸದಲ್ಲಿ ವರ್ಣನೆಯಾಗಿರುವಂತೆ, ವೇದಶಾಸ್ತ್ರ, ಪುರಾಣಾದಿಗಳನ್ನು ಬೇಡರ ಆಯುಧಗಳನ್ನಾಗಿಸಿಕೊಂಡು, ಈಶ್ವರಿ ಮಾಯೆಯನ್ನೇ ಬಲೆಯಾಗಿ ಮಾಡಿಕೊಂಡು ಜಗನ್ನಾಟಕ ಸೂತ್ರಧಾರಿಯು, ಅರ್ಜುನನ ಹೃದಯದಲ್ಲಿ ಅಡಗಿದ ಅಹಂಕಾರವೆಂಬ ಹಂದಿಯನ್ನು ನಾಶ ಮಾಡಲು ಇಂದ್ರಕೀಲದ ಕಡೆಗೆ ಬರುತ್ತಿರುವುದು ಇಲ್ಲಿ ಕವಿಯು ಬೇಟೆಗಾರರ ಬಗ್ಗೆ ಕಲ್ಪನೆ ಇಟ್ಟುಕೊಂಡಿರುವುದು, ಬಣ್ಣನೆ, ವಿದ್ವತ್ಪೂರ್ಣವಾಗಿದೆ. ಇಲ್ಲಿ ಶಿವನು ಬೇಟೆಗೆ ಸಿದ್ಧನಾಗುವಾಗ ಅದಕ್ಕನುರೂಪವಾಗಿ ವೇಷಧಾರಿಗಳಾದ ಪ್ರಮಥರು ಭೇರಿಯನ್ನು ಬಾರಿಸುವುದು, ದೇವತೆಗಳು ದುಂದುಬಿಯನ್ನು ಮೊಳಗಿಸುವುದು, ಆ ಮಹಾಶಬ್ದವು ಗಿರಿತಪ್ಪಲಿನಲ್ಲೆಲ್ಲಾ ತುಂಬುವುದು, ಶಿವಗಣಗಳ ಮನಸ್ಸಿಗೆ ಆನಂದವಾಗುವುದು, ಹರ್ಷ, ಸಂಭ್ರಮಗಳು ದೇವತೆಗಳನ್ನು ಆವರಿಸುವುದು ಕವಿಯ ವರ್ಣನೆಗೆ ಮೀರಿದುದಾಗಿದೆಃ

ಜಡೆಗಳ ಬಂಬಲೇ ತಲೆದಳಿರ್ಫಣಿ ಸುತ್ತಿದ ಬಳ್ಳಿ ತಾಳ್ದ ಬಾಂ
ಗಡಲದು ಪುಷ್ಪಮಾಲೆ ಗರಿವೂಗರಿತೇಳ್ವರೆ ಬಗ್ಗ ಸಮ್ಮದೊ
ಳ್ಪುಡಿ ಪೊಸಚಲ್ಲಣಂ ಕರಿಯ ಕುಪ್ಪಸಮಾನೆಯ ಕೃತಿಯಂಗದೊ
ಳ್ತೊಡೆದ ವಿಭೂತಿಯುದ್ಗಮ ಪರಾಗ ವಿಲೇಪನಮಗ್ನಿಲೋಚನಂ (೩:೩:ಪು:೫೨)

ಕಿರಾತರೂಪವನ್ನು ಧರಿಸಿದ ಶಿವನ ಜಟಾಜೂಟವು ಚಿಗುರೆಯ ಕುಲಾವಿಯಾಯಿತು. ಸರ್ಪವು ಅದಕ್ಕೆ ಸುತ್ತಿದ ಬಳ್ಳಿಯಾಯಿತು. ಧರಿಸಿದ್ದ ದೇವಗಂಗೆಯು ಮುಡಿದಿದ್ದ ಹೂಮಾಲೆಯಾಯಿತು. ಬಾಲಚಂದ್ರನು ಕೇದಗೆ ಹೂವಿನ ಎಸಳಾದನು ; ವ್ಯಾಘ್ರ್ಯಚರ್ಮಾಂಬರವೆ ಒಳಗಿನ ಉಡಿಗೆಯ ಹೊಸ ಚಡ್ಡಿಯಾಯಿತು. ಗಜ ಚರ್ಮವೆ ತೊಟ್ಟ ಕರಿಯ ಬಣ್ಣದ ಅಂಗಿ ಮೈಗೆ ಬಳಿದ ವಿಭೂತಿಯೇ ಪುಷ್ಪರಾಗವನ್ನು ಲೇಪಿಸಿದಂತೆ ಇದ್ದಿತು. ಹಣೆಯಲ್ಲಿನ ಉರಿಗಣ್ಣು, ಹಣೆಯಲ್ಲಿಟ್ಟ ಗೈರಿಕೆ ಧಾತುವಿನ ಬೊಟ್ಟು, ಆದಿಶೇಷನ ಉಜ್ವಲ ಫಣಾಮಣಿಗಳು ಧರಿಸಿದ್ದ ಹವಳದ ಒಡವೆಗಳು ಪ್ರಬಲವಾದ ಶಿವನ ಪಿನಾಕವೆಂಬುದೇ ಹಿಡಿದಿದ್ದ ಬಿಲ್ಲು, ಶಿವನ ಶಕ್ತಿ ಸ್ವರೂಪನಾದ (ವಿಷ್ಣು) ತೀಕ್ಷ್ಣವಾದ ಬಾಣವಾಯಿತು. ಶಿವನು ಅಂದರೆ ಶಂಕರನು ಬೇಡರ ವೇಷವನ್ನು ಧರಿಸಿದ ಬಗೆಯನ್ನು ಕವಿ ಚಿತ್ರಿಸಿದ್ದಾನೆ. ಬೇಡತಿಯರಾದ ದೇವತಾಸ್ತ್ರೀಯರು :

ತಳಿರುಡೆ ಸಂಜೆಗೆಂಪು ಪೊಸಮುತ್ತಿನ ಹಾರಮೆ ತಾರಕಾಳಿತ
ಳ್ತಳಿರುಚಿ ಕಾಯಕಾಂತಿ ಕಡುಗತ್ತಲೆ ಮೂಕುತಿ ಮುತ್ತು ಶುಕ್ರಮಂ
ಡಳಮಮದರ್ದೊಪ್ಪಿ ಭಲ್ಲಿಯ ವಿಳಾಸಮನಾಳ್ದೆಸೆದಂದು ಸರ್ವಮಂ
ಗಳೆ ನಿಜ ಕಾಳರಾತ್ರಿವೆಸರಂ ಮಿಗೆ ಸಾರ್ಥಕಮಂ ನೆಗಳ್ಚಿದಳ್ (೩:೬, ಪು:೫೩)

ಸರ್ವಮಂಗಳೆಯಾದ ಪಾರ್ವತಿಯು ಶಿವನನ್ನು ಅನುಸರಿಸಿ ಶಬರಿಯ ರೂಪವನ್ನು ಧರಿಸಿ ತನ್ನ ಹೆಸರನ್ನು ಅರ್ಥಪೂರ್ಣವನ್ನಾಗಿ ಮಾಡಿದ್ದಾಳೆನ್ನುವಂತೆ ಕಂಡಳು. ಅವಳು ಧರಿಸಿದ್ದ ಚಿಗುರುಗಳ ಉಡಿಗೆಯ ಸಂಜೆಯ ಕೆಂಪಿನಂತೆ

ಇದ್ದಿತು. ಮುತ್ತಿನಹಾರವು ನಕ್ಷತ್ರಮಾಲೆಯನ್ನು ಹೋಲುವಂತೆ, ದುಂಬಿಗಳಂತೆ ಕಪ್ಪಾಗಿ ವ್ಯಾಪಿಸಿದ್ದ ಮೈಬಣ್ಣವು ಗಾಢಾಂಧಕಾರವೆನಿಸಿತು. ಅವಳು ಧರಿಸಿದ್ದ ಮೂಗುಬಟ್ಟು ಬೆಳಗುವ ಶುಕ್ರಮಂಡಲದಂತೆ ಅಣಿಯಾಗಿ ಒಪ್ಪುತ್ತಿತ್ತೆಂದು ಶಿವನ ಮಡದಿ ಪಾರ್ವತಿ ಬಗ್ಗೆ ತಿಳಿಸಿದ್ದಾನೆ.

ಆರನೇರಲ್ವಣ್ಣ ಬಣ್ಣಬಡೆದ ತನುಪ್ರಥುಶ್ರೋಣಿ ನೀಳಾಳಕಂ ಪಂ
ಕರುಹಾಸ್ಯಂ ಬಿಣ್ಪೊಳ್ದೊಪ್ಪುವ ನೆಲೆ ಮೊಲೆ ಬಿಂಬಾಧರಂ ದೀರ್ಘನೇತ್ರಂ
ತರಳಾಪಾಂಗಂ ಬಳಲ್ಬಲ್ಮುಡಿ ಬಡನಡು ರಂಭೋರು ಕೊಂಕಾಂತ ಪುರ್ಬೊಂ
ದಿರೆ ನಾನಾ ಶಕ್ತಿಯರ್ಬೇಡತಿಯರೆಸಕಮಂ ತಾಳ್ದು ಕಣ್ಗೆಡ್ಡ ಮಾದರ್ (೩:೭:೫೩)

ಎಂದು ಕವಿ ಬೇಡತಿಯರ ಅಂಗಸೌಷ್ಠವ ಕುರಿತು ಚಿತ್ರಿಸುತ್ತಾ, ಅರ್ಧ ಪಕ್ವವಾದ ನೇರಳೆಯ ಹಣ್ಣಿನ ಬಣ್ಣವನ್ನು ಪಡೆದಿರುವ ಶರೀರವು, ಸಿಂಹದಂತಿರುವ ನಡು, ಹುಲ್ಲೆಯ ಮರಿಯಂಥ ಕಣ್ಣು, ದುಂಡಾದ ಮೊಲೆಗಳು, ತುಂಬಿಗಳ ಸಾಲಿನಂಥ ಜಡೆಯು, ಚಕ್ರವಾಕ ಪಕ್ಷಿಗಳ ಕಾಂತಿಯುಳ್ಳ ತೋರಕುಚವೂ, ಆನೆಯಂಥ ನಡೆಯೂ, ಚಂಚಲವಾದ ದೃಷ್ಠಿಯು ಕೋಗಿಲೆಯ ಧ್ವನಿಯಂತೊಪ್ಪುವ ಮಾತುಗಳೊಂದಿಗೆ ವಿವಿಧ ಶಕ್ತಿಯರು (ದೇವಸ್ತ್ರೀಯರು) ಬೇಡತಿಯರ ವೇಷವನ್ನು ತಾಳಿ ನೋಡುವವರ ದೃಷ್ಟಿಗೆ ಗೋಚರಿಸಿದರು. ಕವಿ ಬೇಡರ ವೇಷ -ಭೂಷಣ, ಕಾಡಿನ ಹೃದಯಂಗಮ ನೋಟವನ್ನು ಸುಂದರವಾಗಿ ಬಣ್ಣಿಸಿದ್ದಾನೆ. ಹೊಳೆಯುವ ದಂತದ ಓಲೆಗಳನ್ನು, ಗುಲಗಂಜಿ ಮಣಿಯಸರ, ಹೊಂಗೆ ಸೊಪ್ಪಿನ ಉಡುಗೆ, ಹರಡಿದ ನವಿಲುಗರಿಗಳ ನಿರಿಗೆಯ ಕಟ್ಟು ಬಲವಾಗಿ ಬಿಗಿದಿದ್ದ ನಡುಗಂಟು, ಮುಡಿದಿದ್ದ ನೈದಿಲೆಹೂಗಳು, ಮಿಣುಕುಹುಳದ ರೆಕ್ಕೆಯಂತಿರುವ ಹಣೆಯಬೊಟ್ಟು. ಹೀಗೆ ಹಸಿರು ಕುಪ್ಪಸವನ್ನು ತೊಟ್ಟು ದೇವತಾಸ್ತ್ರೀಯರು ಬೇಡತಿಯರಾದರೆಂದು ಹೇಳಿದ್ದಾನೆ. ಬೇಡತಿಯರ ಸ್ವರೂಪ ಕುರಿತು ಕವಿ ಹೀಗೆ ಹೇಳಿದ್ದಾನೆ :

ತಲೆವಳಿಸುತ್ತೆ ಕಟ್ಟಿದ ತಳಿರ್ನವ ಚಂಪಕ ಕರ್ಣಪೂರಮು
ಜ್ವಲಸಿತ ಕರ್ಣಿಕಾರಚಿತ ಕಾಂಚಿ ಮರಂದದ ಬೊಟ್ಟು ಬೆನ್ನ ಮೇ
ಲೊಲೆದೆಸೆವೆಣ್ಣೆಗಂಟು ಪದೆವಿಲ್ಕೊನೆಯಂಬು ಲತಾಂತ ಮಾಲೆ ಮಂ
ಜುಲ ಗಜದಂತದೊಳ್ವಳೆ ವಿರಾಜಿಸೆ ಕಣ್ಗೆಸೆದರ್ಪುಳಿಂದಿಯರ್ (೩:೧೦ : ೫೪).

ತಲೆಯ ಸುತ್ತಲು ಚಿಗುರುಗಳನ್ನುಕಟ್ಟಿಕೊಂಡು ಹೊಸದಾಗಿ ಅರಳಿದ ಸಂಪಗೆಹೂವನ್ನು ಕಿವಿಯಲ್ಲಿಟ್ಟುಕೊಂಡು, ತಾವರೆ ಮತ್ತು ಕರ್ಣಿಕಾರ ಪುಷ್ಪಗಳಿಂದ ಕಟ್ಟಿದ ಮಾಲೆಯನ್ನು ಡಾಬಿನಂತೆ ಬಿಗಿದು ಮಕರಂದದ ಹಣೆಬೊಟ್ಟನ್ನಿಟ್ಟು, ಎಣ್ಣೆಸವರಿದ ಜಡೆಯಗಂಟು ಬೆನ್ನಮೇಲೆ ಅಲುಗುತ್ತಿರಲು, ಕೈಯಲ್ಲಿ ಚೂಪಾದ ಬಾಣಗಳನ್ನು, ಬಿಲ್ಲನ್ನು ಹಿಡಿದುಕೊಂಡು ಹೂಮಾಲೆಯನ್ನು ಧರಿಸಿ, ಆನೆಯದಂತದ ಕಡಗಗಳನ್ನು ಇಟ್ಟುಕೊಂಡು ಶಬರಿಯರೆಲ್ಲರೂ ಕಂಗೊಳಿಸುತ್ತಿದ್ದರು. ಈ ಬೇಡತಿಯರು ಒಟ್ಟಾಗಿ ಹೇಗಿದ್ದರೆಂದರೆ : ಕಪ್ಪಾಗಿದ್ದ ಅವರ ಶರೀರಗಳು, ದುಂಬಿವಿಂಡಿನಂತೆ ಇದ್ದ ಅವರ ಕೇಶಪಾಶದ ಹೊಳಪು ಮುಸುಕಿ ಕಪ್ಪಾಗಿ ಕಾಣುತ್ತಿದ್ದವು. ನೀಲಮೇಘದಲ್ಲಿ ಮಿಂಚಿನ ಪ್ರಕಾಶವಾದಂತೆ ಕಣ್ಣಕಾಂತಿಯು ಚಿಮ್ಮುತಿರಲು ದಟ್ಟವಾದ ಅವರ ತುರುಬು ಗರಿಗೆದರಿ ಸಮೀಪಕ್ಕೆ ಸುಳಿಯುವ ನವಿಲಿನಂತೆ ಕಾಣುತ್ತಿದ್ದಿತು.

ಬೇಡತಿಯರ ವೇಷಧರಿಸಿದ್ದ ದೇವತಾಸ್ತ್ರೀಯರ ಬಗ್ಗೆ ತಿಳಿಸುತ್ತಾ ; ಲಕ್ಷ್ಮಿ, ಶಚಿ, ಸರಸ್ವತಿ, ಕರಾಳಿ, ಕಾಳರಾತ್ರಿ, ಸೌಂದರಿ, ವನಲಕ್ಷ್ಮಿ, ಶಾಕಿನಿ, ರೋಹಿಣಿ, ಕಪಾಲಿನಿ, ಡಾಕಿನಿ, ಕಾಳಿ, ಮಾರಿ, ಶಾರ್ವರಿಯೆಂಬ ರಾತ್ರಿದೇವತೆ, ರತಿ, ಮುಕ್ತಕೇಶಿ, ಶವವಾಹಿನಿ, ದಕ್ಷಿಣಕಾಳಿ, ಮೋಹಿನಿ, ಚಂಡಿ, ಸಿದ್ಧಿ, ರಣದುರ್ಗ, ಚಕ್ರಧಾರಿಣಿಯೆಂಬ ಯಂತ್ರದೇವತೆ,

ಮನೋನ್ಮನಿಯೆಂಬ ನಾಡಿದೇವತೆ, ಮಾಲಿನಿಯೆಂಬ ಪುಷ್ಪದೇವತೆ, ಈ ಶಕ್ತಿಸ್ವರೂಪಿಣಿಯರು, ಭೂದೇವಿ, ವನದೇವಿ, ದಿವಾಭಿಮಾನಿಯರಾದ ವಾರದೇವತೆಯರು, ದಿಗ್ದೇವತೆಯರು, ಯಜ್ಞದೇವತೆಯರು, ವೇದರೂಪಿಗಳಾದ ಮಂತ್ರದೇವತೆಯರು, ಸಪ್ತಮಾತೃಕೆಯರು, ಸಾಗರದೇವಿಯರು, ನದಿಗಳ ಅಭಿಮಾನದೇವತೆಯರು, ಯೋಗಿನಿ ಗಣಗಳು, ಚಂದ್ರನರಮಣಿಯರಾದ ನಕ್ಷತ್ರದೇವಿಯರು, ಪ್ರಾತಃಸಂಧ್ಯಾಭಿಮಾನಿಯಾದ ಗಾಯತ್ರಿದೇವಿ, ಮಾಧ್ಯಾಹ್ನಿಕ ದೇವತೆಯಾದ ಸಾವಿತ್ರಿ, ಸನ್ಮತಿ, ವಿಖ್ಯಾತಿ, ಎಂಬುವ ದೇವರಮಣಿಯರು ಮುಂತಾದ ದೇವತಾಸ್ತ್ರೀಯರು ಬೇಡತಿಯರ ವೇಷಧರಿಸಿ ಬೇಟೆಗೊರಡಲು ಸಿದ್ಧರಾದ ದೃಶ್ಯವನ್ನು ಷಡಕ್ಷರದೇವ ತಿಳಿಸಿದ್ದಾನೆ. ಶಿವಗಣಗಳು, ರುದ್ರರೂ ಸಾಮಾನ್ಯ ಮನುಷ್ಯರಂತೆ ಬೇಡರ ವೇಷವನ್ನು ಧರಿಸಿದರು.

ತಳಿರ್ಗಳಮರ್ಕೆವೆತ್ತ ತಲೆಗಟ್ಟು ಲತಾಂತದ ಮಾಲೆ ಬೆನ್ನ ಬ
ತ್ತಳಿಕೆ ಮರಂದದಣ್ಬು ಪಸುರಂಗಿಗೆ ಪೀಲಿಯ ಪಕ್ಕದಲ್ಲಿ ಗೇ
ಣಳವಡೆ ತೊಟ್ಟ ಪೊಂಬುಲಿಯ ಸಮ್ಮದ ಚಲ್ಲಣಮೊಪ್ಪಿ ಬಿಲ್ಸರ
ಲ್ದಳೆದು ಗಣಾಳಿ ರುದ್ರತತಿ ತಾಳ್ದುದನೂನ ಪುಳಿಂದ ವೇಷಮಂ (೩:೧೬ : ೫೫)

ಬೇಡರು ಚಿಗುರೆಲೆಗಳಿಂದ ಕುಲಾವಿಯನ್ನು ಮಾಡಿಕೊಂಡು ತಲೆಗಿಬ್ಬರು ಹೂಮಾಲೆಗಳನ್ನು ಧರಿಸಿದರು. ಬೆನ್ನಲ್ಲಿ ಬತ್ತಳಿಕೆ, ಹೂವಿನರಸದ ಹಣೆಬೊಟ್ಟು, ತೊಟ್ಟದ್ದ ಹಸಿರು ಅಂಗಿಗೆ ಪಾರ್ಶ್ವದಲ್ಲಿ ಒಂದುಗೇಣು ಉದ್ದವಿರುವ ನವಿಲುಗರಿಯ ಕುಚ್ಚುಗಳು, ಹೊಂಬಣ್ಣದ ಹುಲಿಯ ತೊಗಲಿನ ಚಡ್ಡಿಯನ್ನು ತೊಟ್ಟರು. ದುರ್ಬಾಣಗಳನ್ನು ಕೈಯಲ್ಲಿ ಹಿಡಿದವರಾಗಿದ್ದರು. ನಂದೀಶ, ಭೃಂಗೀಶ, ವೀರೇಶ, ಷಣ್ಮುಖ, ಗಣಪತಿ, ದಾರುಕ, ರೇಣುಕ, ದುರ್ಧರ, ಧೂಮಾಕ್ಷ, ದೂರ್ಜಟಿ, ಕಾಳಕಂಡ, ಬಭ್ರು, ಕುಭ್ರಾಂಗ, ಅಂಬೋದರನಾದ ತಾಳಜಂಘನೇ ಮೊದಲಾದ ಗಣಾಧಿಪತಿಗಳು ಮತ್ತು ಭುವನೇಶ, ಭೂತಿಯುಕ್ತ, ಭುಜಗಧರ, ಅಜೇಯ ಮಹಾಕಾಯ, ಉಗ್ರ, ಶಿವರುದ್ರ, ಪೂರ್ಣಭದ್ರ, ಕಲವಿಕರಣ, ಓಂಕಾರ ಈಶಾನರುದ್ರ, ಧವಳಾಂಗ, ಧರ್ಮರೂಪ, ಧಮನವಿಮದ ಮೊದಲಾದ ರುದ್ರಗಣಗಳು ಬೇಡರ ಸಾಮಾನ್ಯ ರೂಪವನ್ನು ಧರಿಸಿ ಬೇಟೆಗಾಗಿ ಹೊರಡುವ ದೃಶ್ಯವನ್ನು ಕವಿ ವಿಹಂಗಮವಾಗಿ ಚಿತ್ರಿಸಿದ್ದಾನೆ.

ಮಧ್ಯಕಾಲದ ತೊಡುಗೆಗಳಲ್ಲಿ ಆಭರಣಗಳು ಮುಖ್ಯವಾಗಿವೆ. ಇಲ್ಲಿ ಅರಸರು ಮತ್ತು ಜನಸಾಮಾನ್ಯರೆಂದು ಪ್ರತ್ಯೇಕಿಸಿ ನೋಡುವುದು ಅಗತ್ಯ. ಆಭರಣಗಳ ಬಗೆಗೆ ಕನಕದಾಸರ ಮೋಹನತರಂಗಿಣಿಯಲ್ಲಿ 'ನಳಮಹಾರಾಜನು ಬೇಟೆಗೆ ಹೊರಡುವ ಮುನ್ನ ಆಭರಣಾದಿಗಳನ್ನು ಧರಿಸಿಕೊಂಡು ಸಿದ್ಧನಾಗುತ್ತಾನೆ. ಇಲ್ಲಿ ಬೇಡರಪಡೆಯ ಆಭರಣಾದಿ ಬಗೆಗೆ ತಿಳಿಸಿಲ್ಲ(೨-೧೧). ಕಾವ್ಯಗಳಲ್ಲಿ ತಲೆ, ಕಿವಿ, ಮೂಗು, ಕೊರಳು, ಸೊಂಟ, ತೋಳು, ಕೈಕಾಲು, ಬೆರಳುಗಳಿಗೆ ಆಭರಣಗಳನ್ನು ಧರಿಸುತ್ತಿದ್ದರು. ಹರಿಹರ ಚಂದ್ರೋದಯವನ್ನು ವರ್ಣಿಸುವಾಗ ಬಳಸುವ ಅಂಬರದ ಪುಳಿಂದಿ ತಾಳ್ದಿಸೆವ ಮೂಗಿನತ್ತು ಎಂಬ ಮಾತಿನಲ್ಲಿ ಮೂಗುತಿಯ ಪ್ರಸ್ತಾಪವಿದೆ. ಹಿಂದೂಧರ್ಮಕ್ಕೆ ಸಂಬಂಧಪಟ್ಟವೆ ಹೆಚ್ಚು. ಶಿಲ್ಪಕಲೆಯಲ್ಲಿ ತಲೆಗೆ-ಮುತ್ತಿನ ಓಲೆ, ಸೀಮಂತ ಮಣಿ, ಕಿವಿಗೆ-ಕರ್ಣಕುಂಡಲ, ಕರ್ಣಿಕೆ, ಕರ್ಣಪೂರ, ಕೊರಳಿಗೆ-ತಾರಾಹಾರ, ಚಂದ್ರಹಾರ, ಮಣಿಹಾರ, ಮುತ್ತಿನಹಾರ, ಮುತ್ತಿನೇಕಾವಳಿ, ತೋಳಿಗೆ-ಬಾಹುಪೂರ ತೋಳಬಂದಿ, ಕೈಗೆ - ಕಂಕಣ, ತೋಡೆ, ಬಳೆ, ಸೊಂಟಕ್ಕೆ-ಕಟಿಸೂತ್ರ, ಕಾಂಚೀದಾಮ, ರಶನ, ಒಡ್ಯಾಣ, ಮೇಖಲೆ, ಕಾಲುಗೆ- ಮಂಜೀರಕ, ನೂಪುರ, ಅಂದುಗೆ, ತೋಡೆ ಇತ್ಯಾದಿ, ಬೆರಳಿಗೆ - ಉಂಗುರ, ಮುದ್ರಿಕೆ ಶ್ರೀಮಂತ ವ್ಯಕ್ತಿಗಳು ತೊಡುವ ಆಭರಣಗಳಾಗಿದ್ದವು. ಭಾರವಿ, ಪಂಪ, ಕುಮಾರವ್ಯಾಸ, ವಿರೂಪಾಕ್ಷಪಂಡಿತ ಮುಂತಾದವರು ಕಿರಾತಾರ್ಜುನೀಯ ಸನ್ನಿವೇಶವನ್ನು ತಿಳಿಸಿದ್ದಾರೆ. ವಿರೂಪಾಕ್ಷಪಂಡಿತ ಕಿರಾತ ರೂಪ ಧರಿಸಿ ಶಿವನು ಅರ್ಜುನನನ್ನು ಎದುರಿಸುವ ಮತ್ತು ಆತನಿಗೆ ಪಾಶುಪತಾಸ್ತ್ರವನ್ನು ದಯಪಾಲಿಸುವ ಕಥಾ ಚೌಕಟ್ಟಿನೊಳಗೆ ಬೇಟೆಯ ಉಲ್ಲೇಖವಿದೆ. ಚೆನ್ನಬಸವಪುರಾಣದಲ್ಲಿ ಬೇಟೆಗಾರರು ಬೇಟೆಯಾಡುವಾಗ ಮೊಗವಾಡಗಳನ್ನು ಧರಿಸುತ್ತಿದ್ದರೆಂಬ ಕುತೂಹಲಕಾರಿ ಸಂಗತಿಯಿದೆ.

೫.೨ ನಂಬಿಕೆ, ಆಚರಣೆ

ಚರಿತ್ರೆಯಲ್ಲಿ ಮಧ್ಯಕಾಲವು ಭಯಾನಕ ತಿರುವನ್ನು ತಂದುಕೊಟ್ಟಿದೆ. ಹೀಗಾಗಿ ಅನೇಕ ಬದಲಾವಣೆ ವ್ಯತ್ಯಾಸಗಳನ್ನು ಈ ಹಂತದಲ್ಲಿ ಗುರುತಿಸಬಹುದು. ದೇಶೀಯತೆ, ವಿದೇಶಿಯರ ಆಗಮನ ಸ್ಥಳೀಯರಲ್ಲಾದ ವಿವಿಧ ಪಲ್ಲಟಗಳು ಇಲ್ಲಿನ ಪ್ರಮುಖ ಸಂಗತಿಗಳು. ಆದರೂ ಕನ್ನಡದ ಕವಿಗಳು ಛಂಧಸ್ಸಿನ ಬಂಧನಕ್ಕೊಳಗಾಗಿ ತಮ್ಮ ಕಾವ್ಯಗಳಲ್ಲಿ ಸಾಂಸ್ಕೃತಿಕ ಸಂಗತಿಗಳನ್ನು ತಿಳಿಸುವಾಗ ಎಲ್ಲವನ್ನೂ ದಾಖಲಿಸಿದ್ದಾರೆಂಬುದನ್ನು ಒತ್ತಿ ಹೇಳುವಂತಿಲ್ಲ. ಅಲ್ಲಲ್ಲಿ ಕಾವ್ಯ ಲಕ್ಷಣಗಳನ್ನು ತಿಳಿಸುವಾಗ ಹೊರಗಿನ ರೂಢಿ, ಸಂಪ್ರದಾಯಗಳನ್ನು ಸೂಕ್ಷ್ಮೀಕರಿಸಲಾಗಿದೆ.

ಪರಂಪರೆ, ತಲೆಮಾರುಗಳಿಂದ ಅನೂಚಾನವಾಗಿ ರೂಢಿಸಿಕೊಂಡು ಬಂದ ಪದ್ಧತಿಗಳನ್ನು ಒಂದು ಕಾಲಘಟ್ಟದಲ್ಲಿ ಪ್ರಶ್ನಿಸುವ ಹಕ್ಕು ಜನರಿಗೆ ಬಿಟ್ಟದ್ದು. ಆ ಮೂಲಕ ಕೈ ಬಿಡುವ, ಬದಲಾಯಿಸುವ ಕ್ರಮಗಳು ಸಂಭವಿಸುತ್ತವೆ. ಇಲ್ಲಿ ಪರಸ್ಪರ ಒಂದನ್ನೊಂದು ಅವಲಂಬಿಸುವ, ನಂಬುವ ಪರಿಪಾಟು ಆದಿಕಾಲದಿಂದಲೂ ಬಂದಿದೆ. ಮಾನವರ ನಡುವಿನ ಸಂಬಂಧವನ್ನು ಕೊಂಡಿಯಂತೆ ಉತ್ತಮಗೊಳಿಸುವುದು ನಂಬಿಕೆ. ಪರ್ಯಾಯವಾಗಿ ವಿಶ್ವಾಸ, ಸ್ನೇಹ, ಬಾಂಧವ್ಯ ಎಂಬುದಾಗಿ ಪರಿಗಣಿಸಬಹುದು. ಇಲ್ಲಿ ಬುಡಕಟ್ಟು ಜನರು ಸಾಮೂಹಿಕವಾಗಿ ಗಿರಿ-ಕಂದರಗಳಲ್ಲಿ ವಾಸಿಸುವಾಗ ಈ ಮಾರ್ಪಾಟುಗಳನ್ನು ಮಾಡಿಕೊಳ್ಳುತ್ತಾರೆ. ಒಬ್ಬರನ್ನೊಬ್ಬರು ನಂಬಿ ಔನ್ನತ್ಯವನ್ನು ಸಾಧಿಸುವ ಪ್ರಕ್ರಿಯೆ ಹಿಂದಿನಿಂದ ಬೆಳೆದುಬಂದಿದೆ.

ಸೀತೆಯು ಮಾಯದ (ಚಿಗರೆ) ಜಿಂಕೆಯನ್ನು ಕಂಡು ಅದರ ಚರ್ಮ ಬೇಕು ಎಂದಾಗ ಶ್ರೀ ರಾಮಚಂದ್ರನು ಕಾಡುಮೇಡನ್ನು ಲೆಕ್ಕಿಸದೆ ಅಲೆದಾಡಿದ. ಆಗ ತನ್ನ ತಮ್ಮ ಲಕ್ಷ್ಮಣನನ್ನು ಸೀತೆಯ ಜವಾಬ್ದಾರಿ ನೋಡಿಕೊಳ್ಳಲು ಬಿಟ್ಟ. ಇಲ್ಲಿ ತನ್ನ ತಮ್ಮನಲ್ಲಿರುವ ಚಾರಿತ್ರ್ಯವನ್ನು ಅರಿತು ನಿರ್ಧರಿಸಿದನೆಂಬುದು ಸ್ಪಷ್ಟ. ಹಾಗೆಯೇ ಮಹಾಭಾರತದ ದುರ್ಯೋಧನನು ತನ್ನ ಆತ್ಮೀಯ ಸ್ನೇಹಿತನಾದ ಕರ್ಣನನ್ನು ಜಗತ್ತಿನ ಎಲ್ಲ ವಸ್ತು, ವಿಷಯ, ವ್ಯಕ್ತಿಗಳಿಗಿಂತ ಹೆಚ್ಚಾಗಿ ನಂಬಿದ್ದನು. ತಮ್ಮ ತಮ್ಮಲ್ಲಿ ನಂಬಿಕೆ ಇಡುವುದು ಸಹಜವೇನಲ್ಲವಾದರೂ, ವಿರೋಧಿಗಳಲ್ಲಿ ನಂಬಿಕೆ ಇಡುವುದು ಸಾಹಸದ ಕೆಲಸ. ಹೀಗೆ ಪುರಾಣ, ಕಾವ್ಯಗಳಲ್ಲಿ ಉಲ್ಲೇಖಗಳ ಆಗರವೇ ತುಂಬಿದೆ.

ಬೇಡ ಜನಾಂಗದವರು ಬೇಟೆಗಾರಿಕೆ ಹಂತದಲ್ಲಿ ನಂಬಿಕೊಂಡ ಸಂದರ್ಭಗಳು ರೋಮಾಂಚನ ಕಾರಿಯಾದವು. ಬೇಟೆಗೆ ಹೋಗುವಾಗ ಕಾಡಿನ ಯಾವುದೋ ಒಂದು ದೇವತೆಯನ್ನು ಪೂಜಿಸುವಲ್ಲಿ ನಿರತರಾಗುತ್ತಾ, ಅದನ್ನು ಮುಂದಿನ ಆರಾಧ್ಯ ದೇವತೆಯಾಗಿ ನಂಬಿ ಆಚರಣೆಗಳನ್ನು ಮಾಡುತ್ತಾರೆ. ಬೇಟೆಗೆ ಹೋಗುವ ಮುನ್ನ ದೇವತೆಗೆ ಕೈಮುಗಿದು, ಬೇಟೆಯಿಂದ ಫಲಕಾರಿಯಾದರೆ ಬೇಟೆಯ ಅರ್ಧಭಾಗವನ್ನು ಆ ದೇವತೆಗೆ ಎಡೆಮಾಡುತ್ತಿದ್ದರು. ಹೀಗೆ ಕಳ್ಳತನ, ದರೋಡೆ, ಕೊಲೆ-ಸುಲಿಗೆ ಮಾಡಿದ ವ್ಯಕ್ತಿಗಳು ಒಂದು ದೇವತೆಯ ಮೊರೆಹೋಗಿ ಬಲಿ ನೀಡುವಲ್ಲಿ ನಿರತರಾಗುತ್ತಾರೆ. ನಂತರ ಶಕ್ತಿದೇವತೆಗಳ ಪೀಠಗಳು ಬಲಗೊಂಡವು. ದುಷ್ಟರನ್ನು ಶಿಕ್ಷಿಸುವ, ಶಿಷ್ಟರನ್ನು ಪರಿಪಾಲನೆ ಮಾಡುವ ಸಂದರ್ಭಗಳು ನಂಬಿಕೆಯಿಂದ ಸಂಭವಿಸುತ್ತವೆ ಎಂದು ಈ ಹಿನ್ನೆಲೆಯಲ್ಲಿ ಹೇಳಬಹುದು. ತಿರುಪತಿ ತಿಮ್ಮಪ್ಪನನ್ನು ಬೇಡರು ಬೇಟೆಗಾರರ ದೇವರೆಂದು ಕರೆದುಕೊಂಡಿರುವುದು ಸತ್ಯ ಸಂಗತಿ'.[೨]

ಬೇಟೆಯಲ್ಲಿ ಅನೇಕ ಆಚರಣೆಗಳನ್ನು ರೂಢಿಸಿಕೊಂಡಿರುವರು. ಬೇಟೆಗೆ ಹೋಗುವಾಗ ಊರಿನ ಬುಡ್ಡೆಕಲ್ಲಿಗೆ ಪೂಜಿಸುವುದು. ಬಿಲ್ಲು-ಬಾಣ, ಭರ್ಚಿ, ಕೊಡಲಿ, ಇತ್ಯಾದಿ ಅಸ್ತ್ರಗಳು ಪ್ರತಿನಿತ್ಯ ಪೂಜಾರ್ಹಗೊಳ್ಳುತ್ತವೆ. ಹೀಗೆ

ಸಾಂದರ್ಭಿಕವಾಗಿ ಬೇಟೆಗಾರರು ನಂಬದ ಮತ್ತು ಆಚರಣೆಗೆ ಒಳಗಾದ ಪದ್ಧತಿಗಳು ಇಂದಿಗೂ ಹೆಮ್ಮರವಾಗಿ ಬೆಳೆದಿವೆ. ಬೇಟೆಯ ಮೂಲಕವೇ ವಿವಿಧ ಕ್ರೀಡೆಗಳು ವಿಕಾಸ ಹೊಂದಿದವು. ಬೇಟೆಯೇ ಎಲ್ಲ ಚಟುವಟಿಕೆಗಳಿಗೆ ಮೂಲಬೇರು ಎನ್ನುವುದು ಸ್ಪಷ್ಟವಾಗಿದೆ.

ವಸಂತಕಾಲ ಮುಗಿದಾಗ ಗ್ರೀಷ್ಮಋತುವಿನಲ್ಲಿ ಬೇಟೆಗೆ ಉತ್ತಮ ಕಾಲ ಎಂದು ಬೇಟೆಗಾರರ ನಂಬಿಕೆಯಾಗಿತ್ತು. ಅರಣ್ಯನಾಶವಾದರೆ ಕಾಡು ಪ್ರಾಣಿಗಳು ಬೇಸಾಯದ ನೆಲೆಗೆ ಧಾಳಿ ಇಡುವುದನ್ನು ನಂಬಿದ್ದರು. ಹಂದಿಯ ಚರ್ಮವು ಹೆಚ್ಚುರೋಗಗಳಿಂದ ಕೂಡಿದ್ದರೆ ಬೇಟೆಗಾರನ ಗುರಿತಪ್ಪುವ ಸಾಧ್ಯತೆ ಇದೆ. ಪಂಪನು ಬಲ್ಲುಗಾರ ಮತ್ತು ಅರ್ಜುನನಿಗೆ ಹಂದಿಗಳಲ್ಲಿ ರೋಮವೇ ಇಲ್ಲ. ಬೇಟೆ ಸೂಕ್ತಕಾಲವೆಂಬ ಆಶಯ ವ್ಯಕ್ತಪಡಿಸಿದ್ದಾನೆ. ಕವಿಯ ಆಶಯ, ನಂಬಿಕೆ, ರೂಢಿ, ಪದ್ಧತಿ, ಸಂಪ್ರದಾಯಗಳನ್ನು ಪ್ರತಿನಿಧಿಸಿದೆ.

ಜನ್ನನ ಯಶೋಧರ ಚರಿತೆಯಲ್ಲಿ ಭವಾವಳಿ ಮೂಲಕ ಕಥೆ, ಉಪಕಥೆಗಳಲ್ಲಿ ಗರ್ಭಿಣಿ ಆಡನ್ನು ಕೊಂದಾಗ, ಅದು ಕೋಣವಾಗುವ ಬಗೆ ಇದೆ. ಶಬ್ದಮಣಿದರ್ಪಣದಲ್ಲಿ ವೃದ್ಧನಾದಂತೆ ಬೇಡ ಬಿಲ್ಲನ್ನು ಎತ್ತುವಲ್ಲಿ ದುರ್ಬಲನಾಗುವ ನಂಬಿಕೆ ಸಾಮಾನ್ಯವಾಗಿದೆ. ಹರಿಹರನ ಗಿರಿಜಾಕಲ್ಯಾಣದಲ್ಲಿ ಪ್ರಾಣಿಗಳ ಉಪಾಯ ಅರಿತು ಬೇಟೆಯಾಡುವುದು ಬೇಟೆಗಾರನ ಊಹೆಯಾಗಿದೆ. ಕರ್ಣಪಾರ್ಯನ ನೇಮಿನಾಥಪುರಾಣದಲ್ಲಿ ದಿಗಂಬರಚಾರಣಯತಿಗಳನ್ನು ಅಪೂರ್ವ ಮೃಗವೆಂದು ನಂಬಿ ಕೊಲ್ಲುವ ದೃಶ್ಯ ಮನಕಲಕುವಂತಿದೆ. ಚೌಂಡರಸನ ಅಭಿನವ ದಶಕುಮಾರ ಚರಿತ್ರೆಯಲ್ಲಿ ಬೇಟೆಯು ಯಶಸ್ವಿಯಾಗಿ, ಸಿದ್ಧಿಗಾಗಿ ಪ್ರಾಣಿ ಬಲಿಯನ್ನು ಕೊಡುವ ನಂಬಿಕೆಯಿದೆ. ಲಕ್ಷ್ಮೀಶ ಜೈಮಿನಿ ಭಾರತದಲ್ಲಿ ಸಿಂಹ ಬೇಡತಿಯನ್ನು ಆನೆ ಎಂದು, ಸಿಂಹವೆಂದು, ಹುಲ್ಲೆಯೆಂದು ನಂಬಿ ಹಾರಿಬೀಳುವ ಚಿತ್ರಣ ಗಮನಾರ್ಹ. ಷಡಕ್ಷರದೇವನ ರಾಜಶೇಖರವಿಳಾಸದಲ್ಲಿ ಬೇಡನ ಹೆಂಡತಿ ಮುನಿದಿದ್ದಳಾದರೂ ಮನೆಯಲ್ಲಿರದೆ ಗಂಡನೊಂದಿಗೆ ಬೇಟೆಗೊಗುವ ನಂಬಿಕೆ, ಪದ್ಧತಿ ಇತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ್ ಸೌಗಂಧಿಕ ಪರಿಣಯದಲ್ಲಿ ೬ ಬಗೆಯ ಬೇಟೆಯ ವಿಧಗಳನ್ನು ಪಾಲಿಸಿದರೆ ಧರ್ಮಾರ್ಥಕಾಮ ಮೋಕ್ಷಗಳು ಲಭಿಸುತ್ತವೆಂದು ಹೇಳಿದ್ದಾನೆ.

ಬೇಟೆಗಾರರು ಬೇಟೆಯನ್ನು ಪಡೆಯಲು ಪ್ರಕೃತಿಯಲ್ಲಿ ಮರ, ಗಿಡ, ಕಲ್ಲುಗಳಿಗೆ ಆರಾಧಿಸುವ ಕ್ರಮವು ಗಣನೀಯವಾದುದು. ಬೇಟೆಯ ನಂಬಿಕೆ ಮೂಲಕ ರೂಢಿ, ಪದ್ಧತಿ, ಆಚರಣೆ ಮತ್ತು ಸಂಪ್ರದಾಯಗಳು ಬೆಳೆದವು. ಬೇಟೆ ಪರಂಪರೆಯಿಂದ ಬಂದ ವೃತ್ತಿ. ವಾಲ್ಮೀಕಿ ಬೇಡನಾದುದರಿಂದ ಅವನ ವೃತ್ತಿಗೆ ಸಂಬಂಧಿಸಿದ ಜನಾಂಗವು ವಾಲ್ಮೀಕಿ ಜಯಂತಿಯನ್ನು ಆಚರಿಸುತ್ತಾರೆ. ಅದೇ ರೀತಿ ೬೩ ಶೈವ ಪುರಾತನರಲ್ಲಿ ಒಬ್ಬನಾದ ಬೇಡರಕಣ್ಣಪ್ಪನು ಬೇಟೆಗಾರನಾದ್ದರಿಂದ ಶಿವರಾತ್ರಿಯಂದು ಅವನ ಆರಾಧನೆ ಮಾಡುವರು. ಹೀಗೆ ಕರ್ನಾಟಕದಲ್ಲಿ ಕುಮಾರರಾಮನ ವಂಶೀಕರೆಂದು ಹೇಳಿಕೊಳ್ಳುವ ಜರಿಮಲೆ, ಗುಡೆಕೋಟೆ, ಪಾಳಯಗಾರರಲ್ಲದೆ, ಇತರ ನಾಯಕ ಜನಾಂಗದ ಮಳೆಲಾರು ಬೇಟೆಯಲ್ಲಿ ನಿಪುಣರು. ಇವರು ಕುಮಾರರಾಮನನ್ನು ಆರಾಧಿಸುತ್ತಾರೆ.

ಬೇಡರು ಮೊದಲಿನಿಂದಲೂ ತಿರುಪತಿ ತಿಮ್ಮಪ್ಪನನ್ನು ಬೇಟೆಗಾರರ ದೇವರೆಂದು ಪೂಜಿಸಿಕೊಂಡು ಬಂದಿದ್ದಾರೆ. ಕರ್ನಾಟಕದಲ್ಲಿ ಬೇಡ ಜನಾಂಗ ಗಾದರಿಪಾಲನಾಯಕ ಎಂಬ ವೀರನ ಬಿಲ್ಲನ್ನು ದೇವರ ಪ್ರತೀಕವೆಂದು ಚಿತ್ರದುರ್ಗ ಜಿಲ್ಲೆಯಲ್ಲಿ ಆರಾಧಿಸುತ್ತಾರೆ. ಬೇಡರಲ್ಲೊಬ್ಬ ಬೇಟೆಯಲ್ಲಿ ಮಡಿದರೆ ಅವನ ಸಮಾಧಿ, ವೀರಗಲ್ಲಿಗೆ ಪೂಜೆಸಲ್ಲಿಸಿ, ವರ್ಷಕ್ಕೊಮ್ಮೆ ಹಿರಿಯರ ಹಬ್ಬ ಮಾಡುವರು. ಕರ್ನಾಟಕದಲ್ಲಿ ಬೇಟೆಯಲ್ಲಿ ಮಡಿದ, ಹೋರಾಡಿದ ವೀರರ ಉಲ್ಲೇಖನಗಳನ್ನು ನೋಡಬಹುದು. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಯರಮಂಚಯ್ಯನೆಂಬ (ಪೆದ್ದಯ್ಯ) ವೀರ ಚಿರತೆಯೊಡನೆ ಹೋರಾಡಿದ ವಿವರವಿದೆ. ದಕ್ಷಿಣಕನ್ನಡದಲ್ಲಿ 'ಕೆಡ್ಡಸ'ವೆಂಬ ಹಬ್ಬ ಬೇಟೆಯ ಉದ್ದೇಶದಿಂದ ಮಹತ್ವ ಪಡೆದಿದೆ. ಆ ದಿನ ಬೇಟೆ ದೇವರನ್ನು ಪೂಜಿಸುತ್ತಾರೆ. ದೇವಾಲಯದಲ್ಲಿ ಜಾತ್ರೆ ಮುಗಿದಾಗ ದೇವರು ಮೃಗಬೇಟೆಗೆ ಹೋಗುತ್ತದೆ. ದೇವರೇ ನಿಜವಾದ ಬೇಟೆಗಾರನೆಂಬ ನಂಬಿಕೆಯಿದೆ. ಬೇಡರು ಯುಗಾದಿ ಅಮವಾಸ್ಯೆಯಂದು ಹಂದಿಬೇಟೆ ಆಚರಿಸುವುದು ಗಮನಾರ್ಹ. ನಂತರ ಗೌರಸಮುದ್ರದ ಮಾರಮ್ಮ, ನಾಯಕನಹಟ್ಟಿ ತಿಪ್ಪೇಸ್ವಾಮಿ ಇತರ ಗ್ರಾಮದೇವತೆಗಳಲ್ಲಿ ಬೇಟೆಯನ್ನು ಕಡಿದು ಪರುವು ಮಾಡುವ ಆಚರಣೆ ಬೆಳೆದಿದೆ.

೫.೩. ಆಯುಧೋಪಕರಣ

ಇತಿಹಾಸ ಪೂರ್ವಕಾಲದ ಮಾನವ ತನ್ನ ಬುದ್ದಿ ಮತ್ತು ಶಕ್ತಿ ಸಾಮರ್ಥ್ಯದಿಂದ ಆಯುಧಗಳ ತಂತ್ರಜ್ಞಾನವನ್ನು ಕಂಡುಹಿಡಿದ. ಹೀಗೆ ಲೋಹಗಳಿಂದ ಸಾಂಪ್ರದಾಯಿಕ ಆಯುಧ ತಯಾರಕರಾಗಿ ಕ್ರಮೇಣ ಬೆಳವಣಿಗೆ ಹೊಂದಿದರು. ಈ ಆಯುಧಗಳಿಂದ ಮಿಲಿಯನ್ ವರ್ಷಗಳ ಹಿಂದಿನಿಂದಲೂ ದೊಡ್ಡ ಗಾತ್ರದ ಕಾಡುಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು.[೩]

ಕೆಲವು ಮಿಲಿಯನ್ ವರ್ಷಗಳ ನಂತರ ಮಾನವ ಬೆಂಕಿಯನ್ನು ಸ್ವತಃ ಉತ್ಪಾದಿಸುವುದನ್ನು ಕಂಡುಹಿಡಿದದ್ದು ಪ್ರಶಂಸನೀಯ ಕಾರ್ಯ. ಸುಮಾರು ೧೦೦,೦೦೦ ಕ್ರಿ.ಪೂ.ದಿಂದ ೧೦,೦೦೦ ಕ್ರಿ.ಪೂ.ವರೆಗೆ ಹಿಮಯುಗ (Ice age) ಇತ್ತು. ಈ ಯುಗದಲ್ಲಿ ಪ್ರಮುಖವಾಗಿ ಯುರೋಪ್, ಸ್ಪೈನ್, ಫ್ರಾನ್ಸ್‌ಗಳಲ್ಲಿ ಬೇಟೆಯಿಂದ ದಂತ, ಚರ್ಮ, ಕೋರೆಹಲ್ಲು, ಕಟ್ಟಿಗೆ, ಸಂಗ್ರಹಿಸುತ್ತಿದ್ದನ್ನು ತಿಳಿಸಲಾಗಿದೆ. ಪೂರ್ವ ಮೆಡಿಟರೇನಿಯನ್ ಮತ್ತು ಮಧ್ಯಪ್ರಾಚ್ಯದಲ್ಲಿ ೧೦,೦೦೦ ಮತ್ತು ೪೦೦೦ ಕ್ರಿ.ಪೂ. ದಲ್ಲಿ ಮೂಲಭೂತ ಬದಲಾವಣೆಗಳಾದವು. ಆರ್ಥಿಕವಾಗಿ ಬೇಟೆಗಾರರು ಅಲ್ಲಿ ರೈತರಾದರು. ಕೌಟುಂಬಿಕವಾಗಿ ಪ್ರಾಣಿಗಳ ಸಾಕಣೆ, ಬೆಳೆಗಳಿಂದ ವಲಸೆ ಹಾಗೂ ವಿಸ್ತರಣೆಯಲ್ಲಿ ತೊಡಗಿದರು. ಆಗಿನ ಕಾಲದ ಕಟ್ಟಡಕ್ಕೆ ಕಲ್ಲು ಬಳಸುವ ತಂತ್ರಜ್ಞಾನ ಬೆಳೆಯಿತು. ಅಲ್ಲದೆ ಸುಟ್ಟ ಇಟ್ಟಿಗೆಯ ನಿರ್ಮಾಣದಲ್ಲಿ ತೊಡಗಿದ್ದು ಸ್ಪಷ್ಟ. ಮಡಿಕೆ ಮಾಡುವ ಕುಂಬಾರಿಕೆ ಅಭಿವೃದ್ಧಿಯಾಯಿತು. ಆ ಕಾಲದಲ್ಲಿ ಬೇಟೆಗಾರರು ವೃತ್ತಾಕಾರದ ಮನೆ ನಿರ್ಮಿಸುತ್ತಿದ್ದರು. ದಟ್ಟವಾದ ಕಾಡು ಕಡಿದು ಉಳುಮೆ ಮಾಡುವುದು ಬೆಳೆದುಬಂದಂತೆ ಹೆಚ್ಚು ಕಡಿಮೆ ಭಾರತದಲ್ಲಿ ಈ ಲಕ್ಷಣಗಳು ಕಂಡುಬಂದಿವೆ.

ಕಲ್ಲು, ಮೂಳೆಗಳ ಬಳಕೆಯ ನಂತರ ಧನುರ್ವಿದ್ಯೆಯ ಉದಯಕ್ಕೆ ಕಾರಣವಾಯಿತೆಂದು ಹೇಳಲಾಗಿದೆ. ಪ್ರಾಣಿಗಳ ಚರ್ಮ, ಕಾಡುಹುಲ್ಲು, ಬಿದಿರು, ಮರದ ಕೋಲುಗಳಿಂದ : ಬಿಲ್ಲು-ಬಲೆ, ಹಗ್ಗಗಳಾಗಿ ಚೂಪಾದ ಭಲ್ಲೆಯನ್ನು ಮಾಡುತ್ತಿದ್ದರು. ಶಿಲಾಯುಗದಿಂದಲೂ ಉಪಕರಣಗಳು ಅತಿ ಮಹತ್ವ ಪಡೆದಿವೆ. 'ನಿಯಾಂಡರ್ ಥಾಲ್' ಕಾಲದಲ್ಲಿ ಬೇಟೆ ಉಪಕರಣಗಳ ಬಳಕೆಗೆ ಅನುಕೂಲವಾಗಿದ್ದವು. ಸಿಂಧೂ ಸಂಸ್ಕೃತಿಯಲ್ಲಿ ಕಬ್ಬಿಣದ ಬಳಕೆ ಕಂಡುಬರುವುದಿಲ್ಲ. ಆರ್ಯರ ಕಾಲದಲ್ಲಿ ಇದು ಗಂಗಾನದಿಯ ಬಯಲಿನಲ್ಲಿ ಪ್ರಯೋಗವಾಗಿರಬೇಕು. ಕಬ್ಬಿಣದಿಂದ ಗುದ್ದಲಿ, ಕೊಡಲಿ, ಈಟಿ, ಖಡ್ಗಗಳನ್ನು ಮಾಡಿಕೊಂಡು ಬಳಸುತ್ತಿದ್ದರು. ಬಿಲ್ಲು, ಬಾಣ, ಈಟಿ, ಖಡ್ಗ, ಕವಣೆ, ಗಾಳ, ಬಲೆ ಮೊದಲಾದವು ಹೊಸ ತಂತ್ರಕ್ಕೆ ಬಂದಾಗ ಬೇಟೆ ಗತಿ ಬದಲಾಯಿತು. ಆಧುನಿಕವಾಗಿ ಕೋವಿ ಬಂದಾಗ ಬೇಟೆ ಸಾಧನ ಸುಲಭವಾಗಿ ಆಯಿತು.

ಭಾರತದಲ್ಲಿ ಮಾನವ ಹಸಿವನ್ನು ಇಂಗಿಸಿಕೊಳ್ಳಲು ಅನ್ನಮಾರ್ಗಗಳನ್ನು ಕಂಡುಕೊಳ್ಳುವಲ್ಲಿ ಬೇಟೆ ಮೊದಲನೆಯದಾಯಿತು. ಬೇಟೆಯಾಡುವ ತಾಂತ್ರಿಕ ಪ್ರಯತ್ನ, ಹಲವಾರು ಶೋಧನೆಗಳನ್ನು ಮಾಡಿ, ಹೊಸ ಬಗೆಯ ಬೇಟೆ ವಿಧಾನಕ್ಕೆ ಪಯಣಿಸಿದ. ತನ್ನ ಕೈಯಿಂದ ನಿಲುಕಲಾರದ ಪ್ರಾಣಿ, ವಸ್ತುಗಳನ್ನು ಪಡೆಯಲು ಸನ್ನೆ, ಸಹಾಯಕ್ಕೆ ಆಯುಧಗಳ ಬಳಕೆಗೆ ಮುಂದಾದ. ಮೊದಲಿಗೆ ಕಲ್ಲಿನ ಕೊಡಲಿ, ಬಾಚಿ, ಮಚ್ಚುಗಳಿಂದ ಸಿಕ್ಕ ಆಹಾರವನ್ನು ಕುಟ್ಟಿ ತಿನ್ನುವುದು ಶಿಲಾಯುಗ ಸಂಸ್ಕೃತಿಯಲ್ಲಿತ್ತು. ಅನಂತರ ಮರದ ಉಪಕರಣಗಳಿಂದ ಬಿಲ್ಲು-ಬಾಣಗಳನ್ನು ಮಾಡಿಕೊಂಡಾಗ ಬೇಟೆಗೆ ಒಂದು ಹೊಸ ತಿರುವು ಬಂತು. ಹೀಗೆ ಅನಾದಿಕಾಲದಿಂದಲೂ ಮಾನವ ವಿವಿಧ ಬಗೆಯ

ಆಯುಧೋಪಕರಣಗಳನ್ನು ಹಂತ ಹಂತವಾಗಿ ಕಂಡುಕೊಂಡ ನಂತರ ಬದುಕು ಸಹ ಬದಲಾಯಿತು. ಬೆಂಕಿ ಕಂಡುಕೊಂಡಾಗ ಮಾಂಸವನ್ನು ಸುಟ್ಟು ತಿನ್ನುವುದು ಬೆಳೆಯಿತು. ಈ ಹಿನ್ನೆಲೆಯಲ್ಲಿ ಆಯುಧೋಪಕರಣಗಳಿಂದ ಕೃಷಿಯ ಚಟುವಟಿಕೆಗಳು ಹೆಚ್ಚಾದವು. ಬೇಟೆಯ ಬಳಕೆಯಿಂದ ಪಶುಪಾಲನೆ, ಕೃಷಿಗೆ ಆಯುಧಗಳ ಮೂಲಕ ಆಧುನಿಕ ಜಗತ್ತಿಗೆ ಬೇಟೆಗಾರರು ಕಾಲಿಟ್ಟರು. ಶಾಸನ ಮತ್ತು ಕಾವ್ಯಗಳಲ್ಲಿ ಆಯುಧಗಳ ಪ್ರಸ್ತಾಪವಿರುವುದು ಕಂಡುಬರುತ್ತದೆ.

ಈ ಆಯುಧಗಳ ಬಳಕೆಯ ಇತಿಹಾಸ, ಪ್ರಾಗೈತಿಹಾಸಿಕ ಕಾಲಗಳಿಂದ ಆರಂಭವಾಗಿವೆ ಎನ್ನಲಾಗಿದೆ. ನಂತರ ಮಾನವನ ಜೀವನದಲ್ಲಿ ಇವು ಬಹುಮುಖ್ಯಪಾತ್ರ ವಹಿಸಿದವು. ಆರಂಭದ ಆಯುಧಗಳು ಕಲ್ಲಿನಲ್ಲಿ ಮಾಡಿದವುಗಳಾದರೆ, ಸು.೨ನೆಯ ಸಹಸ್ರಮಾನದ ಉತ್ತರಾರ್ಧದಲ್ಲಿ ತಾಮ್ರ -ಕಂಚಿನ ಆಯುಧಗಳು, ಸುಮಾರು ೧ನೆಯ ಸಹಸ್ರ ಮಾನದಾರಂಭದಲ್ಲಿ ಕಬ್ಬಿಣದ ಆಯುಧಗಳು ಬಳಕೆಗೆ ಬಂದವು. ಮಾನವನ ಉದಾತ್ತ ಪ್ರವೃತ್ತಿಗಳು ಮೇಳೈಸಿದಾಗ ಎಲ್ಲಕ್ಕಿಂತಲೂ ಕಬ್ಬಿಣದ ಆಯುಧಗಳನ್ನು ಅವಲಂಬಿಸಿದ.

ಆಯುಧಗಳ ತಯಾರಿಕೆ ಕಾಲಕಾಲಕ್ಕೆ ಬದಲಾಯಿತು. ಬಿಲ್ಲನ್ನು ತಾಳವೃಕ್ಷ ಅಥವಾ ಬೊಂಬಿನಿಂದ ಮಾಡುತ್ತಿದ್ದರೆಂದು ಶಾಸನಗಳು ಉಲ್ಲೇಖಿಸುತ್ತವೆ. ಈ ತಾಳವೃಕ್ಷದ ಬಿಲ್ಲನ್ನು ಕಾರ್ಮುಕ ಎನ್ನುತ್ತಿದ್ದರು. ಕನ್ನಡಿಗರು ಬಳಸುತ್ತಿದ್ದ ಬಿಲ್ಲುಗಳು ೩-೪ ಅಡಿ ಎತ್ತರವಾಗಿರುತ್ತಿದ್ದವು. ಬಾಣಗಳನ್ನು ಕಬ್ಬಿಣದಿಂದ ತಯಾರಿಸುತ್ತಿದ್ದರು. ಬಳಿಯೆಂಬು, ಕೋಲಂಬು, ಸುಂಗುಲಂಬು ಮೊದಲಾದ ಬಾಣದ ಹಲವಾರು ಪ್ರಭೇದಗಳ ಹೆಸರುಗಳು ಶಾಸನಗಳಲ್ಲಿವೆ.

ಕನ್ನಡ ಕಾವ್ಯಗಳಲ್ಲಿ ಕೆಲವು ಬೇಟೆಯ ಉಪಕರಣಗಳ ಬಳಕೆಯನ್ನು ನೋಡಬಹುದು:

೧. ಬೇಟೆಯನ್ನು ಪ್ರಾಣಿ ಪ್ರಾಣಿಗಳೇ ಆಡುವುದು ಮತ್ತು ಬೇಟೆಗಾರ ಮತ್ತು ಆಡಿಸುವುದು (ನಾಯಿ, ಹುಲಿ, ಚಿರತೆ, ತೋಳ)

೨. ಉಪಕರಣಗಳ ಸಹಾಯದಿಂದ ಶಿಲಾಯುಧ, ಬಿಲ್ಲು-ಬಾಣ, ಕೂಳಿ ಮತ್ತು ಬೇಡರಪಡೆ, (ಬಲೆ, ಬಂದೂಕು) ವ್ಯಕ್ತಿ ನೇರವಾಗಿ ಬೇಟೆಯಾಡುವುದು.

ಮೂರು ವಿಧದ ಬೇಟೆಗಳಲ್ಲಿ ನೆಲ, ನೀರು ಮತ್ತು ಮರಗಳ ಮೇಲೆ ನಿಂತು ಆಡುವುದಿತ್ತು. ಇವುಗಳ ಪೈಕಿ ಪ್ರಾಣಿಬೇಟೆ, ಮೀನುಬೇಟೆ ಮತ್ತು ಜೇನುಬೇಟೆಗೆ ನಾನಾ ಉಪಕರಣಗಳ ಅಗತ್ಯವಿದೆ. ಕಲ್ಲುಗಳನ್ನು ಸಂಗ್ರಹಿಸಿ ಅದನ್ನು ಉದ್ದವಾದ ಮರದ ಕೋಲಿಗೆ ಜೋಡಿಸಿ ಅದರ ಸಹಾಯದಿಂದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಆಯುಧಗಳ ಹರಿತವಾದ ಪಾರ್ಶ್ವದಿಂದ ಚರ್ಮವನ್ನು ಕತ್ತರಿಸುವುದು, ಮಾಂಸವನ್ನು ತುಂಡರಿಸುವುದು, ಗಟ್ಟಿಯಾದ ಮೂಳೆಯನ್ನು ಜಜ್ಜುವುದು ಇತ್ಯಾದಿ ಕೆಲಸವನ್ನು ಮಾಡುತ್ತಿದ್ದರು.

ಪ್ರಾಣಿ ಬೇಟೆಗೆ ಸಂಬಂಧಿಸಿದ ಆಯುಧಗಳನ್ನು ಕಾವ್ಯಗಳಲ್ಲಿ ಅವಲೋಕಿಸಬಹುದು. ತೊಟ್ಟ ಎಕ್ಕಡ, ಕಟ್ಟಿದ ಮರದ ಬಿಲ್ಲು, ಹಣೆಯ ಕಟ್ಟು, ಬೇಟೆಯ ದಮಟೆ, ಚಿಕ್ಕದಾದ ಕತ್ತಿ, ಉತ್ತರೀಯದಿಂದ ಕೂಡಿದ ಅಂಗಿ ಮುಂತಾದವು ಪಂಪನ ಕಾವ್ಯದಲ್ಲಿ ಕಂಡುಬರುತ್ತವೆ. ಕಾವ್ಯದಲ್ಲಿ ಪಾರೆಯಂಬು, ಕೆಲ್ಲಂಬು, ಕತ್ತಂಬು, ನಲ್ಲಂಬು, ಮಸೆಯಂಬು, ಕೆಂಗರಿ ಮೊನೆಯೆಂಬು, ಬಟ್ಟೆನಂಬು ಮುಂತಾದ ಬಾಣ ಪ್ರಯೋಗದ ಬಗ್ಗೆ ವಿವರವಿದೆ. ರಾಜ ಬೇಟೆಗೆ ಹೋಗುವಾಗ ಕುದುರೆಯನ್ನು ಬಳಸುತ್ತಿದ್ದ. ಇಂದ್ರಕೀಲದಲ್ಲಿ ಅರ್ಜುನ ಶಿವನಿಂದ ಪಾಶುಪತಾಸ್ತ್ರವನ್ನು ಪಡೆಯಲು ತಪಸ್ಸು ಮಾಡುತ್ತಾನೆ. ಈ ಅಸ್ತ್ರವು ಶತ್ರು ಸಂಹಾರಕ್ಕೆ ಸಹಾಯಕವಾಗಿತ್ತು, ಅಂಜನಾಸ್ತ್ರವು ಸಹಾ ಅಷ್ಟೇ. ರನ್ನ ಕವಲಂಬು ಎಂಬ

ಬಾಣವೊಂದನ್ನು ಹೇಳುತ್ತಾನೆ. ಇದು ಅರ್ಧಚಂದ್ರಾಕೃತಿಯ ಬಾಣವಾಗಿರುತ್ತದೆ. ಜನ್ನ ಅಚ್ಚಲಗಂಬು ಎಂಬ ಬಾಣವನ್ನು, ಕೇಶಿರಾಜ ಬೋಳ ಎಂಬ ಬಾಣದ ಪ್ರಯೋಗ ತಿಳಿಸಿದ್ದಾರೆ. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಕೊಡತಿ (ಮರದ ಸುತ್ತಿಗೆ), ಸುರಗಿ (ಸಣ್ಣಕತ್ತಿ, ಕರವತಿಗೆ(ಗರಗಸ), ದಂಡೆಕೈ, ಕತ್ತಿ, ಬಡಿಕೋಲು, ಸಬಳ, ತ್ರಿಶೂಲ, ಸುರಗಿ, ಚಕ್ರ, ಮುದ್ಗರ, ಸೆಲ್ಲೆಹ, ಕೊಂತ, ಕಕ್ಕಡೆ, ಪ್ರಬಲಗದೆ ಗಾಣ, ಕೂಳಿ, ಬಲ್ಲು ಬಾಣ, ಗಿಡುಗ, ಅತಿಯಾದ ಕೆಸರು, ಉರುಳು, ತೋರೆತ್ತು, ಜಂಕೆ ಬೀಸುಕಣ್ಣುಗಳು ಮೊದಲಾದ ಆಯುಧ ಸಾಮಾಗ್ರಿಗಳನ್ನು ಬೇಟೆಯಾಡಿ ತಕ್ಕ ಸಮಯದಲ್ಲಿ ಉಪಯೋಗಿಸುತ್ತಿದ್ದರೆಂಬ ಅಂಶವಿದೆ. ಹರಿಶ್ಚಂದ್ರ ರಥದ ಮೇಲೇರಿ (ಕೋದಂಡ, ಬತ್ತಳಿಕೆ, ಬಲ್ಲಿನ ಹಗ್ಗ ನೀವಿ, ಮಿಡಿದು) ಬೇಟೆಯನ್ನಾಡುತ್ತಿದ್ದ.

ಗಟ್ಟಿಯಾದ ಬಿಲ್ಲುಗಳು, ಭಯಂಕರವಾದ ಅಂಬುಗಳು ಬೇಡರಪಡೆಯ ಸಾಮರ್ಥ್ಯದ ಬಗ್ಗೆ ಹರಿಹರನ ಗಿರಿಜಾಕಲ್ಯಾಣದಲ್ಲಿ ವರ್ಣನೆಯಿದೆ. ಬೇಡನು ಹರಿಣದ ಮೇಲೆ ಬಾಣ ಪ್ರಯೋಗಿಸುವ ಚಿತ್ರಣ ಪ್ರಮುಖವಾದುದು. ಬೇಡರಕಣ್ಣಪ್ಪರಗಳೆಯಲ್ಲಿ ಬೋಳೆಯಂಬನ್ನು ಹೆಸರಿಸಿದ್ದಾನೆ. ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣದಲ್ಲಿ ಮೊಗವಾಡಗಳನ್ನು ಧರಿಸಿ ಬೇಟೆಯಾಡುವುದು ವಿಶೇಷವಾಗಿದೆ. ಅದೇ ರೀತಿ ಲಕ್ಷ್ಮೀಶ ಕವಿಯು ಜೈಮಿನಿ ಭಾರತದಲ್ಲಿ ಸಿಂಹವು ಬೇಡತಿಯನ್ನು ಆನೆ ಎಂದು ತಿಳಿದು ತಿನ್ನಲು ಹವಣಿಸಿದಾಗ, ಬೇಡನು ಬಾಣಪ್ರಯೋಗಿಸಿ ಕೊಲ್ಲುತ್ತಾನೆ. 'ದೇವರಾಜನ ಸೊಬಗಿನಸೋನೆ'ಯಲ್ಲಿ ಸೌಂದರಾಜ (ಕಾಶ್ಮೀರದ ರಾಜ)ನಿಗೆ ಕಾಡು ಪ್ರಾಣಿಗಳ ಉಪಟಳ ತಾಳಲಾರದೆ ಬೇಟೆಗಾರರು ಭಿನ್ನವಿಸಿದರು. ರಾಜನು ಸಿಂಹದ ಶಿಕಾರಿಗೆ ಅಣಿಯಾಗುವುದನ್ನು ಕವಿ ತಿಳಿಸಿದ್ದಾನೆ. ರಾಜ ಪರಿವಾರದವರು ಬಲೆಯನ್ನು ಬೀಸಿ ಸಿಂಹವನ್ನು ಸುತ್ತುಗಟ್ಟುತ್ತಾರೆ. ಕೊಂಬುಕಹಳೆ ಮೊಳಗುತ್ತವೆ. ಸಿಂಹವನ್ನು ರಾಜ ಸೋಲಿಸುತ್ತಿದ್ದು, ಒಂಟೆಯನ್ನು ಬೇಟೆಯಾಡಿದ ಉಲ್ಲೇಖವಿದೆ.

ಕನಕದಾಸರ ಮೋಹನತರಂಗಿಣಿಯಲ್ಲಿ ಮಾಣಿಕ್ಯ ಖಚಿತವಾದ ಕೆಂಬಟ್ಟೆಯನ್ನು ನಾಯಿಗೆ ಕಟ್ಟಿಕೊಂಡು ಬೇಡರಪಡೆ ಕರೆದೊಯ್ಯುತ್ತದೆ. ಕುಮಾರ ವಾಲ್ಮೀಕಿಯ ತೊರವೆರಾಮಾಯಣದಲ್ಲಿ ಬಿಲ್ಲು-ಬಾಣ, ಆರೆಗೂಳಿ, ಕೋತಿಮರಿ, ಮೊದಲಾದವುಗಳನ್ನು ಬೇಡರು ರಾಮನಿಗೆ ನೀಡಿ ಅಭಿನಂದಿಸುತ್ತಾರೆ. ಬೇಟೆಯಾದ ನಂತರ ಬೇಡರು ಬಲೆಗಳನ್ನು ಜೋಡಿಸುತ್ತಾ, ಬಾಣಗಳನ್ನು ತೊಳೆಯುತ್ತಿದ್ದ ಸಂಗತಿ ಚೌಂಡರಸನ ಅಭಿನವ ದಶಕುಮಾರ ಚರಿತ್ರೆಯಲ್ಲಿ ಕಂಡುಬರುತ್ತದೆ. ನಂಜುಂಡಕವಿಯ ರಾಮನಾಥಚರಿತ್ರೆಯಲ್ಲಿ ಬಾಣ ಪ್ರಯೋಗಿಸಿ ಮೃಗವನ್ನು ಕೊಲ್ಲುವ ಚಿತ್ರಣ ಗಮನಾರ್ಹವಾದದು.

ಷಡಕ್ಷರದೇವನ ರಾಜಶೇಖರವಿಳಾಸದಲ್ಲಿ ಬಿಲ್ಲು, ಬಾಣ, ಚಪ್ಪಲಿ, ನಾಯಿ, ಬೀಸುವ ಬಲೆ, ಮದ್ದು, ಬಡಿಗೋಲು, ಮದ್ದು ಹಾಕುವ ತಂಬಾಕು, ಕಲ್ಲು ಬೀಸುವ ಕವಣೆ, ದೊಡ್ಡಬಲೆ, ಚೂಪಾದ ಗಾಳ, ಕತ್ತಿ, ಗುರಾಣಿ, ಜಂಕೆ, ಕಲ್ಲಿನಉಳಿ, ದೀಪ, ದೀಹದ ಹಿಡುಗ ಮುಂತಾದವು ಶಬರನಾಯಕರು ಶಿಕಾರಿ ಸಂದರ್ಭದಲ್ಲಿ ಬಳಸುತ್ತಿದ್ದರು. ಸೋವತರು ಪ್ರಾಣಿಗಳನ್ನೆಬ್ಬಿಸಿ ಕೊಲ್ಲುತ್ತಾರೆಂಬುದು ತಿಳಿದುಬರುತ್ತದೆ.

ಈ ಕವಿಯ ಶಬರಶಂಕರವಿಳಾಸದಲ್ಲಿ ಬೊಬ್ಬಿಡುವ, ಸೂಚನೆ ನೀಡುವ, ಆಜ್ಞಾಪಿಸುವ, ಬಲೆಯನ್ನು ಕಟ್ಟು, ಪೊದೆಯಲ್ಲಿ ಹುಡುಕು ಬಾಣಬಿಡು, ನೀರುಕಡೆನಿಲ್ಲು, ಮರಹತ್ತುವ ಸಂಗತಿಗಳಿವೆ. ಇಲ್ಲಿ ಬೇಡರ ವರ್ಣನೆ, ಬೇಟೆ ಮತ್ತು ಆಯುಧಗಳನ್ನು ವಿವರವಾಗಿ ತಿಳಿಸಿದ್ದಾನೆ. ಷಡಕ್ಷರದೇವ ಬೇಡರನ್ನು ಕಣ್ಣಾರೆ ಕಂಡವನಂತೆ ಬರೆದಿದ್ದಾನೆ. ಬೆರಳಿನಿಂದ ಹಿಡಿದು ಹಾರಿಸುವ ಬಿಲ್ಲು, ಸನ್ನೆಕೋಲು, ಕೊಳವೆ, ಬಾಣ, ತಿವಿಯುವ ಕೋಲು, ಕೈಬಿಲ್ಲು, ಹರಿತವಾದ ಬಾಣಗಳು,

ಬೆನ್ನಲ್ಲಿ ಜೊತಾಡುತ್ತಿದ್ದ, ಕೈಮಚ್ಚ, ಗಂಟಲು ಮುಳ್ಳು, ಸಣ್ಣ ಬನಿಕೆ, ಮದ್ದಿನ ತುಪಾಕಿ, ದೊಡ್ಡಾನೆ ಬಡಿಯುವ ಕೋಲುಗಳು, ಕಲ್ಲು, ಕಣ್ಣೆ, ಸಲಿಕೆ, ಇತರ ಚಿಕ್ಕ ಪುಟ್ಟ ಆಯುಧಗಳನ್ನು ಬೇಟೆಗೆ ಬಳಸುತ್ತಿದ್ದರು.

ಬಲೆಗಳು : ಇಡುವಲೆ ಸಿಡಿವಲೆ ಕಿರುವಲೆ

ನಡೆವಲೆ ಪೇರ್ವಲೆ ತೊಡಂಕುವಲೆ ಕೋಲ್ವಲೆ ಕ

ಕ್ಕಡವಲೆ ನಿಡುವಲೆ ಸಾಲ್ವಲೆ

ಬಡುವಲೆಗಳೆನಿಪ್ಪ ವೆಸೆದವಾ ಬೇಂಟಗರೊಳ್ (೩: ೨೪ : ೫೭)

ಇಡುವ ಬಲೆಗಳು, ಹಾರಿಸುವ ಬಲೆಗಳು, ಸಣ್ಣಬಲೆಗಳು, ನಡೆಯುತ್ತಾ ಬೀಸುವ ಬಲೆಗಳು, ತೊಡರಿಕೊಂಡ ಬೀಳುವಂತೆ ಮಾಡುವ ಬಲೆಗಳು, ಸಾಲಾಗಿ ಕಟ್ಟುವ ಬಲೆಗಳು, ದಾರಿಯನ್ನು ಬಿಟ್ಟು ಅನಂತರ ಸಿಕ್ಕಿಸಿಕೊಳ್ಳುವ ಬಲೆಗಳು ಹೀಗೆ ಆತ್ಮರಕ್ಷಣೆಗಾಗಿ ಬೇಡರು ಪ್ರಾಣಿ - ಪಕ್ಷಿಗಳ ಬೇಟೆಗೆ ವಿವಿಧ ರೀತಿಯ ಆಯುಧಗಳನ್ನು ಜೊತೆಯಲ್ಲಿ ಕೊಂಡೊಯ್ಯುತ್ತಿದ್ದರು. ಷಡಕ್ಷರದೇವ ಹುಟ್ಟಿದ ಧನಗೂರು, ಬೆಳೆದದ್ದು ಯಳಂದೂರು ಇವೆರಡು ಪ್ರಕೃತಿ ಸೌಂದರ್ಯದ ತವರೂರುಗಳೂ ಆಗಿದ್ದವು. ಕಾಡಿನ ಪ್ರಾಣಿಗಳ ಗುಣ- ಸ್ವಭಾವಗಳ ವರ್ಣನೆ ಹೆಚ್ಚಾಗಿದೆ. ಇವನ ವೃಷಭೇಂದ್ರ ವಿಜಯದಲ್ಲಿಯೂ ಬೇಟೆಯೆಂಬುದು ಒಂದು ಉದ್ಯೋಗವೆಂಬಂತೆ ಕಂಡಿದ್ದಾನೆ. (ಕಣ್ಣಪ್ಪನೆಂಬ ಬೇಟೆಗಾರ ಶಿವಭಕ್ತನಾದ ಬಗ್ಗೆ). ಬೆಳ್ಳಾರಬಲೆ, ಬಡಿಕೋಲು, ಗಾಳ, ಅಂಟುಬಲೆಗಳನ್ನು ಬೇಡರಪಡೆ ಪಡೆದಿತ್ತು. ತಿರುಮಲಾರ್ಯನ ಚಿಕ್ಕದೇವರಾಜ ವಂಶಾವಳೀಯಲ್ಲಿ ಬೇಟೆಗೆ ಕೋವಿಗಳನ್ನು ಬಳಸಿರುವುದು ಕಂಡುಬರುವುದು. ಆಧುನಿಕ ತಂತ್ರವಾದ ಕೋವಿಯ ಉಲ್ಲೇಖ ಇಲ್ಲಿ ಮೊದಲಿಗೆ ಉಲ್ಲೇಖಿತವಾಗಿರುವುದು ಗಮನಾರ್ಹ.

ಮಧ್ಯಕಾಲೀನ ಸಂದರ್ಭದಲ್ಲಿ ಖಡ್ಗ ಅಥವಾ ಕತ್ತಿಗೆ, ಕರವಾಳ್ ಮತ್ತು ತೋಳಬಾಳ್ ಎಂಬ ಹೆಸರುಗಳೂ ಇವೆ. ಅಲಗು (ಕಿರುಗತ್ತಿ), ಸಬಳ ಕೊಂತ (ಮರದ ದಂಡ), ಶಲ್ಯ, ಭಲ್ಯ (ಬಾಣ), ಶೂಲ (ಸುಮಾರು ಉದ್ದವಿರುವ ಮೊನಚಾದ ದಂಡ), ಕಣೆಯ (ತ್ರಿಕೋನಾಕಾರದ ಲೋಹದ ದಂಡ), ಕರ್ಕಡೆ (ಕೈಯಿಂದ ಎಸೆಯುವ ಶೂಲದಂತ ಆಯುಧ), ಪರಿಘ (ಕಬ್ಬಿಣದ ದಂಡ), ಸುರಿಗೆ (ಕತ್ರಿ), ಮುಸಲ (ಖಾದರದಲ್ಲಿ ಮಾಡಿದ ಮೊನಚಾದ ದಂಡ), ತೀರಿಕೆ ಜಟ್ಟಿಗೆ, ಭಿಂಡವಾಳ (ದಪ್ಪತುದಿಯಿರುವ ಕಬ್ಬಿಣದ ದಂಡ), ಈಟಿ, ಭರ್ಚಿಯಂತೆಯೇ ಇರುವ ಆಯುಧ, ಶಕ್ತಿ (ನಾಲ್ಕು ಹಸ್ತಗಳಷ್ಟು ಉದ್ದದ ಲೋಹಾಯುಧ), ಪಂಚರಾಯುಧ, ಆವುತಿ, ಮಾಳಜಗೆ, ಪಿಡಿಕತ್ತು ತೋಮರ, ಕರ್ಪಣ (ಎಸೆಯಬಹುದಾದ ಬಾಣ) ಮುಸುಂಡಿ, ಮುದ್ಗರ, ಬಿಟ್ಟೇರು, ಬಕ್ಕಣ್ಣ, ಉದ್ದುವಾರೆ, ಅಡಾಯುಧ, ಲೌಡಿ (ಉದ್ದನೆಯ ಬದರ ಬಡಿಗೆ, ದೊಣ್ಣೆ) ಇತರ ಆಯುಧಗಳಿದ್ದವು.

ರಕ್ಷಣೆ, ಬೇಟೆ ಇತರ ಬಹುಪಯೋಗಕ್ಕೆ ಆಯುಧಗಳನ್ನು ಬಳಸಿಕೊಳ್ಳುತ್ತಿದ್ದರು. ಸೀಸಹ, ಬಾಹುರಕ್ಕೆ ತನುತ್ತ ಎಂಬ ಹಲವಾರು ಬಗೆಯ ಕವಚಗಳು ಉಪಯೋಗದಲ್ಲಿದ್ದವು. ಕರ್ನಾಟಕದ ವೀರಾಗ್ರಣಿಗಳು ಯುದ್ಧಗಳಲ್ಲಿ ಮದ್ದುಗುಂಡುಗಳನ್ನು ಬಳಸುತ್ತಿದ್ದರು. ಫಿರಂಗಿ, ಗುಂಡುಗೋವಿ, ಶರಫ ಮುಂತಾದವು ಸಿಡಿಮದ್ದಿನ ಆಯುಧಗಳು ಯುದ್ಧಕ್ಕಷ್ಟೇ ಸೀಮಿತವಾಗದೆ, ಬೇಟೆಗೂ ಅನುಕೂಲವಾಗಿದ್ದವು.

ಪ್ರತಿನಿತ್ಯ ದೊಣ್ಣೆಗಳು (ಧಾನ್ಯ), ಬಡಿಯಲೂ, ಹೊಡೆಯಲೂ, ಬಳಸುತ್ತಿದ್ದರು. ದೊಣ್ಣೆಗಳ ಹಿನ್ನೆಲೆಯಲ್ಲಿಯೇ ಸಿದ್ದಗೊಂಡಿರುವ ಸಾಧನವಾದ ಕೊಡಲಿ, ಮರದ ಕಾವು, ಲೋಹದ ಕೊಡಲಿಗಳು ಕತ್ತರಿಸಲು, ಸೀಳಲು, ಬಳಸುವ ಆಯುಧಗಳಾಗಿದ್ದವು. ಬೇಟೆಗೆ ಬಳಸುತ್ತಿದ್ದ ಚಂದ್ರಾಯುಧ ಅರ್ಧ ಚಂದ್ರಾಕಾರದ ಅಲುಗಿನಂತಿರುತ್ತದೆ.

ಕೊಡಲಿಗಳಲ್ಲಿ : ಕೈಗೊಡಲಿ, ಎಡೆಗೊಡಲಿ ಪಿಳಿಗೊಡಲಿ ಪ್ರಮುಖವಾಗಿವೆ. ಕಡಿಯುವ, ಇರಿಯುವ ಚುಚ್ಚುವ, ಬಗೆಯುವ, ಹೆರೆಯುವ ಚಿಕ್ಕ ಚಿಕ್ಕ ಸಾಧನಗಳೂ ಈ ಗುಂಪಿನಲ್ಲಿವೆ. ಈ ರೀತಿ ಆಯುಧಗಳ ಪೈಕಿ ಕ್ಷೌರಿಕನ ವೃತ್ತಿ, ಕುಡುಗೋಲು, ಚಾಕು ಚೂರಿಗಳಿಗೆ ಮರದ ಹಿಡಿ ಅಳವಡಿಸುತ್ತಾರೆ. ಕುಡುಗೋಲಿನಲ್ಲಿ ಸೊಟ್ಟಗ ಕುಡುಲು, ಉಜ್ಜಗರಿ, ಕೈಗುಡುಲು, ಹರಿಗುಡುಲು, ಜವಣೆ ಕುಡುಲು ಇತ್ಯಾದಿ ಪರಿಕರಗಳು ಬಳಕೆಯಲ್ಲಿದ್ದವು. ಇತ್ತೀಚಿನ ವರ್ಷಗಳಲ್ಲಿ ದೊಡ್ಡ ಮಚ್ಚು (ಕಂದಲಿ)ನಿಂದ ಹಬ್ಬಗಳಲ್ಲಿ ಕುರಿ, ಕೋಣಗಳನ್ನು ಕಡಿಯಲು ಮಾತ್ರವಲ್ಲದೆ, ಇತರ ಪ್ರಾಣಿಗಳಿಗೂ ಬಳಕೆಯಲ್ಲಿರಬೇಕು. ವಿವಿಧ ಕಾರ್ಯಗಳಿಗೆ ಹಾರೆ, ಗುದ್ದಲಿ, ಪಿಕಾಸಿ, ಬಾಚಿ,ಗುಳ, ಗುಳಕೊಕ್ಕೆ, ಕಳೆಗುದ್ಲು, ಕೈ ಬಾಚಿ (ಬಾಳ್ಚಿ), ಕುದ್ಲು, ಕೂಡ್ಲಿ, ಕೋಲುಗತ್ತಿ ಮೊದಲಾದವು ಬಳಕೆಯಾಗಿದ್ದವು. ಹಿಂದಿನ ಕಾಲದಲ್ಲಿ ಕನ್ನಗತ್ತಿ ಎಂಬ ಆಯುಧವನ್ನು ಮನೆಗಳಿಗೆ ಕನ್ನಹಾಕಲು ಬಳಸುತ್ತಿದ್ದರಂತೆ. ಇಂದಿಗೂ ಕರ್ನಾಟಕದಲ್ಲಿನ ಬೇಡರು ದೇವರಿಗೆ ಕೊಡುವ ಭಕ್ತಿ, ಗೌರವವನ್ನು ತಮ್ಮ ಆಯುಧಗಳಿಗೂ ಕೊಡುವುದು ವಿಶೇಷ. ವರ್ಷಕ್ಕೆರಡು ಬಾರಿ ಹಿರಿಯರ ಹಬ್ಬ ಮಾಡುವಾಗ ಪ್ರಾಚೀನ ಕಾಲದ ಆಯುಧಗಳಿಗೆ ಪೂಜೆ ಸಲ್ಲಿಸುತ್ತಾರೆ. ಮಹಾಲಯ ಅಮವಾಸ್ಯೆ ಆದ ೧೧ ದಿನದಲ್ಲಿ (ವಿಜಯದಶಮಿ) ಆಯುಧಪೂಜೆ ಮಾಡುವುದು ಕಂಡುಬರುತ್ತದೆ.

ಇಂಗ್ಲೀಷ್ ಅಧಿಕಾರಿಗಳು, ಭಾರತದ ಹವ್ಯಾಸಿಗಳು, ಆನೆ, ಹುಲಿಯಂಥ ಬಲಶಾಲಿ ಪ್ರಾಣಿಗಳನ್ನು ಕೋವಿಯಿಂದ ಬೇಟೆಯಾಡಿದ್ದಾರೆ. ಚಾಮುಂಗೆಕೋವಿ ಎಂಬುದು ಯಂತ್ರಯುಗದಲ್ಲಿ ಬಳಕೆಗೆ ಬಂತು. ನಂತರ ಬತ್ತಿಕೋವಿ, ಕೇಪಿನ ಕೋವಿ, ತೋಟಾಕೋವಿ, ಜೋಡು ನಳಿಗೆಯ ಕೋವಿಗಳು ಬಳಕೆಗೆ ಬಂದವು. ಇಂದು ಎಕೆ.೪೭, ರಿವಾಲ್ವರ್, ರೈಫಲ್, ನಾಡಬಂದೂಕು ಮುಂತಾದವು ಪ್ರಸಿದ್ಧಿ ಪಡೆದಿವೆ.

೫.೪. ಬೇಟೆಯ ಸ್ವರೂಪ ಹಾಗೂ ವಿಧಾನ

ಬೇಟೆಯಾಡಲು ಒಂದು ಶಿಸ್ತು ಇರುವುದನ್ನು ಅದರ ಸ್ವರೂಪ ಮತ್ತು ವಿಧಾನಗಳಲ್ಲಿ ನೋಡಬಹುದು. ಪ್ರಾಣಿ, ಪಕ್ಷಿ, ಜಲಚರ ಇತರೆ ಪ್ರಾಣಿಗಳನ್ನು ಆದಿಯಲ್ಲಿ ಮಾನವ ಶಿಲಾಯುಧಗಳಾದ ಕಲ್ಲು, ಬಿಲ್ಲು, ಬಾಣ, ಬಲೆ, ಈಟಿ, ಕವಣೆ, ಬಂದೂಕುಗಳಿಂದ ಬೇಟೆಯಾಡುತ್ತಿದ್ದ. ಬೇಟೆಗಾರ ನೆಲದ ಮೇಲೆ, ನೀರಿನ ಮೇಲೆ, ಮರದ ಮೇಲೆ ಬೇಟೆಯಾಡುತ್ತಿದ್ದದ್ದು ಸ್ಪಷ್ಟ. ಬೇಡನೊಬ್ಬನೆ ಅಲ್ಲದೆ ತನ್ನೊಂದಿಗೆ ಬೇಟೆನಾಯಿ, ಬಲೆ ವಿವಿಧ ಪರಿಕರಗಳೊಂದಿಗೆ ಬೇಟೆನಡೆಯುತ್ತಿತ್ತು. ಕನ್ನಡ ಕಾವ್ಯಗಳಲ್ಲಿ ಬೇಟೆಯ ಸ್ವರೂಪ ಹಾಗೂ ವಿಧಾನಗಳು ವಿಶೇಷವಾಗಿವೆ.

ಪಂಪನ ಕಾವ್ಯದಲ್ಲಿ ಸಂಜ್ಞೆ, ಎಚ್ಚರಿಕೆ, ನಾಯಿಗಳ ತೆಳುಸೊಂಟ, ಅಗಲವಾದ ಎದೆ, ನೆಟ್ಟಗೆ ನಿಂತಿರುವ ಕಿವಿ, ಬಾಗಿದ ಹುಬ್ಬು, ದಪ್ಪಕಾಲು, ನೆಲವನ್ನು ಮುಟ್ಟದ ಉಗುರುಗಳಿರುತ್ತವೆ. ಇಂಥ ನಾಯಿಗಳು ಮೃಗದ ಹೆಜ್ಜೆಗುರುತನ್ನು ಕಂಡುಹಿಡಿದು ಬೇಟೆಯಾಡುತ್ತವೆ. ರಾಘವಾಂಕನು ದೀಹದಬೇಟೆ, ಹುಲಿ, ಸಿಂಹ, ತೋರೆತ್ತು, ಗಿಡುಗಗಳನ್ನು ಹಿಡಿದು ಸಾಕಿ ಪಳಗಿಸಿ, ಅವುಗಳ ಸಹಾಯದಿಂದ ಬೇಟೆಯಾಡುವುದು ಹೊಸತಂತ್ರ ಎಂಬಂತಿದೆ. ಹರಿಣದಲ್ಲಣ, ಹುಲಿಬಾಕ, ಸೂಕರ ಮೃತ್ಯು, ಸಾರಂಗ ಮರ್ದನ, ಮಾರೆಮಾರಿ, ಸಿಂಹಪ್ರಕರ, ಶರಭ, ಭಲ್ಲೂಕಮಲ್ಲ, ಕಾಡುಕೋಣ, ಇತರೆ ಪ್ರಾಣಿಗಳನ್ನು ವಿವಿಧ ರೀತಿಯಲ್ಲಿ ಬೇಟೆಯಾಡುತ್ತಿದ್ದ ಬಗ್ಗೆ ನೈಜವೆಂಬಂತೆ ತಿಳಿಸಿದ್ದಾನೆ. ಸೌಗಂಧಿಕಪರಿಣಯದಲ್ಲಿ ಕಾಡಿನೊಳಗೆ ವಾದ್ಯದ ಧ್ವನಿಯನ್ನು ನಿಲ್ಲಿಸುವಂತೆ ಆಳುಗಳನ್ನು ಬೇಟೆಗಾರರು ಬೊಬ್ಬಿಡದೆ ಸಂಜ್ಞೆಯಿಂದಲೇ ವ್ಯವಹರಿಸುತ್ತಾರೆ. ಹಂದಿಗಳು ತಿಂದುಬಿಟ್ಟ ಆಹಾರಗಳ ಮೂಲಕ ಅವುಗಳ ಚಹರೆ ಪತ್ತೆಮಾಡುತ್ತಿದ್ದರು. ಷಡಕ್ಷರದೇವ ರಾಜಶೇಖರವಿಳಾಸದಲ್ಲಿ ಔಷಧಿಗಳ ಮೂಲಕ ಪ್ರಾಣಿಬೇಟೆ ಮಾಡುವುದನ್ನು ತಿಳಿಸಿದ್ದಾರೆ.

ಬೇಟೆಗಾರರಿಗೆ ಬೇಟೆಯಾಡಲು ಉತ್ತಮ ಪರಿಸರ ಅಗತ್ಯ. ಅರಣ್ಯದಲ್ಲಿ ಬೇಟೆಯಾಡಿದರೆ ಆ ರಾಜ್ಯದ ರಾಜನ ಪರವಾನಿಗೆ ಬೇಕಾಗಿತ್ತು. ಹೀಗಾಗಿ ವನಪಾಲಕರು ರಾಜನನ್ನು ಬೇಟೆಗೆ ಆಹ್ವಾನಿಸುವ ವಿಧಾನ ಕನ್ನಡದ ಕೆಲವು ಕಾವ್ಯಗಳಲ್ಲಿ ವ್ಯಕ್ತವಾಗಿದೆ. ಬೇಡರು ಬೇಟೆಯಾಡಿ ಬಂದು ನಂತರ ತಮ್ಮ ಪ್ರತ್ಯೇಕ ನೆಲೆಗಳಲ್ಲಿ ತಂಗುತ್ತಿದ್ದರು. ಅದಕ್ಕೆ ಬೇಡರಹಳ್ಳಿ ಎಂದು ಕವಿ ಹೇಳಿದ್ದಾನೆ. ಚಿಕ್ಕದೇವರಾಜನು ಅರಣ್ಯವಲ್ಲದೆ, ದೇವಾಲಯದ ಗೋಪುರ, ಪ್ರಕಾರ, ಮಂಟಪ, ವಿಮಾನಗಳಲ್ಲಿ ವಾಸಿಸುವ ಹಕ್ಕಿಗಳನ್ನು ಗುಂಡಿಕ್ಕಿ ಕೊಲ್ಲುತ್ತಿದ್ದರೆಂದು ತಿಳಿಸುವನು.

ಒಟ್ಟಾರೆಯಾಗಿ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾದ ಬೇಟೆ ಸ್ವರೂಪ ಹಾಗೂ ವಿಧಾನಗಳು ಅಂದಿನ ವಾಸ್ತವಿಕ ನೆಲೆಯಲ್ಲಿದ್ದ ಬೇಟೆಯನ್ನು ಹೋಲದೆ ಇರಬಹುದು. ಆದರೆ ಪ್ರಾಯೋಗಿಕವಾದ ಬೇಟೆ ಅನುಭವಗಳನ್ನು ಕವಿ ತಿಳಿಸಲು ಯತ್ನಿಸಿರುವುದನ್ನು ಒಪ್ಪಬಹುದಾಗಿದೆ. ಅಂದು ಪ್ರಚಲಿತವಿದ್ದ ಕೆಲವು ಪ್ರಾಣಿ ಬೇಟೆ ಸ್ವರೂಪ ಹಾಗೂ ವಿಧಾನಗಳು ಕೆಳಗಿನಂತಿವೆ :

೧. **ಬಲೆಯ ಬೇಟೆ :** ಬೇಟೆಗಾರ ಸರಳವಾಗಿ ಬೇಟೆಯಾಡಬಹುದಾದ ಸಾಧನ ಬಲೆ. ಪ್ರಾಣಿ, ಜಲಚರಗಳನ್ನು ಇದರಿಂದ ಬೇಟೆಯಾಡಬಹುದು. ಮಧ್ಯಕಾಲೀನ ಕಾವ್ಯಗಳಲ್ಲಿ 'ಬಲೆ' ಬೇಟೆಯ ಬಳಕೆ ಹೆಚ್ಚಾಗಿತ್ತು. ಈ ಬಲೆಗಳ ಮೂಲಕ ಬೇಟೆಯಾಡಬೇಕಾದರೆ ನಾಲ್ಕು, ಎಂಟು, ಹದಿನಾಲ್ಕು ಜನರಲ್ಲದೆ ನಾಯಿಗಳೂ ಜೊತೆಗಿರುತ್ತಿದ್ದವು. ಬಲೆಗಳಿಂದ ಎರಡು ರೀತಿ ಬೇಟೆಯಾಡುತ್ತಾರೆ. ಒಂದು ಮೀನಿನ ಬೇಟೆ, ಎರಡನೆಯದು ಜಿಂಕೆ ಮತ್ತು ಮೊಲದ ಬೇಟೆ. ಮೀನಿನ

ಬಲೆಗೆ ಎರಡು ಗಳಗಳನ್ನು ಕಟ್ಟಿ ಇಬ್ಬರು ವ್ಯಕ್ತಿಗಳು ನೀರಿನಲ್ಲಿ ಎಳೆಯುವಾಗ, ಕೆಲವು ವ್ಯಕ್ತಿಗಳು ನೀರಿನಲ್ಲಿ ಸೋವುತ್ತಾರೆ. ಬಲೆಗೆ ಬಿದ್ದ ಮೀನುಗಳನ್ನು ದಡಕ್ಕೆ ತಂದು ರಾಶಿಯಾಕುವುದು ಬೇಡರಲ್ಲಿರುವ ವಿಧಾನ.

ಕಾಡಿನಲ್ಲಿ ಮೊಲ, ಜಿಂಕೆಗಳಿಗೆ ಬಲೆಯನ್ನು ಹಾಕಿ ಸಣ್ಣ ಕೋಲುಗಳನ್ನು ಇಡುತ್ತಾರೆ. ನಾಯಿಗಳೊಂದಿಗೆ ಸೋವತರು ಶಬ್ದಮಾಡುತ್ತಾ ಬಂದಾಗ ಓಡಿ ಬಂದು ಬಲೆಗೆ ಬಿದ್ದ ಪ್ರಾಣಿಗಳನ್ನು ವಸ್ತ್ರಚೀಲದಲ್ಲಿಡುತ್ತಾರೆ. ಇದೇ ರೀತಿ ಕೌಜುಗ ಪಕ್ಷಿಗೂ ಬಲೆ ಒಡ್ಡಿ, ಒಂದು ಸಾಕಿದ ಕೌಜುಗವನ್ನು ಪಂಜರದೊಳಗಿಟ್ಟು ಸುತ್ತಲೂ ಕಾಳು ಹಾಕುತ್ತಾರೆ. ಅದರಂತೆ ಕೂಗಿದಾಗ ಗಂಡು ಹೆಣ್ಣುಗಳು ಕೂಡಿ ಬಂದು ಬಲೆಗೆ ಬೀಳುತ್ತವೆ. ಇದಕ್ಕೆ ಪಾವುಜ (ಪೌಜ) ಎನ್ನುವರು.

೨. **ಸಾರಾಕಿ ಬೇಟೆ :** ಒಬ್ಬ ವ್ಯಕ್ತಿ ನೀರು ಕುಡಿಯಲು ಅಥವಾ ಸುಳಿದಾಡುವ ಸ್ಥಳವರಿತು, ನಿಗಾ ಇಟ್ಟು ಪ್ರಾಣಿಬಂದಾಗ ಗುರಿಯಿಟ್ಟು ಹೊಡೆಯುವುದೇ ಸಾರಾಕಿ ಬೇಟೆ. ಉದಾ : ಮೊಲ, ಜಿಂಕೆ, ಉಡ ಮೊದಲಾದವು.

೩. **ಮರಸು ಬೇಟೆ :** ರಾತ್ರಿಯ, ಬೆಳದಿಂಗಳಲ್ಲಿ ಆಡುವ ಬೇಟೆ. ಪ್ರಾಣಿಗಳು ಸಂಚರಿಸುವ ಎತ್ತರವಾದ ಸ್ಥಳದಲ್ಲಿ ಕುಳಿತು, ಕೃತಕ ಅಥವಾ ಚಂದ್ರನ ಬೆಳಕಿನಲ್ಲಿ ಗುರಿಯಿಟ್ಟು ಹೊಡೆಯುವುದಾಗಿದೆ. ಸಮರ್ಥ ಬೇಟೆಗಾರನಿಗೆ ಈ ಬೇಟೆ ಸಾಧ್ಯವಾಗುತ್ತದೆ.

೪. **ಪಕ್ಷಿಬೇಟೆ :** ಹಣ್ಣು, ಧಾನ್ಯ ಮತ್ತಿತರ ಬೆಳೆಗಳನ್ನು ತಿನ್ನಲು ಬರುವ ಹಕ್ಕಿಗಳನ್ನು ಮರದ ಮೇಲೆ ಇತರೆಡೆಗಳಲ್ಲಿ ಹೊಡೆಯುವುದೇ ಪಕ್ಷಿಬೇಟೆ. ಇಲ್ಲಿನ ಪ್ರಾಣಿಗಳೂ ಸಹಾ ಸಣ್ಣ ಶಿಕಾರಿ ಅಥವಾ ಪಕ್ಷಿಬೇಟೆಗೆ ಸೇರುತ್ತವೆ. ಪಕ್ಷಿಗಳಿಗೆ ಬೇಡರು ಬಡಿಗೆ ಬಂಡೆ ಮತ್ತು ಮರೆಕ್ಕೋಲು ಒಡ್ಡುವ ಪದ್ಧತಿಯಿದೆ.

೫. **ಲೈಟು ಶಿಕಾರಿ :** ದೀಪದ ಬೆಳಕಿನಿಂದ ರಾತ್ರಿ ಪ್ರಾಣಿಗಳನ್ನು ಪತ್ತೆ ಮಾಡಿ ಬೇಟೆಯಾಡುವುದಕ್ಕೆ ಲೈಟು ಶಿಕಾರಿ ಎಂದು ಹೆಸರು. ವಿಕ್ರಮಾರ್ಜುನವಿಜಯದಲ್ಲಿ ಪಂಪ ದೀಪದ ಬೇಟೆ ಉಲ್ಲೇಖ ಮಾಡಿದ್ದಾನೆ. ಹಣೆಗೆ ಲೈಟು ಕಟ್ಟಿ ರಾತ್ರಿ ಹೊತ್ತು ಬೇಟೆಯಾಡುವ ಬೇಡರು ದಿನ ರಾತ್ರಿ ಒಂದಕ್ಕೆ ೫-೬ ಮೊಲ ಇತರ ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಬ್ಯಾಟರಿಯಲ್ಲಿ ಪ್ರಾಣಿ ಅರಚುವ ಶಬ್ದ ಬರುತ್ತದೆ. ಸುಲಭವಾಗಿ ಪ್ರಾಣಿಗಳು ಸಿಗುತ್ತವೆ. ಇಂದಿಗೂ ಇದು ಪ್ರಚಲಿತದಲ್ಲಿದೆ.

೬. **ಸೋಹು ಬೇಟೆ :** ಹತ್ತು - ಹದಿನೈದು ಕೋವಿದಾರರು ಇದಕ್ಕಿಂತ ಹೆಚ್ಚು ಸೋವುವವರು ಹಲವು ನಾಯಿಗಳು ಸೋಹು ಬೇಟೆಗೆ ಅಗತ್ಯವಿದೆ. ಬಲ್ಲುಗಳ ಮೂಲಕ ಪ್ರಾಣಿಗಳನ್ನು ಕೊಲ್ಲುತ್ತಾರೆ. ಸೋವುಗರ ಜತೆಗೆ ಸಿಡಿಮದ್ದನ್ನು ಪ್ರಯೋಗಿಸಿ ಕೊಲ್ಲುತ್ತಾರೆ. ಇದು ಮಲೆನಾಡಿನಲ್ಲಿ ಹೆಚ್ಚು ಪ್ರಚಲಿತದಲ್ಲಿದೆ.

೭. **ಕೋವಿ ಎತ್ತಿಕಟ್ಟುವ ಬೇಟೆ :** ಪ್ರಾಣಿಗಳು ಅಡ್ಡಾಡುವ ಸ್ಥಳದಲ್ಲಿ ರಾತ್ರಿ ಹೊತ್ತು ವ್ಯವಸ್ಥಿತವಾಗಿ ಕೋವಿಯನ್ನು ಜೋಡಿಸಿ ಕೊಲ್ಲುವ ವಿಧಾನಕ್ಕೆ ಶಿಸ್ತು ಬೇಟೆ ಅಥವಾ ಕೋವಿ ಎತ್ತಿಕಟ್ಟುವುದು ಎನ್ನಲಾಗಿದೆ. ಜಿಂಕೆ, ಹಂದಿ, ಹುಲಿ, ಇತರ ಪ್ರಾಣಿಗಳನ್ನು ಈ ವಿಧಾನದಿಂದ ಕೊಲ್ಲಬಹುದು. ಇಲ್ಲಿ ಪ್ರಾಣಿಗಳ ಹೆಜ್ಜೆಗಳ ಆಧಾರದಿಂದಲೇ ಕೋವಿಯನ್ನು ಕಂಬ ಅಥವಾ ಮರಗಳಿಗೆ ಜೋಡಿಸಲಾಗುವುದು. ಮಲೆನಾಡಿನಲ್ಲಿ ಇದು ಪ್ರಚಲಿತದಲ್ಲಿದೆ. ಕೋವಿಯ ಅಟಬಿಲ್ಲಿಗೆ ಒಂದು ದಾರವನ್ನು ಕಟ್ಟಿ ಆ ದಾರದ ಇನ್ನೊಂದು ತುದಿಯಲ್ಲಿ ಪ್ರಾಣಿಯು ಅಡ್ಡಾಡುವ ದಾರಿಗೆ ಅಡ್ಡವಾಗಿ ಹತ್ತು ಗಜ ದೂರದಲ್ಲಿರುವ ಕಂಬಕ್ಕೆ ಕಟ್ಟಲಾಗುವುದು. ಪ್ರಾಣಿಗಿದು ತಾಗಿದರೆ ಗುಂಡು ಸಿಡಿದು ಸಾಯುತ್ತದೆ.

೮. **ಕರ್ಪು ತೋಡುವುದು :** ಹೊಂಡ (ಕರ್ಪು) ಮಾಡಿ ಪ್ರಾಣಿಗಳು ಎತ್ತರದಿಂದ ಕೆಳಗೆ ನೆಗೆದು ಓಡಾಡುವಲ್ಲಿ ಬೇಟೆಯಾಡುತ್ತಾರೆ. ಹಂದಿಬೇಟೆಗೆ ಇದು ಉಪಕಾರಿ, ಆಳವಾದ ತಗ್ಗು ತೆಗೆದು ಚೂಪಾದ ಗೂಟ (ದಸಿ)ಗಳನ್ನು ನೆಡಬೇಕು. ಹೊಂಡದ ಮೇಲೆ ಒಣಮರ ತೆಳು ಕೊಂಬೆಗಳನ್ನು ಹರಡಿ ಅದರ ಮೇಲೆ ತೆಳುವಾಗಿ ಮಣ್ಣನ್ನು ಚೆಲ್ಲಬೇಕು. ಇದನ್ನರಿಯದ ಪ್ರಾಣಿಗಳು ಅನಾಯಾಸವಾಗಿ ಬೇಟೆಗೆ ಬಲಿಯಾಗುತ್ತವೆ. ಖೆಡ್ಡಾವನ್ನು ಇದಕ್ಕೆ ಹೋಲಿಸಬಹುದು.

೯. **ಉರುಲು ಹಾಕುವುದು :** ಪಕ್ಷಿಗಳನ್ನು ಹಿಡಿಯಲು ಗಟ್ಟಿಯಾದ ದಾರವನ್ನು ಮರದ ರೆಂಬೆ ಅಥವಾ ಕಂಬದ ಗುಬ್ಬಚ್ಚಿಗೆ ನೇರವಾಗಿ ಕಟ್ಟಿರುತ್ತಾರೆ. ಹೊರಡುವ ಪಕ್ಷಿ ವೃತ್ತಾಕಾರವಿರುವ ಉರುಲಿಗೆ ಬದ್ದಾಗ ಬೇಟೆಗಾರ ಪಡೆಯುತ್ತಾನೆ. ಬೇಡರು ಕೌಜುಗ, ಬೆಳವ, ಗಿಳಿ ಮೊದಲಾದವನ್ನು ಹಿಡಿಯಲು ಇದನ್ನು ಪ್ರಯೋಗಿಸುವರು. ಗಿಳಿಯನ್ನು ತಿನ್ನುವುದಿಲ್ಲವಾದರೂ ಸಾಕುವರು.

೧೦. **ಗಾಳ ಹಾಕುವುದು :** ನೀರಿನಲ್ಲಿ ವಿಶೇಷವಾಗಿ ಮೀನನ್ನು ಹಿಡಿಯಲು ಬಲೆಗಳಷ್ಟೇ ಅಲ್ಲದೇ ಗಾಳಗಳ್ನು ಬಳಸುತ್ತಾರೆ. ಮಲೆನಾಡು ಮತ್ತು ಬಯಲುಸೀಮೆಯಲ್ಲಿ ಕೆರೆ, ಕಾಲುವೆ ಮತ್ತು ಬಾವಿಗಳಲ್ಲಿ ಗಾಳಹಾಕಿ ಬೇಟೆಯಾಡುವುದನ್ನು ನೋಡಬಹುದು. ಗಾಳದ ಬಗೆಗೆ ಕವಿಗಳು ಉಲ್ಲೇಖಿಸಿರುವುದು ಸ್ಪಷ್ಟ.

೧೧. **ಕೂಳಿ ಹಾಕುವುದು :** ತೆಂಗಿನ ಗರಿಗಳ ಕಡ್ಡಿಗಳನ್ನು ವೃತ್ತಾಕಾರದಲ್ಲಿ ವ್ಯವಸ್ಥಿತವಾಗಿ ಕಟ್ಟಿದ ಪರಿಕರ. ವಿಶೇಷವಾಗಿ ಹರಿಯುವ ನೀರಿಗೆ ಅಡ್ಡಲಾಗಿ ಇದನ್ನಿಟ್ಟು ಮೇಲೆ ಭಾರವಾದ ವಸ್ತುವನ್ನು ಇಡುತ್ತಾರೆ. ಹತ್ತುವ ನೀರಿನಿಂದ ಬರುವ ಮೀನುಗಳು ಇದರಲ್ಲಿ ಬೀಳುತ್ತವೆ. ಮೀನು ಹಿಡಿಯುವಲ್ಲಿ ಇದೊಂದು ಸುಲಭ ಸಾಧನವಾಗಿದೆ. ಬೇಡರು ಹಳ್ಳ, ತೊರೆ, ಕೆರೆ, ಕಾಲುವೆಗಳಲ್ಲಿ ಇಂಥ ಕೂಳಿ ಹಾಕಿ ಮೀನು ಹಿಡಿಯುವುದುಂಟು.

ರಾಘವಾಂಕನು ಹರಿಶ್ಚಂದ್ರ ಕಾವ್ಯದಲ್ಲಿ ಬೇಟೆಯಾಡುವ ವಿಧಾನ, ಬಗೆಗಳನ್ನು ಸಂಪ್ರದಾಯಬದ್ಧವಾಗಿ ಹೇಳಿದರೂ, ಗೋರಿವೇಂಟೆ, ಪಕ್ಷಿಬೇಟೆ ಮೂಲಕ ಬೇಟೆಯ ಚಿತ್ರಗಳನ್ನು ಸೊಗಸಾಗಿ ಚಿತ್ರಿಸಿದ್ದಾನೆ. ಪ್ರಾಣಿಗಳ ಉಗುರು, ತುಪ್ಪಳ, ಪ್ರಾಣಿಗಳ ನೊರೆ ಮುಂತಾದವುಗಳ ಗುರುತುಗಳನ್ನು ನೋಡುತ್ತ ಧ್ವನಿಯನ್ನು ಆಲಿಸುತ್ತ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಬೇಟೆಗಾರರು ಹಳ್ಳವನ್ನು ತೋಡಿ ಪ್ರಾಣಿಗಳು ಓಡುತ್ತ ಬಂದು ಹಳ್ಳದಲ್ಲಿ ಬೀಳುವ ಹಾಗೆ, ತಾವು ತಂದಿರತಕ್ಕ ತಡಿಕೆಗೆ ಅಂಟನ್ನು, ಕಾಡಿಗೆ ಬೆಂಕಿಯನ್ನು ಹಚ್ಚುವುದರ ಮೂಲಕ ಪ್ರಾಣಿಗಳನ್ನು ಬೇಟೆಯಾಡುವ ಚಿತ್ರಣವಿದೆ.

ಬೇಡಪಡೆಯು ಪ್ರಾಣಿಗಳ ಚಲನವಲನಗಳನ್ನು ಎಷ್ಟು ಸೂಕ್ಷ್ಮವಾಗಿ ಗಮನಿಸುತ್ತಿದ್ದರೆಂದು ಹೀಗೆ ನೋಡಲಾಗಿದೆ : ಹರಿಶ್ಚಂದ್ರ ಕಾವ್ಯದಲ್ಲಿ ಬರುವ ಬೇಟೆಯ ವರ್ಣನೆಯನ್ನು ಗಮನಿಸಿದರೆ ನಮಗೆ ಸೌಂದರ್ಯೋಪಾಸನೆ, ಸಹಜ ವರ್ಣನೆ, ಸ್ಫೂರ್ತಿ ಸೂಕ್ಷ್ಮದೃಷ್ಟಿಗಳ ಕಲ್ಪನೆಯಾಗುವುದು ಎಂದು ತಿಳಿದು ಬರುತ್ತದೆ (೫:೨೬: ೭೧).

ಬೇಡಪಡೆಯ ಮೂಲಕ ಸೂಕ್ಷ್ಮ ಚಿಹ್ನೆಗಳನ್ನು ತೋರುತ್ತಾ, ಕ್ಷ - ಕಿರಣ ದೃಷ್ಟಿಯುಳ್ಳವರಾಗಿ ಬೇಟೆಯಾಡುವ ವರ್ಣನೆ ರಾಘವಾಂಕನಲ್ಲಿದೆ. ಬೇಡಪಡೆಯು ಹಲವಾರು ರೀತಿಯಿಂದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಕೆಲವೊಮ್ಮೆ ಕಾಡುಮೃಗಗಳು ಅವರ ಸಾಹಸ ಹಾಗೂ ಪರಿಣತಿಗೆ ಸವಾಲಾಗಿ ನಿಲ್ಲುತ್ತಿದ್ದವು. ಆಗ ನಿರುತ್ಸಾಹಗೊಳ್ಳದೆ ಕಾಡಿನ ಒಡೆಯನನ್ನು ಬೇಡರ ಒಡೆಯ ಪ್ರಾರ್ಥಿಸುವ ವಿಷಯ ಇದರಲ್ಲಿ ಉಲ್ಲೇಖಿತವಾಗಿದೆ. ಶಕ್ತಿ ಸಾಹಸಕ್ಕೂ ಮೀರಿದ ದೈವವೊಂದಿದೆ ಅವರ ಪ್ರಾರ್ಥನೆಯಿಂದ ತಮ್ಮ ಕೆಲಸಗಳು ಸುಗಮಗೊಳ್ಳುತ್ತವೆ ಎಂಬ ನಂಬಿಕೆ ಬೇಡರಿಗೆ ಇತ್ತೆನ್ನುವುದು ಖಚಿತವಾಗುತ್ತದೆ. ಇಲ್ಲಿ ಸಾಮಾನ್ಯ ಬೇಟೆಗಾರ ಮತ್ತು ಶಂಕರನು ಬೇಟೆಯಾಡುವ ಸ್ವರೂಪ ಬೇರೆ ಬೇರೆಯಾಗಿರುತ್ತದೆ.

ಬೇಟೆಯ ವಿಧಾನಗಳು : ಬೇಟೆಯ ವಿಧಾನದ ಮೂಲಕ ಆಯುಧಗಳನ್ನು ಬಳಸಿ ಬೇಟೆಯಾಡುವುದು, ಬಲೆಹಾಕಿ ಬೇಟೆಯಾಡುವುದು ಹೀಗೆ ಪ್ರಾಣಿ ಬೇಟೆ, ಜಲಬೇಟೆ, ಮುಂತಾದವುಗಳನ್ನು ನಾನಾ ವಿಧವಾಗಿ ಆಡುತ್ತಿದ್ದರು. ಇಲ್ಲಿ ಭೂಮಿಯ ಮೇಲೆ ಆಡುವ ಬೇಟೆ, ಜಲಬೇಟೆ ಎಂದೂ ಲೌಕಿಕ ಮತ್ತು ಅಲೌಕಿಕ ಬೇಟೆಯೆಂದು ತಿಳಿಸಲಾಗಿದೆ. ಪ್ರಾಣಿ, ಪಕ್ಷಿ, ಜಲಚರ ಪ್ರಾಣಿಗಳನ್ನು ಪ್ರತ್ಯೇಕವಾಗಿ ವಿವರಿಸಬೇಕಾಗುತ್ತದೆ. ಇವೆಲ್ಲವುಗಳನ್ನು ಗಮನಿಸಿ ಬೇಟೆಯ ಬಗೆಗಳು ಕನ್ನಡ ಕಾವ್ಯಗಳಲ್ಲಿ ಹೇಗೆ ಉಲ್ಲೇಖಿತಗೊಂಡಿರುವುದನ್ನು ಕಾಣಬಹುದು.

ಬೇಟೆಯಲ್ಲಿ ಅನೇಕ ವಿಧಗಳಿವೆ. ಪ್ರಾಣಿ, ಪಕ್ಷಿ, ಮೀನು ಇತರ ಪ್ರಾಣಿಗಳನ್ನು ವೈವಿಧ್ಯಮಯ ರೀತಿಯಲ್ಲಿ ಬೇಟೆಯಾಡುತ್ತಾರೆ. ಕನ್ನಡ ಕಾವ್ಯಗಳಲ್ಲಿ ಪ್ರಾಣಿಬೇಟೆಯನ್ನೇ ಹೆಚ್ಚಾಗಿ ತಿಳಿಸಿದ್ದಾರೆ.

ಪಂಪ ತನ್ನ ಕಾವ್ಯದಲ್ಲಿ ಪೆರ್ವೆಂಟೆ, ಕಿರುವೆಂಟೆ, ದೀಪದ ಬೇಟೆ, ಹಂದಿಯ ಬೇಟೆ ಇತರೆ ಬೇಟೆಯ ಬಗೆಗಳನ್ನು ಹೆಸರಿಸಿದ್ದಾನೆ. **ಪೆರ್ವೆಂಟೆ :** ಬೇಟೆಗಾರ ನೆಲದ ಏರು-ತಗ್ಗು, ಗಾಳಿ ಬೀಸುವ ದಿಕ್ಕು ಮತ್ತು ಕಾಲಾಳು ಕುದುರೆಗಳೊಂದಿಗೆ ವನಪ್ರವೇಶ ಮಾಡುವ ವಿಧಾನವನ್ನು ಅರಿತಿರಬೇಕು. ದೀಪದ ಬೇಟೆ : ಕಾಡಿನಲ್ಲಿ ರಾತ್ರಿಹೊತ್ತು ದೀಪದ ಬೆಳಕಿನ ಮೂಲಕ ಬೇಟೆಯಾಡುವುದು, ಆಗಿನ ಕಾಲದಲ್ಲಿ ಈ ಬೇಟೆ ಪ್ರಚಲಿತದಲ್ಲಿತ್ತು. ದೀಪದ ಬೇಟೆಗಾರ ಚತುರ, ಜಾಣನಾಗಿರುತ್ತಿದ್ದ. ರಾತ್ರಿ ಬೇಟೆಯನ್ನು ಅಧಾರ್ಮಿಕ ಶಿಕಾರಿ ಎನ್ನುತ್ತಾರೆ. **ಕಿರುವೆಂಟೆ :** ನೆಲದ ಮೇಲೆ ಮೃಗದ ಹೆಜ್ಜೆಯನ್ನು ಗುರುತಿಸಿ ಹೊಸತು, ಹಳೆಯದೆಂದು ನೋಡಿ, ದಿಕ್ಕು ಕಂಡುಹಿಡಿಯುವ ಬೇಟೆಯಾಗಿದೆ. ಇಲ್ಲಿ ಪಿಡಹಂದಿ, ತೆನೆಹಂದಿ, ಕುರುಜುಹಂದಿ, ಕುಂಟುಹಂದಿ, ಮೊದಲಾದ ಹಂದಿಬೇಟೆಯ ಪ್ರಾಣಿಗಳ ಹೆಸರುಗಳಿವೆ. ಬಲಿಷ್ಟ ಪ್ರಾಣಿಗೆ ಗುರಿಕಾರ ಬೇಟೆಯ ತಂತ್ರಗಳನ್ನು ಅರಿತಿರಬೇಕಾಗುತ್ತದೆ.

ಹರಿಹರನು ಗಿರಿಜಾಕಲ್ಯಾಣದಲ್ಲಿ ಜಿಂಕೆಬೇಟೆ ಬಗ್ಗೆ ಒಲವು ತೋರಿಸಿದ್ದಾನೆ. ದೇಪರಾಜನ ಸೊಬಗಿನಸೋನೆಯಲ್ಲಿ ಹೊಲಕ್ಕೆ ನುಗ್ಗಿ ಉಪಟಳ ಮಾಡುತ್ತಿದ್ದ ಸಿಂಹವನ್ನು ಅರಸ ಬಲ್ಲಿಡಿದು ಬೇಟೆಯಾಡಿದರೆ, ಪರಿವಾರದವರು ಬಲೆಬೀಸಿ ಸಿಂಹವನ್ನು ಸುತ್ತುಗಟ್ಟುತ್ತಾರೆ. ಬೇಡರಪಡೆ ಕೊಂಬು, ಕಹಳೆ ಓಡಿದು ಬೇಟೆಯಾಡುವುದು ವಿಶೇಷ.

ಹುಲಿ ಬೇಟೆಯ ಬಗೆಗೆ ಅನೇಕ ವಿವರಗಳು ಸಿಗುತ್ತವೆ. ಹರಿಹರನ ಗಿರಿಜಾಕಲ್ಯಾಣ (೧-೪೯), ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವಂ (೩-೧೩೭,೩-೧೫೩), ರುದ್ರಭಟ್ಟನ ಜಗನ್ನಾಥ ವಿಜಯ (೧೬-೨೦) ಮೊದಲಾದ ಕಾವ್ಯಗಳಲ್ಲಿ ಈ ವರ್ಣನೆ ಬಂದಿದೆ.

ಆನೆಯ ಬೇಟೆಯು ಅಂದು ಪ್ರಚಲಿತವಿತ್ತು. ಆನೆಯನ್ನು ಸಾಹಸ ಪ್ರದರ್ಶನಗೊಳಿಸುವ ಉದ್ದೇಶಕ್ಕಲ್ಲದೆ, ಲಾಭದಾಯಕ ಸಂಪತ್ತಿಗಾಗಿ ಬೇಟೆಯಾಡುತ್ತಿದ್ದರು. ಕಾಡಿನಲ್ಲಿ ದೊಡ್ಡ ಗಾತ್ರ, ತಗ್ಗುಮಾಡಿ, ಮೇಲೆ ಮಣ್ಣು ಹಾಕಿ ಆನೆಗಳು ಬಂದು ಅದರಲ್ಲಿ ಬೀಳುವಂತೆ ಮಾಡುತ್ತಿದ್ದರು. ಹರಿಹರನ ಗಿರಿಜಾಕಲ್ಯಾಣ(೧-೧೧೨), ನೇಮಿಚಂದ್ರನ ಲೀಲಾವತಿಪ್ರಬಂಧಂ (೬-೬೯), ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ (೩-೧೫೮) ಉಲ್ಲೇಖಗಳಿವೆ. ಜಗನ್ನಾಥವಿಜಯ (೧೬-೨೧) ಮತ್ತು ಸೂಕ್ತಿಸುಧಾರ್ಣವಂ (೩-೧೬೪) ಕಾವ್ಯಗಳಲ್ಲಿ ಆನೆಯ ಬೇಟೆಯ ವರ್ಣನೆ ವ್ಯಾಪಕವಾಗಿ ಬಂದಿದೆ. 'ಬಹಳ ಗಟ್ಟಿಗನಾದ ಬೇಡನೊಬ್ಬನು ಆನೆ, ಕಾಡುಹಂದಿ, ಹುಲಿಗಳೊಂದಿಗೆ ಹೋರಾಡಿ ಸಾಯಿಸಿ, ಆದ ಗಾಯಗಳೊಂದಿಗೆ ಅವುಗಳ ಮಾಂಸವನ್ನು ಹೊತ್ತು ತರುವುದನ್ನು ರುದ್ರಭಟ್ಟ ಜಗನ್ನಾಥ ವಿಜಯದಲ್ಲಿ ತಿಳಿಸಿದ್ದಾನೆ.

ಸಿಂಹದ ಬೇಟೆ ವರ್ಣನೆಯಿರುವ ಪದ್ಯ ಮಾತ್ರವಲ್ಲದೆ (ಜಗನ್ನಾಥವಿಜಯ ೧೬-೧೨), ಹೀಗೆ ಹಂದಿ ಬೇಟೆಯ ಬಗೆಗೆ ಕನ್ನಡ ಕಾವ್ಯಗಳಲ್ಲಿ ವಿಪುಲವಾದ ವರ್ಣನೆ ಇದೆ (ಸೂಕ್ತಿಸುಧಾರ್ಣವ ೩-೩೩). ಕಾಲ್ಪನಿಕವಾದ ಎರಡು ತಲೆಗಳಿರುವ ಭೇರುಂಡ ಪಕ್ಷಿಯ ವರ್ಣನೆಯನ್ನು ನೇಮಿಚಂದ್ರ (ಲೀಲಾವತಿ ೮-೨೭) ಮತ್ತು ಮಲ್ಲಿಕಾರ್ಜುನರು (ಸೂಕ್ತಿ ಸುಧಾರ್ಣವಂ ೩-೭೮) ಹೇಳಿದ್ದಾರೆ. ಇವರು ಬೇಡರ ಬೇಟೆಯ ಕೌಶಲ್ಯವನ್ನು ವಾಸ್ತವ ನೆಲೆಯಲ್ಲಿ ಚಿತ್ರಿಸಿದ್ದಾರೆ.

ರಾಘವಾಂಕನು ಹರಿಶ್ಚಂದ್ರಕಾವ್ಯದಲ್ಲಿ ಅಂದು ಚಾಲ್ತಿಯಲ್ಲಿದ್ದ ಬೇಟೆಯ ಬಗೆಗಳನ್ನು ತಿಳಿಸಿದ್ದಾನೆ :

.... ಗೋರಿ
ವೇಂಟೆ ಪಳಹರವೇಂಟೆ ಪಟವೇಂಟೆ ವಿದ್ಯಾಧರರ ಬೇಂಟೆ ಚಿತ್ರವೇಂಟೆ
ಅಂಟುಜಲವೇಂಟೆ ತೋಹಿನ ಬೇಂಟೆ ಘನಸೋಹು
ವೇಂಟೆಗಳೆನಿಪ್ಪ ಹೆಸರಂ ಹೊತ್ತು ಮರೆಯುತಿ
ಪ್ಪೆಂಟು ತೆರದುಚಿತವೇಂಟೆಯನಾಡಿದಂ ಹರಿಶ್ಚಂದ್ರವಸುದಾಧೀಶನು (೫-೪೯-೭೮).

ಅವುಗಳೆಂದರೆ : ೧. ಗೋರಿವೇಂಟೆ ೨. ಪಳಹರವೇಂಟೆ ೩. ವಿದ್ಯಾಧರವೇಂಟೆ ೪. ಪಟವೇಂಟೆ ೫. ಚಿತ್ರವೇಂಟೆ ೬. ಅಂಟುಜಲವೇಂಟೆ ೭. ತೋಹಿನಬೇಟೆ ೮. ಘನಸೋಹುವೇಂಟೆ. ಈ ಎಂಟು ಪ್ರಕಾರದ ಬೇಟೆಗಳಲ್ಲಿ ಗೋರಿವೇಂಟೆ, ಜಲವೇಂಟೆ ಹಾಗೂ ತೋಹಿನ (ವಂಚನೆಯಿಂದ ಹೊಂಚು ಹಾಕಿ ಬೇಟೆಯಾಡುವ) ಬೇಟೆಗಳನ್ನು ಕುರಿತು ಅನೇಕ ಮಾಹಿತಿಯನ್ನು ರಾಘವಾಂಕ ನೀಡುತ್ತಾನೆ.

೧. **ಗೋರಿವೇಂಟೆ :** 'ಗೋರಿ' ಎಂದರೆ ಪ್ರಾಣಿಗಳನ್ನು ಆಕರ್ಷಿಸುವ ಹಾಡು. ಸುಂದರವಾದ ರಾಗಗಳನ್ನು ಹಾಡುತ್ತ ಎರಳೆಗಳನ್ನು ಆಕರ್ಷಿಸಿ ಅವುಗಳನ್ನು ಸೆರೆಹಿಡಿಯತಕ್ಕ ಬೇಟೆ ಪ್ರಕಾರ. ಹರಿಶ್ಚಂದ್ರಕಾವ್ಯದಲ್ಲಿ ರಾಘವಾಂಕನು ಗೋರಿವೇಂಟೆಯ ವರ್ಣನೆಯನ್ನು ಹೀಗೆ ಮಾಡಿದ್ದಾನೆ :

..... ರಾಗರಸದ
ಸೊಗಸನಪ್ಪಿದ ಚಿತ್ತವಳ್ಳಿರಿವ ಜನದ ಬೊ
ಬ್ಬೆಗೆ ಬೆದರುತಿಪ್ಪ ಮನವೆರಸಿ ಮರುಳಾಗಿ ಗೋ
ರಿಗೆ ಸಿಕ್ಕಿದೆರಲೆಗಳನಕಟಕಟ ನಿಷ್ಕರುಣಾಲುಬ್ಧಕರು ಕಿಡೆಯೆಚ್ಚರು (೫-೨೭ :೭೨).

ಬೇಡಪಡೆ ಪಕ್ಷಿಗಳನ್ನು ಸೆರೆಹಿಡಿಯಲು ಲಾವುಗೆ, ಹರಡೆ, ಗಾಜು, ಟಿಟ್ಟಭ, ಕೋಕಿಲ, ತುರುವೆಗಣ್ಣು, ಹಂಸೆ, ರಾಗಧರ ಎಂಬ ಪಕ್ಷಿಗಳ ಧ್ವನಿಯಲ್ಲಿಯೇ ಕರೆದು ಆ ಪಕ್ಷಿ ಸಮೂಹವನ್ನು ಸೆರೆ ಹಿಡಿಯುತ್ತಿದ್ದರು (೫: ೪೩:೭೬).

೨. **ಜಲವೇಂಟೆ :** ಜಲಬೇಟೆ ಎನ್ನುವುದು ಜಲಚರ ಪ್ರಾಣಿಗಳನ್ನು ಬೇಟೆಯಾಡತಕ್ಕ ವಿಧಾನ. ಜಲಚರ ಪ್ರಾಣಿಗಳನ್ನು ಇಂಗೂಳಿ, ಹೆಗ್ಗೂಳಿ, ಕಿರುಗೂಳಿ ಎಂಬ ೩ ರೀತಿಯ ಗಾಳಗಳಿಂದ ಗೋರಿ ಬರೆಗಳಿಂದ ಹಲವು ಜಾಲಗಳಿಂದ ಉದ್ದ ದಾರ ಬಗಿದ ಸಿಲುಕಂಬನಿಂದ ಸೊಗಡು ಗೂಳುಗಳಿಂದ (ಮೀನು ಹಿಡಿಯುವ ವಾಸನೆಯುಳ್ಳ ಬುಟ್ಟಿ), ಮದ್ದುಗಳ ಮಸಕದಿಂದ (ಆಹಾರದಲ್ಲಿ ಬೆರೆಸುವ ಮಂದವಾದ ವಿಷ), ನದಿ, ಕಾಲುವೆ ಬಾವಿಗಳಲ್ಲಿ ಮೀನುಗಳನ್ನು ಸೆರೆ ಹಿಡಿಯುತ್ತಿದ್ದರು (೫:೪೪:೭೭). ಮೀನಿನ ಬೇಟೆ ಬಗ್ಗೆ ರಾಘವಾಂಕ ಉತ್ಸಾಹಭರಿತನಾಗಿ ಹೇಳಿದ್ದಾನೆ.

೩. ತೋಹಿನ ಬೇಟೆ : ಎದುರಾಳಿ ಪ್ರಾಣಿಗೆ ತಾನಿರುವ ಸ್ಥಳದ ಸುಳಿವನ್ನು ತೋರಿಸದೆ ಅವುಗಳನ್ನು ಬೇಟೆಯಾಡತಕ್ಕ ರೀತಿ ಎಂದರ್ಥ. ಹೊಂಚು ಹಾಕಿ ಬೇಟೆಯಾಡತಕ್ಕ ವಿಧಾನವಾಗಿದೆ. ಹುಲಿಗಳನ್ನು ಬೇಟೆ ನಾಯಿಗಳಂತೆ ಬೇಟೆಯ ಸಲುವಾಗಿ ಸಾಕಿ ಪ್ರಯೋಗಿಸುತ್ತಿದ್ದರು. ಹುಲಿಯೊಂದು ಹೊಂಚುಹಾಕಿ ಜಂಕೆಗಳನ್ನು ಬೇಟೆಯಾಡುವುದನ್ನು ಕಣ್ಮುಂದೆ ಕಟ್ಟುವಂತೆ ರಾಘವಾಂಕ ವರ್ಣಿಸಿದ್ದಾನೆ.

..... ಬಂಡಿಯಿಂದಿಳುಹಿ ಹುಲಿಯ
ಹಾರಯಿಸಿ ತಲೆದಡವಿ ತೋರಿ ಹಾಸವ ತಿವಿದು
ದೂರದಿಂಕಂಡು ಹಸರಿಸಿ ಹತ್ತಿ ಹಣುಗಿ ನೆಲ,.....
ಕೋರಂತೆಯಡಗಿ ತನ್ನನುವಿನಳವಿಗೆ ಜುಣುಗಿ ನಡೆದು ಬಳಕೇಗೈಯ್ದುದು.

(೫-೩೦)

'ಹರಿಶ್ಚಂದ್ರ ಭೂವರನು ಗೋರಿಬೇಟೆಯನ್ನಾಡಿ (ಮೃಗಗಳನ್ನು ಉಪಾಯವಾಗಿ ಹಿಡಿಯುವ ಬೇಟೆ), ಕಾಡಿನಲ್ಲೆಲ್ಲ ತಿರುಗಿ, ಬೇಟೆಯಾಡಿದ ಮೃಗಗಳನ್ನೆಲ್ಲ ಒಂದೆಡೆ ಕೂಡಿಹಾಕಿಸಿ, ಮೇಗಾಳಿಯಲ್ಲಿ ದೂರದಲ್ಲಿ ತೋರೆತ್ತನ್ನು ಒಡ್ಡಿ (ಬೇಟೆಯಾಡಬೇಕಾಗಿರುವ ಪ್ರಾಣಿಯ ಕಡೆಗೆ ಬೀಸುವ ಗಾಳಿಯಲ್ಲಿ), ಕಿಗ್ಗಾಳಿಯಲ್ಲಿ (ಬೇಟೆಯಾಡಬೇಕಾಗಿರುವ ಪ್ರಾಣಿಯ ಕಡೆಯಿಂದ, ಬೇಟೆಯಾಡುವ ತಮ್ಮ ಸಾರು ಪ್ರಾಣಿಯ ಕಡೆಗೆ ಬೀಸುವ ಗಾಳಿಯಲ್ಲಿ), ಸಾಕಿದ ಹುಲಿಗಳನ್ನು ಬಂಡಿಯಿಂದ ಇಳಿಸಿ, ಅಪೇಕ್ಷೆ (ಪ್ರೀತಿ)ಯಿಂದ ತಲೆದಡವಿ, ಸ್ಥಳವನ್ನು ತೋರಿಸಿ, ಕೊರಳ ಹಗ್ಗವನ್ನು ತಿವಿದು ಬಿಡಲು, ಅವು ದೂರದಿಂದಲೇ ಹರಡಿಕೊಂಡು (ತಮ್ಮ ತಮ್ಮಲ್ಲೇ ಹಂಚಿಕೊಂಡಂತೆ) ಹತ್ತಿ ಹೊಂಚಹಾಕಿ, 'ಕುಸಿದ ತಲೆ, ಹೊಂಚುಹಾಕಿದ ದೇಹ, ಅರಳುವ ಬಾಯಿ, ಸಿಗಿದ (ಹೆದರಿದ, ಎಚ್ಚರಗೊಂಡ) ಕಿವಿ, (ಶಬ್ದಕ್ಕೆ ಮತ್ತು ತಮ್ಮ ಉಸಿರಿನ ವಾಸನೆಗೆ ಮೃಗಗಳು ತಮ್ಮ ಬಳಿಗೆ ಬರುವುದಿಲ್ಲವೆಂದು), ಉಸಿರಾಡದ ಮೂಗು, ಮರೆತೂ ರೆಪ್ಪೆ ಮುಚ್ಚದ ಉರಿಗಣ್ಣು, ಹೊಟ್ಟೆಗೆ ಅಂಟಿಕೊಂಡ ಬೆನ್ನು ನಿಮಿರಿದ ಕೊರಳು, ಹೆಜ್ಜೆ ಹೆಜ್ಜೆಗೆ ಕೋಲಾಹಲಿಸುತ್ತಿರುವ, ನೆಗೆಯಲು ಹಾತೊರೆಯುತ್ತಿರುವ ಮುಂಗಾಲು ಇವುಗಳಿಂದ ಕೂಡಿ, ನೆಲವನ್ನು ಒದೆದು ಹಾರಿ, ಪುಟನೆಗೆದು ಗರ್ಜಿಸುತ್ತ ಬಂದು, ಹೆದರಿ ಕಂಗೆಟ್ಟು ತತ್ತರಿಸಿ ಹಾರುವ ಜಂಕೆಗಳನ್ನು ಸದೆ ಬಡಿದು ಮುರಿದು ಅಟ್ಟಿ ಕೆಡವಿದವು, ಬೇಟೆಯ ಹುಲಿಗಳು ಎಂದು ಹೇಳಿದ್ದಾನೆ (೫:೨೧:೭೩). ಹೀಗೆ ರಾಘವಾಂಕನು ಹುಲಿಗಳು ಹೊಂಚನಿಂದ ಪ್ರಾಣಿಗಳನ್ನು ಹಿಡಿಯುವ ಬಗೆಯನ್ನು ಅದ್ಭುತವಾಗಿ ವರ್ಣಿಸಿದ್ದಾನೆ. 'ನಿಜವಾದ ಬೇಟೆಯ ಭೀಕರತೆ ಕಂಡುಬರುವುದು ಮಾಯಾ ವರಾಹವನ್ನು ಬೇಟೆಯಾಡುವಲ್ಲಿ. ವಿಶ್ವಾಮಿತ್ರ ಮುನಿಯಿಂದ ಸೃಷ್ಟಿಸಲ್ಪಟ್ಟ ಮಾಯಾ ವರಾಹವನ್ನು ಕೊಲ್ಲುವುದು ಅಷ್ಟು ಸುಲಭವಲ್ಲ. ಸಿಡಿಲ ಕಿಡಿಯಂತೆ ಕೋರೈಸುವ ಕಣ್ಣುಳ್ಳ ಬ್ರಹ್ಮಾಸ್ತ್ರದ ಎರಡು ತುಂಡನ್ನು ತುರುಕಿದ ರೀತಿಯಲ್ಲಿ ಉದ್ದವಾದ ಕೋರೆಹಲ್ಲುಳ್ಳ ...... ಕೋಪಗೊಂಡ ಯವತಿನ ಕೋಣವು ಹಂದಿಯ ಮುಖವನ್ನು ಪಡೆಯಿತೋ ಎನ್ನುವಂತೆ ಇರುವ (೬-೪) ಹಂದಿಯನ್ನು ಕೊಲ್ಲಲು ಬೇಡಪಡೆಗಾಗಲಿಲ್ಲ. ಆ ವರಾಹ ಬೇಟೆ ನಾಯಿಗಳನ್ನು ಸಾಯಿಸಿ ಬೇಡರನ್ನು ಕೊಂದಿತು. ಸಮಸ್ತ ಬೇಡರ ಪಡೆ, ಆಯುಧಗಳಿಂದ ಅದನ್ನು ಮುತ್ತಲು, ವರಾಹವು ಶಬರಪಡೆಯನ್ನು ಬಲವಾಗಿ ತಿವಿದು, ಸೀಳುತ್ತ ಬಾಳೇವನದಲ್ಲಿ ಕಠಾರಿಯ ಬಂಡಿ ಓಡಿದಂತೆ ಆ ಬೇಡಪಡೆಯನ್ನು ಹಿಂದಕ್ಕೆ ನೂಕಿತು. ಇಂತಹ ವರಾಹವನ್ನು ಕೊಲ್ಲಲು ಸ್ವತಃ ಹರಿಶ್ಚಂದ್ರ ರಾಜನೇ ಬರಬೇಕಾಯಿತು. ಹರಿಶ್ಚಂದ್ರ ರಾಜನನ್ನು ಸಾಕಷ್ಟು ಸತಾಯಿಸಿದ ನಂತರ ಆತನ ಬಾಣಕ್ಕೆ ತುತ್ತಾಗಿ ಪ್ರಾಣತೆತ್ತಿತು.

ಬೇಟೆಯ ವರ್ಣನೆ ಸಾಂಪ್ರದಾಯಿಕವೂ, ಕವಿ ಸಮಯವೂ ಆಗಿರದೆ ಕಾವ್ಯದ ವಸ್ತುವಿಗೆ ಹೊಂದಿಕೊಂಡು ಮನೋಜ್ಞವಾಗಿ ಮೂಡಿ ಬಂದಿದೆ. ಕವಿಯು ಬೇಟೆಯ ವರ್ಣನೆಯನ್ನು ನಿರುಪಮವಾಗಿ ಮಾಡಿದ್ದಾನೆ. ಅದು ಎಷ್ಟು ಸ್ವಾಭಾವಿಕವಾಗಿದೆ ಎಂದರೆ ನಾವೂ ಬೇಡರ ಉದ್ವೇಗ ಉತ್ಸಾಹಗಳಲ್ಲಿ ಭಾಗಿಯಾಗಿ ಹಾರಾಡುತ್ತೇವೆ. ಹಂದಿಯ ಬೇಟೆಯನ್ನು ವರ್ಣಿಸುವ ಸಹಜತೆಯನ್ನು ನೋಡಿದರೆ ಅವನು ಅದನ್ನು ತಾನೇ ನೋಡಿದ್ದನೆಂದು ತೋರುತ್ತದೆ.[ಳ]

ಹರಿಶ್ಚಂದ್ರ ಕಾವ್ಯದಲ್ಲಿ ಬೇಟೆಯ ವರ್ಣನೆಗೆ ಕಲ್ಪಿಸಿಕೊಂಡಿರುವ ಸನ್ನಿವೇಶ ಎಷ್ಟು ಸಹಜವಾಗಿದೆಯೋ ಅಷ್ಟೇ ಸಹಜವಾಗಿದೆ ರಾಘವಾಂಕನ ಬೇಟೆಯ ಚಿತ್ರಣ. ಕನ್ನಡ ಸಾಹಿತ್ಯದಲ್ಲಿ ಇಷ್ಟೊಂದು ಉತ್ತಮ ಬೇಟೆಯ ವರ್ಣನೆ ಮತ್ತೆಲ್ಲಿಯೂ ಕಂಡುಬರುವುದಿಲ್ಲ. ಸ್ವತಃ ಕವಿ ಬೇಟೆಯ ಅನುಭವವನ್ನು ಪಡೆಯದಿದ್ದರೆ ಈ ಬಗೆಯ ಸಹಜ ಚಿತ್ರಗಳನ್ನು ನಿರ್ಮಿಸಲು ಸಾಧ್ಯವೇ? ಎನ್ನಲಾಗಿದೆ.

ವರಾಹ ಬೇಟೆಯಲ್ಲಿ ಶಿವ-ಅರ್ಜುನರ ಬೇಟೆ ಪ್ರಸಂಗವನ್ನು ಷಡಕ್ಷರದೇವ ತಿಳಿಸಿರುವನು. ವ್ಯಕ್ತಿ-ವ್ಯಕ್ತಿಯನ್ನು ಬೇಟೆಯಾಡುವ ಸನ್ನಿವೇಶವನ್ನು ನೇಮಿನಾಥ ಪುರಾಣದ ಚಾರಣಯತಿಗಳನ್ನು ಬೇಟೆಯಾಡುವುದು ಉತ್ತಮ ಉದಾಹರಣೆ. ನಂಜುಂಡ ರಾಮನಾಥ ಚರಿತೆಯಲ್ಲಿ ತಡೆಬೇಟೆ ಬಗೆಗೆ ಹೇಳಿದ್ದಾನೆ. ರಾತ್ರಿ-ಹಗಲು ಕಾಡಿನಲ್ಲಿ ಸಂಚರಿಸುವ ಪ್ರಾಣಿಗಳ ಹಾದಿಯನ್ನು ತಿಳಿದು ಮರೆಯಾಗಿ ಅವುಗಳನ್ನು ಬೇಟೆಯಾಡುವುದೇ ತಡೆಬೇಟೆ ಅಥವಾ ಮರಸುಬೇಟೆ ಎನ್ನುವರು. ಇಲ್ಲಿ ಕಾವಲು ಮನೆಯನ್ನು ಕಟ್ಟಿ ಪ್ರಾಣಿ ಕೊಲ್ಲುತ್ತಾರೆ. ಮುಮ್ಮಡಿ ಕೃಷ್ಣರಾಜ ರಾಜ ಒಡೆಯರ್ ಸೌಂಗಧಿಕ ಪರಿಣಯದಲ್ಲಿ ೬ ವಿಧವಾದ ಬೇಟೆ ಪ್ರಕಾರಗಳನ್ನು ತಿಳಿಸಿದ್ದಾರೆ. ಕುದುರೆ ಮೇಲೆ ಬೇಟೆಯಾಡುವುದು, ಬಲೆ, ತಂತ್ರ-ಸಂಚು, ಪ್ರಾಣಿಗಳ ಹಾದಿ-ಚಹರೆ, ಇದ್ದ ಪ್ರಾಣಿಗೆ ಗುರಿಯಿಟ್ಟು ಕೊಲ್ಲುವುದು, ನಾಯಿಗಳನ್ನು ಪ್ರಾಣಿಗಳ ಮೇಲೆ ಬಿಡುವುದು ಇತ್ಯಾದಿ ಲಕ್ಷಣಗಳನ್ನು ತಿಳಿಸಿದ್ದಾರೆ. ಆಧುನಿಕ ಸಂದರ್ಭದಲ್ಲಿ ಇವೆಲ್ಲವೂ ಬದಲಾಗಿ ಬಂದೂಕು, ಬಲೆಗಳು ಮಾತ್ರ ಚಾಲ್ತಿಯಲ್ಲಿವೆ.

ಬೇಡ ಪಡೆ : ಬೇಟೆಯ ಸ್ವರೂಪ ಹಾಗೂ ವಿಧಾನಗಳಲ್ಲಿ ಬೇಡರ ಪಡೆ ಪಾತ್ರ ಮಹತ್ವದ್ದು. ಬೇಡರು ರಕ್ಷಣೆ, ಆಹಾರ ಸಂಗ್ರಹಣೆಗಾಗಿ ಒಬ್ಬ ಒಡೆಯನ ಅಧೀನದಲ್ಲಿ ಬೇಡಪಡೆಯನ್ನು ರಚಿಸಿಕೊಳ್ಳುತ್ತಾರೆ. ಕನ್ನಡದ ವಿವಿಧ ಕವಿಗಳು ಇವರಿಗೆ ಶಬರಬಲ, ಕಿರಾತಬಲ, ಬೇಡರಪಡೆ, ಪುಳಿಂದ ಎಂದೆಲ್ಲ ಹೇಳಿದ್ದಾರೆ. ಪಂಪ ಬೇಟೆಗಾರ ಎಂದು ಕರೆದರೆ, ಹರಿಶ್ಚಂದ್ರ ಕಾವ್ಯದಲ್ಲಿ ಶಬರಬಲ ಕಿರಾತನೊಂದಿಗೆ ಬೇಟೆಗೆ ನಡೆಯುತ್ತಾರೆ. ಷಡಕ್ಷರದೇವನು ಪುಳಿಂದ ನಾಯಕ, ಬೇಡರಪಡೆಯನ್ನು ಹೇಳಿದ್ದಾನೆ. ಕನಕದಾಸನ ನಳಚರಿತೆಯಲ್ಲಿ ಬೇಡರಪಡೆಯ ಪುಳಿಂದ ನಾಯಕ ರಾಜನಿಗೆ ಹಣ್ಣು ಹಂಪಲು ಕೊಟ್ಟು ಬೇಟೆಗೆ ಆಹ್ವಾನಿಸುವ ಚಿತ್ರಣವಿದೆ. ಇದರಲ್ಲಿ ಬೇಡರ ಪಡೆಯ ಬೇಟೆ ಸಾಧನೆ ಅಪರಿಮಿತವಾದುದು. ಶಬರಪಡೆ ನಿಟ್ಟಿಸುವ ಕಣ್ಣು ಗುಡ್ಡೆ ಕತ್ತಲಿಸುವಂತೆ, ಕತ್ತಲೆಯ ಮೊಟ್ಟೆಗಳಂತೆ ಹೋಲಿಕೆಗೆ ಹೊರಗಾಗಿ ಬರುತ್ತಿದ್ದರಂತೆ : ಬೇಟೆಗಾರರು ಹಳ್ಳವನ್ನು ತೋಡಿ ಪ್ರಾಣಿಗಳು ಬೀಳುವಂತೆ ಮಾಡುತ್ತಿದ್ದರು. ಕಾಡಿಗೆ ಬೆಂಕಿಯನ್ನು ಹಚ್ಚುವುದರ ಮೂಲಕ ಪ್ರಾಣಿಬೇಟೆ ಸಾಧ್ಯವಾಗಿತ್ತು (೫-೫೨).

ಹರಿಶ್ಚಂದ್ರಕಾವ್ಯದಲ್ಲಿ ಬರುವ ಬೇಡಪಡೆಯ ವರ್ಣನೆ ನೋಡಬಹುದು :

ಕಾರೊಡಲು ಮೆಗಡರ್ದ ಮೆಯ್ನವಿರು ಕೆಂಗಲಿಪ
ತೋರಗಣು ಕೆಮ್ಮೀಸೆ ಗುಜುರುದಲೆ ಬಳೆದ ಕಾ
ಳೋರಗನನೇಳಿಸುವ ತೋಳ್ ನಾರಿ ಹೊಡೆದೊಡೆದ ಹುಣ್ಣು ಮೇಲಣ ಕೈಪೊಡೆ

ಪೇರುರಂ ಕಿರಿಯ ನಡು ಕೊಬ್ಬಿದ ಪೆಗಲು ಪಿಡಿದ
ಕೂರಂಬು ದೀರ್ಘಧನುವೆರಸಿ ನೆರೆದುದು ಕಾನ
ನಾರಿಗಳೆನಿಪ್ಪ ಶಬರಾಧಿಪರು ಕರ್ಬೊಗೆಯ ಕಾಂತಿ ಸಭೆಯಂ ಮುಸುಕಲು (೫-೨-೬೫)

ಹೀಗೆ ಬೇಡರ ಪಡೆ ಬಾಹ್ಯದ ಭೀತಿಯಿಂದ ಮೈವೆತ್ತಂತೆ ಅಂತರಂಗದಲ್ಲಿ ಎಲ್ಲಾ .ದೇವತೆಗಳ ಸದ್ಗುಣಗಳನ್ನು ಮೇಳವಿಸಿಕೊಂಡವರಂತೆ ರಾಘವಾಂಕನು ಬೇಡಪಡೆಯನ್ನು ಚಿತ್ರಿಸಿದ್ದಾನೆ. ಅವನ ಪ್ರಕಾರ 'ಬೇಡರು ದಟ್ಟ ದಾರಿ ಕೆಟ್ಟ ಮೋಹವನ್ನು ಧರಿಸಿದವರು, ದೇವತೆಗಳಂತೆ ವಿಶೇಷವಾಗಿ ಭೋಗಿಸುವವರು, ಚಂದ್ರನಂತೆ ದೋಷಿಗಳು, ಯಮಧರ್ಮನಂತೆ ನಾಶವಿಲ್ಲದವರು, ರಾವಣನಂತೆ ದೇವತೆಗಳ ಶತ್ರುಗಳೆಂದು ತಿಳಿಸುತ್ತಾನೆ.[೫] ರಾಜರ ಗುರುಹಿರಿಯರ ದರ್ಶನಕ್ಕೋಗುವಾಗ ಬರಿಗೈಯಿಂದ ಹೋಗಬಾರದೆಂಬುದು ಹಿಂದೂಗಳ ನಂಬಿಕೆ. ಬೇಡರಪಡೆಯೂ ಕಾಡು ಜನವಾದರೂ ಸುಸಂಸ್ಕೃತರಾಗಿದ್ದರಿಂದಲೋ ಏನೋ ಹರಿಶ್ಚಂದ್ರ ರಾಜನಿಗೆ ಕಾಣಿಕೆಗಳನ್ನು ಕೊಂಡೊಯ್ಯುತ್ತಿದ್ದರು.

ವ್ಯಕ್ತಿಯ ವ್ಯಕ್ತಿತ್ವವನ್ನು, ವ್ಯಕ್ತಿ ತನ್ನ ಕ್ಷೇತ್ರದಲ್ಲಿ ಗೈಯ್ದಂತಹ ಸಾಧನೆಯಿಂದ ಆತನ ಸ್ಥಾನವನ್ನು ಗುರುತಿಸಲಾಗುತ್ತಿದೆ. ಅಂತೆಯೇ ಬೇಟೆಗಾರರಿಗೆ ಬೇಟೆಯ ಅವಧಿಯಲ್ಲಿ ಅವರ ಮೈಮೇಲೆ ಕಾಡುಮೃಗಗಳಿಂದ ಉಂಟಾದ ಗಾಯಗಳು ಅವರ ಧೀಮಂತತೆಗೆ ಸಾಕ್ಷಿಯಾಗಿವೆ (೫-೫). ಮಧ್ಯಕಾಲದಲ್ಲಿ ಬೇಡಪಡೆ ರಾಜನೊಡನೆ ಕೂಡಿ ಬೇಟೆಗೆ ಹೋಗುತ್ತಿದ್ದುದು ವಿಶೇಷ. ಹೀಗೆ ಬೇಡಪಡೆಯನ್ನು ಅನೇಕ ಕಾವ್ಯಗಳಲ್ಲಿ ಉಲ್ಲೇಖಿಸಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಸೂತ್ರಿಕರಿಸಿ ಹೇಳುವುದಾದರೆ ಆದಿಕಾಲದಿಂದಲೂ ಬೆಳೆದು ಬಂದ ಬೇಟೆ ಮತ್ತು ಬೇಡ ಸಂಸ್ಕೃತಿ ಮಾನವನ ಅಂತರಂಗಕ್ಕೆ ಅನಿವಾರ್ಯ ಪ್ರಕ್ರಿಯೆಯಾಗಿದ್ದು, ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ವಾಸ್ತವದ ನೆಲೆಗಟ್ಟಿನಲ್ಲಿ ಹಾಸುಹೊಕ್ಕಾಗಿ ಮೂಡಿಬಂದಿದೆ. ಮೇಲಿನಂತೆ ಬೇಟೆ ಸ್ವರೂಪ ಮತ್ತು ವಿಧಾನಗಳು ಅವರ ಸಂಸ್ಕೃತಿಯ ಮೇಲೆ ಪ್ರಭಾವಿಸಿದ್ದವು.

ಬೇಟೆನಾಯಿಗಳು : ಬೇಟೆಗೆ ಮತ್ತು ಬೇಡರಿಗೆ ಪರಿಕರವಾಗಿ ನಾಯಿಗಳು ಸಹಾಯಕವಾಗಿವೆ. ನರಿ, ಮೊಲ, ಕರಡಿ, ತೋಳ, ಜಿಂಕೆ, ಸೂಕರ ಮೊದಲಾದ ಪ್ರಾಣಿಗಳನ್ನು ಹಿಡಿಯುವ ವಿವಿಧ ಬಗೆಯ ಬೇಟೆ ನಾಯಿಗಳನ್ನು ಶಬರರು ಬಳಸುತ್ತಿದ್ದರು. ಪಂಪ, ಹರಿಹರ ಮೊದಲಾದವರು ಬೇಟೆನಾಯಿಯನ್ನು ಉಲ್ಲೇಖ ಮಾಡಿದ್ದಾರೆ. ಜನ್ನನ ಯಶೋಧರಚರಿತೆಯಲ್ಲಿ ಭವಾವಳಿ ಮೂಲಕ ಮರುಹುಟ್ಟು ಪಡೆದ ಚಂದ್ರಮತಿಯು ಕರಹಟದಲ್ಲಿ ಒಂದು ಬೇಟೆನಾಯಿಯಾಗಿ ಹುಟ್ಟಿಕೊಳ್ಳುತ್ತಾಳೆ.[೬] ಈ ನಾಯಿ ಮತ್ತು ನವಿಲನ್ನು ರಾಜನಿಗೆ ತಂದು ಒಪ್ಪಿಸುತ್ತಾರೆ. ಇವರಿಬ್ಬರು ತಾಯಿ ಮಕ್ಕಳಾಗುವವರು.

ಸಾಹಸಿಗಳಾದ ಬೇಟೆಗಾರರು ತಮ್ಮ ವ್ಯಕ್ತಿತ್ವಕ್ಕೆ ತಕ್ಕಂತೆ ಬೇಟೆ ನಾಯಿಗಳನ್ನು ಸಾಕಿದ್ದರೆಂಬುದಕ್ಕೆ ಹರಿಶ್ಚಂದ್ರಕಾವ್ಯದಲ್ಲಿ ಹೀಗೆ ಹೇಳಿದೆ :

ಹರಿಣದಲ್ಲಣನೆಂಬ ಹುಲಿಬಾಕನೆಂಬ ಸೂ
ಕರಮೃತ್ಯುವೆಂಬ ಸಾರಂಗಮರ್ದನನೆಂಬ
ಮರೆಮಾಡಿಯೆಂಬ ಕಾಳ್ಕೋಣಕಂಟಕನೆಂಬ ಭಲ್ಲೂಕಮಲ್ಲನೆಂಬ
ಕರಿಸಿಂಹನೆಂಬ ಸಿಂಹಪ್ರಕರಶಂಭನೆಂ
ಬರಿಶರಭಭೇರುಂಡನೆಂದೆಂಬ ಪರಿಪರಿಯ

ಬರುದುಲಿವ ಬಾವುಲಿಯ ಕುನ್ನಿಗಳು ನೆರೆದವಂದವನೀಶನೋಲಗದೊಳು[೭]. ನಾಯಿಗಳಿಗೆ ಬರುದುಗಳಿರುವುದು ಬೇಡರ ಪಡೆ ಅವುಗಳನ್ನು ಬೇಟೆಗಾಗಿ ಕರೆದೊಯ್ಯುವುದು ಕೂಡ ಗಮನಾರ್ಹವಾದ ವಿಚಾರವಾಗಿದೆ.

ಟಿಪ್ಪಣಿಗಳು

೧. ಕನ್ನಡದಲ್ಲಿ ಬೇಟೆ ಸಾಹಿತ್ಯ, ೧೯೯೫, ಪು.೫೬

೨. ಎಸ್.ಕೆ. ರಾಮಚಂದ್ರರಾವ್ : ತಿರುಪತಿ ತಿಮ್ಮಪ್ಪ, ಪು.೩೩

೩. ನೋಡಿ : ದಿ.ಆಕ್ಸ್‌ಫರ್ಡ್ ಕಂಪನಿಯನ್ ಟು ದಿ ಡೆಕೊರೆಟಿವ್ ಆರ್ಟ್ಸ್, ೧೯೭೫, ಪು.೬೪೮

೪. ಕುವೆಂಪು : ಕಾವ್ಯವಿಹಾರ, ೧೯೫೫, ಪು.೮೮

೫. ಮರುಳಸಿದ್ಧಪ್ಪ : ಷಟ್ಪದಿಸಾಹಿತ್ಯ, ೧೯೭೫, ಪು.೧೯

೬. ಯಶೋಧರಚರಿತೆ, ೯-೩೬

೭. ಹರಿಶ್ಚಂದ್ರಕಾವ್ಯ, ೫-೬-೬೬

* * *

ಅಧ್ಯಾಯ-೬

ಆಧುನಿಕ ಪರಿಕಲ್ಪನೆಯ ನೆಲೆಯಲ್ಲಿ ಬೇಟೆ

ಆಧುನಿಕ ಪರಿಕಲ್ಪನೆಯ ನೆಲೆಯಲ್ಲಿ ಬೇಟೆ

ಕವಿಗಳು ಮಹಾಕಾವ್ಯಗಳಲ್ಲಿ ತಿಳಿಸುವ ಬೇಟೆಗಿಂತ ಆಧುನಿಕ ಬೇಟೆ ವಾಸ್ತವಿಕವಾಗಿ ಕಂಡುಬಂದಂತಿದೆ. ಇದನ್ನು ಶಾಸನ, ವರದಿ, ಕಾಯ್ದೆ, ನೀತಿಗಳಿಂದ ತಿಳಿಯಬಹುದು. ಹಿಂದೆ ರಾಜ ಮತ್ತು ಅಧಿಕಾರಿಗಳು ಬೇಟೆಯಾಡಿದ ಉಲ್ಲೇಖಗಳನ್ನು ಗಮನಿಸುವುದರೊಂದಿಗೆ ಆಧುನಿಕ ಬೇಟೆಯನ್ನು ತಿಳಿಸಲಾಗಿದೆ. ವಿಜಯನಗರದ ನಂತರ ಸಿಗುವ ಆಕರಗಳಲ್ಲಿ ಜನ ಸಾಮಾನ್ಯರ ಬೇಟೆ ಪ್ರಮುಖವಾದುದು. ಮೈಸೂರು ಅರಸರು ಬೇಟೆಯಲ್ಲಿ ಪ್ರವೀಣರಾಗಿದ್ದರು. ಇವರು ಮಲೆನಾಡಿನ ಕಡೂರು, ತರೀಕೆರೆ, ಶಿವಮೊಗ್ಗ ಮೊದಲಾದ ಸ್ಥಳಗಳಿಗೆ ಬೇಟೆಗೆಂದು ಬಂದಿದ್ದು ಕಂಡುಬರುತ್ತದೆ. ಶ್ರೀರಂಗಪಟ್ಟಣದ ನವಾಬ ಹೈದರಾಲಿಯ ಮಗ ಟಿಪ್ಪುಸುಲ್ತಾನನು ಸಹ ಹುಲಿ ಬೇಟೆಯಾಡಿದ್ದ. ಚಿತ್ರದುರ್ಗದ ನಾಯಕ ಅರಸರು ಮದಿಸಿದ ಆನೆಯನ್ನು ಪಳಗಿಸಿದವರು. ಅಲ್ಲದೆ, ಹುಲಿಬೇಟೆಯನ್ನು ಆಡುತ್ತಿದ್ದರಿಂದ ಬಹುಶಃ ಇವರಿಗೆ 'ಗಾಧುರಿಮಲ್ಲೈಹೆಬ್ಬುಲಿ' ಎಂಬ ಬಿರುದುಗಳು ಪ್ರಾಪ್ತವಾಗಿವೆ. ಇವರಂತೆ ತರೀಕೆರೆ ಪಾಳೆಯಗಾರರು ಸಹಾ ಕುದುರೆ ಮೇಲೇರಿ ಮಲೆನಾಡಿನ ಪ್ರದೇಶದಲ್ಲಿ ಬೇಟೆಯಾಡುತ್ತಿದ್ದರು.

ಬ್ರಿಟಿಷರು ಕರ್ನಾಟಕದಲ್ಲಿ ವಿಪುಲವಾದ ಬೇಟೆ ಪ್ರಾಣಿಗಳನ್ನು ನಾಶಗೊಳಿಸಿದ್ದು ತಿಳಿದುಬರುತ್ತದೆ. ದೇಶೀಯ ಬೇಟೆಗಾರರು ನಿಸ್ವಾರ್ಥವಾಗಿ ಅವರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಅಂದು ಪ್ರತಿಯೊಬ್ಬರಿಗೂ ಬೇಟೆ ಹವ್ಯಾಸವಾಗಿ ಪರಿಣಮಿಸಿತ್ತು. ಈ ಹಿನ್ನೆಲೆಯಲ್ಲಿ ಕೊಡಗಿನ ನರಿಮಂಗಲ, ದಕ್ಷಿಣಕನ್ನಡದ ಕೆಡ್ಡಾಸ ಸಾಂಪ್ರದಾಯಿಕ ಬೇಟೆಗಳಾಗಿ ಖ್ಯಾತಿಪಡೆದಿವೆ.

ಅನೂಚಾನವಾಗಿ ಬೆಳೆದು ಬಂದ ಬೇಟೆಯನ್ನು ಸ್ವಾತಂತ್ರ್ಯಾನಂತರ ಸರ್ಕಾರ ನಿಷೇಧಿಸಿದಾಗ, ವಿವಿಧ ಕಾಯ್ದೆ-ಕಾನೂನುಗಳು ರೂಪುಗೊಂಡವು. ಇದನ್ನು ಬೇಟೆಗಾರರು ವಿರೋಧಿಸಿರಲೇಬೇಕು. ಮಹಾತ್ಮಗಾಂಧಿ ಮೊದಲಾದವರು ಪ್ರಾಣಿಹಿಂಸೆಯನ್ನು ವಿರೋಧಿಸಿದರು. ಈ ಹಿನ್ನೆಲೆಯಲ್ಲಿ ಪ್ರಾಣಿ ದಯೆ ಸಂಘಗಳು ಜನ್ಮತಾಳಿ ಪ್ರಾಣಿ ಸಂಕುಲದ ಉಳಿವಿಗಾಗಿ ಹೋರಾಡುತ್ತಿವೆ. ವಿಧಿ ಮತ್ತು ನಿಷೇಧ, ನೀತಿ-ನಿರ್ಬಂಧ ಮತ್ತು ಸಾಮಾಜಿಕ ಕಟ್ಟುಪಾಡುಗಳಲ್ಲಿ ಬೇಟೆಯನ್ನು ಅವಲೋಕಿಸಬಹುದು.

ಬೇಟೆಯ ಜೀವನ ಇಂದು ಬದಲಾಗಿದೆ. ಆದಿಕಾಲದ ಮಾನವ ಉಳಿವಿಗಾಗಿ ಕಲಿತ ಮೊದಲ ಪಾಠ ಬೇಟೆ. ಇದು ವ್ಯವಸಾಯ ಪೂರ್ವದಲ್ಲಿ ಏಕೈಕ ಆಹಾರ ಮೂಲವಾಗಿತ್ತು. ಮಾನವನಿಗೆ ಗೆಡ್ಡೆ ಗೆಣಸುಗಳನ್ನು ತಿಂದರೂ ಮಾಂಸದ ರುಚಿ ಹಿಡಿಸಿತ್ತು. ಹಿಂದೆ ಜೀವಿಸುವುದಕ್ಕಾಗಿ ಅಥವಾ ಉಳಿವಿಗಾಗಿ ಆಹಾರವನ್ನು ಅವಲಂಬಿಸಿ ಬದುಕುತ್ತಿದ್ದರು. ಪ್ರಾಚೀನಕಾಲದ ಮಾನವ 'ಸಸ್ಯಾಹಾರ-ಮಾಂಸಾಹಾರ, ಅಹಿಂಸೆ-ಹಿಂಸೆ : ಇವುಗಳ ನಡುವಿನ ವ್ಯತ್ಯಾಸದ ಪರಿಕಲ್ಪನೆಗಳೇ ಇಲ್ಲದಿದ್ದ ಕಾಲದಲ್ಲಿ ಆಹಾರ ಸಂಪಾದನೆಗೆ ಬೇಟೆಯು ಅನಿವಾರ್ಯದ ಮಾರ್ಗವಾಗಿದ್ದಿರಬೇಕು.[೧] ಕ್ರಮೇಣ ಬೇಟೆಯಾಡುವ ಪ್ರಾಣಿಗಳಲ್ಲಿ ಆಯ್ಕೆಯ ಬದಲಾವಣೆಯಾಯಿತು. ಪ್ರಾಣಿಯೇ ಆಹಾರಕ್ಕಾಗಿ ಇನ್ನೊಂದು ಪ್ರಾಣಿಯನ್ನು ಬೇಟೆಯಾಡಿದರೆ, ಪರಿಸರ ಸಮತೋಲನಕ್ಕಾಗಿ ಮತ್ತು ಆತ್ಮರಕ್ಷಣೆಗೆ ಮಾನವ ಬೇಟೆಯಾಡುತ್ತಾ ಬಂದ.

ಹಿಂದಿನಿಂದಲೂ ನಮ್ಮಲ್ಲಿ ಎರಡು ಬಗೆಯ ಆಹಾರ ಸಂಗ್ರಹಣೆಯ ವಿಧಾನಗಳಿದ್ದವು. ಕಾಡಿನಲ್ಲಿ ಗೆಡ್ಡೆ- ಗೆಣಸು ಅಗೆಯುವುದು ಮತ್ತು ಕಾಡುಪ್ರಾಣಿಗಳ ಬೇಟೆಯಾಡುವುದು. ಮೊದಲನೆದಾಗಿ : ಹಣ್ಣು, ಹಂಪಲು, ಗೆಡ್ಡೆ-ಗೆಣಸು ಎಲ್ಲಾ

ಋತುಮಾನಗಳಲ್ಲಿಯೂ ಒಂದೇ ಸಮನೆ ದೊರೆಯುತ್ತಿರಲಿಲ್ಲದ ಕಾರಣ ಬೇಟೆಗೆ ಆಕರ್ಷಿತನಾದ. ನಂತರ ಬಳಸುವ ಆಯುಧಗಳು ಬದಲಾದವು. ಬಿಲ್ಲು, ಬಾಣದ ಪ್ರಯೋಗ ಕಲಿತ ನಂತರ ಬೇಟೆಯನ್ನು ಅವಲಂಬಿಸಿದ ಬಗೆ ಪರಿವರ್ತನೆಗೊಂಡಿತು.

ಸಂಸ್ಕೃತಿಯ ವಿಕಾಸದಲ್ಲಿ ಭೂಕೃಷಿ ಬೆಳೆಯಿತು. ಅನಂತರದಲ್ಲಿ ಕಾಡು ಮತ್ತು ಸಾಧು ಪ್ರಾಣಿಗಳನ್ನು ಉಳುಮೆಗಾಗಿ ಬಳಸಿದ. ಅವುಗಳಲ್ಲಿ ಹಸು, ಎತ್ತು, ಕತ್ತೆ ಮತ್ತು ಕುದುರೆ ಪ್ರಮುಖವಾಗಿವೆ. ಬೇಟೆಯಾಡಲು ನಾಯಿಯನ್ನು ಸಾಕಿದ. ಮಾನವನ ಸಾಂಸ್ಕೃತಿಕ ಬದುಕು ಸ್ಥಿತ್ಯಂತರಗೊಂಡಾಗ ಬೇಟೆ ಕಡ್ಡಾಯವೆನಿಸಿರಲಿಲ್ಲ. ಪಶುಪಾಲನೆಯೇ ಬೇಟೆಯ ಜೀವಂತಿಕೆಯನ್ನು ಉಳಿಸಿದಂತೆ ಕಾಣುತ್ತದೆ. ಕಾಡಿನಲ್ಲಿ, ಗುಡ್ಡಗಾಡುಗಳಲ್ಲಿ ಜನಾಂಗಗಳು ವಾಸಿಸುತ್ತವೆ. ಇವರಲ್ಲಿ ಬೇಟೆಯು ಒಂದು ಪ್ರಮುಖ ಜೀವನ ವಿಧಾನವಾಗಿ ಉಳಿದಿರುವುದರಿಂದ ಇಂತಹ ಜನಾಂಗಗಳು ಪ್ರತ್ಯೇಕವಾಗಿ ಉಳಿದಿರುವ ಸಾಂಸ್ಕೃತಿಕ ಕಾರಣಗಳನ್ನು ಆಲೋಚಿಸುವುದು ಅಗತ್ಯ ಎನ್ನಲಾಗಿದೆ.[೨] ಜೀವನಾವಶ್ಯಕತೆಗೆ ಮಾರು ಹೋದ ಬೇಟೆಗಾರರು ಬೇಟೆಯನ್ನು ಜೀವನ ಆಧಾರವಾಗಿಟ್ಟುಕೊಂಡರು. ಕರ್ನಾಟಕದಲ್ಲಿ ಅನೇಕ ಬುಡಕಟ್ಟುಗಳು ಕಂಡುಬರುತ್ತವೆ. ಮೈಸೂರು ಜಿಲ್ಲೆಯ ಮಹದೇಶ್ವರಬೆಟ್ಟ, ಬಿಳಿಗಿರಿ ರಂಗನಬೆಟ್ಟದ ತಪ್ಪಲಲ್ಲಿ ವಾಸಿಸುವ ಸೋಲಿಗರು, ನಾಗರಹೊಳೆ, ಮುಂತಾದ ಕಡೆ ವಾಸಿಸುವ ಬೆಟ್ಟದ ಕುರುಬರು, ಜೇನುಕುರುಬರು ಮುಂತಾದವರು ಈಗಲೂ ವ್ಯವಸಾಯದಂತೆಯೇ ಬೇಟೆಯನ್ನು ಒಂದು ವೃತ್ತಿಯನ್ನಾಗಿ ಮಾಡಿಕೊಂಡು ಜೀವಿಸುತ್ತಾರೆ.[೩] ಅರಣ್ಯ ಇಲಾಖೆಯವರು ವನ್ಯಮೃಗಗಳನ್ನು ಸಂರಕ್ಷಿಸುವ ಸಲುವಾಗಿ ಕಾಡುಪ್ರಾಣಿಗಳನ್ನು ಕೊಲ್ಲಕೂಡದೆಂದು ಕೆಲವು ನಿಯಮಗಳನ್ನು ಮಾಡಿರುವುದರಿಂದ ಈ ಜನರಿಗೆ ಬೇಟೆ ಬಿಟ್ಟು ಬದುಕುವ ಸ್ಥಿತಿಯಿದೆ.

ಮಲೆನಾಡಿನಲ್ಲಿ ಬೇಟೆಯನ್ನು 'ಶಿಕಾರಿ' ಎನ್ನುತ್ತಾರೆ. ಇಂದಿಗೂ ಇಲ್ಲಿ ಬೇಟೆಯಾಡುವ ಪದ್ಧತಿಯಿದ್ದರೂ, ಬಯಲುಸೀಮೆಯಲ್ಲಿನ ಬೇಟೆಯ ಆಚರಣೆ, ಹವ್ಯಾಸಕ್ಕಿಂತ ಕಡಿಮೆ ಎನ್ನಬಹುದು. ಕರ್ನಾಟಕದಲ್ಲಿ ಇಂದು ೩ ವಿಧವಾದ ಬೇಟೆ ಪ್ರಕಾರಗಳನ್ನು ಕಾಣಲಾಗುತ್ತದೆ. ಪ್ರಾಣಿಬೇಟೆ, ಮೀನುಬೇಟೆ ಮತ್ತು ಜೇನುಬೇಟೆ. ಪ್ರಾಣಿಬೇಟೆಯಲ್ಲಿ ಪ್ರಾಣಿಗಳನ್ನು ಕೊಲ್ಲಲು, ಪಳಗಿಸಲು ಭರ್ಜಿ, ಈಟಿ, ಬಿಲ್ಲು, ಬಲೆ, ಕತ್ತಿ, ಕುದುಗೋಲು, ಮುಂತಾದವನ್ನು ಬಳಸುತ್ತಿದ್ದರು. ಇಂದು ಕೋವಿ (ಬಂದೂಕು) ಹೆಚ್ಚಾಗಿ ಬಳಕೆಯಲ್ಲಿದೆ. ಒಂದು ಪ್ರಾಣಿಗೂ, ಮತ್ತೊಂದು ಪ್ರಾಣಿಗೂ ಹಿಡಿಯುವ ತಂತ್ರದಲ್ಲಿ ಬದಲಾವಣೆಯಿದೆ. ಅಲೆಮಾರಿಗಳಾದ ಹಕ್ಕಿಪಿಕ್ಕಿ ಜನರು ಅಳಿಲನ್ನು ಹಿಡಿದು ತಿನ್ನುತ್ತಾರೆ. ಇದನ್ನಿಡಿಯಲು ಅವರು ಬಳಸುವ ತಂತ್ರ ಪ್ರಮುಖವಾದುದು.

ಬಿಳಿಗಿರಿರಂಗನಬೆಟ್ಟದ ಸೋಲಿಗರು ಬೇಟೆಗೆ ಅನೇಕ ತಂತ್ರಗಳನ್ನು ಬಳಸುತ್ತಾರೆ. ಕಾಡುಕೋಳಿಯನ್ನು ಬೇಟೆಯಾಡುವ ಸಂದರ್ಭದಲ್ಲಿ 'ಪಿಟರುಗೊಳವೆ'ಯನ್ನು ಬಳಸುತ್ತಾರೆ. ಇವರು ಕಾಡುಕೋಳಿ ಬೇಟೆಗೆ ಪಾಜಿಯನ್ನು ಒಡ್ಡುವರು. ಹೀಗೆ ಸಾರಂಗ, ಜಿಂಕೆ, ಕಡವೆ, ಮೊಲ ಮುಂತಾದ ಪ್ರಾಣಿಗಳನ್ನು ಇವರು ಬೇಟೆಯಾಡಿ ತಿನ್ನುತ್ತಾರೆ. ಚಿತ್ರದುರ್ಗ ಭಾಗದಲ್ಲಿ ಬೇಡರು ಮಾತ್ರ ಜಿಂಕೆ, ಮೊಲ, ಉಡ, ಕೌಜುಗ ಬಿಟ್ಟರೆ ಉಳಿದ ಬೇಟೆ ತಮ್ಮ ಪ್ರಾಣಿಗಳನ್ನು ತಮ್ಮ ನಂಬಿಕೆಗಳ ಹಿನ್ನೆಲೆಯಲ್ಲಿ ತ್ಯಜಿಸುವುದುಂಟು.

ಮೀನುಬೇಟೆ ಕರ್ನಾಟಕದಲ್ಲಿ ಹೆಚ್ಚು (ಕರಾವಳಿ) ಪ್ರಚಲಿತದಲ್ಲಿದೆ. ಬಯಲುಸೀಮೆಯಲ್ಲಿ ಕೆರೆ, ಕಟ್ಟೆಗಳಲ್ಲಿ ನೀರು ಬತ್ತಿದಾಗ ಮತ್ತು ಕಾಲುವೆಗಳಿಗೆ ಹೊಸ ನೀರು ಬಂದಾಗ ಮೀನು ಹತ್ತುತ್ತವೆ. ಇವನ್ನು ಬೇಟೆಯಾಡಿ ತಿನ್ನುವುದು ಕೆಲವರ ವೃತ್ತಿಯಾಗಿದೆ. ಬಯಲುಸೀಮೆಯಲ್ಲಿ ಬಲೆ, ಕೂಳಿಗಳನ್ನು ಉಪಯೋಗಿಸುತ್ತಾರೆ. ಗಾಳಹಾಕಿ ಮೀನುಬೇಟೆಯಾಡುವ ಪದ್ಧತಿ ಪ್ರಚಲಿತದಲ್ಲಿದೆ.

ಜೇನುಬೇಟೆಯನ್ನು ಸೋಲಿಗರು, ಕಾಡುಕುರುಬರು, ಜೇನುಕುರುಬರು, ಪ್ರಧಾನ ವೃತ್ತಿಯಾಗಿ ಮಾಡಿಕೊಂಡಿದ್ದಾರೆ. ಮೇ-ತಿಂಗಳಿನಿಂದ ಜೂನ್ ತಿಂಗಳವರೆಗೆ ಒಂದು ಕೊಯ್ಲು ದೊರೆತರೆ, ಅಕ್ಟೋಬರ್ ತಿಂಗಳಿನಿಂದ ನವೆಂಬರ್ ತಿಂಗಳಿನ ಗಡುವಿನಲ್ಲಿ ಇನ್ನೊಂದು ಕೊಯ್ಲು ದೊರೆಯುತ್ತದೆ. ಮಧ್ಯಕರ್ನಾಟಕದ ಬೇಡರು ಸಹಾ ಅರಣ್ಯದಲ್ಲಿ ಸಣ್ಣ- ಪುಟ್ಟ ಜೇನುಗಳಿಗಾಗಿ ಬೇಟೆಗೆ ಹೋಗುವುದು ಸ್ಮರಣೀಯ. ಇವರಂತೆ ಮಲೆನಾಡಿನ ಗೌಡರಿಗೆ ಈ ಬೇಟೆ ಮುಖ್ಯವಾದ ಹವ್ಯಾಸವೆಂದು ವೈ.ಸಿ.ಭಾನುಮತಿಯವರು ತಿಳಿಸಿದ್ದಾರೆ.[೪] ಇಲ್ಲಿಯವರೆಗೂ ಇವರು ಮಾಂಸಾಹಾರವನ್ನು ಬೇಟೆಯಿಂದಲೇ ಪಡೆಯುತ್ತಿದ್ದು, ಸರ್ಕಾರ ಬೇಟೆಯನ್ನು ನಿಷೇಧಿಸಿರುವುದರಿಂದ ಇದಕ್ಕೆ ಆಸ್ಪದ ಇಲ್ಲದಂತಾಗಿದೆ. 'ನಿಸರ್ಗದ ಮಡಿಲಲ್ಲಿ ಹುಟ್ಟಿ ಬೆಳೆದ ಗೌಡರು ಕಾಡುಕುರಿ, ಕಾಡುಕೋಳಿ, ಕಾಡುಹಂದಿ, ಸಾರಂಗ, ಕಡವೆ, ಮೊಲ, ಬೆಳ್ಳಕ್ಕಿ ಇತ್ಯಾದಿ ಕಾಡುಪ್ರಾಣಿಗಳ ಮಾಂಸವನ್ನು ತಿನ್ನುತ್ತ ಬೆಳೆದವರು, ಇಂದು ಕೈ ತಪ್ಪಿದಂತಾಗಿದೆ. ಅವರು ಆಧುನಿಕತೆಗೆ ಮಾರುಹೋಗಿದ್ದರೂ, ಕಾಡುಪ್ರಾಣಿಗಳನ್ನು ಹೊಡೆದು ತಿನ್ನುವುದು ಕೈಬಿಟ್ಟಂತಿಲ್ಲ. ಈ ಶೈವ ಒಕ್ಕಲಿಗರು ಪ್ರಾಣಿ, ಪಕ್ಷಿ, ಮೀನು, ಜೇನು ಮೊದಲಾದ ಎಲ್ಲ ಬಗೆಯ ಬೇಟೆಯಲ್ಲೂ ಇದ್ದಾರೆ. ೧೬೭೦ರಲ್ಲಿ ಮುಷ್ಟಿಯುದ್ಧದಿಂದ ಹುಲಿಯನ್ನು ಬಸವನಹಳ್ಳಿಯ ದಿಡ್ಡೆಯ ನೆಲಿಂಗೌಡ ಎಂಬಾತ ಕೊಂದ ಕಾರಣ ವೆಂಕಟಾದ್ರಿನಾಯಕ ಬಿರುದಾವಳಿ ಕೊಟ್ಟ ಬಗ್ಗೆ ಶಾಸನ ಬೆಳಕು ಚೆಲ್ಲುತ್ತದೆ.

ಪ್ರಾಣಿ-ಪಕ್ಷಿ ಬೇಟೆಯಲ್ಲಿ ಆಲುಬೇಟೆ ಒಂದು. ಇದಕ್ಕೆ ಮೂಡಿಗೆರೆ ತಾಲ್ಲೂಕಿನಲ್ಲಿ 'ಬೇಟೆಕೂಡುವುದು' ಎನ್ನುತ್ತಾರೆ. ಆಲುಬೇಟೆಗೆ ಅನೇಕ ಮಂದಿ ಒಂದು ವಾರದ ಕಾಲ ಬೇಟೆಯಾಡುತ್ತಾರೆ. ಪುಣುಗುಬೇಟೆ ಒಂದು ದಿನದ ಬೇಟೆ. ಇದಕ್ಕೆ ಕಿರುವೇಂಟೆ ಎನ್ನುತ್ತಾರೆ. ಕೆಲವೇ ಮಂದಿ, ಕಡಿಮೆ ಸಮಯದಲ್ಲಿ ಬೇಟೆಗೆ ಹೋಗಿ ಬರುತ್ತಾರೆ. 'ಬೆಳ್ಳಕ್ಕಿ, ಕಾಡುಕೋಳಿ, ಮುಸಿಯ, ಕಬ್ಬೆಕ್ಕು, ಜಪ್ಪಿಗನ ಬೆಕ್ಕು, ಚೋರಕ್ಕಿ, ಉಂಡೆಕೋಳಿ, ಸುಟ್ಟಕೋಳಿ, ಗಿಳಿ, ಪಾರಿವಾಳ, ಮೊಲ, ಪೆಟ್ಟಕ್ಕಿ, ಕಾಡುಅಳಿಲು, ಇವೇ ಮೊದಲಾದವು ಬೇಟೆಗೆ ಬಲಿಯಾಗುವಂಥ ಪ್ರಾಣಿಗಳು. ಪುಣುಗು ಮೊಲ ಹಾಗೂ ಪಕ್ಷಿಗಳಿಗೆ ಬೆಳದಿಂಗಳಲ್ಲಿ ಬಲೆಹಾಕಿ ಬೇಟೆಯಾಡುತ್ತಾ, ಕರಿದಿಂಗಳಲ್ಲಿ ಲೈಟು ಬೇಟೆಗೆ ಹೋಗುತ್ತಾರೆ. ಟಾರ್ಚು, ಕೋವಿ, ನಾಯಿ ಇದ್ದರೆ ಸಾಕು. ಒಬ್ಬಬ್ಬರು ಆಡುವ ಬೇಟೆ ಇದಾಗಿದೆ.

ಜೇನುಬೇಟೆಯಲ್ಲಿ ಹೆಜ್ಜೇನು ಶಿಕಾರಿ, ತುಡುವೆ ಜೇನು ಶಿಕಾರಿ, ಮೇಸ್ತ್ರಿಜೇನುಶಿಕಾರಿ, ಕೋಲುಜೇನು ಶಿಕಾರಿಯನ್ನು ಮಲೆನಾಡಿನಲ್ಲಿ ಇಂದಿಗೂ ರೂಢಿಸಿಕೊಂಡು ಬಂದಿದ್ದಾರೆ. ಮೀನುಬೇಟೆಯಲ್ಲಿ ಸಹ ಅನೇಕ ತಂತ್ರ, ವಿಧಾನಗಳಿವೆ. ಕೂಳಿ ಹಾಕುವುದು, ಬಲೆಹಾಕುವುದು, ಕಾಯಿ ಹಾಕುವುದು, ಡೈನಮೆಂಟ್ ಹಾಕುವುದು, ತೋಟ ಹಾಕುವುದು ಮದ್ದು ಹಾಕುವುದು ಕಂಡುಬರುತ್ತದೆ. ಹೀಗೆ ಏಡಿಬೇಟೆಯು ವಿವಿಧ ರೀತಿಯಲ್ಲಿ ಪ್ರಚಲಿತದಲ್ಲಿದೆ.

ಇಂದು ವಿವಿಧ ಬುಡಕಟ್ಟುಗಳು ಸಾಮಾಜಿಕ ಸ್ಥಿತ್ಯಂತರಕ್ಕೊಳಗಾಗಿ, ಬೇಟೆ ಮಜಲುಗಳಿಂದ ದೂರವಿರುವ ಉಪಸಂಸ್ಕೃತಿಗಳ ಪಟ್ಟಿಯನ್ನು ನೋಡಬಹುದು. ಇವರು ಬೇಟೆಯನ್ನೂ ಬಿಡದೇ, ಆಧುನಿಕ ಬದುಕಿಗೂ ಒಗ್ಗಿಕೊಳ್ಳದೆ ತಮ್ಮ ರೂಢಿ-ಸಂಪ್ರದಾಯಗಳ ಚೌಕಟ್ಟಿನಲ್ಲಿದ್ದಾರೆ. ದಕ್ಕಲರು, ಗೊರವರು, ಮೊಂಡರು, ಸೋಲಿಗರು, ಸಿದ್ಧಿಯರು, ಕೊರಗರು, ಅಡವಿ ಚೆಂಚರು, ಹಗಲು ವೇಷದವರು, ಕಚ್ಚೆಗೌಳಿಗರು, ಕೊಡವರು, ಮುಕರಿಗಳು, ಸವಾಯಿತರು, ಇಲ್ಲಿಗರ, ಡೊಂಬರು, ನಟುವರ, ಎರವರು, ಅಗೆರರು, ಹೆಳವರ, ಬೈರರು, ಗೊಂಬೆರಾಮರು, ದುರಗ ಮುರಗಿಯರು, ಪಿಂಜಾರರು, ಹಕ್ಕಿ ಪಿಕ್ಕಿ, ಯಾನಾದಿಗರು, ಹಾಲಕ್ಕಿ ಒಕ್ಕಲಿಗರು, ಕಾಡುಕುರುಬ, ಗೊಂಡರು, ಮ್ಯಾಸಬೇಡರು ಮೊದಲಾದವರು ಆಧುನಿಕವಾಗಿ ಪರಿವರ್ತಿತ ಜೀವನವನ್ನು ಸಾಗಿಸುತ್ತಾರೆ.

ಒಟ್ಟಾರೆ ಇಂದು ಬೇಟೆ ಕಾನೂನು ಪ್ರಕಾರ ನಿಷಿದ್ಧವಾಗಿದ್ದು ಹಬ್ಬ-ಆಚರಣೆಗಳಲ್ಲಿ ಮಾತ್ರ ಪ್ರದರ್ಶನಗೊಳ್ಳುತ್ತದೆ. ಹೀಗಾಗಿ ಬೇಟೆಯಾಡಿದರೆ ಅಪರಾಧವೆನ್ನಲಾಗುತ್ತದೆ. ಪ್ರಾಣಿ, ಪಕ್ಷಿ, ಮೀನು ಮತ್ತು ಜೇನುಬೇಟೆಗಳಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಮೀನುಬೇಟೆಗೆ ಸರ್ಕಾರದಿಂದ ಪರವಾನಿಗೆ ಇದೆ. ಅದೇ ರೀತಿ ಜೇನುಬೇಟೆ. ಪ್ರಾಣಿಬೇಟೆಗೆ ಅವಕಾಶವಿಲ್ಲ. ಈ ಸಂತತಿಗಳು ಕ್ಷೀಣಿಸುವ ಹಂತಕ್ಕೆ ಬಂದಿವೆ. ಬೇಡರು ಆಧುನಿಕ ಜೀವನದ ವಿವಿಧ ಆಯಾಮಗಳಿಗೆ ಒಗ್ಗಿಕೊಂಡಿದ್ದಾರೆ. ಬೇಡರಷ್ಟೆ ಬೇಟೆಗಾರರಲ್ಲ ಇತರರು ಬೇಟೆಯಲ್ಲಿ ಸಾಧನೆ ತೋರಿದ್ದಾರೆ. ಸರ್ಕಾರ ಅರಣ್ಯ ಅಭಿವೃದ್ಧಿ ಯೋಜನೆಗಳ ಮೂಲಕ ವನ್ಯ ಜೀವಿ ಸಂರಕ್ಷಣೆ ಕೆಲಸ ಕೈಗೊಂಡಿರುವುದು ಸ್ವಾಗತಾರ್ಹ. ಆಧುನಿಕವಾಗಿ ಬೇಟೆಯಾಡುವುದು ಅಪರಾಧವಾಗಿರುವುದರಿಂದ ಸಂಪ್ರದಾಯಗಳಲ್ಲಿ ಮಾತ್ರ ಉಳಿಸಿಕೊಂಡು ಬಂದಿರುವುದು ಆಧುನಿಕ ಬೇಟೆಯ ಸ್ವರೂಪವೆನಿಸಿದೆ.

೬.೧. ಬೇಟೆ - ವಿಧಿ ಮತ್ತು ನಿಷೇಧ

ಪ್ರಾಚೀನ ಕಾಲದಿಂದಲೂ ಮಾನವನ ಜೊತೆಯಲ್ಲೇ ಬೆಳೆದು ಬಂದ ಬೇಟೆ ಆಹಾರ, ಸ್ವಯಂರಕ್ಷಣೆ, ಪ್ರಕೃತಿ ಸಮತೋಲನಕ್ಕೆ ಅನಿವಾರ್ಯವಾಗಿತ್ತು. ಹೀಗಿದ್ದರೂ ಹಿಂದಿನಿಂದ ಬೇಟೆಯ ಬಗೆಗೆ ವಿರೋಧದ ಅಲೆ ಕಂಡುಬಂದಿರುವುದು ಚಾರಿತ್ರಿಕ ಸತ್ಯ. ದೇವನಾಂಪ್ರಿಯ ಅಶೋಕನು ಬೇಟೆಯಲ್ಲಿ ಶೂರನಾಗಿದ್ದು, ಕಾಡಿನ ಪ್ರಾಣಿಗಳ ಸಂರಕ್ಷಣೆಯ ಬಗ್ಗೆ ನಿಯಮಗಳನ್ನು ರೂಪಿಸಿದ್ದನು. ಭಾರತದಲ್ಲಿ ವನ್ಯಮೃಗಗಳನ್ನು ಯಾವುದೇ ಹವ್ಯಾಸಕ್ಕಾಗಿ ವಧಿಸುವುದು ಅಪರಾಧ ಎಂಬುದು ಕೂಡ ಕೌಟಿಲ್ಯನ ಅಭಿಪ್ರಾಯವಾಗಿತ್ತು. ಕೆಲವು ಜಾತಿಯ ಪ್ರಾಣಿಗಳನ್ನು ಆಪತ್ಕಾಲದಲ್ಲಿ ಹೊರತುಪಡಿಸಿ ಕ್ರೀಡೆಗಾಗಿ ಕೊಲ್ಲುವುದನ್ನು ನಿಷೇಧಿಸಲಾಗುತ್ತಿತ್ತು. ಸೂನಾಧ್ಯಕ್ಷ (ವನ್ಯಪ್ರಾಣಿಗಳ ಮೇಲ್ವಿಚಾರಕ)ನು ಬೇಟೆಯಾಡುವುದಕ್ಕೆ ಪ್ರತಿಬಂಧಿಸಲ್ಪಟ್ಟ ಕಾಡಿನಲ್ಲಿರುವ ಮೃಗ, ಪಶುಪಕ್ಷಿ, ಮೀನುಗಳನ್ನು ಬಂಧಿಸಿದವರಿಗೆ, ಹಿಂಸಿಸಿದವರಿಗೆ, ಕೊಂದವರಿಗೆ ಉಗ್ರದಂಡನೆಯನ್ನು ವಿಧಿಸಬೇಕು. ಮತ್ತು ಕ್ರೌಂಚ, ಉತ್ಕ್ರೋಶಕ, ದಾತ್ಯೂಹ, ನವಿಲು, ಗಿಳಿ, ಜೀವಂಜೀವಕ, ಚಕ್ರವಾಕ, ಚಕೋರ, ಬ್ರುಂಗರಾಜ, ಹಂಸ, ಮೊದಲಾದವು ಆಟಕ್ಕಾಗಿ ಸಾಕುವ ಪಕ್ಷಿಗಳ, ಮಂಗಲಕರವಾದ ಮೃಗಗಳ ಹಿಂಸೆ ನಡೆಯದಂತೆ ನೋಡಿಕೊಳ್ಳಬೇಕೆಂಬುದು ಕೌಟಿಲ್ಯನ ಅಭಿಮತವಾಗಿತ್ತು.[೫] ಹೀಗೆ ಬೇಟೆಗೆ ವಿರೋಧವಿದ್ದ ಸಂಗತಿಯನ್ನು ನಾವು ಆದಿಯಿಂದಲೂ ನೋಡಬಹುದಾಗಿದೆ.

ಕ್ರಿ.ಶ. ೧೨೯೦ರಲ್ಲಿ ಮಾರ್ಕೊಪೊಲೋ, ೧೪೪೪ರಲ್ಲಿ ಅಬ್ದುಲ್‌ರಜಾಕ್ ಮೊದಲಾದ ಪ್ರವಾಸಿಗರು ಅರಣ್ಯ ಸಂಪತ್ತು, ಪ್ರಾಣಿಬೇಟೆ, ನಿಷೇಧಕ್ಕೆ ಸಂಬಂಧಿಸಿದಂತೆ ತಿಳಿಸಿದ್ದಾರೆ. ಮೊಗಲರ ಅಕ್ಬರ್, ನೂರ್‌ಜಹಾನ್‌ಬೇಗಂ, ಬಾದಶಹನಾದ ಜಹಾಂಗೀರ್, ಷಾಹಜನ್ ಮೊದಲಾದವರು ಬೇಟೆಯಾಡಿದ್ದು, ನಂತರ ವನ್ಯಜೀವಿಗಳ ಬಗ್ಗೆ ಕರುಣೆ ತೋರಿ ಅಧ್ಯಯನ ನಡೆಸಿದ್ದು ಗಮನಾರ್ಹ. ವಿಜಯನಗರ ಕಾಲದ ಅರಸರು ಬೇಟೆಯಾಡುತ್ತಿದ್ದು ನಂತರ ಬೇಡರ ಮೂಲಕ ಬೇಟೆಗೆ ಪ್ರೋತ್ಸಾಹಿಸಿದ್ದರೆಂಬುದಕ್ಕೆ ಕಮಲಾಪುರ ಬೇಡರ ಯುಗಾದಿ ಬೇಟೆಯನ್ನು ಉದಾಹರಿಸುತ್ತಾರೆ.[೬] ಗ್ವಾಲಿಯರ್‌ನ ರಾಜ ಮಾನಸಿಂಗ, ಮೈಸೂರು ಅರಸರು ಬೇಟೆಯಲ್ಲಿ ನಿಪುಣರು. ಇವರು ಕೊನೆಗೆ ಪ್ರಾಣಿಗಳ ಬಗ್ಗೆ ದಯೆ ತೋರಿದ್ದು ಕಂಡುಬರುತ್ತದೆ. ೧೫೬೫ರಲ್ಲಿ ಷಾಹಿ ಸಂಸ್ಥಾನಗಳೆಲ್ಲ ಸೇರಿ ವಿಜಯನಗರ ಸಾಮ್ರಾಜ್ಯವನ್ನು ಅವನತಿಗೆ ತಳ್ಳಿದಾಗ ಅರಾಜಕತ್ವ, ಅರಣ್ಯಲೂಟಿ, ಇತರ ಅಕ್ರಮ ಕೃತ್ಯಗಳಿಗೆ ಲೆಕ್ಕವಿರಲಿಲ್ಲವೆಂದು ಹೇಳಲಾಗಿದೆ.

ಕ್ರಿ.ಶ.೧೬೦೦ರ ನಂತರ ಭಾರತಕ್ಕೆ ಆಗಮಿಸಿದ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಇಂಗ್ಲೀಷರು ಇಲ್ಲಿನ ಅಧಿಕಾರದ ಚುಕ್ಕಾಣಿ ಹಿಡಿಯಲು ಹಂಬಲಿಸಿದವರು. ಇಂಗ್ಲಿಷರು ಈ ಪರಿಸರದಲ್ಲಿ ಬೇಟೆಯಾಡಿದ ಅನೇಕ ನಿದರ್ಶನಗಳಿದ್ದು, ಅವರು ಬೇಟೆಯಲ್ಲಿ ಹೆಚ್ಚು ನಿಪುಣರಾಗಿ ಕಂಡುಬರುತ್ತಾರೆ. ಇವರು ರೂಪಿಸಿದ ಬೇಟೆ ಕಾನೂನುಗಳು ಕೂಡಾ ಗಮನಾರ್ಹವಾಗಿವೆ. ಟಿಪ್ಪುಸುಲ್ತಾನನು ಮೈಸೂರಿನ ನವಾಬನಾಗಿರುವಾಗ ಹುಲಿಗಳನ್ನು ಕೊಂದ ಕಾರಣಕ್ಕೆ ಅವನಿಗೆ 'ಮೈಸೂರಿನ ಹುಲಿ' ಎಂಬ ಬಿರುದು ಪ್ರಾಪ್ತವಾಯಿತು. ಈ ತರುವಾಯದ ಸಂದರ್ಭದಲ್ಲಿ ಭಾರತದ ಪುನರುಜ್ಜೀವನ ಚಳವಳಿಯು ಆರಂಭವಾಗಿತ್ತು. ರಾಜಾರಾಮಮೋಹನರಾಯ, ದಯಾನಂದಸರಸ್ವತಿ, ರಾಮಕೃಷ್ಣಪರಮಹಂಸ, ವಿವೇಕಾನಂದ ಮೊದಲಾದವರು ಪ್ರಾಣಿಹಿಂಸೆಯನ್ನು ವಿರೋಧಿಸಿದ್ದರು. ವಿದೇಶಿಯರು ಇಲ್ಲಿನ ಹಿಂಸಾಕೃತ್ಯ ಕಂಡು ಕಾನೂನು ಬದ್ಧಕಾಯಿದೆ ಜಾರಿಗೊಳಿಸಿದರೆ, ಭಾರತೀಯರು ಧಾರ್ಮಿಕ ಚಳವಳಿಗಳ ಮೂಲಕ ಪ್ರಾಣಿವಧೆಯನ್ನು ನಿಲ್ಲಿಸಲು ಪ್ರಯತ್ನಪಟ್ಟರು.

೧೭೯೯ರಲ್ಲಿ ಟಿಪ್ಪುವಿನ ನಂತರ ಮೈಸೂರು ರಾಜ್ಯ ಬ್ರಿಟಿಷರಿಗೆ ಸೇರಿತು. ಶ್ರೀಗಂಧ, ತೇಗ, ಬೀಟೆ, ಮೆಣಸು, ಏಲಕ್ಕಿ ಮತ್ತು ಪ್ರಾಣಿಗಳ ದಂತ ಮೊದಲಾದವುಗಳನ್ನು ತಮ್ಮ ದೇಶಕ್ಕೆ ರವಾನಿಸಲು ಹವಣಿಸಿದರು. ಮೊದಲಿಗೆ ಇವುಗಳ ಕಡೆ ಗಮನವಿರದಿದ್ದರೂ, ಲಾರ್ಡ್ ಡಾಲಹೌಸಿ (೧೮೪೮-೧೮೫೬)ಯ ನಂತರ ಬಂದ ಅಧಿಕಾರಿಗಳು ಅರಣ್ಯ ಇಲಾಖೆಯನ್ನು ಆಧುನೀಕರಿಸಲು ಪ್ರಯತ್ನಿಸಿದರು.

ಕಾಡಿನ ಸಂಪತ್ತಿನ ಬಗೆಗೆ ಅಪಾರ ಕಾಳಜಿಯಿದ್ದ ದೇಶೀಯರೆದುರು ಆಂಗ್ಲ ಅಧಿಕಾರಿಗಳು ಬೇಟೆಯಾಡಿದ್ದು ಗಮನಕ್ಕೆ ಬಂದರೂ, ಅಧಿಕಾರಶಾಹಿ ಪ್ರಭುತ್ವವನ್ನು ಇವರು ಎದುರು ಹಾಕಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಮೈಸೂರು, ಕೊಡಗು, ಮಲೆನಾಡಿನ ಕೆಲವು ಭಾಗಗಳಲ್ಲಿ ಇವರು ಕ್ರೂರ ಪ್ರಾಣಿಗಳನ್ನು ಬೇಟೆಯಾಡಿದ ಪ್ರಸಂಗಗಳಿವೆ. ಹೀಗಿದ್ದರೂ, ಬೇಟೆ ಹಿಂಸೆ, ಪಾಪಕೃತ್ಯವೆಂದು ತಿಳಿದು ಕೆಲವು ನಿಯಮಗಳನ್ನು ಅವರು ಜಾರಿಗೆ ತರುತ್ತಾರೆ. ಅವುಗಳಲ್ಲಿ ಹೈದರಾಬಾದ್ ಫಾರೆಸ್ಟ್ ಆಕ್ಟ್-೧೮೫೫, ಮದ್ರಾಸ್ ಫಾರೆಸ್ಟ್ ಆಕ್ಟ್-೧೮೮೨, ೧೮೬೫ ಮತ್ತು ೧೮೯೪ನೇ ವರ್ಷಗಳ ಅರಣ್ಯ ಶಾಸನಗಳು, ಮೈಸೂರು ಆಕ್ಟ್-೧೯೦೦, ಇಂಡಿಯನ್ ಫಾರೆಸ್ಟ್ ಆಕ್ಟ್- ೧೯೨೭ ಇತರೆ ವಿಧಿ - ಕಾನೂನುಗಳನ್ನು ಬ್ರಿಟಿಷರು ಜಾರಿಗೆ ತಂದರೂ, ಸಮರ್ಥವಾಗಿ ಅರಣ್ಯಗಳ ನಾಶವನ್ನು ತಡೆಗಟ್ಟಲು ಆಗಲಿಲ್ಲ. ಬೇಟೆಯನ್ನೇ ನಂಬಿ ಬದುಕಿದ್ದ ಸಮುದಾಯಗಳು ಅವ್ಯಾಹತವಾಗಿ ಬೇಟೆಯನ್ನು ಮುಂದುವರಿಸಿಕೊಂಡವು.

ಕ್ರಿ.ಶ.೧೮೭೧ರಲ್ಲಿ ಜಾರಿಗೆ ತಂದ ಟ್ರೆಸ್‌ಪಾಸ್ ಆಕ್ಟ್ ಸೆಕ್ಷನ್ ೧೧ರ ಪ್ರಕಾರ ಅಪ್ಪಣೆಯಿಲ್ಲದೆ ಪರಸ್ಥಳಕ್ಕೆ ಹೋಗುವ ಅಥವಾ ಅರಣ್ಯದಲ್ಲಿ ಅತಿಕ್ರಮಿಸುವ ಪ್ರಾಣಿಗಳ ಮೇಲೆ ದಂಡ ವಸೂಲಾತಿ ಮಾಡುತ್ತಿದ್ದರು :

ಆನೆ - ೨೦ ರೂ

ಎಮ್ಮೆ, ಒಂಟೆ - ೪ ರೂ

ಕುದುರೆ, ಕತ್ತೆ, ಇತರೆ - ೨ ರೂ

ಹಂದಿ, ಕುರಿ, ಆಡು, ಇತರೆ - ೧ ರೂ.

ದಂಡ ವಿಧಿಸಿದಾಗ ಅದನ್ನು ಅರಣ್ಯಾಧಿಕಾರಿಗೆ ಸಲ್ಲಿಸಬೇಕಿತ್ತು. ಸರ್ಕಾರದ ಅಧಿಸೂಚನೆ ಪ್ರಕಾರ ಸೆಕ್ಷನ್ (೧೮೭೧) ೧೨ರಂತೆ ಅರಣ್ಯದಲ್ಲಿ ದನ, ಕುರಿ, ಮೇಕೆ, ಮೇಯಲು ತೆರಿಗೆ ಕೊಡಬೇಕಾಗಿತ್ತು.[೭] ಮತ್ತು ಕಾಯ್ದಿಟ್ಟ ಅರಣ್ಯದಲ್ಲಿ ಉರುವಲು ಕಟ್ಟಿಗೆ, ನೀರು, ಮರಳು, ಇತರ ಖನಿಜ ಸಂಪತ್ತಲ್ಲದೆ, ಮರಕಡಿದರೆ, ದನ ಮೇಯಿಸಿದರೆ ಅಪರಾಧವೆಂದು ಬ್ರಿಟಿಷ್ ಸರ್ಕಾರ ಬಂಧಿಸುತ್ತಿತ್ತು. ಈ ಪ್ರದೇಶದಲ್ಲಿ ಸಿಡಿಮದ್ದು ಸಿಡಿಸುವುದು, ಆಯುಧಗಳನ್ನು ಬಳಸಿ ಬೇಟೆಯಾಡುವುದು, ಗನ್‌ಗಳ ಮೂಲಕ ಮೀನು, ಹಂದಿ, ಜಿಂಕೆ ಮೊದಲಾದವನ್ನು ಕೊಂದರೆ ನಿಷೇಧ ಕಾಯ್ದೆ ಪ್ರಕಾರ ಅನೇಕ ವಿಧದ ಶಿಕ್ಷೆಗೆ ಗುರಿಯಾಗುತ್ತಿದ್ದರು.[೮]

ಬ್ರಿಟಿಷರ ಆಳ್ವಿಕೆ ವಿರುದ್ಧ ಮುಂಡರಗಿ ಭೀಮರಾಯ ೧೮೫೭ರ ದಂಗೆಯಲ್ಲಿ ಭಾಗವಹಿಸುವ ಮುನ್ನ ಬೇಟೆ ಹವ್ಯಾಸಿಗನಾಗಿ ಅನೇಕ ಪ್ರಾಣಿಗಳನ್ನು ಕೊಂದು, ನಂತರ 'ಹಿಂಸೆ' ಎಂಬುದನ್ನರಿತು ಕೈಬಿಟ್ಟನೆಂದು ತಿಳಿದುಬರುತ್ತದೆ. ಮೊದಲನೇ ಮಹಾಯುದ್ಧದ ಸಂದರ್ಭ, ಹೋಂರೂಲ್ ಚಳವಳಿ, ಅಸಹಕಾರ ಚಳವಳಿ ಮೊದಲಾದ ಕಾಲಘಟ್ಟಗಳಲ್ಲಿ ಬೇಟೆ ಹಿಂಸೆ ಎಂದು ಪರಿಗಣಿಸಲಾಗಿತ್ತು.

ಜನಸಂಖ್ಯೆ ಹೆಚ್ಚಳದಿಂದ ಪಟ್ಟಣಗಳಿಗೆ ೧೯೦೦ರ ನಂತರ ಉಸಿರು ಕಟ್ಟುವ ವಾತಾವರಣವುಂಟಾಗಿ: ಶುದ್ಧಗಾಳಿ,

ನೀರು, ಆಹಾರಕ್ಕೆ ಪರದಾಟ ಆರಂಭವಾಯಿತು. ಆದರೆ ಗಿರಿಜನರಿಗೆ ಪ್ರಕೃತಿದತ್ತ ಅರಣ್ಯ, ವನ್ಯಜೀವಿಗಳ ನೋಟ, ಸಸ್ಯ ರಾಶಿಗಳ ಗಿರಿ- ಕಣಿವೆಗಳೇ ಆವಾಸಸ್ಥಾನವಾಗಿದ್ದು, ಅವರ ಪಾಲಿಗೆ ನೆಮ್ಮದಿ ನೆಲೆಗಳಾಗಿ ಕಂಡುಬರುತ್ತವೆ. ಜನಸಂಖ್ಯೆ ಹೆಚ್ಚಾದಂತೆ ಅರಣ್ಯವನ್ನು ಸ್ವಾರ್ಥಕ್ಕೆಂದು ಮನುಷ್ಯ ಬಳಸಿಕೊಳ್ಳುತ್ತಿದ್ದಾನೆ. ಉರುವಲು ಕಟ್ಟಿಗೆ, ಮೇವು, ಹಣ್ಣು-ಹಂಪಲು, ಯಥೇಚ್ಛವಾಗಿ ಲಭಿಸುತ್ತಿದ್ದು, ಇದೂ ಅಲ್ಲದೆ ಅರಣ್ಯದಲ್ಲಿ ಅತ್ಯಮೂಲ್ಯವಾದ ಗಾಳಿ, ಬೆಳಕು, ನೀರು, ಹಣ್ಣು-ಹಂಪಲು ಸಿಗುವುದರಿಂದ ಗಿರಿಜನರು ಸದೃಢರಾಗಿ ಬೆಳೆಯಲು ಕಾರಣವಾಗಿರಬೇಕು. ಭಾರತದಲ್ಲಿ ೧೮ನೇ ಶತಮಾನದವರೆಗೂ ಅರಣ್ಯ ರಕ್ಷಿಸುವ ಕೆಲಸ ನಡೆಯಲ್ಲಿಲ್ಲ. ಸಣ್ಣ ಪುಟ್ಟ ಪಾಳೆಯಗಾರರ ಸ್ಥಿತಿಯೂ ಹೇಳಿಕೊಳ್ಳುವಂತಿರಲಿಲ್ಲ. ಆಗ ಬ್ರಿಟಿಷರ ಅಧೀನದಲ್ಲಿದ್ದ ಇವರು ಅವರ ಆದೇಶಕ್ಕನುಗುಣವಾಗಿ ರಾಜ್ಯಭಾರ ನಡೆಸುತ್ತಿದ್ದರು. ವಿವಿಧ ಸಂದರ್ಭಗಳಲ್ಲಿ ಕರ್ನಾಟಕ ಹರಿದು ಹಂಚಿಹೋದ ಕಾರಣ ಏಕೀಕೃತವಾಗದೆ ಅನೈಕ್ಯತೆಯಿಂದಿತ್ತು. ಬೆಲೆಬಾಳುವ ಮರ, ಪ್ರಾಣಿಗಳ ದಂತ, ಚರ್ಮ, ಹೊರದೇಶಗಳಿಗೆ ರಫ್ತಾಗುತ್ತಿದ್ದರೂ ಸ್ಥಳೀಯರು ನಿಸ್ಸಹಾಯಕರಾಗಿದ್ದುದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಮಾನವನ ಅತಿಯಾದ ದುರಾಸೆಗೆ ಅರಣ್ಯ ಬರಡಾಗುತ್ತಾ ಹೋದಾಗ ಬ್ರಿಟಿಷರು ರಕ್ಷಿಸುವ ಕೆಲಸವನ್ನು ಕಂದಾಯ ಇಲಾಖೆ ಮೂಲಕ ಕೈಗೊಂಡಿದ್ದು ಗಮನಾರ್ಹ. ಉದಾ : ೧೮೪೦ರಲ್ಲಿ ಮಲಬಾರಿನ ನಿಲಂಬೂರಿನಲ್ಲಿ ಕಲೆಕ್ಟರ್ 'ಕೊನೆಲ್ಲಿ' ಎಂಬುವನು ಪ್ರಥಮ ಬಾರಿಗೆ ತೇಗದ ಮರಗಳನ್ನು ನೆಟ್ಟು ನಡುತೋಪು ಬೆಳೆಸಿದ್ದು ಮೆಚ್ಚತಕ್ಕ ಸಂಗತಿ. ಇಂದಿಗೂ ಅಲ್ಲಿ ಕೊನೆಲ್ಲಿಯವರ ಹೆಸರಿನಲ್ಲಿ ಸಾಗುವಾನಿ ಪ್ಲಾಂಟನ್ನು ರಕ್ಷಿಸಿ ಅಧ್ಯಯನ ಮಾಡಲಾಗುತ್ತದೆ. ೧೯೦೬ರಲ್ಲಿ 'ಸೆಂಟ್ರಲ್ ಬೋರ್ಡ್ ಆಫ್ ಫಾರೆಸ್ಟ್‌ರಿ' ಎಂಬ ಅರಣ್ಯಗಳ ಕೇಂದ್ರ ಸಮಿತಿ ಸ್ಥಾಪನೆ ತರುವಾಯ ೨-೧-೧೯೭೬ರಲ್ಲಿ ಬೆಂಗಳೂರಿನಲ್ಲಿ ಅರಣ್ಯ ಸಂಶೋಧನಾ ಸಂಸ್ಥೆ ಜನ್ಮತಾಳಿ ಉತ್ತಮ ಕೆಲಸ ಮಾಡುತ್ತಾ ಬಂದಿದೆ.

ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ಮಹಾತ್ಮಗಾಂಧಿ, ವಿನೋಬಾಭಾವೆ, ಅಂಬೇಡ್ಕರ್, ಪೆರಿಯರ್‌ರಾಮಸ್ವಾಮಿನಾಯ್ಕರ್ ಮೊದಲಾದವರ ಜೀವನ ಚರಿತ್ರೆಗಳನ್ನು ನೋಡಿದರೆ ಹಿಂಸೆಯನ್ನು ಖಂಡಿಸಿದ್ದು, ಬೇಟೆಯನ್ನು ನಿಷೇಧಿಸುವುದಕ್ಕೆ ಇವರು ಸಹಮತ ವ್ಯಕ್ತಪಡಿಸಿದಂತಿದ್ದಾರೆ. ಗಾಂಧೀಜಿಯವರು ಪ್ರಾಣಿದಯೆ, ಮಾಂಸಾಹಾರ ವರ್ಜ್ಯ, ಅಹಿಂಸೆ, ಇತರ ವಿಷಯಗಳನ್ನು ತಿಳಿಸಿದ್ದಾರೆ. ಪ್ರಾಣಿಗಳಿಗೆ ದಯೆ ತೋರುವಂತೆ ಧರ್ಮಗಳಿಗೂ ತೋರಬೇಕೆಂದಿರುವುದು ಮಹತ್ವದ ಸಂಗತಿ.

ಗಾಂಧೀಜಿಯವರು ದುಷ್ಟ ಮತ್ತು ಸಾಧು ಪ್ರಾಣಿಗಳಿಗೂ ದಯೆ ತೋರಬೇಕೆಂದು ಹೇಳಿದರು. ನಾವು ಅವನ್ನು ಪ್ರೀತಿಸಿದರೆ ಅವು ನಮ್ಮನ್ನು ಪ್ರೀತಿಸುತ್ತವೆ. ಆಶ್ರಮದಲ್ಲಿ ಹಾವು- ಚೇಳುಗಳನ್ನು ಕೊಲ್ಲಬಾರದೆಂಬ ನಿಯಮವುಂಟು. ಒಮ್ಮೆ ಗಾಂಧೀಜಿಯವರ ಮೇಲೆ ಹಾವು ಹರಿದು ಸುರುಳಿ ಸುತ್ತಿಕೊಂಡಿತ್ತು. ಇವರು ಸುಮ್ಮನಿದ್ದರಿಂದ ಅಪಾಯವಾಗಲಿಲ್ಲ. ಗಾಂಧೀಜಿ ಹಿಂಸೆಗೆ ಪರ್ಯಾಯವಾದ ಸಂಗತಿಗಳನ್ನು ತಿಳಿಸುತ್ತಾ 'ಆಕಳಹಾಲು ಸೇವಿಸುವುದನ್ನು ಬಿಟ್ಟಿದ್ದರು. ಹಾಲು ಕರೆಯುವಾಗ ಹಸುವಿಗೆ ಹಿಂಸೆ ಕೊಡುತ್ತಾರೆಂಬ ನಂಬಿಕೆ ಅವರಿಗಿತ್ತು. ಕೆಲವು ಹೀನ ಪದ್ಧತಿಗಳ ಮೂಲಕ ಹಾಲು ಪಡೆಯುವುದು ನೋಡಿ ಗಾಂಧಿ ಹಾಲನ್ನು ಸೇವಿಸುವುದನ್ನು ತಿರಸ್ಕರಿಸಿದ್ದರು.[1] ಕೊನೆಗೆ ಗಾಂಧಿಗೆ ಕಾಯಿಲೆ ಬಂದಾಗ ಪತ್ನಿಯ ಒತ್ತಾಯದೊಂದಿಗೆ ಹಾಲನ್ನು ಸೇವಿಸಿದರೂ ಅಹಿಂಸಾವಾದಿಯಾಗಿದ್ದು ಗಮನಾರ್ಹ.

ಸ್ವಾತಂತ್ರ್ಯಾನಂತರ ಸರ್ಕಾರ ಅಪೂರ್ವ ಪ್ರಾಣಿ-ಪಕ್ಷಿಗಳ ಬೇಟೆಯನ್ನು ನಿಷೇಧಿಸಿದ್ದು, ಕಾನೂನುಬಾಹಿರ ಎಂದು ಘೋಷಿಸಿದೆ. ಅನೇಕರು ಶಿಕಾರಿ ಲೈಸೆನ್ಸ್‌ನಿಂದ ವಂಚಿತರಾದರು. ಪ್ರಾಣಿಸಂತತಿ ಉಳಿಸಲು, ಮಾನವನ ಅವಿವೇಕಕ್ಕೆ ಕೊಡಲಿಪೆಟ್ಟು ಕೊಟ್ಟಂತಾಯಿತು ಈ ಕಾನೂನು.

ಕರ್ನಾಟಕದ ೧,೯೧,೯೧ ಚದರ.ಕಿ.ಮೀ.ಭೂಭಾಗದಲ್ಲಿ ಪ್ರತಿಶತ ೧೯.೯೬ ಪ್ರದೇಶ (೩೮೨೮೪.೨೮) ವಿಸ್ತೀರ್ಣದಲ್ಲಿ ಅರಣ್ಯ ಇದೆ. ಇದರಲ್ಲಿ ಪ್ರತಿಶತ ೨೦ರಷ್ಟು ಅರಣ್ಯಗಳನ್ನು ನಿಗದಿಪಡಿಸಿ ಯಾವ ಕಡೆ ವನ್ಯ ಜೀವಿಗಳು ಸಮೃದ್ಧಿಯಾಗಿರುತ್ತವೆಯೋ ಅಲ್ಲಿ ಅವುಗಳ ಸಂರಕ್ಷಣೆಗಾಗಿ ಒಟ್ಟು ೬೩೬೦.೦೧ ಚದರ.ಕಿ.ಮೀ.ಅರಣ್ಯವನ್ನು ವಿಂಗಡಿಸಿ ೫ ರಾಷ್ಟ್ರೀಯ ಉದ್ಯಾನವನ, ೨೧ ವನ್ಯಜೀವಿ ಅಭಯಾರಣ್ಯಗಳೆಂದು ವಿಂಗಡಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ : 'ವೇಣುಗೋಪಾಲ (ಮೈಸೂರು ಜಿಲ್ಲೆ), ಬಂಡೀಪುರ (ಮೈಸೂರು ಜಿಲ್ಲೆ), ಮಥೋಡಿ (ಚಿಕ್ಕಮಗಳೂರು ಜಿಲ್ಲೆ), ದಾಂಡೇಲಿ (ಉತ್ತರಕನ್ನಡ ಜಿಲ್ಲೆ), ನಾಗರಹೊಳೆ (ಕೊಡಗು ಜಿಲ್ಲೆ), ದೇವರಾಜ ದ್ವೀಪ (ಮೈಸೂರು ಜಿಲ್ಲೆ), ರಂಗನತಿಟ್ಟು ಪಕ್ಷಿಧಾಮ (ಮೈಸೂರು ಜಿಲ್ಲೆ), ಗಂಗದಹೊಸಹಳ್ಳಿ ಪಕ್ಷಿಧಾಮ (ಮೈಸೂರು ಜಿಲ್ಲೆ), ಹುಲಿಸಂರಕ್ಷಿತಪ್ರದೇಶ (ಶಿವಮೊಗ್ಗ ಜಿಲ್ಲೆ), ಹುಲಿಸಂರಕ್ಷಿತ ಪ್ರದೇಶ (ಮೈಸೂರು ಜಿಲ್ಲೆ), ವನ್ಯಮೃಗ ಸಂರಕ್ಷಿತ ಪ್ರದೇಶ (ಶಿವಮೊಗ್ಗ-ಚಿಕ್ಕಮಗಳೂರು) ಮೊದಲಾದವು ಕಂಡುಬರುತ್ತವೆ.[೧೦] ಇವುಗಳ ಪೈಕಿ ಭದ್ರಾಅಭಯಾರಣ್ಯವನ್ನು ೧೯೭೪ರಲ್ಲಿ ಸರ್ಕಾರ ಘೋಷಿಸಿತು. ತೇಗ, ಬೀಟೆ, ಹೊನ್ನೆ, ಮತ್ತಿ, ನಂದಿ, ತಡಪಲು ಇತರ ಮರಗಳು ಔಷಧಿಗೆ ಸೂಕ್ತವಾಗಿವೆ. ಇಂದು ೪೯೨.೪೬ಕಿ.ಮೀ.ಗೆ ಇದು ವಿಸ್ತೃತಗೊಂಡಿದೆ.

ವನ್ಯಜೀವಿಗಳ ಸಂರಕ್ಷಣೆಗಾಗಿ ಕಾನೂನುಗಳು ಜಾರಿಯಲ್ಲಿವೆ. ಈ ಪ್ರದೇಶಗಳಲ್ಲಿ ಶಿಕಾರಿಯನ್ನು ಪ್ರತಿಬಂಧಿಸಲಾಗಿದೆ. ಕಾಡುಪ್ರಾಣಿಗಳನ್ನು ರಕ್ಷಿಸಲು ಯಾವ ಕ್ರಮಗಳನ್ನು ಜಾರಿಗೆ ತರಬೇಕೆನ್ನುವಲ್ಲಿ ಸಂಶೋಧಕರು ಶೋಧನೆಗೆ ತೊಡಗಿರುವುದು ಕಂಡುಬರುತ್ತದೆ. ಹಾರುವ ಅಳಿಲು, ಕರಡಿ, ಬರ್ಕ, ಚಿರತೆ, ಕಾಡುನಾಯಿ, ಕಡವೆ ಇತರೆ ಪ್ರಾಣಿಗಳು ಮಂಗಟೆ, ಕಾಜಾಣ, ಓರಿಯಲ್, ಮರಕುಟುಕ, ಕುಟಕ ಹಕ್ಕಿಗಳಿವೆ. ಬಂಡೀಪುರ ಅಭಯಾರಣ್ಯ ಪ್ರಸಿದ್ಧಿ ಪಡೆದಂತೆ, ಚಿಕ್ಕಮಗಳೂರಿನ ಸಮೀಪ ಮಥೋಡಿಯಲ್ಲಿರುವ ಪ್ರಾಣಿ ಧಾಮದಲ್ಲಿ ಕಾಡುಕೋಣ, ಸಾರಂಗ ಹಾಗೂ ನಾನಾ ಬಗೆಯ ಚಿಗರೆಗಳು ಅಧಿಕ ಪ್ರಮಾಣದಲ್ಲಿದ್ದವು. ಇವುಗಳಂತೆ ನಾಗರಹೊಳೆ, ದಾಂಡೇಲಿ, ಪ್ರಾಣಿಧಾಮ ಮತ್ತು ಅಭಯಾರಣ್ಯಗಳಲ್ಲಿ ಆನೆ, ಕಾಡುಕೋಳಿ, ಸಾರಂಗ, ಚಿರತೆ, ಕರಡಿ, ತೋಳ, ಕಾಡುಹಂದಿ, ಪಾರಿವಾಳ, ಬಾತುಕೋಳಿ, ಮೊದಲಾದವು ಕಂಡುಬರುತ್ತವೆ.'[೧೧]

ಅರಣ್ಯದ ಸಂಪತ್ತಿನಿಂದಲೇ ನಮ್ಮ ದೇಶ ಗಣನೀಯ ಸ್ಥಾನ ಪಡೆದಿದೆ. ಅರಣ್ಯಾಭಿವೃದ್ಧಿಗಾಗಿ ಸಂವಿಧಾನದಲ್ಲಿ ಕಾನೂನಾತ್ಮಕ ಕಾಯಿದೆಗಳನ್ನು ಜಾರಿಗೆ ತರಬೇಕಾಗಿದೆ. ಈಗಾಗಲೇ ವನ್ಯಮೃಗ, ಪಕ್ಷಿಗಳ ನಾಶವನ್ನು ತಡೆಗಟ್ಟಲು ಕಾಡುಗಳಲ್ಲಿ ಶಿಕಾರಿಯನ್ನು ಶಾಸನದ ಮೂಲಕ ನಿಷೇಧಿಸಲಾಗಿದೆ. ೧೯೫೦ರಿಂದ ಜನತೆಗೆ ಅರಣ್ಯಗಳ ಅವಶ್ಯಕತೆ, ಉಪಯೋಗ, ಪ್ರಾಣಿಗಳ ಬಗೆಗೆ ಅರಿವು ಮೂಡಿಸಲು 'ವನಮಹೋತ್ಸವ' ಎಂಬ ರಾಷ್ಟ್ರೀಯ ಸಪ್ತಾಹವನ್ನು ಆಚರಿಸಲಾಗುತ್ತದೆ.

ನವೆಂಬರ್ ೧,೧೯೫೬ರ ನಂತರ ಕರ್ನಾಟಕದಲ್ಲಿ ಅರಣ್ಯ ೧,೪೦,೯೬೦ ಎಕರೆ ಇತ್ತು. ಪಂಚವಾರ್ಷಿಕ ಯೋಜನೆಗಳ ಮೂಲಕ ಇಂದು ಹೆಚ್ಚಾಗಿದೆ. ಆ ಮೂಲಕ ಅರಣ್ಯ ಮತ್ತು ವನ್ಯಮೃಗ ಸಂರಕ್ಷಣೆಗೆ ಹೆಚ್ಚಿನ ಗಮನ ಕೊಡಲಾಯಿತು. ಕಾಡಿಲ್ಲದೆ ಪ್ರಾಣಿಯಿಲ್ಲ, ಪ್ರಾಣಿಯಿಲ್ಲದೆ ಕಾಡಿಲ್ಲ ಎಂಬಂತೆ, ಕಾಡು ವನ್ಯಜೀವಿಗಳಿಗೆ ಮುಖ್ಯಕೇಂದ್ರವಾಗಿದೆ. ಸರಕಾರದ ಯೋಜನೆಗಳು ವಿಕಾಸವಾದಂತೆ ಮನುಷ್ಯನೂ ಕೂಡ ಬೇಟೆಗೆ ವಿದಾಯ ಹೇಳಿ ಜೊತೆಗೆ ಕೃಷಿಯನ್ನು ಅವಲಂಬಿಸಿದ್ದಾನೆ.

ವನ್ಯಮೃಗ ರಕ್ಷಣೆ ಮಾನವನ ಮಾನವೀಯ ಪೂರ್ಣ ಪ್ರಜ್ಞೆಗೊಂದು ಸವಾಲಾಗಿದೆ. ಈ ನಿಟ್ಟನಲ್ಲಿ ಭಾರತ ಸರ್ಕಾರವು ಅನೇಕ ಯೋಜನೆಗಳನ್ನು ಕೈಗೊಂಡಿದೆ : ೧೯೫೨ರಲ್ಲಿ ರಾಷ್ಟ್ರೀಯ ಅರಣ್ಯಾಭಿವೃದ್ಧಿಗೆ ಧೋರಣೆಯನ್ನು ಪ್ರಕಟಿಸಿ (ವನ್ಯಜೀವಿಮಂಡಳಿ) ಫಾರೆಸ್ಟ್ ಪಾಲಿಸಿ ರೆಸೊಲ್ಯೂಶನ್ ಎಂದು ಕರೆದರು. ಇದರ ಪ್ರಕಾರ ಅರಣ್ಯದಲ್ಲಿ ಮರ-ಮೃಗಗಳನ್ನು ನಾಶಗೊಳಿಸಬಾರದೆಂದೂ, ಬೇಸಾಯ - ತೋಟಗಾರಿಕೆ ಮೊದಲಾದವುಗಳನ್ನು ಮಾಡಬಾರದೆಂದು ಸರ್ಕಾರ ಕಟ್ಟಳೆ ವಿಧಿಸಿದ್ದು ತಿಳಿದುಬರುತ್ತದೆ. ಆ ಮೂಲಕ ಕರ್ನಾಟಕದಲ್ಲಿ ೧೩,೫೭೫.೧೦ ಚದರ ಮೈಲು ಅರಣ್ಯವನ್ನು ವಿಸ್ತರಿಸಲಾಗಿದೆ. ಕೃಷಿಯೊಂದಿಗೆ ಬೇಟೆಯಾಡುವ ಬೇಡರು ಜೊತೆ ಜೊತೆಗೆ ಹೆಚ್ಚಾಗಿ ಪಶುಪಾಲನೆಯಲ್ಲಿ ತೊಡಗಿರುವರು. ಸರ್ಕಾರ ಅಮೃತ ಮಹಲ್ ತಳಿಯ ಪಶುಗಳನ್ನು ವೃದ್ಧಿಸಲು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಹತ್ತಿರ ಮಾಳೇನಹಳ್ಳಿ ಕಾವಲುನಲ್ಲಿ ಅವಕಾಶ ಕಲ್ಪಿಸಿದೆ.

ಯಾವುದೇ ಪ್ರಾಣಿಗಳನ್ನು ನಿರಂತರವಾಗಿ ಬೇಟೆಯಾಡಿದರೆ ಆ ಪ್ರಾಣಿ ಸಂತತಿ ಮರೆಯಾಗಬಹುದು. ಉದಾ: ಅಲಸ್ಕಾದಲ್ಲಿ ೧೧ ಸಾವಿರ ವರ್ಷಗಳ ಹಿಂದೆ ಜಿರಾಫೆಗಳಷ್ಟು ಎತ್ತರದ ಪ್ರಾಣಿಗಳು, ಒಂಟೆಗಳು ಇಂದು ಇಲ್ಲವಾಗಿವೆ. ಆಫ್ರಿಕಾ ಇತರ ದೇಶಗಳಲ್ಲಿಯೂ ಇಂದು ಪ್ರಾಣಿಸಂಕುಲಕ್ಕೆ ರಕ್ಷಣೆ ನೀಡಲಾಗುತ್ತದೆ. ಭಾರತದಲ್ಲಿ ಎರಡು ಸಾವಿರ ವರ್ಷಗಳಿಂದೀಚೆಗೆ ಸು.೧೦೬ ವನ್ಯಮೃಗಗಳು ನಶಿಸಿಹೋಗಿವೆಯಂತೆ. ಹೀಗಾಗಿ ಆಧುನಿಕ ಪ್ರಾಣಿಗಳ ರಕ್ಷಣೆಗೆಂದು ಉದ್ಯಾನವನ, ಮೃಗಾಲಯಗಳನ್ನು ಸ್ಥಾಪಿಸಲಾಗುತ್ತಿದೆ. ಅಮೇರಿಕ ಸಂಸ್ಥಾನದಲ್ಲಿಯ ಸ್ಟೋನ್‌ಪಾರ್ಕ್ ಎಂಬುದು (೧೮೭೨) ವಿಶ್ವದಲ್ಲಿ ಪ್ರಾಚೀನವಾದ ರಾಷ್ಟ್ರೀಯ ಉದ್ಯಾನವನ. ಇಲ್ಲಿ 'ಸಿಂಹ, ಚಿರತೆ, ಕಾಡಾನೆ, ನೀರಾನೆ, ಹೇಸರಗತ್ತೆ, ಸಾರಂಗ, ಜಿಂಕೆ,' ಮುಂತಾದವು ಇವೆ. ಭಾರತದಲ್ಲಿ ವನ್ಯಮೃಗಗಳ ರಕ್ಷಣೆ ಗುಜರಾತಿನ (ಕಾಥೇವಾಡ) 'ಗಿರ್' ಅರಣ್ಯ ಪ್ರದೇಶದಲ್ಲಿ ನಡೆಯುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ಭಾರತ ಅತಿದೊಡ್ಡ ವನ್ಯಮೃಗ ದೇಶವಾಗಿದೆ.

ಭಾರತದ ಸಂವಿಧಾನದಲ್ಲಿ ವನ್ಯಮೃಗ ರಕ್ಷಣೆಗೆ ಆಯಾ ರಾಜ್ಯಗಳೇ ಹೊಣೆ ಎಂದು ಹೇಳಲಾಗಿದೆ. ಹೀಗಾಗಿ ಆಯಾ ರಾಜ್ಯಗಳು ವನ್ಯಪ್ರಾಣಿಗಳ ರಕ್ಷಣೆಗೆ ಬೇಕಾದ ಕಾಯಿದೆ ಕಾನೂನುಗಳನ್ನು ರಚಿಸಿಕೊಂಡಿವೆ. ಕಾಯ್ದಿಟ್ಟ ಅರಣ್ಯಗಳಲ್ಲಿ ಬೇಟೆಗೆ ಅವಕಾಶವಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕದ ಬಂಡೀಪುರ ವನ್ಯ ಪ್ರಾಣಿಧಾಮ ಸ್ಥಾಪಿಸಿದ್ದು, ಭಾರತದಲ್ಲಿ ಇದು ಉತ್ತಮವಾದ ಪ್ರಾಣಿಧಾಮವಾಗಿದೆ (೧೯೪೧). ದಾಂಡೇಲಿ ಸಮೀಪ ಕಸ್ತೂರಿಗಾಗಿ ಕಸ್ತೂರಿಮೃಗವನ್ನು ಬೇಟೆಯಾಡುತ್ತಿದ್ದರು. ಆ ಸಂತತಿ ಕ್ಷೀಣಿಸುವಾಗ ಇಂದು ಅವುಗಳ ಅವಶೇಷಗಳನ್ನಷ್ಟೇ ನೋಡಬೇಕಾಗಿದೆ. ಮಧ್ಯಪ್ರದೇಶ, ಮಹಾರಾಷ್ಟ್ರ, ತಮಿಳುನಾಡಿನಲ್ಲಿ ಈ ಪ್ರಾಣಿಸಂಕುಲ ಶೇ.೧೯ರಷ್ಟು ನಶಿಸಿತು.

ಸಿಂಹ ಮತ್ತು ಹುಲಿಗಳು ಮಾನವನಿಗೆ ಅಪಾಯಕಾರಿಯಾದ್ದರಿಂದ ಬೇಟೆಯಾಡಿ ಕೊಲ್ಲುವ ಪರಿಪಾಠ ಬೆಳೆದು ಬಂತು. ಕೊನೆಗೆ ರಾಷ್ಟ್ರಪ್ರಾಣಿಗಳೆಂದು ಕರೆದಾಗ ಆ ಬೇಟೆಯನ್ನು ನಿಷೇಧಿಸಲಾಯಿತು. ಭಾರತದ ಅನೇಕ ಅಹಿಂಸಾವಾದಿಗಳು ಪ್ರಾಣಿಹಿಂಸೆಯನ್ನು ವಿರೋಧಿಸಿದಂತೆ ಮೃಗಯಾ ಸಾಹಿತಿ ಜಿಮ್‌ಕಾರ್ಬೆಟ್ ಎಂಬುವನು ಹುಲಿ ಕೊಲ್ಲುವುದನ್ನು ತೀವ್ರವಾಗಿ ವಿರೋಧಿಸಿ ಪಾಪಕೃತ್ಯವೆಂದಿದ್ದಾನೆ. ಬೇಟೆ ನಿಷಿದ್ಧಗೊಂಡರೂ ದಂತ, ಚರ್ಮಗಳ ಪೂರೈಕೆ ಕಡಿಮೆಯಾಗಲಿಲ್ಲ. ಕಳ್ಳತನದ ಮೂಲಕ ಪ್ರಾಣಿಗಳನ್ನು ಕೊಲ್ಲುವ ಕೃತ್ಯಗಳು ಈಗಲೂ ನಡೆಯುತ್ತಿವೆ. ಹೀಗಾಗಿ ವನ್ಯಮೃಗಗಳನ್ನು ರಕ್ಷಿಸಲು ಶಾಶ್ವತ ನಿಧಿ ಸ್ಥಾಪಿಸುವ ಅಗತ್ಯವಿದೆ. ಜೊತೆಗೆ ಮೃಗಾಲಯಗಳನ್ನು ನಿರ್ಮಿಸಬೇಕಾಗಿದೆ. ನ್ಯೂಯಾರ್ಕ್ (೧೮೯೯), ವಾಷಿಂಗ್‌ಟನ್, ಕಲ್ಕತ್ತಾ (ಅಲಿಪುರ-೧೮೭೫), ಮೈಸೂರು, ಹೈದರಾಬಾದ್, ಮುಂಬಾಯಿಗಳಲ್ಲಿನ ಮೃಗಾಲಯಗಳು ಅಂತರ್‌ರಾಷ್ಟ್ರೀಯ ಖ್ಯಾತಿ ಪಡೆದಿವೆ. ಗ್ರಾಮೀಣ ಮಟ್ಟದಲ್ಲಿಯೂ ಇವುಗಳ

ಸುಧಾರಣೆ ಸಣ್ಣ ಪ್ರಮಾಣದಲ್ಲಾದರೂ ಆಗುವುದು ಸೂಕ್ತ. ಇಲ್ಲವಾದರೆ ಕೇವಲ ಪುಸ್ತಕಗಳಲ್ಲಿನ ಪ್ರಾಣಿಚಿತ್ರಗಳನ್ನು ನೋಡಿ ತೃಪ್ತಿಪಡಬೇಕಾಗುತ್ತದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಾಣಿ ರಕ್ಷಣೆಗೆ ವ್ಯಾಪಕ ಪ್ರಚಾರ ದೊರೆಯಿತು. ಭಿತ್ತಿಚಿತ್ರ, ಸಂಕೀರ್ಣ ಪತ್ರಿಕೆ, ಆಕಾಶವಾಣಿ, ಸಿನೇಮಾ, ಸ್ಲೈಡ್ಸ್, ವೇದಿಕೆ, ಟಿ.ವಿ. ಇತರ ಪ್ರಸಾರ ಮಾಧ್ಯಮಗಳ ಮೂಲಕ ವನ್ಯಸಂಪತ್ತು ಅಮೂಲ್ಯವೆಂದು ತಿಳಿಸಲಾಗಿದೆ. ಶ್ರೀಗಂಧ, ದಂತ, ಉರುವಲು ಕಟ್ಟಿಗೆ, ಮನೆಗಳಿಗೆ ತೊಲೆಗಳಾಗಿ, ದನ ಮೇಯಿಸಲು ಇತರ ನಾನಾ ಕಾರಣಗಳಿಗೆ ಅರಣ್ಯವನ್ನು ನಾಶಪಡಿಸುವುದು ಕಾನೂನುಬಾಹಿರ ಎಂದು ಸರ್ಕಾರ ಮನವರಿಕೆ ಮಾಡಿದೆ. ಇಂದು ಅರಣ್ಯ ಇಲಾಖೆ ಕಾಡುಬೆಳೆಸಿ ನಾಡು ಉಳಿಸಿ ಎಂಬ ಕಾರ್ಯಕ್ರಮದ ಮೂಲಕ ವನ್ಯ ಸಂಪತ್ತನ್ನು ಕಾಪಾಡುವ ಪ್ರಯತ್ನಮಾಡುತ್ತದೆ.

೧೯೭೨ರಲ್ಲಿ ವನ್ಯಜೀವಿ ಅಧಿನಿಯಮ ಜಾರಿಗೆ ಬಂದ ತರುವಾಯ ವನ್ಯಪ್ರಾಣಿ ಸಂರಕ್ಷಣಾ ಯೋಜನೆಗಳನ್ನು ಕೈಗೊಂಡರು. ಇದರಂತೆ ೧೯೭೩ರಲ್ಲಿ ಹುಲಿಸಂರಕ್ಷಣಾ ಯೋಜನೆ ರೂಪಿಸಲಾಯಿತು. ಇದರ ಸ್ಮರಣಾರ್ಥ ದಿನಾಂಕ : ೨೩-೧೨-೧೯೯೮ರಂದು ೨೫ನೇ ಹುಲಿ ಸಂರಕ್ಷಣಾ ಯೋಜನೆಯ ಸಪ್ತಾಹವನ್ನು ಆಚರಿಸಲಾಯಿತು. ಭದ್ರಾ ಅಭಯಾರಣ್ಯದಲ್ಲಿ ೧೯೭೨ರ ವೇಳೆಗೆ ಸು.೩೪ ಹುಲಿಗಳಿದ್ದವು.

'೧೯೭೭ರ ಸೆಪ್ಟೆಂಬರ್‌ನಲ್ಲಿ ಭಾರತ ರಾಜ್ಯಾಂಗದ (೪೪ನೇ ತಿದ್ದುಪಡಿ) ಮಸೂದೆ ಲೋಕಸಭೆಯಲ್ಲಿ ಅಂಗೀಕೃತವಾಗಿ ಹಾಗೂ ರಾಜ್ಯವಿಧಾನ ಸಭೆಯಲ್ಲಿ ಶೇ.೫೦ರಷ್ಟು ಮತಗಳಿಂದ ಪಾಸಾಗಿ ರಾಷ್ಟ್ರಪತಿಯವರ ಸಮ್ಮತಿ ಪಡೆದು ಕಾನೂನಾಗಿದೆ.' ಇದರ ೪೮ನೇ ವಿಷಯದ ಪ್ರಕಾರ ಹೊಸ ನಿರ್ದೇಶನ ಜಾರಿಯಾಗಿದೆ. ಭಾರತದ ಪ್ರತಿರಾಜ್ಯವು ರಾಷ್ಟ್ರದ ಅರಣ್ಯ ಮತ್ತು ವನ್ಯಜೀವಿ ಸಂಪತ್ತನ್ನು ರಕ್ಷಿಸುವ ಮತ್ತು ಅವುಗಳ ಪರಿಸರವನ್ನು ಸಂರಕ್ಷಿಸಿ ಅಭಿವೃದ್ಧಿಗೊಳಿಸುವ ಕಾರ್ಯ ನಡೆದಿದೆ. 'ಭಾರತದ ಪ್ರಜೆಯ ೧೦ ಮೂಲಭೂತ ಹಕ್ಕುಗಳಲ್ಲಿ ಅರಣ್ಯ, ಸರೋವರ, ನದಿ, ವನ್ಯಜೀವಿ, ಮುಂತಾದವುಗಳನ್ನೊಳಗೊಂಡ ನೈಸರ್ಗಿಕ ಪರಿಸರವನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸುವುದು ಹಾಗೂ ಎಲ್ಲ ಜೀವಿಗಳ ಬಗ್ಗೆ ಸಹಾನುಭೂತಿ ತೋರಿಸುವುದು ಪ್ರತಿಯೊಬ್ಬ ಭಾರತೀಯ ನಾಗರೀಕನ ಕರ್ತವ್ಯ ಎನ್ನಲಾಗಿದೆ.'[೧೨] ರಾಜ್ಯಾಂಗದ ೭ನೇ ತಿದ್ದುಪಡಿಯಲ್ಲಿ ಅರಣ್ಯ, ವನ್ಯಮೃಗ-ಪಕ್ಷಿಗಳ ಸಂರಕ್ಷಣೆ ಪ್ರತ್ಯೇಕ ವಿಷಯಗಳಾಗಿರುವುದು ವನ್ಯಜೀವಿಗಳ ಸಂರಕ್ಷಣೆಗೆ ಕೊಟ್ಟಿರುವ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.

ಮೇಲಿನಂತೆ ಬೇಟೆಯನ್ನು ನಿಷೇಧಿಸಿದ್ದರೂ ಅಭಯಾರಣ್ಯಗಳಲ್ಲಿ ಪ್ರಾಣಿಗಳ ಮಾರಣಹೋಮ ದಿನನಿತ್ಯ ನಡೆಯುತ್ತಿದೆ. ೨೧ನೇ ಶತಮಾನದಲ್ಲಿ ಮಾದಕ ದ್ರವ್ಯಗಳ ವ್ಯಾಪಾರದಂತೆಯೇ ವನ್ಯಮೃಗ ಜಂತುಗಳ ವ್ಯಾಪಾರ ಭೂಗತವಾಗಿ-ರಾಜಾರೋಷವಾಗಿ ನಡೆಯುತ್ತಿದೆ. ಇಂದು ಪ್ರಾಣಿಗಳನ್ನು ಬೇಟೆಯಾಡಿ ಅವುಗಳ ಅವಯವಗಳನ್ನು ಬೇರ್ಪಡಿಸಿ ಬೇರೆ ದೇಶಗಳಿಗೆ ರವಾನಿಸಲಾಗುತ್ತದೆ. ವನ್ಯಪ್ರಾಣಿಗಳ ಹತ್ಯೆ, ಘೋರ ಅಪರಾಧವೆಂಬ ಕಾನೂನು ದೇಶದಲ್ಲಿದ್ದರೂ ಕಾಯಿದೆಯ ಉಲ್ಲಂಘನೆ ನಮ್ಮ ಪ್ರಥಮಹಕ್ಕು ಎಂಬಂತೆ ಮಾಫಿಯಾಗ್ಯಾಂಗ್‌ಳು ಕೆಲವು ದೇಶಗಳ ಮಧ್ಯೆ ವನ್ಯಮೃಗಗಳ ಸರಬರಾಜಿಗೆ ಒಪ್ಪಂದಗಳು ಮಾಡಿಕೊಂಡಿದ್ದು ಅವುಗಳ ಬೇಟೆ ಎಗ್ಗಿಲ್ಲದೆ ನಡೆಯುತ್ತಿದೆಯೆಂಬುದು ವ್ಯಕ್ತಪಡುತ್ತದೆ. ಇಂಥಾ ಮಾಫಿಯಾಗ್ಯಾಂಗನ್ನು ಮಟ್ಟಹಾಕಲು ಕನ್ವೆನ್ಷನ್ ಆನ್ ಇಂಟರ್ ನ್ಯಾಷನಲ್ ಟ್ರೇಡ್ ಎನ್‌ಡೇಂಜರ್ಡ್ ಸ್ಪೆಸೀಸ್ (ಸಿಟಿಸ್) ಸಂಸ್ಥೆ ಜನ್ಮ ತಾಳಿದೆ. ಅದು ಮೂಲ ಪ್ರಾಣಿಗಳ ಶರೀರದ ಅಂಗಾಂಗಗಳ ಆಮದು

ರಫ್ತು ವ್ಯವಹಾರ ಅಥವಾ ಈ ದಂಧೆಯನ್ನು ಪ್ರೋತ್ಸಾಹಿಸುವುದು ಅಪರಾಧ ಎಂದಿದೆ. ಪ್ರಾಣಿಗಳಿಂದ ತಯಾರಾದ ವಸ್ತುಗಳನ್ನು ಮಾರಬಾರದೆಂದು ಅದು ನಿಷೇಧಿಸಿದೆ. ಚೀನಾ ಹುಲಿಗಳಿಂದ ಔಷಧಿ ತಯಾರಿಸುವ ಮೊದಲ ದೇಶ. ೧೯೮೧ರಲ್ಲಿ ಚೀನಾ ಸಿಟಿಸ್‌ಗೆ ಸೇರಿದರೂ ಹುಲಿಯ ಎಲುಬುಗಳು ಇತರ ಭಾಗಗಳ ಆಮದನ್ನು ನಿಷೇಧಿಸಲಿಲ್ಲ. ಬದಲಾಗಿ ಪ್ರತಿವರ್ಷ ಔಷಧಿ ಕಂಪನಿಗಳಿಗೆ ೧೦೦ ಹುಲಿಗಳ ಅವಶ್ಯಕತೆಯಿತ್ತು. ಹೀಗೆ ಚೀನಾವನ್ನು ಹೊರತುಪಡಿಸಿದರೆ ಉಳಿದೆಲ್ಲಾ ರಾಷ್ಟ್ರಗಳು ಹುಲಿಯನ್ನು ಕೊಲ್ಲಬಾರದೆಂದು ಶಾಸನ ಮಾಡಿವೆ. ಆದರೂ ಕಳ್ಳತನದಿಂದ ಬೇಟೆಯಾಡಿದ ಹುಲಿಗಳ ಅಂಗಾಂಗಗಳನ್ನು ಬೇರ್ಪಡಿಸಿ ಚೀನಾದೇಶಕ್ಕೆ ಕಳುಹಿಸುತ್ತಾರೆ. ನೇಪಾಳ, ಘನಿ, ಹಾಂಕಾಂಗ್ ದೇಶಗಳ ಮೂಲಕ ಚೀನಾಕ್ಕೆ ರವಾನೆಯಾಗುತ್ತವೆ. ೧೯೯೪-೯೭ರ ನಡುವೆ ಭಾರತದಲ್ಲಿ ೪೧೦ ಹುಲಿಗಳನ್ನು ಕೊಲ್ಲಲಾಗಿದೆಯಂತೆ. ಈಗಾಗಲೇ ಹುಲಿಗಳ ರಕ್ಷಣೆಗೆ ಶೀಘ್ರಕ್ರಮ ತೆಗೆದುಕೊಳ್ಳುವಂತೆ ಬ್ರಿಟನ್ ಪಾರ್ಲಿಮೆಂಟ್ ತೀರ್ಮಾನಿಸಿತ್ತು. ನೇಪಾಳ, ಬರ್ಮಾ, ಇಂಡೋನೇಶಿಯಾ ಇತರ ದೇಶಗಳಲ್ಲಿ ಪ್ರಾಣಿಗಳ ಕಳ್ಳಸಾಗಾಣಿಕೆ ಹೆಚ್ಚಾಗಿ ನಡೆಯುತ್ತದೆ.

ಇಂದು ಬೇಟೆಯನ್ನು ಕಡ್ಡಾಯವಾಗಿ ನಿಷೇಧಿಸಿದ್ದರೂ, ಕದ್ದು- ಮುಚ್ಚಿ- ಬೇಟೆಯಾಡುವುದು ಮುಂದುವರಿದಿದೆ. ಸ್ವಾತಂತ್ರ್ಯ ಬಂದ ತರುವಾಯ ಭಾರತ ಸರ್ಕಾರವು 'ಬೇಟೆ' ಹಿಂಸೆಯ ಪ್ರತೀಕವೆಂದು ಕಡಿವಾಣ ಹಾಕಿರುವುದು ಸ್ಮರಣೀಯ. ಹವ್ಯಾಸಕ್ಕಾಗಿ ಕೃಷ್ಣಮೃಗಳನ್ನಿಂದು ಬೇಟೆಯಾಡುವುದು ಕಂಡುಬರುತ್ತದೆ. ಭಾರತದ ಎಲ್ಲ ರಾಜ್ಯಗಳಿಗೂ ಒಂದೇ ನಿಯಮವಾದರೆ, ಕಾಶ್ಮೀರಕ್ಕೆ ಮಾತ್ರ ಪ್ರತ್ಯೇಕ ನಿಯಮಗಳಿವೆ. ಅಲ್ಲಿ ಬೇಟೆಯಾಡುವುದು ಅಪರಾಧವಲ್ಲ. ರಾಜಕ್ರೀಡೆಯಾಗಿದ್ದ ಬೇಟೆ ಮಹಾರಾಜರ ಯುಗ ಕಣ್ಮರೆಯಾದರೂ (೫೦ವರ್ಷ) ಕಾನೂನುಬದ್ಧವಾಗಿದೆ. ಬೇಟೆಯಾಡುವ ಪ್ರಾಣಿಗೆ ಪರವಾನಿಗೆ ಪಡೆಯಲು ೧೦೦.೦೦ ಪಾವತಿ ಮಾಡಿ, ಆ ಸರ್ಕಾರದಿಂದ ಲೈಸೆನ್ಸ್ ಪಡೆಯಬೇಕು. ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಕಾನೂನು ಸಹ ನಿಷೇಧಿಸಿರುವ ೫ ಪ್ರಾಣಿಗಳನ್ನು ಕೊಲ್ಲಲು ಇಲ್ಲಿ ಅವಕಾಶವಿದೆ. ಈ ರಾಜ್ಯದಲ್ಲಿ ನಿಖರ ವನ್ಯಮೃಗ ಕಾಯಿದೆಗಳಿಲ್ಲ. ಹಿಮಾಲಯಕರಡಿ, ಮೊದಲಾದ ಪ್ರಾಣಿಗಳನ್ನು ಬೇಟೆಯಾಡಲು ಶುಲ್ಕ ಕೊಡಬೇಕು. ಇಂಥ ವ್ಯವಸ್ಥೆ ಕರ್ನಾಟಕದಲ್ಲಿಲ್ಲ.

ಕರ್ನಾಟಕದ ಹುಲಿ ಸಂರಕ್ಷಣಾ ಯೋಜನೆಗಳು ಕುರಿತಂತೆ ಸರ್ಕಾರ ಕೈಗೊಂಡ ನಿರ್ಧಾರಗಳನ್ನು ಪ್ರಕಟಿಸಲಾಗಿದೆ. ವನ್ಯಜೀವಿಗಳ ಸಂರಕ್ಷಣೆಗಾಗಿ ಸೇವೆ ಸಲ್ಲಿಸುತ್ತಿರುವ ಮೇನಕಾ ಗಾಂಧಿ ಅವರು 'ಪ್ರಾಣಿಮಿತ್ರ ಪುರಸ್ಕಾರ' ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಈ ಪ್ರಶಸ್ತಿಗೆ ಪಾತ್ರರಾದ ಇತರರೆಂದರೆ: ಕಾಯಾಗುಪ್ತಾ, ದಶರತ್ ಭಾಯಿ ಮಾಣಿ, ಲಾಲ್‌ಥಾಕರ್, ಮಾರ್ಗಬೆನ್ ಮತ್ತು ಕಾಮತಿಲಕ್‌ರಾಜ್.

ಕರ್ನಾಟಕದಲ್ಲಿ ಪ್ರಾಣಿ ದಯೆ ಮತ್ತು ಪ್ರಾಣಿ ಹಿಂಸೆ ವಿರೋಧಿ ಕಾರ್ಯಕ್ರಮವನ್ನು ಒಳಗೊಂಡ ಸಂಘ-ಸಂಸ್ಥೆಗಳು ಕೆಲಸಮಾಡಿವೆ. ಇಂದು ಅಖಿಲ ಕರ್ನಾಟಕ ಪ್ರಾಣಿ ದಯಾ ವೇದಿಕೆ ಎಂಬ ನೂತನ ಸಂಘ ಅಸ್ತಿತ್ವಕ್ಕೆ ಬಂದಿದೆ.[೧೩] ಹೀಗೆ ಅನೇಕ ವಿಧದ ಪ್ರಾಣಿದಯಾ ಸಂಘಗಳು ಜನ್ಮತಾಳಿದ್ದು, ಬೇಟೆಗೆ ಕಡಿವಾಣ ಹಾಕಿದ್ದು ಗಮನೀಯ ಸಂಗತಿ. ಬೇಟೆ, ಅರಣ್ಯನಾಶದ ಬಗೆಗೆ ವಿವಿಧ ರೀತಿಯ ಕಾನೂನುಗಳಿರುವುದರಿಂದ ನಿಷೇಧಕ್ಕೊಳಪಟ್ಟರೂ ಕಳ್ಳತನದಿಂದ ಬೇಟೆಯಾಡಿದ ಉಲ್ಲೇಖಗಳಿವೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಆಮೆಗಳ ಸೇರ್ಪಡೆಗೆ ಆಗ್ರಹ ಪಡಿಸಲಾಗಿದೆ. ಆಮೆಗಳ ಬಗೆಗೆ ಸಂಶೋಧನೆ ಮಾಡುವ ಡಾ.ಬಿ.ಕೆ. ಶರತ್ ಅವರು ೧೯೯೧ರಲ್ಲಿ ವನ್ಯಜೀವಿ ಕಾಯ್ದೆಯನ್ನು ತಿದ್ದುಪಡಿ ಮಾಡಿದಾಗಲೂ,

ಪರಿಸರದಲ್ಲಿ ಅತಿಸೂಕ್ಷ್ಮ ಎನಿಸಿರುವ ಆಮೆಗಳನ್ನು ಸೇರ್ಪಡೆಗೊಳಿಸಿಲ್ಲ ಎಂದು ವಿಷಾದಿಸಲಾಗಿದೆ. ಇಂದು ಅರಣ್ಯದ ಜಾಡಮಾಲಿಯಾದ ಆಮೆಗಳು ನಶಿಸಿಹೋಗಿದ್ದು ಕುಂಡಾಮೆ, ಚಿತ್ತದ ಆಮೆಗಳು ಹೊಸದಾಗಿ ಕಂಡುಬರುತ್ತವೆನ್ನಲಾಗಿದೆ. ಇವುಗಳ ನಾಶಕ್ಕೆ ಮಾನವನ ಬಾಯಿಚಪಲ ಮುಖ್ಯಕಾರಣವಾಗಿ ಬೇಟೆಯಾಡುವ ವೃತ್ತಿ ಬೆಳೆದಿದೆ. ಕಶೇರುಕ, ಸರೀಸೃಪ ಪ್ರಾಣಿಸಂಕುಲಕ್ಕೆ ಸೇರಿದ ಆಮೆಗಳ ಬಗ್ಗೆ ೧೯೮೬ರಲ್ಲಿ ಡಾ.ಜಾಕ್‌ಫ್ರೆಸರ್ ಸಂಶೋಧನೆಮಾಡಿದ್ದಾರೆ.

ಧಾರ್ಮಿಕ ಹಿನ್ನೆಲೆಯಲ್ಲಿ ಹಬ್ಬ-ಹರಿದಿನಗಳಲ್ಲಿ ಮಾತ್ರ ಬೇಟೆಗೆ ಹೋಗುವ ಸಂಪ್ರದಾಯವಿದೆ. ಬೇಡರು ಯುಗಾದಿ, ಶಿವರಾತ್ರಿ ಬೇಟೆಗಳಲ್ಲದೆ, ಮಳೆ ಬರಲಿಲ್ಲವೆಂದಾಗ ಹೊಲಮೇರಿಬೇಟೆಗೆ ಹೋಗುವುದು ಪರಿಪಾಠವಾಗಿದೆ. ಹೀಗೆ ಬೇಟೆ ಪ್ರಕಾರಗಳಲ್ಲಿ ಜಲದಬೇಟೆ, ನೆಲದಬೇಟೆ ಎಂದು ವಿಂಗಡಿಸಿದರೆ ಜಲದ ಬೇಟೆ ಕಡಿಮೆಯಾಗಿದೆ. ಅದಕ್ಕೆ ಸರ್ಕಾರ ಅನುಮತಿ ನೀಡಿ, ಸಾರ್ವಜನಿಕವಾಗಿ ಸೀಗಡಿ, ಏಡಿ, ಆಮೆ ಮತ್ತು ಮೀನುಗಳನ್ನು ಮಾರಾಟ ಮಾಡುವ ಅವಕಾಶವಿದೆ. ನೆಲದ ಬೇಟೆಯಲ್ಲಿ ಹಕ್ಕಿ, ಮೊಲ, ಚಿಗರೆ, ತೋಳ ಮೊದಲಾದುವನ್ನು ಕೊಲ್ಲುವುದು ಅಪರಾಧ.

ಬೇಟೆಯಾಡುವುದಕ್ಕೂ ಸಾಂಸ್ಕೃತಿಕವಾದ ಕೆಲವು ಅರ್ಥಗಳಿವೆ. ಅಪವಿತ್ರ ಮೈಯಿಂದ ಬೇಟೆಗೆ ಹೋಗಬಾರದು(ಮೈಲಿಗೆ ಇದ್ದಾಗ), ಸೂತಕವಿದ್ದಾಗ ಬೇಟೆಗೆ ಹೋಗಬಾರದು. ಉದಾ. ಮೀನುಗಾರರು ಶುದ್ಧರಾಗಿ ಸ್ನಾನ, ಪೂಜೆಗಳನ್ನು ಮಾಡಿ ದೋಣಿ ತೆಗೆದುಕೊಂಡು ಹೊಳೆ, ನದಿಗಳಲ್ಲಿ ಹೋಗಬೇಕು. ಒಂದು ವೇಳೆ ಅಶುದ್ಧರಾಗಿದ್ದಾಗ ಜಳಕಮಾಡದೆ ಹೋದರೆ ಜೀವಕ್ಕೆ ಅಪಾಯವಾಗುವ ಸಂಭವವಿದೆ ಎನ್ನುವ ನಂಬಿಕೆಯನ್ನು ಮೀನುಗಾರರ ಬದುಕಿನಲ್ಲಿ ಕಾಣುತ್ತೇವೆ. ಹಾಗೆಯೇ ಬೇಡರ ಬದುಕಿನಲ್ಲಿಯೂ ಇದು ಆಚರಣೆಯಲ್ಲಿದೆ. ಹೆಣ್ಣಿನ ಸಂಬಂಧ ಮಾಡಿದ ಬೇಡ ಜಳಕ ಮಾಡದೆ ಹಾಗೆ ಬೇಟೆಗೆ ಹೋದರೆ ಅಪಾಯವಾಗುವ ಸಾಧ್ಯತೆಗಳು ಇವೆ ಎಂಬ ನಂಬಿಕೆಗಳು ಬೇಟೆಯ ನಿಷೇಧಕ್ಕೆ ಪೂರಕವಾಗಿವೆ. ಒಟ್ಟಾರೆ ಜಗತ್ತಿನಾದ್ಯಂತ ವನ್ಯಜೀವಿಗಳ ಬಗೆಗೆ ಇಂದು ಜಾಗೃತಿ ಉಂಟಾಗಿದೆ.

ಸರಕಾರ ಬೇಟೆಯನ್ನು ನಿಷೇಧಿಸಿದಾಗಲೂ ಮನುಷ್ಯ ಮತ್ತು ಪ್ರಾಣಿಗಳ ಬದುಕುವ ಪರಿಸರ ಬದಲಾದಂತಿಲ್ಲ. ಆದರೆ ಅಸಾಯಕ ಪ್ರಾಣಿಗಳನ್ನು ಆಹಾರಕ್ಕೆ, ವಿನೋದಕ್ಕೆ ಬೇಟೆಯಾಡುವುದಿದೆ. ಇದನ್ನು ತಡೆಗಟ್ಟಲು ರಾಷ್ಟ್ರೀಯವನ, ಅಭಯಾರಣ್ಯಗಳಂಥ ಪ್ರಾಣಿ ಸಂರಕ್ಷಣಾ ನೆಲೆಗಳ ನಿರ್ಮಾಣವಾಗಿವೆ. ಅವಿವೇಕದಿಂದ ಪ್ರಾಣಿಗಳನ್ನು ಕೊಲ್ಲುವುದು ಇಂದು ದುರಂತವೆನಿಸಿದೆ. ಇಂದು ಬೇಡರು ದೈವದಲ್ಲಿ ನಂಬಿಕೆಯಿಟ್ಟು ಹಂದಿಯನ್ನು ಯುಗಾದಿ ಹಬ್ಬದಲ್ಲಿ ಕೊಲ್ಲುವುದುಂಟು. ಸರಕಾರ ಬೇಟೆಯನ್ನು ನಿಷೇಧಿಸಿದರೂ ಮನುಷ್ಯನ ಹುಟ್ಟು ಪ್ರವೃತ್ತಿಯೆನಿಸಿದ ಈ ಸ್ವಭಾವ ಮೂಲತಃ ಮರೆಯಾಗಿಲ್ಲ. ಸರಕಾರದ ಕಣ್ಣು ತಪ್ಪಿಸಿ ಆಹಾರಕ್ಕಾಗಿ, ವಿನೋದಕ್ಕಾಗಿ, ಧಾರ್ಮಿಕ ಆಚರಣೆಗಳಿಗಾಗಿ ಕೆಲವು ನಂಬಿಕೆಗಳಿಗೆ ಅನುಗುಣವಾಗಿ ಈ ಪ್ರವೃತ್ತಿ ಮುಂದುವರಿದಿದೆ. ಒಟ್ಟಾರೆ, ಮಾನವ ಈ ಭೂಮಿಯ ಮೇಲೆ ಇರುವವರೆಗೂ ನೈಸರ್ಗಿಕ ಸಂಪತ್ತನ್ನು ಬಳಸಿಕೊಳ್ಳುತ್ತಾ ಬರುವುದು ಅವನಿಗೆ ಒಗ್ಗಿ ಹೋಗಿರುವಂಥ ಗುಣ. ಆದ್ದರಿಂದಲೇ ಯಾವುದೇ ಕಾನೂನುಬದ್ಧ ಕಾಯಿದೆಗಳು ಯಶಸ್ವಿಯಾಗುವಲ್ಲಿ ಅಸಹಾಯಕವಾಗುತ್ತಿವೆ ಎನ್ನಬಹುದು. ಅಂದರೆ ಮನುಷ್ಯ ಸಹಜವಾದ ಅನುಕಂಪವನ್ನು ಪ್ರಾಣಿಗಳ ಮೇಲೆ ತೋರಿಸಿ ಮನಃಪೂರ್ವಕವಾಗಿ ಈ ವೃತ್ತಿಯನ್ನು ಬಿಡುವುದು ಯಾವಾಗ ಸಾಧ್ಯವಾಗುತ್ತದೆಯೋ ಅಲ್ಲಿಯವರೆಗೆ ಈ ಪ್ರವೃತ್ತಿ ಮುಂದುವರಿಯುತ್ತದೆ.

೬.೨. ಬೇಟೆ ಬಗೆಗಿನ ನೀತಿ – ನಿರ್ಬಂಧಗಳು

ಆಹಾರ ಸಂಗ್ರಹಕರಲ್ಲಿ ಬೇಟೆಗಾರರಿಗೆ ಹೆಚ್ಚು ನೀತಿ ನಿಯಮಗಳಿವೆ. ಅವರು ತಮಗೆ ಆಹಾರಕ್ಕೆ ಅಗತ್ಯವಿರುವಷ್ಟು ಪ್ರಾಣಿಗಳನ್ನು ಬೇಟೆಯಾಡುವರು. ತನ್ನ ಅಗತ್ಯಕ್ಕಿಂತ ಹೆಚ್ಚಿನ ಪ್ರಾಣಿಗಳನ್ನು ಕೊಲ್ಲುವುದಿಲ್ಲ. ಬೇಟೆಯಾಡಿದ ಪ್ರಾಣಿಯನ್ನು ಸಾಮೂಹಿಕವಾಗಿ ಹಂಚಿಕೊಂಡು ಉಣಬಲ್ಲರು. ಈ ಹಿಂದೆ ಆದಿಮಾನವರು ತಂದ ಬೇಟೆಯನ್ನು ಸಾಮೂಹಿಕವಾಗಿ ಪಾಲುಮಾಡಿಕೊಂಡು, ಇಲ್ಲವೆ ಕೂಡಿ ತಿನ್ನುತ್ತಿದ್ದರು. ಈ ಪದ್ಧತಿಯನ್ನು ಇವತ್ತಿನ ಗ್ರಾಮೀಣ ಬದುಕಿನಲ್ಲಿ ಕಾಣುತ್ತೇವೆ. ಸ್ವಾರ್ಥಕ್ಕಾಗಿ ಬೇಟೆಯನ್ನು ಬಳಸಿದರೆ ಅಥವಾ ಆಡಿದ ಬೇಟೆ ತಮಗಷ್ಟೆ ಸೀಮಿತವೆಂದು ತಿಳಿದುಕೊಂಡರೆ, ಆ ಜನರಿಗೆ ಒಳ್ಳೆಯದಾಗುವುದಿಲ್ಲವೆಂಬ ನಂಬಿಕೆ ಬೇಡರಲ್ಲಿದೆ. ಬೇಟೆಗೆ ನೀತಿ, ಒಳ್ಳೆಯ ನಡತೆ, ಧೋರಣೆಗಳನ್ನು ರೂಪಿಸಿದರೆ, ಬೇಟೆಯ ನಿರ್ಬಂಧವು ಬಲಾತ್ಕಾರ, ಅಡ್ಡಿ, ಒತ್ತಾಯವನ್ನು ತೋರಿಸುತ್ತದೆ.

ಬೇಟೆ ಇಂದು ಆಹಾರಕ್ಕಾಗಿ ಸೀಮಿತವಾಗದೆ, ರೂಢಿ, ಸಂಪ್ರದಾಯವಾಗಿ ಬಳಕೆಯಾಗುತ್ತದೆ. ಅಮವಾಸ್ಯೆ ದಿವಸ ಬೇಟೆ ಯಾಡಬೇಕೆಂಬ ನೀತಿ ಇರುವಂತೆ, ಬೇರೆ ಬೇರೆ ದಿವಸ (೩೦) ಬೇಟೆಯಾಡಬಾರದೆಂಬ ನಿರ್ಬಂಧವೂ ಇರುತ್ತದೆ. ಪುರುಷರಷ್ಟೆ ಪಾಲ್ಗೊಳ್ಳುವ ಬೇಟೆ ಹಸಿವು, ಹವ್ಯಾಸಕ್ಕಾಗಿ, ಕಾಲಹರಣ ಕ್ರೀಡೆಯಾಗಿ ಜೀವಂತವಾಗಿದೆ. ಯುಗಾದಿಯಲ್ಲಿ ಪ್ರತಿವರ್ಷ ರೂಢಿಸಿಕೊಂಡು ಬಂದ ಬೇಟೆ ಪಾರಂಪರಿಕವಾದುದು. ಈ ನಿಯಮವನ್ನು ಪಾಲಿಸಲಿಲ್ಲವೆಂದರೆ ಕೆಡಕಾಗುತ್ತದೆ, ಮಳೆ ಬರುವುದಿಲ್ಲವೆಂಬ ನಂಬಿಕೆಯಿಂದ ಅನಿವಾರ್ಯವೆಂಬಂತೆ ಬೇಟೆಗೆ ಹೋಗುವರು.

ಅರಣ್ಯ ಇಲಾಖೆ ಹಲವು ಕಾನೂನುಗಳ ಮೂಲಕ ಬೇಟೆಯನ್ನು ರದ್ದು ಪಡಿಸಿದಾಗ ಬೇಟೆಗಾರಿಗೆ ದಿಕ್ಕು ತೋಚದಂತಾಯಿತು. ಕೊನೆಗೆ ವಿವಿಧ ವೃತ್ತಿಗಳಲ್ಲಿ ಮುಂದುವರೆದು ಗಣನೀಯ ಸಾಧನೆ ಮಾಡಿದರೂ, ಬೇಟೆಯು ಸಂಪ್ರದಾಯಿಕವಾಗಿದೆ. ಬೇಡರು ಹಂದಿಗೆ ವಿಶೇಷ ಸ್ಥಾನವನ್ನು ಕಲ್ಪಿಸಿದ್ದಾರೆ. ಇದರಂತೆ ಉಳಿದ ಪ್ರಾಣಿಗಳನ್ನು ಹೆಚ್ಚಾಗಿ ಕೊಲ್ಲುವುದಿಲ್ಲ. ಹಂದಿ ಸಮೃದ್ಧಿಯ ಸಂಕೇತ. ಕೊಂದರೆ ಊರಿಗೆ ಒಳ್ಳೆಯದೆಂದು, ಬೇಟೆಯಾಡಿ ತಂದು ಊರಲ್ಲಿ ಮೆರವಣಿಗೆ ಮಾಡಿ ಬುಡ್ಡೆಕಲ್ಲಿನ ಹತ್ತಿರ ಹೂಳುತ್ತಾರೆ. ಅದೇ ರೀತಿ ತೋಳವನ್ನು ಅಪ್ಪಿ-ತಪ್ಪಿ ಬೇಟೆಯಾಡಿದರೆ ಅದನ್ನು ಮನುಷ್ಯನಂತೆ ಶವಸಂಸ್ಕಾರ ಮಾಡಿ ಕುರಿ ಅಥವಾ ಮೇಕೆಯನ್ನು ೩ ದಿವಸದಲ್ಲಿ ಬಲಿ ಕೊಡುವ ನಿಯಮವಿದೆ.[೧೪] ಕರ್ನಾಟಕದ ಬೇಡರು ಬೇಟೆಯಲ್ಲಿ ಅಡವಿ ಕೋಳಿಯನ್ನು ಬೇಟೆಯಾಡಿದರೆ, ಊರುಕೋಳಿಗೆ ಜೀವದಾನ ಮಾಡುತ್ತಾರೆ. ಕಾರಣ ಅದು ನಮ್ಮನ್ನು ರಕ್ಷಿಸಿದ ಪ್ರಾಣಿ, ಭಕ್ಷಿಸಿದರೆ ಕುಲ ಕೆಡುತ್ತದೆಂದು ನಿರ್ಬಂಧ ವಿಧಿಸಲಾಗಿದೆ. ಗರ್ಭವಾದ ಮೊಲ, ಜಿಂಕೆಗಳನ್ನು, ಗೂಬೆ ಮೊದಲಾದ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿದರೆ ಕಷ್ಟ-ನಷ್ಟ ಪಡಬೇಕಾಗುತ್ತದೆಂಬ ನಂಬಿಕೆಯಿದೆ. ಹೀಗಾಗಿ ರಾಷ್ಟ್ರಪಕ್ಷಿ- ಪ್ರಾಣಿಗಳನ್ನು ಕೊಲ್ಲಬಾರದೆಂಬ ಸರ್ಕಾರದ ನಿಯಮಕ್ಕೆ ಒಳಪಡುವುದು ಉತ್ತಮ. ಈ ನೀತಿಯನ್ನು ಮೀರಿದರೆ ಶಿಕ್ಷೆಯಿಂದ ನರಳಬೇಕಾಗುತ್ತದೆ. ಹುಲಿ, ಸಿಂಹ, ನವಿಲು, ಗಂಡಭೇರುಂಡ ಮೊದಲಾದವುಗಳನ್ನು ಕೊಲ್ಲುವುದು ಅಪರಾಧ. ಹೀಗೆ ಸರ್ಕಾರದ ನೀತಿಗಳಿಗಿಂತಲೂ ಬೇಟೆಗಾರರಿಗೆ ಸಂಸ್ಕೃತಿಯ ಹಿನ್ನೆಲೆಯಲ್ಲಿ ನೀತಿ-ನಿರ್ಬಂಧಗಳು ಹೆಚ್ಚಾಗಿರುತ್ತವೆ.

ಇಂದಿನ ಬೇಟೆಗೆ ಪರಿಸರ ಸಂರಕ್ಷಣೆಯಿಂದಾಗಿ ಕಡಿವಾಣ ಬಿದ್ದರೂ, ಕಾನೂನು, ನಿಯಮಗಳು ಕಾಡಿನಲ್ಲಿರುವ ಬುಡಕಟ್ಟು ಜನರಿಗೆ ತಿಳಿದಿಲ್ಲ. ಹೀಗೆ ಎಷ್ಟೋ ಮಂದಿ ಅನಕ್ಷರಸ್ಥರು ಬೇಟೆಯನ್ನು ನೆನಪಿಸಿಕೊಳ್ಳುವರನ್ನು ಕಾಣಬಹುದು.

ಮಾನವ ಬೇಟೆಯಾಡಿದ ಪ್ರಾಣಿಗಳ ಪೈಕಿ ನಾಲಗೆಗೆ ಒಗ್ಗಿದ, ಹೊಟ್ಟೆಗೆ ಪಥ್ಯವೆನಿಸಿದ ಪ್ರಾಣಿಗಳ ಮಾಂಸ ಮಾತ್ರ ಆಹಾರಕ್ಕೆ ಯೋಗ್ಯವಾಗಿ ಮುಂದುವರಿದಿರಬಹುದು. ಕೆಲವೊಂದು ಸಂದರ್ಭಗಳಲ್ಲಿ ಪ್ರಾಣಿಗಳ ಮಾಂಸವನ್ನು ತಿನ್ನಲು ನಿಷಿದ್ಧವೆಂದು ಪರಿಗಣಿಸುವಲ್ಲಿ ಕೆಲವು ವ್ಯಕ್ತಿಗತ ಅಥವಾ ಸ್ಥಳೀಯ, ಸಾಂದರ್ಭಿಕ ಕಾರಣಗಳಿದ್ದಿರಬಹುದು; ಇಂತಹ ಅಲರ್ಜಿಯೇ ಮುಂದೆ ಸಾಂಪ್ರದಾಯಿಕವಾಗಿ ನಿಷಿದ್ಧತೆಯ ಮಟ್ಟವನ್ನು ಮುಟ್ಟಿರಬಹುದು ಎಂಬುದು ತಿಳಿದುಬರುತ್ತದೆ.[೧೫] ಮ್ಯಾಸಬೇಡರಲ್ಲಿ ಮೇಲಿನಂತೆ ಕಾಣಬಹುದು. ಕಾಡುಹಂದಿಯನ್ನು ಬೇಟೆಯಾಡುವುದು ನಿಯಮವಾದರೂ, ಬೇಟೆಯಾದಾಗ ಅದನ್ನು ತಿನ್ನುವುದಕ್ಕೆ ನಿರ್ಬಂಧವಿದೆ.

ಮೊದಲು ಬೇಟೆಯಾಡತಕ್ಕ ಬೇಟೆಗಾರನಿಗೆ ಯಾವ ಪ್ರಾಣಿಯನ್ನು ಕೊಲ್ಲಬೇಕು, ಯಾವುದನ್ನು ಕೊಲ್ಲಬಾರದೆನ್ನುವ ಅರಿವಿರಲಿಕ್ಕಿಲ್ಲ. ಏಕೆಂದರೆ ಅವನ ಉದ್ದೇಶ ಆಹಾರವನ್ನು ಪಡೆಯಲು ಸೀಮಿತವಾಗಿತ್ತು. ಬೇಟೆಯಲ್ಲಿ ಗಣನೀಯ ಸಾಧನೆ ತೋರುತ್ತಾ, ಆಹಾರದಲ್ಲಿ ಬದಲಾವಣೆ ಕಂಡುಕೊಂಡು ತಿನ್ನುವ ಪ್ರಾಣಿಗಳನ್ನು ಸಾಕತೊಡಗಿರಬೇಕು. ಹೀಗಾಗಿ ಪ್ರಾಣಿಗಳ ಬಗೆಗೆ ಪ್ರೀತಿ, ವಾತ್ಸಲ್ಯ, ಬೆಳೆದು ಕೊಲ್ಲುವ ಪ್ರಕ್ರಿಯೆಯನ್ನು ಕಡಿಮೆ ಮಾಡಿದ. ಇಷ್ಟಾದರೂ ಬೇಡರು ಕಟ್ಟಾ ಸಂಪ್ರದಾಯಗಳಿಂದ ಬೇಟೆಯನ್ನು ಆಡುವರು. 'ಇತ್ತೀಚೆಗೆ ಅರಣ್ಯ ಇಲಾಖೆಯವರು ವನ್ಯಮೃಗಗಳನ್ನು ಸಂರಕ್ಷಿಸುವ ಸಲುವಾಗಿ ಕಾಡುಪ್ರಾಣಿಗಳನ್ನು ಕೊಲ್ಲಕೂಡದೆಂದು ಕೆಲವು ನಿಯಮಗಳನ್ನು ಮಾಡಿರುವುದರಿಂದ ಈ ಜನರಿಗೆ ಬಟ್ಟು ಬದುಕಬೇಕಾದ ಸ್ಥಿತಿಯೊಂದು ಒದಗಿದೆ. ಹೀಗಾಗಿ ಆಚರಣೆ ರೂಪದ ಹೊಲಮೇರಿ ಬೇಟೆಯನ್ನು ಬೇಡರು ಈವರೆಗೆ ಉಳಿಸಿಕೊಂಡು ಬಂದಿದ್ದಾರೆ. ಒಂದು ವರ್ಷ ಮಾಡಲಿಲ್ಲ ಎಂದರೆ ನಿಯಮಬಾಹಿರವೆಂದು, (ಕೆಡಕೆಂದು) ಬಗೆದು ನಿರ್ಬಂಧ ಹೇರಿದರೂ ಬೇಟೆಗಾರರು ಈ ಬೇಟೆಗೆ ಮುಂದಾಗುವರು. ಈ ಬಗ್ಗೆ ಮುಂದಿನ (೭) ಅಧ್ಯಾಯದಲ್ಲಿ ತಿಳಿಸಲಾಗಿದೆ.

ಕೆಲವರು ಹಿಂಸೆ ಮಾಡುವುದನ್ನು ಪ್ರಾಚೀನ ಕಾಲದಿಂದಲೂ ವಿರೋಧಿಸುತ್ತಾ ಬಂದಿರುವುದನ್ನು ತಿಳಿದಿದ್ದೇವೆ. ಮಧ್ಯಕಾಲದಲ್ಲಿ ಅಷ್ಟೆ ಭ್ರಟಪರು ಬೇಟೆ ಬಗೆಗೆ ನಿಯಮ ರೂಪಿಸಿದರೂ, ಸ್ವತಃ ತಾವೇ ಬೇಟೆಗಾರರಾಗಿದ್ದರು. ಹೀಗಾಗಿ ಕಠಿಣವಾದ ಕಾಯ್ದೆ ಕಾನೂನುಗಳು ಬೇಟೆಯನ್ನು ತಡೆಗಟ್ಟುವಲ್ಲಿ ವಿಫಲವಾದವು. ಇಂದಿನ ಬೇಟೆ ಆಚರಣೆ, ಸಂಪ್ರದಾಯವಾಗಿದ್ದರೆ, ಹಿಂದಿನ ಕಾಲದಲ್ಲಿ ಮನೋರಂಜನೆ, ವಿನೋದವಾಗಿ ಪರಿಣಮಿಸಿತ್ತು. ಅರಸರು ತಾವೇ ನಿಂತು ಬೇಟೆಯಾಡಿ ಬೇಟೆಯ ನೀತಿ ನಿರ್ಬಂಧಗಳಿಗೊಳಗಾಗಿದ್ದರು.

ಕೆಲವು ಸಮುದಾಯಗಳಿಂದು ಆಧುನಿಕ ಜೀವನ ಶೈಲಿಗೆ ಮಾರು ಹೋಗಿರುವಂತೆ. ಬೇಡರು ಸಹಾ ಈ ಹಂತಕ್ಕೆ ಬರಲು ಹವಣಿಸುವುದು ಗಮನಾರ್ಹ. ಸಮಾಜದಲ್ಲಿ ಬೇಟೆಯಾಡಿದರೆ ಕೀಳಾಗಿ ಕಾಣುವರೆಂಬ ಜಜ್ಞಾಸೆ ಅವರಲ್ಲಿ ಒಡಮೂಡಿದೆ. ಆದರೂ ಕಟ್ಟು ಪಾಡುಗಳೊಂದಿಗೆ ಹುಲಿ ರಾಷ್ಟ್ರಪ್ರಾಣಿಯಾದರೂ ಶೌರ್ಯ, ಪರಾಕ್ರಮ ಮೆರೆಸಲು ಅದನ್ನು ಸಾಯಿಸಲು ಮುಂದಾಗುವರು. ಈ ವಂಶದ ಗಾದರಿಪಾಲನಾಯಕನೆಂಬ ವೀರ ಸು.೧೦ನೇ ಶತಮಾನದಲ್ಲಿ ಹುಲಿಯನ್ನು ಕೊಂದ ವಿವರವಿದೆ. ಬೇಡರು ಹಿರಿಯರ ಸಾಧನೆಯನ್ನು ಹೇಳಿಕೊಳ್ಳುತ್ತಾ ತಾವು ಬೇಟೆಯಾಡುವ ಸಂದರ್ಭಗಳಿವೆ. ಹೀಗೆ ಶೌರ್ಯ ಪ್ರದರ್ಶನಕ್ಕೆ ನೀತಿ, ನಿರ್ಬಂಧಗಳನ್ನು ಮೀರುವ ಸಂದರ್ಭಗಳಿರುತ್ತವೆ. ಗೋಹತ್ಯೆ ಮಾಡಿದರೆ ಇವರಲ್ಲಿ ಗೋಕರ್ಣಕ್ಕೆ ತೀರ್ಥಯಾತ್ರೆ ಹೋಗುವ ಪರಿಪಾಟವಿದೆ.

ಅನೇಕ ಸಂತತಿಗಳು ಕೆಲವು ಪ್ರಾಣಿ ಪಕ್ಷಿಗಳನ್ನು ಲಾಂಛನಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಹೊಯ್ಸಳರದು, ಹುಲಿಯನ್ನು ಕೊಲ್ಲುವುದು, ವಿಜಯನಗರದವರು ವರಾಹವನ್ನು ರಾಜ ಲಾಂಛನವಾಗಿ ಮಾಡಿಕೊಂಡಿದ್ದರು. ರಾಜಹಂಸ ಮೊದಲಾದ ಪ್ರಾಣಿ-ಪಕ್ಷಿಗಳು ಈ ಅರಸರಿಗೆ ಪ್ರಿಯವಾಗಿದ್ದವು.

ಬೇಟೆಯ ನೀತಿಯನ್ನು ಸಮಾಜದಲ್ಲಿ ರೂಪಿಸಿಕೊಂಡರೂ ಕಣ್ತಪ್ಪಿ ಬೇಟೆ ನಡೆದರೆ ಪದ್ಧತಿಯನ್ನು ವಿರೋಧಿಸಿದಂತಾಗುತ್ತದೆ. ಸಮಾಜದ ಎಲ್ಲ ವರ್ಗದವರು ಸಹಕಾರದಿಂದ ಬದುಕುವಂತೆ ಬೇಡರು ಬೇಟೆಯ ವೃತ್ತಿಯಲ್ಲಿ ತೊಡಗದೇ ಕೇವಲ ಆಚರಣೆಯಲ್ಲಿ ಮಾತ್ರ ಮೀಸಲಿರುವಂತೆ ನಡೆದುಕೊಂಡಿದ್ದಾರೆ. ಹೀಗಾಗಿ ಬೇಟೆ ಕೇವಲ ಆಚರಣೆಗಷ್ಟೆ ಸೀಮಿತವಾಗಿದೆ.

ಸರ್ಕಾರ ಬೇಟೆಯನ್ನು ನಿಷೇಧಿಸಿದ್ದರಿಂದ, ಆಚರಣೆಯಲ್ಲಿ ಬೇಟೆ ಉಳಿದು ಬಂದಿದೆ. ಬೇಡರು ಬೇಟೆಯಾಡಿದ ಪ್ರಾಣಿಗಳನ್ನು ಸಾಕುವುದರಿಂದ ಪರಸ್ಪರ ಹೊಂದಾಣಿಕೆಯ ಕಾಲನಿರ್ಮಾಣವಾಗಿದೆ. ಕೋಳಿ, ಕುರಿ, ಆಡು, ಎಮ್ಮೆ, ಆಕಳು, ಮೊದಲಾದ ಸಾಕುಪ್ರಾಣಿಗಳಿಂದ ನೆಮ್ಮದಿ ಜೀವನಕ್ಕೆ ಮುಂದಾಗಿದ್ದಾರೆ. ಉಗ್ರ ಪ್ರಾಣಿಗಳ ಬಗೆಗೆ ನಿರ್ಬಂಧವಿದ್ದರೂ ಪ್ರಾಣಕ್ಕೆ ಧಕ್ಕೆ ಬಂದಾಗ ಕೊಲ್ಲುವ ನಿರ್ಧಾರ ಮಾಡುತ್ತಾರೆ. ಎಲ್ಲವನ್ನು ಸೇವಿಸಿ ತನ್ನ ಬುದ್ಧಿಶಕ್ತಿಯಿಂದ ಬೇಟೆಗಾರ ಕೆಲವು ಪ್ರಾಣಿಗಳ ಮಾಂಸವನ್ನು ತಿರಸ್ಕರಿಸಿದ್ದು ಗಮನಾರ್ಹ. ಮೀನಿನ ಬಗೆಗೆ ಯಾವ ನಿರ್ಬಂಧವು ಇಲ್ಲ. ಉಳಿದಂತೆ ಹುಲಿ, ಸಿಂಹ, ಜಂಕೆ, ಇತರ ಅಪೂರ್ವ ಪ್ರಾಣಿ, ಪಕ್ಷಿಗಳ ಬಗೆಗೆ ನಿರ್ಬಂಧಗಳಿವೆ.

೬.೩. ಪರಂಪರೆಯ ಪರಿವರ್ತನೆ(ಸಾಮಾಜಿಕ ಸ್ಥಿತ್ಯಂತರ)

ತಲೆಮಾರಿನಿಂದ ತಲೆಮಾರಿಗೆ ಪಾರಂಪರಿಕವಾಗಿ ಬೆಳೆದುಬಂದ ಸಾಂಸ್ಕೃತಿಕ ಅಂಶಗಳಾದ ನಂಬಿಕೆ, ರೂಢಿ, ಪದ್ಧತಿ, ಸಂಪ್ರದಾಯಗಳನ್ನು ಜನರು ಗೌರವಿಸುವುದರ ಜೊತೆಗೆ ಆರಾಧಿಸುತ್ತಾರೆ. ಹಾಗೂ ಇದರೊಂದಿಗೆ ತಾದಾತ್ಮ್ಯ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ನೂತನ ವಿಧಾನಗಳನ್ನು ಹಂತ ಹಂತವಾಗಿ ಜೀವನ ವಿಧಾನಗಳಲ್ಲಿ ಅನುಸರಿಸಿದರೂ ಪಾರಂಪರಿಕ ಮೂಲ ಕಸುಬುಗಳನ್ನು ಬಿಟ್ಟು ಕೊಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ವಿವಿಧ ಸ್ವರೂಪದಲ್ಲಾದ 'ಪರಿವರ್ತನೆ' ಎನ್ನುವುದನ್ನು ನೋಡಬಹುದು. ಯಾವುದೇ ಸಮಾಜವು ಕಾಲ ಪ್ರವಾಹದ ಜೊತೆ ಹರಿದು ಬಂದಾಗ ಅದರ ಬದಲಾವಣೆ ಸಹಜ. ಈ ಸಮಾಜ ಬದಲಾವಣೆಯೇ ಪರಿವರ್ತನೆ ಹಾದಿಯಲ್ಲಿರುವುದನ್ನು ಸಮಾಜಶಾಸ್ತ್ರಜ್ಞರು ಈ ರೀತಿ ಗುರುತಿಸುತ್ತಾರೆ:

೧. **ಎಂ.ಇ.ಜೋನ್ಸ್** ಅವರು ಸಾಮಾಜಿಕ ಪ್ರಕ್ರಿಯೆ, ಸಾಮಾಜಿಕ ಮಾದರಿ, ಸಾಮಾಜಿಕ ಅಂತಃಕ್ರಿಯೆ ಹಾಗೂ ಸಾಮಾಜಿಕ ಸಂಘಟನೆ ಇತ್ಯಾದಿಗಳಲ್ಲಿ ಯಾವುದೇ ರೀತಿಯಲ್ಲಿ ಆಗುವ ಪರಿವರ್ತನೆ ಅಥವಾ ಮಾರ್ಪಾಟುಗಳನ್ನು ವಿವರಿಸಲು ಸಾಮಾಜಿಕ ಪರಿವರ್ತನೆ ಎಂದು ಹೇಳುತ್ತಾರೆ.

೨. **ಸ್ಯಾಮುಯಲ್ ಕೊಯನಿಗ್** ಅವರು ಜನರ ಜೀವನದ ಮಾದರಿಗಳಲ್ಲಿ ಉಂಟಾಗುವ ಬದಲಾವಣೆಗಳಿಗೆ ಸಾಮಾಜಿಕ ಪರಿವರ್ತನೆ ಎಂದಿದ್ದಾರೆ.

೩. **ಕಿಂಗ್ಸ್‌ಲೇ ಡೇವಿಸ್** ಅವರ ಪ್ರಕಾರ ಸಾಮಾಜಿಕ ರಚನೆ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಆಗುವ ಬದಲಾವಣೆಗಳನ್ನು ಸಾಮಾಜಿಕ ಪರಿವರ್ತನೆ ಎನ್ನುತ್ತಾರೆ.

೪. **ಮೈಕೆವರ್ ಮತ್ತು ಪೇಜ್‌ರು** ಸಾಮಾಜಿಕ ಸಂಬಂಧಗಳಲ್ಲಿ ಆಗುವ ಪರಿವರ್ತನೆಗಳನ್ನು ಸಾಮಾಜಿಕ ಪರಿವರ್ತನೆ ಎಂದು ಹೇಳುತ್ತಾರೆ.

೫. **ಎಚ್.ಟಿ.ಮಜುಂದಾರ್** ಅವರು ಜನರು ಜೀವನದಲ್ಲಿ ಅಥವಾ ಸಮಾಜದ ಕ್ರಿಯೆಯಲ್ಲಿ ಹಳೆಯದರ ಬದಲಾಗಿ ಹೊಸದನ್ನು ಅಳವಡಿಸುವಂತಹ ವಿನೂತನವಾದ ಶೋಭಾಚಾರ ಅಥವಾ ಪದ್ಧತಿಗೆ 'ಸಾಮಾಜಿಕ ಪರಿವರ್ತನೆ' ಎನ್ನುತ್ತಾರೆ. ಹೀಗೆ ಸಮಾಜದ ಬದಲಾವಣೆಯೇ ಪರಂಪರೆಯ ಬದಲಾವಣೆಯಾಗಿ ಮಾರ್ಪಟ್ಟಿವೆ. ಅದರಲ್ಲಿ ಬೇಡರ ಸಾಮಾಜಿಕ ಜೀವನವೂ ಕೂಡ ಹೊರತಾಗಿಲ್ಲ.

ಸಮಾಜ ಪರಿವರ್ತನೆಯ ಪ್ರವಾಹಕ್ಕೆ ಮಾನವನ ಆಸೆ-ಆಕಾಂಕ್ಷೆಗಳು ಒಗ್ಗಬಹುದು ಇಲ್ಲವೆ ಪೂರಕವಾಗಿರಬಹುದು. ಆದಿಕಾಲದ ಜನಜೀವನ, ಆಚಾರ, ವಿಚಾರ ಚಿತ್ರಣ ಸ್ಪಷ್ಟವಾಗಿ ಕಂಡುಬರುವುದಿಲ್ಲ. ಎಂದ ಮೇಲೆ ಆಧುನಿಕ ಸಮಾಜಗಳ ಜೊತೆಗೆ ಯಾವುದೇ ತರಹದ ಸಂಬಂಧ ಬೆಳೆಸಿಲ್ಲದ ಬುಡಕಟ್ಟುಗಳ ಸ್ಥಿತಿ ಹಳೆಯ ಸಂಪ್ರದಾಯಗಳಿಗೆ ಹೊಂದಿಕೊಳ್ಳದೆ, ನೂತನ ಆವಿಷ್ಕಾರಗಳಿಗೆ ಬಲಿಯಾಗದೇ ಅತಂತ್ರ ಸ್ಥಿತಿಯಲ್ಲಿದ್ದಾರೆ. ಭೂಮಿಯ ಮೇಲೆ ವಾಸಿಸುವ ಪ್ರತಿಯೊಂದು ಪ್ರಾಣಿ ಸಂಕುಲದಲ್ಲಿ ಸಾಮಾಜಿಕ ಬದಲಾವಣೆ ಆಗುತ್ತದೆ. ಈ ಬದಲಾವಣೆ ಹೆಚ್ಚಾಗಿ ಆರ್ಥಿಕತೆಯನ್ನು ಪ್ರತಿನಿಧಿಸಿದೆ. ಮಾರ್ಕ್ಸ್‌ನು 'ಮಾನವ ಸಮಾಜವು ವಿವಿಧ ಹಂತಗಳ ಮೂಲಕ ಸಾಗುತ್ತದೆ. ಪ್ರತಿಯೊಂದು ಹೊಸ ಹಂತವು ಸಾಮಾಜಿಕ

ವ್ಯವಸ್ಥೆಯನ್ನು ವ್ಯವಸ್ಥಿತಗೊಳಿಸಿ ಭದ್ರವಾಗಿಸುತ್ತದೆ. ಸಮಾಜವು ಒಂದು ಹಂತದಿಂದ ಇನ್ನೊಂದು ಹಂತದೆಡೆಗೆ ಸಾಗಿಸುವಾಗ, ಮೊದಲಿನ ಸ್ಥಿತಿಯೊಡನೆ ಮುಂಬರುವ ಸ್ಥಿತಿಗಾಗಿ ಸೆಣಸಾಡಬೇಕಾದುದು ಅನಿವಾರ್ಯವೆಂದು ಹೇಳಿದ್ದಾನೆ.[೧೬] ಒಟ್ಟಾರೆಯಾಗಿ ಇದ್ದ ಸ್ಥಿತಿಯಿಂದ ಇಲ್ಲದ ಸ್ಥಿತಿಗೆ ಇಲ್ಲದ ಸ್ಥಿತಿಯಿಂದ ಇದ್ದ ಸ್ಥಿತಿಗೆ ಹಾತೊರೆಯುವುದು ಒಂದು ಪರಂಪರೆಯ ಸಾಮಾಜಿಕ ಪರಿವರ್ತನೆಯಾಗಿದೆ ಎನ್ನಬಹುದು.

ಅನಾದಿಕಾಲದಿಂದ ಭೂ ಮೇಲ್ಮೈ ಲಕ್ಷಣದಲ್ಲಿ ಬದಲಾದಂತೆ ಮಾನವ ಸಮಾಜವು ಪರಿವರ್ತನೆಗೊಳ್ಳುತ್ತದೆ. ದೇಶ, ಧರ್ಮ, ಭಾಷೆ, ಸಿದ್ಧಾಂತಗಳನ್ನು ಜನರು ಅನುಸರಿಸುತ್ತಿರುವಲ್ಲಿ ಕಾಲ, ದೇಶ ಧರ್ಮಗಳ ಬಂಧನವಿಲ್ಲ. ಆದಿವಾಸಿಗಳಲ್ಲಿ ಇದು ಗಮನಾರ್ಹ. ವ್ಯಕ್ತಿ ಮತ್ತು ಸಮುದಾಯದಲ್ಲಾದ ಬದಲಾವಣೆ ಸಮಾಜ ಪರಿವರ್ತನೆಯಾಗುತ್ತದೆ. ಸಾಮಾಜಿಕ ಬದಲಾವಣೆ ನಿರಂತರವಾದದು. ಬದಲಾದ ಗತಿ ಮತ್ತು ರೂಪ ಒಂದೇ ಆಗಿರುವುದಿಲ್ಲ. ಇದು ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಕ್ಷೇತ್ರಗಳಿಗೆ ವ್ಯಾಪಿಸುತ್ತದೆ. ಪರಿವರ್ತನೆಯ ಪರಿಣಾಮಗಳೇನೆಂಬುದು ತಿಳಿಯುವುದು ಕಷ್ಟ. ಜೈವಿಕ, ಭೌತಿಕ, ತಾಂತ್ರಿಕ ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಇತರೆ ಅಂಶಗಳು ಪ್ರಮುಖವಾಗಿವೆ.

ಇಂದು ಬುಡಕಟ್ಟುಗಳು ಕೃಷಿಯಲ್ಲಿ ಬದಲಾವಣೆಯಾಗಿವೆ. ಪಂಪ್‌ಸೆಟ್ಟುಗಳು, ನೀರಾವರಿ ಯೋಜನೆ, ತುಂತುರು ನೀರಾವರಿ ಯೋಜನೆ ಹಾಗೂ ರಾಸಾಯನಿಕ ಗೊಬ್ಬರಗಳಿಂದ ಅವನ ಆಶೋತ್ತರಗಳು ಹೆಚ್ಚಾದವು. ಗ್ರಾಮದಲ್ಲಿ ಶಿಕ್ಷಣ, ರೀತಿ-ನೀತಿ, ಸಂಪ್ರದಾಯಗಳಿಂದ ವಿಶೇಷ ಬದಲಾವಣೆ ಕಂಡುಬಂತು. ಜೈವಿಕವಾಗಿ ಹುಟ್ಟು, ವಿವಾಹ, ಲೈಂಗಿಕ, ಧಾರ್ಮಿಕ ರೀತಿ-ನೀತಿಗಳು ಕಾರಣವಾಗಿವೆ. ಜನಸಂಖ್ಯೆ ಹೆಚ್ಚಳದಿಂದ ವಲಸೆ, ಆಕ್ರಮಣ, ಯುದ್ಧ, ರೋಗ, ಆಹಾರ, ಸಮಸ್ಯೆಗಳುಂಟಾಗಿ ಸಮಾಜ ಬದಲಾವಣೆಯಾಗುತ್ತದೆ. ಹೀಗೆ ಪರಿವರ್ತನೆಗೊಂಡರೆ ಸಾಂಸ್ಕೃತಿಕ ಹಿನ್ನೆಡೆಗೆ ಕಾರಣವಾಗಬಹುದು.

ಮೇಲಿನಂತೆ ಭಾರತದ ಬುಡಕಟ್ಟುಗಳು ಇಂದು ಸದಾ ಪರಿವರ್ತನೆಗೊಳ್ಳುತ್ತಲಿವೆ. ಅವುಗಳನ್ನು ಧೀರೇಂದ್ರ ಮಜುಂದಾರ್ ಅವರು ೩ ಹಂತಗಳಾಗಿ ಗುರುತಿಸುತ್ತಾರೆ : ೧. ಜಾತಿಗಳಾಗಿ ಸಂಪೂರ್ಣ ಪರಿವರ್ತಿತವಾಗಿರುವ ಬುಡಕಟ್ಟುಗಳು ೨. ಹಿಂದೂಗಳೊಡನೆ ಭಾಗವಹಿಸಿಯೂ ತಮ್ಮ ಸಂಪ್ರದಾಯಗಳನ್ನು, ನಂಬಿಕೆಗಳನ್ನು ಉಳಿಸಿಕೊಂಡಿರುವ ಬುಡಕಟ್ಟುಗಳು ೩. ಹಿಂದೂಧರ್ಮದ ಪ್ರಭಾವಕ್ಕೆ ಒಳಗಾಗದೆ, ಆ ಧರ್ಮದ ದಬ್ಬಾಳಿಕೆಯನ್ನು ಸಹಿಸದೆ ತಮ್ಮ ಸ್ವಾಂತ್ರ್ಯಕ್ಕಾಗಿ ಹೋರಾಡುತ್ತಿರುವ ಬುಡಕಟ್ಟುಗಳು.[೧೭] ಬೇಡರಲ್ಲಿ ಮಿಶ್ರ ಲಕ್ಷಣಗಳಿದ್ದರೂ ಮೇಲಿನ ಎರಡನೇ ಲಕ್ಷಣಕ್ಕೆ ಹೊಂದಿಕೊಳ್ಳುತ್ತಾರೆ.

ಪರಂಪರೆ ಅಥವಾ ಸಮಾಜವನ್ನು ಏಕಮುಖವಾಗಿ ನೋಡುವುದೇ ಹೆಚ್ಚು. ಇಲ್ಲಿ ಸಾಮಾಜಿಕ ಪರಿವರ್ತನೆಯೆಂದರೆ ಬುಡಕಟ್ಟು ಸಮುದಾಯಗಳಲ್ಲಿ ತಲೆಮಾರುಗಳಿಂದ ಬೇರೂರಿ ಬಂದಿದ್ದ ರೂಢಿ, ಸಂಪ್ರದಾಯ, ಸಂಸ್ಕೃತಿಗಳಲ್ಲಿರುವ ಆಮೂಲಾಗ್ರ ಪರಿವರ್ತನೆ ಎನ್ನಬಹುದು. ಇಡೀ ಸಮಾಜದ ಬೇರುಗಳನ್ನು ಅಲುಗಾಡಿಸುವ ಕವಲುಗಳು ಹಲವು. ಒಂದು ಜಾತಿ, ಸಮುದಾಯ, ಬುಡಕಟ್ಟುಗಳಲ್ಲಿ, ಬೇಡ ಸಮುದಾಯವು ರಾಜಕೀಯ, ಆರ್ಥಿಕ, ಸಾಮಾಜಿಕ ಪರಿವರ್ತನೆಗಳ ಮೂಲಕ ಆಧುನಿಕ ಬದುಕಿಗೆ ತೀವ್ರತರವಾಗಿ ಪರಿವರ್ತನೆಗೆ ನಾಂದಿಹಾಡಿದೆ. ಬೇಡರ ಸಾಮಾಜಿಕ ಬದಲಾವಣೆ, ವಂಶಪರಂಪರೆಯಾಗಿಯೂ ಪರಿವರ್ತನೆ ಆಗುವುದು ಸ್ಪಷ್ಟ.

ಕರ್ನಾಟಕದಲ್ಲಿ ಸುಮಾರು ೬೫ ಲಕ್ಷಕ್ಕೂ ಹೆಚ್ಚಿರುವ ಬೇಡರು (ನಾಯಕರು) ವಿವಿಧ ರೀತಿಯ ವೃತ್ತಿಗಳಲ್ಲಿ

ತೊಡಗಿದ್ದಾರೆ. ಅವುಗಳಲ್ಲಿ ಬೇಟೆ, ಪಶುಪಾಲನೆ ಕಡಿಮೆಯಾಗಿ ಕೃಷಿ, ವ್ಯಾಪಾರ, ಕೂಲಿ, ಮೊದಲಾದ ವೃತ್ತಿಗಳು ಪ್ರಚಲಿತದಲ್ಲಿವೆ. ಬಳ್ಳಾರಿ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿರುವ ಚಳ್ಳಕರೆ, ಜಗಳೂರು, ದಾವಣಗೆರೆ, ಮೊಳಕಾಲ್ಮೂರು ಮತ್ತು ಕೂಡ್ಲಿಗಿ ತಾಲ್ಲೂಕುಗಳಲ್ಲಿ ಅತೀ ಹೆಚ್ಚಿನ ಪರಿವರ್ತನೆ ಕಂಡುಬರುತ್ತದೆ. ಮತ್ತು ಈ ಭಾಗದ ಹಳ್ಳಿ, ಗ್ರಾಮ, ಪಟ್ಟಣಗಳಲ್ಲಿ ಮ್ಯಾಸಬೇಡರೇ ಅಧಿಕ ಸಂಖ್ಯೆಯಲ್ಲಿರುವುದು ವಿಶೇಷ.[೧೮] ಈ ಬೇಡರು ಬೇಟೆಯಾಡುವುದನ್ನು ತೊರೆದು, ಕೃಷಿಯಲ್ಲಿ ತೊಡಗಿದ್ದಾರೆ. ಕೃಷಿಯಲ್ಲಿ ಹಳೇಕಾಲದ ಧಾನ್ಯಗಳನ್ನು ಮತ್ತು ಆಧುನಿಕ ವಾಣಿಜ್ಯ ಬೆಳೆಗಳನ್ನು ಬೆಳೆಯುವರು. ಬಾವಿ ತೋಡಿ ನೀರಾವರಿ ವ್ಯವಸಾಯ ಮಾಡುವುದು ಪ್ರಚಲಿತದಲ್ಲಿದೆ. ಇವರಲ್ಲಿ ಇಂದಿಗೂ ವಸತಿ, ನೀರು, ಆಹಾರದ ಸಮಸ್ಯೆ ಜೀವಂತವಾಗಿದೆ.

ಜಗಳೂರು ತಾಲ್ಲೂಕಿನ ಕೆಲವು ಬೇಡರ ಹಟ್ಟಿಗಳಲ್ಲಿ ಬಸ್ಸು ಇಂದಿಗೂ ಹೋಗುವುದಿಲ್ಲ. ವಿದ್ಯುತ್ ದೀಪ ಇಲ್ಲ, ಎತ್ತಿನಗಾಡಿ, ಸೈಕಲ್ಲಿನ ಮೂಲಕ ಪ್ರಯಾಣ ಸಾಗಿಸುತ್ತಾರೆ. ಗುಡ್ಡದಲಿಂಗನಹಳ್ಳಿ, ದೇವಿಕೆರೆ, ಅಸಗೋಡು, ಬಳಿಚೊಡು, ಬದರಕೆರೆ, ತೋರಣಗಟ್ಟ, ಚಿಕ್ಕಮಲ್ಲನಹೊಳೆ ಮತ್ತು ಕೂಡ್ಲಿಗಿ ತಾಲ್ಲೂಕಿನ ಕುರಿಹಟ್ಟಿ, ಕರ್ನಾರಹಟ್ಟಿ, ಹುರುಳಿಹಾಳು, ಕುಮತಿ, ಕಾತ್ರಿಕೆಹಟ್ಟಿ, ಜುಮ್ಮೋಬನಹಳ್ಳಿ, ಗುಡೇಕೋಟೆ, ಮೊದಲಾದ ಗ್ರಾಮಗಳಲ್ಲಿ ಬೇಡರೇ ಹೆಚ್ಚಾಗಿ ವಾಸಿಸುತ್ತಿದ್ದು, ಬರಗಾಲ ಬಂದಾಗ ಮಲೆನಾಡಿನ ಸೀಮೆಗೆ ಕೂಲಿ ಮಾಡಲು ವಲಸೆ ಹೋಗುತ್ತಾರೆ. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ ಗ್ರಾಮಗಳಲ್ಲಿರುವ ಬೇಡರು ಬಡತನದ ಬವಣೆಯಿಂದ ತತ್ತರಿಸಿ ಹೋಗಿದ್ದರು. ಹೀಗಾಗಿ ಕೊಲೆ, ಸುಲಿಗೆ, ದರೋಡೆ, ಹತ್ಯೆ, ಮುಂತಾದವುಗಳನ್ನು ಇತ್ತೀಚಿನವರೆಗೂ ಮೈಗೂಡಿಸಿ ಕೊಂಡಿದ್ದರು. ಅವರಿಂದು ಮೊದಲಿನ ವೃತ್ತಿಗಳನ್ನು ತೊರೆದು ಕೃಷಿಯಲ್ಲಿ ಮಗ್ನರಾಗಿದ್ದಾರೆ. ಬೀದರ್, ಗುಲ್ಬರ್ಗಾ, ರಾಯಚೂರು, ಬಿಜಾಪುರ, ಬಾಗಲಕೋಟೆ, ಗದಗ, ಧಾರವಾಡ, ಜಿಲ್ಲೆಗಳಲ್ಲಿ ಇಂದಿಗೂ ಕೆಲವು ಕಡೆ ಬೇಡರ ಸುಧಾರಣೆ ಹೇಳಿಕೊಳ್ಳುವಂತಿಲ್ಲ.[೧೯] ೧೯೪೧ರಲ್ಲಿ ಬಾಂಬೆ ಕರ್ನಾಟಕದ ಬೇಡರ ಜನಸಂಖ್ಯೆ ೧,೫೧,೨೫೮ ಪುರುಷರು, ೧,೪೨,೫೩೦ ಮಹಿಳೆಯರಿದ್ದರು. ೧೯೫೧ರಲ್ಲಿ ೪,೯೨,೭೦೪ರಷ್ಟು ಈ ಜನಸಂಖ್ಯೆ ದ್ವಿಗುಣಗೊಂಡಿತು.

ಬೇಡರು ಬೇಟೆಯಿಂದ ದೂರವಾಗಿ ಕೃಷಿಯನ್ನವಲಂಬಿಸಿದರು. ಕಾಡುಕಡಿದು ಕೃಷಿ ಭೂಮಿಯಾಗಿ ಮಾಡಿಕೊಂಡಾಗ ನಾನಾ ಪರಿಣಾಮಗಳಾಗಿರಬೇಕು. ಇಂಥ ಸಮುದಾಯ ಮತ್ತು ಸರ್ಕಾರದ ನಡುವೆ ಭೂವಿವಾದಗಳು ಸಹಾ ಇವೆ. ಬ್ರಿಟೀಷರ ಕಾಲದಲ್ಲಿ ಅರಣ್ಯದಲ್ಲೇನಾದರೂ ಇರುವ ಮರ ಮುಟ್ಟುಗಳನ್ನು ಮನೆಯ ಉಪಯೋಗಕ್ಕೆಂದು ಕಡಿಯಬೇಕಾದರೆ ತಹಶೀಲ್ದಾರರಿಂದ ಶಿಫಾರಸ್ಸು ಪತ್ರ ಬರೆಸಿಕೊಂಡು, ಫಾರೆಸ್ಟ್ ಆಫೀಸರನ್ನು ಕಂಡು ಮನೆಗೆ ಬೇಕಾದ ಮರ ಕತ್ತರಿಸಿಕೊಳ್ಳಬೇಕಾಗಿತ್ತೆಂದು ಹಳ್ಳಿಯವರು ತಿಳಿಸುತ್ತಾರೆ ಎಂಬ ಮಾತು ವಾಸ್ತವಿಕವಾದುದು.[೨೦] ಸರ್ಕಾರದ ನಿಯಂತ್ರಣಕ್ಕೊಳಪಟ್ಟ ಅರಣ್ಯದಲ್ಲಿ ಮೇಲಾಧಿಕಾರಿ ಅನುಮತಿ ಕೊಟ್ಟ ಎರಡು ದಿನಗಳಲ್ಲಿ ಅರಣ್ಯದೊಳಗೆ ಮನೆಕಟ್ಟಲು ಮರ ಹುಡುಕಿ ಕಡಿದುಕೊಳ್ಳಬೇಕಾಗುತ್ತದೆ. ಇದು ಅಧಿಕಾರಿ ಮತ್ತು ಫಲಾನುಭವಿಯ ನಡುವೆ ಏರ್ಪಟ್ಟ ಒಪ್ಪಂದದಂತಿರುತ್ತದೆ.

ವ್ಯವಸಾಯದ ಜೊತೆಗೆ ಪಶುಪಾಲನೆಯಲ್ಲಿಯ ಬೇಡರು ಆರ್ಥಿಕವಾಗಿ ಮುನ್ನಡೆ ಸಾಧಿಸಿದ್ದಾರೆ. ಉತ್ತಮ ಬೆಳೆಗಳಿಂದ ಲಾಭ ಬರುವಂತೆ, ಹಾಲೂ-ತುಪ್ಪದಿಂದಲೂ ನೆಮ್ಮದಿ ಜೀವನ ನಡೆಸುವವರಾಗಿದ್ದಾರೆ. ಈ ಬೇಡರ ಮಕ್ಕಳು ತಂದೆ-ತಾಯಿಗಳ ಅಲಕ್ಷ್ಯದಿಂದ ಮತ್ತು ದುಡಿದು ತಿನ್ನುವ ಮನೋಭಾವದಿಂದ ಶಾಲೆಗೆ ಹೋಗದೆ ಕೂಲಿ, ಕೃಷಿ ಮಾಡುವುದು ಅಥವಾ ದನ ಕಾಯುವುದೇ ಹೆಚ್ಚು. ಹೆಂಗಸರು ಮನೆಯಲ್ಲಿ ಅಡಿಗೆಯೊಂದೇ ಅಲ್ಲದೇ ಹೊಲದ

ಕೆಲಸದಲ್ಲಿ ಭಾಗಿಯಾಗಿರುತ್ತಾರೆ. ಕುರಿ, ಆಡುಗಳನ್ನು ಮಾಂಸಾಹಾರಕ್ಕೆ ಹೋಟೆಲಿಗೆ ಮಾರಾಟ ಮಾಡಿ ಹೆಚ್ಚಿನ ಲಾಭ ಪಡೆಯುತ್ತಾರೆ. ಸತ್ತ ಕುರಿ, ಮೇಕೆಗಳನ್ನು ಕೊಯ್ದು ಪಾಲು ಮಾಡಿ ಎಲ್ಲರಿಗೂ ಹಂಚುತ್ತಾರೆ. ಹರಿಹರ, ದಾವಣಗೆರೆಯ ಭಾಗದ ಹೆಚ್ಚಿನ ಶ್ರೀಮಂತರ ತೋಟಗಳಲ್ಲಿ ಇಂದು ಬೇಡರು ಹೆಚ್ಚಾಗಿ ಕೂಲಿ ಕಾರ್ಮಿಕರಾಗಿದ್ದಾರೆ. ಅಲ್ಲದೆ ಕೆಲವರು ಸ್ವತಃ ಗದ್ದೆಗಳನ್ನು ಹೊಂದಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮುರು ಮತ್ತು ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕುಗಳಲ್ಲದೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಬೇಡರ ಸ್ಥಿತಿ ಶೋಚನೀಯವಾಗಿದೆ. ಇವರಿಗೆ ತೋಟ, ನೀರಾವರಿ ಇತರ ಸೌಲಭ್ಯಗಳ ಕೊರತೆಯೂ ಕಾಡುತ್ತಿದೆ.

ಗ್ರಾಮ ಪರಿವರ್ತನೆ

ಇಂದು 'ಹಟ್ಟಿ'(Hamlet)ಗಳಲ್ಲಿರುವ ಬೇಡರು ಅಧಿಕಾರಕ್ಕಾಗಿ ಹಾತೊರೆಯುತ್ತಿದ್ದಾರೆ. ಆಮೂಲಕ ನೀರಿನ ಪೂರೈಕೆ, ರಸ್ತೆಗಳಿಲ್ಲದೆ ಕತ್ತಲಲ್ಲಿ ಬದುಕುವ ಸ್ಥಿತಿ ಹೇಳಿಕೊಳ್ಳುತ್ತಾರೆ. ಸರ್ಕಾರದ ಭಾಗ್ಯಜ್ಯೋತಿ, ಗಂಗಾಕಲ್ಯಾಣ, ಆಶ್ರಯ ಯೋಜನೆಗಳ ಫಲ ಪಡೆಯುತ್ತಿದ್ದಾರೆ. ಇವರು ವಾಣಿಜ್ಯ ಬೆಳೆ ಮತ್ತು ಆಹಾರ ಧ್ಯಾನಗಳನ್ನು ಬೆಳೆಯುವುದು ಸಾಮಾನ್ಯವಾಗಿದೆ. ಗ್ರಾಮದಲ್ಲಿ ೧೦ ಕುಟುಂಬಗಳು ಬದಲಾದರೆ ಅದನ್ನು ನೋಡಿ ಮತ್ತೆರೆಡು ಕುಟುಂಬಗಳು ಪರಿವರ್ತನೆಗೆ ಸನ್ನದ್ಧವಾಗುತ್ತಿವೆ. ಗ್ರಾಮಗಳಲ್ಲಿ 'ವ್ಯವಸಾಯದ ಜತೆಗೆ ಪಶುಪಾಲನೆ ಮತ್ತು ತಮ್ಮ ಪ್ರಾಚೀನ ವೃತ್ತಿಯಾದ ಬೇಟೆಯೂ ಆಗಾಗ ಹಬ್ಬ ಹರಿದಿನದ ಇನೇ ದಿನಗಳಲ್ಲಿ ನಡೆಯುತ್ತಿತ್ತು'. ಹೀಗೆ ಆರ್ಥಿಕ ಸದೃಢತೆಯಿಂದ 'ಹಟ್ಟಿ' ಗ್ರಾಮವಾಗಿ ಪರಿವರ್ತನೆಗೊಂಡು, ಪಂಚಾಯ್ತಿಗಳಾಗಿವೆ. ನಾಗರಿಕತೆಯ ಬಿರುಗಾಳಿ ಎಲ್ಲೆಲ್ಲೂ ತಟ್ಟಿದೆ. ಈ ಹಿನ್ನಲೆಯಲ್ಲಿ ಬೇಡರು ರಾಜಕೀಯ ಪ್ರವೇಶ ಮಾಡಿದ್ದು ಸಾಹಸವೇ ಸರಿ.

ಪ್ರಾಚೀನ ವೃತ್ತಿ

ಆದಿಕಾಲದ ಮಾನವ ಆಹಾರಸಂಗ್ರಹಣೆಯಲ್ಲಿ ಬದಲಾವಣೆ ಕಂಡುಕೊಂಡಾಗಲೇ ಒಂದು ಬೇಟೆ ವೃತ್ತಿಯನ್ನು ಅವಲಂಬಿಸುತ್ತಾನೆ. ತರುವಾಯ ಕಾಡುಗಳ ನಾಶದಿಂದ ಕಾಲಕ್ರಮೇಣ ರೂಢಿಸಿಕೊಂಡು ಬಂದಿದ್ದ ಬೇಟೆಗೆ ಹೋಗುವುದು ನಿಂತಿದೆ. ಸಾಂಕೇತಿಕವಾಗಿ ಯುಗಾದಿ ಹಬ್ಬದಲ್ಲಿ ಹಂದಿ ಬೇಟೆಗೆ ಹೋಗುತ್ತಾರೆ. ಈ ಹಂದಿಬೇಟೆ ಯಾಡಿದರೆ ಸಮೃದ್ಧಿಲಭಿಸುವುದೆಂಬ ನಂಬಿಕೆಯಿದೆ. ಇಂದು ಈ ಬೇಡರಲ್ಲಿ ಬೇಟೆ, ಪಶುಪಾಲನೆ, ವ್ಯವಸಾಯ, ಮೂರು ವೃತ್ತಿಗಳಲ್ಲಿ ಬದಲಾವಣೆಗಳು ಕಂಡುಬರುತ್ತವೆ. ವ್ಯವಸಾಯ, ಪಶುಪಾಲನೆ ಪ್ರಬಲವಾದ ಆರ್ಥಿಕ ವೃತ್ತಿಗಳಾಗಿದ್ದು, ಸಾಕಷ್ಟು ಬಲಾಢ್ಯನಾಗಿ ರೈತ ಬೆಳೆದಿದ್ದಾನೆ. ಹೆಚ್ಚಾಗಿ ಕರ್ನಾಟಕದ ಬೇಡರು ಕೃಷಿಕರಾಗಿದ್ದಾರೆ. ಖುಷ್ಕಿ ಮತ್ತು (ಭಾಗಯತು) ನೀರಾವರಿಯಲ್ಲಿ ಪ್ರಗತಿ ಕಂಡಿದ್ದಾರೆ. ವಾಣಿಜ್ಯ ಬೆಳೆಗಳಾದ ರೇಷ್ಮೆ, ಶೇಂಗಾ, ಸೂರ್ಯಕಾಂತಿ, ಕಬ್ಬು, ಭತ್ತ, ಬಾಳೆ ಮತ್ತು ರಾಗಿ, ಜೋಳ, ಸಜ್ಜೆ, ನವಣೆ ಮುಂತಾದ ಆಹಾರ ಧಾನ್ಯಗಳನ್ನು ಬೆಳೆಯುತ್ತಾರೆ. ಕೃಷ್ಣಾ, ಕಾವೇರಿ, ತುಂಗಭದ್ರಾ ಮತ್ತು ಭದ್ರ ಅಚ್ಚುಕಟ್ಟು ಪ್ರದೇಶದಲ್ಲಿನ ಬೇಡರು ಕೃಷಿಯಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಇತರೆಡೆಗಳಲ್ಲಿ ಶೋಚನೀಯ ಸ್ಥಿತಿಯಿದೆ. ಕಾರಣ, ಮಳೆ, ಅಂತರ್ಜಲ, ಫಲವತ್ತತೆ, ವಾಯುಗುಣ ಮೊದಲಾದ ಕಾರಣಗಳಿವೆ.

ಶೈಕ್ಷಣಿಕ ಸ್ಥಿತಿ-ಗತಿ

ಸ್ಥಿತ್ಯಂತರಗೊಳ್ಳುತ್ತಿರುವ ಸಮುದಾಯಗಳು ಅನ್ನ-ಆಹಾರಕ್ಕೆ ಹಾತೊರೆದಂತೆ, ಶಿಕ್ಷಣಕ್ಕೆ ಪ್ರಯತ್ನಿಸಿದ್ದು ಅನೇಕ ವರ್ಷಗಳ ತರುವಾಯ. ವರ್ಣಾಶ್ರಮ ಪದ್ಧತಿಯಲ್ಲಿ ಶಿಕ್ಷಣದಿಂದ ವಂಚಿತವಾದ ಶೂದ್ರ ಪಂಗಡದವರು ತಮಗೆ ತಾವೆ

ಗುರು ಎಂಬಂತೆ ಶ್ರಮ-ಸಾಧನೆ ತೋರಿದ್ದಾರೆ. ಉದಾ: ಏಕಲವ್ಯ. ಭಾರತದಲ್ಲಿ ವೇದಕಾಲದ ಶಿಕ್ಷಣ, ಮಹಮದೀಯರ ಕಾಲದ ಶಿಕ್ಷಣ, ಬ್ರಿಟಿಷರ ಕಾಲದ ಶಿಕ್ಷಣ (ಕ್ರೈಸ್ತರ ಶಿಕ್ಷಣ), ಆಧುನಿಕ ಭಾರತದ ಮೂಲ ಶಿಕ್ಷಣ ಇತ್ಯಾದಿ ಹಂತಗಳಲ್ಲಿ ಈ ಸಮುದಾಯದವರು ಪ್ರಯೋಜನ ಪಡೆಯದೇ ಇರುವ ಕಾಲವಿತ್ತು. ಇತ್ತೀಚೆಗೆ (೧೯೭೬) ಶಿಕ್ಷಣದಲ್ಲಿ ಗಣನೀಯ ಸಾಧನೆ ತೋರುತ್ತಿದ್ದಾರೆ.

ಹಿಂದುಳಿದ ಬೇಡರು ಜಾಗೃತಗೊಂಡು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾಪ್ರಸಾರ ಮಾಡುತ್ತಿದ್ದಾರೆ. ೧೯೪೬-೪೭ರಲ್ಲಿ ಬಳ್ಳಾರಿ ಜಿಲ್ಲಾ ವಾಲ್ಮೀಕಿ ವಿದ್ಯಾಭಿವೃದ್ಧಿ ಸಂಘದಿಂದ ಶಿಕ್ಷಣ ಸಂಸ್ಥೆಗಳು ಸ್ಥಾಪನೆಗೊಂಡವು. ಚಿತ್ರದುರ್ಗ ಶಿಕ್ಷಣ ಸಂಸ್ಥೆ, ವಾಲ್ಮೀಕಿ ವಿದ್ಯಾಸಂಸ್ಥೆ, ಜಿಲ್ಲಾ ಮದಕರಿನಾಯಕ ವಿದ್ಯಾಸಂಸ್ಥೆ ಇತ್ಯಾದಿ ಸಂಘ ಸಂಸ್ಥೆಗಳು ಗಿರಿಜನರ ಶೈಕ್ಷಣಿಕ ಕೊರತೆಯನ್ನು ನೀಗಿಸುವಲ್ಲಿ ಸಫಲವಾಗಿವೆ. ಉತ್ತರ ಕರ್ನಾಟಕದ (ಗೋಕಾಕ್) ಏಕೈಕ ಗಿರಿಜನರ ಶಿಕ್ಷಣ ಸಂಸ್ಥೆಯಾದ ಲಕ್ಷ್ಮಿ ಎಜುಕೇಷನ್ ಸೊಸೈಟಿಯು ಇಲ್ಲಿನ ಕಾಡುಜನರಿಗೆ ಅನೇಕ ರೀತಿಯಲ್ಲಿ ನೆರವಾಗಿದೆ. ಬೀದರ್, ಗುಲ್ಬರ್ಗಾ, ರಾಯಚೂರುಗಳಲ್ಲಿ ಸಣ್ಣಪುಟ್ಟ ಸಂಸ್ಥೆಗಳಿದ್ದು, ಪದವಿ ಪಡೆಯಲು ಅನುಕೂಲವಾಗಿವೆ. ಬಳ್ಳಾರಿ ಜಿಲ್ಲೆಯ ಕೆಲ ಗ್ರಾಮಗಳಲ್ಲಿ ಬೇಡ ಸಮುದಾಯಕ್ಕೆ ಸೇರಿದ ಶಿಕ್ಷಣ ಸಂಸ್ಥೆಗಳನ್ನು ತೆರೆದಿರುವುದು ಕಂಡುಬರುತ್ತದೆ.

ಶೈಕ್ಷಣಿಕವಾಗಿ ಬೇಡರು ನಗರ-ಪಟ್ಟಣಗಳಲ್ಲಿ ಮಾತ್ರ ಹೆಚ್ಚಿನ ಲಾಭ ಪಡೆಯುತ್ತಾರೆ. ಹಳ್ಳಿಗಳಲ್ಲಿ ಇನ್ನು ಹಳೆಯಕಾಲದ ಗೊಡ್ಡು ಸಂಪ್ರದಾಯಗಳಿಂದ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಅಲ್ಲಿಂದ ಬಂದಿರುವ ವಿದ್ಯಾರ್ಥಿಗಳು ತಮ್ಮ ಬುಡಕಟ್ಟಿನ ಹಿನ್ನೆಲೆಯಿಂದ ಬಡತನ, ಅನಕ್ಷರತೆ, ಕಟ್ಟುನಿಟ್ಟಿನ ಸಂಪ್ರದಾಯಗಳ ಸೆಳೆತಕ್ಕೆ ಸಿಕ್ಕು ಶಾಲೆಬಿಡುವುದು, ಅನುತ್ತೀರ್ಣರಾಗುವುದು ಹೆಚ್ಚು. ಕರ್ನಾಟಕ ರಾಜ್ಯದಲ್ಲಿ ನಾಯಕ (ವಾಲ್ಮೀಕಿ, ಬೇಡ) ಜನಾಂಗದ ಸಂಖ್ಯೆ ಸುಮಾರು ೬೫ ಲಕ್ಷವಿದ್ದರೂ ಪದವೀಧರರು ಕೇವಲ ನೂರಾರು ಮಂದಿ ಹೊರಬರುತ್ತಿದ್ದಾರೆ. ಪಿ.ಯು.ಸಿ, ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ ಮಾಡುವವರ ಸಂಖ್ಯೆ ಮಾತ್ರ ಅಧಿಕ. ಹೀಗಾಗಿ ಬಡತನ, ದಾರಿದ್ರ್ಯ, ಅಜ್ಞಾನ, ಪರಾವಲಂಬನೆ, ದಾಸ್ಯ, ಪ್ರವೃತ್ತಿ ಪ್ರಮುಖವಾಗಿವೆ. ಇವುಗಳನ್ನು ನಿರ್ನಾಮ ಮಾಡಿ ಮೇಲೆಳಲು ಜಾಗೃತಗೊಳಿಸುವ ಅವಶ್ಯಕತೆ ಇದೆ. ಬೇಡರ ಮಕ್ಕಳು ಹೆಚ್ಚಾಗಿ ಕೂಲಿ ಕೆಲಸಕ್ಕೆ ಹೋಗುವುದುಂಟು. ಹೀಗಾಗಿ ಶಿಕ್ಷಣದಲ್ಲಿ ಪರಿವರ್ತನೆಗೊಂಡ ಸಮುದಾಯಗಳನ್ನು ನೋಡಿ ಇಂದು ಬೇಡರು ಶಾಲೆ-ಕಾಲೇಜುಗಳ ಹಂತಕ್ಕೂ ತಲುಪುತ್ತಿದ್ದಾರೆ.

ಪ್ರಾಥಮಿಕ ಶಿಕ್ಷಣ ಸು.ಶೇ.೫೫ರಷ್ಟು ಪಡೆದರೆ, ಪ್ರೌಢಶಿಕ್ಷಣ ಶೇ.೩೦ರಷ್ಟು, ಪದವಿ ಶೇ.೨೫ರಷ್ಟು ಮತ್ತು ಉನ್ನತ ಶಿಕ್ಷಣ ಶೇ.೧೦ರಷ್ಟು ಪಡೆಯುತ್ತಲಿದ್ದಾರೆ. ಸ್ನಾತಕೋತ್ತರ ಶಿಕ್ಷಣದಲ್ಲಿ ವರ್ಷಕ್ಕೆ ಸು. ೫೦ಜನ ಪದವಿ ಪಡೆದು ಹೊರಬರುತ್ತಿದ್ದಾರೆ. ಅದೇ ರೀತಿ ಕಾನೂನು ವೈದ್ಯಕೀಯ, ಇಂಜನಿಯರಿಂಗ್ ಮುಂತಾದ ತಾಂತ್ರಿಕ ಕೋರ್ಸ್‌ಗಳಲ್ಲಿ ಇವರಿಗೆ ಮೀಸಲಾತಿ ಸೌಲಭ್ಯ ಇರುವುದರಿಂದ ಅನುಕೂಲವಾಗಿದೆ. ಸೌಲಭ್ಯಗಳನ್ನು ಬಳಸಿಕೊಳ್ಳದ ಎಷ್ಟೋ ಬೇಡರ ವಿದ್ಯಾರ್ಥಿಗಳು ಅವುಗಳಿಂದ ವಂಚಿತರಾಗಿದ್ದಾರೆ. ಕರ್ನಾಟಕದ ವಿಶ್ವವಿದ್ಯಾಲಯಗಳಾದ ಕರ್ನಾಟಕ, ಮೈಸೂರು, ಮಂಗಳೂರು, ಕುವೆಂಪು, ಗುಲಬರ್ಗಾ, ಬೆಂಗಳೂರು ಮತ್ತು ಕನ್ನಡ ವಿಶ್ವವಿದ್ಯಾಲಯಗಳಲ್ಲದೆ, ಕಾನೂನು, ವಿಶ್ವವಿದ್ಯಾಲಯ ವೈದ್ಯಕೀಯ ವಿ.ವಿ.ಗಳಲ್ಲಿ ಇತರ ಉನ್ನತ ಶಿಕ್ಷಣ ಕೇಂದ್ರಗಳಲ್ಲಿ ಬೇಡರಿಗೆ ಅದರಲ್ಲೂ ನಾಗರೀಕರಾದ ಊರು ಬೇಡರಿಗೆ ಹೆಚ್ಚಿನ ಸೌಲಭ್ಯ ದೊರೆತಿದೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ತೀರ ಹಿಂದುಳಿದ ಮ್ಯಾಸಬೇಡರು ಆ ಮಟ್ಟಕ್ಕೆ ಇನ್ನು ಹೋಗುವ ಪ್ರಯತ್ನದಲ್ಲಿದ್ದಾರೆ.

ಆರ್ಥಿಕ ಸ್ಥಿತಿ-ಗತಿ

ಬೇಟೆಯ ಮೂಲಕ ಆಹಾರ ಸಂಗ್ರಹಿಸಿ, ಪಶುಪಾಲನೆಯಲ್ಲಿ ಆರ್ಥಿಕವಾಗಿ ಸದೃಢರಾಗಿ ಬೆಳೆದದ್ದು ಸ್ಪಷ್ಟ. ಬೇಡರು ಕಾಲಸರಿದಂತೆ ಕೃಷಿಯಲ್ಲಿ ನಿರತರಾಗಿ ಸ್ವತಂತ್ರವಾದ ಬದುಕು ಕಂಡುಕೊಂಡರು. ಕರ್ನಾಟಕದಲ್ಲಿ ಅನೇಕ ಬೇಡ ಕುಟುಂಬಗಳು ಬಡತನದಿಂದ ನರಳುತ್ತಿದ್ದು, ಕೆಲವರು ಮಾತ್ರ ಸರ್ಕಾರದ ಸೌಲಭ್ಯ ಪಡೆಯುತ್ತಾರೆ. ದೊಡ್ಡ ರೈತ ಕುಟುಂಬಗಳಿರುವುದು ಕಡಿಮೆ. ಇಂದು ಹೆಚ್ಚಾಗಿ ಕಾಡನ್ನು ಕಡಿದು ಉಳುಮೆ ಮಾಡುವುದರಿಂದ ಪರಿಸರ, ವನ್ಯಜೀವಿಗಳ ನಾಶದಿಂದ ಮಳೆ ಪ್ರಮಾಣ ಇಳಿತಕ್ಕೆ ಕಾರಣವಾಗಿರಬೇಕು. ಹೀಗಾಗಿ ಒಣಭೂಮಿ, ಗುಡ್ಡಗಾಡು, ಬಂಜರುಭೂಮಿ, ಇತ್ಯಾದಿ ನಿರ್ಲಕ್ಷಿತ ಜಾಗದಲ್ಲಿ ಇವರು ನೆಲಸುತ್ತಿದ್ದು, ವಾಣಿಜ್ಯ ಬೆಳೆಗಳಾದ ಅಡಿಕೆ, ತೆಂಗು, ಬಾಳೆ, ದ್ರಾಕ್ಷಿ, ಹತ್ತಿ ಬೆಳೆಯಲು ವಿಫಲರಾಗುವುದು ಸ್ಪಷ್ಟ. ಈವರೆಗೆ 'ಬೇಡರ ಕಸುಬು ಕೂಲಿ ಕೆಲಸ ಮಾಡುವುದು ಅಥವಾ ಜೀತ ಪದ್ಧತಿಗೆ ದುಡಿಯುವುದಾಗಿತ್ತು, ಆಧುನಿಕತೆ ಬೆಳೆದಂತೆ ವೃತ್ತಿಗಳಲ್ಲಿ ಬದಲಾಗಿದ್ದಾರೆ.[೨೧] ಬೀದರ್, ಗುಲ್ಬರ್ಗಾ, ಜಿಲ್ಲೆಗಳ ಕೆಲ ಗ್ರಾಮಗಳಲ್ಲಿ ಬೇಡರು ಮಲಹೊರುವ ಪದ್ಧತಿಯಲ್ಲಿ ನಿರತರಾಗಿರುವುದು ದುರದೃಷ್ಟಕರ.[೨೨]

ಉತ್ತರಕರ್ನಾಟಕದ ಭಾಗದಲ್ಲಿ ಬೇಡರಿಗೆ ಅಸ್ಪೃಶ್ಯರನ್ನು ಕಾಣುವ ರೀತಿಯಲ್ಲಿ ಕಾಣುತ್ತಾರೆ. ಎಲ್.ಜಿ.ಹಾವನೂರು ಅವರ ವರದಿಯಿಂದ ಪ್ರಯೋಜನ ಪಡೆದರು ಆ ವ್ಯಾಪ್ತಿಗೆ ಬಾರದ ಪರ್ಯಾಯ ಬೇಡ ಗುಂಪುಗಳು ತೀರಾ ನಿರ್ಲಕ್ಷ್ಯಕ್ಕೆ ಗುರಿಯಾಗಿವೆ. ಮಹಿಳೆಯರ ಪ್ರಮುಖ ದುಡಿಮೆ ಕೂಲಿ. ಇಂದು ಕಟ್ಟಿಗೆ ಮಾರುವುದು, ಕಳೆತೆಗೆಯುವುದು, ಫಸಲು ಕೊಯ್ಯುವುದು, ಬಿತ್ತುವುದು, ಇತರ ಸಣ್ಣ ಪುಟ್ಟ ಕೃಷಿ ಕೆಲಸಗಳನ್ನು ಮಾಡುತ್ತಾರೆ. ಪುರುಷನಂತೆ ಎತ್ತಿನ ಗಾಡಿ, ನೇಗಿಲನ್ನು, ಕಪಿಲೆಯನ್ನೂ ಮಹಿಳೆ ಕಲಿತಿರುವುದುಂಟು. ಎರಡು ಶತಮಾನಗಳಿಂದ ಬೇಡ ಮಹಿಳೆಯರ ಸ್ಥಿತಿ ಶೋಚನೀಯವಾಗಿದ್ದ ಬಗ್ಗೆ ಆಧಾರಗಳಿವೆ. ಮುಗ್ಧರನ್ನು ಬಸವಿಗೆ ಬಿಡುವ ಪದ್ಧತಿ ಇತ್ತು. ಇಂದು ಕಡಿಮೆಯಾಗಿರುವುದಕ್ಕೆ ಶಿಕ್ಷಣ, ಆರ್ಥಿಕ ಸ್ಥಿತಿ ಕಾರಣಗಳಾಗಿವೆ. ಅಲ್ಲದೆ ಸರಕಾರವು ಇದನ್ನು ತಡೆಗಟ್ಟುವಲ್ಲಿ ಸಫಲವಾಗಿದೆ. ಕಣ್ತಪ್ಪಿಸಿ ಅಲ್ಲಲ್ಲಿ ಕೆಲವು ಘಟನೆಗಳು ನಡೆಯುತ್ತವೆ. ಬೇಡರಷ್ಟೇ ಸಮಾನವಾದ ಇತರ ಜನಾಂಗಗಳಲ್ಲಿಯೂ ಈ ಪದ್ಧತಿಯಿದೆ. ಬೇಡರೇ ಹೆಚ್ಚಾಗಿರುವ ಹೊಸಪೇಟೆ, ಮರಿಯಮ್ಮನಹಳ್ಳಿ, ಕೂಡ್ಲಿಗಿ, ಉಚ್ಚಂಗಿದುರ್ಗ, ಕೊಟ್ಟೂರು, ಮುಂತಾದ ಸ್ಥಳಗಳಲ್ಲಿ ಇತರ ಜನ ಸಮುದಾಯದವರಂತೆ ಬೇಡ ಮಹಿಳೆಯು 'ದೇವದಾಸಿ' ಪಟ್ಟ ಹೊತ್ತರೂ ರಂಗ ಕಲಾವಿದೆಯರಾಗಿಯೂ ಜೀವಿಸುತ್ತಿದ್ದಾರೆ. ಇಂದು ದೇವರಿಗೆ ಮೀಸಲಾದ ಹೆಣ್ಣು, ದೇವರ ಸೇವಕಿ ಎಂಬ ಭಾವನೆ ಹೋಗಿ ಅವಳನ್ನು ಕೆಟ್ಟ ದೃಷ್ಟಿಯಿಂದ ನೋಡಲಾಗುತ್ತಿದೆ.

ಬೇಡ ಮಹಿಳೆ ದನ-ಕುರಿ ಕಾಯುದರೊಂದಿಗೆ, ಕೂಲಿಯು ಹೋಗುತ್ತಾಳೆ. ಆಹಾರ ಪಡೆಯುವಲ್ಲಿ ನೆಮ್ಮದಿ ಕಂಡರೂ ಆರ್ಥಿಕ ಸ್ಥಿತಿ ಸುಧಾರಿಸಿಲ್ಲ. ಇವರು ತೀರಾ ಹಿಂದುಳಿಯಲು ಉಡುಗೆ-ತೊಡುಗೆಗಳು ಕಾರಣವಾಗಿರಬೇಕು. ಚಲ್ಲಣ, ಕುಪ್ಪಸ, ಕಂಬಳಿ, ಕಡಗ ಮೊದಲಾದವನ್ನು ಹೆಸರಿಸಬಹುದು. ಬೇಡರು ಕ್ಷತ್ರಿಯರಾಗಿ, ಸಮಾಜಸೇವಕರಾಗಿ, ಇತರರ ರಕ್ಷಕರಾಗಿ ಗ್ರಾಮಗಳಲ್ಲಿ ಕಂಡುಬರುತ್ತಾರೆ. 'ತಳವಾರ' ವೃತ್ತಿ ಇಂದಿಗೂ ಸಾಗಿ ಬಂದಿದೆ. ತಳವಾರ ತೀರಿಕೊಂಡರೆ ಹಿರಿಯ ಮಗ ತಳವಾರಿಕೆ ನಡೆಸುತ್ತಾನೆ. ನೀರಗಂಟಿ, ಗೌಡ, ಶಾನುಭೋಗ, ಗೊಂಚಿಕಾರ ಮೊದಲಾದವರ ಅಧಿಕಾರವು ಸಹ ಮೇಲಿನಂತಿರುತ್ತಿತ್ತು. ಮುಂಬಯಿ ಕರ್ನಾಟಕದಲ್ಲಿನ ತಳವಾರ ಎನ್ನುವ ಬೇಡ ಜನಾಂಗವಿದೆ. ಸಾಮಾಜಿಕವಾಗಿ ಇತರರಿಗಿಂತ ಹೆಚ್ಚು ಎನ್ನುವ ಶ್ರೇಷ್ಠತೆಯನ್ನು ಅವರು ಮೈಗೂಡಿಸಿಕೊಂಡಿದ್ದಾರೆ. ಭಾರತದಲ್ಲಿ ಹಿಂದೂ, ಬೌದ್ಧ, ಧರ್ಮಗಳಿಗೆ ಸೇರಿದ ಬೇಡರ ಜನಸಂಖ್ಯೆ ಹೆಚ್ಚು. ಕರ್ನಾಟಕದಲ್ಲಿ ಶೈವ-ವೈಷ್ಣವ ಪಂಥದ ಬೇಡರು ಅವರ

ಸಂಪ್ರದಾಯಗಳಂತೆ ಜೀವಿಸುತ್ತಿದ್ದಾರೆ. ರಾಜಕೀಯದಲ್ಲೂ ಬೇಡ ಜನಾಂಗದ ಪಾತ್ರವಿದ್ದು, ಪಾಳೆಯಗಾರಿಕೆ ಕೈ ತಪ್ಪಿದ ಮೇಲೆ ಬೇಡರು ಅಧಿಕಾರದ ಸವಿಕಂಡದ್ದು ಸ್ವಾತಂತ್ರ್ಯಾನಂತರ ಕಡಿಮೆ ಎನ್ನಬಹುದು. ನಿರಾಸೆಗೊಂಡ ಅನೇಕರು ರಾಜಕೀಯದಿಂದ ದೂರ ಉಳಿದರು

ಸರ್ಕಾರದ ಸವಲತ್ತುಗಳಿಗಾಗಿ ಮನವಿ

ನಾಯಕ, ವಾಲ್ಮೀಕಿ, ಬೇಡ ಜನಾಂಗಕ್ಕೆ ಇತರ ಪರ್ಯಾಯ ಜಾತಿಗಳನ್ನು ಸೇರಿಸಲು ಒತ್ತಾಯಿಸಿ ಅನೇಕ ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ೧೯೭೨ ಎಲ್.ಜಿ.ಹಾವನೂರು ಅವರ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ೧೯೭೫ರಲ್ಲಿ ಯೋಜನೆ ತಯಾರಿಸಿತು. ಇದರಿಂದ ಬೇಡರ ಸು.೧೮ ಪರ್ಯಾಯ ಪಂಗಡಗಳಿಗೆ ಅನುಕೂಲವಾಯಿತು. ಅದೇ ಕೋಮಿನ ಉಳಿದವರಿಗೆ ಅನ್ಯಾಯವಾಗಿದ್ದು ಸ್ಪಷ್ಟ. ಈ ಅನ್ಯಾಯವನ್ನು ಸರಿಪಡಿಸಿದ್ದು ಕೆಲವು ವರ್ಷಗಳ ನಂತರ ರಾಷ್ಟ್ರೀಯ ನಾಯಕರು (೧೯೯೧). ಬೇಡ, ವಾಲ್ಮೀಕಿ ಮೊದಲಾದವರು ಮೇಲಿನ ಸೌಲಭ್ಯ ಪಡೆದರೂ, ತಳವಾರ, ಪರಿವಾರ ಮೊದಲಾದವರಿಗೆ ಆ ಸೌಲಭ್ಯ (ಎಸ್.ಟಿ) ಸಿಗಲಿಲ್ಲ. ಮತ್ತು ಪರಿಶಿಷ್ಟ ವರ್ಗಕ್ಕಿರುವ ಶೇ.೩ರಷ್ಟು ಮೀಸಲಾತಿ ಪ್ರಮಾಣವನ್ನು ಶೇ.೭ರಷ್ಟು ಹೆಚ್ಚಿಸಲು ಮತ್ತು ಪರಿವಾರ, ತಳವಾರ ಮೊದಲಾದವರನ್ನು ಎಸ್.ಟಿ. ವರ್ಗಕ್ಕೆ ಸೇರಿಸಲು ಹೋರಾಟಗಳು ನಡೆಯುತ್ತಿವೆ. ಚಿತ್ರದುರ್ಗ, ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಗಳ ಬೇಡರು ಸರ್ಕಾರಕ್ಕೆ ಮನವಿ ಪತ್ರಗಳನ್ನು ಕೊಟ್ಟಿರುವುದು ಸ್ಮರಣೀಯ.

ವಿದ್ಯಾವಂತರು

ಬಳ್ಳಾರಿ ಜಿಲ್ಲೆಯಲ್ಲಿ ಬೇಡರ ಜನಸಂಖ್ಯೆ ೧೯೭೨ರಲ್ಲಿ ೨,೧೪,೩೮೨ ಇದ್ದರೆ, ಅದೇ ರೀತಿ ರಾಯಚೂರು ೨,೨೩,೭೮೩, ಚಿತ್ರದುರ್ಗ ೨,೩೩,೪೫೫ರಷ್ಟಿತ್ತು. ಅಂದು ಕರ್ನಾಟಕದಲ್ಲಿ ನಾಯಕ ಮಕ್ಕಳ ಸಂಖ್ಯೆ ೧೫,೧೯,೭೨೧ ರಷ್ಟಿತ್ತು. ೧೯೭೨ರಲ್ಲಿ ನಾಯಕ ಜನಾಂಗದ ಮಕ್ಕಳು ಎಸ್.ಎಸ್.ಎಲ್.ಸಿಯಲ್ಲಿ ೭೧೦ ಜನ ತೇರ್ಗಡೆಯಾಗಿದ್ದರು. ೫೨ ಜನ ಪ್ರಥಮ ದರ್ಜೆ, ೧೧೫ ದ್ವಿತೀಯ ದರ್ಜೆ, ೫೪೩ ಜನ ತೃತೀಯ ದರ್ಜೆ ಪಡೆದಿದ್ದರು. ೧೯೭೨ರಲ್ಲಿ ಪ್ರಥಮ ದರ್ಜೆ ಖಾಯಂ ನೌಕರರು ೨೧ ಜನರಿದ್ದರು. ದ್ವಿತೀಯ ದರ್ಜೆಯಲ್ಲಿ ೪೭, ತೃತೀಯ ದರ್ಜೆ ೨೦೮೨, ನಾಲ್ಕನೇ ದರ್ಜೆ ೭೭೪. ಒಟ್ಟು ೪,೩೦೭ ಜನ ಸರ್ಕಾರಿ ಉದ್ಯೋಗದಲ್ಲಿದ್ದರು. ಇನ್ನು ಸರ್ಕಾರಿ ನೌಕರಿ ವಿದ್ಯಾಭ್ಯಾಸವೆಂದರೆ ಕೆಲವರಿಗೆ ಆಗದು. 'ಚಳ್ಳಕೆರೆ, ಜಗಳೂರು, ಮೊಳಕಾಲ್ಮುರು ಸುತ್ತಿನ ಹಟ್ಟಿಗಳಲ್ಲಿಯೇ ಹಳೆಯ ತಲೆಮಾರಿನ ಜನರು ಬುಡಕಟ್ಟು ಸಂಪ್ರದಾಯಗಳನ್ನು ಬಿಟ್ಟು ಕೊಡಲಿಚ್ಛಿಸದೆ ಬದುಕುತ್ತಿರುವವರ ಸಂಖ್ಯೆ ಇನ್ನು ಇದ್ದೇ ಇದೆ ಎಂಬುದು ನಿಜ.[೨೩]

ಜಗಳೂರು, ಚಳ್ಳಕೆರೆಗಳ ಸಂತೆ, ಶನಿವಾರ, ಭಾನುವಾರಗಳಾದರೆ, ನಾಯಕನಹಟ್ಟಿ ಚಿತ್ರದುರ್ಗ, ಕಮಲಾಪುರ (ಹೊಸಪೇಟೆ-ತಾ||), ಚಿಕ್ಕಜೋಗಿಹಳ್ಳಿ (ಕೂಡ್ಲಿಗಿ -ತಾ||)ಸೋಮವಾರ, ಮೊಳಕಾಲ್ಮುರುವಿನಲ್ಲಿ ಬುಧವಾರಗಳಂದು ಸಂತೆಯಾದಾಗ ಬೇಡರು ತಾವು ಬೆಳೆದ ತರಕಾರಿಯನ್ನು ಮಾರುವುದುಂಟು. ಕೊಡುವ ತೆಗೆದುಕೊಳ್ಳುವ ವಿನಿಮಯಕ್ಕೆ ಮ್ಯಾಸಬೇಡರು ಪ್ರಾಮುಖ್ಯತೆ ಕೊಡುತ್ತಾರೆ. ಜಾತಿಸಂಬಂಧ ವೃದ್ಧಿಗೆ ಕಾರಣ, ಕೊಟ್ಟು-ಕೊಳ್ಳುವ ವ್ಯವಹಾರವನ್ನು ನಿಗದಿತ ದಿನದಲ್ಲಿ ಇಟ್ಟುಕೊಳ್ಳುತ್ತಾರೆ.

ಮೇಲಿನಂತೆ ಇಂದು ಬೇಡರ ಬದುಕು ಇತರರಿಗಿಂತ ಭಿನ್ನವಾಗಿಲ್ಲವಾದರೂ ದುಡಿದು ತಿನ್ನುವ ಸಾಹಸಿಗಳು ಮತ್ತು ಕೂಲಿಯಿಂದಲೇ ಬದುಕುವ ಕುಶಾಗ್ರಮತಿಗಳಾಗಿದ್ದಾರೆ. ಸರಿಸಮಾನ ಕೂಲಿಕಾರರಾಗಿ ಕೆಲಸ ಮಾಡಲಿಚ್ಛಿಸುತ್ತಾರೆ. ಜೀತದಾಳುಗಳಾಗಿರುವರ ಬದುಕು ಜಟಿಲಗೊಂಡಿದೆ. ಬೆಳಗ್ಗೆ ಆಗಂಟೆಗೆ ಹೋದರೆ ಸಾಯಂಕಾಲ ೬-೭ಕ್ಕೆ ಮನೆಗೆ ಬರುತ್ತಾರೆ. ಬೇಡರ ಕ್ಷಾತ್ರ ತೇಜಸ್ಸು, ಧೈರ್ಯ, ಪರಾಕ್ರಮ, ನಾಯಕತ್ವ, ಹೋರಾಟಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಗೌಣವೆಂಬಂತೆ ಕಂಡುಬರುತ್ತವೆ. ಇತರರಂತೆ ಸಹಜೀವನ ನಡೆಸುತ್ತಾ, ಪ್ರತ್ಯೇಕತೆಯನ್ನು ಪ್ರದರ್ಶಿಸುವುದಿಲ್ಲ.

ಇತರ ಸಮುದಾಯದವರಂತೆ, ಬೇಡರು ಈಚಲು ತಟ್ಟಿ, ಪುಟ್ಟಿ, ಹೆಣೆಯುವುದು, ಕೊರಚ-ಕೊರಮರಂತೆ ಜೀವನ ಮಾಡುತ್ತಾರೆ ಎನ್ನಲಾಗಿದೆ. ಬೇಟೆ, ಮೀನು ಹಿಡಿಯುವುದು, ಮಣ್ಣು ಕಡಿಯುವುದು, ದನಕಾಯುವುದು, ತಳವಾರಿಕೆ ವೃತ್ತಿಗಳಿಗೆ ಹೊಂದಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಯುಗಾಂತರಗಳಿಂದ ವೀರಯೋಧರಾಗಿ ಜೀವನ ಮಾಡಿಕೊಂಡು ಬಂದಿದ್ದಾರೆ. ಯೋಧ ಪ್ರವೃತ್ತಿಯಲ್ಲಿದ್ದರು ಬಡತನ, ದಾರಿದ್ರ್ಯ, ಅವಿದ್ಯೆ, ಅಜ್ಞಾನದಿಂದ ತುಂಬಿ ತುಳುಕುತ್ತಿದೆ ಈ ಸಮಾಜ. ಕೊಲೆ-ಸುಲಿಗೆ, ದರೋಡೆ, ಕಳ್ಳತನ, ಪುಂಡಾಟಿಕೆ ಮುಂತಾದ ನೀಚ ಪ್ರವೃತ್ತಿಗಳಲ್ಲಿ ತೊಡಗಿದ್ದರು. ಸಾಮಾನ್ಯವಾಗಿ ಇಂದು ಬದಲಾಗಿದ ಸ್ಥಿತಿ-ಗತಿಗಳನ್ನೇ ಬೇಡರು ಹೊಂದಿರುವುದು ಗಮನಾರ್ಹ.

ಒಟ್ಟಾರೆ ಬೇಡರನ್ನು ಪರಸ್ಪರ ಹೋಲಿಸಿದರೆ ಇತರರಿಗಿಂತ ಭಿನ್ನವಾಗಿರುವುದು ಕಂಡುಬರುತ್ತದೆ. ಜನಜೀವನದಲ್ಲಿಯೂ ವ್ಯತ್ಯಾಸಗಳೇ ವಿಶೇಷವಾಗಿದೆ. ಮನೆ ನಿರ್ಮಾಣ, ಮುಂಗಾರಿನ ಪೂಜೆ, ಬೆಳೆಯುವ ಫಸಲು, ಪಶುಪಾಲನೆ, ವ್ಯಾಪಾರ, ಹಬ್ಬ-ಹರಿದಿನಗಳಲ್ಲಿ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಹ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಹಾಗೂ ಬದಲಾವಣೆಗಳನ್ನು ನೋಡುತ್ತೇವೆ. ಹಳೆಯ ಪದ್ಧತಿಯನ್ನು ಒಪ್ಪುವುದು, ತಿರಸ್ಕರಿಸುವುದು ಅಲ್ಲಲ್ಲಿ ಮೈಲುಗಲ್ಲುಗಳಾಗಿದ್ದು, ನಾಗರಿಕತೆ ಸುಳಿಗೆ ಬೇಡರು ಪದಾರ್ಪಣೆ ಮಾಡಿದ್ದು ಪರಿವರ್ತನೆಗೆ ನಾಂದಿಯಾಯಿತು.

ಹೀಗೆ ಪರಂಪರೆಯಿಂದ ಬಂದ ನಂಬಿಕೆ, ರೂಢಿ, ಪದ್ಧತಿ, ಆಚರಣೆ ಮತ್ತು ಸಂಪ್ರದಾಯಗಳಲ್ಲಿ ಇವರು ಗಮನ ಸೆಳೆದಿದ್ದಾರೆ. ವೃತ್ತಿಯಲ್ಲಿ ತಂದೆ-ತಾತ ಮುತ್ತಾತರನ್ನು ಅನುಸರಿಸಿದ್ದು ಸ್ಪಷ್ಟ. ಎಲ್ಲ ದೃಷ್ಟಿಯಿಂದ ತಮ್ಮ ಹಿಂದಿನ ತಲೆ ಮಾರಿನವರು ಬಿಟ್ಟುಹೋದ ಮೌಲ್ಯಗಳನ್ನು ಉಳಿಸಿಕೊಂಡು, ಆಧುನಿಕತೆಗೆ ಮಾರುಹೋಗಿದ್ದು ಗಮನೀಯವಾದದು.

ಈಗ ರೈಲು, ಬಸ್ಸು, ವಿಮಾನಗಳು ಬಂದಿರುವುದರಿಂದ ಮತ್ತು ಆಧುನಿಕತೆಯ ಗಾಳಿ ಎಲ್ಲ ಕಡೆ ಬೀಸುತ್ತಿರುವುದರಿಂದ ಕೆಳವರ್ಗದ ಜನರಲ್ಲಿ ಬದಲಾವಣೆಯಾದಂತೆ ಬೇಡರಲ್ಲಾಗುತ್ತಿರುವುದು ಸಹಜ. ಮೊದಲಿನಂತೆ ಅರಣ್ಯಗಳಿಲ್ಲದ ಕಾರಣ ಬೇಟೆಗೆ ಅವಕಾಶವಿಲ್ಲದಂತಾಗಿದೆ. ಉಳಿದ ಬುಡಕಟ್ಟುಗಳಂತೆ ಬೇಡರು ಶಿಕ್ಷಣ ಹೊಂದಿ ತಿಳುವಳಿಕೆ ಪಡೆದು ನಾಗರಿಕ ಬದುಕಿಗೆ ಹೊಂದಿಕೊಂಡಿರುವ ಹೊತ್ತಿನಲ್ಲಿ ಬೇಟೆಯ ಮೇಲೆ ಮೊದಲಿದ್ದ ಮನಸ್ಸು ಈಗ ಸರ್ಕಾರಿ ಉದ್ಯೋಗ, ನಗರ ಪಟ್ಟಣಗಳ ಕಡೆಗಿದೆ. ಆರಂಭದಲ್ಲಿ ಹೊಟ್ಟೆ ತುಂಬಿಕೊಳ್ಳುವುದು ಮುಖ್ಯವಾಗಿದ್ದರೆ, ಈಗ ಹೊಟ್ಟೆ ಜೊತೆಗೆ ರಂಜನೆ, ರಕ್ಷಣೆ, ತಲೆತುಂಬಿಕೊಂಡು ಜೀವಿಸುವುದಾಗಿದೆ. ಹೀಗಿರುವ ಸಮುದಾಯದಲ್ಲಿ ಕಾಲಕ್ಕೆ ತಕ್ಕಂತೆ ಪರಿವರ್ತನೆಯಾಗುತ್ತದೆ. ಈ ಪರಿವರ್ತನೆಯಿಂದ ಅವರಲ್ಲಿ ಆನುವಂಶಿಕವಾಗಿ ಬಂದ ಬೇಟೆ ಗುಣಗಳು ಆಧುನಿಕ ಸಂದರ್ಭದಲ್ಲಿ ಸ್ಥಿತ್ಯಂತರಗೊಳ್ಳುತ್ತವೆ. ಬದಲಾವಣೆಗೊಂಡ ಬೇಡರು ಓದು, ಉದ್ಯೋಗಗಳಿಗೆ ಊರಿಂದ ಊರಿಗೆ ಹೋಗುವ ಸಂದರ್ಭದಲ್ಲಿ ಮೊದಲಿನ ಬುಡಕಟ್ಟಿನ ಕಾಲದ ಬೇಟೆಯ ಗುಣಗಳು ಇತರ ಕಟ್ಟುಪಾಡುಗಳಿಂದ ಕ್ರಮೇಣ ಬದಲಾವಣೆಗೊಂಡು ಹೊಸ ಜಗತ್ತಿನ ಕಡೆಗೆ ನಡೆಯುತ್ತಿದ್ದಾರೆ. ಇಂದಿನ ಬೇಡ ಬೇಡರಕಣ್ಣಪ್ಪನಾಗಿ ಉಳಿಯದೇ ಕಣ್ಣಿದ್ದವನಾಗಿ ನಡೆಯಬೇಕಾಗಿರುವಾಗ ಹಿಂದಿನಿಂದ ಬಂದ ಕಾಲಾನುಕಾಲದ ಆನುವಂಶಿಕ ಬೇಟೆ ಗುಣಗಳ ಜಾಲದಲ್ಲಿ ವೈಜ್ಞಾನಿಕ, ವೈಚಾರಿಕ, ವಿಚಾರಗಳು ತಲೆ ಎತ್ತಿ ಎಲ್ಲ ಕ್ಷೇತ್ರಗಳಲ್ಲಿ ಪರಿವರ್ತನೆಗೆ ಪಾತ್ರನಾಗಿದ್ದಾನೆ.

೬.೪. ವಲಸೆ

'ವಲಸೆ' ಎಂದರೆ ಒಂದು ವಾಸಸ್ಥಾನದಿಂದ ಮತ್ತೊಂದು ವಾಸಸ್ಥಾನಕ್ಕೆ ನಡೆಯುವ ಜನರ ಸ್ಥಳಾಂತರವಾಗಿದೆ. ನಿರಂತರ ಪರಿವರ್ತನೆ, ಸಾಂಸ್ಕೃತಿಕ ಪ್ರಸರಣ, ಸಾಮಾಜಕ ಐಕ್ಯತೆ ಹಾಗೂ ಜನಸಂಖ್ಯೆ ಇದಕ್ಕೆ ಕಾರಣವಾಗಿದೆ. ವಲಸೆಯಲ್ಲಿ ಆಂತರಿಕ - ಬಾಹ್ಯ ಎಂದು ಹೇಳಬಹುದು. ವಲಸೆ ಹೊರಡುವ, ಸೇರುವ ಪ್ರದೇಶಗಳೆರೆಡು ಮೊದಲಿನಂತೆ ಉಳಿಯುವುದಿಲ್ಲ.

ವಲಸೆಯ ಇತಿಹಾಸವು ಬಹು ಪ್ರಾಚೀನವಾದದು. ಮಾನವ ಆಹಾರಕ್ಕಾಗಿ ಅಲೆದಾಡುವ ಸಂದರ್ಭದಿಂದಲೇ ಆರಂಭವಾಗಿದೆ ಎನ್ನಬಹುದು. ಇದು ಒಂದು ಸ್ಥಳ, ಒಬ್ಬ ವ್ಯಕ್ತಿ ಎಂದು ಗೆರೆ ಹೊಡೆದಂತೆ ತಿಳಿಸುವುದು ಕಷ್ಟ. ಪ್ರಾಚೀನ ಕಾಲದಿಂದಲೂ ಮಾನವ ಸಮುದಾಯ ಹಸಿವು, ನೀರಿಗಾಗಿ ವಲಸೆ ಕೈಗೊಂಡಿದ್ದು ಸ್ಪಷ್ಟ. ಅಂತರಾಷ್ಟ್ರೀಯ, ರಾಷ್ಟ್ರೀಯ, ಪ್ರಾದೇಶಿಕ, ವಲಸೆಯ ವಿವರಗಳನ್ನು ಆಯಾ ರಾಷ್ಟ್ರಗಳು ಪ್ರತ್ಯೇಕವಾಗಿ ಉಲ್ಲೇಖಿಸುತ್ತವೆ. ದೇಶಿಯ - ವಿದೇಶಿಯರ ಬರವಣಿಗೆಗಳಿಂದಲೂ ವಲಸೆ ಬಗ್ಗೆ ತಿಳಿದು ಬರುತ್ತದೆ.

ಋಗ್ವೇದ ಕಾಲದಲ್ಲಿ ಆರ್ಯರು ಒಂದೆಡೆಯಿದ ಇನ್ನೊಂದೆಡೆಗೆ (ಸಪ್ತಸಿಂಧು-ಗಂಗಾನದಿ) ವಲಸೆ ಹೋಗುತ್ತಾ, ನಿರಂತರವಾಗಿ ವ್ಯಾಪ್ತಗೊಳ್ಳುತ್ತಲಿದ್ದ ಕಾರಣ ಯಾವುದೇ ಪೌರ ಪದ್ಧತಿಯಾಗಲೀ, ಪ್ರಾದೇಶಿಕ ಆಡಳಿತ ವ್ಯವಸ್ಥೆಯಾಗಲೀ ರೂಪುಗೊಂಡಿರಲಿಲ್ಲ ಎಂಬ ಮಾತು ಪರಿಶೀಲನಾರ್ಹ.[೨೪] ವಲಸೆಗೆ ಕಾರಣ ಭೌತಿಕ - ಅನ್ನ, ಆಹಾರ, ನೆಲೆ, ಬೌದ್ಧಿಕ-ಶಿಕ್ಷಣ ಉದ್ಯೋಗ ಅಂಶಗಳು ಇರಬಹುದು. ಏಕೆಂದರೆ ಆರ್ಯರು ಮತ್ತು ದ್ರಾವಿಡರಲ್ಲಿ ಭಾರತದ ಮೂಲನಿವಾಸಿಗಳು ಯಾರೆಂಬುದು ಚರ್ಚಾ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ಬೇಡರ ಮೂಲವು ಗುರುತಿಸುವುದು ಜಟಿಲವೆನಿಸಿದ್ದು ಸ್ಪಷ್ಟ. ಹೀಗೆ ಆರ್ಯರ ಕಾಲದಿಂದಲೂ ಬೇಡರು ಮೂಲತಃ ಅಲೆಮಾರಿ ಸಮುದಾಯದವರಾಗಿದ್ದಾರೆ. ಅನಾರ್ಯ, ಅಸುರ, ನಿಷಾಧ, ಕಿರಾತ ಇವರಿಗೆ ಅಲೆದಾಟವು ಒಗ್ಗಿದ ಪ್ರವೃತ್ತಿಯಾಗಿದೆ. ಹಸಿವನ್ನು ಇಂಗಿಸಿಕೊಳ್ಳುವುದಕ್ಕಾಗಿ, ಆಹಾರದ ಉದ್ದೇಶಕ್ಕಾಗಿ ಅಲೆದಾಟದಿಂದ ಆಗಾಗ ನೆಲೆಯನ್ನು ಬದಲಿಸಿ ವಾಸಿಸುವಲ್ಲಿ ಯಶಸ್ವಿಯಾಗುತ್ತಿದ್ದರು. ಹೀಗೆ ಪ್ರಾದೇಶಿಕವಾಗಿ ಹೆಚ್ಚಿನ ಸವಿಯನ್ನು ಕಂಡಂತೆ ಆಧುನಿಕ ನೆಲೆಗಳ ಶೋಧನೆ ದ್ವಿಗುಣಗೊಂಡಿರಬೇಕು.

ಈ ಬೇಡ ಸಮುದಾಯವು ಬೇಟೆ ಮತ್ತು ಪಶುಪಾಲನೆಯ ವೃತ್ತಿಯಲ್ಲಿಯೇ ಹೆಚ್ಚಾಗಿ ಪ್ರದೇಶದಿಂದ ಪ್ರದೇಶಕ್ಕೆ ನೀರು ಮತ್ತು ಆಹಾರಕ್ಕೆ ವಲಸೆ ಹೋಗುವುದು ಸಾಮಾನ್ಯವಾಗಿತ್ತು. ನಾನಾ ತರದ ಪ್ರವೃತ್ತಿಗಳಲ್ಲಿ ನಿರತರಾಗಿದ್ದರಿಂದ ಮೂಢನಂಬಿಕೆ, ರಾಜ್ಯಗಳ ವಿಂಗಡಣೆ- ಅರಸರ ಉಪಟಳ, ನೈಸರ್ಗಿಕ ವಿಕೋಪದಿಂದ ಬಳಲಿ ನೋವನ್ನನುಭವಿಸುತ್ತಾ ಪಲಾಯನ ಮಾಡುತ್ತಿದ್ದರು. ಅಲ್ಲಿಯೂ ಅವರು ಸುಮ್ಮನಿರದೇ ದೇಗುಲ ಧರ್ಮವನ್ನು, ಯಾತ್ರಾಸ್ಥಳಗಳನ್ನು ನಿರ್ಮಿಸಿಕೊಂಡರು. ಮೇಲೆ ತಿಳಿಸಿದಂತೆ, ದೇಶದ ವಿಭಜನೆ, ಭೌಗೋಳಿಕವಾಗಿ ನೆರೆ ಅಥವಾ ಬರಗಾಲ ಬಂದಾಗ ವಾಸದ ನೆಲೆಬಿಟ್ಟು ಪಲಾಯನಿಸುವುದು ಸಾಮಾನ್ಯವಾಗಿತ್ತು. ಇನ್ನೊಂದು ಸ್ಥಳದಲ್ಲಿನ ಉತ್ತಮ ಜೀವನಕ್ಕಾಗಿ ಹಂಬಲಿಸುವವನು ವಲಸೆಗೆ ಇಚ್ಚಿಸುತ್ತಾನೆ. ವಲಸೆಗೆ ಗುರಿ - ಉದ್ದೇಶ ಮತ್ತು ಪ್ರೇರಣಾಂಶಗಳಿವೆ : ಮಾನವನ ಚರಿತ್ರೆಯುದ್ದಕ್ಕೂ ವಲಸೆಗಳು ಸಹಸ್ರಾರು ಸಂಭವಿಸಿದ್ದು ಸ್ಪಷ್ಟವಾಗಿದೆ. ಅವನು ಹುಟ್ಟಿನಿಂದ - ಸಾವಿನವರೆಗೆ ನಡುವಿನ

ಜೀವನದಲ್ಲಿ ಇನ್ನೊಂದು ಪ್ರದೇಶಕ್ಕೆ ವಲಸೆ ಬರಲು ಹಾತೊರೆಯಲು ಹಲವು ಕಾರಣಗಳಿರುತ್ತವೆ. ವ್ಯಕ್ತಿ, ಕುಟುಂಬ, ಸಮುದಾಯ ಮುಂತಾದವುಗಳು ಒಂದೆಡೆಯಿಂದ ಇನ್ನೊಂದೆಡೆಗೆ ವಲಸೆ ಹೋದರೆ ಸಾಮಾಜಿಕ ಪರಿಸ್ಥಿತಿಗೆ ಹೊಸ ಪರಿಸರಕ್ಕೆ ಕ್ರಮೇಣ ಒಗ್ಗಿಕೊಳ್ಳುತ್ತಾನೆ. ಕೆಲವು ಬುಡಕಟ್ಟುಗಳು ಕಾಡಿನಿಂದ ನಾಡಿನ ವಾಸಿಗಳಾಗಿ ವಿಭಿನ್ನ ವೈಶಿಷ್ಟ್ಯತೆ, ಲಕ್ಷಣಗಳನ್ನು ಹೊಂದಿದ್ದಾರೆ. ಈ ವಲಸೆ ಬುಡಕಟ್ಟುಗಳಲ್ಲಿ ಅಥವಾ ಬೇಡರಲ್ಲಿ ಮಾತ್ರವಲ್ಲದೆ ಇಡೀ ಸಮುದಾಯಗಳಲ್ಲಿ ಪ್ರಧಾನವಾಗಿ ಬೇರೂರಿದೆ. ಪ್ರಾಥಮಿಕ ಅವಸ್ಥೆ, ಸಮಸ್ಯೆಗಳ ಪೂರೈಕೆಗಾಗಿ ವ್ಯಕ್ತಿ- ವ್ಯಕ್ತಿ ನಡುವಿನ ಭಿನ್ನಾಭಿಪ್ರಾಯವನ್ನು ವಲಸೆ ಮೂಲಕ ಬಗೆ ಹರಿಸಿಕೊಳ್ಳುತ್ತಿದ್ದರು. ಇತ್ತೀಚಿನ ಕಾಡುನಾಶ, ಅರಣ್ಯನೀತಿ ಮತ್ತು ಕೈಗಾರಿಕೆ ನೀತಿಯ ಕಾರಣದಿಂದ ವೃತ್ತಿಯಲ್ಲಿ ಬೇಡರು ಅರಣ್ಯವನ್ನು ತ್ಯಜಿಸಿ ಗ್ರಾಮ ಮತ್ತು ನಗರಗಳಿಗೆ ವಲಸೆ ಹೋಗುತ್ತಾರೆ.

ಹೀಗಾಗಿ ಸಮುದಾಯಗಳ ವಲಸೆ ಇತ್ತೀಚಿನದಲ್ಲ. ಪ್ರಾಚೀನ ಕಾಲದಿಂದಲೂ ನಡೆದುಬಂದಿದೆ ಎಂಬುದಕ್ಕೆ ಅನೇಕ ನಿದರ್ಶನಗಳಿವೆ. ಕರ್ನಾಟಕದ ಅರಸರು ನೆರೆಯ ರಾಜ್ಯಗಳೊಡನೆ ಯುದ್ಧಮಾಡಿ ಜಯಿಸಿ ಬರುವಾಗ ಅವರೊಡನೆ ಅನೇಕ ಸಮುದಾಯಗಳು ಹಿಂಬಾಲಿಸಿ ಬರುತ್ತವೆ. ವಲಸೆ ಬಂದವರು ಸಹ ಸೈನಿಕರಾಗಿ ಸೇವೆ ಸಲ್ಲಿಸಿರುವ ಉದಾಹರಣೆಗಳಿವೆ.

ಬೇಡರಲ್ಲಿ ಅನೇಕ ಒಳ ಪಂಗಡಗಳಿರುವುದು ಸ್ಪಷ್ಟ. ಬಹು ಹಿಂದೆಯೇ ಅರಣ್ಯದಿಂದ ಊರಿನ ಕಡೆ ಬಂದ ಬೇಡರು ಹಿಂದೂ ಜಾತಿವ್ಯವಸ್ಥೆಯಲ್ಲಿ ಸೇರಿಕೊಂಡು ಸ್ಥಳೀಯ ದೇವರುಗಳನ್ನು ಆರಾಧಿಸುತ್ತಾ ಊರಿನವರಾಗಿ ಪರಿವರ್ತಿತರಾದ ಊರಬೇಡರು ಇಂದು ಎಲ್ಲರಿಗಿಂತಲೂ ಜಾಗೃತರಾಗಿ ಮುನ್ನಡೆದಿದ್ದಾರೆ. 'ಅರಣ್ಯದಲ್ಲಿ ವಾಸವಾಗಿ ಕಾಲಕ್ರಮೇಣ ಹಳ್ಳಿ, ನಗರಗಳಿಗೆ ವಲಸೆ ಬಂದವರು ಮ್ಯಾಸಬೇಡರು ಎನ್ನಲಾಗಿದೆ. ಈ ಮ್ಯಾಸಬೇಡರು ಇಂದಿಗೂ ಬುಡಕಟ್ಟಿನ ಹಲವು ಲಕ್ಷಣಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ[೨೫] ಕಾಳಹಸ್ತಿ ತಪ್ಪಲಿನಲ್ಲಿ ಹರಿಯುವ ಸ್ವರ್ಣಮುಖಿ ನದಿ ದಡದಲ್ಲಿ ಬೇಡರು ವಾಸಮಾಡುತ್ತಿದ್ದರು. ಇವರು ಬೇಟೆಯಾಡಿ ಪ್ರಾಣಿಗಳ ಮಾಂಸವನ್ನು ಸುಟ್ಟು ತಿನ್ನುತ್ತಿದ್ದುದರ ಜೊತೆಗೆ ಬದರಕ್ಕಿಯನ್ನು ಉಪಯೋಗಿಸುತ್ತಿದ್ದರು ಈ ಕಾಳಹಸ್ತಿಯಿಂದ ಬೇಡರು ವಲಸೆ ಆರಂಭಿಸಿ ಕರ್ನಾಟಕದ ಮೊಳಕಾಲ್ಮೂರು ಪ್ರದೇಶದ ಕಮರಕಾವಲು ಮೂಲಕ ನಾಯಕನಹಟ್ಟಿ ಸಮೀಪ ಹೊಸಗುಡ್ಡಕ್ಕೆ ಬಂದು ತಂಗಿದ್ದು ತಿಳಿದು ಬರುತ್ತದೆ. ಈ ರೀತಿ ಪ್ರಾಚೀನ ಕಾಲದಿಂದಲೂ ವಲಸೆಯ ಉಲ್ಲೇಖವಿದೆ. ಅರಣ್ಯದಿಂದ ನಗರಕ್ಕೆ ವಲಸೆ ಬಂದ ಬೇಡರಲ್ಲಿ ತಾನೂ ಒಬ್ಬ ಎಂದು ಧರ್ಮವ್ಯಾಧ ಹೇಳಿಕೊಳ್ಳುತ್ತಾನೆ.[೨೬] ಪುರಾಣಗಳಲ್ಲದೆ, ಐತಿಹಾಸಿಕ ದಾಖಲೆಗಳಲ್ಲಿಯೂ ವಲಸೆಯನ್ನು ಉಲ್ಲೇಖಿಸಲಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಬೇಡರಿಗೆ ರಾಜಕೀಯ ಮತ್ತು ಸೈನಿಕ ವೃತ್ತಿಯ ಮಾನ್ಯತೆ ದೊರೆತ ಕಾರಣ ವಿವಿಧ ಭಾಗಗಳಿಂದ ವಿಜಯನಗರಕ್ಕೆ ವಲಸೆ ಬಂದರು. ಈ ಬುಡಕಟ್ಟಿನವರು ವಿಜಯನಗರ ಅವನತಿ ನಂತರ ವಿವಿಧ ಪ್ರದೇಶಗಳಿಗೆ ವಲಸೆ ಹೋಗುವುದು ಸ್ಪಷ್ಟ. ಇಂದು ಆಂಧ್ರ, ತಮಿಳುನಾಡುಗಳಲ್ಲಿ ನೆಲಸಿರುವ ಬೇಡರು ನಾವು ವಿಜಯನಗರದಿಂದ ವಲಸೆ ಬಂದವರೆಂದು ಹೇಳಿಕೊಳ್ಳುತ್ತಾರೆ. ಮುಸ್ಲಿಂ ದಾಳಿಯ ಕಾರಣ ಆಂಧ್ರದಿಂದ ಕರ್ನಾಟಕಕ್ಕೆ ಬಂದ ಬೇಡರು ಮುಸ್ಲಿಂ ಆಳ್ವಿಕೆಯ ವಿರುದ್ಧ ವಿಜಯನಗರದ ಅರಸರಿಗೆ ಸೈನ್ಯದಲ್ಲಿ ಸೇರಿ ಸಹಾಯ ಮಾಡಿದ ವಿಷಯ ತಿಳಿಯುತ್ತದೆ.

ಬೇಡರು ಮೂಲತಃ ಆಂಧ್ರದಿಂದ ವಲಸೆ ಬಂದರೆಂಬ ಪ್ರತೀತಿ ದಟ್ಟವಾಗಿ ಹಬ್ಬಿದೆ. ಹೀಗಾಗಿ ಅಲ್ಲಿಂದ ಬಂದ ಬೇಡ ತಮ್ಮ ಮಾತೃಭಾಷೆಯಾದ ತೆಲುಗನ್ನೇ ಮಾತನಾಡುತ್ತಾರೆ. ಇವರ ಪೂರ್ವಿಕರು ಆಂಧ್ರದ ಶ್ರೀಶೈಲ, ಕದಿರಿ, ತಿರುಪತಿ, ಕಾಳಹಸ್ತಿ, ಅಹೋಬಲಂ, ಪೆನ್ನೋಬಳಂ ಇತರ ಸ್ಥಳಗಳಿಂದ ವಲಸೆ ಬಂದರೆಂದು ನಂಬಿಕೊಂಡಿದ್ದಾರೆ.

ನಾಯಕನಹಟ್ಟಿಬಖೈರು, ಜರಿಮಲೆ ವಂಶಾವಳಿಗಳಲ್ಲಿ ಆಂಧ್ರದ ಕದ್ರಿ, ಕಂಚಿ, ಕಾಳಹಸ್ತಿ, ಶ್ರೀಶೈಲಗಳಿಂದ ಬಂದರೆಂತಲೂ ಉಲ್ಲೇಖಿಸಲಾಗಿದೆ.[೨೭] ಬೇಡರ ಕೆಲವು ದಾಖಲೆಗಳಲ್ಲಿ ಕ್ರಿಸ್ತಶಕ ಆರಂಭದಿಂದಲೂ ಬೇಡರು ಕನ್ನಡನಾಡಿನಲ್ಲಿದ್ದರೆಂದು ತಿಳಿದುಬರುತ್ತದೆ.[೨೮] ವಿಜಯನಗರ ಪೂರ್ವದ ಅರಸ ಕಂಪಿಲರಾಯನ ತಂದೆ ಮುಮ್ಮಡಿಸಿಂಗನಾಯಕ ಮೊಳಕಾಲ್ಮೂರು ತಾಲೂಕಿನ ಜಟ್ಟಂಗರಾಮೇಶ್ವರನ ಪರಮಭಕ್ತ ಎಂದಾಗ ಅವನ ಮೂಲ ಈ ಭಾಗವೇ ಇರಬೇಕು? ಇವನು ಆಂಧ್ರದ ಕಡೆಯಿಂದ ಜಟಂಗ ರಾಮೇಶ್ವರಕ್ಕೆ ಬಂದು ನಂತರ ಹೊಸಮಲೆದುರ್ಗದಲ್ಲಿ ತಂಗುತ್ತಾನೆ. ಪ್ರಕ್ಷುಬ್ಧ ವಾತಾವರಣವು ಇಲ್ಲಿ ತಿಳಿಯಾದಾಗ ಬಹುಶಃ ಕುಮ್ಮಟಕ್ಕೆ ಧಾವಿಸಿ ರಾಜ್ಯ ಸ್ಥಾಪನೆ ಮಾಡಿರಬೇಕು. ಇಲ್ಲಿ ಬೇಡರನ್ನು ಅಧ್ಯಯನಿಸುವಾಗ ಊರುಬೇಡರು ಮತ್ತು ಮ್ಯಾಸಬೇಡರು ಎಂದು ವಿಭಾಗಿಸಿಕೊಳ್ಳಬೇಕಾಗುತ್ತದೆ. ಊರುಬೇಡರು ಮುಂದುವರೆದ ನಾಗರಿಕರು. ಮ್ಯಾಸಬೇಡರು ಬುಡಕಟ್ಟು ಲಕ್ಷಣಗಳಿರುವವರಾಗಿದ್ದು, ಗುಡ್ಡಗಾಡುಗಳಲ್ಲಿ ವಾಸಿಸುತ್ತಾರೆ.[೨೯] ಇವರಲ್ಲಿ ಶೈವ ಮತ್ತು ವೈಷ್ಣವ ಎಂಬೆರಡು ಸಂಪ್ರದಾಯಗಳಿವೆ. ನಾಯಕನಹಟ್ಟಿ ಬಖೈರುವಿನಲ್ಲಿ ಎಂ.ವಿ.ಚಿತ್ರಲಿಂಗಯ್ಯ ಅವರು ' ಈ ಪಾಳೆಯಗಾರರ ಮೂಲಪುರುಷನಾದ ಕಾಟೇಮಲ್ಲನಾಯಕನು ಮೊದಲಿಗೆ ಶ್ರೀಶೈಲಪರ್ವತದ ಕಾಡಿನಲ್ಲಿ ಪಶುಪಾಲನೆ ಮಾಡಿಕೊಂಡಿದ್ದನು. ಹದಿನಾರನೇ ಶತಮಾನದ ಪೂರ್ವಭಾಗದಲ್ಲಿ ಶ್ರೀಶೈಲಗಿರಿಯ ಸುತ್ತ-ಮುತ್ತ ಕ್ಷಾಮ-ಢಾಮರಗಳು ಬಂದೊದಗಲಾಗಿ, ಕಾಟೇಮಲ್ಲನಾಯಕನು ಅಲ್ಲಿಂದ ದಕ್ಷಿಣ ಹಾಗೂ ನೈಋತ್ಯ ದಿಕ್ಕಿನತ್ತ ವಲಸೆ ಹೊರಟನು. ಈ ಘಟನೆ ನಡೆದುದು ಕ್ರಿ.ಶ.೧೫೨೭ರಲ್ಲಿ ಎಂದು ತಿಳಿದುಬರುತ್ತದೆ.[೩೦]

ಈ ರೀತಿ ವಲಸೆ ಬಂದ ಕಾಟೇಮಲ್ಲನಾಯಕನು ಗುರುಗುಹೇಶ್ವರ ಬೆಟ್ಟಕ್ಕೆ ಪೂರ್ವಭಾಗದಲ್ಲಿ ತಂಗಿದ್ದು, ತನ್ನ ಕಂಪಳಕ್ಕೆ ಹಟ್ಟಿ ಕಟ್ಟಿಕೊಂಡು, ೧೨ ಪೆಟ್ಟಿಗೆ ದೇವರುಗಳ ಸಮೇತ ಪಶುಪಾಲನೆಯೊಂದಿಗೆ ನೆಲಸಿದನು. ಇಲ್ಲೇ ಅಲ್ಲದೆ ಜಗಳೂರು ತಾಲೂಕಿನ ಜನಿಗೇನಹಳ್ಳಿ, ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿ, ಕಮರದಕಾವಲು (ಮೊಳಕಾಲ್ಮೂರು ತಾಲ್ಲೂಕು) ಮುಂತಾದ ಸ್ಥಳಗಳಲ್ಲಿ ನೆಲಸಿರುವುದು ಗಮನೀಯ ಸಂಗತಿ. ಬೇಡರು ತಮ್ಮ ಕಟ್ಟೆಮನೆಯನ್ನಾಗಿ ನಾಯಕನಹಟ್ಟಿಯನ್ನು ಮಾಡಿಕೊಂಡು ರಾಜ್ಯಭಾರ ಮಾಡಿದ್ದು ತಿಳಿದುಬರುತ್ತದೆ.

ಗುಮ್ಮನಾಯಕನಪಾಳ್ಯದ ಪಾಳೆಯಗಾರರು ವಿಜಯನಗರ ಪೂರ್ವದಲ್ಲಿ ಪಾಳೆಪಟ್ಟು ಕಟ್ಟಿ ಆಳ್ವಿಕೆ ನಡೆಸಿದವರು. ಇವರು ಮೂಲತಃ ಆಂಧ್ರದಿಂದ ಬಂದವರು. ವಿಜಯನಗರದ ಅರಸರು ಇವರ ಪ್ರದೇಶಗಳನ್ನು ವಶಪಡಿಸಿಕೊಂಡಾಗ ಈ ಪಾಳೆಯಪಟ್ಟು ಅವರಿಗೆ ಸೇರಿತು. 'ಯುದ್ಧದಲ್ಲಿ ಸೋತ ಪಾಳೆಯಗಾರರು ವಿಜಯನಗರದ ಅರಸರೊಂದಿಗೆ ಒಪ್ಪಂದ ಮಾಡಿಕೊಂಡು ವರ್ಷಕ್ಕೆ ಇಂತಿಷ್ಟು ಹಣ ನೀಡುವುದಾಗಿ ಹಾಗೂ ವಿಜಯನಗರದಲ್ಲಿ ಇನ್ನೂರು ಮಂದಿಯನ್ನು ಅರಸನ ಚಾಕರಿಗೆ ಕಳಿಸಿಕೊಡುವುದಾಗಿ ಒಪ್ಪಿಕೊಂಡರು ಇಂಥ ಒಪ್ಪಂದ ಹೈದರ್, ಟಿಪ್ಪುವಿನ ಆಕ್ರಮಣದವರೆಗೂ ಮುಂದುವರೆಯಿತು. ನಂತರ ಗುಮ್ಮನಾಯಕನಪಾಳ್ಯ, ಮೈಸೂರು ಅರಸರ ಆಳ್ವಿಕೆಗೆ ಸೇರಿಕೊಂಡಿತು. ಸೈನಿಕರಾಗಿ, ಸೇವಕರಾಗಿ, ಹಿಂದೂಪುರ ಮತ್ತು ಕದರಿ ತಾಲೂಕುಗಳಿಂದ ಬಂದ ಬೇಡರು ಕರ್ನಾಟಕದಲ್ಲಿಯೇ ನಿಂತರು ಎನ್ನುವುದರಲ್ಲಿ ಅನುಮಾನವಿಲ್ಲ.

ಚಿತ್ರದುರ್ಗದ ನಾಯಕ ಅರಸರು ಸಹ ಉತ್ತರದ ದೆಹಲಿಯಿಂದ ಬಂದವರೆಂಬ ದಂತಕಥೆಯಿದೆ. 'ಉತ್ತರ ದೇಶದಲ್ಲಿ ಜಡಕಲ್ಲುದುರ್ಗದಿಂದ ದಿಳ್ಳೀನಾಡ ತಳವಾರರಾದ ವಾಲ್ಮೀಕಿ ಗೋತ್ರದವರೆಂದು ಹೇಳಲ್ಪಡುವ ಕಾಮಗೇತಿ ವಂಶದ ಸಬ್ಬಗಡಿ ಓಬನಾಯಕ, ಜಡವಿನಾಯಕ, ಬುಳ್ಳನಾಯಕ, ಈ ಮೂವರು ಅಣ್ಣ-ತಮ್ಮಂದಿರು ಉತ್ತರದೇಶದ ಅವಾಂತರದಿಂದ ತಮ್ಮ ಮನೆದೇವರು ಅಹೋಬಲ ನರಸಿಂಹ ಮೂರ್ತಿಯ ಪೆಟ್ಟಿಗೆ, ತುರು, ಕುರಿ ಕೊಲ್ಲಾರಿ, ಮುಂತಾದ

ಕಂಪಳವನ್ನು ತೆರಳಿಸಿಕೊಂಡು ದಕ್ಷಿಣ ದೇಶಕ್ಕೆ ಬಂದರಂತೆ.[೩೧] ಬಂದವರೇ ದಾರಿಯಲ್ಲಿ ಹಂಪೆ ವಿರೂಪಾಕ್ಷನ ದರ್ಶನ ಪಡೆದು ಮುಂದೆ ಸಾಗುತ್ತಾ ಜಗಳೂರು ತಾಲೂಕಿನ ಬಿಳಿಚೋಡು ಎಂಬಲ್ಲಿಗೆ ಬಂದು ನೆಲಸಿದರಂತೆ. ಜನರ ಮತ್ತೊಂದು ವಾದದ ಪ್ರಕಾರ ಇವರ ಮೂಲ ದೆಹಲಿಯಲ್ಲ, ಮುಸ್ಲಿಂಮರ ಆಕ್ರಮಣ ತಾಳಲಾರದೆ ಆಂಧ್ರದಿಂದ ಕರ್ನಾಟಕಕ್ಕೆ ಬಂದವರೆಂದು ತಿಳಿಸುತ್ತಾರೆ. ಇವರ ಮೂಲವಾದ ಜಡಕಲ್ಲುದುರ್ಗ, ಕರೆಮಲೆ ಮತ್ತು ರಾಯದುರ್ಗಗಳು ಕರ್ನೂಲು ಅನಂತಪುರ ಜಿಲ್ಲೆಗಳಲ್ಲಿವೆ. 'ಇವರ ಮೂಲ ಮನೆಯ ದೇವರಾದ ಅಹೋಬಲನರಸಿಂಹ ದೇವಾಲಯ ಕರ್ನೂಲು ಜಿಲ್ಲೆಯ ಅಲ್ಲಗದ್ದ ತಾಲ್ಲೂಕಿನಲ್ಲಿದೆ. ಹೀಗಾಗಿ ಚಿತ್ರದುರ್ಗದ ಪಾಳೆಯಗಾರರ ಮೂಲವು ಆಂಧ್ರಪ್ರದೇಶವೆಂದು ಈ ಲಕ್ಷಣಗಳಿಂದ ಹೇಳಬಹುದು. ಜರಿಮಲೆಯ ಬೇಡ ಪಾಳೆಯಗಾರರು ಕಂಚಿಯಿಂದ ಬಂದವರೆಂದು ತಿಳಿದುಬರುತ್ತದೆ.[೩೨] ಇಂದಿಗೂ ಕಂಚಿ, ಕಾಳಹಸ್ತಿ ಬೇಡರ ಧಾರ್ಮಿಕ ಕೇಂದ್ರಗಳು ಆಗಿವೆ.

ಉತ್ತರ ಕರ್ನಾಟಕದ ಅತಿ ದೊಡ್ಡ ಮತ್ತು ಪ್ರಸಿದ್ಧಿ ಪಡೆದ ಪಾಳೆಯಗಾರರ ಸಂಸ್ಥಾನವಾದ ಸುರಪುರದ ನಾಯಕರು ಸಹ ಮೂಲತಃ ವಲಸೆ ಬಂದವರು. ಈ ಸಂಸ್ಥಾನದ ಅರಸ 'ಕಲ್ಲಪ್ಪ ನಾಯಕನು ಸಾರಂಗಕೊಳ್ಳದಿಂದ ತುಂಬಳಕ್ಕೆ ಬಂದು ತುಂಬಳದಿಂದ ಕಂಪಿಲಿ, ಗಂಗಾವತಿ, ತಾವರಗೇರಿಯ ಮಾರ್ಗಹಿಡಿದು ಮುದುಗಲ್ಲಿಗೆ ಬಂದನು ಎಂದು ತಿಳಿಸಿದ್ದಾರೆ.[೩೩] ಈ ಸುರಪುದರವರು ವಿಜಯನಗರದ ಅಧೀನದಲ್ಲಿದ್ದು, ಆನೆಗುಂದಿ ದೊರೆಗಳ ಆಜ್ಞೆಯನ್ನು ಪಾಲಿಸುತ್ತಿದ್ದರು. ಆಂಧ್ರದೊಡನೆ ವೈವಾಹಿಕ ಸಂಬಂಧ ಹೊಂದಿರುವುದೇ ಮೇಲಿನದಕ್ಕೆ ಸಾಕ್ಷಿ. ಈ ಅರಸರು ಬೇರೆ ಬೇರೆ ಕಡೆ ಹೋಗಿ ರಾಜ್ಯಾಳ್ವಿಕೆ ನಡೆಸಿದ್ದಾರೆ. ಉತ್ತರಕ್ಕೆ ಹೋಗಿ ಬಲ್ಲರ ಅರಸರಾಗುವುದು ಗಮನಾರ್ಹ.[೩೪]

ಬೇಡರು ಪಂಜಾಬಿನ ಗಿರಿಶಿಖರಗಳಿಂದ ಬಂದವರೆಂದು, ಇವರಿಗೆ ಬಲ್ಲರು, ನಾಯಕರು ಮತ್ತು 'ಬೇರಾರು' ಎಂದು ಕರೆಯುತ್ತಿದ್ದರೆಂದು, ಮಧ್ಯಪ್ರದೇಶದಲ್ಲಿರುವ ನಾಯಕರು ಬೊಂಬಾಯಿ, ಸಿಂಧೂದೇಶ, ಗುಜರಾತ್, ಮಹಾರಾಷ್ಟ್ರಗಳಲ್ಲಿರುವ ಬೇಡರು ರಾಮೋಶಿಗಳು ಹಾಗೂ ಡೆಕ್ಕನ್ ಭೂಮಿ ಮತ್ತು ಉತ್ತರ ಇಂಡಿಯದಲ್ಲಿರುವ 'ಬಾಲ್‌ಮೀಕಿ' (ವಾಲ್ಮೀಕಿ) ನಾಯಕರು ಒಂದೇ ಎಂದು ಕರೆದಿದ್ದಾರೆ.[೩೫]

ಮೇಲಿನಂತೆ ಬೇಡರು ಬೇಟೆ, ಪಶುಪಾಲನೆ, ಕೃಷಿ ಹೀಗೆ ವಿವಿಧಹಂತಗಳಲ್ಲಿ ಸ್ಥಿತ್ಯಂತರ ಹೊಂದಿದ್ದು ಸ್ಪಷ್ಟ. ಬೇಟೆ, ಪಶುಪಾಲನೆ, ಮೂಲಕ ಬಂದವರು ಪಾಳೆಯಪಟ್ಟುಗಳನ್ನು ಸ್ಥಾಪಿಸಿ ಆಳ್ವಿಕೆ ನಡೆಸಿದ್ದು ಗಮನಾರ್ಹ ಸಂಗತಿ. ೧೩-೧೪ನೇ ಶತಮಾನದಲ್ಲಿ ಇವರು ಆಂಧ್ರದಿಂದ ಬಂದರೆಂಬ ವಾದವು ಪರಿಶೀನಾರ್ಹವಾಗಿದೆ. ಬೇಡರ ಸಮುದಾಯದ ಕೆಲವು ಹಸ್ತಪ್ರತಿಗಳಲ್ಲಿ ಗಂಗಾ, ತಪತಿ, ನರ್ಮದಾ, ವಿಂದ್ಯಾಪರ್ವತ ದಾಟಿ ಗೋದಾವರಿ, ಕೃಷ್ಣ ನದಿಗಳ ಮುಖಾಂತರ ತುಂಗಭದ್ರಾ ಪ್ರದೇಶಕ್ಕೆ ಬಂದರೆಂದು ತಿಳಿಸಲಾಗಿದೆ. ಕರ್ನಾಟಕದ ಬೇಡರು ವಿಶೇಷವಾಗಿ ಶಿವಮೊಗ್ಗ, ತುಮಕೂರು, ಚಿತ್ರದುರ್ಗ, ಬಳ್ಳಾರಿಯ ಭಾಗಗಳಲ್ಲಿರುವವರು, ತಮ್ಮ ಮೂಲವನ್ನು ಹಂಪೆ-ಆನೆಗೊಂದಿ ಎಂದು ಹೇಳಿಕೊಳ್ಳುತ್ತಾರೆ. ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲಿ ಈ ಬೇಡರ ವಲಸೆ ಅವ್ಯಾಹತವಾಗಿ ದ್ವಿಗುಣಗೊಂಡಂತಿದೆ. ಬೇಟೆಯಾಡಲಿಕ್ಕೂ ಪ್ರಾದೇಶಿಕವಾಗಿ ವಲಸೆ ಹೋಗುತ್ತಾರೆ.

ಒಟ್ಟಾರೆಯಾಗಿ ಬೇಡರು ಯಾವ ಕಡೆಯಿಂದ ವಲಸೆ ಬಂದರೂ ನೆಲೆ ಮಾತ್ರ ಕರ್ನಾಟಕವೆ ಆಗಿದೆ ಎಂದೇ ಹೇಳಬಹುದು. ಬೇಟೆಯಾಡುವಾಗ, ಪಶುಪಾಲನೆ ಮಾಡುವಾಗ ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗಿರಬೇಕಷ್ಟೆ. ಆಗ ಅನೇಕ ಸ್ಥಳಗಳಲ್ಲಿ ತಂಗಿದ್ದು ಈ ವಲಸೆ ನಿರಂತರ ನಡೆದಿರಬೇಕು. ವಲಸೆ ನಾನಾ ಕ್ಷೇತ್ರಗಳಿಗೆ ತೀವ್ರತರವಾದ ಪರಿಣಾಮ

ಬೀರಿತು. ಕರ್ನಾಟಕ, ಕೇರಳ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿ ಹೆಚ್ಚಿನ ವಲಸೆ ಕಂಡುಬರುತ್ತದೆ. ಮೈಸೂರು ಭಾಗದ ಬೇಡರು ಮೂಲತಃ ಹಂಪಿಯಿಂದ ವಲಸೆ ಹೋದರೆಂದು ತಿಳಿಸುತ್ತಾರೆ. ಹೀಗೆ ಅನೇಕ ಪ್ರತೀತಿಗಳು ಈ ಬಗ್ಗೆ ತಿಳಿಸುತ್ತವೆ. ಸ್ವಾತಂತ್ರ್ಯನಂತರ ಕೈಗಾರಿಕೆ, ಗಣಿ, ಉದ್ದಿಮೆಗಳು ಬೆಳೆದಾಗ, ನದಿ ಆಣೆಕಟ್ಟುಗಳ ನಿರ್ಮಾಣ, ರೈಲು-ವಿಮಾನ ನಿಲ್ದಾಣಗಳು, ಕಾರ್ಖಾನೆಗಳು, ಹೋಟೆಲುಗಳು ಶಾಲಾ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸಲು ವಲಸೆ ಹೋಗುವುದು ಕಂಡುಬರುತ್ತದೆ. ವಲಸೆಯ ಪರಿಣಾಮಗಳಿಂದ ಬೇಡರು ಬದುಕು ಸುಧಾರಿಸಿರುವುದು ಕಂಡುಬರುತ್ತದೆ. ಇಂದು ಬೆಂಗಳೂರು, ಚೆನ್ನೈ, ಕಲ್ಕತ್ತಾ, ದೆಹಲಿ, ಮುಂಬಾಯಿ, ಮೊದಲಾದ ಮಹಾನಗರಗಳಿಗೆ ಅಭಿವೃದ್ಧಿ ನೆಪದಲ್ಲಿ ವಲಸೆ ಹೋಗುವುದು ಹೆಚ್ಚಾಗಿದೆ.

ಟಿಪ್ಪಣಿಗಳು

೧. ಬಿ.ಎ.ವಿವೇಕ ರೈ : ಅನ್ವಯಿಕ ಜಾನಪದ, ಪು.೧೨

೨. ಅದೇ: ಪು. ೧೩

೩. ಗ್ರಾಮಜ್ಯೋತಿ, ಪು. ೨೪೧

೪. ನೋಡಿ:ಮಲೆನಾಡು ಶೈವ ಒಕ್ಕಲಿಗರು :ಜಾನಪದೀಯ ಅಧ್ಯಯನ, ೧೯೯೪, ಪು.೧೩೪

೫. ಟಿ.ಎಂ. ಪಂಡಿತ : ನಮ್ಮ ಅರಣ್ಯಗಳು, ಪು. ೬

೬. ಕಮಲಾಪುರದ ಬೇಡರು ಯುಗಾದಿ ಬೇಟೆಗೆ ಹೊರಡುವಾಗ ಆನೆಗೊಂದಿ ದೊರೆಯ ಅಪ್ಪಣೆ ಪಡೆಯುತ್ತಾರೆ. ಆ ದೊರೆ ಬಂದು ಚಾವಡಿ ಕಟ್ಟೆಯ ಮೇಲೆ ಕುಳಿತುಕೊಂಡ ಮೇಲೆ ಬೇಡರು ಧೈರ್ಯವಾಗಿ ಬೇಟೆಗೆ ಹೊರಡುತ್ತಾರೆಂದು ಮೀಸಲು ಜೋಗಯ್ಯನವರು ತಿಳಿಸುತ್ತಾರೆ. ಈ ಹಿನ್ನೆಲೆಯಲ್ಲಿ ಹಿಂದಿನಿಂದ ಇದಕ್ಕೆ ರಾಜರ ಪ್ರೋತ್ಸಾಹವಿತ್ತೆನ್ನಬಹುದು.

೭. ದಿ ಕರ್ನಾಟಕ ಫಾರೆಸ್ಟ್ ಆಕ್ಟ್, ೧೯೬೩, ಪು.೩೬.

೮. ಅದೇ: ಪು. ೧೬-೧೭

೯. ವಿ.ಎಸ್.ನಾರಾಯಣರಾವ್ : ಮಹಾತ್ಮರ ಮಾರ್ಗ, ಪು. ೬೪-೬೫

೧೦. ಟಿ.ಎಂ.ಪಂಡಿತ : ನಮ್ಮ ಅರಣ್ಯಗಳು, ಪು.೪೫

೧೧. ಅದೇ: ಪು. ೪೩

೧೨. ಸಿ.ಎಚ್. ಬಸಪ್ಪನವರ್: ಹುಲಿಸಾಮ್ರಾಜ್ಯ, ಪು. ೧೦

೧೩. ನೋಡಿ: ಪಶುಚಿಂತಕ, ಸಂ-೪, ಸಂ-೩, ನಂ-೨೨೮, ಬೆಂಗಳೂರು, ಜುಲೈ- ೧೯೯೯. ಇದರಲ್ಲಿ ೧೩.೭.೧೯೯೯ರಂದು ಪ್ರಾಣಿದಯಾವೇದಿಕೆ ಅಸ್ತಿತ್ವದ ಬಗ್ಗೆ, ವನ್ಯಪ್ರಾಣಿಗಳ ಸಂರಕ್ಷಣೆ ಕುರಿತ ವಿಷಯಗಳು ಬೆಳಕು ಚೆಲ್ಲುತ್ತವೆ.

೧೪. ಹೀಗೆ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಗಡಿಭಾಗದ ಗಲಗಲ್ಲು ಎಂಬ ಗ್ರಾಮದಲ್ಲಿ ಕೋತಿಯನ್ನು ಕೊಂದ ಕಾರಣಕ್ಕೆ ಮನುಷ್ಯನಂತೆ ಶವಸಂಸ್ಕಾರ ಮಾಡಿದ ಬಗ್ಗೆ ಶಾಸನವಿದೆ(೧೯೯೧).

೧೫. ಆನ್ವಯಿಕ ಜಾನಪದ, ಪು.೧೩

೧೬. ಎ.ಆರ್. ಕಟ್ಟಿ : ಭಾರತೀಯ ಸಮಾಜ ಅಧ್ಯಯನ, ೧೯೯೧, ಪು.೨೨೫-೨೬

೧೭. ತೀ.ನಂ.ಶಂಕರನಾರಾಯಣ: ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ೧೯೮೨, ಪು.೨

೧೮. ಕೃಷ್ಣಮೂರ್ತಿ ಹನೂರು : ಮ್ಯಾಸಬೇಡರ ಸಂಸ್ಕೃತಿ, ೧೯೯೩, ಪು.೧೯೧

೧೯. ನೋಡಿ : ಬಾಂಬೆ ಗ್ಯಾಸೆಟಿಯರ್, ಬೆಳಗಾಂ ಡಿಸ್ಟ್ರಿಕ್ಟ್, ೧೮೮೫, ಪು.೧೬೬

೨೦. ಮ್ಯಾಸಬೇಡರ ಸಂಸ್ಕೃತಿ, ಪು.೧೯೨

೨೧. ಅದೇ : ಪು.೨೦೨

೨೨. ಬೀದರ್, ಗುಲ್ಬರ್ಗಾ, ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಬೇಡ ಜನಾಂಗಕ್ಕೆ ಸೇರಿದ ಯುವಕರು ಮಲಹೋರುವುದರ ಬಗ್ಗೆ ತಿಳಿದುಬಂದಿತು. ಈ ಸಂದರ್ಭದಲ್ಲಿ ಸಹಕರಿಸಿದ ಪ್ರೊ.ಚೆನ್ನಣ್ಣವಾಲೀಕಾರ ಅವರನ್ನು ಸ್ಮರಿಸುವೆ.

೨೩. ಮ್ಯಾಸಬೇಡರ ಸಂಸ್ಕೃತಿ, ಪು. ೨೦೫-೨೦೬

೨೪. ಆರ್. ಎಸ್. ಶರ್ಮ : ಪ್ರಾಚೀನ ಭಾರತ, ಪು. ೭೫

೨೫. ನಾಯಕ ಜನಾಂಗದ ಇತಿಹಾಸ, ಪು. ೨೩

೨೬. ಎಂ.ಪಿ.ವೀಣಾ : ಊರುನಾಯಕರ ಮತ್ತು ಮ್ಯಾಸನಾಯಕರ ಗೃಹವಾಸ್ತುಶಿಲ್ಪ, ೧೯೯೫, ಪು. ೧೨.

೨೭. ಚಂದ್ರವಳ್ಳಿ, ೧೯೭೬, ಪು. ೩೭

೨೮. ಮೊಳಕಾಲ್ಮುರು ತಾಲೂಕು ಮರ್ಲಹಳ್ಳಿಯ ಯರಗೊಡ್ಲಯ್ಯನ ಬಳಿಯಿರುವ ದಾಖಲೆಗಳಲ್ಲಿ ಈ ಸಂಗತಿ ತಿಳಿದುಬರುತ್ತದೆ.

೨೯. ನೋಡಿ: ಎಂ.ಎಸ್.ಪುಟ್ಟಣ್ಣ: ಚಿತ್ರದುರ್ಗದ ಪಾಳಯಗಾರರು, ೧೯೯೭, ಪು.೧

೩೦. ಬಚ್ಚುಗತ್ತಿ, ೧೯೮೭, ಪು.೫

೩೧. ಚಿತ್ರದುರ್ಗದ ಪಾಳಯಗಾರರು, ಪು. ೧೪

೩೨. ಚಂದ್ರವಳ್ಳಿ, ೧೯೭೬, ಪು. ೩೭

೩೩. ಸುರಪುರ ಸಂಸ್ಥಾನ ಇತಿಹಾಸ, ೧೯೭೭, ಪು.೧

೩೪. ನೋಡಿ: ಸೈಯದ್ ಸಿರಾಜ್ ಉಲ್ ಹಸನ್ : ದಿ ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಎಚ್.ಇ.ಎಚ್.ನಿಜಾಮ್ಸ್ ಡಾಮಿನಿಯನ್ಸ್, ೧೯೮೯, ಪು. ೩೫.

೩೫. ಬನ್ನವತ್ತಳೆ, ಅಖಿಲಭಾರತ ನಾಯಕ ಕಲ್ಯಾಣಸಂಘ, ಬೆಳಗಾವಿ, ಪು.೭

* * *

ಅಧ್ಯಾಯ - ೭

ಪ್ರಚಲಿತ ಬೇಟೆ ಮತ್ತು ಬೇಟೆಸಂಬಂಧಿ ನಂಬಿಕೆ, ಆಚರಣೆ, ಸಂಪ್ರದಾಯಗಳ ನೆಲೆಯಲ್ಲಿ ಬೇಡ ಜನಾಂಗದ ಸ್ಥಿತಿ-ಗತಿ

ಪ್ರಚಲಿತ ಬೇಟೆ ಮತ್ತು ಬೇಟೆಸಂಬಂಧಿ ನಂಬಿಕೆ, ಆಚರಣೆ, ಸಂಪ್ರದಾಯಗಳ ನೆಲೆಯಲ್ಲಿ ಬೇಡ ಜನಾಂಗದ ಸ್ಥಿತಿ-ಗತಿ

ಮಾನವ ನಿಸರ್ಗದೊಂದಿಗೆ ಜೀವನ ಆರಂಭಿಸಿದಾಗ ಅವನ ಬದುಕಿಗೆ ಎರಡು ಬಗೆಯ ವೃತ್ತಿಗಳನ್ನು ಕೈಗೊಂಡ. ಒಂದನೆಯದು ಕಾಡಿನಲ್ಲಿ ಗೆಡ್ಡೆ-ಗೆಣಸು ಅಗೆಯುವುದು ಮತ್ತು ಎರಡನೆಯದು ಕಾಡುಪ್ರಾಣಿಗಳನ್ನು ಬೇಟೆಯಾಡುವುದು. ಆಹಾರ ಸಂಗ್ರಹಣೆಯಲ್ಲಿ ಈ ಎರಡು ವೃತ್ತಿಗಳು ಅವನಿಗೆ ಬಂಡವಾಳದ ಮೂಲವಾಗಿದ್ದವು. ವ್ಯವಸಾಯ ವಿಧಾನವನ್ನು ತಿಳಿಯುವ ಮುನ್ನ ಮಾನವ ಹಣ್ಣು-ಹಂಪಲುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದನು. ಇಂದಿಗೂ ಕೆಲವು ಬೇಡರು ಗಿರಿ-ಪರ್ವತ, ಅರಣ್ಯ ಪ್ರದೇಶದಲ್ಲಿ ಈ ವಿಧಾನವನ್ನು ಅನುಸರಿಸುತ್ತಾರೆ. ಹಣ್ಣು-ಹಂಪಲು, ಗೆಡ್ಡೆ-ಗೆಣಸು ಎಲ್ಲಾ ಋತುಮಾನಗಳಲ್ಲಿ ದೊರೆಯಲಾರದು; ನಿರ್ದಿಷ್ಟವಾದ ಋತುಮಾನದಲ್ಲಿ ಅಲೆದಾಡಿ ಆಹಾರಕ್ಕಾಗಿ ರುಚಿ ಬದಲಾವಣೆಯಿಂದ ಬೇಟೆಯನ್ನು ಒಂದು ವೃತ್ತಿ ಮಾಡಿಕೊಳ್ಳಬೇಕಾದ ಅನಿವಾರ್ಯ ಸ್ಥಿತಿ ಬಂದಿರಬೇಕು. ಇತ್ತೀಚಿನ ದಿನಗಳಲ್ಲಿ ಕಾಡಿನ ಗೆಡ್ಡೆ-ಗೆಣಸುಗಳನ್ನು ಕಡಿಯಲು ಉಪಯೋಗಿಸುವಲ್ಲಿನ, ಬಳಸುವ ಕಲ್ಲಿನ ಆಯುಧಗಳು ಅಲ್ಪಸ್ವಲ್ಪ ವಿಕಾಸ ಹೊಂದಿ ಕಾಡುಪ್ರಾಣಿಗಳನ್ನು ಕೊಲ್ಲುವ ಆಯುಧಗಳಾಗಿ ಅವನಿಗೆ ನೆರವಾದವು ಎಂದು ಹೇಳಬಹುದು. ಅಲೆದಾಟ ಜೀವನದಲ್ಲಿ ಹೊಸ ಆಯುಧಗಳ ಶೋಧನೆಯಲ್ಲಿ ಬಳುಕಾಡುವ ಮರದ ಸೆಬ್ಬೆಗೆ ದಾರವನ್ನು ಕಟ್ಟುವುದರ ಮೂಲಕ ಬಿಲ್ಲನ್ನು ಮಾಡಿಕೊಳ್ಳುವ ಮೂಲತತ್ವ ಹೊಳೆಯಿತು.[೧] ಅದೇ ಬಿಲ್ಲನ್ನು ಬಳಸುವಲ್ಲಿ ಹೊಸ ಪ್ರಯತ್ನ ಮಾಡಿಕೊಂಡು ಅದರಿಂದ ಕಾಡುಪ್ರಾಣಿಗಳನ್ನು ಗುರಿ ಇಟ್ಟು ಹೊಡೆಯುವ ತಂತ್ರ ಕಲಿತು, ಇನ್ನು ಬೇಟೆಯ ಆಯುಧಗಳ ಅನ್ವೇಷಣೆ ಮುಂದುವರೆಸಿದನು. ಯಾವ ಪ್ರಾಣಿ ಬಿಲ್ಲಿನ ಬಾಣಕ್ಕೆ ನಾಟುವುದಿಲ್ಲವೊ ಅಂತಹ ಪ್ರಾಣಿಗೆ ಕಲ್ಲಿನ ಆಯುಧಗಳನ್ನು ಬಳಸಿ ಜತೆಗೆ ಮರದ ಸಲಕರಣೆಗಳ ಮೂಲಕ ಭರ್ಚಿ, ಈಟಿ, ಗಂಡುಗೊಡಲಿ, ಕಂದ್ಲಿ, ತುರಾಯಿ ಮುಂತಾದ ಆಯುಧಗಳನ್ನು ಬಳಸಿದರು.

ಕಾಲ ಬದಲಾದಂತೆ ಮಾನವ ಭೂ ಕೃಷಿ ಮಾಡುವುದು ಕಲಿತ. ಆರಂಭದಲ್ಲಿ ಆದಿವಾಸಿಗಳು ಭೂ ವ್ಯವಸಾಯವನ್ನು ಕೆತ್ತು ಬೇಸಾಯದಿಂದ ಆರಂಭಿಸಿ, ಉಳುಮೆಗಾಗಿ ಪ್ರಾಣಿಗಳನ್ನು ಉಪಯೋಗಿಸಿಕೊಂಡರು. ಪಶುಪಾಲನೆ ಮಾಡುತ್ತಾ ಕಾಡು ಮತ್ತು ಸಾಧುಪ್ರಾಣಿಗಳನ್ನು ಹಿಡಿದು ಮನೆಗೆಲಸಕ್ಕಾಗಿ ಬಳಸಿಕೊಂಡರು. ಹಸು, ಎತ್ತು, ಕತ್ತೆ, ಕುದುರೆಗಳನ್ನು ಕೆಲಸಕ್ಕಾಗಿ, ಊರುಹಂದಿ, ಕುರಿ, ಕೋಳಿ, ಆಡು, ಇತರ ಪ್ರಾಣಿಗಳನ್ನು ಆಹಾರಕ್ಕಾಗಿ ಸಾಕಿಕೊಳ್ಳುತ್ತ ತನ್ನ ಮನೆಕಾಯಲು, ಬೇಟೆಯಲ್ಲಿ ತನಗೆ ಸಹಕರಿಸುವಂಥ, ನಿಷ್ಠೆಯಿಂದ ಇರುವ ನಾಯಿಯನ್ನು ಸಾಕುತ್ತಿದ್ದರು. ಅದಕ್ಕೆ ಬೇಟೆನಾಯಿಯೆಂದು ಕರೆಯಲಾಗುತ್ತಿತ್ತು. ಇದರಿಂದ ಬೇಟೆಗಾರನಿಗೆ ಬೇಟೆಯ ಶೋಧನಕ್ಕೆ ಅನುಕೂಲವಾಯಿತು. ಮಧ್ಯಶಿಲಾಯುಗದಲ್ಲಿ ನಾಯಿ ಉಲ್ಲೇಖವಿದೆ. ಬ್ರಿಟಿಷರ ಪೂರ್ವದಲ್ಲಿ ಇದು ಸಕ್ರೀಯವಾಗಿ ಬೇಟೆಯಲ್ಲಿ ತೊಡಗಿತ್ತು. ಮುಧೋಳನಾಯಿಗಳೆಂದು ಪ್ರಸಿದ್ಧಿಯಾಗಿವೆ. ಇಂದು ಕಳ್ಳರನ್ನು ಹಿಡಿಯಲು ಈ ನಾಯಿಗಳನ್ನು ಬಳಸುತ್ತಾರೆ. ಇದರ ಬಗ್ಗೆ ಮುಧೋಳರಾಜರು, ಮೊಳೋಜಿರಾವ್ ವೆಂಕಟರಾವ್ ಘೋರ್ಪಡೆ ಮತ್ತು ಭೈರವಸಿಂಗ್ ಮಹಾರಾಜರು ಆಸಕ್ತಿ ವಹಿಸಿದ್ದರು. ಜನರನ್ನು ಹಿಂಸಿಸುವ ಕ್ರೂರ ಮೃಗಗಳನ್ನು ಕೊಲ್ಲಲು ಈ ನಾಯಿಗಳ ಮೂಲಕ ಸನ್ನದ್ಧನಾದನು. ನಾನಾ ಕಾರಣಗಳಿಗಾಗಿ ಮಾನವನಿಗೆ ಬೇಟೆನಾಯಿಗಳು ಸಹಕಾರಿಯಾಗಿದ್ದವು.

ಕರ್ನಾಟಕದಲ್ಲಿ ಬೇಟೆಯನ್ನು ಅವಲಂಬಿಸಿಕೊಂಡು ಅದರಿಂದಲೇ ಜೀವಿಸುವ ಬುಡಕಟ್ಟು ವರ್ಗಗಳನ್ನು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಇತರ ಕರಾವಳಿ ಪ್ರದೇಶದಲ್ಲಿ ನೋಡಬಹುದು. ಇಂದಿನ ಮೈಸೂರು ಜಿಲ್ಲೆಯ ಮಹದೇಶ್ವರಬೆಟ್ಟ ಮತ್ತು ಬಿಳಿಗಿರಿರಂಗನಬೆಟ್ಟದ ಪರಿಸರದಲ್ಲಿ ವಾಸಿಸುವ ಸೋಲಿಗರು, ನಾಗರಹೊಳೆ ಮುಂತಾದ ಕಡೆ ಸೋಲಿಗರು, ಬೆಟ್ಟದ ಕುರುಬರು, ಜೇನು ಕುರುಬರು ಇತರರು ಇಂದಿಗೂ ವ್ಯವಸಾಯದಂತೆ ಬೇಟೆಯನ್ನು ಒಂದು ವೃತ್ತಿಯನ್ನಾಗಿಸಿಕೊಂಡು ಜೀವಿಸುತ್ತಾರೆ. ಭಾರತ ಸರ್ಕಾರದ ಅರಣ್ಯ ಇಲಾಖೆಯವರು ವನ್ಯಮೃಗಗಳನ್ನು ಸಂರಕ್ಷಿಸುವ ಸಲುವಾಗಿ ಕಾಡುಪ್ರಾಣಿಗಳನ್ನು ಕೊಲ್ಲಕೂಡದೆಂದು (೧೯೭೩)ನಿಯಮ ಜಾರಿ ಮಾಡಿರುವದರಿಂದ ಈ ಜನರಿಗೆ ಬೇಟೆ ಬಿಟ್ಟು ಬದುಕುವ ಕರಾಳ ದಿನಗಳು ಉಲ್ಬಣಗೊಂಡಿವೆ. ಈ ಮೇಲೆ ಹೇಳಿದ ಬುಡಕಟ್ಟು ಜನರು ಆರ್ಥಿಕವಾಗಿ ಅತೀ ಬಡವರಾಗಿರುವುದರಿಂದ ಬೇಟೆ ಎಂಬುದು ಒಂದು ಅನಿವಾರ್ಯವ ವೃತ್ತಿಯಾಗಿದೆ ಎಂದು ಚಂದ್ರ ಕಾಳೇನಹಳ್ಳಿಯವರು ತಿಳಿಸಿದ್ದಾರೆ.[3] ಮಲೆನಾಡಿನಲ್ಲಿನ ಜನರು ಪ್ರಾಣಿಗಳನ್ನು ಹೆಚ್ಚಾಗಿ ಆಹಾರಕ್ಕಾಗಿ ಬೇಟೆಯಾಡುತ್ತಿದ್ದರೂ ಹವ್ಯಾಸವಾಗಿರುವಂತಿದೆ. ಮಲೆಪ್ರದೇಶದಲ್ಲಿ ಅಲ್ಲೊಂದು ಇಲ್ಲೊಂದು ಮನೆಗಳಿರುವುದರಿಂದ ಬೇಸರ, ಮನರಂಜನೆ, ಆಹಾರ, ಮುಂತಾದ ಸಂಗತಿಗಳಿಗೆ ಪ್ರಾಣಿಯನ್ನು ತಿನ್ನದವರು ಸಹ ಬೇಟೆಯಾಡುತ್ತಾರೆ. ಇಂಥವರು ಆ ಪ್ರಾಣಿಗಳ ಚರ್ಮ, ಕೊಂಬು, ದಂತಗಳಿಗಾಗಿ ಬೇಟೆಯಲ್ಲಿ ನಿರತರಾಗಿರುವರು. ಕೆಲವು ಸಾಹಸಿಗರು ಲೆಕ್ಕ ಹಾಕುವಲ್ಲಿ ಪ್ರಥಮನೆನಿಸಿಕೊಳ್ಳಲು ಎಷ್ಟು ಕೊಂದೆನೆಂದು ಲೆಕ್ಕ ಹಾಕಿ ಬೇಟೆಯಾಡುತ್ತಾರೆ. ಮಲೆನಾಡಿನಲ್ಲಿ ಬೇಟೆಯನ್ನು 'ಶಿಕಾರಿ' ಎಂದು ಕರೆಯುವ ರೂಢಿಯಿದೆ.

ಬಯಲುಸೀಮೆಯಲ್ಲಿ ಬೇಟೆಯ ವೃತ್ತಿ ಅಲ್ಪ ಪ್ರಮಾಣದಲ್ಲಿತ್ತು. ಇಲ್ಲಿ ದಟ್ಟವಾದಂತ ಕಾಡು ಇಲ್ಲದಿರುವುದರಿಂದ ಕಾಡುಪ್ರಾಣಿಗಳ ಕೊರತೆಯಿದೆ. ವ್ಯವಸಾಯದಿಂದ ವಿರಾಮ ದೊರೆತಾಗ ಬೇಡರು ಉದ್ದನೆಯ ಬಲೆಯನ್ನು ಒಡ್ಡಿ ಮೊಲವನ್ನು ಇರುಕಲು ಪ್ರದೇಶದಲ್ಲಿ ಬಲೆಹಾಕಿ ತುರುಬಿಕೊಂಡು ಬಂದು ಬಲೆಯಲ್ಲಿ ಬೀಳಿಸಿ ಕೊಂದು ತಿನ್ನುತ್ತಾರೆ. ಇದೇ ಸ್ವರೂಪದಲ್ಲಿ ಕೆಲವು ಬೇಟೆಗಾರರು ಅಕ್ಕ-ಪಕ್ಕದ ಕಬ್ಬಿನ ಗದ್ದೆಗಳಲ್ಲಿ ಸೇರಿರುವ ಕಾಡುಹಂದಿಗಳನ್ನು ಕೋವಿ ಉಪಯೋಗಿಸಿ ಬೇಟೆಯಾಡಿ ತಿನ್ನುತ್ತಾರೆ.

ಪ್ರಸ್ತುತ ಕರ್ನಾಟಕದಲ್ಲಿ ಬೇಟೆಯನ್ನು ನಾನಾ ರೀತಿಯಲ್ಲಿ ಅಳವಡಿಸಿಕೊಂಡಿರುವುದನ್ನು ನೋಡುತ್ತೇವೆ. ಅವುಗಳೆಂದರೆ: ಮೀನುಬೇಟೆ, ಜೇನುಬೇಟೆ, ಮುಂತಾದವು. ಪ್ರಾಣಿಬೇಟೆಯಲ್ಲಿ ಮತ್ತೆ ಹಲವಾರು ಲಕ್ಷಣ ವಿಧಾನ, ಬಗೆಗಳಿರುತ್ತವೆ. ಉದಾ : ಚಿಗರೆ, ಮೊಲ, ಉಡ, ಕಾಡುಹಂದಿ ಇವುಗಳನ್ನು ಆಹಾರಕ್ಕಾಗಿ ಬೇಟೆಯಾಡಿದರೆ, ಆನೆ, ಹುಲಿ, ಕರಡಿ, ಚಿರತೆ, ತೋಳ, ಸಾರಂಗ ಮುಂತಾದವುಗಳನ್ನು ಸಾಕುಪ್ರಾಣಿಗಳನ್ನು ರಕ್ಷಿಸಲು ಶಕ್ತಿಪ್ರದರ್ಶನಕ್ಕೆ ಮತ್ತು ಆರ್ಥಿಕತೆಯಲ್ಲಿ ಸ್ವಾವಲಂಬಿಗಳಾಗಲು ಇವುಗಳ ದಂತ, ಚರ್ಮಗಳನ್ನು ಮಾರಿಕೊಳ್ಳುತ್ತಾರೆ. ಇವುಗಳನ್ನು ಹಿಡಿಯಲು ಹಲವು ಬಗೆಯ ಆಯುಧೋಪಕರಣಗಳನ್ನು ಬಳಸುವ ಪ್ರಕ್ರಿಯೆ ರೂಢಿಯಲ್ಲಿದೆ. ಕೋವಿ ಇತ್ತೀಚೆಗೆ ಬಳಕೆಯಾಗುತ್ತಿದ್ದರೂ ಹಿಂದೆ ಭರ್ಜಿ, ಈಟಿ, ಬಲ್ಲು, ಬಲೆ, ಕತ್ತಿ, ಕುಡುಗೋಲು ಮುಂತಾದವುಗಳನ್ನು ಬಳಸುತ್ತಿದ್ದರು. ಇಂದು ಕೆಲವು ಮಾರ್ಪಾಟುಗೊಂಡು ವಿವಿಧ ರೀತಿಯ ಆಯುಧಗಳನ್ನು ಬಳಸುತ್ತಾರೆ. ಆಧುನಿಕ ತಂತ್ರವನ್ನೇ ಮುಖ್ಯವಾಗಿಟ್ಟುಕೊಂಡು ಪ್ರಾಣಿಯನ್ನು ಹಿಡಿಯುತ್ತಾರೆ. ಆಯಾ ಆಯುಧಕ್ಕೆ ತಕ್ಕ ಬೇಟೆಯೆಂದು ಹೆಸರಿಸುತ್ತಾರೆ.

ದಕ್ಷಿಣಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ನಾವು ಹಲವು ಬುಡಕಟ್ಟುಗಳಿರುವ ವಾಸದ ನೆಲೆಗಳನ್ನು ಕಾಣುತ್ತೇವೆ. ಅವುಗಳು ವಿಶಿಷ್ಟವಾಗಿದ್ದು, ಪ್ರಾಕೃತಿಕವಾಗಿ ಪಶ್ಚಿಮ ಘಟ್ಟಗಳು ಸಹ ಮಹತ್ವ ಪಡೆದಿವೆ. ಇಲ್ಲಿ ಅಲೆಮಾರಿಗಳ ಗುಂಪಿಗೆ ಸೇರಿದ ಹಕ್ಕಿ-ಪಿಕ್ಕಿ ಜನರು ಇಂದಿಗೂ ಅಳಿಲನ್ನು ಹಿಡಿದು ತಿನ್ನುತ್ತಾರೆ. ಅದನ್ನು ಬೇಟೆಯಾಡುವ ತಂತ್ರವೂ ಅತೀ ಜಾಣ್ಮೆಯಿಂದ ಕೂಡಿದೆ. ಅಳಿಲು ಏರಿರುವ ಮರದ ಸುತ್ತ ಬಲೆಯನ್ನು ಒಡ್ಡುತ್ತಾರೆ. ಅಳಿಲಿಗೆ ಕಾಣಿಸದಂತೆ ಒಬ್ಬರು ಮರದಡಿಯಲ್ಲಿ ನಿಂತು ಅಳಿಲಿನಂತೆ ಶಬ್ದಮಾಡುತ್ತಾರೆ. ಮೇಲಿರುವ ಅಳಿಲು ತನ್ನ ಸಂಗಾತಿಯ ಶಬ್ದವಿರಬಹುದೆಂದು ಆಲಿಸಿ ಕೆಳಗಿಳಿದು ಬಂದು ಬಲೆಗೆ ಬಿದ್ದು, ಬೇಟೆಗಾರನ ವಶಕ್ಕೆ ಸುಲಭವಾಗಿ ಬೀಳುತ್ತದೆ. ಇವರು ಅಳಿಲನ್ನು ಚಾಟಿಯ ಬಿಲ್ಲಿನಿಂದಲೂ ಹೊಡೆಯುವರು.

ಪಶ್ಚಿಮ ಘಟ್ಟಗಳಲ್ಲಿ ವಿಶೇಷವಾಗಿ ಬಿಳಿಗಿರಿರಂಗಯ್ಯನಬೆಟ್ಟದ ಪರಿಸರದಲ್ಲಿ ಸೋಲಿಗರು ಬೇಟೆಗೆ ನಾನಾ ತರದ ತಂತ್ರಗಳನ್ನು ಪ್ರಯೋಗಿಸುತ್ತಾ ಕಾಡುಕೋಳಿಯನ್ನು ಬೀಳಿಸಿಕೊಳ್ಳಲು 'ಪಿಟರುಗೊಳವೆ'ಯನ್ನು ಬಳಸುತ್ತಾರೆ. ಪಿಟರುಗೊಳವೆ ಬಿದಿರಿನ ಕೊಳವೆಯಾಗಿದ್ದು, ಇದರೊಳಕ್ಕೆ ಸಿರುಹೊನ್ನೆಕಾಯಿ ಹಾಕಿ ಗುರಿಯಿಟ್ಟು ಕಾಡುಕೋಳಿಗೆ ಹೊಡೆದು ಬೀಳಿಸುತ್ತಾರೆ. ಇದು ಇಂದಿಗೂ ಪ್ರದರ್ಶನ ರೂಪದಲ್ಲಿದೆ. ಈ ಸೋಲಿಗರು ಕಾಡುಕೋಳಿಯ ಬೇಟೆಗೆ ಮತ್ತೊಂದು ತಾಂತ್ರಿಕ ವಿಧಾನ ಬಳಸುತ್ತಾರೆ. ಅದೆಂದರೆ ಪಾಜಿಯನ್ನು ಒಡ್ಡುವುದು. ಇದು ಬಿದಿರಿನ ಕಡ್ಡಿಗಳಿಂದ ಮಾಡಿದ ಸುಮಾರು ಅರ್ಧ ಅಡಿಯಿಂದ ಹೆಣೆದಿರುವ ಒಂದು ಬೇಟೆಯ ಉಪಕರಣ. ಇದರಲ್ಲಿ ಕಿಟಕಿಯ ಆಕಾರಕ್ಕೆ ಬಿದಿರು ಕಡ್ಡಿಗಳನ್ನು ಜೋಡಿಸಿರುತ್ತಾರೆ. ಈ ಕಟ್ಟಿಗೆಗಳ ಮಾಲೆಯನ್ನು ಬೆಣೆಯಿಂದ ಒಂದಕ್ಕೊಂದು ಸೇರಿಸುತ್ತಾರೆ. ಇದರೊಳಗೆ ಚೌಕಾಕಾರವಾಗಿ ದಾರವನ್ನು ಬಿಗಿದು, ಅದರೊಳಕ್ಕೆ ಉರುಲು ಜೋಡಿಸಿರುತ್ತಾರೆ. ಈ ಬಗೆಯ ನಾಲ್ಕು ಪಾಜಿಗಳನ್ನು ಮಾಡಿಕೊಳ್ಳುವರು. ತರುವಾಯ ಬೇಟೆಗೆ ಸಿದ್ಧರಾಗುತ್ತಾರೆ. ಮೊದಲಿಗೆ ಕೋಳಿ ಎಲ್ಲಿದೆ ಎಂಬುದನ್ನು ಪತ್ತೆಮಾಡಿ, ಆ ಸ್ಥಳಕ್ಕೆ ಹೋಗಿ ಒಂದು ಸಮತಟ್ಟಾದ ನೆಲದಲ್ಲಿ ೪ ಮೂಲೆಗೆ ೪ ರೀತಿಯ ಪಾಜಿಗಳನ್ನು ಒಡ್ಡುವರು. ಯಾರಾದರೊಬ್ಬ ಅನುಭವಸ್ಥ ಬೇಟೆಗಾರ ೪ ಪಾಜಿಗಳ ಮಧ್ಯೆ ಕುಳಿತಿರುತ್ತಾನೆ. ಕೆಲವರು ಅವನ ಮರದ ಎಲೆ, ಸೊಪ್ಪನ್ನು ಮುಚ್ಚಿ ಮರೆಮಾಡುತ್ತಾರೆ. ಉಳಿದವರು ಮರೆಯಾಗಿ ಅಡಗಿಕೊಳ್ಳುತ್ತಾರೆ. ಮರೆಯಾಗಿರುವ ವ್ಯಕ್ತಿ ಕಾಡುಕೋಳಿಯಂತೆ ತನ್ನ ಗೆಣೆಕಾರನೋ, ಗೆಣೆಕಾತಿಯಾಗಿರಬೇಕೆಂದು ಭ್ರಮಿಸಿ ಕೆಳಗಿಳಿದು ಪಾಜಿಯನ್ನು ಒಡ್ಡಿರುವ ಕಡೆಗೆ ಬರುತ್ತದೆ. ಪಾಜಿಯ ಹತ್ತಿರ ಬಂದ ತಕ್ಷಣ ಸೊಪ್ಪಿನೊಳಗೆ ಇದ್ದವನು ತಾನು ಮಾಡುತ್ತಿದ್ದ ಶಬ್ದ ನಿಧಾನವಾಗಿ ನಿಲ್ಲಿಸುವನು. ಪಾಜಿಯ ಸಮೀಪಕ್ಕೆ ಬಂದ ಕೋಳಿಗೆ ಸಮಸ್ಯೆಗಿಟ್ಟುಕೊಳ್ಳುತ್ತದೆಯಲ್ಲದೆ, ಪಾಜಿಯ ಸೊಪ್ಪಿನ ಹತ್ತಿರ ಬರುವಲ್ಲಿ ಉರುಲಿಗೆ ಸಿಕ್ಕಿ ಬೀಳುತ್ತದೆ. ಅದು ಉರುಲಿನಿಂದ ಕತ್ತು ಬಿಗಿದುಕೊಂಡಿರುತ್ತದೆ, ಹೀಗಾಗಿ ತಪ್ಪಿಸಿಕೊಳ್ಳಲು ಅವಕಾಶವಿರುವುದಿಲ್ಲ. ಸೊಪ್ಪಿನೊಳಗೆ ವ್ಯಕ್ತಿ ನಿಶ್ಯಬ್ಧವಾಗಿ ವರ್ತಿಸುತ್ತಾನೆ. ಇಲ್ಲದಿದ್ದರೆ ಸೋಲು ಖಂಡಿತ.

ಸೋಲಿಗರು ಸಾರಂಗ, ಜಿಂಕೆ, ಕಡಬೆ, ಮೊಲ ಮುಂತಾದ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುತ್ತಾರೆ. ಪ್ರಾಣಿಗಳನ್ನು ಕೊಲ್ಲಲು ಅವರು ಅನೇಕ ತಂತ್ರಗಳನ್ನು ಬಳಸುತ್ತಾರೆ. ಈ ಪ್ರಾಣಿಗಳು ಆಹಾರ ಹುಡುಕಿಕೊಂಡು ಅಲೆಯುವ ದಾರಿಯನ್ನು ಬೇಟೆಗಾರ ಬಹು ಜಾಗರೂಕನಾಗಿ ನೋಡಿ ಗುರುತಿಟ್ಟುಕೊಂಡಿರುತ್ತಾನೆ. ಈ ಪ್ರಾಣಿಗಳು ಗುಂಪಾಗಿ ಬರುವ ಆ ದಾರಿಯಲ್ಲಿ ಮದ್ದನ್ನು ಇಡುತ್ತಾನೆ. ಈ ಮದ್ದನ್ನು ಗುಂಪಿನ ಮಧ್ಯದ ಒಂದೆರಡು ಜಿಂಕೆಗಳು

ತುಳಿದಾಗ ಮದ್ದು ಸಿಡಿದು ನೆಲಕ್ಕುರುಳಿ ಬೇಟೆಗಾರನ ಆಹಾರವಾಗುತ್ತವೆ.[೩] ಇದರಂತೆ ಮ್ಯಾಸಬೇಡರ ಆಹಾರದ ಅಲೆದಾಟದಲ್ಲಿ ಕಂಡುಕೊಂಡ ನಾನಾ ತರದ ಪ್ರಾಣಿ ಬೇಟೆಯನ್ನು ಇದು ಸಂಕೇತಿಸಿರುತ್ತದೆ.

ಬೇಟೆಗಾರರು ಪ್ರಾಣಿಗಳನ್ನು ಕೊಲ್ಲುವಲ್ಲಿ ಅನೇಕ ಉಪಾಯಗಳನ್ನು ಅನುಸರಿಸುತ್ತಾರೆ. ದಟ್ಟವಾಗಿ ಪ್ರಾಣಿಗಳು ಅಲೆಯುವ ದಾರಿಯಲ್ಲಿ ಸುಮಾರು ೧೦ ಅಡಿ ಆಳಕ್ಕೆ ಖೆಡ್ಡದಂತಹ ಗುಂಡಿಯೊಂದನ್ನು ತೆಗೆದು ಅದರೊಳಗೆ ಹರಿತವಾದ ಅಲಗನ್ನುಳ್ಳ ೩ ದಸಿಗಳನ್ನು ಬಗಿಯಾಗಿ ನೆಟ್ಟಿರುತ್ತಾರೆ. ಮೇವಿಗಾಗಿ ಧಾವಿಸಿದ ಪ್ರಾಣಿ ಗುಂಡಿಯ ಮೇಲ್ಭಾಗದ ಮೇಲೆ ಸೊಪ್ಪಿನ ಛಾವಣಿ ಹಾಕಿ ತೆಳ್ಳಗೆ ಮುಚ್ಚಿರುವುದರಿಂದ ಅದನ್ನು ಮಟ್ಟಸವಾದ ನೆಲವೇ ಇದ್ದಿರಬಹುದೆಂದು ಭ್ರಮಿಸಿ ಕಾಲಿಟ್ಟಾಗ ನೆಲ ಕುಸಿದು ಗುಂಡಿಯೊಳಕ್ಕೆ ಬಿದ್ದು ; ದಸಿಯೊಳಗೆ ಸಿಕ್ಕಿಕೊಳ್ಳುತ್ತದೆ.

ಮೇಲೆ ವಿವರಿಸಿದಂತೆ ಕರ್ನಾಟಕದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಕಾಣಸಿಗುವ ಬೇಟೆ ಭೌಗೋಳಿಕವಾಗಿ ಭಿನ್ನನೆಲೆಯಲ್ಲಿ ನಿಲ್ಲುತ್ತದೆ. ಒಟ್ಟಾರೆ ಪ್ರಾಣಿಗಳನ್ನು ಹತೋಟಿಯಲ್ಲಿಡುವುದು, ಹಾಗೂ ಆಹಾರ ಉತ್ಪಾದನೆಯನ್ನು ಮಾಡಿಕೊಳ್ಳುವುದು, ನಂತರ ಸಹಜವಾದ ಹವ್ಯಾಸ, ಬಯಕೆಗಳನ್ನು ತೀರಿಸಿಕೊಳ್ಳುವುದೇ ಬೇಟೆಯ ಲಕ್ಷಣಗಳಾಗಿವೆ. ಅಲೆಮಾರಿ ಜನಾಂಗಗಳು ಮಾತ್ರ ದಿನನಿತ್ಯ ಬೇಟೆಗಾರರು. ಕೊರಚ, ಗೋಸಾಯ, ಜಂಗಾಲೆ, ಬುಡಬುಡಕಿ, ಕಿನ್ನರಿಜೋಗಿ ಮೊದಲಾದವರು ಅಳಿಲು, ಪಕ್ಷಿ, ಇಲಿ, ಮೀನು ಇತರ ಪ್ರಾಣಿಪಕ್ಷಿಗಳನ್ನು ಬೇಟೆಯಾಡುವುದು ಕಂಡುಬರುತ್ತದೆ.

ಸೋಲಿಗರು ಬೇಟೆಯ ಸಂದರ್ಭದಲ್ಲಿ ಉಂಟಾಗುವ ಅಪಶಕುನಗಳಿಗೆ ಹೆಚ್ಚಿನ ಆದ್ಯತೆ ಕೊಡುತ್ತಾರೆ. ಬೇಟೆಗೆ ಹೊರಡುವ ಮುಂಚೆ ದೇವರ ಪೂಜೆ ಮಾಡುವರು. ಜೇನು ಕುಯ್ಯಲು ಮರ ಹತ್ತಬೇಕಾಗಿ ಬಂದಾಗ ಮೊದಲು ಮರಕ್ಕೆ ಶರಣು ಮಾಡಿಕೊಂಡು ಅನಂತರ ಮರವನ್ನು ಏರುತ್ತಾರೆ.[೪] ಬೇಟೆಗೆ ಹೊರಡುವ ದಿನದ ರಾತ್ರಿ ಕನಸಿನಲ್ಲಿ ಅವರ ಹಿರಿಯರೊಂದಿಗೆ ಹೊಗೆಸೊಪ್ಪು, ಹುಣಿಸೆಹಣ್ಣು, ರಾಗಿ, ಮುಂತಾದ ಪದಾರ್ಥಗಳು ಕಾಣಿಸಿಕೊಂಡರೆ ಬೇಟೆ ದೊರೆಯುತ್ತದೆ ಎಂದು ಗಾಢವಾಗಿ ನಂಬುತ್ತಾರೆ. ಬೇಟೆಗೆ ಹೊರಡುವಾಗ ಸೌದೆ ಹೊತ್ತ ವ್ಯಕ್ತಿ ಎದುರಾದರೆ ಆಗುವುದಿಲ್ಲವೆಂಬ ಸೂಚನೆ ಅವರಿಗಿರುತ್ತದೆ. ವರ್ಷದ ಎಲ್ಲ ಕಾಲದಲ್ಲಿಯೂ ಬೇಟೆಯಾಡಿದರೂ ಹಲವಾರು ಪದ್ಧತಿಗಳಿದ್ದು ಕೆಲವು ಮರೆಯಾಗಿವೆ. ಹಬ್ಬ, ಹರಿದಿನಗಳಲ್ಲಿ ಬೇಟೆಗೆ ಹೋಗುವ ರೂಢಿ ಮಾತ್ರ ಉಳಿದುಕೊಂಡಿರುವುದನ್ನು ಇವರಂತೆಯೇ ಇತರ ಸಮುದಾಯಗಳಲ್ಲಿ ಕಾಣಬಹುದು. ಕರಾವಳಿಯಲ್ಲಿ ಮೀನುಗಾರಿಕೆ, ಕೊಡಗು ಇತರ ಘಟ್ಟಪ್ರದೇಶದಲ್ಲಿ ಹುಲಿಬೇಟೆ, ಬಯಲುಸೀಮೆಯಲ್ಲಿ ಜಿಂಕೆ, ಹಂದಿ, ಮೊಲಗಳನ್ನು ಬೇಟೆಯಾಡುವುದು ವಿಶೇಷ.

ಈ ಮೇಲಿನಂತೆ ಇಡೀ ನಾಡಿನಲ್ಲಿ ಬೇಟೆ ಒಂದು ಸ್ವರೂಪದಲ್ಲಿದ್ದರೆ, ಮಧ್ಯಕರ್ನಾಟಕದ ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ವಿಶೇಷವಾಗಿದೆ. ಇಲ್ಲಿ ಪ್ರಚಲಿತವಿರುವ ಬೇಟೆ ಹೆಚ್ಚಾಗಿ ಬೇಡರಿಗೆ ಮಾತ್ರ ಮೀಸಲು. ಅವರು ಹಬ್ಬ, ಹರಿದಿನಗಳಲ್ಲದೆ, ಕೆಲವು ಸಂದರ್ಭಗಳಲ್ಲಿ ಪ್ರತಿನಿತ್ಯ ಬೇಟೆಗೆ ಹೋಗುವ ಪರಿ ಸೋಜಗವಾದದು.

ಕರ್ನಾಟಕದಲ್ಲಿಂದು ಪ್ರಾಣಿಗಳನ್ನು ಬೇಟೆಯಾಡುವುದನ್ನು ಈ ಕೆಳಕಂಡಂತೆ ನೋಡಬಹುದು:

೧. ಉಡದ ಬೇಟೆ	೨. ಚಿಗರೆ ಬೇಟೆ	೩. ಮೊಲ ಬೇಟೆ
೪. ಇಲಿ ಬೇಟೆ	೫. ಅಳಿಲು ಬೇಟೆ	೬. ಕಾಡು ಬೆಕ್ಕಿನ ಬೇಟೆ
೭. ದೊಣ್ಣೆ ಕಾಟ (ಓತಿಕ್ಯಾತ)ಬೇಟೆ	೮. ಗುಬ್ಬಿ ಬೇಟೆ	೯. ಜೇನಿನ ಬೇಟೆ
೧೦. ಮೀನು ಬೇಟೆ	೧೧. ನವಿಲು ಬೇಟೆ	೧೨. ಹಂದಿ ಬೇಟೆ

೧೩. ಹೊಲಮೇರಿ ಬೇಟೆ ಎಂದು ಹೆಸರಿಸಬಹುದು. ಇವುಗಳಲ್ಲದೆ ಸಸ್ಯಹಾರಿ ಬೇಟೆಯಲ್ಲಿ ಅಣಬೆ ಬೇಟೆ ಪ್ರಮುಖವಾಗಿದೆ. ಹೀಗೆ ಆಹಾರ ಸಂಗ್ರಹಣೆ ಆಲೆಸೊಪ್ಪು, ಮೀನಗೊಂದಿ ಸೊಪ್ಪು ಪೌಷ್ಠಿಕ ಆಹಾರವಾಗಿತ್ತು. ಇಂದು ಇವು ಮರೆಯಾಗಿವೆ. ಬೇಡರು ಹೇಳುವಂತೆ ೧೯೭೬ರ ಸುಮಾರಿಗೆ ಬರಗಾಲ ಬಂದಾಗ ಆಲೆಸೊಪ್ಪು ಕೆಂಪುಜೋಳ, ತಿಂದು ಬದುಕಿದೆವು ಎನ್ನುತ್ತಾರೆ.[೫] ಇಂದು ಬೇಡರು ರೂಢಿಸಿಕೊಂಡ ಬೇಟೆಯನ್ನು ಈ ಕೆಳಕಂಡಂತೆ ವಿವರಿಸಲಾಗುವುದು.

೧. ಉಡದ ಬೇಟೆ : ಅತೀ ಚಾಣಾಕ್ಷತನದ ಬೇಟೆ ವಿಧಾನ ಇದಾಗಿದ್ದು, ದಟ್ಟಕಾಡು, ಸರೋವರ, ದೊಡ್ಡಗಾತ್ರದ ಸೇತುವೆ, ಕೆರೆ-ಕಟ್ಟೆಗಳಲ್ಲಿ ಬೇಟೆಯನ್ನಾಡುತ್ತಾರೆ. ಉಡದಬೇಟೆ ಹೆಚ್ಚಾಗಿ ಬಿಸಿಲಿನಲ್ಲಿ ಮಾಡುತ್ತಾರೆ. ವಿಶೇಷವಾಗಿ ಮಳೆ ಬಂದಾಗ ಮಾತ್ರ ಉಡ ಹಸಿಮಣ್ಣು, ಕೀಟಗಳನ್ನು ತಿನ್ನಲು ಹೊರಬರುತ್ತದೆ. ಬೇಡರಿಗೆ ಇದು ಸಿಕ್ಕಿದರೆ ಮನೆಯಲ್ಲಿ ಹಬ್ಬದ ವಾತಾವರಣವೇ ಸರಿ. ಶಿವಾಜಿ ಮೊದಲಾದ ರಾಜರು ಅನೇಕ ಕೋಟೆ-ಕೊತ್ತಳಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುವುದು ಇಂಥ ಪ್ರಾಣಿಯಿಂದಲೇ ಎಂಬ ಹೇಳಿಕೆಗಳಿವೆ. ಇತರರು ಆಕಸ್ಮಿಕವಾಗಿ ಈ ಬೇಟೆ ಯನ್ನಾಡುತ್ತಾರೆ. ತಿಂಗಳಿಗೊಮ್ಮೆಯಾದರೂ ಬೇಡರು ಈ ಬೇಟೆಗೆ ಹೋಗುತ್ತಾರೆ. ಇದನ್ನು ಕೇವಲ ಆಹಾರಕ್ಕಾಗಿಯೇ ಅಷ್ಟೇ ಅಲ್ಲ, ಆಯುರ್ವೇದ ಔಷಧಿಯನ್ನು ಇದರಿಂದ ಉತ್ಪಾದಿಸುತ್ತಾರೆ. ಇದರ ತಲೆ ಮತ್ತು ಬಾಲಗಳು ವಿಷ ಎಂದು ತಿನ್ನುವುದಿಲ್ಲ. ಇದರ ತುಪ್ಪ ಕಾಲುನೋವಿಗೆ ಇತ್ಯಾದಿ ವ್ಯಾದಿಗಳಿಗೆ ಬಳಸುತ್ತಾರೆ. ಇದರ ತುಪ್ಪದಲ್ಲಿ ಅರಿಷಿಣ, ಈರುಳ್ಳಿ, ಬೆರಸಿದರೆ ಸುಮಾರು ವರ್ಷಗಳವರೆಗೆ ಅದರ ಸ್ವಾದ ಬಿಟ್ಟುಕೊಡುವುದಿಲ್ಲ. ಉಡದ ಬಾಲದಿಂದ ಏಟು ತಿಂದವರೆ ಬಹಳ ಮಂದಿ. ಯಾವುದಾದರೂ ಕುಣಿ, ರಂಧ್ರ, ಇಲಿಬೋನುಗಳೊಳಗೆ ಸೇರಿಕೊಂಡಾಗ ಇದು ಅಷ್ಟು ಸುಲಭವಾಗಿ ಸಿಗುವುದಿಲ್ಲ. ಮುಟ್ಟಿದರೆ ಬಾಲದಿಂದ ಬಾರಿಸುತ್ತದೆ, ಬಾಯಿಂದ ಕಚ್ಚುತ್ತದೆ. ಉಡವನ್ನು ಬೇಟೆಗಾರನಿಗಿಂತ ಮೊದಲು ನಾಯಿಗಳು ಕಂಡುಹಿಡಿಯುತ್ತವೆ. ಇತ್ತೀಚೆಗೆ ಬಂಡೆ ಸೊರಕೆಗಳಲ್ಲಿ ಸಿಕ್ಕ ಪ್ರಕರಣಗಳೇ ಜಾಸ್ತಿ. ಮಧ್ಯಕರ್ನಾಟಕದಲ್ಲಿ ಈ ಬೇಟೆ ಹೆಚ್ಚು ಪ್ರಚಲಿತದಲ್ಲಿದೆ. ಬೇಡರು ಈ ಬೇಟೆಯಲ್ಲಿ ನಿಸ್ಸೀಮರು.

೨. ಚಿಗರೆ ಬೇಟೆ : ಚಿಗರೆ ಬೇಟೆ ಕರ್ನಾಟಕದಲ್ಲಿ ಅತೀ ಹೆಚ್ಚು ಪ್ರಚಲಿತ, ಮಹತ್ವದಿಂದ ಕೂಡಿದೆ. ಬೇಡರಿಗೆ ಪ್ರತಿಷ್ಠಿತ ಬೇಟೆ ಇದಾಗಿದ್ದು, ಇತರ ಎಲ್ಲ ವರ್ಗದವರು ಬೇಟೆಯಾಡಿದರೂ ಬೇಡರು ಚಿಗರೆಗೆ ಸಿಂಹ ಸ್ವಪ್ನವಾಗಿರುತ್ತಾರೆ. ಚಿಗರೆ ಅಥವಾ ಜಿಂಕೆಯನ್ನು ಕೊಂದ ವ್ಯಕ್ತಿಗೆ ಅಡ್ಡಹೆಸರು ಚಿಗರೆಬೋರ (ಜಿಂಕಲುಬೋರ) ಚಿಗರೆವಾರು (ಜಿಂಕಲಾರು) ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಚಿಗರೆಬೇಟೆ ಹೆಚ್ಚಾಗಿ ದಟ್ಟವಾದ ಅರಣ್ಯಗಳಲ್ಲಿ

ಪ್ರಚಲಿತದಲ್ಲಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಮಲ್ಲೂರಹಳ್ಳಿ ಪಿಲ್ಲಿಗುಂಡ್ಲ ಅರಣ್ಯ ಮತ್ತು ಮೊಳಕಾಲ್ಮುರು ಬಳಿಯಿರುವ ಕಮರಕಾವಲಿನಲ್ಲಿ ಚಿಗರೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇಲ್ಲಿ ೧೯೮೪ ರಿಂದ ೧೯೯೬ರವರೆಗೆ ಸಾಕಷ್ಟು ಚಿಗರೆಗಳನ್ನು ಕಳ್ಳತನದಿಂದ ಬೇಟೆಯಾಡಿರುವುದು ತಿಳಿದು ಬರುತ್ತದೆ. ಇವುಗಳಿಗೆ ಬಲೆಯನ್ನು ಸಹ ಹಾಕುವರು ಮತ್ತು ಆಧುನಿಕವಾಗಿ ಬಂದೂಕಿನಿಂದಲೇ ಹೆಚ್ಚಾಗಿ ಸಾಯಿಸುತ್ತಾರೆ. ಜಂಕೆಗಳ ಕೊಡುಗಳನ್ನು ಪ್ರತಿಷ್ಠೆಗಾಗಿ ಬೇಡರ ಮನೆಗಳಲ್ಲಿ ನೋಡಲು, ಚೆಂದಕ್ಕಾಗಿ ಬಾಗಿಲಿನ ಜಂತೆಗಳ ಅಕ್ಕಪಕ್ಕದಲ್ಲಿ ಹಾಕಿರುತ್ತಾರೆ. ಬೇಡರು ಜಂಕೆಮರಿಗಳನ್ನು ಸಾಕಿದರೂ ಒಂದಲ್ಲ ಒಂದು ದಿನ ಸಾಯಿಸಿ ತಿನ್ನುತ್ತಾರೆ. ಹೀಗೆ ಕರ್ನಾಟಕದ ಇತರ ಜನಾಂಗಗಳಲ್ಲಿಯೂ ಈ ಬೇಟೆಯನ್ನು ನೋಡಬಹುದು.

೩. ಮೊಲದ ಬೇಟೆ : ಸಾಹಸ ಮತ್ತು ಸೂಕ್ಷ್ಮತರವಾದದು ಮೊಲದ ಬೇಟೆ. ಮೊಲ ಚುರುಕಾದ, ಜಾಣ್ಮೆಯುಳ್ಳ ಪ್ರಾಣಿ; ಪ್ರಾಚೀನದಿಂದಲೂ ಮೊಲದ ಬೇಟೆ ಎಂಬುದು ಬೇಟೆಯ ಒಂದು ವಿಧಾನವಾಗಿ ಪ್ರಚಲಿತದಲ್ಲಿದೆ. ಮೊಲದ ಆಹಾರ ಹುಲ್ಲು. ಇದು ನೀರು ಕುಡಿಯುವುದಿಲ್ಲವೆಂದು ಹೇಳಲಾಗುತ್ತದೆ. ಮೊಲ ಊರಲ್ಲಿ ಬಂದರೆ ಅಪಶಕುನ, ಮೊಲವನ್ನು ಹಿಡಿದು ತರಬಾರದು, ಊರಿಗೆ ಕೆಟ್ಟದ್ದಾಗುತ್ತದೆ ಎಂಬ ನಂಬಿಕೆಯಿದೆ. ಬದುಕಿರುವ ಮೊಲಗಳು ಹೆಚ್ಚಾಗಿ ದೊಡ್ಡ ಚಿಕ್ಕ ಪೊದೆಗಳಲ್ಲಿ ವಾಸಿಸುತ್ತವೆ. ಕುರಿಗಳು ಮೇಯುವ ಜಾಗದಲ್ಲಿ ಇವು ಇರುತ್ತವೆ, ಅವುಗಳ ಕಾಲಲ್ಲಿರುವಾಗ ಇನ್ನೊಂದೆಡೆಗೆ ಒಡುವುದಿಲ್ಲ. ಹೀಗಾಗಿ ಬೇಟೆಗೆ ಅನುಕೂಲವಾದ ಪರಿಸರ ಕಲ್ಪಿಸುತ್ತದೆ.

ಮೊಲವು ನಿಶಾಚರಪ್ರಾಣಿ, ಕತ್ತಲಲ್ಲಿ ಆಹಾರ ಹುಡುಕುವುದು ಹೆಚ್ಚು. ಹಾಗಾಗಿ ಬ್ಯಾಟರಿಯ ಬೆಳಕಿನ ಸಹಾಯದಿಂದ ಬೇಟೆಯಾಡುತ್ತಾರೆ ಬ್ಯಾಟರಿಯನ್ನು ತಲೆಗೆ ಕಟ್ಟಿಕೊಂಡು ಅದರ ಬೆಳಕು ಮುಂದೆ ಬಿದ್ದಾಗ ಅದು ಕಿವಿ ನಿಗಿರಿಸುತ್ತದೆ. ಕೂಡಲೇ ಬಂದೂಕಿನಿಂದ ಹೊಡೆದು ಇಲ್ಲವೆ ಹಿಂದಿನಿಂದ ಓಡಿಬಂದು ಕೋಲಿನಿಂದ ಹೊಡೆದು ಸಾಯಿಸುತ್ತಾರೆ. ಮೊಲವನ್ನು ಕೈಯಿಂದ ಹಿಡಿಯುವುದೇ ಹೆಚ್ಚು. ಚಿನ್ನಹಗರಿ ನದಿ ಪರಿಸರದಲ್ಲಿ ಮೊಲದ ಬೇಟೆ ಹೆಚ್ಚು ಪ್ರಚಲಿತದಲ್ಲಿದೆ.

೪. ಇಲಿ ಬೇಟೆ : ಮೂರು ಅಥವಾ ನಾಲ್ಕು ಜನ ಸೇರಿ ಮಧ್ಯಾಹ್ನದ ಸಮಯದಲ್ಲಿ ನೆಲದೊಳಗಿನ ಬೋನುಗಳನ್ನು ಕೋಲು, ಅರೆಕೋಲು, ಚಲಿಕಿ, ಗುದ್ದಲಿಯಿಂದ ಆಗೆದು ರಂಧ್ರಗಳಿಗೆ ಹೊಗೆ ಹಾಕಿ ಬೇಟೆಯಾಡುತ್ತಾರೆ. ಇಲಿಯೆಂದರೆ ಇಲ್ಲಿ ಅಡವಿ ಅಥವಾ ಕೆಂಪುಇಲಿ ಎಂದರ್ಥ. ದಪ್ಪ, ಉದ್ದವಿದ್ದು ನೋಡಲು ತುಂಬಾ ಸುಂದರವಾಗಿರುತ್ತದೆ. ಮಳೆ ಬಂದ ಮರುದಿನ ಈ ಬೇಟೆ ಫಲಕಾರಿಯಾಗುತ್ತದೆ. ಬೇಡರು ಗುಂಪು-ಗುಂಪಾಗಿ ಈ ಬೇಟೆಗೆ ಹೋಗುತ್ತಾರೆ. ಚಿಕ್ಕಮಕ್ಕಳಿಂದ ಹಿಡಿದು ವೃದ್ಧರವರೆಗೂ ಅತೀ ಸರಳವಾದ ಈ ಬೇಟೆಯನ್ನಾಡುವುದುಂಟು. ಇಲಿಬೋನಿನಲ್ಲಿ ಹೆಜ್ಜೆ ಗುರುತುಗಳನ್ನು ಗುರುತಿಸಿ, ವಾಸನೆ ಹಿಡಿದು ಕೋಲುಗಳ ಮೂಲಕ ಶಬ್ದಮಾಡಿ ಇಲಿಯನ್ನು ಸುಟ್ಟುಕೊಂಡು ತಿನ್ನುತ್ತಾರೆ. ಇಲಿಬೋನಿನಲ್ಲಿ ಹಾವಿರುವ ಸಾಧ್ಯತೆಯಿದ್ದು ಈ ಬೇಟೆಯಲ್ಲಿ ಅನಾಹುತಗಳು ಸಂಭವಿಸಬಹುದು.

೫. ಅಳಿಲು ಬೇಟೆ : ಅಳಿಲು ಬೇಟೆಯನ್ನು ಹೆಚ್ಚಾಗಿ ಊರಿನ ಅಕ್ಕ-ಪಕ್ಕದಲ್ಲಿ ಆಡುತ್ತಾರೆ. ಕೊರಚರು, ದಾಸರು, ಜೋಗಪ್ಪ, ಆರೆಬುಡಿಬುಡಿಕೆ, ಕುರುಮಾಮ ಮುಂತಾದವರು ಅಳಿಲನ್ನು ತಿನ್ನುತ್ತಾರೆ. ಬೇಡರು ಅಳಿಲುಗೆ ಪೂಜನೀಯ ಸ್ಥಾನಕೊಟ್ಟಿದ್ದಾರೆ. ಇದು ಶ್ರೀರಾಮಚಂದ್ರನಿಗೆ ಸಹಕರಿಸಿದುದರಿಂದಲೇ ಇದರ ಬೆನ್ನಿನ ಮೇಲೆ ೩ ನಾಮಗಳಿವೆ

ಎನ್ನುತ್ತಾರೆ. ಇತ್ತೀಚೆಗೆ ಕೆಮ್ಮು ಜಾಸ್ತಿ ಇದ್ದವರು ಈ ಅಳಿಲನ್ನು ಆಹಾರವಾಗಿ ಬಳಸುತ್ತಾರೆ. ಈ ಮೊದಲೇ ತಿಳಿಸಿದಂತೆ ಸೋಲಿಗರು ಈ ಬೇಟೆಯಲ್ಲಿ ನಿಸ್ಸೀಮರು. ಊರೂರು ತಿರುಗುವ 'ಜಂಗಾಲಿ' ಎನ್ನುವ ಜನಾಂಗದವರು ತಮ್ಮ ಅಲೆದಾಟದ ಜೀವನದಲ್ಲಿ ಈ ಅಳಿಲು ಬೇಟೆಯನ್ನು ಉಳಿಸಿಕೊಂಡು ಬಂದಿದ್ದಾರೆ.

೬. ಕಾಡುಬೆಕ್ಕಿನಬೇಟೆ : ಬೆಕ್ಕುಗಳಲ್ಲಿ ಎರಡು ವಿಧ. ಒಂದು ಊರು ಬೆಕ್ಕು. ಎರಡನೆಯದು ಕಾಡು ಬೆಕ್ಕು. ಇದು ಊರು ಬೆಕ್ಕಿಗಿಂತ ಆಕಾರ, ಗಾತ್ರದಲ್ಲಿ ದೊಡ್ಡದಾಗಿರುತ್ತದೆ. ಹೋಲಿಕೆಯಲ್ಲಿ ಇದು ಮೊಲದ ಬೇಟೆಯನ್ನು ಹೋಲುತ್ತದೆ. ಬಲೆ ಇಲ್ಲವೆ, ಮರಹತ್ತಿ ಹಿಡಿಯುತ್ತಾರೆ. ಕೆಲವೊಂದು ಹಿಂದುಳಿದ ಜನಾಂಗದವರು ಮಾತ್ರ ಇದನ್ನು ಬೇಟೆಯಾಡುತ್ತಿದ್ದು, ಅವರಲ್ಲಿ ಬೇಡರು ಸಾಹಸದಿಂದ ಗುಡ್ಡ-ಬೆಟ್ಟ ಅಲೆದಾಡಿ ಹಿಡಿಯುತ್ತಾರೆ. ಊರುಬೆಕ್ಕು ಸೇವನೆಗೆ ನಿಷಿದ್ಧವಾದರೂ ಕೆಲವರು ಸೇವಿಸುತ್ತಾರೆ. ಬೇಡರು ಈ ಕಾಡುಬೆಕ್ಕನ್ನು ತಿನ್ನುತ್ತಾರೆ. ಏದು, ಕರಡಿ, ಮುಳ್ಳುಹಂದಿಗಳ ಬೇಟೆಯೂ ಇದರಂತೆ ಹಗಲಿನಲ್ಲಿ ನಡೆಯುತ್ತದೆ.

೭. ದೊಣ್ಣೆಕಾಟನ ಬೇಟೆ : ಒತಿಕ್ಯಾತ ಅಥವಾ ದೊಣ್ಣೆಕಾಟನನ್ನು ಬೇಡ ಜನಾಂಗದ ಮಕ್ಕಳು ಬೇಟೆಯಾಡುತ್ತಾರೆ. ಮಳೆಗಾಲದಲ್ಲಿ ಅದನ್ನು ತಂದು ಮೆರವಣಿಗೆ ಮಾಡುವುದು ಬಾಲಕ್ರೀಡೆಗಳಲ್ಲೊಂದು. ಅದು ತಲೆ ಅಲ್ಲಾಡಿಸಿದ ಕೂಡಲೆ ಬಡಿಯುವುದು ಇದನ್ನು ಮಕ್ಕಳು ಮಾತ್ರ ಬೇಟೆಯಾಡುತ್ತಾರೆ ವಿನಾ ತಿನ್ನುವುದಿಲ್ಲ. ಬೆಕ್ಕು ಅಥವಾ ಹದ್ದುಗಳಿಗೆ ಸುಲಭವಾಗಿ ಸಿಗುವ ಆಹಾರವಾಗಿದೆ.

೮. ಗುಬ್ಬಬೇಟೆ : ಇದು ಸಾಕಷ್ಟು ಪ್ರಚಲಿತದಲ್ಲಿರುವ ಬೇಟೆ ವಿಧಾನ. ಪಳಕಿ, ಕೌಜುಗ, ಬೆಳವ, ಟ್ರವುಕ, ಮುಂತಾದ ಪಕ್ಷಿಗಳನ್ನು ಬೇಟೆಯಾಡುತ್ತಾರೆ. ಕೌಜುಗಬೇಟೆ, ಪೌಜ' ಉರುವಲು, 'ಬಡೆಗಲುಬಂಡೆ' ಮುಂತಾದ ಪರಿಕರಗಳಿಂದ ಹಿಡಿಯುತ್ತಾರೆ. ಇತ್ತೀಚೆಗೆ ಕವಣೆ ಬಳಸುತ್ತಾರೆ. ಕೋವಿಯಿಂದಲೂ ಬೇಟೆ ಸಾಗುತ್ತಲಿದೆ. ಸಣ್ಣ ಬಲೆಗಳನ್ನು ಹಾಕಿ ಪಕ್ಕದಲ್ಲಿ ಸಾಕಿದ ಕೌಗಳವನ್ನಿಡುವರು. ಅದರ ಧ್ವನಿ ಕೇಳಿ ಸಂಗಾತಿಯೆಂದು ಉಳಿದ ಕೌಜುಗಗಳು ಬಂದು ಬಲೆಗೆ ಬೀಳುತ್ತವೆ. ಬಯಲು ಸೀಮೆಯಲ್ಲಿ ಬೇಡರು ಈ ವಿಧಾನವನ್ನು ಅನುಸರಿಸುತ್ತಾರೆ.

ಬೇಡರು 'ಬೆಳವ' ಎನ್ನುವ ಪಕ್ಷಿಯನ್ನು ತತ್ತಿಯ ಮೇಲೆ ಕುಳಿತಾಗ ಉಪಾಯದಿಂದ ಉರುಲಿನ ಮೂಲಕ ಹಿಡಿಯುತ್ತಾರೆ. 'ಪಳಕಿ' ಎನ್ನುವ ಪಕ್ಷಿಯನ್ನು ಸಹ ಅಷ್ಟೆ ಉರುಲು ಮುಂತಾದ ಸಲಕರಣೆಯಿಂದ ಆಡುತ್ತಾರೆ. ಹಕ್ಕಿ-ಪಿಕ್ಕಿ ಜನಾಂಗದವರು ಇಂಥ ಬೇಟೆಯಲ್ಲಿ ಪ್ರವೀಣರು.

೯.ಜೇನುಬೇಟೆ : ಕರ್ನಾಟಕದಲ್ಲಿ ಅಪರೂಪವಾದುದೇ ಜೇನುಬೇಟೆ. ಯಾವುದೇ ತರಹದ ಬೇಟೆ ಎಲ್ಲೂ ಸಿಗದಿದ್ದರೆ ಬಳಲಿದ ಬೇಟೆಗಾರ ಅರಣ್ಯದ ತಂಪಾದ ಪ್ರದೇಶದಲ್ಲಿ ಜೇನನ್ನು ಹುಡುಕುವ ಹವ್ಯಾಸವನ್ನು ಬೆಳೆಸಿಕೊಂಡಿದ್ದಾನೆ. ಇದು ಬೇಡರು, ಸೋಲಿಗರು, ಕಾಡುಕುರುಬರು, ಜೇನುಕುರುಬರಿಗೆ ಒಂದು ಮುಖ್ಯವಾದ ವೃತ್ತಿಯಾಗಿದೆ. ಜೇನು ಎರಡು ಋತುಮಾನಗಳಾದ ಮೇ, ಜೂನ್ ತಿಂಗಳಿನಲ್ಲಿ ಒಂದು ಕೊಯ್ಲು ಕೊಟ್ಟರೆ, ಅಕ್ಟೋಬರ್‌ನಿಂದ ನವೆಂಬರ್‌ವರೆಗೆ ಮತ್ತೊಂದು ಕೊಯ್ಲು ಸಿಗುತ್ತದೆ. ಇವುಗಳನ್ನು ಯಥೇಚ್ಛವಾಗಿ ತಿನ್ನುವವರು ಸೋಲಿಗರು ಮತ್ತು ಜೇನುಕುರುಬರು. ನಿರ್ಬಂಧವಿಲ್ಲದ ಕಾರಣ ಜೇನಿನ ಬೇಟೆಗೆ ಇಂದು ಗುಂಪು-ಗುಂಪಾಗಿ ಹೋಗುತ್ತಾರೆ.

ಸಾಮೂಹಿಕವಾಗಿ ಕಂಡುಹಿಡಿದ ಜೇನನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ದೊಡ್ಡಗಾತ್ರದ ಜೇನುಗಳಿದ್ದರೆ ಅದರ ಅಡಿಯಲ್ಲಿ ಬೆಂಕಿ ಹಾಕಿ ಹೊಗೆ ಎಬ್ಬಿಸಿ, ಆ ಹೊಗೆಯಿಂದ ಜೇನು ಹುಳುಗಳು ದೂರದಲ್ಲಿ ಎದ್ದು ಓಡುವಂತೆ ಮಾಡುತ್ತಾರೆ. ಹುಳುಗಳು ಹಾರಿಹೋದ ಮೇಲೆ ಮರ ಹತ್ತಿ ಜೇನಿನ ಹುಟ್ಟಿಯನ್ನು ಕುಯ್ದು ಬುಟ್ಟಿಯೊಳಕ್ಕೆ ತುಂಬಿ ಕೆಳಗೆ ಬರುವರು. ಮರದ ಕೆಳಗೆ ಇರುವ ವ್ಯಕ್ತಿಗಳು ಬುಟ್ಟಿಯಿಂದ ಜೇನನ್ನು ತೆಗೆದು ಪಾತ್ರೆಗಳಿಗೆ/ಸೀಸಗಳಿಗೆ ತುಂಬುವರು. ಜೇನಿರುವ ಮರವನ್ನು ಏರುವಾಗ ಪಂಜನ್ನು ಹಿಡಿದು ಜೇನಿನ ಗೂಡಿಗೆ ತಾಗಿಸಿದರೆ, ಹುಳುಗಳು ಬೆಂಕಿಗೆ ಸಿಕ್ಕಿ ಸತ್ತು ಕೆಳಗೆ ಉರುಳುವವು.

'ತುಡುಬೆ' ಅಥವಾ 'ನೊಸರು' ಮುಂತಾದ ಸಣ್ಣ ಜಾತಿಯ ಜೇನುಬೇಟೆ ಅಷ್ಟೇನು ದೊಡ್ಡದಾಗಿರುವುದಿಲ್ಲ. ಕಡ್ಡಿಯಿಂದ ಜೇನುಹುಳುಗಳನ್ನು ಸರಿಸಿ ಕೊಯ್ಯುತ್ತಾರೆ. ಇಂತಹ ಜೇನನ್ನು ಕುಯ್ಯಲು ಹೊರಡುವ ಸಂದರ್ಭದಲ್ಲಿ ಸೋಲಿಗರು ತಮ್ಮ ಕುಲದೇವತೆಗೂ ಜೇನುದೇವತೆಗೂ ಪೂಜೆಮಾಡಿ ಹೋಗುತ್ತಾರೆ. ಹಾಡು ಹಾಡಿದರೆ ಜೇನು ಹುಳುಗಳು ಕಚ್ಚುವುದಿಲ್ಲವೆಂಬ ನಂಬಿಕೆ ಇದೆ.

ಜೇನುಬೇಟೆ ಕೊನೆಗೊಂಡಾಗ ಅವರ ದೇವರಿಗೆ ಪೂಜೆ ನಡೆಯುತ್ತದೆ. ಬೇಟೆಯಲ್ಲಿನ ಎಲ್ಲ ಸದಸ್ಯರು ಒಂದೆಡೆ ಸೇರಿ ತಾವು ತಂದಿದ್ದ ಆಹಾರವನ್ನು ಬೇಯಿಸಿದ ಗೆಣಸು, ಸಜ್ಜೆರೊಟ್ಟಿಯೊಂದಿಗೆ ಜೇನುತುಪ್ಪದಲ್ಲಿ ಲೇಪಿಸಿಕೊಂಡು ತಿನ್ನುತ್ತಾರೆ. ಬೇಟೆಯ ಯಜಮಾನನಿಂದ ಅವರವರ ಪಾಲಿನ ಜೇನನ್ನು ಅವರಿವರಿಗೆ ಹಂಚಿಕೊಂಡು ತಮ್ಮ ಮನೆಗಳಿಗೆ ಮರಳುತ್ತಾರೆ. ಬೇಟೆಗೆ ಹೊರಡುವ ಸಂದರ್ಭದಲ್ಲಿ ಉಂಟಾಗುವ, ಎದುರಾಗುವ, ಶಕುನಗಳಿಗೆ ಬುಡಕಟ್ಟು ಜನರು, ಇತರರು ಸಂಪ್ರದಾಯದ ಪ್ರಕಾರ ಅನುಸರಿಸುತ್ತಾರೆ. ಬೇಟೆಗೆ ಹೊರಟಾಗ ಬೆಕ್ಕು ಅಡ್ಡಬಂದರೆ, ಯಾರಾದರೂ ಕಟ್ಟಿಗೆಯನ್ನು ಹೊತ್ತು ತಂದರೆ ಬೇಟೆಗೆ ಅಪಶಕುನವಾದಂತೆ. ಹೋಗುವಾಗ ನಾಗರಹಾವು, ನರಿ ಅಡ್ಡವಾದರೆ ಫಲಕಾರಿಯಾಗುವುದೆಂಬ ನಂಬಿಕೆ ಇದೆ.

೧೦.ಮೀನಿನ ಬೇಟೆ : ಆದಿಕಾಲದಿಂದಲೂ ಸರಳವಾದ ಬೇಟೆ ಎನಿಸಿದ್ದು ಮೀನುಬೇಟೆ. ಮೀನನ್ನು ಹೆಚ್ಚಾಗಿ ಕೆರೆ,ಕಟ್ಟೆ, ನದಿ, ಕಾಲುವೆ, ಹಳ್ಳ, ಕೊಳ್ಳಗಳಲ್ಲಿ ಮತ್ತು ಬಾವಿಗಳಲ್ಲಿ ಬೇಟೆಯಾಡುತ್ತಾರೆ. ಇವುಗಳನ್ನು ಹಿಡಿಯಲು ಬಲೆ, ಗಾಳ, ಕೂಳಿ, ಮುಂತಾದ ಸಲಕರಣೆಗಳನ್ನು ಉಪಯೋಗಿಸುತ್ತಾರೆ. ಬಲೆಯಲ್ಲಿ ಎರಡು ವಿಧ: ಒಂದು ದೊಡ್ಡ ಬಲೆ, ಇದು ಎರಡು ಕಡೆಗೆ ದೊಡ್ಡ ಕೋಲುಗಳನ್ನು ಕಟ್ಟಿ, ಅರ್ಧ ಚಂದ್ರಾಕಾರವಾಗಿ ಬಲೆಯನ್ನು ಮಾಡಿ ಹಿಡಿಯುತ್ತಾರೆ. ಒಂದು ಕಡೆಯಿಂದ ಇನ್ನೊಂದೆಡೆಗೆ ಶೋಧನೆ ನಡೆಯುತ್ತದೆ. ಇದನ್ನು ಇಬ್ಬರು ಬಲೆಯಿಡಿದುಕೊಂಡರೆ, ನಾಲ್ಕಾರು ಮಂದಿ ಮಡುವಿನಿಂದ ಸಪ್ಪಳ ಮಾಡಿಕೊಂಡು ಬಂದು ಒಂದೇ ಸಾರಿ ಎಲ್ಲರೂ ಬಲೆಯನ್ನು ಮೇಲಕ್ಕೆ ಎತ್ತುತ್ತಾರೆ. ಎತ್ತಿದಾಗ ಬಿದ್ದ ಮೀನನ್ನು ಒಬ್ಬ ವ್ಯಕ್ತಿ ಇಟ್ಟುಕೊಳ್ಳುತ್ತಾನೆ. ಇದರಲ್ಲಿ ಸಣ್ಣ-ಪುಟ್ಟ ಮೀನಿನಿಂದ ದೊಡ್ಡ ಗಾತ್ರದ ಮೀನಿನವರೆಗೆ ಬೀಳುತ್ತವೆ.

ಮತ್ತೊಂದು ವಿಧವಾದ ಬಲೆಯೆಂದರೆ ೩ ಅಡಿ ಗಾತ್ರದ ಅಗಲ ೨೦-೩೦ ಅಡಿ ಉದ್ದವಿರುವ ಕೊಂಡ್ಲಬಲೆ. ಇದು ಆಳವಾದ ನೀರಿನಲ್ಲಿ ಹೆಚ್ಚಾಗಿ ಹಾಕುತ್ತಾರೆ. ನೀರಿನಲ್ಲಿ ೩-೪ ಅಡಿ ಗಾತ್ರದ ಎತ್ತರದಲ್ಲಿ ಬಲೆ ಇದ್ದು, ಎರಡು ದಡಗಳಿಗೆ ಕಟ್ಟಿರುತ್ತಾರೆ. ಇದಕ್ಕೆ ಸಣ್ಣ ಮತ್ತು ದೊಡ್ಡಗಾತ್ರಗಳ ಮೀನುಗಳು ಬೀಳುತ್ತವೆ. ಬೇಸಿಗೆಕಾಲದಲ್ಲಿ ಮೀನಿನ

ಬೇಟೆಗೆ ಹೋಗುವುದು ಹೆಚ್ಚು. ಮಳೆಗಾಲದಲ್ಲಿ ಹೊಸನೀರು ಬಂದಾಗ ಮಾತ್ರ ಇವು ಮೇಲಕ್ಕೆ ಹತ್ತುವುದನ್ನು ತಡೆದು ಓಡಿಯುತ್ತಾರೆ. ಮೀನಿನಲ್ಲಿ ನಾನಾ ವಿಧಗಳಿವೆ. ಬಯಲು ಸೀಮೆಯಲ್ಲಿ ಬಾಳ, ಚಿತ್ತರೆ, ಮೊಟ್ಟು, ಉಸಗ ತಕ್ಕಡಿ, ನೆತ್ತಿಮೇಲೆ ಕಣ್ಣಿರುವ ಮೀನು, ಬುರ್ದೆಮೊಟ್ಟು, ಗೊದ್ಲೆ, ಬಳಸೆ, ಹೊಟ್ಟುಟ್ಟೆಬುಡ್ಡುಗ, ಹಾವುಮೀನು, ಉಲುಸೆ ಮುಂತಾದವುಗಳನ್ನು ಹೆಸರಿಸಬಹುದು. ಕೂಡಮೆ ಅಥವಾ ಕೂಳೆ ಉಪಕರಣದಿಂದ ಹರಿಯುವ ನೀರಿನ ಎದುರಿಗೆ ಕಟ್ಟಿದರೆ ಇದರೊಳಗೆ ನೀರು ಹರಿದು ಹೋಗುವಾಗ ಚಿಕ್ಕ-ದೊಡ್ಡ ಮೀನನ್ನು ನಿಯಂತ್ರಿಸುತ್ತದೆ. ಇದು ಕೆರೆಕಟ್ಟೆಗಳಲ್ಲಿ ಜಾಸ್ತಿ ಬಳಕೆಯಿದೆ. ನದಿಗಳಲ್ಲಿ ಈಜಾಡುತ್ತಲೇ ಬಲೆಗಳ ಸಹಾಯದಿಂದ ಬೇಟೆ, ಅಮೂಲ್ಯ ಸ್ಥಾನ ಪಡೆದಿದೆ. ಬೇಟೆಯಾದ ಮೇಲೆ ಮೀನನ್ನು ಮನೆಗೆ ತರುವಾಗ 'ರಾವು' ಎಂದು ತಿಳಿದು ಹಳ್ಳದಿಂದ ಬರುವಾಗ ತಂಗಡೆ ಸೊಪ್ಪನ್ನು ಜತೆಗೆ ತರಬೇಕೆಂದು ಹಿರಿಯರು ಹೇಳುತ್ತಾರೆ.

ಮೀನಿನ ಬೇಟೆ ಇಡೀ ಜಗತ್ತಿಗೆ ಹೆಚ್ಚಿನ ವರಮಾನ ತರುವ ಮಾಧ್ಯಮವಾಗಿದೆ. ಸಮುದ್ರ, ನದಿ, ಸರೋವರ, ಕೆರೆ, ಕಟ್ಟೆಗಳಲ್ಲಿ ಗುತ್ತಿಗೆಯನ್ನು ಪಡೆದು ಸರ್ಕಾರದ ಪರವಾನಿಗೆ ಮೂಲಕ ಮೀನನ್ನು ಹಿಡಿದು ಮಾರುತ್ತಾರೆ. 'ಬಯಲು ಸೀಮೆಯಲ್ಲಿ ಮೀನನ್ನು ಹಿಡಿಯಲು ವಿವಿಧ ರೀತಿಯ ಬಲೆಗಳನ್ನು ಉಪಯೋಗಿಸುತ್ತಾರೆ.' ಆದಿವಾಸಿಗಳು ಮೀನುಬೇಟೆಯನ್ನಾಡುವ ಸಂದರ್ಭದಲ್ಲಿ ಬಳಸುವ ತಂತ್ರ ಸ್ವಾರಸ್ಯದಿಂದ ಕೂಡಿದುದು. ಈ ಜನರಿಗೆ ಬಯಲುನಾಡಿನಲ್ಲಿ ಅಥವಾ ಕಡಲತೀರದಲ್ಲಿ ಬಳಸುವಂತಹ ಕೂಳಿಗಳಾಗಲೀ ಬಲೆಯಾಗಲಿ ಅವರಲ್ಲಿರುವುದು ಅಪರೂಪ. ಮಳೆಗಾಲದ ಸಂದರ್ಭದಲ್ಲಿ ಬಿಳಿಗಿರಿರಂಗನ ಬೆಟ್ಟದಲ್ಲಿ ಅಲ್ಲಲ್ಲಿರುವ ಸಣ್ಣ ಸಣ್ಣ ಕಟ್ಟೆಗಳಲ್ಲಿ ಮೀನು ಸೇರಿದ ಸಂದರ್ಭದಲ್ಲಿ ಸೋಪಿನ ನೊರೆಬರುವ ಕಾಯನ್ನು ಚೆನ್ನಾಗಿ ಜಜ್ಜಿ ಮೀನು ಹಿಡಿಯಬೇಕಾಗಿರುವ ನೀರಿನ ಗುಂಡಿಯಲ್ಲಿ ಕದಡುತ್ತಾರೆ. ಈ ನೊರೆಯಿಂದ ಸೊಕ್ಕಿದ ಮೀನು ಸತ್ತು ನೀರಿನ ಮೇಲೆ ತೇಲುತ್ತದೆ. ಈ ಮೀನುಗಳನ್ನು ಆಯ್ದು ಸಂಗ್ರಹಿಸಿ ತಂದು ಸೋಲಿಗರು ಸುಟ್ಟು ಅಥವಾ ಬೇಯಿಸಿ ತಿನ್ನುತ್ತಾರೆ. ಇಂದು ಸಮುದ್ರ, ನದಿಗಳಲ್ಲಿನ ಬೇಟೆಯು ದೊಡ್ಡ ಉದ್ದಿಮೆಯಾಗಿ ಬೆಳೆದಿದೆ.

ಕರ್ನಾಟಕದಲ್ಲಿ ಗಾಳವನ್ನು ಹಾಕಿ ಮೀನು ಬೇಟೆಯಾಡುವ ಪದ್ಧತಿ ಸಾಮಾನ್ಯ ಎಲ್ಲ ಭಾಗದಲ್ಲಿ ಕಂಡುಬರುತ್ತದೆ. ಗಾಳವನ್ನು 'ಗಾಣ' ಎಂತಲೂ ಬೇಡರು ಕರೆಯುವರು. ಗಾಳ ಎಂದರೆ ಉದ್ದವಾದ ಒಂದು ಕೋಲಿಗೆ ದಾರ ಕಟ್ಟಿ ಅದರ ಕೊನೆಗೆ ಪಿನ್ನಿನಂತಿರುವ ತಂತಿಯ ಕೊಂಡಿಯ ತುದಿಗೆ ಎರೆಹುಳುವನ್ನು ಏರಿಸಿ ಮೀನಿನ ಬಾಯಿಗೆ ಬಿಡುತ್ತಾರೆ. ಮೀನು ನುಂಗಿದಾಗ ಮೇಲಕ್ಕೆತ್ತಿದ್ದರೆ ಗಾಳದ ಒಂದು ಚೂಪಾದ ಮೊನೆ ಮೀನಿಗೆ ಸಿಕ್ಕಿಕೊಂಡು ಮೀನು ಗಡ್ಡೆಗೆ ಬರುತ್ತದೆ. ಬಾವಿ, ಕೊಳ, ಕೆರೆ, ಕಾಲುವೆಗಳಲ್ಲಿ ಗಾಳಗಳನ್ನು ಹೆಚ್ಚಾಗಿ ಹಾಕುತ್ತಾರೆ. ಚಾಣಾಕ್ಷವಾದ ಮೀನುಗಳು ಒಮ್ಮೊಮ್ಮೆ ತಪ್ಪಿಸಿಕೊಳ್ಳುತ್ತವೆ. ಆಹಾರ ಬಯಸಿ ಬಂದ ಮೀನು ತಂತಿಯಕೊಂಡಿಗೆ ಬಿದ್ದು ಸಾಯುತ್ತವೆ. ಹಳ್ಳಿಗಳ ಪರಿಸರದಲ್ಲಿ ಮೀನಿನ ಬೇಟೆಯು ತಾಂತ್ರಿಕವಾಗಿ ಮುಂದುವರಿದಿದೆ. ಅತೀ ಪ್ರಾಚೀನ ಕಾಲದಿಂದಲೂ ಮ್ಯಾಸಬೇಡರ ಸಂಸ್ಕೃತಿಯ ಧಾರ್ಮಿಕ ಪ್ರವೃತ್ತಿಯಲ್ಲಿ ಬೇಟೆಯ ಬಗೆಗಳನ್ನು ನೋಡಬಹುದು. ಅವರು ಇಂತಹ ಬೇಟೆ ನಮ್ಮ ಪರಂಪರೆಯಿಂದ ಬಂದುದಾಗಿದೆ ಎಂದು ಹೇಳುತ್ತಾರೆ. ಇಂತಹ ಬೇಟೆಯ ವಿಧಾನಗಳೆಂದರೆ : ಹೊಲಮೇರಿ ಬೇಟೆ ಮತ್ತು ಹಂದಿಬೇಟೆ.

೧೧. ನವಿಲು ಬೇಟೆ : ಆದಿವಾಸಿಗಳಷ್ಟೆ ಅಲ್ಲದೆ ಇತರರು ನವಿಲನ್ನು ಬೇಟೆಯಾಡುತ್ತಿದ್ದರು. ಮಲೆನಾಡಿನ ಶಿವಮೊಗ್ಗ, ಚಿಕ್ಕಮಗಳೂರು ಮೊದಲಾದ ಜಿಲ್ಲೆಗಳಲ್ಲಿ ವ್ಯಾಪಕವಾಗಿದೆ. ಬಯಲುಸೀಮೆಯಲ್ಲಿ ಅಪರೂಪವಾಗಿ ಕಾಣಸಿಗುವ ನವಿಲನ್ನು ಬೇಟೆಯಾಡುವುದು ಕಡಿಮೆ ಎನ್ನಬೇಕು. ಬೇಡರು ಇದನ್ನು ಬೇಟೆಯಾಡುವುದಿಲ್ಲ.

೧೨. ಹಂದಿ ಬೇಟೆ : ಇದನ್ನು ಯುಗಾದಿ ಅಮವಾಸ್ಯೆ ಬೇಟೆಯಂತಲೇ ಕರೆಯುವರು. ಹಿಂದಿನಿಂದಲೂ ಇದು ಖ್ಯಾತಿ ಪಡೆದು ಪ್ರಚಲಿತದಲ್ಲಿದೆ. ಕಾರಣ ಲಕ್ಷ್ಮೀ ಸ್ವರೂಪ, ಸಮೃದ್ಧಿ ಸಂಕೇತವೆಂದು ಹಂದಿ ಬಗ್ಗೆ ನಂಬಿಕೆಯಿದೆ. ಪ್ರಸ್ತುತ ಸಾಲಿನಲ್ಲಿ ಯುಗಾದಿ ಬೇಟೆಯನ್ನು ನೋಡಿದರೆ ಅದು ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತವಾದಂತಿದೆ. ಅಂಥವರಲ್ಲಿ ಬೇಡರು ಪ್ರಮುಖರು. ಯುಗಾದಿಯ ಅಮವಾಸ್ಯೆ ದಿನ ಗ್ರಾಮದವರೆಲ್ಲರೂ ಸೇರಿ ಕಾಡಿಗೆ ಹಂದಿಬೇಟೆಗೆಂದು ಹೋಗುವುದಕ್ಕೆ ಒಂದು ವಾರ ಮೊದಲೇ ಗೊತ್ತುಪಡಿಸುತ್ತಾರೆ. ಆಯಾ ಗ್ರಾಮದ ಮುಖ್ಯಸ್ಥನು ಮತ್ತು ಬೇಟೆಯ ಗುರಿಕಾರನು ಬೇಟೆಗೆ ಹೋಗಬೇಕೆಂದು ಸಮಾಲೋಚನೆ ನಡೆಸಿ, ಒಂದುವಾರ ಮೊದಲೇ ನಿರ್ಧರಿಸುತ್ತಾರೆ. ನಂತರ ಊರಿನ ಹರಿಜನ ವ್ಯಕ್ತಿ ತಪ್ಪಡಿ ಬಾರಿಸುತ್ತಾ ವಿಷಯ ಸಾರುತ್ತಾನೆ. ಆ ಸಾರುವುದು ವಿಶೇಷವಾಗಿ ಪ್ರತಿಯೊಬ್ಬರಿಗೂ ತಿಳಿಯಲಿ, ಮೈ ನವಿರೇಳಿ ಬರಲಿ ಎನ್ನುವ ಉತ್ಸುಕತೆ ಇದೆ. ತಮಟೆ ಬಾರಿಸುವವನು ಊರಿನ ಬುಡ್ಡೆಕಲ್ಲಿನಿಂದ ಆರಂಭಿಸಿ ಊರೆಲ್ಲ ಸುತ್ತಿಕೊಂಡು ಬರುತ್ತಾನೆ. ಅವನಿಗೆ ಅಂದು ಊರಿನ ಯಜಮಾನರ ಮನೆಯಲ್ಲಿ ಊಟ ಹಾಕಿಸುತ್ತಾರೆ. ಯುಗಾದಿಯ ಅಮವಾಸ್ಯೆ ದಿನ ಮ್ಯಾಸಬೇಡರೆಲ್ಲ ಸೇರಿ ಸಕಲ ಆಯುಧಭರಿತರಾಗಿ ಊರಿನ ಎಲ್ಲ ದೇವರಿಗೆ ಕೈ ಮುಗಿದು ಸಾರುವವನ ಹಿಂದೆ ಸಾಲಿಸೊಂದಿಗೆ ಹೋಗುವರು. ಮೊದಲು ಅಕ್ಕಪಕ್ಕದ ತಮ್ಮ ಕಾಡಿನಲ್ಲಿ ಬೇಟೆಯಾಡುತ್ತಾರೆ. ನಂತರ ಬೇಟೆ ಕಾಣಸಲಿಲ್ಲವೆಂದರೆ ಅವುಗಳು ಎಲ್ಲೇ ವಾಸಿಸಿರಲಿ ಅಲ್ಲಿಯ ಜಾಗವನ್ನು ಬೇಧಿಸಿಕೊಂಡು ಗಡಿ ಪ್ರಾಂತ್ಯಮೀರಿ ಹೋಗುವ ಸಾಧ್ಯತೆಯಿದೆ. ಅಲ್ಲಿ ಸಿಕ್ಕಂತಹ ಹಂದಿಯನ್ನು ತರುವಾಗ ಆ ಊರಿನ ಜನಕ್ಕೂ ಇವರಿಗೂ ಘರ್ಷಣೆಗಳಾಗುವುದುಂಟು. ಕಡಿದ ಹಂದಿಯನ್ನು ಕೂಡ ಅವರು ಕಸಿದುಕೊಳ್ಳಬಹುದು (ಹಂದಿಬೇಟೆಯಲ್ಲಿ ದೊಡ್ಡ ವ್ಯಾಜ್ಯವಾದ ಬಗೆಗೆ ಹುಟ್ಟಿಕೊಂಡ ಜನಪದ ಗೀತೆಯನ್ನು ಅನುಬಂಧದಲ್ಲಿ ಕೊಡಲಾಗಿದೆ). ಹೀಗಾಗಿ ಸಂಘರ್ಷಗಳಿಂದ ಪೊಲೀಸ್ ಠಾಣೆ, ಕೋರ್ಟು, ಕಚೇರಿಗಳೆಂದು ಅಲೆದಾಡುವುದುಂಟು. ತೀರ್ಪು ಸಿಗದೆ ಹಗೆತನವನ್ನು ಕೊನೆಯವರೆಗೂ ವಿವಿಧ ರೀತಿಯಲ್ಲಿ ತೀರಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

ಯುಗಾದಿ ಹಂದಿಬೇಟೆಯಲ್ಲಿ ಹಂದಿ ಸಿಕ್ಕರೆ ಅದನ್ನು ಊರ ಹೊರಗಿನವರೆಗೆ ತಂದು ಗಾಡಿಯಲ್ಲಿ ಕುಳ್ಳಿರಿಸಿ ಸರ್ವಲಂಕೃತ ಮಾಡಿ ಮೆರವಣಿಗೆಗೆ ಸಿದ್ಧಪಡಿಸುತ್ತಾರೆ. ಮೆರವಣಿಗೆಯ ಸಂದರ್ಭದಲ್ಲಿ ತಮ್ಮ ಆಯುಧಗಳಿಗೆ ಕುಂಕುಮ, ವಿಭೂತಿಗಳನ್ನಿಡುತ್ತಾರೆ. ಮೆರವಣಿಗೆ ಊರಿನ ಬುಡ್ಡೆಕಲ್ಲಿನ ಅಥವಾ ಊರುಬಾಗಿಲಿನತ್ತ ಬಂದಾಗ ಮುತ್ತೈದೆಯರು ಅಥವಾ ಸುಮಂಗಲೆಯರು, ಹರೆಯದ ತರುಣಿಯರು, ಊರಿನ ಬುಡ್ಡೆಕಲ್ಲಿನ ಮೂಲಕ ಹಾದು ಊರು ಬಾಗಿಲಿನತ್ತ ನಿಂತುಕೊಂಡು ಬೇಟೆ ಹೊಡೆದುಕೊಂಡು ಬಂದ ತಮ್ಮವರಿಗೆ ಆರತಿಯನ್ನು ಬೆಳಗುವರು. ಅವರುಗಳು ತಮಗಿಷ್ಟ ಬಂದಷ್ಟು ಹಣವನ್ನು ಆರತಿತಟ್ಟೆಗೆ ಹಾಕುತ್ತಾರೆ. ಊರು ಬಾಗಿಲನ್ನು ಪ್ರವೇಶಿಸುವ ಮುನ್ನ ಹಂದಿಯ ದೇಹಕ್ಕೆ ಎಣ್ಣೆ, ಕುಂಕುಮ ಸವರಿ ಪೂಜೆ ಮಾಡಿ ಏಳು ಸಾರಿ ಕೊಡಗಳಿಂದ ನೀರನ್ನು ಸುರಿಯುತ್ತಾರೆ. ತರುವಾಯ

ರುಂಡ-ಮುಂಡದಲ್ಲಿ ಮೂಗಿನತುದಿ, ಕಿವಿತುದಿ, ಬಾಲಗಳನ್ನು ಕತ್ತರಿಸಿ ಊರಿನ ಬುದ್ದೆಕಲ್ಲಿನ ಸಮೀಪ ಹೂಳುತ್ತಾರೆ. ಹಾಕಿದ ನೀರು ಊರಬಾಗಿಲು ಪ್ರವೇಶಿಸುವುದನ್ನು ತಡೆದು ಅಡ್ಡಕಟ್ಟುವರು. ಮುಂದುವರೆದು ಇತರ ಗ್ರಾಮಗಳಿಗೆ ಮೆರವಣಿಗೆ ಕೊಂಡೊಯ್ಯಲಾಗುತ್ತದೆ. ಎಲ್ಲ ಮುಗಿದ ಬಳಿಕ ಹಂದಿಯನ್ನು ಹರಿಜನರಿಗೆ ತಿನ್ನಲು ಕೊಡುತ್ತಾರೆ. ಕೆಲವು ಕಡೆ ಈ ಹಂದಿ ಬೇಟೆಯ ಆಚರಣೆ ಬೇರೆ ಬೇರೆ ರೀತಿ ಇದೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಕಮಲಾಪುರದಲ್ಲಿ ಏಳುಕೇರಿ ನಾಯಕ ಜನಾಂಗದವರು ಯುಗಾದಿ ಪಾಡ್ಯದ ತರುವಾಯ ಬೇಟೆಗೆ ಹೋಗುತ್ತಾರೆ. ಅಲ್ಲಿ ಬೇಟೆಗೆ ಹೋಗಲು ಆಯಾ ಕೇರಿಯ ಗುರಿಕಾರನೇ ಮುಖ್ಯಸ್ಥ. ಈ ನಾಯಕರ ೭ ಕೇರಿಗಳಿಗೆ ೭ ಜನ ಗುರಿಕಾರರಿದ್ದಾರೆ. ಬೇಟೆಗಾರರು ಎಷ್ಟೇ ಪ್ರಬಲವಾಗಿದ್ದರೂ ನೇಮಿಸಿದ ಗುರಿಕಾರನ ಮಾತು ಕೇಳಬೇಕು. ಮೊದಲು ಇವರು ಬೇಟೆಗೆ ಹೊರಡುವ ಮುನ್ನ ಆನೆಗುಂದಿ ಅರಸರನ್ನು ಕರೆಸುತ್ತಾರೆ. ಬಂದ ಅರಸನು ನಾಯಕರ ಪ್ರತಿಷ್ಠಿತ ಚಾವಡಿಕೇರಿಯ ಕಟ್ಟೆಯ ಮೇಲೆ ಕುಳಿತುಕೊಂಡು ಬೇಟೆಗೆ ಹೋಗುವವರಿಗೆ ಅರಸನು ಶುಭವಾಗಲೆಂದು ಹಾರೈಸುತ್ತಾನೆ. ರಾಜನ ಅಪ್ಪಣೆ ಪಡೆದು ಬೇಟೆಗೆ ಹೋಗುವುದು ಇಂದಿಗೂ ನಡೆದುಕೊಂಡು ಬಂದಿದೆ. ಬೇಟೆಯ ಪಡೆಯಲ್ಲಿ ಉರುಮೆ, ತಮಟೆ, ಮ್ಯಾಸಪಡೆ ಸೇರಿ ಹೋಗುತ್ತಿದ್ದವು. ಈ ಮ್ಯಾಸಪಡೆಗೆ ಮುಖ್ಯಸ್ಥ ಗುರಿಕಾರ. ಪುರುಷರು ಮಾತ್ರ ಬೇಟೆಗೆ ಹೋಗುತ್ತಾರೆ. ಮಹಿಳೆಯರು ಗಂಡ ಬೇಟೆಗೆ ಹೋಗುತ್ತಾನೆಂಬ ಸುದ್ದಿ ತಿಳಿದು ೩ ದಿನ ಮುಂಚೆ ಮಂಗಳಸೂತ್ರವನ್ನು ತೆಗೆದು ಪೂಜೆಮಾಡಿ ಇಡುತ್ತಾರೆ. ಗಂಡನ ಸಾವಿಗೆ ಅಂಜದೆ ಬೇಡತಿಯರು ದಿಟ್ಟ ನಿಲುವನ್ನು ತಾಳಿ ಬೇಟೆಗೆ ಪ್ರೋತ್ಸಾಹಿಸಿ, ಗಂಡನಿಗೆ ಪೂಜೆ ಮಾಡಿ ಕಾಲಿಗೆ ಮುಗಿದು ಮರಳಿ ಬರುವಂತೆ ಪ್ರಾರ್ಥಿಸಿಕೊಳ್ಳುತ್ತಾರೆ. ಬೇಟೆಯಿಂದ ಹಿಂದಿರುಗಿದ ಗಂಡನು ದೇವರ ಪೂಜೆ ಮುಗಿಸಿಕೊಂಡು ಮನೆಗೆ ಬಂದಾಗ, ಹೆಂಡತಿ ಆರತಿ ಬೆಳಗಿ, ವಿವಿಧ ಪೂಜೆ ಸಲ್ಲಿಸಿ ಪುನಃ ತನ್ನ ತಾಳಿಯನ್ನು ಗಂಡನಿಂದ ಕಟ್ಟಿಸಿಕೊಳ್ಳುತ್ತಾಳೆ. ಇಲ್ಲಿ ಬೇಟೆಗೆ ಹೋದ ಗಂಡ ಮರಳಿ ಬರುವನೇ ಇಲ್ಲವೆಂಬ ಶಂಕೆಯಿಂದ ಈ ರೀತಿ ಮಾಡುತ್ತಾರೆ ಎನ್ನಬಹುದು. ಪುನಃ ತಾಳಿಕಟ್ಟುವುದು ಹೊಸ ಜೀವನಾರಂಭವನ್ನು ಸಂಕೇತಿಸುವ ಪದ್ಧತಿಯಾಗಿದೆ.

ಬಡವ, ಶ್ರೀಮಂತ, ವಿದ್ಯಾವಂತ, ಪ್ರತಿಯೊಬ್ಬರೂ ಸೇರಿ ಬೇಟೆಗೆ ಹೊರಟು ಹೋಗುವಾಗ ಊರಿನ ಹೊರಗಿರುವ ಬುದ್ದೆಕಲ್ಲಿಗೆ ಬೇಟೆಗಾರರಲ್ಲಿ ೩ ಕೇರಿಯವರು ಪೂಜೆಮಾಡುವರು. ಬೇಟೆಗಾರರು ಸರಳ ಉಡುಪಿನಿಂದಿದ್ದು, ಬಿಳಿಯ ಒಳ ಅಂಗಿಯ ಮೇಲೆ ಹಸ್ತದ ಚಿಹ್ನೆ ಇಟ್ಟುಕೊಳ್ಳುತ್ತಿದ್ದು, ಬೇಟೆ ತಂದಾಗ ಮನೆ ಮುಂದೆ ಯಾರು ಬೇಕಾದರೂ ಅವರಿಗೆ ಆರತಿ ಬೆಳಗಬಹುದು. ಬೇಟೆಗಾರರು ವಿಭೂತಿ, ಕುಂಕುಮ, ಇಟ್ಟುಕೊಳ್ಳುವುದು ವಿಶೇಷ.

ಕಮಲಾಪುರದ ಬೇಟೆ ಬಗ್ಗೆ ಕೆಲವರು ತಿಳಿಸುವಂತೆ : ಬೇಟೆ ಎಲ್ಲೂ ಸಿಗಲಿಲ್ಲವೆಂದರೆ ಬೇವಿನ ಸೊಪ್ಪನ್ನಾದರೂ ಹರಿದುಕೊಂಡು ಬರುತ್ತಾರೆ.[೬] ಗುರಿಕಾರನ ನೇತೃತ್ವದಲ್ಲಿ ಮ್ಯಾಸಪಡೆ ಒಂದು ದಿವಸ ಬೇಟೆಗೆ ಹೋಗಲು ಪೊಲೀಸ್ ಠಾಣೆಗೆ ಹೋಗಿ ೭ ಕೇರಿಯ ಪ್ರಮುಖರು ಸಹಿಮಾಡಿ ಬಂದ ನಂತರ ಮರುದಿನ ಸರಿಯಾಗಿ ಮಧ್ಯಾಹ್ನ ೩ ಗಂಟೆ ಸಮಯಕ್ಕೆ ಬೇಟೆಗೆ ಹೊರಡುತ್ತಾರೆ.ಬೇಟೆಗೆ ಹೊರಡುವ ಕೇರಿಗಳ ವಿವರ :

ಮೊದಲನೆಯದು	ಬಂಡೆಕೇರಿ
ಎರಡನೆಯದು	ಪೆದಿಕೇರಿ
ಮೂರನೆಯದು	ತಿಮ್ಮತಕೇರಿ

ನಾಲ್ಕನೆಯದು	ಗೋನಾಳಕೇರಿ
ಐದನೆಯದು	ಚಾವಡಿಕೇರಿ
ಆರನೆಯದು	ಮಲಮುತ್ತಿಕೇರಿ ಮತ್ತು ಏಳನೆಯದು ಉಸಿ.

ಏಳನೆಯದು ನಾಮಕ್ಕೆ ಮಾತ್ರವುಂಟು. ಇವರೆಲ್ಲರು ಸೇರಿ ಚಾವಡಿಕೇರಿಮೂಲಕ ಹೋಗುತ್ತಾರೆ. ಚಾವಡಿ ಕೇರಿಯ ಕಟ್ಟೆ ಮೇಲೆ ಕುಳಿತಿರುವ ಹನುಮಂತರಾಯ ಪೂಜಾರಿಯ ಕಾಲಿಗೆ ಮುಗಿದು ಹೊರಡುವರು. ಬೇಟೆಗೆ ಹೋಗುವ ದಿನ ಕರಿ (ಮಾಂಸಾಹಾರ ಊಟ) ಮಾಡುತ್ತಾರೆ. ಬೆಟ್ಟಕ್ಕೆ ಹೋಗಿ ಸಾಯಂಕಾಲ ಬೇಟೆ ಮುಗಿಸಿಕೊಂಡು ಗಾರಿಭಾವಿ ಆಂಜನೇಯ ಗುಡಿ ಹತ್ತಿರ ಎಲ್ಲರೂ ಕೂಡುವರು. ಆಯಾ ಕೇರಿಗಳವರು ಆಯಾ ಮಾರ್ಗದಲ್ಲಿ ಹಾಗೆಯೇ ಮನೆಗೆ ಹೋದರೆ, ಕೊನೆಗೆ ಉಳಿದವರು ಅದೇ ಮಾರ್ಗದಲ್ಲಿ ಸಾಗಿ ಬರುತ್ತಾರೆ. ಕಳೆದ ೩-೪ ವರ್ಷಗಳಿಂದ ಬೇಟೆ ಅವಲೋಕನ ಹೀಗಿದೆ : ೭ ಕೇರಿಗಳ ಪೈಕಿ ತಿಮ್ಮ(ತ)ನಾಥ ಕೇರಿಯವರು ಮಾತ್ರ ಹಂದಿಯನ್ನು ತಂದು ಮೆರವಣಿಗೆ ಮಾಡಿದರು. ಉಳಿದವರು ತರಲಿಲ್ಲ. ಮ್ಯಾಳ, ತಪ್ಪಡಿ ಇದ್ದು, ಬಲ್ಲೆ (ಭರ್ಚೆ), ಗಂಡು ಗೊಡಲಿ, ಕೊಡ್ಲಿ, ಬಾಣಕೋಲು, ಬಂದೂಕುಗಳನ್ನು ಅವರು ಬಳಸುತ್ತಿದ್ದರು. ಆಯುಧಕ್ಕೆ ಬೇಟೆಗಾರನಿಗೆ ಒಕುಳಿಯನ್ನು ಮನೆಯ ಹತ್ತಿರ ತೆಗೆಯುತ್ತಾರೆ. ಬೇಟೆಯ ಮರುದಿನ ಮಾರಮ್ಮನ ಹಬ್ಬ ಮಾಡಿ ಕೆರೆ ಹಿಂದಿನಿಂದ ಬುಡ್ಡೆಕಲ್ಲಿನವರೆಗೆ ಬಂದು ಅಲ್ಲಿ ಅದಕ್ಕೆ ಕಾಯಿ ಒಡೆಸಿ ಕೈಬಿಡುತ್ತಾರೆ. ಮನೆಯಲ್ಲಿ ಕೊಯ್ಯುವ ಕುರಿಗೂ ಇವರು ಬ್ಯಾಟೆ ಎಂದು ಪ್ರಯೋಗಿಸುವುದು ಪ್ರಚಲಿತದಲ್ಲಿದೆ. ಅಡವಿ ಬೇಟೆ ಕಡಿಮೆಯಾಗಿ ಸಾಕು ಪ್ರಾಣಿಯನ್ನು ಬೇಟೆ ಎಂದು ಬಗೆಯುವ ಸ್ಥಿತಿ ಬಂದಿದೆ ಎನ್ನಬಹುದು.

ಮ್ಯಾಸಬೇಡರ ವಿಶಿಷ್ಟವಾದ ಹಂದಿಬೇಟೆಯ ಬಗ್ಗೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಚಿನ್ನಹಗರಿ ನದಿ ಪರಿಸರದಲ್ಲಿ ಒಂದು ಸ್ಪಷ್ಟ ಚಿತ್ರಣ ಕಾಣಬಹುದು. ಪೂಜಾರಹಳ್ಳಿ ಗ್ರಾಮಕ್ಕೆ ಸೇರಿದ ಕನ್ನಿಬೋರಯ್ಯನಹಟ್ಟಿ, ತಾಂಡಹಟ್ಟಿ, ಪೂಜಾರಹಳ್ಳಿ ಗ್ರಾಮದ ಎಲ್ಲ ಬೇಟೆಗಾರರು ಪ್ರತಿವರ್ಷದಂತೆ ಸುಮಾರು ೫೦೦ಕ್ಕೂ ಹೆಚ್ಚು ಮಂದಿ ಊರಿನಿಂದ ತಪ್ಪಡಿಗಳ ಸದ್ದಿನೊಂದಿಗೆ ಹೊರಡುತ್ತಾರೆ. ಗ್ರಾಮದ ದೊಡ್ಡ ಮೊರಡಿಯ ಹಳೆಕೆರೆ ಸಮೀಪದಲ್ಲಿ ಹಂದಿ ಬೇಟೆಗಾರರಿಗೆ ಕಾಣಸಿತಂತೆ. ೧೯೯೭ರಲ್ಲಿ ಬೇಟೆ ಸಂದರ್ಭ ಹೀಗಿದೆ : ಹಂದಿಯನ್ನು ಎಬ್ಬಿಸಿದವರು ಪೂಜಾರಹಳ್ಳಿಯವರು. ಇನ್ನೇನು ನಾಯಿಗಳು ಹಿಂಬಾಲಿಸಿ ಕಡಿಯಲು ಬಂದ ಬೇಟೆಗಾರರ ದಂಡನ್ನು ಕಂಡ ಹಂದಿ ತಲೆಮರೆಸಿಕೊಳ್ಳಲು ಹವಣಿಸಿ, ಸರೋವರದ ಮೂಲಕ ಪೂರ್ವ ಪಶ್ಚಿಮವಾಗಿ ಒಡಾಡಿತಂತೆ. ಹಳೆಯಕೆರೆ ಎರಿಯ ಮೇಲಿದ್ದ ಪಕ್ಕದ ಗ್ರಾಮವಾದ ಜುಮ್ಮೋಬನಹಳ್ಳಿ ಬೇಟೆಗಾರರು ಬಾಯಿಗೆ ಬಂದ ಹಂದಿಯನ್ನು ಚಾಣಾಕ್ಷತನದಿಂದ ಈ ಹುಡುಗರು ಕಡಿದರೂ, ಅವರು ಸಹಾ ಭಾಗವಹಿಸಿ ತಾವು ಕಡಿದಿದ್ದೇವೆಂದು ಸುಳ್ಳು ಹೇಳಿ ಹೊತ್ತುಕೊಂಡು ಓಡಿಹೋದರು ಎನ್ನಲಾಗಿದೆ. ಈ ಎರಡು ಗ್ರಾಮಗಳ ಬೇಡರಲ್ಲಿ ಪರಸ್ಪರ ಅತಿಕ್ರಮದಿಂದ ಘರ್ಷಣೆ, ಗಲಾಟೆ ನಡೆದರೂ ಜುಮ್ಮೋಬನಹಳ್ಳಿಯವರು ಹೆದರಿ ಕ್ಷಮೆ ಕೋರಿದರು.

ನಂತರ ಪೂಜಾರಹಳ್ಳಿಯವರು ಮರುದಿನ ಬೇಟೆಗೆ ಹೋಗಿ ಹಂದಿಯನ್ನು ಹೊಡೆದುಕೊಂಡು ಬಂದು ತಮ್ಮ ಸಂಪ್ರದಾಯಗಳಂತೆ ಮೂರು ಹಳ್ಳಿಗಳಲ್ಲಿ ಮೆರವಣಿಗೆ ಮಾಡಿದ ನಂತರ ಅದನ್ನು ಊರಿನಲ್ಲಿ ಎಲ್ಲರ ಅಪ್ಪಣೆ ಮೇರೆಗೆ

೩ ಪಾಲು ಹಾಕಲು ಸಿದ್ಧರಾದರು. ಆ ಪಾಲುದಾರರೆಂದರೆ :

೧. ಲಂಬಾಣಿಗರು

೨. ಮಾದಿಗರು

೩. ಕುಂಬಾರರು ಮತ್ತು ಉಪ್ಪಾರರು ಹೀಗೆ

೩ ಪಾಲುಗಳನ್ನು ಹಿಂದಿನಿಂದ ಗ್ರಾಮಸ್ಥರು ಅನುಸರಿಸಿಕೊಂಡು ಬಂದ ಪದ್ಧತಿಯಂತೆ ಹಂಚಲು ಯೋಚಿಸಿದಾಗ ಕೆಲವರು ನಿರಾಕರಿಸಿದರು. ಅವರೆಂದರೆ ಮಾದಿಗರು (ಹರಿಜನರು). ನಾವು ಎಲ್ಲ ಕೆಲಸ-ಕಾರ್ಯಗಳನ್ನು ಮಾಡಬೇಕೆಂದರೂ ಮಾಡುತ್ತೇವೆ. ಆದ್ದರಿಂದ ಹಂದಿಯನ್ನು ಪೂರ್ಣವಾಗಿ ನಮಗೆ ಬಿಟ್ಟುಕೊಡಬೇಕೆಂದು ಕಳಕಳಿಯಿಂದ ಬೇಡಿಕೊಂಡು ವಿಫಲರಾದರು. ಹೀಗೆ ಬೇಟೆಯನ್ನು ಹೊಡೆದು ತರುವವರು ಬೇಡರಾದರೆ, ಅದನ್ನು ಸೇವಿಸುವವರು ಬೇರೆಯವರೆಂಬುದು ಸ್ಪಷ್ಟ.

ಬೇಡರಿಗೆ ಯುಗಾದಿ ಬೇಟೆ ಸಿಗದಿದ್ದರೆ ಹಂಪೆ ಹುಣ್ಣಿಮೆಗೆ ಬೇಟೆಗೆ ಹೋಗುತ್ತಾರೆ. ನೆರೆಯ ಗ್ರಾಮಗಳಿಗೆ, ಸಹಕರಿಸಿದವರಿಗೆ ಹಂದಿಯನ್ನು ಹೊಡೆದು ಕೊಡುತ್ತಾರೆ. ತುಂಗಭದ್ರಾನದಿ ಮತ್ತು ವೇದಾವತಿ ನದಿಯ ಮಧ್ಯ ಭಾಗದಲ್ಲಿ ಈ ಬೇಟೆಯ ಔನ್ನತ್ಯವನ್ನು ಕಾಣಬಹುದಾಗಿದೆ. ಬಳ್ಳಾರಿ ಜಿಲ್ಲೆಯ ಕುಡತಿನಿಯ ನಾಯ್ಕರ ಹನುಮಂತಪ್ಪ ಚಿರತೆಯೊಂದಿಗೆ (೧೯೮೪) ಹೋರಾಡಿ ತನ್ನ ಬಲಗೈಯನ್ನು ಕಳೆದುಕೊಂಡಿದ್ದಾನೆ. ಹೀಗೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಮಲ್ಲೂರಹಳ್ಳಿಯಲ್ಲಿ (೧೯೮೭) ಚಿರತೆಯನ್ನು ಕೊಂದ ಕಾರಣ ಪಾಲಯ್ಯನಿಗೆ ಹುಲಿ ಕೊಂದಷ್ಟು ಗೌರವ ಕೊಟ್ಟು ಮೆರವಣಿಗೆ ಮಾಡಿದ್ದು ಸ್ಮರಣೀಯ.

೧೩. ಹೊಲಮೇರಿ ಬೇಟೆ (ಫಲಮರುಯಾಟ): ಮಳೆಗಾಲದ ಸಂದರ್ಭದಲ್ಲಿ ಮಳೆ ಬರಲಿಲ್ಲವೆಂದಾಗ, ಬರುವಿಕೆಗಾಗಿ ಹೊಲಮೇರಿ ಬೇಟೆಯನ್ನಾಡುತ್ತಾರೆ. ಮಳೆಬಾರದೆ ಬರಡಾಗಿದ್ದ ಭೂಮಿ ತಾಯಿಗೆ ಪೂಜಿಸಿ ವರುಣನನ್ನು ಒಲಿಸಿಕೊಳ್ಳುವ ಪರಿ ಇದಾಗಿದೆ. ಇದಲ್ಲದೆ, ಮಳೆಗಾಗಿ **ಗುಲಕವ್ವನನ್ನು** ಸಹಾ ಮ್ಯಾಸಬೇಡರ ಮಕ್ಕಳು ಆಚರಿಸುತ್ತಾರೆ. ಬದರಿನ ಬುಟ್ಟಿಯಲ್ಲಿ ಗುಲಕವ್ವನನ್ನು ಮಣ್ಣಿನ ಗೊಂಬೆಮಾಡಿಕೊಂಡು ಮನೆ ಮನೆಗೆ ಬಂದು, ಗುಲಕವ್ವ, ಗುಲಕವ್ವ ಎಲ್ಲಾಡಿ ಬಂದೇ ನೀರಿದ್ದು ತಾಗ ನಿಂತಾಡಿ ಬಂದೇ ಮಳೆರಾಯೋ .... ಮಳೆರಾಯ, ಎಂದು ಹಾಡುತ್ತಾರೆ. ಮಳೆರಾಯನ ಹೆಂಡತಿ ಅಕ್ಕಳ ಜೋಳವೆಂದು ಧಾನ್ಯದ ಸಂಕೇತವಾಗಿ ಬಳಸುತ್ತಾರೆ.[೭]

ಹೋಲಮೇರಿ ಬೇಟೆ ಆಯಾ ಗ್ರಾಮದ ವಲಬು, ಗಡಿಭಾಗದಲ್ಲಿ ನಡೆಯುವ ಬೇಟೆ ವಿಧಾನ. ಯಾವುದೇ ಒಂದು ಗ್ರಾಮದಲ್ಲಿ ಹಿರಿಯರು, ಕಿರಿಯರು ಹೋಲಮೇರಿ ಬೇಟೆಗೆ ಹೋಗುವುದು ಸಹಜ. ಇದನ್ನು ತೆಲುಗಿನಲ್ಲಿ ಫಲಮಾರುಯಾಟ ಎಂತಲೂ ಕರೆಯುವರು. ಇದು ವಿಶೇಷ ಸಂದರ್ಭದಲ್ಲಿ ಹೋಗುವ ಬೇಟೆಯ ಹುರುಪಿನಂತೆ ಕಂಡರೂ ವಿರೋಚಿತ ಮತ್ತು ಧರ್ಮ ಸಂಬಂಧವನ್ನು ಹೊಂದಿರುತ್ತದೆ. ಊರಿನ ಗಡಿ ಭಾಗಗಳಲ್ಲಿ ತಿರುಗಿ ಸಿಕ್ಕ ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಆ ಪ್ರಾಣಿಗಳೆಂದರೆ ಕುರಿ, ಮೇಕೆ. ಆಕಸ್ಮಿಕವಾಗಿ ಸಿಗಲಿಲ್ಲವೆಂದರೆ ತಮ್ಮ ಕುರಿಗಳ ಕಿವಿಯನ್ನಾದರೂ ಕೊಯ್ದುಕೊಂಡು ಬರುತ್ತಾರೆ. ಸ್ಮಶಾನಗಳಲ್ಲಿ ಮಾತ್ರ ಹೆಚ್ಚಾಗಿ ತಿರುಗಾಡಿ ಸಮಾಧಿಯಲ್ಲಿ ಹೂತಿದ್ದ ಶವವನ್ನು ಭರ್ಜಿಗಳಿಂದ ಮೇಲಕ್ಕೆತ್ತಿ ಅದು ಕೊಳೆಯದಿದ್ದರೆ ಸುಡುತ್ತಾರೆ. ಅದನ್ನು ಮಾಡುವ ಉದ್ದೇಶವೇನೆಂದರೆ :

ತೊನ್ನು ಇತ್ಯಾದಿ ಚರ್ಮವ್ಯಾಧಿಗಳಿರುವ ವ್ಯಕ್ತಿಗಳ ಶರೀರ ಕೊಳೆತಿರುವುದಿಲ್ಲವೆಂಬ ನಂಬಿಕೆಯಿಂದ ಆ ಹೆಣವನ್ನು ಹೊರತೆಗೆದು ಮತ್ತೊಮ್ಮೆ ಸುಡುವ ಮತ್ತು ಹುಳುವ ಪ್ರಕ್ರಿಯೆ ನಡೆಯುತ್ತದೆ. ಕೊಳೆಯದೆ ಇರುವ ಶರೀರದಿಂದ ಗ್ರಾಮಕ್ಕೆ ಬರ ಆವರಿಸಿದೆ, ಹೀಗಾಗಿ ಮಳೆ ಬರುವುದಿಲ್ಲವೆಂಬ ಪ್ರತೀತಿಗಳಿವೆ.

ಅಲ್ಲಿಂದ ಮುಂದಕ್ಕೆ ತೆರಳುವಾಗ ಪಕ್ಕದ ಊರುಗಳ ಕುರಿಗಳು ತಮ್ಮ ವಲಬುಗಳಲ್ಲಿದ್ದರೆ ಯಾವುದಾದರೊಂದು ಕುರಿಯನ್ನು ಕಡಿಯುತ್ತಾರೆ. ಇಲ್ಲವಾದರೆ ಆ ಪ್ರಾಣಿಯ ಕಿವಿಯನ್ನು ಕೊಯ್ದು ತರುತ್ತಾರೆ. ಇದು ಆಕ್ರಮಣಕಾರಿ ಮನೋಭಾವದಿಂದ ಜರಗುವ ಘಟನೆಯಾದರೂ ಅವರ ನಂಬಿಕೆಗಳಲ್ಲಿ ಇದು ಮಾನ್ಯವಾಗಿದೆ.

ಕರ್ನಾಟಕದಲ್ಲಿ ಬೇಟೆಯ ಸ್ಥಾನಮಾನವನ್ನು ಅವಲೋಕಿಸುವಲ್ಲಿ ನಾಗರಿಕತೆ ಮತ್ತು ವೈಜ್ಞಾನಿಕತೆಯ ಪ್ರಭಾವದಿಂದ ಬೇಟೆಯು ಸಡಿಲಗೊಂಡು ಮಾಯವಾಗುತ್ತದೆ. ಆಹಾರಕ್ಕಾಗಿ ಮತ್ತು ಹಬ್ಬ ಹರಿದಿನಗಳಲ್ಲಿ ಏಕಾಂಗಿಯಾಗಿ ಮತ್ತು ಗುಂಪು ಗುಂಪಾಗಿ ಬೇಟೆಯಾಡುವುದು ಕಂಡುಬರುತ್ತದೆ. ಬೇಟೆಯಿಂದ ಆರ್ಥಿಕವಾಗಿ ಮುಂದುವರೆದಿದ್ದರೂ ಕೆಲವರು ಆಹಾರವಾಗಿ ಮಾಡಿಕೊಂಡರೆ, ಹೆಚ್ಚಿನ ಹಣಕ್ಕೆ ಮಾರುವುದನ್ನು ನೋಡಬಹುದು. ಜಿಂಕೆ, ಹುಲಿ, ಚರ್ಮಗಳನ್ನು ಮಾರಾಟ ಮಾಡುತ್ತಿದ್ದರು. ಇಂದಿಗೂ ಸ್ವಾಮಿಗಳ ಮಠ ಮಂದಿರಗಳಲ್ಲಿ ಹುಲಿ, ಜಿಂಕೆ, ಇತ್ಯಾದಿ ಪ್ರಾಣಿಗಳ ಚರ್ಮಗಳನ್ನು ಆಸನಕ್ಕೆ (ಕೆಳಗೆ) ಹಾಕಿಕೊಳ್ಳುತ್ತಾರೆ. ಹೆಚ್ಚಾಗಿ ಇಂಥ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು.

ಬೇಟೆಯ ಬಗೆಗಿನ ನಂಬಿಕೆ :

ಪ್ರಾಚೀನ ಕಾಲದಿಂದಲೂ ಅನೂಚಾನವಾಗಿ ಬಂದ ನಂಬಿಕೆ, ರೂಢಿ, ಸಂಪ್ರದಾಯಗಳು ಅಪಾರ. ಇವುಗಳಲ್ಲಿ ಬೇಟೆಗೆ ಆಯಾ ಸಂಬಂಧಿಸಿದಂತೆ ಭೌಗೋಳಿಕ ಪ್ರದೇಶಕ್ಕೆ ತಕ್ಕಂತೆ ವ್ಯತ್ಯಾಸಗಳಿವೆ. ಬೇಟೆಗೆ ಹೊರಡುವಾಗ ಹಲ್ಲಿನುಡಿದರೆ ಒಳ್ಳೆಯದು, ಕೆಟ್ಟದ್ದು ಎಂಬುದು ದಿಕ್ಕುಗಳನ್ನು ಪ್ರತಿಸಿಧಿಸಿ, ಮನೆಯ ಪ್ರಾಣಿಗಳು ಅಂಬಾ ಎಂದು ಕೂಗಿದಾಗ, ನಾಯಿ ತನ್ನ ಬಾಲವನ್ನು ಅಲ್ಲಾಡಿಸಿದಾಗ, ಎತ್ತು ತಾನು ಎಡಭಾಗಕ್ಕೆ ಮಲಗಿದಾಗ, ಆಕಳು ಮೂತ್ರ ವಿಸರ್ಜನೆ ಮಾಡಿದರೆ ಒಂದು ಪ್ರಾಣಿ ಇನ್ನೊಂದು ಪ್ರಾಣಿಯನ್ನು ಕೊಲ್ಲುವ ಸೂಚನೆ, ಹಕ್ಕಿ, ಕೀಟಗಳು ಈ ರೀತಿ ಮಾಡಿದರೆ ಅದು ಒಳ್ಳೆಯ ಮತ್ತು ಕೆಟ್ಟ ಸಂಕೇತಗಳೆಂದು ನಂಬಲಾಗುತ್ತದೆ.

ಯಾರಾದರೂ ಮನೆಯಲ್ಲಿ ಎಲ್ಲಿಗೆ ಹೋಗುತಿಯಾ? ಎಂದು ಕೇಳಿದರೆ ಅದನ್ನು ಅಪಶಕುನವೆಂದು ತಿಳಿಯಲಾಗುತ್ತದೆ. ರಾತ್ರಿ ಕನಸಿನಲ್ಲಿ ಮೀನು, ಹಂದಿ, ಬಂದರೆ ರಾಹು ಎಂತಲೂ, ನಾಗರಹಾವು ಬಂದರೆ, ಗರ್ಭಧರಿಸುವ ಸಂಕೇತವೆಂತಲೂ, ತಾವು ಬೇಟೆಯಾಡಿದಂತಾದರೆ ಫಲಕಾರಿಯಾಗುವ ಸಂಭವ ಇಲ್ಲವೆಂಬ ಶಂಕೆ ಇರುತ್ತದೆ. ಬೇಟೆಗೆ ಹೊರಡುವ ವ್ಯಕ್ತಿಗೆ ಕಟ್ಟಿಗೆ, ಬೆಕ್ಕು, ವಿಧವೆಯರು ಅಡ್ಡಬರಬಾರದು. ಕತ್ತೆ ಕೂಗುವಾಗ ಮನೆ ಬಿಟ್ಟರೆ ಯಶಸ್ಸಿನ ಸಂಕೇತವೆಂದು, ಕಾಗೆ, ಗೂಬೆ, ಕೂಗಿದಾಗ ಸೋಲಿನ ಮುನ್ಸೂಚನೆಯಾಗುತ್ತದೆ. ಮನೆದೇವರ ಕಾಟವೆಂದು ಬೇಟೆಯಾಗದಿದ್ದರೆ ಅದನ್ನೇ ಪೂಜಿಸುತ್ತಾರೆ. ಬೇಟೆಗೆ ಹೊರಡುವಾಗ ಮನುಷ್ಯ ಪ್ರಾಣಿಗಳನ್ನು ಬೇಟೆಯಾಡಿದರೆ, ಆಯುಧಗಳು ಆಕಸ್ಮಿಕವಾಗಿ ಹೊಸ್ತಿಲು ಬಾಗಿಲುಗಳಿಗೆ ತಗಲಬಾರದು, ಎಂಬ ನಂಬಿಕೆ ಈ ಜನಾಂಗದಲ್ಲಿದೆ. ತೋಳವು ಅಡ್ಡಬಂದರೆ ಬೇಟೆ ಸಿಗುವ ಮುನ್ಸೂಚನೆ.

ಮೊದಲೇ ತಿಳಿಸಿದಂತೆ ಬೇಟೆಯ ಬಗೆಗಿನ ನಂಬಿಕೆಗಳು ವಿಪುಲವಾಗಿವೆ. ಅವು ಪ್ರಾಣಿಗಳಿಂದ ವ್ಯಕ್ತಿಗಳವರೆಗೆ ತಮ್ಮದೆ ಆದ ಸ್ವರೂಪವನ್ನು ಪಡೆದುಕೊಂಡಿರುತ್ತವೆ. ಪ್ರಚಲಿತವಿರುವ ಬೇಟೆಗೆ ಬಳಸುವ ಆಯುಧಗಳು ಆಧುನಿಕವಾಗಿರುತ್ತವೆ. ಬಿಲ್ಲು, ಬಾಣ, ಮಚ್ಚು, ಕೊಡಲಿ, ಕುಡಗೋಲು, ಭರ್ಚಿ, ಕವಣೆ, ಗಂಡುಕೊಡಲಿ (ಚಂದ್ರಾಯುಧ) ಇತ್ಯಾದಿ ಆಯುಧಗಳು ವಿಶೇಷವಾಗಿ ಕಂಡುಬರುತ್ತವೆ. ಬಂದೂಕು, ಕೋವಿ, ಇತ್ಯಾದಿಗಳು ವೈಜ್ಞಾನಿಕ ಉಪಕರಣಗಳಾಗಿ ಕಂಡುಬರುತ್ತವೆ. ಬೇಟೆಯ ಆಯುಧಗಳ ರಚನೆ ವಿನ್ಯಾಸ, ಅವುಗಳ ಬಳಕೆಯ ಬಗೆಗೂ ನಂಬಿಕೆಗಳು ದಟ್ಟವಾಗಿ ಹಬ್ಬಿವೆ.

ಬೇಟೆ ರೂಢಿಗತವಾಗಿ ಆಚರಣೆಯಲ್ಲಿದೆ. ಬಿಲ್ಲು ಬಾಣಗಳನ್ನಿಟ್ಟು ಇತರ ಎಲ್ಲ ಆಯುಧಗಳನ್ನು ಹಿರಿಯರ ಹಬ್ಬದ ಸಂದರ್ಭದಲ್ಲಿ ಪೂಜಿಸಲಾಗುತ್ತದೆ. ಇವುಗಳನ್ನು ವರ್ಷಕ್ಕೆ ಎರಡು ಬಾರಿ ಪೂಜಿಸುತ್ತಾರೆ. ಒಂದನೆಯದು ಯುಗಾದಿ, ಎರಡನೆಯದು ದಸರಾ ಹಬ್ಬದಲ್ಲಿ. ಬೇಟೆಯು ತನ್ನದೇ ಆದ ಅಸ್ತಿತ್ವವನ್ನು ರೂಢಿ ಮತ್ತು ಸಂಪ್ರದಾಯಗಳಲ್ಲಿ ಉಳಿದುಕೊಂಡು ಬಂದಿದೆ. ಬೇಟೆಯಾಡಿ ಮಡಿದ ವೀರನ ಕಥೆಗಳು ಕೆಲವು ಗ್ರಾಮಗಳಲ್ಲಿ, ಕಂಡುಬರುತ್ತವೆ. ಹಂದಿ, ಹುಲಿ, ಚಿರತೆ, ಮುಂತಾದ ಪ್ರಾಣಿಗಳೊಂದಿಗೆ ಹೋರಾಡಿ ಮಡಿದವರೇ ಹೆಚ್ಚು. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಕೋನಸಾಗರದಲ್ಲಿ ಚಿರತೆಯೊಂದಿಗೆ ಹೋರಾಡಿ ಮಡಿದ ಯರಮಂಚನಾಯಕನನ್ನು (ಪೆದ್ದಯ್ಯ) ಒಬನಹಳ್ಳಿ ಹತ್ತಿರ ಅವನ ಹೆಸರಿನಲ್ಲಿ ದೇವಾಲಯ ನಿರ್ಮಿಸಿ, ಹಬ್ಬ-ಹರಿದಿನಗಳನ್ನು ಮಾಡುವುದು ಬೆಳೆದು ಬಂದಿದೆ. ಇದರ ಪೂಜಾರಿಗಳು ಮತ್ತು ಅದೇ ವಂಶದವರು ಕೂಡ ತಮ್ಮ ಒಡೆಯನಂತೆ ಅವನ ಹೆಸರಿನ ಮೇಲೆ ದೇವಾಲಯಗಳನ್ನು ನಿರ್ಮಿಸಿ ಹಬ್ಬಗಳನ್ನು ಮಾಡುತ್ತಾರೆ. ಬೇಡರು ತಮ್ಮ ಮಕ್ಕಳಿಗೆ ತನ್ನ ವಂಶದ ನಿರ್ಮಾಪಕನ ಹೆಸರನ್ನೇ ಇಟ್ಟುಕೊಳ್ಳುತ್ತಾರೆ.

ಒಟ್ಟಾರೆ, ಬೇಡರು ತಮ್ಮೊಂದಿಗೆ ಉಳಿಸಿಕೊಂಡು ಬಂದಿರುವ ನಂಬಿಕೆಗಳು ವಿಶಿಷ್ಟವಾಗಿದ್ದು, ಶುಭ ಮತ್ತು ಅಶುಭವೆಂದು ಕಾರ್ಯ ಪ್ರವೃತ್ತಿಯಲ್ಲಿ ನಂಬಲಾಗುತ್ತದೆ. ಕಾಗೆ ಕೂಗಿದರೆ, ಅಡ್ಡಬಂದರೆ, ರೆಕ್ಕೆಯಿಂದ ಬಡಿದರೆ, ಬೇಟೆಗಾರನಾದವನಿಗೆ ಅಶುಭವೆಂಬ ನಂಬಿಕೆಯಿದೆ. ಹಲ್ಲಿನುಡಿದಾಗ ಬೇಟೆ ಬಗೆಗೆ ಆಲೋಚಿಸುತ್ತಿದ್ದರೆ ಲೋಚ, ಲೋಚ ಶಬ್ದ ಕೇಳಿ ಯಶಸ್ಸಿನ ಗುಟ್ಟನ್ನು ಅರಿಯುವರು. ಬೇಟೆಗೆ ಹೊರಟರುವಾಗ ಆಪ್ತರು ಊಟಮಾಡಿಕೊಂಡು ಹೋಗು ಎನ್ನಬಾರದು. ಮನೆಯಲ್ಲಿ ಹೆಣ್ಣುಮಕ್ಕಳು ಮುಟ್ಟಾಗಿದ್ದರೆ, ನೆಲಸಾರಿಸುತ್ತಿದ್ದರೆ, ಕಸಗುಡಿಸುವಾಗ ಬೇಟೆಗಾರನಿಗೆ ಕೆಟ್ಟ ಲಕ್ಷಣಗಳೆಂದು ಭಾವಿಸಿಕೊಳ್ಳುತ್ತಾರೆ. ಬೇಟೆಗೆ ಹೊರಡುವಾಗ ಮನೆ ಬಾಗಿಲು ಹಾಕಬಾರದು, ಸುಮಂಗಲೆ, ಗರ್ಭಿಣಿ, ನೀರಿನ ಕೊಡ ಅಡ್ಡಬಂದರೆ ಶುಭವೆನ್ನಲಾಗಿದೆ. ಕಾಗೆ, ಗೂಬೆಯಂತೆ ಬ್ರಾಹ್ಮಣ, ಕಟ್ಟಿಗೆ ಹೊರೆ, ವಿಧವೆ ಎದುರಾದರೆ ಕೆಟ್ಟದಾಗುವುದೆಂದು ಹೇಳುತ್ತಾರೆ. ಬೇಟೆಗಾರನಿಗೆ ಗ್ರಾಮದೇವತೆ ವಿಗ್ರಹದಿಂದ ಬಲಕ್ಕೆ ಹೂ ಬಿದ್ದರೆ ಶುಭ, ಎಡಕ್ಕೆ ಬಿದ್ದರೆ ಅಶುಭವಾಗುವುದೆಂಬ ನಂಬಿಕೆಯಿದೆ. ಸ್ತ್ರೀಯರು ಮನೆಯಲ್ಲಿ ಕಂಬ ಸುತ್ತಬಾರದು, ಪುರುಷನ ಎಡಗಣ್ಣು, ಹೆಣ್ಣಿನ ಬಲಗಣ್ಣು ಹಾರಿದರೆ ಅಶುಭವೆಂದು ಬೇಟೆಗಾರ ತೀರ್ಮಾನವನ್ನು ಬದಲಿಸುತ್ತಾನೆ. ಬೇಡರಿಗೆ ಕನಸಿನಲ್ಲಿ ಹಂದಿ ಬಂದರೆ ರಾಹು ಎಂದು ನಂಬುತ್ತಾರೆ. ನಿಜವಾದ ನಾಗರಹಾವು ಎದುರಾದರೆ ಪ್ರತಿಫಲ ಎಂಬ ನಂಬಿಕೆಯಿದೆ. ಅಮವಾಸ್ಯೆ ದಿನ ಬೇಟೆಗೆ ಒಳ್ಳೆಯದೆಂದು ಹೋಗುವರು. ಹಾವು, ಬೆಕ್ಕು, ನಾಯಿಗಳು ಎಡದಿಂದ ಬಲಕ್ಕೆ ಹೋದರೆ ಶುಭವೆಂದು ಭಾವಿಸುವರು. ಹೆಚ್ಚಾಗಿ ಚಿತ್ರದುರ್ಗ, ಬಳ್ಳಾರಿ, ರಾಯಚೂರು ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ವಿವಿಧ ರೀತಿಯ ನಂಬಿಕೆಗಳಿವೆ.

ಬೇಡರ ಸ್ಥಿತಿಗತಿ : ಕರ್ನಾಟಕದಲ್ಲಿರುವ ಬೇಡ ಜನಾಂಗದ ಸ್ಥಿತಿ-ಗತಿಗಳನ್ನು ವಿಶ್ಲೇಷಿಸುವುದು ಸುಲಭದ ಕಾರ್ಯವಲ್ಲ. ಏಕೆಂದರೆ ಇವರು ಒಂದೇ ಭೌಗೋಳಿಕ ಪರಿಸರಕ್ಕೆ ಹೊಂದಿಕೊಂಡಿಲ್ಲ. ಆಯಾ ಪ್ರದೇಶದ ವಾಯುಗುಣ ಹವಮಾನಕ್ಕೆ ತಕ್ಕಂತೆ ಹೊಂದಿಕೊಂಡು ಜೀವಿಸುತ್ತಾರೆ. ಒಂದು ಕಾಲದಲ್ಲಿ ರಾಜಕೀಯವಾಗಿ ಮಧ್ಯಕರ್ನಾಟಕವೇ 'ಬೇಡರನಾಡು' ಎನಿಸಿಕೊಂಡಿತ್ತು.[೮] ಇಂದು ಚೆಲ್ಲ-ಪಿಲ್ಲಿಯಾಗಿ ಹರಡಿಕೊಂಡಿದ್ದಾರೆ. ಬೇಡ ಜನಾಂಗದ ಸ್ಥಿತಿಗತಿಗಳು ಇಂದು ತುಂಬಾ ಶೋಚನೀಯವಾಗಿವೆ. ಬೇಟೆ ಆಚರಣೆಯನ್ನು ಬಟ್ಟರೆ ಬೇಟೆಯಾಡುವಂತೆಯೂ ಇಲ್ಲ. ಮತ್ತೊಂದು ಲಾಭದಾಯಕ ವೃತ್ತಿಯನ್ನು ಅವಲಂಬಿಸುವಂತೆಯೂ ಇಲ್ಲ. ಕೂಲಿಯಿಂದ ಜೀವಿಸುವುದೇ ಹೆಚ್ಚು. ಕಷ್ಟದ ಕೆಲಸ ಮಾಡಿ ಕಡಿಮೆ ಸಂಪಾದನೆ ಪಡೆಯುವವರೆ ಅಧಿಕ. ವ್ಯವಸಾಯದಲ್ಲಿ ನಿರತರಾಗಿದ್ದರೂ ಒಣಭೂಮಿ ಆದಾಯ ಕಡಿಮೆ. ನೀರಾವರಿ ಸೌಲಭ್ಯ ಇಲ್ಲದ ಕಾರಣ ಖುಷ್ಕಿ ಭೂಮಿಯಿಂದ ಅರಣ್ಯಗಳಲ್ಲಿ, ಗಿರಿ-ಪರ್ವತಗಳಲ್ಲಿ ವಾಸಿಸುವುದರಿಂದ ಫಲವತ್ತಾದ ಭೂಮಿ, ನದಿಪರಿಸರದ ಜೊತೆಗೆ ತಳವಾರಿಕೆ, ದಳವಾಯಿ ಗೌಡನಾಗಿ ಮೆರೆದಿರುವುದು ಗಮನೀಯ ಸಂಗತಿ. ಸೊಪ್ಪು-ಗಡ್ಡೆ ಗೆಣಸುಗಳ ಸಂಗ್ರಹಣೆ, ವಿದ್ಯಾಭ್ಯಾಸ, ಉದ್ಯೋಗ, ಕಾರ್ಖಾನೆ, ಸಂಘ-ಸಂಸ್ಥೆ, ವಾಣಿಜ್ಯ ವ್ಯಾಪಾರವಲ್ಲದೆ ಮುಖ್ಯವಾಗಿ ಕೃಷಿಯ ಚಟುವಟಿಕೆಯನ್ನು ಅವಲಂಬಿಸಿದ್ದಾರೆ.

ಧಾರವಾಡ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಬೇಡ ಜನಾಂಗದ ಧುರೀಣರು ರಾಜಕೀಯದಲ್ಲಿ ತಕ್ಕಮಟ್ಟಿನ ಸಾಧನೆ ಮಾಡಿದ್ದಾರೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲಿ ಇವರು ಅತೀ ಮಹತ್ವ ಪಡೆದಿದ್ದಾರೆ. ೧೯೯೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ/ವರ್ಗದ ಜನಸಂಖ್ಯೆ ಶೇ.೨೦.೬೨ರಷ್ಟಿದೆ. ರಾಜ್ಯದಲ್ಲಿ ಸಾಕ್ಷರತಾ ಪ್ರಮಾಣ ಶೇ.೫೯.೨ ರಷ್ಟಿದೆ. ಪರಿಶಿಷ್ಟ ಜಾತಿ/ವರ್ಗದಲ್ಲಿ ಶೇ.೨೫ ರಷ್ಟು ಭೂರಹಿತ ಕೃಷಿ ಕಾರ್ಮಿಕರಿದ್ದಾರೆ. ಅದರಲ್ಲಿ ಶೇ.೨೪ ಬೇಸಾಯಗಾರರಿವರು. ಬೇಡರು ಬೇಸಾಯಗಾರರಾಗಿ, ಕೃಷಿಕಾರ್ಮಿಕರಾಗಿ, ಪಶುಸಂಗೋಪನೆ, ಅರಣ್ಯಗಾರಿಕೆ, ಮೀನುಗಾರಿಕೆ, ಬೇಟೆ, ಕೃಷಿ, ಕಾಫಿ, ಟೀ, ತೋಟಗಳಲ್ಲಿ ಕೆಲಸ ಮಾಡುತ್ತಿದ್ದರು.

೧೯೭೪ರಲ್ಲಿ ಎಲ್.ಜಿ. ಹಾವನೂರ್‌ರವರ ಹಿಂದುಳಿದ ವರ್ಗಗಳ ಆಯೋಗವು ನಾಯಕ ಜನಾಂಗದ ೧೭ ಪರ್ಯಾಯ ಹೆಸರುಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲಾಯಿತು. ಅಂದಿನಿಂದ ಇಂದಿನವರೆಗೆ ಇವರು ಸೌಲಭ್ಯ ಪಡೆಯುತ್ತಿದ್ದಾರೆ. ರಾಜಕೀಯದಲ್ಲಿ ಕೆಲವು ವ್ಯಕ್ತಿಗಳು ಭಾಗವಹಿಸಿ ಅಪಾರ ಸಾಧನೆ ಮಾಡಿದ್ದು ಸ್ಪಷ್ಟ. ಈ ಬೇಡರಲ್ಲಿ ೨ ವಿಭಾಗಗಳಿವೆ. ಒಂದು ಊರುನಾಯಕರು ಮತ್ತೊಂದು ಮ್ಯಾಸನಾಯಕರು. ಊರುನಾಯಕರು ನಾಗರಿಕರಾಗಿ ಮುಂದುವರಿದಿದ್ದು, ಪ್ರತಿಯೊಂದು ಸೌಲಭ್ಯವನ್ನು ಪಡೆಯುತ್ತಾ, ನಗರ, ಪಟ್ಟಣಗಳಲ್ಲಿ ವಾಸಿಸುತ್ತಾರೆ. ಮ್ಯಾಸಬೇಡರು ಒಣಭೂಮಿಗೆ ಜೋತು ಬಿದ್ದು ಹಟ್ಟಿ (Hamlet)ಗಳಲ್ಲಿ ಜೀವಿಸುತ್ತಾರೆ. ಇವರು ಬುಡಕಟ್ಟು ಸಂಸ್ಕೃತಿಯನ್ನು ಕೈ ಬಿಟ್ಟಿಲ್ಲ. ಮೀಸಲಾತಿಯಲ್ಲಿ ಇವರನ್ನು ಪ್ರತ್ಯೇಕಿಸಿ ಸೌಲಭ್ಯ ನೀಡಿದರೆ ಪ್ರಗತಿ ಕಾಣಬಹುದು. ದೇವರಾಜಅರಸು ಅವರ ಕಾಲದಲ್ಲಿ ನಾಯಕ ಜನಾಂಗಕ್ಕೆ ಹೊಸಜೀವ ತುಂಬಿದವರು ಎಲ್.ಜಿ. ಹಾವನೂರು. ಹೀಗೆ ಅನೇಕ ನಾಯಕ ಮುಖಂಡರುಗಳು ಸ್ವಾತಂತ್ರ್ಯ ಹೋರಾಟದಿಂದ ಇಂದಿನವರೆಗೆ ಸಮಾಜದ ಏಳಿಗೆಗಾಗಿ ಶ್ರಮಿಸಿ ಮರೆಯಾಗಿದ್ದಾರೆ ; ಈಗಲೂ ಹಲವಾರು ಮಹನೀಯರು ಶ್ರಮಿಸುತ್ತಿದ್ದಾರೆ. ಬೇಡರಲ್ಲಿ ಇಂದು ಕೆಲವರು ಬೇಟೆಯಾಡಿದರೆ, ಕೆಲವರು ಕೃಷಿ,

ಸರ್ಕಾರಿ ಉದ್ಯೋಗದಿಂದ ಸ್ವತಃ ದುಡಿಯುತ್ತಿದ್ದಾರೆ. ಕೆಲವರು ರಾಜ್ಯದ ಹಾಗೂ ರಾಷ್ಟ್ರದ ರಾಜಕೀಯದಲ್ಲಿ ಉನ್ನತ ಹುದ್ದೆಗಳನ್ನು ಪಡೆಯಲು ಹವಣಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಬೇಟೆ ಇಂದು ತನ್ನ ಸ್ವರೂಪವನ್ನು ಬದಲಾಯಿಸಿಕೊಂಡಿದ್ದರೂ, ಅಲ್ಲಲ್ಲಿ ಬೇಟೆಯ ಜೀವಂತಿಕೆ ಕಂಡುಬರುತ್ತದೆ. ವಿಶೇಷತೆಯೆಂದರೆ ಬೇಟೆಯ ಗತಿಯನ್ನು ಇಂದು ನಿರ್ಧರಿಸುವಂಥದ್ದಾಗಿರುತ್ತದೆ. ಪ್ರತಿಯೊಂದು ಜನಾಂಗದವರು ಆದಿಯಿಂದ ಬೇಟೆಯಲ್ಲಿ ತಮ್ಮನ್ನು ತಾವು ವಿರೋಚಿತವಾಗಿ ಗುರುತಿಸಿಕೊಂಡಿದ್ದಾರೆ. ವರ್ಷಕ್ಕೊಮ್ಮೆ ಮಾತ್ರ ಯುಗಾದಿ ಸಂದರ್ಭದಲ್ಲಿ ಬೇಡರು ಇಂದಿಗೂ ಕೈಗೊಂಡ ಹಂದಿ ಬೇಟೆಯನ್ನು ಹಿಂದೆ ತಿಳಿಸಲಾಗಿದೆ. ಉತ್ತರ ಕರ್ನಾಟಕದ ಅರಕೇರಿ ಸಂಸ್ಥಾನದ ರಾಜನಮನೆಯನದವರು (ಬಡಸಾಹೇಬ) ನೇತೃತ್ವದಲ್ಲಿ ಸಮಸ್ತಜನ ಸೇರಿ ಯುಗಾದಿ ಕರಿದಿನ ಬೇಟೆ ಹೋಗುವರು. ೭ ಕೇರಿ ಬೇಡರು ಇತರರು ಸೇರಿ ಮೊಲ, ಚಿಗರೆ, ಉಡ, ಇತ್ಯಾದಿ ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಇವರೊಂದಿಗೆ ಸಕಲವಾದ್ಯ ನಾಯಿಗಳು ಜತೆಗಿರುತ್ತವೆ. ಬೇಟೆಗಾರರು ರಾಜನಿಗೆ ಸಲಾಮು ಕೊಡುತ್ತಾರೆ.[೯]

ಭೌಗೋಳಿಕವಾಗಿ ಆಯಾ ಪ್ರದೇಶದಲ್ಲಿ, ಪರಿಸರ, ವಾಯುಗುಣ, ಹವಮಾನಕ್ಕೆ ತಕ್ಕಂತೆ ಬೇಟೆ ನಿರಂತರತೆಯನ್ನು ಕಾಪಾಡಿಕೊಂಡಿದೆ. ಉತ್ತರಕರ್ನಾಟಕದಲ್ಲಿ ಬೇಟೆ ಹೆಚ್ಚಾಗಿ ಕಂಡುಬರುವುದಿಲ್ಲ. ದಕ್ಷಿಣ ಕರ್ನಾಟಕದಲ್ಲಿಯೂ ಇದು ಸ್ವಲ್ಪ ಮಟ್ಟದಲ್ಲಿ ಉಳಿದುಕೊಂಡು ಬಂದಿದ್ದು ; ಮಧ್ಯ ಕರ್ನಾಟಕದಲ್ಲಿ ವಿಶೇಷವಾಗಿ ಚಿತ್ರದುರ್ಗ, ಬಳ್ಳಾರಿ, ಜಿಲ್ಲೆಗಳಲ್ಲಿ ವಾಸಿಸುವ ಬೇಡರಲ್ಲಿ ಯಥೇಚ್ಛವಾಗಿದೆ.

ಆಚರಣೆ ರೂಪದ ಬೇಟೆ ಇಂದು ಪ್ರಚಲಿತವಿದ್ದು, ಅವರು ತಮ್ಮ ಅಗತ್ಯಕ್ಕೆ ತಕ್ಕಂತೆ ಬೇಟೆಯಾಡುತ್ತಾರೆ. ಹಗಲು ಮತ್ತು ರಾತ್ರಿಯಾಡುವ ಬೇಟೆ ಒಂದು ಸ್ವರೂಪವಾದರೆ, ರಾಜವಂಶದವರು, ಪಾಳಿಯಗಾರರು, ಗೌಡ, ತಳವಾರ, ನಾಯಕರು ಆಡುವ ಬೇಟೆಗೆ ವ್ಯತ್ಯಾಸವಿದೆ. ಬೇಡ- ಬೇಡತಿಯರ ಪಾತ್ರ, ಇತರರು ಬೇಟೆಯಾಡುವ ಸನ್ನಿವೇಶವನ್ನು ನೋಡಬಹುದು. ಆಯಾ ಭೌಗೋಳಿಕ ಉಷ್ಣಾಂಶಕ್ಕೆ ತಕ್ಕಂತೆ ಬೇಟೆಯನ್ನಾಡುವುದುಂಟು.

ಬೇಟೆ ಆದಿಮಾನವನಿಗೆ ಒಂದು ಅವಶ್ಯಕ ವೃತ್ತಿಯಾಗಿತ್ತು. ಆದರೆ ಅದೊಂದು ಮನರಂಜನೆಯಾಗಿ ಕೆಲವರಿಗೆ ಮಾರ್ಪಟ್ಟಿದೆ. ಹೀಗಾಗಿ ಬೇಟೆಯಾಡುವ ಹಲವಾರು ಪುರಾತನ ತಂತ್ರಗಳು ಮಾಸಿ ಹೋಗಿವೆ. ಆದರೂ ಅಲ್ಲೊಂದು ಇಲ್ಲೊಂದು ಆದಿವಾಸಿ ಗುಂಪುಗಳಲ್ಲಿ ಉಳಿದು ಬರುತ್ತಲಿವೆ. ಅಷ್ಟೇ ಅಲ್ಲ ಬೇಟೆಯಾಡಲು ಬೇಕಾದ ಕಾಡು ಮೃಗಗಳೂ ನಶಿಸುತ್ತಿವೆ. ಅವುಗಳನ್ನು ವನ್ಯಮೃಗ ಸಂರಕ್ಷಣಾಲಯಗಳಲ್ಲಿ ನೋಡಿ ನಾವು ತೃಪ್ತಿಪಟ್ಟುಕೊಳ್ಳುವಂತಾಗಿದೆ. ಇತ್ತೀಚೆಗೆ ಕಾಡು ಪ್ರಾಣಿಗಳನ್ನು ಬೇಟೆಯಾಡುವುದು ಹಾಗಿರಲಿ ಅವುಗಳನ್ನು ಸಂರಕ್ಷಿಸುವ ಸಲುವಾಗಿ ಬೇಟೆಯಾಡದೇ ಇರುವುದೇ ಸೂಕ್ತವಾಗಿದೆ. ಈ ದಿಶೆಯಲ್ಲಿ ವನ್ಯಮೃಗಗಳ ಸಂರಕ್ಷಣಾಲಯ ಮತ್ತು ಅರಣ್ಯ ಇಲಾಖೆಗಳು ಮಾಡುತ್ತಿರುವ ಕೆಲಸ ಸ್ವಾಗತಾರ್ಹವಾಗಿದೆ. ಹಿಂದೆ ರಾಜರುಗಳು, ಪಾಳಿಯಗಾರರು, ಬ್ರಿಟಿಷ್ ಅಧಿಕಾರಿಗಳು ತಮ್ಮ ಪ್ರತಿಷ್ಠೆಗಾಗಿ ಸ್ಥಾನ ಗೌರವಾರ್ಥವಾಗಿ, ಹೊರದೇಶಗಳಿಗೆ ಪ್ರಾಣಿಗಳ ಚರ್ಮ ಹಾಗೂ ದಂತಗಳನ್ನು ಸಾಗಿಸುವ ನಿಟ್ಟಿನಲ್ಲಿ ಅನೇಕ ಕಾಡು ಪ್ರಾಣಿಗಳನ್ನು ಕೊಲ್ಲುತ್ತಿದ್ದರು. ಈ ಕೊರತೆಯನ್ನು ತುಂಬಿಸಿಕೊಳ್ಳುವ ಸಲುವಾಗಿ ಸಾವಿನ ಅಂಚಿನಲ್ಲಿರುವ ಕಾಡು ಪ್ರಾಣಿಗಳಿಗೂ ಗುಟುಕಿಟ್ಟು, ಚಿಕಿತ್ಸೆ ನೀಡಿ ಅವುಗಳ ತಳಿಯನ್ನು ಬೆಳೆಸಿ

ಕಾಪಾಡುತ್ತಿರುವುದು ಗಮನಾರ್ಹವಾಗಿದೆ.[೧೦] ೧೯೯೮ರಲ್ಲಿ ೪೪ನೇ ಮತ್ತು ೧೯೯೯ರಲ್ಲಿ ೪೫ನೇ ವನ್ಯಜೀವಿ ಸಪ್ತಾಹವನ್ನು ಆಚರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಣಿಗಳ ಬಗೆಗೆ ಪ್ರೀತಿ, ಕರುಣೆ, ದಯೆ ಹೆಚ್ಚತೊಡಗಿತು.

ಪ್ರಸ್ತುತ ಇರುವ ಬೇಟೆಯ ವಿಧಾನಗಳಿಗೂ ರಾಜರ ಆಳ್ವಿಕೆಯಲ್ಲಿದ್ದ ಬೇಟೆಯ ವಿಧಾನಗಳಿಗೂ ವ್ಯತ್ಯಾಸವಿದೆ. ಅಂದು ಹುಲಿಯನ್ನು ರಾಜನೇ ಬೇಟೆಯಾಡಬೇಕಿತ್ತು. ರಾಜರ ಮನ್ನಣೆಯಿಂದ ಇತರ ಪ್ರಾಣಿಗಳನ್ನು ಬೇಡರು ಬೇಟೆಯಾಡುತ್ತಿದ್ದರು. ವಿಜಯನಗರದ ಅರಸರು ಹಂದಿಗೆ ಪವಿತ್ರ ಸ್ಥಾನ ಕೊಟ್ಟಿದ್ದರು ಮತ್ತು ಆ ಅರಸರು ಬೇಟೆಗೆ ಪ್ರೋತ್ಸಾಹ ಕೊಟ್ಟ ಬಗ್ಗೆ ಉಲ್ಲೇಖಗಳಿವೆ. ಬೇಟೆಯ ಪ್ರಾಚೀನತೆಯನ್ನು ಅಧಿಕೃತಗೊಳಿಸುವುದು ಪ್ರಾಕ್ಚಾರಿತ್ರಿಕ ನೆಲೆಗಳಲ್ಲಿ ದೊರೆತ ಬೇಟೆಯ ರೇಖಾಚಿತ್ರಗಳು. ಹಬ್ಬಹರಿದಿನಗಳಲ್ಲಿ ವಿಶೇಷವಾಗಿ ವಿವಿಧ ಆಯುಧೋಪಕರಣಗಳನ್ನು ಉಪಯೋಗಿಸುತ್ತಿದ್ದರು. ಹಿಂದೆ ಬೇಟೆಗಾರನ ಪತ್ನಿಯರು ಸಹಾ ಬೇಟೆಗೆ ಹೋಗುತ್ತಿದ್ದರು. ರಾಜರ ಆಸ್ಥಾನದಲ್ಲಿ ಬೇಟೆಯ ಸ್ಥಾನಮಾನ, ಬಿರುದು ಬಾವಲಿಗಳನ್ನು ಇಂದಿಗೂ ಬೇಡರು ಸ್ಮರಿಸಿಕೊಳ್ಳುತ್ತಾರೆ. ಬೇಟೆಗೆ ಹೋಗುವಾಗ ಅವರ ಹುರುಪು, ಪರಾಕ್ರಮ ಅದ್ಭುತವಾದುದು. ಬೇಡರು ಬೇಟೆಯನ್ನು ತಂದಾಗ ವಿಶಿಷ್ಟ ರೀತಿಯಿಂದ ಸ್ವಾಗತಿಸುವುದಿತ್ತು. ಭಾರತೀಯ ಅರಣ್ಯ ಕಾಯ್ದೆ ಪ್ರಕಾರ ಬೇಟೆ ನಿಷೇಧಕ್ಕೊಳಪಟ್ಟರು ಸಂಪ್ರದಾಯಿಕವಾಗಿ ಬೆಳೆಸಿಕೊಂಡಿರುವುದು ಜೀವಂತ ವೃತ್ತಿ ಎಂಬುದಕ್ಕೆ ಸಾಕ್ಷಿಯಾಗಿದೆ. ಇಡೀ ಕರ್ನಾಟಕದ ಬೇಡರ ಸ್ಥಿತಿ ಒಂದೇ ಆಗಿರಲಿಲ್ಲ. ಎಲ್ಲ ಜಿಲ್ಲೆ ತಾಲೂಕುಗಳಲ್ಲಿ ವಿಭಿನ್ನ ರೀತಿಯ ಆಚಾರ - ವಿಚಾರ ಸಂಪ್ರದಾಯಗಳಿದ್ದು ವೈವಿಧ್ಯಮಯವಾಗಿರುವುದು ಸ್ಪಷ್ಟ.

೧೯೯೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ೧೯,೧೫,೬೯೧ ರಷ್ಟಿತ್ತು. ಚಿತ್ರದುರ್ಗದಲ್ಲಿ ಬೇಡರ ಸಂಖ್ಯೆ ಹೀಗಿದೆ : ಪುರುಷರು ೧,೧೩,೯೭೫, ಮಹಿಳೆಯರು ೧,೦೮,೭೮೮ ಒಟ್ಟು ೨,೨೨,೭೬೩. ಬಳ್ಳಾರಿಯಲ್ಲಿ ೭೪೪೦೨ ಪುರುಷರು, ೭೩,೪೬೭ ಮಹಿಳೆಯರು ಸೇರಿ ೧,೪೭,೮೬೯, ದಾವಣಗೆರೆ ಜಿಲ್ಲೆಯಲ್ಲಿ ೭೯,೮೯೫ ಪುರುಷರು ೭೫,೭೦೫ ಮಹಿಳೆಯರು ಸೇರಿ ೧,೫೫,೬೦೦, ರಾಯಚೂರು ಜಿಲ್ಲೆಯಲ್ಲಿ ಪುರುಷರು ೬೦,೪೩೯, ಮಹಿಳೆಯರು ೬೦,೦೦೫ ಒಟ್ಟು೧,೨೦,೪೪, ಸಾಕ್ಷರರ ಸಂಖ್ಯೆ ಬಳ್ಳಾರಿಯಲ್ಲಿ ೮೦,೯೮೪ (ಶೇ.೦೩.೧೭)ರಷ್ಟು ಇದ್ದಾರೆ.[೧೧]

ಚುನಾವಣಾ ಸಮೀಕ್ಷೆಯ ಸಂದರ್ಭದಲ್ಲಿ ಕರ್ನಾಟಕ ಬೇಡ ಜನಾಂಗದ ಸಂಖ್ಯೆ ೬೫ಲಕ್ಷ ಇದೆ ಎಂದು ರಾಜಕೀಯ ಮುಖಂಡರ ಅಭಿಪ್ರಾಯವಾಗಿದೆ. ಹೀಗೆ ಬಳ್ಳಾರಿ ಜಿಲ್ಲೆಯಲ್ಲಿಯೇ ೨ ಲಕ್ಷದ ೨೫ಸಾವಿರ ಬೇಡರ ಸಂಖ್ಯೆ ಇದೆ ಎಂದು ವಾಲ್ಮೀಕಿ ಜನಾಂಗದ ಸಂಘಟನೆಗಳು ತಿಳಿಸಿವೆ.

ಕರ್ನಾಟಕದಲ್ಲಿ ನಾಯಕ, ಬೇಡ ಹೆಸರಿನಲ್ಲಿ ಸ್ಥಾಪನೆಗೊಂಡ ಸಂಘಸಂಸ್ಥೆಗಳಿವೆ. ೧೯೪೭ರಲ್ಲಿ ಆರಂಭವಾದ ಬಳ್ಳಾರಿ ಜಿಲ್ಲಾ ವಾಲ್ಮೀಕಿ ಸಂಘವೂ ಇದರಲ್ಲಿ ಒಂದು. ಬೇಡ ಜನಾಂಗವು ಪತ್ರಿಕಾ ಕ್ಷೇತ್ರದಲ್ಲಿ ಸ್ಥಾನವನ್ನು ಉಳಿಸಿಕೊಂಡಿದೆ. ಧಾರವಾಡದ ವಾಲ್ಮೀಕಿ ಬಂಧು, ಚಿತ್ರದುರ್ಗದ ಇತರ ವಾಲ್ಮೀಕಿ ವಾಣಿ, ಬೆಂಗಳೂರಿನ ವಾಲ್ಮೀಕಿ ಕರ್ನಾಟಕ, ಚಳ್ಳಕೆರೆಯಲ್ಲಿ ಯುವಪಾಳೆಯಗಾರ ಪತ್ರಿಕೆಗಳು ಪ್ರಮುಖವಾದುವು. ಕರ್ನಾಟಕದಲ್ಲಿ ಬೇಡರು ಒಂದೇ ಭಾಗದಲ್ಲಿಲ್ಲ. ಹೈದ್ರಾಬಾದ್ ಕರ್ನಾಟಕ, ಮುಂಬಯಿ ಕರ್ನಾಟಕ, ಹಳೇಮೈಸೂರು, ಕರಾವಳಿ ಹೀಗೆ ಹರಿದು ಹಂಚಿ

ಹೋಗಿದ್ದಾರೆ. ಇಂದಿಗೂ ಇವರು ಅರಣ್ಯ ಪ್ರದೇಶದಲ್ಲಿ ಸರ್ಕಾರಕ್ಕೆ ಕಣ್ತಪ್ಪಿಸಿ ಬೇಟೆಯಾಡಿಕೊಂಡು ವಾಸಿಸಿದ್ದಾರೆ. ಹಳ್ಳಿಯಲ್ಲಿರುವ ಬೇಡರು ಇನ್ನು ಮೊದಲಿನ ಸ್ಥಿತಿಯಲ್ಲಿರುವರು. ಇವರಂತೆ ಹೊಳೆ, ಹಳ್ಳ, ಕೆರೆ, ನದಿ, ದಂಡೆ ಮೇಲಿರುವ ಜನ ಬೇಟೆಯಾಡಿ ಬದುಕುತ್ತಾರೆ.

ಹಳ್ಳಿ ಬಿಟ್ಟು ಪಟ್ಟಣ ಸೇರದ ಬುಡಕಟ್ಟು ಜನರು ಕ್ರಮೇಣ ಬದಲಾವಣೆಯ ದಿಕ್ಕಿನ ಕಡೆಗೆ ಹೊರಟಿರುವುದನ್ನು ಕಾಣುತ್ತೇವೆ. ಪಟ್ಟಣದಲ್ಲಿನ ವಯಸ್ಸಾದವರು ಬೇಟೆ ಬಗ್ಗೆ ನೆನಪುಗಳನ್ನು ಹೇಳುತ್ತಾ ಅಹಿಂಸೆಯನ್ನು ಪ್ರತಿಪಾದಿಸುವುದರಿಂದ ಇದಕ್ಕೆ ಯುವಕರ ವಿರೋಧವಿರುವುದು ಅಭಿನಂದನೀಯ. ಪಠ್ಯಪುಸ್ತಕಗಳಲ್ಲಿಯೂ ಇಂದು ವನ್ಯ ಪ್ರಾಣಿಗಳ ಬಗ್ಗೆ ಅಹಿಂಸೆಯನ್ನು ತೋರಲು ತಿಳಿಸಲಾಗಿದೆ.

ಬೇಡರು ಮೆಲ್ಲ-ಮೆಲ್ಲನೆ ಆಧುನಿಕ ಜಗತ್ತಿನ ಕಡೆ ವಾಲುತ್ತಿದ್ದಾರೆ. ಈ ಹಿಂದೆ ಬೇಡರಿಗೆ ಬೇಟೆ ಒಂದು ವೃತ್ತಿಯಾಗಿದ್ದು ಬದುಕಿಗೆ ಅಗತ್ಯವಾಗಿತ್ತು. ಆದರೆ ಈಗ ಅದು ಪ್ರವೃತ್ತಿಯಾಗಿದೆ. ಅಗತ್ಯವಾಗಿಲ್ಲದ ಬೇಟೆ ಮನೋರಂಜನೆಯ ಭಾಗವಾಗಿದೆ.

ಒಟ್ಟಾರೆ ಹೇಳುವುದಾದರೆ ಹಿಂಸೆಯ ಪರಾಕಾಷ್ಠತೆ ಬೇಟೆಯಲ್ಲಿ ವ್ಯಕ್ತಗೊಂಡ ಬಗೆ ಮುಖ್ಯವೆನಿಸಿದೆ. ಆಧುನಿಕ ಕಾಲದಲ್ಲಿ ಬೇಡರಿಗೆ ಬೇಟೆ ವಿಶೇಷವಾಗಿ ಜೀವನಾವಶ್ಯಕ ವೃತ್ತಿಯಾಗಿ ಪರಿಣಮಿಸಲಿಲ್ಲ. ಆದರೂ ಸಣ್ಣ-ಪುಟ್ಟ ಬೇಟೆಯ ವಿಧಾನಗಳನ್ನು ರೂಢಿಸಿಕೊಂಡಿದ್ದಾರೆ. ಅವು ದನಕಾಯುವ, ಬೇಸಾಯದಲ್ಲಿ ತೊಡಗಿರುವ ಬೇಡರು ಕೋಲು, ಕವಣೆಗಳಿಂದ ಪ್ರಾಣಿ-ಪಕ್ಷಿಗಳ ಬೇಟೆಯಾಡುವುದರಲ್ಲಿ ಕಂಡುಬರುತ್ತವೆ. ಇದು ಹವ್ಯಾಸವೆಂಬಂತಿದ್ದು, ಕಾನೂನು ವ್ಯಾಪ್ತಿಗೆ ಒಳಪಡುವುದಿಲ್ಲ.

ಜಾಗತೀಕರಣಗೊಳ್ಳುವ ಪ್ರಕ್ರಿಯೆಯಲ್ಲಿ ಬೇಡರ ಬದುಕು ನಾನಾ ಹಂತಗಳಲ್ಲಿ ಸುಧಾರಣೆಯಾಗುತ್ತಲಿದೆ. ಕಾಯಿದೆ-ಕಾನೂನುಗಳು ಕಾರಣವಾಗಿ ಬೇಟೆಯನ್ನು ಕೈಬಿಟ್ಟರೂ, ಕೃಷಿ ಮೊದಲಾದ ವೃತ್ತಿಗಳಲ್ಲಿ ನಿರತರಾಗಿದ್ದಾರೆ. ಹಬ್ಬಗಳಲ್ಲಿ ಮಾತ್ರ ನಂಬಿಕೆ, ಸಂಪ್ರದಾಯವೆಂಬಂತೆ ಬೇಟೆ ಕಾಣಿಸಿಕೊಳ್ಳುತ್ತದೆ. ನಂತರ ಕಾಣಬರುವುದು ಕಡಿಮೆ. ಆರ್ಥಿಕವಾಗಿ ಲಾಭದಾಯಕ ವೃತ್ತಿಗಳಲ್ಲಿ ತೊಡಗಿರುವವರು ಬೇಟೆಗೆ ಜೋತು ಬಿದ್ದಿಲ್ಲ. ಕೇವಲ ಆಹಾರವಾಗಿ ಪರಿಣಮಿಸಿದರೆ ಮಾತ್ರ ಅಗತ್ಯ ಎನ್ನಬಹುದು. ಹೀಗೆ ರಾಜ ಪ್ರಭುತ್ವದಲ್ಲಿದ್ದ ಬೇಡರ ಸ್ಥಿತಿ-ಗತಿಗಳನ್ನು ಇಂದಿನ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಹೋಲಿಸಿಕೊಂಡರೆ ಜೀವನಕ್ರಮದಲ್ಲಿ ಸುಧಾರಿಸಿದ್ದಾರೆ. ಇನ್ನು ಸುಧಾರಿಸಬೇಕಾಗಿದೆ. ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮೊದಲಾದ ಕ್ಷೇತ್ರಗಳಲ್ಲಿ, ಪ್ರಗತಿದಾಯಕವಾಗಿ ಮುನ್ನೆಡೆದಿದ್ದಾರೆ. ಇದಕ್ಕೆ ಎಲ್.ಜಿ.ಹಾವನೂರು ಅವರ ಆಯೋಗದಲ್ಲಿ 'ನಾಯಕ' ಎಂಬ ಬೇಡ ಜನಾಂಗದವರನ್ನು ಪರಿಶಿಷ್ಟವರ್ಗಕ್ಕೆ ಸೇರಿಸಿದಾಗ ಸೌಲಭ್ಯ ಪಡೆಯಲು ಕಾರಣವಾಯಿತು. ಕೆಲವರಿಗೆ ಸೌಲಭ್ಯವಿಲ್ಲದ ಕಾರಣ ತಳವಾರ, ಪರಿವಾರ ಮೊದಲಾದ ಬೇಡರ ಪರ್ಯಾಯ ಹೆಸರುಗಳನ್ನು ಎಸ್.ಟಿ.ಗೆ. ಸೇರಿಸಲು ಒತ್ತಾಯಿಸಿದ್ದಾರೆ. ಮೇಲಿನಂತೆ ಸಮಾಜದ ಏಳ್ಗೆಗೆ ಅನೇಕ ಸಮಾಜ ಸೇವಕರು ಶ್ರಮಿಸುತ್ತಿದ್ದಾರೆ. ಬೌದ್ಧಿಕವಾಗಿ ಪತ್ರಿಕೆ ಇತರ ಸಮೂಹ ಮಾಧ್ಯಮಗಳು ಬೇಡರ

ಸುಧಾರಣೆಗೆ ಪೂರಕವಾಗಿವೆ. ವಾಲ್ಮೀಕಿ ಜಯಂತಿಗಳ ಮೂಲಕ ಜನಾಂಗ ಸಂಘಟನೆ, ಸಮಸ್ಯೆಗಳ ನಿವಾರಣೆ ಇತರ ಸಂಗತಿಗಳ ಪ್ರಸ್ತಾಪವು ಆಗುತ್ತದೆ. ರಾಜ್ಯದಲ್ಲಿ ದಟ್ಟವಾಗಿ ನೆಲೆಸಿರುವ ೬೦ ಲಕ್ಷವಿರುವ ಬೇಡ ಜನಾಂಗ ವಿವಿಧ ರೀತಿಯಲ್ಲಿ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುವಂತೆ ಕಂಡುಬರುತ್ತಿದೆ.

ಟಿಪ್ಪಣಿಗಳು

೧. ಗ್ರಾಮಜ್ಯೋತಿ, ೧೯೭೯, ಪು.೨೩೯

೨. ಅದೇ: ಪು.೨೪೦

೩. ಅದೇ.: ಪು.೨೪೨

೪. ಅದೇ: ಪು.೨೪೬

೫. ದಿವಂಗತ ಪುಲ್ಲಯ್ಯಗಳ ಬೋರಯ್ಯ, ಕೆ.ಬಿ.ಹಟ್ಟಿ, ಪೂಜಾರಹಳ್ಳಿ, ಕೂಡ್ಲಿಗಿ ತಾ|| ಅವರು ೧೯೭೯ರ ದಶಕದಲ್ಲಿದ್ದ ಬರಗಾಲವನ್ನು ನೆನಪಿಸಿಕೊಂಡು ಆಲೆಸೊಪ್ಪು, ಕೆಂಪುಜೋಳವನ್ನು ಆಹಾರಕ್ಕೆ ಅವಲಂಬಿಸಿದ ಬಗ್ಗೆ ತಿಳಿಸಿರುತ್ತಾರೆ.

೬. ಕಮಲಾಪುರದ ಚಾವಡಿಕೇರಿಯ ಗುರಿಕಾರ ಬಸಯ್ಯ, ಧರ್ಮಯ್ಯ, ಎಂ.ಗಿರಿಯಪ್ಪ ಅವರು ಈ ವಿಷಯವನ್ನು ತಿಳಿಸಿರುತ್ತಾರೆ (೯-೪-೧೯೯೭)

೭. ಶ್ರೀಮತಿ ಚನ್ನಮ್ಮ, ಕೆ.ಬಿ.ಹಟ್ಟಿ, ಪೂಜಾರಹಳ್ಳಿ, ಅವರು ತಿಳಿಸಿರುತ್ತಾರೆ.

೮. ದಿ ಮೈಸೂರು ಟ್ರೈಬ್ಸ್ ಆಂಡ್ ಕ್ಯಾಸ್ಟ್ಸ್ ವಾ-೧, ೧೯೩೫ ಪು.೧೦೪

೯. ಈ ರಾಜಮನೆತನಕ್ಕೆ ಸೇರಿದ ಹನುಮಣ್ಣ ನಾಯಕ ದೊರೆಯವರು ಈ ಮಾಹಿತಿಕೊಟ್ಟಿರುವುದಕ್ಕೆ ಕೃತಜ್ಞತೆಗಳು

೧೦. ಗ್ರಾಮಜ್ಯೋತಿ, ಪು.೨೪೬

೧೧. ೧೯೯೮ರ ಅಂಕಿಅಂಶಗಳು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* * *

ಅಧ್ಯಾಯ-೮

ಸಮಾರೋಪ

ಸಮಾರೋಪ

ಮಾನವನ ಮೂಲಭೂತ ಆಹಾರೋತ್ಪಾದನ ವೃತ್ತಿಗಳಲ್ಲಿ ಬೇಟೆಯೂ ಒಂದು. ಇದು ವಿವಿಧ ಕಾಲಘಟ್ಟಗಳಲ್ಲಿ ತನ್ನ ಸ್ವರೂಪವನ್ನು ವಿಸ್ತರಿಸಿಕೊಂಡು ಬಂದಿದೆ. ಶಿಲಾಯುಗದಿಂದಲೂ ಮಾನವ ಆಹಾರ ಅನ್ವೇಷಣೆಮಾಡಿದ ಕುರುಹುಗಳು ಪುರಾತತ್ವ ಆಧಾರಗಳಲ್ಲಿ ಲಭ್ಯವಿವೆ. ಶಿಲಾಯುಗ, ಮಧ್ಯಶಿಲಾಯುಗದ ನಂತರ ನವಶಿಲಾಯುಗದಲ್ಲಿ ಮಾನವ ಮಹಾತಿರುವೊಂದನ್ನು ಸೃಷ್ಟಿಸಿಕೊಂಡದ್ದು ಚಾರಿತ್ರಿಕ ಸತ್ಯ. ಆಹಾರ ಅನ್ವೇಷಣೆ, ಪಶುಪಾಲನೆ ಮತ್ತು ಕೃಷಿಗಳ ಮೂಲಕ ಈ ಹಂತದಲ್ಲಿ ಸಂಸ್ಕೃತಿ ಮತ್ತು ನಾಗರಿಕತೆಗಳ ಲಕ್ಷಣಗಳು ಮೇಳೈಸಿದ ಬಗೆ ವಿಸ್ಮಯಕರ. ಈ ನಿಟ್ಟಿನಲ್ಲಿ ನಾಗರಿಕತೆಗೆ ಮೊದಲು ಹೆಜ್ಜೆ ಇಟ್ಟವನೇ ಬೇಟೆಗಾರ. ವಿಶ್ವದ ಚರಿತ್ರೆಯಲ್ಲಿ ಬೇಟೆ ಹಾಸುಹೊಕ್ಕಾಗಿ ಬಂದ ಬಗೆ ಅದ್ಭುತ. ಅಮೇರಿಕ, ಯುರೋಪ್, ಆಸ್ಟ್ರೇಲಿಯಾ, ಆಫ್ರಿಕಾ, ಏಷ್ಯಾ- ಇಂಥಾ ಖಂಡಗಳಲ್ಲಿ ಕಂಡುಬಂದಿರುವ ಬೇಟೆ ಚಾರಿತ್ರಿಕವಾಗಿ ಅತೀ ಮಹತ್ವ ಪಡೆದಿದೆ. ಭಾರತದಲ್ಲಿ ಇದರ ಮಹತ್ವ ಇಂದಿಗೂ ಕುಗ್ಗಿಲ್ಲದಿರುವುದು ಗಮನೀಯ ಸಂಗತಿ.

ಸಮೃದ್ಧ ನೆಲ, ಜಲವನ್ನು ಹೊಂದಿದ ಭಾರತ ನಾಗರಿಕತೆಗಳ ಉಗಮಕ್ಕೆ ತವರುಮನೆಯೆನಿಸಿದೆ. ವಿಶೇಷವಾಗಿ ಉತ್ತರಭಾರತದ ಜೀವಂತ (ಸಾರ್ವಕಾಲಿಕ) ನದಿಗಳು, ನಿತ್ಯಹರಿದ್ವರ್ಣ ಕಾಡುಗಳಿಂದ ಜನಜೀವನ ವೈಖರಿ ಸದೃಢಗೊಂಡ ಬಗೆ ರೋಚಕವಾದುದು. ಹೀಗೆ ಸಿಂಧೂ ಬಯಲಿನ ನಾಗರಿಕತೆ ಮಾನವನ ಜನಜೀವನಕ್ಕೆ ವಿವಿಧ ರೂಪದಲ್ಲಿ ಪರಿಣಾಮಕಾರಿಯಾಗಿದೆ. ಇಲ್ಲಿ ಕೃಷಿಯೊಂದಿಗೆ ಬೇಟೆಯಾಡಿದ ಉಲ್ಲೇಖಗಳಿವೆ. ಆರ್ಯರು ಬಂದಾಗ ಅವರ ಮತ್ತು ದ್ರಾವಿಡರ ನಡುವೆ ಏರ್ಪಟ್ಟ ಯುದ್ಧಗಳಿಗೆ ಲೆಕ್ಕವಿಲ್ಲ. ಇಲ್ಲಿ ಕಿರಾತರು ಹೋರಾಡಿದ ಬಗೆಗೆ ತಿಳಿದುಬರುತ್ತದೆ. ಇಂಥ ಸಂಗತಿಗಳನ್ನು ರಾಹುಲ ಸಾಂಕೃತ್ಯಾಯನ ಅವರು 'ವೋಲ್ಗಾ-ಗಂಗಾ' ಮತ್ತು 'ದಿವೋದಾಸ' ಕೃತಿಗಳಲ್ಲಿ ವಿವರಿಸಿದ್ದಾರೆ. ಕಿರಾತರ ಸ್ಥಿತಿ-ಗತಿ, ಈವರೆಗೆ ಮರೆಯಾಗಿದ್ದ ಬುಡಕಟ್ಟುಗಳ ರಾಜ್ಯಾಳ್ವಿಕೆ ಕುರಿತು 'ಜಯಯೌಧೇಯ' ಎಂಬ ಕೃತಿಯನ್ನು ಇವರು ರಚಿಸಿರುವರು.

ಐತಿಹಾಸಿಕವಾಗಿ ಮೌರ್ಯರ ಕಾಲದಲ್ಲಿ ಬೇಟೆ ಉತ್ತುಂಗ ಸ್ಥಿತಿ ತಲುಪಿತ್ತು. ಬೇಟೆಯ ಜೊತೆಗೆ ನಡೆಯುತ್ತಿದ್ದ ಇಂಥ ಅನೇಕ ರೀತಿಯ ಹಿಂಸೆಯನ್ನು ಕಂಡ ಅಶೋಕ ಬೇಡ ಮತ್ತು ಬೆಸ್ತರಿಗೆ ಪ್ರಾಣಿಗಳನ್ನು ಕೊಲ್ಲದಂತೆ ತಿಳಿಸಿದ್ದು ಕಂಧಾಹಾರ್ ಶಾಸನದ ಸಂದೇಶವಾಗಿದೆ. ಹೀಗೆ ಭಾರತೀಯ ಚರಿತ್ರೆಯಲ್ಲಿ ಬೇಟೆಗೆ ನಿರ್ಬಂಧ ಹೇರಿದ ಮೊದಲ ಚಕ್ರವರ್ತಿಯೆಂದರೆ ಅಶೋಕ. ಇವನ ತರುವಾಯ ಬೇಟೆ ಮುಂದುವರೆದಿದ್ದುಂಟು. ಶಕರು, ಕುಶಾನರು, ಗುಪ್ತರು ಮೊದಲಾದ ಅರಸರು ಬೇಟೆಯಲ್ಲಿ ತಕ್ಕಮಟ್ಟಿಗೆ ಪ್ರವೀಣರಾಗಿದ್ದರೆಂಬುದು ಸಾಂಸ್ಕೃತಿಕ ಚರಿತ್ರೆಯ ಪುಟಗಳಲ್ಲಿದೆ. ದೆಹಲಿ ಸುಲ್ತಾನರು, ಮೊಘಲರು, ಆಂಗ್ಲರು ಮೊದಲಾದ ದೇಶಿ ಮತ್ತು ವಿದೇಶಿಯರು ಅರಸ, ಅಧಿಕಾರಿ ವರ್ಗ ಬೇಟೆಯಾಡಿರುವ ಪ್ರಸಂಗಗಳಿವೆ. ಅಥನೇಷಿಯನ್ ನಿಕಟನ್ ಎಂಬ ರಷ್ಯಾದ ಪ್ರವಾಸಿ ಭಾರತದಲ್ಲಿನ ಸುಲ್ತಾನರ ಬೇಟೆಯನ್ನು ತಿಳಿಸಿದ್ದಾನೆ. ಟೀನಿಯಸ್ ಎಂಬ ಗ್ರೀಕ್ ಪ್ರವಾಸಿ ಇಲ್ಲಿನ ಪಿಗ್ಮಿ ಎಂಬ ಕುಳ್ಳ ಜನರ ಬೇಟೆ ಸಂಸ್ಕೃತಿ ಬಗ್ಗೆ ಬೆಳಕು ಚೆಲ್ಲುತ್ತಾನೆ. ಅಬ್ದುಲ್ ರಜಾಕ್, ವಾರ್ಥೆಮ್, ಬಾರ್ಬೋಸ ಮೊದಲಾದವರು ತಮ್ಮ ವರದಿಗಳಲ್ಲಿ ವಿಜಯನಗರ ಕಾಲದ ಬೇಟೆ ಚಿತ್ರಣವನ್ನು ನೀಡಿದ್ದಾರೆ. ಆಧುನಿಕೋತ್ತರ ಭಾರತದಲ್ಲಿ ಬುಡಕಟ್ಟುಗಳ ಪರಿವರ್ತನೆ ಕುರಿತಂತೆ ಇಂಥ ಅಧ್ಯಯನಗಳು ಇನ್ನು ನಡೆಯಬೇಕಾಗಿದೆ.

ಕರ್ನಾಟಕದಲ್ಲಿ ಬೇಟೆಯನ್ನು ಶಿಲಾಯುಗದ ಕಾಲದಿಂದಲೂ ಗುರುತಿಸಲಾಗಿದೆ. ಈ ಹಂತದಲ್ಲಿ ಬೇಟೆ ಜೀವನಾವಶ್ಯಕ, ಉದರಪೋಷಣೆಗೆ ಮೀಸಲಾಗಿದ್ದುದು ಸ್ಪಷ್ಟ. ಮಾನವ ಕಲ್ಲಿನ, ಕೋಲಿನ ಆಯುಧಗಳನ್ನು ಬಳಸಿ ಪ್ರಾಣಿಗಳನ್ನು ಕೊಂದು ತಿನ್ನುತ್ತಿದ್ದದು ಸಾಮಾನ್ಯವಾಗಿತ್ತು. ನವಶಿಲಾಯುಗಕ್ಕೆ ತಲುಪಿದಾಗ ಬೆಂಕಿಯ ಉಪಯೋಗದೊಡನೆ ಮಾಂಸವನ್ನು ಸುಟ್ಟು ತಿನ್ನುವ ಕ್ರಮ ಮುಂದುವರೆಯಿತು. ಮೊದ ಮೊದಲು ಎಲ್ಲ ಸಮುದಾಯಗಳು ಬೇಟೆಯನ್ನು ನೆಚ್ಚಿಕೊಂಡಿದ್ದು ಕ್ರಮೇಣ ಪರಿವರ್ತನೆಗೊಂಡವು. ಬೇಟೆಯೊಂದಿಗೆ ಬೆಳೆದು ಬಂದ ಬೇಡರು ವೃತ್ತಿ ನೆಲೆಯಲ್ಲಿ ಬೇಟೆಯನ್ನು ಬಿಟ್ಟು ಬದುಕಲಿಲ್ಲ. ಈ ಬಗ್ಗೆ ಚರಿತ್ರೆ ಮತ್ತು ಸಾಹಿತ್ಯ ಆಕರಗಳಲ್ಲಿನ ಸಂಗತಿಗಳು ಬೆಳಕು ಚೆಲ್ಲುತ್ತವೆ.

ಐತಿಹಾಸಿಕವಾಗಿ ಬೇಡರು ಬೇಟೆ ಮೂಲಕ ಸಾಧಿಸಿಕೊಂಡ ಶೌರ್ಯ-ಪರಾಕ್ರಮಗಳಿಂದಾಗಿ ರಾಜಕೀಯ ಗದ್ದುಗೆ ಹಿಡಿದ ಉಲ್ಲೇಖಗಳಿವೆ. ಇಕ್ಷ್ವಾಕ್ಟು ವಂಶದ ಕಾಲಕ್ಕೆ ಇವರು 'ಮಹಾನಾಡ ತಳವಾರ' ಪದವಿ ಹೊಂದಿದ್ದರು. ರಾಷ್ಟ್ರಕೂಟರ ಕಾಲಕ್ಕೆ 'ನಾಯಕ' ಎಂಬ ಗೌರವ ಪದವಿ, ಮಹಾನಾಯಕಾಚಾರ್ಯ ಎಂಬ ಬಿರುದುಗಳಿದ್ದವು. ವಿಜಯನಗರ ಕಾಲದಲ್ಲಿದ್ದ ಬೇಟೆಗಾರರು, ಸೈನಿಕರು, ದಂಡನಾಯಕರು, ಅಮರ ನಾಯಕರು ಈ ಸಾಮ್ರಾಜ್ಯದ ಅವನತಿಯ ನಂತರ ಪಾಳೆಯಗಾರರಾದ ಬಗೆಯನ್ನು ಗಮನಿಸಬಹುದು. ವಾಸ್ತವದಲ್ಲಿ ಬೇಡರ ಬೇಟೆಗಿಂತ ಅರಸರ ಬೇಟೆ ಭಿನ್ನವಾಗಿತ್ತು. ಅರಸರು ಕೇವಲ ಮೋಜಿಗಾಗಿ, ವಿನೋದಕ್ಕಾಗಿ ಮತ್ತು ರಕ್ಷಣೆಗಾಗಿ ಬೇಟೆಯನ್ನವಲಂಬಿಸಿದ್ದರು. ಗಂಗರ ಕಾಲಕ್ಕೆ ಭಾರವಿ ವಿರಚಿತ'ಕಿರಾತಾರ್ಜುನೀಯ'ದ ೧೫ನೇ ಸರ್ಗಕ್ಕೆ ದುರ್ವಿನೀತ ಭಾಷ್ಯ ಬರೆದನೆಂಬುದು ಚರಿತ್ರೆಯಿಂದ ತಿಳಿದುಬರುತ್ತದೆ. ಈ ಕಾಲಕ್ಕೆ ಮೃಗಾಯವು ಅರಸರ ಮೇಲೆ ದಟ್ಟವಾದ ಪ್ರಭಾವ ಬೀರಿದ ಸನ್ನಿವೇಶವನ್ನು ಮೇಲಿನ ಉದಾಹರಣೆ ಸಾಬೀತುಪಡಿಸುತ್ತದೆ. ಕಾಳಿದಾಸ ತನ್ನ ಶಾಕುಂತಲ ನಾಟಕದಲ್ಲಿ 'ಬೇಟೆಯೆಂಬುದು ಹೆಚ್ಚಿನ ಮಹತ್ವದ, ವಿನೋದವಾಗಿದೆ' ಎಂದು ಹೇಳಿದ್ದಾನೆ.

ಪುರಾಣ ಕತೆಗಳಲ್ಲಿನ ಬೇಟೆಯ ವಿವರಗಳಂತೆ ಐತಿಹಾಸಿಕ ರಾಜವಂಶಗಳ ಕಾಲದಲ್ಲಿ ಬೇಟೆಗೆ ಅಪರಮಿತ ಸ್ಥಾನ-ಮಾನವಿತ್ತು. ಈವರೆಗೆ ತಿಳಿದುಬಂದಿರುವಂತೆ ರಾಜ್ಯಸ್ಥಾಪನೆ, ಸಾಮ್ರಾಜ್ಯ ಕಟ್ಟುವಲ್ಲಿ ಬೇಟೆ ಉತ್ತೇಜನಕಾರಿಯಂತಿತ್ತು. ಬೇಟೆ ಪ್ರಸಂಗದಲ್ಲಿ ವೀರ ಹುಲಿ, ಮೊಲ ಇತರ ಪ್ರಾಣಿಗಳನ್ನು ಕೊಂದು ಶೌರ್ಯಮೇರೆಸಿದ ಸಂಕೇತವಾಗಿ ರಾಜ್ಯಸ್ಥಾಪಿಸಿರುವುದು ಕಂಡುಬರುತ್ತದೆ. ಉದಾ: ಹೊಯ್ಸಳ, ವಿಜಯನಗರ, ಗುಡೆಕೋಟೆ, ಚಿತ್ರದುರ್ಗ, ತರೀಕೆರೆ ಮೊದಲಾದ ರಾಜಮನೆತನಗಳನ್ನು ಹೆಸರಿಸಬಹುದು. ರಾಜಪ್ರಭುತ್ವದಲ್ಲಿ ಬೇಟೆ ರಾಜನ ಲಕ್ಷಣಗಳಿಗೆ ರಾಜನೀತಿ ಮಾನದಂಡವಾಗಿರುವಂತೆ ವೇದ್ಯವಾಗುತ್ತದೆ. ರಾಜನ ಬೇಟೆಗೆ ಬೇಟೆಗಾರರು ಮಾರ್ಗದರ್ಶಕರಾಗಿದ್ದುದು ಗಮನಾರ್ಹ ಸಂಗತಿ. ಈ ಹಿನ್ನೆಲೆಯಲ್ಲಿ ಭಾರತ ಚರಿತ್ರೆಯನ್ನು ಅವಲೋಕಿಸಿದರೆ, ಕನ್ನಡ ಕಾವ್ಯಗಳಲ್ಲಿ ಬೇಟೆ ಮತ್ತು ಬೇಡರ ಸಂದರ್ಭಗಳು ಚಾರಿತ್ರಿಕವಾಗಿ ಅಲಕ್ಷಿಸಲ್ಪಟ್ಟ ವಿಷಯವೆನ್ನುವುದು ಸ್ಪಷ್ಟಪಡುತ್ತದೆ. ಹೀಗಾಗಿ ಇತ್ತೀಚಿನ ಅಧ್ಯಯನ ಸಿದ್ಧಾಂತವಾದ ಸಬಾಲ್ಟ್ರನ್ ಚರಿತ್ರೆ ಮಾದರಿ ಅನುಸರಿಸಿ ಅಧ್ಯಯನ ಮಾಡಲಾಗಿದೆ. ಕೆಳವರ್ಗಗಳವರು, ತುಳಿತಕ್ಕೊಳಗಾದ ವರ್ಗಗಳವರು ಹಾಗೂ ಶೋಷಿತರು ಚರಿತ್ರೆಯಲ್ಲಿ ಸಮರ್ಪಕವಾಗಿ ದಾಖಲಾಗಿಲ್ಲವೆನ್ನುವುದನ್ನು ಇಂಥಾ ಅಧ್ಯಯನ ಮಾರ್ಗಗಳು ಮನದಟ್ಟುಮಾಡಿಕೊಡುತ್ತವೆ. ಚರಿತ್ರೆಯಲ್ಲಿ ಗೌಣವಾದ ಅಂಶಗಳನ್ನು ಕಾವ್ಯಗಳಲ್ಲಿ ಕಾಣುತ್ತೇವೆ. ಕಾವ್ಯಗಳು ಆಯಾಕಾಲದ ಜನರ ಜೀವನ ವಿಧಾನಗಳಿಗೆ ಪ್ರಸ್ತುತವೆನಿಸಿದ ಸಂಗತಿಗಳ ಮೌಲ್ಯಗಳನ್ನು ಕಟ್ಟಿಕೊಡುತ್ತವೆ. ಇವುಗಳನ್ನು ಸಂಕಥನಗಳೆಂದು ಭಾವಿಸಬಹುದು. ಇವು ಒಂದುಕಾಲದ, ವ್ಯಕ್ತಿಯ, ಘಟನೆಯ ಯಾವುದೋ ತರದ ಒಂದು ಮಾಹಿತಿಯನ್ನು ಕಥಾರೂಪದಲ್ಲಿ ಚರಿತ್ರೆಯ ಮರುಜೋಡಣೆಗೆ ಅಳವಡಿಸಿ ಕೊಳ್ಳುವುದುಂಟು.

ಮಧ್ಯಕಾಲೀನ ಬೇಡರ ಮೂಲವು ಬೇಟೆಯೊಂದಿಗೆ ಬೆಸೆದುಕೊಂಡಿದೆ. ಇವರು ಶತಮಾನಗಳಿಂದಲೂ ಬೇಟೆಯನ್ನು ನಂಬಿಕೊಂಡು ಬಂದಿದ್ದರೂ, ಸಂದರ್ಭಕ್ಕೆ ತಕ್ಕಂತೆ ಬೇಟೆಯೊಂದಿಗೆ ಇತರ ಸಣ್ಣ ವೃತ್ತಿಗಳನ್ನೂ (ರಾಜಕೀಯ ಹುದ್ದೆಗಳೂ ಸೇರಿದಂತೆ) ಅಳವಡಿಸಿಕೊಂಡಿದ್ದರು. ಈ ಕಾಲದಲ್ಲಿ ಬೇಟೆ-ಬೇಡರ ಚಿತ್ರಣವು ಕವಿ ಸಮಯ, ಪ್ರತಿಭೆ, ವರ್ಣನೆ ಇತರ ಲಕ್ಷಣಗಳು ಕಥೆಯ ಬೆಳವಣಿಗೆಗೆ ಕಾರಣವಾಗಿವೆ. ಹೀಗಿದ್ದರೂ ಕವಿಗಳ ನೈತಿಕತೆ ಬೇಡರ ಅಥವಾ ಬೇಟೆ ಪ್ರಾಣಿಗಳಲ್ಲಿ ಯಾರಪರ ಇದೆ ಎಂಬುದನ್ನು ತಿಳಿಸುವುದು ಕಷ್ಟ.

ರಾಜಾಶ್ರಯ ಕವಿಗಳು ಕಥಾಸಂದರ್ಭಗಳಲ್ಲಿ ಸಮಕಾಲೀನ ವ್ಯಕ್ತಿಯನ್ನು ಪುರಾಣವ್ಯಕ್ತಿಯೊಂದಿಗೆ ಹೋಲಿಸಿ ಗುಣಗಾನ ಮಾಡುವುದುಂಟು. ಇಂಥ ಕವಿಗಳು ಜನಸಾಮಾನ್ಯರನ್ನು ಉಪೇಕ್ಷಿಸಿದ್ದಾರೆ. ಹೀಗೆ ರಾಜನ ಒತ್ತಡಗಳಿಗೆ ಮಣಿದ ಕವಿ ವೈಭವಯುತ ಜೀವನವನ್ನೇ ಬಿಂಬಿಸಿದರೂ, ಎಲ್ಲೋ ಒಂದು ಕಡೆ ಕವಿಯ ಒಳಮನಸ್ಸು ಬೇಟೆಗಾರರ ಮತ್ತು ಪ್ರಾಣಿಗಳ ಬಗೆಗೆ ತುಡಿಯುತ್ತಿರುವಂತಿದೆ. ಹಂದಿನೆಂಟು ವರ್ಣನೆಗಳ ನಿಮಿತ್ತ ಮೃಗಯಾ, ಶಿವನ ಇಪ್ಪತ್ತೈದನೇ ಲೀಲೆಯಾದ ಕಿರಾತಲೀಲೆಯು ಸ್ಪಷ್ಟವಾಗಿ ಅನಾವರಣಗೊಂಡಿದೆ. ಕಿರಾತಾರ್ಜುನೀಯ ಪ್ರಸಂಗದಲ್ಲಿ ಶಿವ ಮತ್ತು ಅರ್ಜುನರಿಗೆ ಸಂಬಂಧಿಸಿದ ಕಥೆಯನ್ನು ಹೆಣೆದಿದ್ದರೂ ಕವಿಯ ಒಲವು ಶಿವನ ಕಡೆಗಿದೆ. ಬಹುಶಃ ಶೈವಧರ್ಮದ ಹೆಗ್ಗಳಿಕೆಯನ್ನು ಪ್ರಚಾರ ಮಾಡುವ ಮೂಲಕ ಶಿವ-ಅರ್ಜುನರ ಪೌರುಷ ಇತರ ಸಂಗತಿಗಳು ಬಹುಮುಖ್ಯವಾಗಿವೆ. ಲೌಕಿಕ ವ್ಯಕ್ತಿ ಎಂಬ ಕಾರಣಕ್ಕೆ ಅರ್ಜುನನಿಗೂ ಎಲ್ಲಿಲ್ಲದ ಪ್ರಾಶಸ್ತ್ಯ ದೊರೆತಿದೆ.

ಕಾವ್ಯದಲ್ಲಿನ ಬೇಟೆ ಮತ್ತು ಬೇಡರ ಸಂದರ್ಭಗಳು ಕಾವ್ಯದ ಕಥಾವಸ್ತುವಿಗೆ ಹಾಸುಹೊಕ್ಕಾಗಿ ಬಂದಿದೆ. ಇತರ ಕಾವ್ಯದ ಲಕ್ಷಣಗಳಿಗೆ ಕವಿ ಒಳಗಾದರೂ ಆಶಯ ಮಾತ್ರ ಬೇಟೆ ಮತ್ತು ಬೇಡರನ್ನೆ ತಿಳಿಸುವುದಾಗಿದೆ. ಈ ಸಂದರ್ಭಗಳು ಕಾರ್ಯಕಾರಣ ಸಂಬಂಧ ಹೊಂದಿವೆ. ಬೇಟೆಗಾರ ಮತ್ತು ಪ್ರಾಣಿಗಳ ನಡುವೆ ನಡೆಯುವ ಬೇಟೆಯನ್ನು (ಘಟನೆ-ಸಂದರ್ಭ) ಕವಿಯಾದವನು ಕಾವ್ಯದಲ್ಲಿ ಇತಿಹಾಸಕಾರನಂತೆ ದಾಖಲಿಸುತ್ತಾನೆ. ತಿಳಿಸುವ ಕ್ರಮವು ವೈಭವ, ವರ್ಣನೆ, ಉತ್ಪ್ರೇಕ್ಷೆಗಳಿಗೆ ಎಂದರೂ ವಾಸ್ತವದ ನೆಲಗಟ್ಟನ್ನು ಬಿಟ್ಟುಹೋಗುವುದಿಲ್ಲ. ಒಮ್ಮೊಮ್ಮೆ ಕವಿಯ ಉದ್ದೇಶ ಒಂದಿದ್ದರೆ, ನಡೆಯುವ ಘಟನೆ ಬೇರೆಯಾಗಿರುತ್ತದೆ. ಉದಾ: ನಾಗವರ್ಮನ ಕಾದಂಬರಿಯಲ್ಲಿ ರಾಜನು ವಿಹಾರಕ್ಕೆ ಹೋಗುವಾಗ ಆಕಸ್ಮಿಕವಾಗಿ ಕಿನ್ನರ ಮಿಥುನಗಳನ್ನು ಬೆನ್ನಟ್ಟುವುದು, ಕಾಳಿದಾಸನ ಶಾಕುಂತಲದಲ್ಲಿ ದುಷ್ಯಂತ ಬೇಟೆಯಾಡುವಾಗ ಆಕಸ್ಮಿಕವಾಗಿ ಶಾಕುಂತಲೆಯನ್ನು ಒಲಿಸಿಕೊಳ್ಳುವುದು, ಇತ್ಯಾದಿ. ಇಲ್ಲಿ ಕಾರ್ಯಕ್ಕೂ ಮತ್ತು ಕಾರಣಕ್ಕೂ ಅವಿನಾಭಾವ ಸಂಬಂಧವಿರುವುದನ್ನು ಗುರುತಿಸಬಹುದು. ದುಷ್ಯಂತ ಬೇಟೆಗೆ ಹೋಗದಿದ್ದರೆ, ಶಾಕುಂತಲೆ ಇವನ ಪತ್ನಿಯಾಗುವ ಸಂಭವವಿರುತ್ತಿರಲಿಲ್ಲ.

ಪ್ರಸ್ತುತ ಅಧ್ಯಯನವು ಮಧ್ಯಕಾಲೀನ ಸಂದರ್ಭದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ಕೈಗೊಂಡಿದೆ. ಹಿಂದಿನ ಜನರ ಸಾಹಸ, ಹೋರಾಟಗಳು, ಇಂದಿನ ಬದುಕಿಗೆ ಪ್ರೇರಣೆ ನೀಡಲು ಸಹಾಯಕವಾಗಿವೆ. ಅವರ ಆಚಾರ, ವಿಚಾರ, ನಡೆ-ನುಡಿ, ರೂಢಿ-ಸಂಪ್ರದಾಯಗಳು ಬೇಟೆಯ ವಿವಿಧ ಹಂತಗಳಲ್ಲಿ ವ್ಯಕ್ತವಾಗಿರುವುದು ಗಮನಾರ್ಹ. ಇಲ್ಲಿ ಎರಡು ಲಕ್ಷಣಗಳು ಮುಖ್ಯವಾಗಿವೆ. ಒಂದು ಬೇಟೆ, ಇನ್ನೊಂದು ಕೂಟ. ಕೂಟಕ್ಕೆ ಮೂಲ ಬೇಟೆ. ಹೀಗಾಗಿ ಹೊಟ್ಟೆ ತುಂಬದಾಗಲೇ ವೇದ-ಪುರಾಣಗಳನ್ನು ಉಲ್ಲೇಖಿಸಬಹುದಾಗಿದ್ದು, ಹೊಟ್ಟೆ ತುಂಬುವ ತನಕ ಯಾವ ಮಾತೂ ಫಲಕಾರಿಯಲ್ಲ ಎನ್ನುವುದುಂಟು.

ಕನ್ನಡ ಕಾವ್ಯಗಳಲ್ಲಿ ಬೇಟೆಯ ಪ್ರಸಂಗ ವಿಪುಲವಾಗಿ ಬಂದಿದೆ. ಪ್ರಾಣಿ-ಪಕ್ಷಿ ಮೊದಲಾದವುಗಳ ಬೇಟೆಯನ್ನು ಕಾಣಬಹುದು. ಕ್ರೂರಮೃಗಗಳನ್ನು ಹಿಂಸಿಸುವ, ಕೊಲ್ಲುವ ಬೇಡನಿಗೇ ಬೇಟೆಗಾರ ಎನ್ನುವುದು ಅನ್ವರ್ಥಕವಾಗಿದೆ. ಇದು ಕೇವಲ ಬೇಟೆ ವೃತ್ತಿಯನ್ನವಲಂಬಿಸಿರುವಂಥಾದ್ದು.

ಬೇಟೆ ಹಿಂದಿನಿಂದಲೂ ಉತ್ಕೃಷ್ಟವಾಗಿರುವಂತೆ, ಮಧ್ಯಕಾಲದಲ್ಲಿಯೂ ಮಹತ್ವದಿಂದ ಕೂಡಿದ್ದಿತು. ಮೊದಲು ಆಹಾರಕ್ಕಾಗಿ ಸೀಮಿತವಾದ ಬೇಟೆ ಕ್ರಮೇಣ ವಿಹಾರ, ವಿನೋದ ಇತರ ಹವ್ಯಾಸಗಳಿಗೂ ವಿಸ್ತೃತಗೊಂಡಿತು. ಕವಿಯು ಕಾವ್ಯಕಟ್ಟುವಲ್ಲಿ ಸಪ್ತವ್ಯಸನ, ನವರಸ, ಅಷ್ಟಾದಶವರ್ಣನೆಗಳಲ್ಲಿ ಮೃಗಯಾ ತಂದಿರುವುದರಿಂದ ಬೇಟೆಸ್ಥಾನವು ಭದ್ರಗೊಂಡಂತಿದೆ. ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಸಾರುವ ನಿಟ್ಟನಲ್ಲಿ ಸ್ವಾರ್ಥ, ಹಿಂಸೆ, ದುರ್ಬಲಗುಣಗಳನ್ನು ಖಂಡಿಸುತ್ತಾ; ಆದರ್ಶ, ಅಹಿಂಸೆ, ಉದಾತ್ತ ಮೌಲ್ಯಗಳಿಗೆ ಸಹೃದಯರಿಗೆ ಕರೆಕೊಡುವ ಆಶಯಗಳನ್ನು ಕವಿ ವ್ಯಕ್ತಪಡಿಸಿದ್ದಾನೆ. ಕಾಳಿದಾಸ ಮಹಾಕವಿ ಶಾಕುಂತಲೆಯನ್ನು ದುಶ್ಯಂತ ವಿವಾಹವಾದ ಬಗೆಯನ್ನು ಕವಿಯ ಮನಸ್ಸು ಬೇಟೆಯ ಮೂಲಕ ಇಬ್ಬರ ಮನಸ್ಸುಗಳನ್ನು ಒಂದು ಗೂಡಿಸುವ ಅಭಿಲಾಷೆಯಂತಿದೆ. ಹಾಗೆಯೇ ಭಾರವಿ, ಶೂದ್ರಕರ ಕಾವ್ಯಗಳಲ್ಲದೆ, ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಕಿರಾತಾರ್ಜುನೀಯ ಪ್ರಸಂಗ ಮತ್ತು ವನಪಾಲಕರು ಹಾಗೂ ಆಳರಸರು(ಪಾಂಡು, ಶಂತನು) ಬೇಟೆಯಾಡುವ ಎರಡು ರೀತಿಗಳನ್ನು ತಿಳಿಸಿದ್ದಾನೆ. ಈ ಕಾಲಕ್ಕೆ ಸೇರಿದ ಚಾಲುಕ್ಯರ ಎರಡನೇ ಸೋಮೇಶ್ವರನು ತನ್ನ ಮಾನಸೋಲ್ಲಾಸದಲ್ಲಿ ಸುಮಾರು ೨೨ ವಿಧವಾದ ಬೇಟೆ ಬಗೆಗಳನ್ನು ತಿಳಿಸುತ್ತಾನೆ. ಪಾನೀಯುಜ, ಚಾರಜ, ಕ್ಷೇತ್ರಜ, ಮಾರ್ಗಜ, ಊಷರ, ದೀಪಮೃಗಜ, ವಿಟಪಜ ವಧ್ರಜ, ವಾಹಜ, ವ್ಯಾಘ್ರಜ ಮೊದಲಾದವು ಇವುಗಳ ಪೈಕಿ ಗಮನಾರ್ಹವಾಗಿವೆ. ವಡ್ಡಾರಾಧನೆಯ ಸುಕುಮಾರಸ್ವಾಮಿ ಕಥೆಯಲ್ಲಿ ಅಗ್ನಿಭೂತಿ, ವಾಯುಭೂತಿಗಳು ಸಪ್ತವ್ಯಸನ ಪೀಡಿತರಾಗಿರುವುದಲ್ಲದೆ, ಇತರ ಕಥೆಗಳು ಮಹತ್ವವೆನಿಸಿವೆ. ಜನ್ನನು ಯಶೋಧರ ಚರಿತೆಯಲ್ಲಿ ನಡತೆಗೆಟ್ಟ ಹೆಂಡತಿಯಿಂದ ದುಃಖಪಡುವ ಗಂಡ ಪ್ರಾಣಿಬಲಿ ಕೊಡುವುದು ಆಕಾಲದ ಮಲೆನಾಡಿನ ಗ್ರಾಮದೇವತೆಗಳ ಆರಾಧನೆಯನ್ನು ತಿಳಿಸಲು ಯತ್ನಿಸಿದ್ದಾನೆ. ಬೇಟೆಯು ಭವಾವಳಿಯಾಗಿ ಬಂದಿದ್ದು, ಗರ್ಭಿಣಿ ಆಡನ್ನೇ ಕೊಲ್ಲುವಲ್ಲಿ, ಕೊನೆಗೊಳ್ಳುತ್ತದೆ. ಅಭಯರುಚಿ, ಅಭಯಮತಿಗಳು 'ನಿರ್ಮಲಧರ್ಮದಿಂದ ಪಾಲಿಸುಧರೆಯಂ' ಎಂಬ ನೀತಿಯನ್ನು ಹೇಳಿದ್ದು ಇಲ್ಲಿನ ಉದಾತ್ತ ಗುಣಗಳಲ್ಲಿ ಮುಖ್ಯವೆನಿಸಿದೆ. ಇವನ ಅನಂತನಾಥ ಪುರಾಣದಲ್ಲಿ ಚಂಡಶಾಸನ, ಸುನಂದೆಯರು ಬೇಟೆಗಾರ ಮತ್ತು ಪ್ರಾಣಿಗಳಾಗಿ ಕಂಡುಬರುವ ಹಿಂಸೆ ವಿಚಿತ್ರ.

ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣದ ೫೩ನೇ ಸಂಧಿಯಲ್ಲಿ ಮೃಗಯಾ ವರ್ಣನೆಯಿದೆ. ಇಂದ್ರಕೀಲ ಪರ್ವತದಲ್ಲಿ ಅರ್ಜುನನ ತಪಸ್ಸಲ್ಲದೆ ಪಾಶುಪಾತಾಸ್ತ್ರ ಪ್ರಾಪ್ತಿ, ಶಿವ-ಅರ್ಜುನರ ಯುದ್ಧ, ಬೇಟೆ-ಬೇಡರ ಮೊಗವಾಡ ಇತರ ಸಂಗತಿಗಳಿವೆ. ಚಂದ್ರಶೇಖರ-ಶಿವ-ವಿರೂಪಾಕ್ಷನೆಂದು ಕಿರಾತನಿಗೆ ಕರೆದರೆ ಅರ್ಜುನನಿಗೆ ಬೇಟೆಗಾರನೆಂದೇ ನೋಡುತ್ತಾನೆ. ಕಾವ್ಯದ ಹೆಣಿಗೆಯಲ್ಲಿ ಕವಿಯ ನೈತಿಕ ನಿಲುವುಗಳು ಬೇಟೆ ಪಾಪಕೃತ್ಯವು ಎಂದಾಗಲಿ, ಪುಣ್ಯವೆಂದಾಗಲಿ ಭಾವಿಸದೆ ಕಥೆಗೆ ಪೂರಕ ಎಂಬಂತೆ ವರ್ಣಿಸಿರುವುದುಂಟು. ಷಡಕ್ಷರದೇವನ ಶಬರಶಂಕರವಿಳಾಸವು ಮೃಗಯಾ ಕುರಿತ ಶಿವ-ಅರ್ಜುನರ ಕಾಳಗದ ಕಥೆಯಾಗಿದೆ. ಇದರಲ್ಲಿ ಶೈವಧರ್ಮದ ಪ್ರಭಾವವನ್ನುಬೇಡರಲ್ಲಿ ಗುರುತಿಸುತ್ತಾ; ಶಿವನ ಮೂಲಕ ಬೇಡರ ಸಾಹಸ, ಪರಾಕ್ರಮ, ತ್ಯಾಗವನ್ನು ಕವಿ ತಿಳಿಸಿದ್ದಾನೆ. ಇವನು ಭಾರವಿ, ಪಂಪ-ಕುಮಾರವ್ಯಾಸನಂತೆ ಕಿರಾತಾರ್ಜುನೀಯವನ್ನು ತಂದಿದ್ದಾನೆ. ಶೈವಕವಿಗಳು ಶಬರಶಂಕರವೆಂದು, ಇತರರು ಕಿರಾತಾರ್ಜುನೀಯವೆಂದು ಕರೆದರೂ, ವಾಸ್ತವವಾಗಿ ಒಂದೇ ಅರ್ಥ ಕೊಡುತ್ತದೆ. ಇವರೆಲ್ಲರಿಗಿಂತಲೂ ಹರಿಹರನ ಗಿರಿಜಾಕಲ್ಯಾಣದಲ್ಲಿ ಬೇಟೆಗಾರನ ಸ್ವರೂಪ, ಪ್ರಾಣಿಗಳ ಉಪಟಳ,

ಮುಳ್ಳುಹಂದಿ, ಬೇಡ-ಬೇಡತಿಯರ ಶೃಂಗಾರ, ಪ್ರಣಯ, ಕಲಹದ ಚಿತ್ರಣ ಮುಖ್ಯವೆನಿಸಿದೆ. ಇಲ್ಲಿ ಶಿವನ ವರ್ಣನೆ ಅದ್ಭುತ. ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿ ದುಷ್ಟಮೃಗಗಳ ಹಾವಳಿಗೆ ಬೇಡರ ದಂಡಿನೊಂದಿಗೆ ಹರಿಶ್ಚಂದ್ರ ಬೇಟೆಗೆ ಹೊರಡುವ ದೃಶ್ಯವಿದೆ. ಇಲ್ಲಿ ಶಬರಬಲ, ಬೇಟೆಯ ನಾಲ್ಕು ವಿಧಗಳು, ೨೪ ವಿಧದ ಬಲೆಗಳು, ಕಿರಾತರನ್ನು ಮಡದಿಯರಾದ ಬೇಡತಿಯರು ಶುಶ್ರೂಷೆ ಮಾಡುವುದು ಗಮನಾರ್ಹ ಸಂಗತಿ. ಇದೇ ರೀತಿ ದೇಪರಾಜನ ಸೊಬಗಿನಸೋನೆಯಲ್ಲಿ ಸಿಂಹಬೇಟೆ ಬಗ್ಗೆ ಹೇಳಿರುವುದು ಹೊಸವಿಚಾರ. ಕೊನೆಗೆ ಇವನು ವೈರಾಗ್ಯ ತಾಳಿದವನಂತೆ ಬೇಟೆ ಹಿಂಸಾಕೃತ್ಯವೆಂದು ಖಂಡಿಸಿದ್ದಾನೆ. ಕನಕದಾಸರು ನಳಚರಿತ್ರೆಯಲ್ಲಿ ನಳ-ದಮಯಂತಿಯರ ಕಥಾಚಿತ್ರಣದೊಡನೆ ಬೇಡಪಡೆಯ ನಾಯಕನು ರಾಜನನ್ನು ಬೇಟೆಗೆ ಆಹ್ವಾನಿಸುವುದನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಕನಕದಾಸರ ವೃತ್ತಿ ಬೇಟೆಯಾಗಿದ್ದುದರಿಂದ ಬೇಟೆ ನೈಜವೆಂಬಂತಿದೆ. ಕರ್ಣಪಾರ್ಯನ ನೇಮಿನಾಥಪುರಾಣದಲ್ಲಿ ಕರ್ಣಪಾರ್ಯನ ಮಗಧದ ವಿಂಧ್ಯಕನೆಂಬ ಬೇಡ ಮತ್ತು ವಾಗುರೆಯೆಂಬ ಬೇಡತಿ ಇವರು ಚಾರಣ ದಂಪತಿಗಳನ್ನು ಬೇಟೆ ಪ್ರಾಣಿಗಳೆಂದು ಕೊಲ್ಲುವುದು, ಆನಂತರ ದೀಕ್ಷೆ ಪಡೆದು ಹೊಸ ಜೀವನ ನಡೆಸುವುದು ವ್ಯಕ್ತಪಡುತ್ತದೆ.

ಕುಮಾರ ವಾಲ್ಮೀಕಿಯ ತೊರವೆರಾಮಾಯಣದಲ್ಲಿ ಶಂಭುಕಾಸುರ ಇಂದ್ರ ಪದವಿಗಾಗಿ ತಪಸ್ಸು ಮಾಡುವ ಚಿತ್ರಣವಿದೆ. ಚೌಂಡರಸನು ಅಭಿನವ ದಶಕುಮಾರಚರಿತೆಯಲ್ಲಿ ಪುಳಿಂದ ನಾಯಕ ಪ್ರಾಣಿಗಳ ಉಪಟಳವನ್ನು ಸಹಿಸಲಾರದೆ ರಾಜನ ಮೊರೆ ಹೋಗಿ ಬೇಟೆಯಾಡುವುದಿದೆ. ಇದರಲ್ಲಿ ಬೇಡರಹಳ್ಳಿಯ ವರ್ಣನೆ, ಪ್ರಾಣಬಲಿಯ ವಿವರಗಳಿವೆ. ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ಬೇಡ-ಬೇಡತಿಯರ ಲೈಂಗಿಕತೆ ಬಗೆಗೆ ತಿಳಿಸಿರುವುದನ್ನು ನೆನೆಯಬಹುದು. ನಂಜುಂಡನ ರಾಮನಾಥಚರಿತೆಯಲ್ಲಿ ಬೇಟೆ ವಾಸ್ತವಿಕವಾಗಿದೆ. ಬೇಟೆಯಾಡುವ ರಾಜನಿಗೆ ಕಾವಲುಮನೆ, ಬೇಡರ ಮಡದಿಯರ ಶುಶ್ರೂಷೆ, ಬೇಡತಿಯರು ಗಾಯಗಳಿಗೆ ತಾಂಬೂಲದಿಂದ ಕಟ್ಟುವುದು ಕಂಡುಬರುತ್ತದೆ. ಲಕ್ಷ್ಮೀಶನ ಜೈಮಿನಿಭಾರತದಲ್ಲಿ ಬೇಟೆ ಪ್ರಾಣಿ, ನಾಯಿ ಇತರ ಪ್ರಾಣಿಗಳ ಉಲ್ಲೇಖವಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಸೌಗಂಧಿಕ ಪರಿಣಯದಲ್ಲಿ ಸುಗಂಧರಾಜನು ಮೃಗಯಾ ವಿಹಾರಕ್ಕೆ ಹೊರಡುವ ವಿವರವಿದೆ. ಸಂಕ್ಷಿಪ್ತ ಬೇಟೆ ಬಗೆಗೂ ಬೆಳಕು ಚೆಲ್ಲಿದ್ದಾರೆ. ತಿರುಮಲಾರ್ಯನ ಚಿಕ್ಕದೇವರಾಜನ ವಂಶಾವಳಿಯಲ್ಲಿ ರಾಜನಿಗೆ ಶಿಕಾರಿ ಹುಚ್ಚು ಹಿಡಿಸಿ ರಾಜ್ಯದ ಅಧಿಕಾರ ಕಸಿಯುವ ಸೇನಾನಿಯ ಸಂಚಿನ ಚಿತ್ರಣವಿದೆ. ಇಲ್ಲಿ ಬೇಟೆಗೆ ಕೋವಿ ಬಳಸಿರುವುದು ಬದಲಾದ ಸಮಾಜದ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ತಿಳಿಸುವಂಥಾದ್ದು.

ಕನ್ನಡ ಶಿಷ್ಟ ಕಾವ್ಯಗಳಲ್ಲಿ ಬರುವ ಬೇಟೆಯಂತೆ, ಮೌಖಿಕ ಸಾಹಿತ್ಯದಲ್ಲಿಯೂ ವ್ಯಾಪಕವಾಗಿ ಬರುತ್ತದೆ. ಸರ್ಜಪ್ಪನಾಯಕ, ಕಾಳಿಂಗರಾಯ, ಗಾದರಿ ಪಾಲನಾಯಕ, ಜಗಳೂರು ಪಾಪನಾಯಕ, ದಡ್ಡಿಸೂರನಾಯಕ, ಕೊಡಗಲು ಬೊಮ್ಮಯ್ಯ, ಬಾಲನಾಗಮ್ಮ, ಕಾಡುಸಿದ್ದಮ್ಮ ಮೊದಲಾದವರ ಬೇಟೆ ಪ್ರಸಂಗಗಳಲ್ಲಿ ಬೇಡರ ಪಾತ್ರವು ಮಹತ್ವವಾಗಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಬೇಟೆಯ ಪ್ರಸಂಗಗಳು ಸಾಕಷ್ಟು ಕಂಡುಬರುತ್ತವೆ.

ಬೇಡರು ಬೇಟೆಯಾಡುವಲ್ಲಿ ಅನೇಕ ಬಗೆಯ ಸಾಂಸ್ಕೃತಿಕ ಸಂಘರ್ಷಗಳಿಗೆ ಒಳಗಾಗಿದ್ದಾರೆ. ಅವು ಬುಡಕಟ್ಟು ಸಂಸ್ಕೃತಿಗಳಲ್ಲಿ ಸಾಮಾನ್ಯವಾಗಿವೆ. ಬೇಟೆಯಾಡುವುದರ ಮೂಲಕ ಆಹಾರ ಸಂಗ್ರಹಿಸುತ್ತಿದ್ದು, ಪ್ರಾಣಿಗಳ ದಂತ, ಮರದತೊಗಟೆ, ಎಲೆ, ಚರ್ಮಗಳಿಂದ ಉಡುಗೆ-ತೊಡುಗೆಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಬೇಟೆಯಲ್ಲಿ ಯಾವಪ್ರಾಣಿಗಳನ್ನು ಕೊಲ್ಲಬೇಕು, ಕೊಲ್ಲಬಾರದು ಮತ್ತು ಬೇಟೆಗೆ ಹೊರಡುವಾಗ ಅಪಶಕುನಗಳಾಗಬಾರದೆಂಬ ಹಲವು

ನಂಬಿಕೆಗಳಿದ್ದವು. ಹೀಗೆ ಬೇಟೆ ದೇವರುಗಳ ಆಚರಣೆಯು ಮುಂದುವರೆದಿದೆ. ಹಿಂದೆ ಚಾಲ್ತಿಯಲ್ಲಿದ್ದ ಶಿಲಾಯುಧಗಳು ಬದಲಾಗಿ ಬಿಲ್ಲು-ಬಾಣಗಳು ಬಂದವು. ತರುವಾಯ ಬಾಣದ ಆಯುಧಗಳಲ್ಲದೆ, ಬಂದೂಕಿನಿಂದ ಬೇಟೆಯಲ್ಲಿ ಕ್ರಾಂತಿಕಾರಕ ಬದಲಾವಣೆಯಾಯಿತು. ಬೇಟೆಯಲ್ಲಿ ಪ್ರಾಣಿ-ಪಕ್ಷಿ, ಜಲಚರಗಳೆಂದು ವಿಂಗಡಿಸಿಕೊಂಡು ಇವುಗಳನ್ನು ನಾನಾ ಬಗೆಯಾಗಿ ಬೇಟೆಯಾಡುವ ಕ್ರಮ ಬೆಳೆದು ಬಂದಿದೆ. ಆಧುನಿಕವಾಗಿ ಟಿಪ್ಪುಸುಲ್ತಾನ, ಮೈಸೂರು ಒಡೆಯರು ಬೇಟೆಯಾಡಿದ್ದಾರೆ. ಬೇಟೆಯಲ್ಲಿ ನಿಪುಣರಾದ ಹಲಗಲಿ ಬೇಡರು 'ನಿರಾಯುಧ ಕಾಯಿದೆ' ಜಾರಿಗೆ ಬಂದಾಗ ಬ್ರಿಟಿಷರ ವಿರುದ್ಧ ೧೮೫೭ರಲ್ಲಿ ದಂಗೆ ನಡೆಸಿದ್ದು ಸ್ಮರಣೀಯ.

ಅನೂಚಾನವಾಗಿ ಬೆಳೆದು ಬಂದ ಬೇಟೆಯ ಸ್ವರೂಪ ವಿವಿಧ ಕಾಲಘಟ್ಟಗಳಲ್ಲಿ ಬದಲಾಯಿತು. ಕಾನೂನು ರೀತಿಯಲ್ಲಿ ಬೇಟೆ ನಿಷೇಧಗೊಂಡರು ಕಳ್ಳಬೇಟೆ ಆಚರಣೆಯಲ್ಲಿದೆ. ಬೇಟೆ ವಿಧಿ-ನಿಷೇಧ, ನೀತಿ-ನಿರ್ಬಂಧ ಕುರಿತಂತೆ ಸರ್ಕಾರ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಅನೇಕ ಯೋಜನೆಗಳನ್ನು ಕೈಗೊಂಡಿದೆ. ಇಂದು ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಬೇಟೆ ಮಹತ್ವದ ಪಾತ್ರ ವಹಿಸಿದೆ.

ಕರ್ನಾಟಕದಲ್ಲಿ ಪ್ರಚಲಿತವಿರುವ ಬೇಟೆ ಆಚರಣೆ ಸ್ವರೂಪದ್ದು. ಆಹಾರ ಸ್ವರೂಪದ ಬೇಟೆ ಮರೆಯಾಗಿದೆ. ಹೀಗಾಗಿ ಮಧ್ಯಕರ್ನಾಟಕದಲ್ಲಿ, ಬೇಡರ ಹೊಲಮೇರಿ ಬೇಟೆ, ಯುಗಾದಿ ಬೇಟೆ ಮತ್ತು ಶಿವರಾತ್ರಿ ಬೇಟೆಗಳನ್ನು ಇಂದಿಗೂ ನೋಡಬಹುದು. ಹೀಗೆ ಸೋಲಿಗರು, ಜೇನುಕುರುಬರು, ಹಾಲಕ್ಕಿ ಒಕ್ಕಲಿಗರು ಮೊದಲಾದ ಬುಡಕಟ್ಟುಗಳ ಪ್ರಸ್ತುತ ಸ್ಥಿತಿಯನ್ನು ಹೇಳಿಕೊಳ್ಳುವಂತಿಲ್ಲ. ಹಿಂಸಿಸುವ, ಪೀಡಿಸುವ ಸಮಾಜ ಬಾಹಿರ ಕೃತ್ಯವೆಸಗುವವನಿಗೆ ಇಂದು ಕಿರಾತ ಎಂಬ ಪದವನ್ನು ಪ್ರಯೋಗಿಸುತ್ತಾರೆ. ಇತ್ತೀಚಿನ ವಚನಗಳಲ್ಲಿ ಇವುಗಳ ಉಲ್ಲೇಖವಿದೆ. ಸ್ವಾತಂತ್ರ್ಯಾನಂತರದಲ್ಲಿ ಬೇಟೆಗೆ ಕಾಯ್ದೆ-ಕಾನೂನುಗಳು ಜಾರಿಯಾದಾಗ ಬೇಟೆಗಾರರ ಸ್ಥಿತಿ ಶೋಚನೀಯವಾಗಿತ್ತು. ಬೇಟೆಯನ್ನೇ ನಂಬಿಕೊಂಡು ಬಂದ ಬೇಡರು ವಿವಿಧ ವೃತ್ತಿಗಳಿಗೆ ಹಾತೊರೆದರು. ಸರ್ಕಾರ ಆಯೋಗಗಳನ್ನು ರಚಿಸಿ ಇವರಿಗೆ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಿದೆ. ಹೀಗಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಇತರ ಕ್ಷೇತ್ರಗಳಲ್ಲಿ ಸುಧಾರಿಸುತ್ತಿರುವುದು ಕಂಡುಬರುತ್ತದೆ. ಹೈದ್ರಾಬಾದ್ ಕರ್ನಾಟಕದ ಬೇಡರ ಸ್ಥಿತಿ ಬಡತನದಿಂದ ಕೂಡಿದೆ. ಮಧ್ಯ ಮತ್ತು ದಕ್ಷಿಣ ಕರ್ನಾಟಕಗಳ ಬೇಡರು ಪ್ರಧಾನವಾಗಿ ಕೃಷಿಯನ್ನವಲಂಬಿಸಿದ್ದಾರೆ. ಉತ್ತರಕರ್ನಾಟಕ, ಕರಾವಳಿ ಕರ್ನಾಟಕಗಳಲ್ಲಿಯೂ ಬೇಟೆ, ಕೃಷಿ, ಪಶುಪಾಲನೆಗಳಿವೆ. ಬೆಳಗಾವಿ ಸಮೀಪ ಚಿಕ್ಕಲದಿನ್ನೆಯಲ್ಲಿ ನರಬಲಿ ಇತ್ತು. ಪ್ರಾಣಿ, ಕುರಿಗಳನ್ನೂ ಕಡಿಯುತ್ತಿದ್ದರು. ಇಂದು ಅಲ್ಪವಾಗಿ ಪರಿವರ್ತನೆ ಕಂಡುಬರುತ್ತದೆ. ಬೇಡರ ಪೌರಾಣಿಕ ವ್ಯಕ್ತಿಗಳ ಕಥೆಗಳಲ್ಲಿ ಕಂಡುಬರುವಂತೆ, ಏಕಲವ್ಯನ ವಂಶಸ್ಥರು ಆಂಧ್ರದಲ್ಲಿದ್ದರೆಂದೂ ಇವರನ್ನು ಕುರುಮಾವ ಎಂದು ಕರೆಯಲಾಗುತ್ತದೆಂದೂ ತಿಳಿದುಬರುತ್ತದೆ.

ಜಾಗತೀಕರಣಗೊಳ್ಳುತ್ತಿರುವ ಬುಡಕಟ್ಟುಗಳು ಸಂದಿಗ್ಧ ಪರಿಸ್ಥಿತಿಯಲ್ಲಿದ್ದು, ಮೂಲಸಂಸ್ಕೃತಿಗಳು ಮರೆಯಾಗುತ್ತಿವೆ. ಬೇಡರು ಇಂದು ನಾಗರಿಕತೆಯ ಪ್ರಭಾವದಿಂದ ವಲಸೆ ಆರಂಭಿಸಿ, ಸಾಂಸ್ಕೃತಿಕ ಹೆಗ್ಗುರುತುಗಳನ್ನು ಉಳಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಮಧ್ಯಕಾಲ ಮತ್ತು ಆಧುನಿಕ ಶಿಕ್ಷಣ ಇವರಿಗೆ ಪರಿಣಾಮ ಬೀರಿಲ್ಲದಿರುವುದು ಖೇದಕರ ಸಂಗತಿ. ಬೇಡರಲ್ಲಿ ಊರು ನಾಯಕರು ಅತೀ ಮುಂದುವರೆದಿದ್ದು, ನಗರಗಳಲ್ಲಿ ವಾಸಿಸುತ್ತಾರೆ. ಇವರು ಗರಿಷ್ಠ ಪ್ರಮಾಣದಲ್ಲಿ, ಸರ್ಕಾರದ ಸೌಲಭ್ಯ ಪಡೆಯುತ್ತಿದ್ದಾರೆ. ಮ್ಯಾಸಬೇಡರು ಇನ್ನೂ ಹಟ್ಟಿಗಳಲ್ಲಿ ವಾಸಿಸುತ್ತಿದ್ದು,. ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ವಿಧಾನಗಳಲ್ಲಿ ಇವರು ಬದಲಾಗಬೇಕಾಗಿದೆ.

ಬೇಟೆ ಎಂಬುದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಿಂತುಹೋದಂತೆ ಕಂಡುರೂ ಅದು ಬಲಿರೂಪದಲ್ಲಿ ಪ್ರದರ್ಶನಗೊಂಡಿದೆ. ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಹಾವನೂರು ಮತ್ತು ಕೊಂಬಳಿಗಳಲ್ಲಿ ನಡೆಯುತ್ತಿದ್ದ ಜಾತ್ರೆಗಳಲ್ಲಿ ಕೋಣನ ಬಲಿ ರೂಢಿಯಲ್ಲಿತ್ತು. ಕೆಲವು ಸುಧಾರಕರು ಸೇರಿಕೊಂಡು ಜಾತ್ರೆಗಳಲ್ಲಿ ನಡೆಯುತ್ತಿದ್ದ ಕೋಣನ ಬಲಿಯನ್ನು ತಡೆಯಲು ಚಳವಳಿ ನಡೆಸಿದಾಗ ನಿಂತಿತು. ಇಂಥ ಹಲವಾರು ಉದಾಹರಣೆಗಳಿವೆ.

ಇಂದು ಬೇಟೆಯನ್ನು ವಾಣಿಜ್ಯ ವೃತ್ತಿಯಾಗಿ ಮಾಡಿಕೊಂಡಿರುವರು. ಬೇಟೆಂಯ ಜತೆಗೆ ಜೇನುತುಪ್ಪ, ಆನೆಂಯ ಕೊರೆಗಳು, ಕಾಡುಕೋಣ ಹೀಗೆ ಇತರ ಪ್ರಾಣಿಗಳ ಚರ್ಮ, ದಂತ, ನವಿಲುಗರಿ, ಪುನಗಿನಬೆಕ್ಕು, ಗಿಡದಂಟು ಅಲ್ಲದೆ, ಕವಲೆ, ಬೋರೆ, ನೇರಲ ಮುಂತಾದ ಹಣ್ಣುಗಳನ್ನು ಸಂಗ್ರಹಿಸಿ ಮಾರುವುದು ಬೆಳೆದು ಬಂದಿದೆ.

ರಾಜಪ್ರಭುತ್ವದಲ್ಲಿ ದಳವಾಯಿ ತಳವಾರಿಕೆ, ಮೊದಲಾದ ರಾಜಕೀಯ ಹುದ್ದೆಗಳು ಕೈತಪ್ಪಿವೆ. ಇಂದು ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರಾಗಲು ಮುಂದಾಗಿರುವರು. ಕರ್ನಾಟಕದ ಬೇಡರು ಪ್ರಾದೇಶಿಕವಾಗಿ ಭಿನ್ನವೃತ್ತಿ-ಭಿನ್ನ ಸಂಸ್ಕೃತಿಗಳಲ್ಲಿ ನೆಲಸತೊಡಗಿದ್ದಾರೆ.

ಬೇಟೆಯ ಕಾನೂನುಗಳು ಬೇಡರ ಬದುಕಿಗೆ ಶಾಪವೆಂಬಂತೆ ಪರಿಣಮಿಸಿದೆ. ೧೯೫೯ರ ಕರ್ನಾಟಕ ಪ್ರಾಣಬಲಿಗಳ ಪ್ರತಿಬಂಧಕ ಅಧಿನಿಯಮ, ೧೯೬೩ರ ಕರ್ನಾಟಕ ಅರಣ್ಯ ಅಧಿನಿಯಮ(೨ನೇ ತಿದ್ದುಪಡಿ), ೧೯೭೨ರ ವನ್ಯಜೀವಿ ಸಂರಕ್ಷಣಾಅಧಿನಿಯಮ, ೧೯೭೬ರ ಕರ್ನಾಟಕ ಮರಗಳ ಸಂರಕ್ಷಣ ಅಧಿನಿಯಮ, ಕರ್ನಾಟಕ ಅರಣ್ಯ ಅಧಿನಿಯಮ ೧೯೭೬, ಕರ್ನಾಟಕ ಅರಣ್ಯ ತಿದ್ದುಪಡಿ ೧೯೭೮, ಭಾರತದ ಮೀನುಗಾರಿಕೆ ಅಧಿನಿಯಮ ೧೯೮೭ ಮೊದಲಾದವು ಬೇಟೆಯನ್ನು ತಡೆಗಟ್ಟಿ, ವನ್ಯಜೀವಿಗಳ ರಕ್ಷಣೆಗೆ ಉತ್ತಮ ವಾತಾವರಣ ಕಲ್ಪಿಸಿವೆ.

ಇಂದು ಸರ್ಕಾರದ ನೀತಿ-ನಿರ್ಬಂಧ, ಕಾಯ್ದೆ-ಕಾನೂನುಗಳು ಮತ್ತು ಪರಿಹಾರೋಪಾಯಗಳು ಬಹುಮುಖ್ಯವಾಗಿವೆ. ಅರಣ್ಯ ಅಭಿವೃದ್ಧಿ ಯೋಜನೆ, ಸಾಮಾಜಿಕ ಅರಣ್ಯ, ವನ್ಯಪ್ರಾಣಿಗಳ ಅಭಯಾರಣ್ಯಗಳ ಯೋಜನೆಯನ್ನು ಕೈಗೊಂಡಿದೆ. ಇಂಥ ಅಭಯಾರಣ್ಯಗಳೆಂದರೆ: ಅರಾಬಿತಿಟ್ಟು ರಕ್ಷಣಾಧಾಮ, ಬ್ರಹ್ಮಗಿರಿ ಅಭಯಾರಣ್ಯ, ಬಿ.ಆರ್. ಟಿ.ಅಭಯಾರಣ್ಯ, ಭದ್ರಾಅಭಯಾರಣ್ಯ, ಬನ್ನೇರುಘಟ್ಟ ಅಭಯಾರಣ್ಯ, ಘಟಪ್ರಭಾ ಅಭಯಾರಣ್ಯ, ಮೇಲುಕೋಟೆ ಅಭಯಾರಣ್ಯ, ಮೂಕಾಂಬಿಕಾ ಅಭಯಾರಣ್ಯ ನುಗು ಅಭಯಾರಣ್ಯ, ನಾಗರಹೊಳೆ ರಾಷ್ಟ್ರೀಯ ಉದ್ಯಾನವನ, ರಾಣೆಬೆನ್ನೂರು ಕೃಷ್ಣಮೃಗಗಳ ಅಭಯಾರಣ್ಯ, ರಂಗನತಿಟ್ಟು ಪಕ್ಷಿಧಾಮ, ಶೆಟ್ಟಿಹಳ್ಳಿ ಅಭಯಾರಣ್ಯ, ಸೋಮೇಶ್ವರ ಅಭಯಾರಣ್ಯ, ತುಂಗಭದ್ರಾ ಅಭಯಾರಣ್ಯ, ಬಂಡೀಪುರ ಅಭಯಾರಣ್ಯ, ಮಂಡಗದ್ದೆ ಅಭಯಾರಣ್ಯ, ಶರಾವತಿ ಕಣಿವೆ ಅಭಯಾರಣ್ಯ, ಕೊಕ್ಕರೆ ಬೆಳ್ಳೂರು ಪಕ್ಷಿದಾಮ ಮುಂತಾದವು ಕರ್ನಾಟಕದ ವನ್ಯ ಜೀವಿಗಳ ಅಭಿವೃದ್ಧಿಗೆ ಕಾರ್ಯೋನ್ಮುಖವಾಗಿವೆ.

೧೯೯೭-೯೮ರಲ್ಲಿ ಗಿರಿಜನರ ಉಪಯೋಜನೆ ಮತ್ತು ವನ್ಯಜೀವಿಗಳ ಸಂರಕ್ಷಣೆಯ ಬಗ್ಗೆ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರ ವ್ಯಯಿಸಿದೆ. ಸುಮಾರು ೧೯ ಅಭಯಾರಣ್ಯಗಳ ಯೋಜನೆ ರೂಪಿಸಿ ಅದರ ನ್ಯಾಯಬಾಹಿರ ವ್ಯಾಪಾರ ತಡೆಗಟ್ಟುವುದು ಸೇರಿದೆ. ಕಾಡಿನಲ್ಲಿ ವಾಸಿಸುವ ಬುಡಕಟ್ಟುಗಳಿಗೆ ಮೇಲಿನ ಯೋಜನೆಗಳಿಂದ ಪ್ರಯೋಜನವಾಗುತ್ತದೆ. ಆ ಮೂಲಕ ತಮ್ಮ ಹಕ್ಕುಗಳನ್ನು ಪ್ರತಿಪಾದಿಸುತ್ತಿದ್ದಾರೆ. ಉದಾ:ಉತ್ತರ ಭಾರತದಲ್ಲಿ ವನಾಂಚಲ ರಾಜ್ಯ ಮಾಡಲು ಗಿರಿಜನರ ಬವಣೆ ಹೇಳತೀರದಾಗಿದೆ. ಹೀಗೆ ಕೊಡಗು, ಜಾರ್ಖಂಡ್, ಇತ್ಯಾದಿ. ೧೯೯೭-೯೮ನೇ

ಸಾಲಿನಲ್ಲಿ ಗಿರಿಜನರಿಗಾಗಿ ರಾಜ್ಯ ಸರ್ಕಾರವು ಅನೇಕ ಯೋಜನೆಗಳನ್ನು ಕೈಗೊಂಡಿದೆ. ಅವುಗಳಲ್ಲಿ ಚಿಕ್ಕಮಗಳೂರು, ದಕ್ಷಿಣಕನ್ನಡ ಮತ್ತು ಮೈಸೂರು ಜಿಲ್ಲೆಗಳಲ್ಲಿ ನೆಡುತೋಪುಗಳನ್ನು ಬೆಳೆಸಲಾಗುತ್ತಿದೆ. ಹೀಗೆ ವಿಶ್ವ ಬ್ಯಾಂಕ್ ಸಹಾ ಸಾಮಾಜಿಕ ಅರಣ್ಯ ಯೋಜನೆಗಳನ್ನು ಮುಂದುವರೆಸಿದೆ. ಮೇಲಿನಂತೆ ಗಿರಿಜನರ ಸ್ಥಿತಿ-ಗತಿ ಅರಿತು ಉಪಯೋಜನೆಗಳನ್ನು ರೂಪಿಸಲಾಗಿದೆ. ಅಲಕ್ಷಿಸಲ್ಪಟ್ಟ ಭೂಮಿಯಲ್ಲಿ ಹಣ್ಣು ಹಂಪಲೂ ಹಾಗೂ ಕಿರು ಅರಣ್ಯ ಉತ್ಪತ್ತಿ ಕೊಡುವ ಮರಗಳನ್ನು, ಔಷಧಿ ಸಸ್ಯಗಳನ್ನು ಬೆಳೆಸಬೇಕಾಗಿದೆ. ಬೊಂಬು, ತೇಗ, ಉರುವಲು ಮರಗಳನ್ನು ಬೆಳೆಸಿ ವಿತರಿಸಿ ಗಿರಿಜನರ ಜೀವನಾವಶ್ಯಕತೆಗಳನ್ನು ಪೂರೈಸುವುದಾಗಿದೆ. ಗುಡಿ ಕೈಗಾರಿಕೆಯಿಂದ ಮಹಿಳೆಯರ ಉದ್ಯೋಗ ಹೆಚ್ಚಾಯಿತು. ಅಗರಬತ್ತಿ ಕಡ್ಡಿಗಳನ್ನು ತಯಾರಿಸುವ ಘಟಕಗಳನ್ನು ಆರಂಭಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಗಿರಿಜನರ ಕಲ್ಯಾಣ ಅಭಿವೃದ್ಧಿ ನಿಗಮವು ದಾವಣಗೆರೆಯಲ್ಲಿ ಸ್ಥಾಪನೆಗೊಂಡಿದೆ.

ಬೇಟೆ ಸಾಂಸ್ಕೃತಿಕವಾಗಿ ಉನ್ನತ ಸ್ಥಾನ ಪಡೆದಿದ್ದು ಮಧ್ಯಕಾಲೀನ ಭಾರತದಲ್ಲಿ. ಇದನ್ನು ಅವಲಂಬಿಸಿದ ಬೇಡರಿಗೂ ಸಹಾ ಆಗ ಅಷ್ಟೆ ಗೌರವಿತ್ತು. ರಾಜಪ್ರಭುತ್ವದಲ್ಲಿನ ಬೇಟೆಗಿಂತ ಆಧುನಿಕ ಬೇಟೆಯು ಸರ್ಕಾರ ನಿಯಮದಂತೆ ನಿಷೇಧವಾದರೂ ಜನಮನ್ನಣೆ ಪಡೆದಿದೆ. ಆಚರಣೆಗಳ ಸಂದರ್ಭಗಳಲ್ಲಿ ಕೆಲವು ಪ್ರಾಣಿಗಳನ್ನು ಬೇಟೆಯಾಡುವುದಿದೆ. ಇಂದು ಕುರಿ, ಮೇಕೆ, ಕೋಳಿ, ಮೀನು ಮಾರುಕಟ್ಟೆಗಳಲ್ಲಿ ಸಿಗುವುದರಿಂದ ಬೇಟೆಯಂಥ ಕಠಿಣ ಪರಿಶ್ರಮಕ್ಕೆ ಹೆದರುವವರೇ ಹೆಚ್ಚು. ಹೀಗಿದ್ದರೂ ಕೆಲವು ಭಾಗದ ಬೇಡರು ಮಾಂಸಾಹಾರವನ್ನು ತ್ಯಜಿಸುತ್ತಾ ಬಂದಿರುವ ಉಲ್ಲೇಖಗಳಿವೆ.

ಕರ್ನಾಟಕದಲ್ಲಿ ಬೇಡರ ಜನಸಂಖ್ಯೆ ೬೫ಲಕ್ಷ ಎನ್ನಲಾಗುವುದು. ರಾಜಕೀಯ ಕ್ಷೇತ್ರದಲ್ಲಿ ಇವರ ಪ್ರತಿನಿಧಿಗಳಿದ್ದಾರೆ. ಹೀಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವಿವಿಧ ರಂಗಗಳಲ್ಲಿ ಬೇಡರು ಮುಂದುವರಿಯುತ್ತಿದ್ದಾರೆ. ಸುರಪುರ, ಕನಕಗಿರಿ, ಗುಡೆಕೋಟೆ, ಜರಿಮಲೆ, ಚಿತ್ರದುರ್ಗ, ನಾಯಕನಹಟ್ಟಿ ಮೊದಲಾದ ಬೇಡರ ಪಾಳೆಯಪಟ್ಟಿನ ಪಾಳೆಯಗಾರರಿಗೆ ಮನೆಗಳಿಲ್ಲದಿರುವುದನ್ನು ಗಮನಿಸಿದರೆ ಇಂದಿನ ಬೇಡರ ಪರಿಸ್ಥಿತಿಯು ಅರ್ಥವಾಗುತ್ತದೆ. ಧಾರ್ಮಿಕ ಕ್ಷೇತ್ರದಲ್ಲಿ, ರಾಜನಹಳ್ಳಿ(ಹರಿಹರ) ಮತ್ತು ಬೆಂಗಳೂರಿನ ಸ್ವಾಮಿಗಳು ಜನಾಂಗದ ಮಾರ್ಗದರ್ಶನ ಮಾಡುತ್ತಿರುವುದು ಶ್ಲಾಘನೀಯ. ವಾಲ್ಮೀಕಿ ಜಯಂತಿಗಳು ಪ್ರತಿ ವರ್ಷ ಜರುಗುತ್ತಿದ್ದು, ಬೇಡರನ್ನು ಆಧುನಿಕ ವಾಹಿನಿಗೆ ಕೊಂಡೊಯ್ಯುವುದು ಸ್ವಾಗತಾರ್ಹ.

ಅರಣ್ಯ ಇಲಾಖೆ 'ಕಾಡನ್ನು ಬೆಳೆಸಿ-ನಾಡನ್ನು ಉಳಿಸಿ', 'ವನ್ಯಜೀವಿಗಳನ್ನು ರಕ್ಷಿಸಿರಿ' ಎಂಬ ನಾಮಫಲಕಗಳನ್ನು ರಸ್ತೆ ಬದಿಗಳಲ್ಲಿ ಇಟ್ಟಿರುವುದುಂಟು. ಆ ಮೂಲಕ ಜನಸಾಮಾನ್ಯರಿಗೆ ವನ್ಯಜೀವಿಗಳ ಮಹತ್ವದ ಅರಿವು ಮೂಡಿಸುತ್ತಿರುವುದು ಅಭಿನಂದನೀಯವಾಗಿದೆ.

ಸರಕಾರ ಬೇಡ ಬುಡಕಟ್ಟಿನವರು ಹಟ್ಟಿಗಳಲ್ಲಿರುವುದರಿಂದ ಸಮಸ್ಯೆಗಳನ್ನು ಅರಿತು ವಸತಿ, ನೀರಿನ ಯೋಜನೆ, ಶಾಲೆ, ಆಸ್ಪತ್ರೆಗಳನ್ನು ಸ್ಥಾಪಿಸಬೇಕಾಗಿದೆ. ಕಾಡಿನಲ್ಲಿನ ಬೇಡರಿಗೆ ಬೇಟೆ ರಹಿತ ಜೀವನ ಕಷ್ಟವಾದ್ದರಿಂದ ಅಂಥವರಿಗೆ ಅರಣ್ಯದಲ್ಲಿ ಕೃಷಿಯೋಗ್ಯ ಭೂಮಿ ನೀಡಿದರೆ ಅನುಕೂಲವಾಗುತ್ತದೆನ್ನಬಹುದು. ಮಹಿಳೆಯರು ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆಗಳಿಂದ ಪರಿವರ್ತಿತ ಜೀವನ ಕಂಡುಕೊಳ್ಳುತ್ತಿದ್ದಾರೆ. ಹೀಗೆ ನಾನಾ ರೀತಿಯ ಬದಲಾವಣೆಗಳು ಬೇಡರಲ್ಲಾಗುವುದು ಸಮಯೋಚಿತವಾಗಿದೆ.

* * *

ಅನುಬಂಧ

೧. ಹಂದಿ ಬೇಟೆ ಕುರಿತ ಜನಪದ ಗೀತೆ

೨. ಸ್ಥಳನಾಮ ಸೂಚಿ

೩. ಬೇಡ ಸಮುದಾಯದ ಬೆಡಗುಗಳು

೪. ವಕ್ತೃಗಳ ಪಟ್ಟಿ

೫. ಸಾಂಸ್ಕೃತಿಕ ಪದಕೋಶ

೬. ಗ್ರಂಥಸೂಚಿ

೭. ರೇಖಾಚಿತ್ರಗಳು

೮. ಛಾಯಾಚಿತ್ರಗಳು

೧. ಹಂದಿಬೇಟೆ ಕುರಿತ ಜನಪದಗೀತೆ

ಆಂಗ್ಲರ ಆಳ್ವಿಕೆಯ ಸಂದರ್ಭದಲ್ಲಿ ಬಳ್ಳಾರಿಜಿಲ್ಲೆ ಮದ್ರಾಸ್ ಅಧಿಪತ್ಯದಲ್ಲಿತ್ತು. ಆಗ ಈ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಮ್ಯಾಸಬೇಡರು ವ್ಯಾಪಕವಾಗಿ ನೆಲೆಸಿದ್ದು, ಬೇಟೆಯಲ್ಲಿ ತೊಡಗಿದ ಉಲ್ಲೇಖಗಳಿವೆ. ಇವರು ವರ್ಷಕ್ಕೊಮ್ಮೆ ಹಂದಿಬೇಟೆಗೆ ಹೋಗುವುದು ಹಿಂದಿನಿಂದ ಬಂದ ಪದ್ಧತಿ. ಹೀಗಿರುವಾಗ ೧೯೪೦ರ ಸುಮಾರಿಗೆ ಪೂಜಾರಹಳ್ಳಿ ಮತ್ತು ಹೂಡೇಂ ಗ್ರಾಮಗಳ ಮಧ್ಯದಲ್ಲಿರುವ ಅರಣ್ಯದಲ್ಲಿ ಸುತ್ತೆಲ್ಲ ಗ್ರಾಮಗಳ ಬೇಡರು ಯುಗಾದಿಬೇಟೆಯಲ್ಲಿ ತೊಡಗಿದ್ದ ಬಗ್ಗೆ ಜನಪದ ಕಾವ್ಯ ಬೆಳಕು ಚೆಲ್ಲುತ್ತದೆ.

ಬೇಟೆಗೆಂದು ಬಂದ ಹಲವು ಗ್ರಾಮಗಳ ಪೈಕಿ ಹುರುಳಿಹಾಳು ಗ್ರಾಮದವರನ್ನು ಕಾತ್ರಿಕೆಹಟ್ಟಿಯವರು ಹೆದರಿಸಿದ್ದು, ಹೂಡೇಂನವರಿಗೆ ಬೇಟೆದೊರೆತದ್ದು, ಈ ಸಂಬಂಧ ನಡೆದ ಘರ್ಷಣೆಯಿಂದ ತಾಯಕನಹಳ್ಳಿ, ಕುಮತಿ, ಹೂಡೇಂ ಮತ್ತು ಪೂಜಾರಹಳ್ಳಿ ಯಜಮಾನರು ಪಂಚಾಯ್ತಿ ಮಾಡಿ ವ್ಯಾಜ್ಯಬಡಿಸಿದ್ದು ಜನಪದಗೀತೆಯಲ್ಲಿದೆ. ಹೀಗಾಗಿ ಈ ಎಲ್ಲ ಕೆಟ್ಟ ಘಟನೆಗಳನ್ನು ಸ್ಮರಿಸಿ ಮುಂದೆ ಬೇಟೆ ಸಹವಾಸ ಬೇಡವೆಂದು ಮಕ್ಕಳಿಗೆ ಹೇಳುವ ನೀತಿಯು ಇಲ್ಲಿ ಗಮನಾರ್ಹವಾಗಿದೆ.

ಕೊಲನ ಕೊಲನ್ನ ಕೊಲೆ.........
ಸಿರಿಗಂಧದಿ ಕೊಲನ್ನ ಕೊಲನ್ನ ಕೋಲೆ....

ಇಂದಕೆ ವುಡೆದಾರೂ ಹಂದಿ ಬ್ಯಾಟೆ ಹೊರಟು
ಕಾರೆಕೊಳ್ಳದಳ್ಳ ಇಳುದಾರೊ
ರನ್ನದಿ ಕೊಲನ್ನ ಕೊಲನ ಕೋಲೆ.....
ಸಿರಿಗಂಧದಿ ಕೊಲನ ಕೊಲನ್ನ ಕೋಲೆ.......

ಕಾರೆಕೊಳ್ಳದ ಹಳ್ಳ ಇಳುದಾರು
ಹುರುಳಿಹಾಳರು ಬಾಕು ಬಲ್ಲೆವು ಕಸುಕೊಂಡು
ರನ್ನದಿ ಕೊಲನ ಕೊಲನ್ನ ಕೊಲೆ.....
ಸಿರಿಗಂಧದಿ ಕೊಲನ ಕೊಲನ್ನ ಕೋಲೆ......

ಬಾಕು ಬಲ್ಲೆವು ಕಸುಕೊಂಡು ಮ್ಯಾಸರಹಟ್ಟಿ
ಸಿಕ್ಕಹಳ್ಳಗುಂಟ ಅಳುತಾರೊ
ರನ್ನದಿ ಕೊಲನ ಕೊಲನ್ನ ಕೊಲೆ
ಸಿರಿಗಂಧದಿ ಕೊಲನ ಕೊಲನ್ನ ಕೋಲೆ.......

ಸಿಕ್ಕಹಳ್ಳಗುಂಟ ಅಳುತಾರೆ ಬರಗೂರು ಪಾಪಯ್ಯ
ಎಮ್ಮೆಟ್ಟಿ ವಾಲೆ ಬರುದಾನೊ

ರನ್ನದಿ ಕೊಲನ ಕೊಲನ್ನ ಕೊಲೆ
ಸಿರಿಗಂಧದಿ ಕೊಲನ ಕೊಲನ್ನ ಕೋಲೆ........

ಎಮ್ಮೆಟ್ಟಿ ವಾಲೆ ಬರುದಾನೊ ಬರಗೂರು ಪಾಪಯ್ಯ
ಹುರುಳುಹಾಳಿಗೆ ವಾಲೆ ಬರುದಾನೊ
ರನ್ನದಿ ಕೊಲನ ಕೊಲನ್ನ ಕೊಲೆ........
ಸಿರಿಗಂಧದಿ ಕೊಲನ ಕೊಲನ್ನ ಕೋಲೆ......

ಹುರುಳಿಹಾಳಿಗೆ ವಾಲೆ ಬರುದಾನೊ ಬರುಗೂರು ಪಾಪಯ್ಯ
ಕುಮ್ಮತ್ತಿಗೆ ವಾಲೆ ಬರುದಾನೊ
ರನ್ನದಿ ಕೊಲನ ಕೊಲನ್ನ ಕೊಲೆ....
ಸಿರಿಗಂಧದಿ ಕೊಲನ ಕೊಲನ್ನ ಕೋಲೆ.....

ಹುರುಳಿಹಾಳು ವೆಂಕಪ್ಪುರಾಯ
ಕುಮತಿ ಚೆನ್ನನುಗೌಡ
ಓದು ಬಲ್ಲವರೇ ಒದ್ಕಾರೆ
ರನ್ನದಿ ಕೊಲನ ಕೊಲನ್ನ ಕೊಲೆ
ಸಿರಿಗಂಧದಿ ಕೊಲನ ಕೊಲನ್ನ ಕೋಲೆ.....

ಓದು ಬಲ್ಲವರೆ ಒದ್ಕಾರೆ ವೆಂಕಪ್ಪುರಾಯ
ಮೂವತ್ತು ಮೂರಳ್ಳಿ ಕಟ್ಕಾರೊ
ರನ್ನದಿ ಕೊಲನ ಕೊಲನ್ನ ಕೊಲೆ.....
ಸಿರಿಗಂಧದಿ ಕೊಲನ ಕೊಲನ್ನ ಕೋಲೆ...
ಮೂವತ್ಮೂರಳ್ಳಿ ಇಂಬಲಗೆ ತಗೊಂಡು
ಕಾರೆ ಕೊಳದ ಹಳ್ಳ ಇಳುದಾರೊ
ರನ್ನದಿ ಕೊಲನ ಕೊಲನ್ನ ಕೊಲೆ......,
ಸಿರಿಗಂಧದಿ ಕೊಲನ ಕೊಲನ್ನ ಕೋಲೆ...

ಕಾರೆಕೊಳದಹಳ್ಳ ಇಳುದಾರು ಹುಳಿಯಾಳಾರು
ಕುಂತೇ ಮಸಲತ್ತು ಮಾಡ್ಕಾರೊ
ರನ್ನದಿ ಕೊಲನ ಕೊಲನ್ನ ಕೊಲೆ........
ಸಿರಿಗಂಧದಿ ಕೊಲನ ಕೊಲನ್ನ ಕೋಲೆ........

ಆಚೆಗೆ ಕಾತ್ರಿಕೆಹಟ್ಟಿ ಈಚೆಗೆ ತಾಯಕನಹಳ್ಳಿ

ವಂಚವಿಲ್ಲದ ಹೂಡೆವೊ
ರನ್ನದಿ ಕೊಲನ ಕೊಲನ್ನ ಕೊಲೆ....
ಸಿರಿಗಂಧದಿ ಕೊಲನ ಕೊಲನ್ನ ಕೋಲೆ........

ಕುಮ್ಮಕ್ಕಿಲ್ಲದ ವುಡೆದ ಹುಡುಗರು
ಸೂಳೆಗುಂಡತ್ತಿ ಒಡೆದಾರು ಹುಡೆವಾರು
ರನ್ನದಿ ಕೊಲನ ಕೊಲನ್ನ ಕೊಲೆ........
ಸಿರಿಗಂಧದಿ ಕೊಲನ ಕೊಲನ್ನ ಕೋಲೆ........
ಸೂಳೆಗುಂಡತ್ತಿ ಒಡುದಾರು ವುಡೆದಾರು
ಉಸಿಕ್ಕಾಕೆ ಕರುದಾರೊ
ರನ್ನದಿ ಕೊಲನ ಕೊಲನ್ನ ಕೊಲೆ........
ಸಿರಿಗಂಧದಿ ಕೊಲನ ಕೊಲನ್ನ ಕೋಲೆ........

ಹುಳಿಯಾಳು ವೆಂಕಪುರಾಯ ಕುಮತಿ ಚೆನ್ನಾನಿಗೌಡ
ಐದಾಳು ತಂಬದರೆ ನಿಲ್ಲಾರೊ
ರನ್ನದಿ ಕೊಲನ ಕೊಲನ್ನ ಕೊಲೆ........
ಸಿರಿಗಂಧದಿ ಕೊಲನ ಕೊಲನ್ನ ಕೋಲೆ........

ಐದಾಳು ತರುಬದರೆ ನಿಲ್ಲಾರು ಹುಳಿಯಾಳರು
ಸಿಕ್ಕ ತುಗ್ಗಿಲಿಯ ಬಯಲಾಗೊ
ರನ್ನದಿ ಕೊಲನ ಕೊಲನ್ನ ಕೊಲೆ........
ಸಿರಿಗಂಧದಿ ಕೊಲನ ಕೊಲನ್ನ ಕೋಲೆ.....

ಸುತ್ತುಲು ಶುಕ್ಕುರುವಾರ ಸ್ವಾಮುಲಬಂಡೆ
ಸುತ್ತುಲು ವೇಣುಹಾಕಿ ಕಡುದಾರೊ
ರನ್ನದಿ ಕೊಲನ ಕೊಲನ್ನ ಕೊಲೆ......
ಸಿರಿಗಂಧದಿ ಕೊಲನ ಕೊಲನ್ನ ಕೋಲೆ....

ಸುತ್ತಿರುವೆಣೆ ಹಾಕಿ ಕಡುದಾರೊ ಹುಳಿಯಾಳರು
ಮಲಿಯವ್ವ ನೆಡುಕೆ ನಿಂತಾರೊ
ರನ್ನದಿ ಕೊಲನ ಕೊಲನ್ನ ಕೊಲೆ......
ಸಿರಿಗಂಧದಿ ಕೊಲನ ಕೊಲನ್ನ ಕೋಲೆ.....

ಮಲಿಯವ್ವನ ಬಲಕೆ ನಿಂತಾರು ವುಡೆದಾರು

ಬಲಗೈಯಿಲಿ ಕವಣೆ ಇಟ್ಯಾರೆ
ರನ್ನದಿ ಕೊಲನ ಕೊಲನ್ನ ಕೊಲೆ...
ಸಿರಿಗಂಧದಿ ಕೊಲನ ಕೊಲನ್ನ ಕೋಲೆ....

ಬಲಗೈಲಿ ಕವಣೆ ಹಾಕ್ಯಾರೊ ಚಿನ್ನಯ್ಯ
ತಿರುಗಿದ ರಾಸು ಕೆಡವ್ಯಾರೊ
ರನ್ನದಿ ಕೊಲನ ಕೊಲನ್ನ ಕೊಲೆ....
ಸಿರಿಗಂಧದಿ ಕೊಲನ ಕೊಲನ್ನ ಕೋಲೆ.....

ಹಂದಿ ಬ್ಯಾಟೆಂಬುದು ಇಂದಿಗೆ ಸಾಕೆಂದು
ಮಕ್ಕಳ ಮರಿಗೆಲ್ಲ ಹೇಳ್ಯಾರೊ
ರನ್ನದಿ ಕೊಲನ ಕೊಲನ್ನ ಕೊಲೆ......
ಸಿರಿಗಂಧದಿ ಕೊಲನ ಕೊಲನ್ನ ಕೋಲೆ.....

* * *

೨. ಸ್ಥಳನಾಮ ಸೂಚಿ

(ಕರ್ನಾಟಕದಲ್ಲಿ ಬೇಟೆ, ಪಶು, ಪಕ್ಷಿ, ನಿಸರ್ಗ, ಬೇಡ, ನಾಯಕ, ವಾಲ್ಮೀಕಿ, ತಳವಾರ ಇತ್ಯಾದಿ ಪದಗಳ ಸ್ಥಳನಾಮ ಸೂಚಿ)

ಕರ್ನಾಟಕದಲ್ಲಿ ಬೇಟೆ ಮತ್ತು ಬೇಡರನ್ನು ಕುರಿತಂತೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹಲವಾರು ಸ್ಥಳನಾಮಗಳು ಇಲ್ಲಿ ಕಂಡುಬರುತ್ತವೆ. ಪ್ರತ್ಯಕ್ಷವಾಗಿಯೆಂದರೆ ಜೀವಂತ ಗ್ರಾಮಗಳು. ಪರೋಕ್ಷ ಎಂದರೆ ವಿನಾಶ ಹೊಂದಿದ ಗ್ರಾಮಗಳು. ಇವುಗಳ ಪೈಕಿ ಜನವಸತಿ ಇರುವ ಬಹುತೇಕ ಗ್ರಾಮಗಳನ್ನು ಇಲ್ಲಿ ದಾಖಲಿಸಲಾಗಿದೆ. ಇನ್ನು ಅಸಂಖ್ಯಾತ ಗ್ರಾಮಗಳು ಈ ವ್ಯಾಪ್ತಿಗೆ ಪರೋಕ್ಷವಾಗಿ ಹೋಲುತ್ತಿದ್ದರೂ ಇಲ್ಲಿ ಅನಗತ್ಯವೆಂದು ಭಾವಿಸಿ ಕೈ ಬಿಡಲಾಗಿದೆ.

ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸುಮಾರು ೭೭ಕ್ಕೂ ಹೆಚ್ಚು ಪ್ರತ್ಯೇಕ ಬೇಡರಹಟ್ಟಿಗಳು ಕಾಣಸಿಗುತ್ತವೆ. ಇವು ತೀರಾ ಬುಡಕಟ್ಟಿನ ಛಾಯೆ ಹೊಂದಿರುವುದು ಸ್ಮರಣೀಯ. ಇಂಥವುಗಳನ್ನಲ್ಲದೆ, ರಾಜ್ಯದಲ್ಲಿ ಪ್ರಚಲಿತ ಕರೆಯುವ ಜನಾಂಗಿಕ, ಸಾಂಸ್ಕೃತಿಕ, ಪ್ರಾಕೃತಿಕ ಹೆಸರುಗಳಿರುವ ಹಳ್ಳಿಗಳನ್ನು ನೋಡಬಹುದು. ಅವು ಬೇಟೆ, ಬೇಟೆಆಯುಧ, ಗೋವು, ಎತ್ತು, ಎಮ್ಮೆ, ಹುಲಿ, ಚಿರತೆ, ಕುರಿ, ಬಿಲ್ಲು, ಬಾಣ, ನಾಯಕ, ಬೇಡ, ನಾಗಾತಿ, ಕಿಲಾರಿ, ಬೇಡರವಾಡೆ, ತಳವಾರ, ದಳವಾಯಿ ಮೊದಲಾದ ನಾಮಗಳನ್ನು ಹೊಂದಿ ನಿರ್ಮಿತಗೊಂಡಿವೆ. ಇವುಗಳ ಹಿಂದೆ ಯಾವುದೋ ಒಂದು ಸಾಂಸ್ಕೃತಿಕ ಸಂದರ್ಭ ಅಡಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಹೀಗೆ ನಡೆದ ಘಟನೆಗಳ ಪ್ರತೀಕವೇ ಜೀವಂತ ಹಳ್ಳಿಗಳ ನಿರ್ಮಾಣಕ್ಕೆ ಕಾರಣವಾಗಿಬೇಕು. ಅವುಗಳಲ್ಲಿ ಸಾಮಾನ್ಯವಾಗಿ ಬೇಡ ಮತ್ತು ಬೇಟೆಗೆ ಹೋಲುವ ಸ್ಥಳನಾಮಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಜಿಲ್ಲೆ, ತಾಲೂಕು ಎಂದು ವಿಂಗಡಿಸಿ ಕೊಡಲಾಗಿದೆ.

ಜಿಲ್ಲೆ	ತಾಲೂಕು	ಗ್ರಾಮ-ಪಟ್ಟಣ
ಗುಲ್ಬರ್ಗಾ	ಅಫಜಲಪುರ	ಬಿಟಗೇರಾ
	ಆಳಂದ	ಬಿಟಜೇವರಗಿ
	ಕಲಬುರ್ಗಿ	ಗಂಜನಬೇಡ
	ಚಿತಾಪುರ	ಭಿಡಸೂರು
	ಚಿಂಚೋಳಿ	ಬೇಡಪಲ್ಲಿ
	ಚಿಂಚೋಳಿ	ಶಿಕಾರಮೊಟಕಪಲ್ಲಿ
	ಜೇವರಗಿ	ಬೇಡರಹಾಳು
	ಯಾದಗಿರಿ	ನಾಗನಾಯಕನಹಳ್ಳಿ, ಹುಲಿಬೇಟೆ
	ಸುರಪುರ	ತಳವಾರಗೇರಾ
ರಾಯಚೂರು	ಕುಷ್ಟಗಿ	ಕಿಲ್ಲಾರಹಟ್ಟಿ, ತಳವರಗೇರಾ
	ಕೊಪ್ಪಳ	ಬೇಟಗೇರಿ
	ದೇವದುರ್ಗ	ಬೆಂಡರಗಣೇಕಲ್ಲು
	ಲಿಂಗಸುಗೂರ	ಬೇಡರ ಕಾರ್ಲಕುಂಟೆ
	ಸಿಂಧನೂರು	ಬೆಂಡರಹಟ್ಟಿ

ಬಳ್ಳಾರಿ	ಕೂಡ್ಲಿಗಿ	ಚಿರತಗುಂಡು, ಕುರಿಹಟ್ಟಿ, ಕರ್ನಾರಹಟ್ಟಿ, ಮ್ಯಾಸರಹಟ್ಟಿ
	ಹಡಗಲಿ	ನಾಗತಿಬಸಾಪುರ
	ಬಳ್ಳಾರಿ	ಬೇಡರ ಬೆಳಗಲ್ಲು
ಚಿತ್ರದುರ್ಗ	ಚಳ್ಳಕೆರೆ	ನಾಯಕನಹಟ್ಟಿ, ಬ್ಯಾಡರೆಡ್ಡಿಹಳ್ಳಿ, ಬೈಯನಾಯಕನಹಟ್ಟಿ,ವಲಸೆ, ಸರಜಪ್ಪನಹಳ್ಳಿ, ಉಳ್ಳರ್ತಿಕಾವಲು, ಚೆನ್ನಬಸಯ್ಯನ ಹಟ್ಟಿ, ಪಾಲನಾಯಕನ ಕೋಟೆ
	ಚಿತ್ರದುರ್ಗ	ದಳವಾಯಿಹಳ್ಳಿ, ಬೇಡರಬೊಮ್ಮನಹಳ್ಳಿ, ಬೇಡರಶಿವನಕೆರೆ
	ಮೊಳಕಾಲ್ಮೂರು	ತಳವಾರಹಳ್ಳಿ, ಸೂರಮ್ಮನಹಳ್ಳಿ, ಮುತ್ತಿಗಾರಹಳ್ಳಿ
	ಹಿರಿಯೂರು	ಬ್ಯಾಡರಹಳ್ಳಿ
	ಹೊಸದುರ್ಗ	ದಳವಾಯಿಹಳ್ಳಿ, ಬ್ಯಾಡರಹಳ್ಳಿ
ತುಮಕೂರು	ಕುಣಿಗಲ್	ಜೋಡಿಬ್ಯಾಡಗೆರೆ, ಬ್ಯಾಡರಹಳ್ಳಿ,(ಮೂರು), ಬ್ಯಾಟರಾಯನಪಾಳ್ಯ,ಬ್ಯಾಡರಅಗ್ರಹಾರ, ನಾಯಕನಹಳ್ಳಿ,ನಾಯಕನಕೆರೆ(ಎರಡು), ಬ್ಯಾಡನಕಟ್ಟೆ, ಬ್ಯಾಡದಮಲ್ಲೇನಹಳ್ಳಿ,ಬ್ಯಾಡಿಗೆರೆ, ಮೂಗನಾಯಕನಕೋಟೆ
	ಚಿಕ್ಕನಾಯಕನಹಳ್ಳಿ	ಬ್ಯಾಟೆರಂಗನಹಳ್ಳಿ, ಬ್ಯಾಡರಹಳ್ಳಿ,(ನಾಲ್ಕು)
	ತುರುವೆಕೆರೆ	ಬ್ಯಾಡರಕೊಡಗೀಹಳ್ಳಿ,
	ಪಾವಗಡ	ದಳವಾಯಿಹಳ್ಳಿ, ಬ್ಯಾಡನೂರು
	ಮಧುಗಿರಿ	ಬ್ಯಾಡರಪಾಳ್ಯ, ಬ್ಯಾಡರಹಳ್ಳಿ ಬೇಡತೂರು, ಬೇಡರಹಳ್ಳಿ
ಕೋಲಾರ	ಕೋಲಾರ	ನಾಗನಾಯಕನಹಳ್ಳಿ, ನಾಯಕರಹಳ್ಳಿ
	ಗೌರಿಬಿದನೂರು	ದಾರಿನಾಯಕನಪಾಳ್ಯ,
	ಚಿಕ್ಕಬಳ್ಳಾಪುರ	ಪಾಪಿನಾಯಕನಹಳ್ಳಿ
	ಚಿಂತಾಮಣಿ	ಯೆರ್ರನಾಯಕನಹಳ್ಳಿ, ಪೊಲಿನಾಯಕನಹಳ್ಳಿ
	ಬಂಗಾರಪೇಟೆ	ನಾಯಕರಹಳ್ಳಿ,ಬಾಣಗೆರೆ, ಬ್ಯಾಟರಾಯನಹಳ್ಳಿ(ಎರಡು)
	ಮುಳಬಾಗಿಲು	ಬ್ಯಾಟನೂರು, ಬ್ಯಾಡ್ರಹಳ್ಳಿ

ಬೆಂಗಳೂರು(ದಕ್ಷಿಣ)	ಆನೆಕಲ್	ಬಲ್ಲಾಪುರ
	ಚನ್ನಪಟ್ಟಣ	ಬ್ಯಾಡರಹಳ್ಳಿ,(ನಾಲ್ಕು)
	ದೇವನಹಳ್ಳಿ	ಬ್ಯಾಡರಹಳ್ಳಿ
	ದೊಡ್ಡಬಳ್ಳಾಪುರ	ಬ್ಯಾಡರಹಳ್ಳಿ, ಬ್ಯಾಡರ ಜಕ್ಕಹಳ್ಳಿ,
	ನೆಲಮಂಗಲ	ಬ್ಯಾಡರಹಳ್ಳಿ(ಮೂರು)
		ಬಲ್ಲಿನಕೋಟೆ,
ಬೆಂಗಳೂರು(ಉತ್ತರ)		ಬ್ಯಾಟರಾಯನಪುರ(ಎರಡು), ಬ್ಯಾಡರಹಳ್ಳಿ(ರೈಲ್ವೆ)
	ಮಾಗಡಿ	ಬ್ಯಾಡರಹಳ್ಳಿ,(ಎರಡು)
ಮೈಸೂರು	ಕೆ.ಆರ್.ನಗರ	ಬ್ಯಾಡರಹಳ್ಳಿ (ಎರಡು)
		ಬಟಗನಹಳ್ಳಿ, ಬಡಬಾಳು ಅರಣ್ಯ
	ಗುಂಡ್ಲುಪೇಟೆ	ಬೆಳವಾಡಿ, ಬೆಂಡಗಹಳ್ಳಿ, ಬೆಂಡರವಾಡಿ
	ಚಾಮರಾಜನಗರ	ಬೆಡಗೂಳಿ ರಾಜ್ಯ ಅರಣ್ಯ, ಬೆಂದರವಾಡಿ,
		ಬೇಡಮುದ್ಲು, ಬೇಡರಪುರ
	ಟಿ.ನರಸೀಪುರ	ಬೀಡನಹಳ್ಳಿ
	ನಂಜನಗೂಡು	ಬೀಡನಹಳ್ಳಿ, ಬೆಂಡಗಳ್ಳಿ
	ಪಿರಿಯಾಪಟ್ಟಣ	ಬ್ಯಾಡರಬಳುಗರಿ, ಬಲ್ಲಹಳ್ಳಿ
	ಹುಣಸೂರು	ಬಲ್ಲನಹೊಸಹಳ್ಳಿ
ಮಂಡ್ಯ	ಕೃಷ್ಣರಾಜಪೇಟೆ	ಬಲ್ಲರಾಮಹಳ್ಳಿ, ಬಲ್ಲೇನಹಳ್ಳಿ
	ನಾಗಮಂಗಲ	ಬ್ಯಾಡರಹಳ್ಳಿ, ಬ್ಯಾಡರಹೊಸಹಳ್ಳಿ, ಶಿಕರನಹಳ್ಳಿ,
		ಬೆಡಗೆರೆ(ಬ್ಯಾಡಗೆರೆ)
	ಪಾಂಡವಪುರ	ದೊಡ್ಡಬ್ಯಾಡರಹಳ್ಳಿ
	ಮದ್ದೂರು	ಬ್ಯಾಡರಹಳ್ಳಿ,(ಎರಡು)ಬ್ಯಾಲದಕೆರೆ, ಬ್ಯಾಲದಕೆರೆ
	ಮಳವಳ್ಳಿ	ಬ್ಯಾಡರಹಳ್ಳಿ, ಬೆಂದರವಾಡಿ
	ಮಂಡ್ಯ	ಬಲ್ಲೇನಹಳ್ಳಿ
ಕೊಡಗು	ಮಡಿಕೇರಿ	ಬಾಡಗ
	ವಿರಾಜಪೇಟೆ	ಬೆಡಿಕೇರಿ
	ಸೋಮವಾರಪೇಟೆ	ಬ್ಯಾಡಗೊಟ್ಟ
ಹಾಸನ	ಅರಸೀಕೆರೆ	ಬ್ಯಾಡರಹಳ್ಳಿ
	ಚೆನ್ನರಾಯಪಟ್ಟಣ	ಬ್ಯಾಡರಹಳ್ಳಿ(ಎರಡು)
		ಬೇಡಿಗನಹಳ್ಳಿ

	ಬೇಲೂರು	ಬ್ಯಾಡರ ಸೋಮನಹಳ್ಳಿ
	ಹಾಸನ	ಬ್ಯಾಡರಹಳ್ಳಿ(ನಾಲ್ಕು)
	ಹೊಳೇನರಸೀಪುರ	ಬ್ಯಾಡರಹಳ್ಳಿ
ಚಿಕ್ಕಮಗಳೂರು	ಕಡೂರು	ಬ್ಯಾಡರಹಳ್ಳಿ, ಬಲ್ಲಗನೂರು, ಬಲುವಲದಕಾವಲು
	ಅಜ್ಜಂಪುರ	ಅಣ್ಣೆಕಾವಲು
	ಮೂಡಿಗೆರೆ	ಬಾರಿಮಲೆ
ಶಿವಮೊಗ್ಗ	ಶಿವಮೊಗ್ಗ	ಬ್ಯಾಡರಹೊಸಹಳ್ಳಿ, ಬಲ್ವಡೇರಕೊಪ್ಪ
	ಸಾಗರ	ಬೇಡರಕೊಪ್ಪ(ಬ್ಯಾಡರಕೊಪ್ಪ)
ಉತ್ತರಕನ್ನಡ	ಅಂಕೋಲಾ	ಬೆರ್ಡೆ
	ಮುಂಡಗೋಡ	ಭೆಡಸಗಾಂವ
	ಸಿದ್ದಾಪುರ	ಕಿಲಾರ, ಬೆಡಕಣಿ
	ಸಿರ್ಸಿ	ಬೆಟಕೊಪ್ಪ,
	ಸೂಪಾ	ಬೆಡಸಗದ್ದೆ, ಬೊರೆಗಲಿ,ಬೋರಿ
	ಹಳಿಯಾಳ	ಬೇಡರಶಿಗೂರು
ಧಾರವಾಡ	ಗದಗ	ಬೆಟಗೇರಿ
	ನವಲಗುಂದ	ನಾಯಕನೂರು, ಬಲ್ಲರವಾಡ
	ಸವಣೂರು	ನಾಯಕರೂರು
	ಬ್ಯಾಡಗಿ	ಬ್ಯಾಡಗಿ
ದಾವಣಗೆರೆ	ಜಗಳೂರು	ಬ್ಯಾಟಗಾರನಹಳ್ಳಿ, ಬೇಡರ ಬೆನಕನಹಳ್ಳಿ, ತಳವಾರ ಕರಿಯಪ್ಪನಹಳ್ಳಿ, ಪಾಲನಾಯಕನಕೋಟೆ, ಕಾಮಗೇತನಹಳ್ಳಿ, ಕೆಂಬಮ್ಮನಾಗತಿಹಳ್ಳಿ, ಮದಿಕೇರನಹಳ್ಳಿ
ಬೆಳಗಾವಿ	ಖಾನಪುರ	ತಳವಾರಕೊಪ್ಪ
	ಗೋಕಾಕ	ಬ್ಯಾಡರಹಟ್ಟಿ
	ಚಿಕ್ಕೋಡಿ	ಬೆಡ್ಕಿಹಾಳ
ಬಿಜಾಪುರ	ಬಾದಾಮಿ	ಬೇಡರ ಬೂದಿಹಾಳ,
	ಮುಧೋಳ	ಬ್ಯಾಡರ ಅರಳಿಕಟ್ಟೆ

೩. ಬೇಡ ಸಮುದಾಯದ ಬೆಡಗುಗಳು

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಬೇಡರನ್ನು ಕಿರಾತ, ವ್ಯಾದ, ನಿಷಾದ, ಶಬರ, ಪುಳಿಂದ ಮೊದಲಾದ ಜಾತಿಸೂಚಕ ಪರ್ಯಾಯ ಪದಗಳಿಂದ ಕರೆದಿದ್ದಾರೆ. ಇಂದು ಬೇರೆ ಬೇರೆ ಹೆಸರುಗಳಿಂದ ಕರೆದುಕೊಂಡಿರುವುದನ್ನು ನೋಡಬಹುದು. ಭಾರತದಲ್ಲಿ ಒಟ್ಟು ೪೬೧ ಪರಿಶಿಷ್ಟ ಬುಡಕಟ್ಟುಗಳು ಕಂಡುಬರುತ್ತವೆ. ಈ ಬುಡಕಟ್ಟುಗಳಲ್ಲೊಂದಾದ ಬೇಡರ ಬಗ್ಗೆ ೧೯೭೬ರ ನಂತರ ಕರ್ನಾಟಕದಲ್ಲಿ ಮಾತ್ರ ಹದಿನೆಂಟು ಪರ್ಯಾಯ ಹೆಸರುಗಳಿವೆ.

ಪ್ರಸ್ತುತ ಬೇಡ ಅಥವಾ ನಾಯಕರು ತಮ್ಮ ಕುಲ-ಗೋತ್ರಗಳನ್ನು ಮುಂದುವರೆಸಿಕೊಂಡು ಬಂದಿರುವುದು ಮೆಚ್ಚತಕ್ಕ ಸಂಗತಿ. ಊರುಬೇಡರು ಮತ್ತು ಮ್ಯಾಸಬೇಡರು ಎಂದು ಎರಡು ಭಾಗಗಳಾಗಿ ವರ್ಗೀಕರಿಸಿ ನೋಡಿದಾಗ ಪ್ರಕೃತಿ, ಪ್ರಾಣಿ, ಬಿರುದು ಇತ್ಯಾದಿ ಸಂಕೇತಗಳನ್ನು ಬೆಡಗಿನ ನಾಮವಾಗಿ ಎಂದು ಪರಿಗಣಿಸಲಾಗಿದೆ. ಹೀಗಾಗಿ ಇಲ್ಲಿ ಕಂಡುಬರುವ ಬೆಡಗುಗಳು ಸಾಧನೆ, ಯುದ್ಧ, ಮರಣ, ಗೋಪಾಲಕ, ಗುಣ, ಶೀಲ, ಸೂರ್ಯ, ಚಂದ್ರ ಮೊದಲಾದ ಹೆಸರುಗಳನ್ನಿಟ್ಟುಕೊಂಡಿದ್ದು, ಇವು ಕನ್ನಡ - ತೆಲುಗು ಭಾಷೆಯ ಮಿಶ್ರಿತ ಬೆಡಗುಗಳಾಗಿವೆ. ವಿಶೇಷವಾಗಿ ಮ್ಯಾಸಬೇಡರಲ್ಲಿ ಮಾತ್ರ ಅಚ್ಚ ತೆಲುಗು ಭಾಷೆಯ ಬೆಡಗುಗಳಿವೆ. ಅವು ಗ್ರಾಮದೇವತೆ, ಪ್ರಾಣಿ, ಪಕ್ಷಿ, ದೈಹಿಕ ಲಕ್ಷಣ, ಬಣ್ಣ, ಸ್ವರೂಪ, ಹೂವು, ಹೀಗೆ ಸಾಂಸ್ಕೃತಿಕ ಪದಗಳನ್ನು ಬೆಡಗುಗಳಿಗೆ ಅಳವಡಿಸಿಕೊಂಡಿದ್ದಾರೆ. ಅನುಕೂಲಕ್ಕಾಗಿ ಇಲ್ಲಿ ಊರುಬೇಡರ ಮತ್ತು ಮ್ಯಾಸಬೇಡರ ಬೆಡಗುಗಳ ಪಟ್ಟಿ ಮಾಡಲಾಗಿದೆ. ಊರುಬೇಡರು ನಿರ್ದಿಷ್ಟವಾಗಿ ಇಂಥ ದೇವರಿಗೆಂದು ನಡೆದುಕೊಳ್ಳುವುದಿಲ್ಲ. ಮ್ಯಾಸಬೇಡರಲ್ಲಿ ೧೦೮ ಬೆಡುಗುಗಳಿದ್ದರೂ ಕರಾರುವಕ್ಕಾಗಿ ಎಷ್ಟೊಂಬುದು ತಿಳಿದುಬಂದಿಲ್ಲ. ಹೀಗಾಗಿ ಅವರ ಬೆಡಗು, ದೇವರುಗಳನ್ನು ಸಂಕ್ಷಿಪ್ತವಾಗಿ ಕೊಡಲಾಗಿದೆ.

೧. **ಊರುನಾಯಕರ ಬೆಡಗುಗಳು** : ಇಲ್ಲಿನ ೨೨೪ ಬೆಡಗುಗಳನ್ನು ಬಳ್ಳಾರಿಯ ದಳವಾಯಿ ವೀರಣ್ಣ, ಬೆಳಗಾವಿಯ ಶಿ.ಗು.ಕುಸಗಲ್ಲು, ಆರ್.ಬಿ. ಕಿತ್ತೂರ ಅವರುಗಳು ಸಂಗ್ರಹಿಸಿಕೊಟ್ಟಿರುವರು. ಜೊತೆಗೆ ಫೆಬ್ರವರಿ ೧೯೯೮ರ ವಾಲ್ಮೀಕಿವಾಣಿ ಮತ್ತು ಡಿಸೆಂಬರ ೧೯೯೯ರ ವಾಲ್ಮೀಕಿಬಂಧು ಪತ್ರಿಕೆಗಳಲ್ಲಿ ಪ್ರಕಟವಾದ ಬೆಡಗುಗಳನ್ನು ಸಂಗ್ರಹಿಸಲಾಗಿದೆ.

ಗುಜ್ಜಲರ್	ಗೋಸಲರ್	ಮೀನಗಲರ್
ಬಿಲ್ಲರ್	ಗಬ್ಬೆಲರ್‌ಮಲ್ಲರ್	ಕುತೀರ್
ಮುಮ್ಮುಡಲವರ್	ಬಡಕಲರಕಳಿಸಲರ	ರೆಂಗಾಲೇರ
ಬೆಲ್ಲೋಲರ	ಕೆಂಗಲರ	ಜನಗಲರ ಮುತೀರ
ಪಿಂಗಾರ	ಮಣಿಗಲರ	ಮಳಗಲ್ಲರ
ಈರಗಾರ	ಚಂಪಲರ	ಮನಪೊಲ್ಲಾರ್
ಮುದುಗೊಂಡ್ಲರ್	ಗೊಬ್ಬಲರ್	ಮಸಗಲ್ಲರ
ಪೋತಲರ	ಪೋಲರ	ಪುತೀರ
ಪೊತ್ತುಗಳೇರ	ಪರಮುಖರ	ಬರಿಪಿಲರ್
ಮನ್ನಲರ್	ಮೋಗಲ್ಲರ್	ಭಟ್ಟರ್
ಬೋಗಿಲರ	ಜಾಡಲರ	ತಳಗಲ್ಲ
ತರಮುಖರ	ಜಂಗಲರ	ಬೆಂಚಲರ

ಮಲ್ಲಗ್ಗರ
ಗುಡಗ್ಗೇರ
ಹುಲೇರ
ನಲ್ಲೆತೀರ
ಯುದ್ಧಲವರ
ಕರೇಸಲ್ಲರ್
ಬಾಚಕಲ್ಲೇರ
ಮುತಶ್ಕರ್
ಸಾಕೆಲರು
ಮದಲೋರು
ಆನ್ನಾವರು
ಅಂಕೆಲರು
ಜಂಪಲರ
ನೆಲ್ಲಲ್ಲಾರು
ಹೊನ್ನಬಂಟ್ಲವರ
ಬೆನಕನವರರ್ಕುತೀಕ
ಕಳಘದವರು
ಮುಚ್ಚಳವರು
ಇಮ್ಮುಳ್ಳು
ಅಜ್ಜಡ್ಲೋರು
ಅಲಕತ್ತು
ಅಚರ್ಲವರು
ಉರಿಶಿಂಗರು
ನುಮಲವರುಎರ್ರ(ಕ್ರ)
ಏಳುಬೆಟ್ಟದವರು
ಕನ್ನಲೋರು
ಕಂಕಾಳಸಹಕೇತರು
ಕಾಮಲವರು
ಕಸೂರಿಯವರು
ಕವಲವರು
ಕವಾರಿಕಾರರು
ಕುರ್ಲೇರು

ಕೊಣೆಗಲ್
ಕುರ್ಗಲೇರ
ತುರುಮನೇರ
ರಂಬೆಲವರ
ದೊರಿಲವರ
ದೇವಕಲ್ಲರ್
ಕಬ್ಬೇಲರ
ಪಡಲಿವಲರ್
ಮಲೆಯರು
ಪೂಲೋರು
ಗೊರಲಾರ
ಮಿನುಗೋತ್ರ
ಮಳಲೇರು
ಕಲ್ಲಲ್ಲೇರ
ಹೊನ್ನಗೋಸಲವರ
ಲಕ್ಷ್ಮೀಲೇರು
ಆಗಸ್ತ್ಯ
ಅಕ್ಕಲೂರು,
ಅಂದರದವರು
ಅಜ್ಜಪಲ್ಲೋರು
ಬುಟಕಲವರು
ಆವುಲೋರ್ಲು
ಎದ್ದಲೋರು
ಮ್ಯೋಲವರು
ಓತಲವರು
ಕಾಂಗೆತ್ತಲರು
ಕಲ್ನಕ್ಟರು
ಕಿರಿಯಮುಚ್ಚಲವರು
ಕುಂಚೇಲವರು
ಕತ್ತಿಯವರು
ಕಿರಾತಕರು
ಕುರಂಗ

ಸಂತಾಲೇರ
ಬಂಡೆಬಲದವರ
ಮರ್ತೇರ
ದ್ವಿರಕಲ್ಲೇರ
ಸೊಳ್ಳೇರ್
ಗವಲೇರ್
ಜಕಲರ ತಿರಮುಖರ್
ಮಂದಲೋರು
ಮುತ್ತೋರು
ನಿಚ್ಚಮಲೆಯರು
ಗೌಲರು
ಅನಾಲರ
ತಟ್ಟೆಲರ
ಪೆರುಮಕ್ಕಳೇರ್
ಅರಕೋರು
ಬಂಡಬಲಸ್ನವರ
ಯಮಗಲೂರ್
ಬುಟಕಲು
ಅಜ್ಜಮುತ್ತಿಯವರು
ಅನಂದರು
ಅಂಗು ಮೋಲರು
ಈಟಿಯವರು
ಎಪ್ಪೋತಲೋರು
ಎಕ್ಕೇಲೋರು
ಓಬನಾಯಕರು
ಕಂಕರು
ಕಾಮಕೇತಲವರು
ಕಿಲ್ಜಿಪರು
ಕಲ್ಯಾನದವರು
ಕರಾರಿಯವರು
ಕಿನ್ನರರು
ಸಹಕೇತರು

ಕುಂತಳದವರು	ಕಾಡುಚರರು	ಕುಂಬಳದವರು
ಕುರಿಯವರು	ಕುಕ್ಕಲವರು	ಕಾಳಿದವರು
ಕಮಲದವರು	ಕುರಂಜರು	ಕುಳಿಂದರು
ಕೋರೆಣ್ಣವರು	ಕುಂಟ್ಲವರು	ಕೆಂಗಪುಟ್ಟಲವರು
ಕಾಶೀಗೋತ್ರ	ಕಬ್ಬಿಲವರು	ಕೊಳಾಯಿಲವರು
ಕುರಸಾಲವರು	ಕಂದಿರ್ಲವರು	ಕೆಬ್ಬೋಳ್ಳು
ಗಂಗನಾಥರು	ಗಗ್ಗಡಲವರು	ಗಂಗೋನಾಯ್ಕ
ಪೆನ್ನಯ್ಯಲವರು	ಗಜ್ಜಲವರು	ಗಾಕಣ್ಣವರು
ಗುಮ್ಮಟದವರು	ಗೂಜಲವರು	ಗಡ್ಡದವರು
ಗೆದ್ದಲವರು	ಗೋಲೇರು	ಗೋಪಾಲಪಾತರು
ಗೋಪನವರು	ಗೊಲ್ಲಾಳರು	ಗೋವಿನವರು
ಗೌಂಪೋರು	ಗೆಜ್ಜೆಡರು	ಗುಲ್ಲಿನವರು
ಗುರುಲೇಲಿವರು	ಚಕ್ರ	ಚಿಪ್ಪಲವರು
ಚಿನ್ನ ಮಾಗೇಲವರು	ಚಿನಗಾಟ ನಾಯಕರು	ಚಿನಮದಿಲವರು
ಚಿನ್ನಗಟ್ಲೋರು	ಚೀಮಲವರು	ಚೆಡುಬೋತುಲವರು
ಚಿಚ್ಚಟ್ಲವರು	ಜಂತಲವರು	ಜನುಕ್ತಿಯವರು
ಜುಕ್ಕಲವರು	ಜಂಕೇಲವರು	ಡಾಕೇಲವರು
ತನುಲಮತ್ತೇರು	ತಂಪುಲೋರು	ತಪುಲವರು
ತೇರುಸಾಮಂತರು	ತೊಡಲವರು	ನಲ್ಲಬೋತುಲವರು
ನವಣೆಯವರು	ನಾಮಾಲರು	ಕರುವಂತದವರು
ನಾಗರಸರು	ನಾರಪೋರು	ನಲ್ಲೆಲವರು
ನಲಕೇತಲವರು	ನಾಯಿಗುಜ್ಜಲವರು	ನಾದೆರ್ಲವರು
ನೀರಕಾಶೀ	ನೀಲಮೋರು	ಪುಟ್ಟ ಮುಲವರು
ಪಾಲೋರು	ಪಲ್ಲೆಪರಲವರು	ನಗರಾಂತಕರು
ಪರಮಶಿವಲವರು	ಪಾನುಮಲವರು	ಪಗಲವರು
ಪಾಲಮುನಿಗೋತ್ರದವರು	ಪುಟ್ಟ ಪೂಲವರು	ಪಾಮಡಲವರು
ಪಾವಕಲವರು	ಪಾಮುಲವರು	ಪಿತಲವರು
ಪೆಯ್ಯಲವರು	ಪೂಲರು	ಪುಟ್ಟಲವರು
ಪೂಲಮಾಲವರು	ಪೆದ್ದಮದಿಲವರು	ಪೆದ್ದಳ್ಳ ನಾಯಕರು
ಪೆದ್ದಮುಕ್ಕಲವರು	ಪೆಗಡ	ಬೊಂತುಲವರು
ಪೆದ್ದಮಾಗಲವರು	ಪೋತಗೂಳ್ಳೇರು	ಪಲೆವರು
ಪದ್ಮಕಾಶೀಲವರು	ಪದ್ಮಕಾಂತರು	ಪಾಲವುರು

ಬಳ್ಳೆಲವರು
ಬಂದೇಲವರು
ಬಾಲನಾಯಕರು
ಬಾಗಮಿಲವರು
ಪಂಚಕದವರು
ಬುಟ್ಟ ಕಲವರು
ಬೋಪಿ ನಾಯಕರು
ಬುಟಗಲವರು
ಬಡಸಲವರು
ಮಂದಲವರು
ಮರಲೆಯವರು
ಮಡಿಪತಿಯವರು
ಮಾದೇಲಿಂಗ
ಮಾರೆಪ್ಪ
ಮಂಚಿಕಲ್ಲು ಬುಟುಕರು
ಮುಚ್ಚಲವರು
ಮುದಿಗಂಡ್ಲರು
ಮೇಕಲವರು
ಪುವ್ವಲವರು
ಮಾರ್ಲೆಯವರು
ಯಮಡಲವರು
ಯರಕಾಟ ನಾಯಕರು
ಯಂಡಿಲವರು
ರಂಗಾಶ್ಕರು
ರಾಘವ
ರಾಮಾಂಕನಾಥರು
ರಾಯಿಗುಜ್ಜಲವರು
ವಂಕಲವರು
ಶೀಲದವರು
ಬುಟುಕರು
ಸಮ್ಮಲವರು
ಸಾಬ್ದಿಕರು

ಬಟೀ ಜನಾಥರು
ಬಸವನವರು
ಬಾರಿ
ಬಾಚನವರು
ಬಲ್ಲನ
ಬುಲ್ಲಡಲವರು
ಬೊಮ್ಮರಾಜ
ಬೊಮ್ಮಾದೇವಡ್ಲ ನಾಯಕರು
ಬಂಟನವರು
ಮಂದೋರು
ಮಡಿತೋಡು
ಮಳ್ಳೇಲವರು
ಬುಟುಕರು
ಬುಟುಕರು
ಮಾಲಿಗಲವರು
ಮಂಡ್ರಿಗವರು
ಮುಗಲವರು
ಮೊಂಡ್ಲವರು
ಮಿಲೀಗಲೋರು
ಮೋದರ್ಲವರು
ಯಾಕಲವರು
ಯರಬಾಲನಾಯಕರು
ರಾಜಪುತ್ರರು
ರಾಜ ಬುಟ ಕಲವರು
ಬುಟುಕಲವರು
ರಾಜೀಲವರು
ರೊಮ್ಮನವರು
ವಾಲ್ಮೀಕಿ
ಶಿನಮಾಗುಲವರು
ಕೆಟ್ಟಲವರು
ಸಡಕೇತುಲವರು
ಸಾತ್ರಲವರು

ಬಂಟ್ಲವರು
ಬಂಟ್ರಮುಲವರು
ಮುಂಡಲೀಕಲವರು
ಭೀಷ್ಮ
ಸುಳ್ವೆರು
ಬೊಗೋಳ್ಳ
ಬುಟಕಲವರು
ಬೋಗಿಮೊರು
ಮಲ್ಲೇಲವರು
ಮುಂಡ್ಲೆಯವರು
ಮಂಡಲವರು
ಮಲಿಗೇಲವರು
ಮಾಗೇಲವರು
ಮಪಿಲರು
ಮಿಳ್ಳೇಲವರು
ಮುಮ್ಮಗಿಳ್ಳು
ಮುದುಗಂಟಲವರು
ಮಲ್ಲೋರು
ಮಂಪಾಲರು
ಯಲಮನವರು
ಪೂವಮೂಡಲವರು
ಯಿಮ್ಮಾಲವರು
ಯಿಡ ತರಪವರು
ರಾಜಧಾನಿಯವರು
ಪುರುಳಿಯವರು
ರಾಣಿವೇಯವರು
ಲಿಂಗದವರು
ವೆನ್ನೆಲವರು
ಶಿದ್ದಕಲ್ಲು
ಕಂಕುಲವರು
ಸಾರ್ಜರು
ಸಾಗರ ಚಕ್ರವರ್ತಿಗಳು

ಸಮುದ್ರವರು	ಸಿಲ್ಲಾಲದವರು	ಸಿನಮದಿಲವರು
ಸೆಲ್ಲೆದವರು,	ಸೆಟ್ಟಿದವರು	ಸೂರ್ಯವಂಶದವರು
ಸ್ಯಾವಂತಲವರು	ಪರಿಬಲ್ಲಾಳರು	ಪಿರಿಯ ಮಿನಗಲವರು
ಪೊನ್ನಮೀನಿಗಲವರು	ಎರ್ರಿಸ್ವಾಮಿ	ಪಡ್ಡಲವರು
ಮರುವಲೋರು	ಮೂಡಲವರು	ರಾಗೋಜಿಯವರು
ಮಸಿ ಬಟ್ಟಲವರು	ಸೀಮಲವರು	ಪುರುಳಿಯವರು

೨. ಮ್ಯಾಸನಾಯಕರ ಬೆಡಗು ಮತ್ತು ದೇವರುಗಳು

ಮ್ಯಾಸಬೇಡರ ಬೆಡಗು ಮತ್ತು ದೇವರುಗಳ ಬಗ್ಗೆ ಕ್ಷೇತ್ರಕಾರ್ಯ ಕೈಗೊಂಡಾಗ ಎಸ್.ಬಿ. ತಿಪ್ಪನಾಯಕ, ಡಿ. ಬೋರಪ್ಪ, ಆರ್.ವೈ.ನಾಯಕ, ಎನ್.ಪಿ. ನಾಗೇಂದ್ರ ನಾಯಕ, ಬಂಗಾರಯ್ಯ, ಪೂಜಾರಿ ಪಾಲಯ್ಯ ಮೊದಲಾದವರು ಕೊಟ್ಟ ಮಾಹಿತಿಯ ಆಧಾರದ ಮೇಲೆ ಈ ಬೆಡಗುಗಳನ್ನು ಸಂಗ್ರಹಿಸಲಾಗಿದೆ.

ಮಂದಲಗೋತ್ರ	ಮಾರಮ್ಮನ ಬುಟ್ಟುಗಲು	ಬೊಮ್ಮದೇವರ ಬುಟ್ಟುಗಲು	
ಸಿದ್ದಿಹಳ್ಳಿ ಬುಟ್ಟುಗಲು	ಮಾದೇಲಿಂಗೇಶ್ವರಬುಟ್ಟಗಲು	ಸಕ್ಕ ಬಾಪಲವಾಡು	
ಸೊಂಟನಾಡು	ಸಿಲುಕನವಾಡು	ಎನುಮಲಬ್ಬನ ವಾಡು	
ನಡ್ಡಿಬೊಮ್ಮತ್ತಿ ನಾಡು	ಎಂಜ ಮುತ್ತಿವಾಡು	ನಲ್ಲಿವಾಡು	**ಓಬಳದೇವರು**
ಕೊಡಗನೋರು	ಮಳೇಲರು	ರಣಗಬ್ಬ ಮುತ್ತಿನಾಡು	
ಓದುಮೇಳಮುತ್ತಿನಾಡು	ಸೊಟ್ಟಮುತ್ತಿವಾಡು	ನಿಜಮುತ್ತಿವಾಕು	
ಗಿಡ್ಡ ಮುತ್ತಿವಾಡು	ನಾಗಮುತ್ತಿವಾಡು	ಪಾಮುಡಲಾರು	**ಗುರುನಾಥ ದೇವರು**
ಪಾಲಮುತ್ತಿವಾಡು	ಮಾಸಿಲುವಾಡು	ಮಂಗಪೋಟ ಮಾಸಿಲು	
ಕುಂಟಮಾಸಿಲು	ವರವು ಮಾಸಿಲು	ಕೊತ್ತಕೋಟ ಮಾಸಿಲು	
ಮಲ್ಲೂರು ಮಾಸಿಲು	ಬೊಟ್ಟ ಮಾಸಿಲು	ಬೊಮ್ಮತ್ತಿವಾರು	
ವರಗನಬೊಮ್ಮತ್ತಿ	ನಡ್ಡಿ ಬೊಮ್ಮತ್ತಿ	ಗಿಡ್ಡ ಮುತ್ತಿವಾಡು	
ನಾಗಮುತ್ತಿವಾಡು	ಪಾಲಮುತ್ತಿವಾಡು	ಮಾಸಿಲುವಾರು	
ಮಂಗಪೋಟಮಾಸಿಲು	ಕುಂಟಮಾಸಿಲು		**ಓಬಳ ದೇವರು**
ಮಲ್ಲೂರು ಮಾಸಿಲು	ವರಗನ ಬೊಮ್ಮತ್ತಿ	ಸೊಟ್ಟಬೊಮ್ಮತ್ತಿ	
ವಟ್ಟೆ ಬೊಮ್ಮತ್ತಿ			**ಬೊಮ್ಮದೇವರು**
ಮಲ್ಲಿನಾಯಕನೋರು	ಯರಗೊಡ್ಲು ವಾಡು	ಕೌಟಬ್ಬನವಾಡು	
ನಲ್ಲಬಾಳಸಿ ವಾಡು	ನೆಡಗಿಲ ವಾಡು	ವರಗ ನೋಡು	

ಚಿನ್ನಮುತ್ತಿವಾಡು	ಜೊಗನೋಡು	ಗಜ್ಜಿಗನೋರು	
ಬದ್ದನೋರು	ಬುಡ್ಡುಬೋರನವೋರು	ಕಗ್ಗಲ್ಲವಾರು	
ಮೊಲ್ಲೂರುವಾರು	ಅಲಿಕೋರು		ಓಬಳ ದೇವರು
ನಲ್ಲಬ್ಬನೋರು	ಯರಬೊಮ್ಮನವಾರು	ಪರಮೇಸಿನವಾರು(ಚಿತ್ರದೇವರು)	
ಬದ್ದನೋಡು	ಕೊಕ್ಕನೋಡು	ಕೊಡಗನೋಡು	
ನಲ್ಲ ಬಾಮುಡ್ಲು	ಮನ್ನುಲೋರು	ದೊಣಮಂಡ್ಲು	ರಾಜಲುದೇವರು
ಬುಲ್ಲಡಲೋರು			ಬಂಗಾರದೇವರು
ನಲ್ಲಬಾಪಲಗೋತ್ರ		ಗುಡ್ಡಮೆದ್ದುಲವಾರು	ದಡ್ಡಿಸೂರನಾಯಕ
ಮಂದಲೋರು	ಎನಮುಲೋರು	ಬುಡ್ಡಬೋರನೋರು	ಗಾದರಿ
ಬೋಡಿ ಬುಲ್ಲಡಲೋರು			ಬಂಗಾರು
ಮುಚ್ಚು ಬುಲ್ಲಡಲವರು	ಯರ್ರಳ್ಳನಾಯಕ ನೋರು	ದಾಸಳ್ಳ ನಾಯಕನೋರು	
ಗಿಡ್ಡ ಮುತ್ತಿನೋರು	ನಾಗಮುತ್ತಿವಾರು	ಪಾಲಮುತ್ತಿವಾರು	
ಮಾರಮ್ಮ ಬುಟ್ಟುಗಲು	ಬೊಮ್ಮದೇವರ ಬುಟ್ಟುಗಲು	ಸಿದ್ದಪಲ್ಲಿ ಬುಟ್ಟುಗಲು	ಬೊಮ್ಮ ಮತ್ತು ಮಾರಮ್ಮ
ಮಾದೇಲಿಂಗಪ್ಪ ಬುಟ್ಟುಗಲು			ಮಾದೇಲಿಂಗ ದೇವರು
ಸೂರ್ಯಕಾಮ	ಬುಡ್ಡೇಪಾವಲು	ಬಲ್ಲನೋರು	
ರ್‍ಯಾಬಲೋರು	ದೊಡ್ಡಮುತ್ತಿನೋರು	ಬೋಸೇನೋರು	ಬೋಸೇದೇವರು
ಮೀಸಲೋರು			ಮಾರಮ್ಮ
ಬೋರೇ ಪಾಡ್ಲು ವಾರು	ಯರಪಾಮಡಲೋರು/ಜರಕನವಾಡು		ಮುತ್ತಿಗಾರ ಮಾರಮ್ಮ
ದಡ್ಡಿಸೂರನಾಯಕನೋರು	ಮೊಲಕೀತಿ ಎದ್ದುಲವಾರು	ನಲದಮ್ಮನಾಯಕನೋರು	
ನಲ್ಲಬಾಪನೋರು	ಪೆದ್ದಪಲ್ಲಿ ಮಾಸಿಲುವಾರು		ದಡ್ಡಿಸೂರನಾಯಕ
ದಾಸವಡೆಯರು	ಅಚ್ಚವಲ್ಲಿ ವಡೆಯರು	ಗೂಳಿಮುಗೋತ್ರ	
ಕೌಲೋರು			ರಾಜಲದೇವರು
ಸಿದ್ದಪಲ್ಲಿದಿದ್ದಲೋರು	ಪಾಮಡಲೋರು		ಗುರುನಾಥ
ಬರುದು ಪಾಮಡಲು	ರಸಸಿದ್ದ ಪಾಮಡಲು	ತಾತಾಚಾರಿಪಾಮುಡ್ತಾರು	
ಗುರುಪಾಮಡಲು	ಯರಪಾಮಡಲು	ನಲ ಪಾಮಡಲು	
ಜರಕು ಪಾಮಡಲು	ದ್ಯಾವುಡ್ಲವಾರು		ಓಬಳದೇವರು
ಕುಂದರ್ಲವಾರು	ಮಲಕೋಟ ಎದ್ದುಲವಾರು	ಗುಡ್ಡಮು ಎದ್ದುಲವಾರು	
ಕ್ಯಾಸಾಪುರದ-ಕ್ಯಾಸನೋರು	ಬುಡ್ಡಬೋರನೋರು	ಬೋಡಿ ದಾಸರಿ	
ಕಾಮಗೇತಿಲೋರು	ಕುಕ್ಕನೋರು		ಚಿತ್ರಲಿಂಗದೇವರು

ಬೆಲ್ಲಲೋರು	ಬೋಡೇಪಡ್ಲುವಾರು		ಪದಿ
ಪೂವಲೋರು			ಪೆನ್ನೊಬಳ
ನನ್ನುಲೋರು			ಬೊಮ್ಮ
ದಡ್ಡಿಮುತ್ತಿವಾರು			ದಡ್ಡಿಮುತ್ತಿ
ಅಬ್ಬರಾ ಜುಲೋರು	ಅಬ್ಬನೋರು	ಕ್ಯಾತಪುಲುವಾರು	ಗಾದರಿ
ಮೊನ್ನುಲುವಾರು	ಪಾಲಬ್ಬನೋರು		ರಾಜಲ
ದ್ಯಾವರಗೊರ್ಲುವಾರು	ಕರಿನಾರು	ಗಾಮಬ್ಬನೋರು	ಕಂಪಳ
ಪೊಟ್ಟಪೊಲ್ಲಲೋರು	ಪುವ್ವಲೋರು		ಬೋರೇ
ಪೆದ್ದನಾರು	ಬೊಗ್ಗಲೋರು	ಪೆದ್ದಳ್ಳನಾಯಕ ನೋರು	
ಗೊಡಗುದಾಸರು	ಚೆನ್ನಗೋರು	ರಂಗಸೇಟ	ಬಂಗಾರು
ಬಲ್ಲನೋಡು			ಕಂಪಳ
ಗೂನೋಡು			
ಕಾಮನೋಡು	ಕರಿನೋಡು	ಗೋಸೇಲಡು	
ಪಡ್ಲರು	ಯರಮಂಚಜ್ಜನೋಡು	ದಡ್ಡಿದಾಸರಿ, ಕುಂಟ್ರೇಲು	
ಬೋಸುರ್ಲು	ಮನ್ನುಲು	ಎತ್ತಿನವರು	
ಓಬನಾಯಕರು	ಕುರುಬುಲು	ಉರೆಬಾಲಯ್ಯ	
ಚೆನ್ನನಾಯ್ಕ	ಮುಮ್ಮಡ್ಲು	ಒಕ್ಲರು	
ಕುಂದ್ರಲು	ಗೌಡವುಲು		
ಕೋಸಲವರು	ಗಜ್ಜಡ್ಲು	ಭಾನೂರು	
ಬೋನಹಳ್ಳಿಯೂರು	ಬಡಸಲೋರು	ರಾಯಬೋರು	

ಸೂರ್ಯವಂಶದ ಬೆಡಗು (ಮಲ್ಲಿನಾಯಕ)

ಈಶ್ವರನೋರು	ಓಬನಾಯಕನೋರು	ಚಿನ್ನಕಾಟನೋರು
ಪೇಯಿಲೋರು	ಮೇಸಲೋರು	ಎನುಮುಲೋರು
ಕಾಟಮಲ್ಲನಾಯಕನೋರು	ಪದ್ದನಾಯಕನೋರು	ಬಂಗಾರುದೇವರು

ವಡೇಲಾರು (ಇದರಲ್ಲಿ ಯರಮಂಚಿ ನಾಯಕ ಬೆಡಗುಗಳಿವೆ)

ಅಚ್ಚಪಲ್ಲೋರು	ನಲಗೇತಿ	ಯರಗಾಟ್ಲವರು
ಕರಿನೋರು	ಯರಗೋತಿ	ವಡೇಲರು

೨. ಚಂದ್ರವಂಶದ ಬೆಡಗು (ಮಂದವಾರು)

ಕಾಮಗೇತಿಬುಲ್ಲುಡ್ಲು   ಸಾಕೆಲರು ಗಾದಪಾಲೋರು   ಮಾಸಲೋರು ಇತ್ಯಾದಿ ಬೆಡಗುಗಳು ಕಂಡುಬರುತ್ತವೆ.

೪. ವಕ್ತೃಗಳ ಪಟ್ಟಿ

(ಹೆಸರು, ವಯಸ್ಸು, ಸ್ಥಳ, ತಾಲೂಕು, ಜಿಲ್ಲೆ, ವೃತ್ತಿ)

೧. ಕೊಂಡ್ಲಹಳ್ಳಿಹಟ್ಟಿ ಪಾಲಯ್ಯ, ೭೨, ಕೋಲಮನಹಳ್ಳಿ, ಚಳ್ಳಕೆರೆ, ಚಿತ್ರದುರ್ಗ, ವ್ಯವಸಾಯ.
೨. ಪೂಜಾರಿ ಪಾಲಯ್ಯ, ೮೦, ಚನ್ನಬಸಯ್ಯನಹಟ್ಟಿ, ಚಳ್ಳಕೆರೆ, ಚಿತ್ರದುರ್ಗ, ವ್ಯವಸಾಯ.
೩. ಎಸ್.ಬಿ.ತಿಪ್ಪನಾಯಕ, ೭೫, ಕಾನಕಟ್ಟೆ, ಜಗಳೂರು, ದಾವಣಗೆರೆ, ನಿವೃತ್ತ ಶಿಕ್ಷಕ.
೪. ಗಾದಿರಮ್ಮ, ೬೦, ಕಬ್ಬಳಕಾಶಿಪುರ ಕ್ಯಾಂಪ್, ಚನ್ನಗಿರಿ, ದಾವಣಗೆರೆ, ಕೂಲಿ
೫. ನೀಲಪ್ಪ, ೬೮, ಚನ್ನಗಿರಿ, ದಾವಣಗೆರೆ, ನಿವೃತ್ತ ಶಿಕ್ಷಕ
೬. ದಿ.ಅಲ್ಲೀಪುರದ ಜಿ.ಹನುಮಂತಪ್ಪ, ೮೭, ಅಲ್ಲಿಪುರ, ಬಳ್ಳಾರಿ, ಸಮಾಜಸೇವೆ
೭. ವೈ. ನೆಟ್ಟಕಲ್ಲಪ್ಪ, ೫೦, ಬಳ್ಳಾರಿ, ಸಮಾಜಸೇವೆ.
೮. ದಿ. ಶ್ರೀಮತಿ ತೋಟದ ಪಾಲಮ್ಮ, ೮೦, ಕೆ.ಬಿ.ಹಟ್ಟಿ, ಪೂಜಾರಹಳ್ಳಿ, ಕೂಡ್ಲಿಗಿ, ಬಳ್ಳಾರಿ, ಕೃಷಿ.
೯. ಶ್ರೀಮತಿ ಚಿನ್ನಮ್ಮ, ೫೦, ಕೆ.ಬಿ.ಹಟ್ಟಿ, ಪೂಜಾರಹಳ್ಳಿ, ಕೂಡ್ಲಿಗಿ, ಬಳ್ಳಾರಿ, ಕೃಷಿ.
೧೦. ಕಸಾಪುರದ ಪಾಲಯ್ಯ, ೮೨, ಕೆ.ಬಿ.ಹಟ್ಟಿ, ಪೂಜಾರಹಳ್ಳಿ, ಕೂಡ್ಲಿಗಿ, ಬಳ್ಳಾರಿ, ಕೃಷಿ.
೧೧. ಮಲ್ಲಮ್ಮ, ೩೫, ಸೂರಮ್ಮನಹಳ್ಳಿ, ಮೊಳಕಾಲ್ಮೂರು, ಚಿತ್ರದುರ್ಗ, ಕೂಲಿ.
೧೨. ಶಿ.ಗು.ಕುಸಗಲ್ಲ, ೫೦, ಬೆಳಗಾವಿ, ಶಿಕ್ಷಕ.
೧೩. ಎಂ.ಕೆ.ನಾಯಕ, ೫೦, ಸಿ.ಕೆ.ಪುರ, ಚಿತ್ರದುರ್ಗ, ಸಮಾಜಸೇವೆ.
೧೪. ಡಾ.ತೇಜಸ್ವಿ ಕಟ್ಟೀಮನಿ, ೪೮, ಧಾರವಾಡ, ಪ್ರಾಧ್ಯಾಪಕ.
೧೫. ಸಿದ್ಧೇಶ್ವರಸ್ವಾಮಿ, ೭೫, ಪೂಜಾರಹಳ್ಳಿ, ಕೂಡ್ಲಿಗಿ, ಬಳ್ಳಾರಿ, ನಿವೃತ್ತ ಶಿಕ್ಷಕ.
೧೬. ಉಪೇಂದ್ರ ನಾಯಕ, ೫೨, ಚಿತ್ರದುರ್ಗ, ತಹಶೀಲ್ದಾರರು.
೧೭. ಸಿ.ವಿ. ಅಹೋಬಲನಾಯಕ, ೫೫, ಚಿತ್ರದುರ್ಗ, ಅಡ್ವೋಕೇಟ್.
೧೮. ದಳವಾಯಿ ವೀರಣ್ಣ, ೭೫, ಬಳ್ಳಾರಿ, ನಿವೃತ್ತ ಫಾರ್ಮಸಿಸ್ಟ್

೫. ಸಾಂಸ್ಕೃತಿಕ ಪದಕೋಶ

ಅಳಿ - ದುಂಬಿ

ಅಸುರ - ರಾಕ್ಷಸ

ಅಲಗು - ಕತ್ತಿ

ಅರಲಂಬು - ಹೂಬಾಣ

ಆಟವಿಕ - ಅರಣ್ಯವಾಸಿ

ಊಷರ - ಜಿಂಕೆಗಳು ಲವಣಯುಕ್ತ ನೆಲವನ್ನು ನೆಕ್ಕುವಾಗ ಬೆನ್ನಮೇಲೆ ಹೊಡೆದುಕೊಲ್ಲುವುದು

ಎರಳೆ(ಏಣ) - ಜಿಂಕೆ

ಎಲರ್ - ಗಾಳಿ

ಏಕಲವ್ಯ - ಹಿರಣ್ಯಧನು ಎಂಬ ಬೇಡನ ಮಗ. ಈತನು ದ್ರೋಣಚಾರ್ಯರ ಪ್ರತಿಮೆಯನ್ನು ಮಾಡಿಕೊಂಡು ಅದನ್ನು ಗುರುವೆಂದೇ ಭಾವಿಸಿ ಅದರ ಮುಂದೆ ಬಿಲ್ವಿದ್ಯೆ ಕಲಿತು ಅಸ್ತ್ರವಿದ್ಯಾವಿಶಾರದನೆನ್ನಿಸಿದನು.

ಕಂಟಕ - ವಿಘ್ನ, ವಿಪತ್ತು

ಕಂತುಶರ - ಮನ್ಮಥನ ಬಾಣ

ಕಂದು - ಕಳೆಗುಂದು, ಮಾಸು, ಬಣ್ಣಗೆಡು

ಕಂಬವಿಲ್ - ಬಿದಿರಿನ ಬಿಲ್ಲು

ಕಕ್ಕಡವಂದಿ - ದೊಡ್ಡಹಂದಿ, ಖಡ್ಗಮೃಗ

ಕಕ್ಕಡವಲೆ - ಬೇಟೆಗಾರರು ಬಳಸುವ ಒಂದು ಬಗೆಯ ಬಲೆ

ಕವಲಂಬು - ಕವಲೊಡೆದ ಬಾಣ

ಕಾಂತಾರ - ಕಾಡು, ಕಾನನ

ಕಾಲ್ವೇಂಟೆಕಾರ - ವಾಹನವಿಲ್ಲದೆ ಓಡಾಡಿ ಬೇಟೆಯಾಡುವವನು

ಕಿರಾತ - ಬೇಡ, ಶಬರ, ಕಾಡು ಮನುಷ್ಯ, ಶಿವನ ಒಂದು ರೂಪ

ಕಿರಾತೀ - ಚವರಿಯನು ಬೀಸುವ ಹೆಣ್ಣು, ದಾಸಿ, ಬೇಡತಿ, ಗಂಗಾನದಿ, ಶಿವನ ಒಂದು ರೂಪ

ಕೇಕಿ - ನವಿಲು

ಕೇಸರಿ - ಸಿಂಹ

ಕೊಂಚ - ಕ್ರೌಂಚ ಪಕ್ಷಿ

ಕೋದಂಡ	- ಬಿಲ್ಲು
ಕೋಲ್	- ಬಾಣ
ಕೋಪಜ	- ಕಾದಾಡಿದ ಎರಡು ಜಿಂಕೆಗಳಲ್ಲೊಂದನ್ನು ಗುಪ್ತವಾಗಿ ರಾಜ ಕೊಲ್ಲುವುದು.
ಗಿರಿ	- ಪರ್ವತ
ಗುಹ	- ಶೃಂಗವೇರಪುರದ ಕಿರಾತರಾದ, ಶ್ರೀರಾಮನ ಪರಮಮಿತ್ರ
ಚರಿಗೆಗೆ	- ಜೈನಯತಿಗಳು ಆಹಾರಕ್ಕಾಗಿ ಮಾಡುವ ಸಂಚಾರ, ಊಟ
ಚಾರಜ	- ಆಹಾರಕ್ಕಾಗಿ ಅಲೆಯುವ ಪ್ರಾಣಿಗಳ ಬೇಟೆ
ಜಾಯಿಲ	- ನಾಯಿ
ತಾಡಿಕಾ	- ಚಪ್ಪಾಳೆ ತಟ್ಟಿ ಆಡುವ ಬೇಟೆ
ತುರಗ	- ಕುದುರೆ
ದಮಯಂತೀ	- ವಿದರ್ಭದೇಶದ ಅರಸನಾದ ಭೀಮನ ಮಗಳು, ನಳಮಹಾರಾಜನ ಪ್ರಿಯಪತ್ನಿ
ದೀಪ ಮೃಗಜ	- ಬೇಟೆಗಾರನಿಂದ ಅಲಂಕೃತಗೊಂಡ ಹೆಣ್ಣು ಜಿಂಕೆ
ದೀವ(ಹ)	- ಬೇಟೆಯಲ್ಲಿ ಪ್ರಾಣಿಗಳನ್ನು ಹಿಡಿಯಲು ಬಳಸುವ ಪ್ರಾಣಿ
ಧರ್ಮವ್ಯಾಧ	- ಕೌಶಿಕನೆಂಬ ಬ್ರಾಹ್ಮಣನಿಗೆ ಜ್ಞಾನೋಪದೇಶ ಮಾಡಿದ ಬೇಡ
ನಳ	- ನಿಷದ ದೇಶದ ರಾಜನಾದ ವೀರಸೇನನ ಮಗ
ನಿಷಧ	- ಬೇಡ, ಸಪ್ತಕುಲಪರ್ವತಗಳಲ್ಲೊಂದು, ನಳ ಮಹಾರಾಜನು ಆಳುತ್ತಿದ್ದ ಒಂದು ದೇಶ
ಪಂದಿ	- ಹಂದಿ
ಪಿನಾಕಿ	- ಶಿವ
ಪುಂಡರೀಕಾ	- ಅಪ್ಸರೆ
ಪುರೋಚನ	- ದುರ್ಯೋಧನನ ಮಂತ್ರಿ
ಪುಲಿಂದ	- ಕಾಡು ಮನುಷ್ಯ, ಬೇಡ, ಬಿಲ್ಲು, ದಿಲ್ಲಿಯ ದಕ್ಷಿಣಕ್ಕೆ, ಬುಂದೇಲಖಂಡದ ಪಶ್ಚಿಮಕ್ಕಿರುವ ದೇಶ
ಪುಲ್ಲೆ	- ಹುಲ್ಲೆ, ಚಿಗುರೆ
ಪುಳಿಂದ	- ಬೇಟೆಗಾರ
ಪುಳಿಂದಿಯಾರು	- ಬೇಟೆಗಾರ್ತಿಯರು
ಪೆರ್ಬಾವು	- ಹೆಬ್ಬಾವು
ಪೆರ್ಮರ	- ಸಾರಂಗ
ಬಿಲ್ಲ	- ಬಿಲ್ಲವ ಎಂದರೆ ಬೇಡ, ಕಿರಾತ, ವ್ಯಾಧ, ಬ್ಯಾಡ ಇತ್ಯಾದಿ
ಮೃಗಚಾರಿ	- ಜಿಂಕೆ

ಮೃಗಮದ - ಕಸ್ತೂರಿ

ಮೃಗಯಾ - ಬೇಟೆ

ಮೊರ್ಗಜ - ಜಂಕೆಗಳು ಅಲೆದಾಡುವ ಮಾರ್ಗವರಿತು ಜಂಕೆಯನ್ನು ಕೊಲ್ಲುವುದು

ಮೊರಡಿ - ಕಲ್ಲುಗುಡ್ಡ

ರಾಹು - ದೆವ್ವ, ಪಿಶಾಚಿ, ಭಯಂಕರವಾದ

ರಿಪು - ಹಗೆ, ವೈರಿ

ವಧ್ರಜ - ರಾಜ ಬಲೆಗಳನ್ನು ಬಳಸಿ ನಾದ ಮಾಡಿಕೊಂಡು ಪ್ರಾಣಿಗಳನ್ನು ಕೊಲ್ಲುವುದು

ವಾಯುಜ - ಬಿರುಗಾಳಿಯ ದಿವಸ ಆಡುವ ಬೇಟೆ

ವಾಲ್ಮೀಕಿ - ರಾಮಾಯಣ ಗ್ರಂಥಕರ್ತನಾದ ಮಹರ್ಷಿ, ಆದಿಕವಿ

ವಾಹಜ - ಕುದುರೆಯನ್ನೇರಿ ಹೋಗಿ ಬೇಟೆಯಾಡುವುದು

ವ್ಯಾಘ್ರಜ - ಬಲೆಗಳಿಂದ ಕೃಷ್ಣಮೃಗದ ಬೇಟೆ

ವಿಟಪಜ - ಕೈಯಲ್ಲಿದ್ದ ಗಿಡ ಮೊರೆಮಾಡಿಕೊಂಡು ನಿಧಾನವಾಗಿ ಹೋಗಿ ಪ್ರಾಣಿಗಳನ್ನು ಬೇಟೆಯಾಡುವುದಾಗಿದೆ.

ಶಬರಿ - ಆನೆಗೊಂದಿಯಲ್ಲಿದ್ದ ಒಬ್ಬಬೇಡತಿ, ಈಕೆ ಮಾತಂಗ ಮುನಿಯ ಶಿಷ್ಯೆಯಾಗಿ, ಶ್ರೀರಾಮನ ಪರಮಭಕ್ತೆಯಾಗಿದ್ದಳು.

* * *

೬. ಗ್ರಂಥಸೂಚಿ

೧. ಕನ್ನಡ ಸಾಹಿತ್ಯ :

ಅನಂತರಂಗಾಚಾರ್, ಎನ್. : ೧೯೭೨, **ಶ್ರೀಮಲ್ಲಿಕಾರ್ಜುನ ಕವೀಶ್ವರ ಸಂಯೋಜಿತ ಸೂಕ್ತಿಸುಧಾರ್ಣವಂ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಅನಂತರಂಗಾಚಾರ್, ಎನ್. (ಸಂ):೧೯೭೩, **ಮಲ್ಲಕವಿಸಂಯೋಜಿತಂ ಕಾವ್ಯಸಾರಂ**, ಕನ್ನಡಸಾಹಿತ್ಯಪರಿಷತ್ತು, ಬೆಂಗಳೂರು.

ಅನಂತರಂಗಾಚಾರ್, ಎನ್. (ಸಂ) : ೧೯೭೩, ದುರ್ಗಸಿಂಹವಿರಚಿತ **ಕರ್ನಾಟಕ ಪಂಚತಂತ್ರ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಅನಂತರಾಮಯ್ಯ ಆರ್.ಎಲ್. (ಅನು) : ೧೯೯೫, **ವಡ್ಡಾರಾಧನ ಕಥಾಲೋಕ**, ಸಮಾಜ ಪುಸ್ತಕಾಲಯ, ಧಾರವಾಡ.

ಅದೃಶ್ಯಕವಿ (೧೫೨೫) : ೧೯೫೭, **ಪ್ರೌಢದೇವರಾಯನ ಕಾವ್ಯ**, ಮುರುಘಾಮಠ, ಧಾರವಾಡ.

ಅಬುಲ್‌ಬಷೀರ್, ಜ. : ೧೯೯೭, **ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ**, ಸನಾಪ್ರಕಾಶನ, ಬೆಂಗಳೂರು.

ಅಮರೇಶ ನುಗಡೋಣಿ : ೧೯೯೪, **ಆಧುನಿಕ ಕನ್ನಡ ಸಾಹಿತ್ಯದಲ್ಲಿ ಏಕಲವ್ಯ** (ಅಪ್ರಕಟಿತ ಎಂ.ಫಿಲ್ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಆದಿದೇವ : **ಸುಕುಮಾರ ಚರಿತೆ**, (ಸಂ) :ವೈ.ಸಿ.ಭಾನುಮತಿ :೧೯೮೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಆದಿಯಪ್ಪ : **ಧನ್ಯಕುಮಾರ ಚರಿತ್ರೆ**, (ಸಂ) : ಹಂಪನಾಗರಾಜಯ್ಯ : ೧೯೭೩, ಬೆಂಗಳೂರು.

ಆಲೂರು ವೆಂಕಟರಾಯರು : ೧೯೮೦, **'ಕರ್ನಾಟಕತ್ವದ ವಿಕಾಸ'**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಈಶ್ವರಕವಿ : **ಕವಿಜಿಹ್ವಾಬಂಧನಂ**, (ಸಂ) : ಎ.ಆರ್. ಕೃಷ್ಣಶಾಸ್ತ್ರಿ : ೧೯೫೭, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

ಒಂದನೆ ಮಂಗರಸ : (೧೩೬೦) : **ಖಗೇಂದ್ರಮಣಿದರ್ಪಣ**, (೧೯೪೨)ಮದ್ರಾಸ್ ವಿ.ವಿ., ಮದ್ರಾಸ್

ಕನಕದಾಸ (೧೫೬೦) : **ಮೋಹನ ತರಂಗಿಣಿ**, (ಸಂ) : ಎಂ.ಎ. ರಾಮಾನುಜಯ್ಯಂಗಾರ್: ೧೯೧೩; ಕರ್ಣಾಟಕಕಾವ್ಯ ಕಲಾನಿಧಿ.

ಕನಕದಾಸ : **ಮೋಹನತರಂಗಿಣಿಸಂಗ್ರಹ**, (ಸಂ) : ಬಿ.ಎಸ್.ಸಣ್ಣಯ್ಯ :೧೯೭೭, ಗೀತಾಬುಕ್‌ಹೌಸ್, ಮೈಸೂರು.

ಕನಕದಾಸ : **ಮೋಹನತರಂಗಿಣಿ**, (ಸಂ) : ಆರ್.ಸಿ.ಹಿರೇಮಠ :೧೯೭೩,ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕನಕದಾಸ : **ಮೋಹನತರಂಗಿಣಿ**, (ಅನು) : **ಕೋತಿನ**, ಎಸ್.ಎಸ್. :೧೯೮೪, ಕ.ಸಾ.ಪ, ಬೆಂಗಳೂರು.

ಕನಕದಾಸ (೧೫೬೦) : **ರಾಮಧಾನ್ಯ ಚರಿತೆ**, (ಸಂ) : ಪಂಚಲಿಂಗೇಗೌಡ : ಕಲಾಕ್ಷೇತ್ರ, ಮೈಸೂರು.

ಕನಕದಾಸ : **ನಳಚರಿತ್ರೆ**, (ಸಂ) : ದೇ.ಜ.ಗೌ : ೧೯೬೫, ಕನಕದಾಸ ೪ನೇ ಶತಮಾನೋತ್ಸವ, ಬೆಂಗಳೂರು

ಕಮಲಾ ಹಂಪನಾ, ಶೇಷಗಿರಿ.ಕೆ.ಆರ್. (ಸಂ): ೧೯೯೩, **ಚಾವುಂಡರಾಯ ಪುರಾಣಂ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕಲಬುರ್ಗಿ, ಎಂ.ಎಂ. (ಸಂ) :೧೯೮೩, ಸಿದ್ಧಕವಿ ವಿರಚಿತ **ಸಿರುಮಣ ನಾಯಕನ ಸಾಂಗತ್ಯ**, ವೀರಶೈವ ಅಧ್ಯಯನ ಸಂಸ್ಥೆ, ಗದಗ.

ಕಲಬುರ್ಗಿ, ಎಂ.ಎಂ. :೧೯೯೫, **ಕನ್ನಡ ಸಂಶೋಧನಶಾಸ್ತ್ರ**, ಚೇತನ ಬುಕ್ ಹೌಸ್, ಮೈಸೂರು.

ಕಲಬುರ್ಗಿ, ಎಂ.ಎಂ. : (ಸಂ):೧೯೯೯, **ಹರಿಹರನ ರಗಳೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಿತ್ತೂರ,ಕೆ.ಎ.:೧೯೭೫, **ಭಾರತೀಯ ಸಾಹಿತ್ಯ ಸಮೀಕ್ಷೆ**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕುಮಾರ ಚೆನ್ನಬಸವ : **ಪುರಾತನರ ಚರಿತೆ**, (ಸಂ) : ವೈ.ಸಿ.ಭಾನುಮತಿ :೧೯೭೬, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕುಮಾರ ವಾಲ್ಮೀಕಿ : (೧೫೦೦), **ಮೈರಾವಣನ ಕಾಳಗ**, (ಸಂ): ಎಂ.ಎ.ರಾಮಾನುಜ ಅಯ್ಯಂಗಾರ್: ೧೯೧೨, ಶ್ರೀನಿವಾಸ ಪ್ರೆಸ್ ಮೈಸೂರು.

ಕುಮಾರವಾಲ್ಮೀಕಿ : **ತೊರವೆ ರಾಮಾಯಣ**, (ಸಂ) : ಬಿ.ಎಸ್. ಸಣ್ಣಯ್ಯ : ೧೯೫೯, ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು.

ಕುಮಾರವಾಲ್ಮೀಕಿ : **ಪಂಚವಟಿ**, (ಸಂ) : ಬಿ.ವಿ.ಶಿರೂರ : ೧೯೭೮, ಪ್ರಭಾಪಬ್ಲಿಕೇಷನ್ಸ್, ಧಾರವಾಡ.

ಕುಮಾರವಾಲ್ಮೀಕಿ : **ತೊರವೆ ರಾಮಾಯಣ**, ಸಂಪುಟ-೧, (ಸಂ) : ಎನ್.ಬಸವಾರಾಧ್ಯ : ೧೯೫೬, ಓರಿಯಂಟಲ್ ರಿಸರ್ಚ್ ಇನ್ಸ್‌ಟ್ಯುಟ್ ಪಬ್ಲಿಕೇಷನ್ಸ್.

ಕುಮಾರವಾಲ್ಮೀಕಿ : **ತೊರವೆ ರಾಮಾಯಣ**, ಸಂಪುಟ-೧, (ಅನು) : ಕೆ.ಎಸ್.ಕೃಷ್ಣಮೂರ್ತಿ : ೧೯೭೭, ಕ.ಸಾ.ಪ., ಬೆಂಗಳೂರು.

ಕುಮಾರವ್ಯಾಸ : **ವಿರಾಟಪರ್ವ**, (ಸಂ) : ಎಸ್.ಎನ್.ಕೃಷ್ಣಜೋಯಿಸ್: ೧೯೭೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಕುಮಾರವ್ಯಾಸ : **ಕರ್ಣಪರ್ವ**, (ಸಂ) : ಎನ್.ಅನಂತರಂಗಾಚಾರ್ : ೧೯೭೦, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಕುಮಾರವ್ಯಾಸ: **ಅರಣ್ಯಪರ್ವ**, (ಸಂ) : ಸಿ.ಪಿ.ಕೃಷ್ಣಕುಮಾರ್ : ೧೯೭೬, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಕುಮಾರವ್ಯಾಸ : **ಕರ್ನಾಟಕ ಭಾರತ ಕಥಾಮಂಜರಿ**, (ಅನು) : ಎಲ್.ಗುಂಡಪ್ಪ : ೧೯೮೯, ಹೇಮಂತ ಸಾಹಿತ್ಯ, ಬೆಂಗಳೂರು.

ಕುಮಾರವ್ಯಾಸ : **ಪಾಶುಪತಾಸ್ತ್ರ ಪ್ರಾಪ್ತಿ ಪ್ರಸಂಗ**, (ಸಂ) : ಬಿ.ಮಹಾದೇವಪ್ಪ : ೧೯೯೦, ಭಾರತೀಪ್ರಕಾಶನ, ಗುಲ್ಬರ್ಗ.

ಕುಮಾರವ್ಯಾಸ : **ಪ್ರತಿಜ್ಞಾ ಪುರುಷ ಭೀಷ್ಮಾಚಾರ್ಯರು**, (ಸಂ) : ಬಿ.ಶ್ಯಾಮಸುಂದರ : ೧೯೮೮, ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನಮಾಲೆ, ಉಜಿರೆ.

ಕುಲಕರ್ಣಿ, ಆರ್.ವಿ. (ಸಂ) : ೧೯೯೮, **ಕವಿಚಕ್ರವರ್ತಿ ರನ್ನ ವಿರಚಿತಂಸಾಹಸಭೀಮ ವಿಜಯಂ** (ಗದಾಯುದ್ಧ), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಕುವೆಂಪು, ಮಾಸ್ತಿವೆಂಕಟೇಶಯ್ಯಂಗಾರ್ (ಸಂ) : ೧೯೫೮, **ಕರ್ನಾಟ ಭಾರತ ಕಥಾಮಂಜರಿ**, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಕುವೆಂಪು : ೧೯೫೫, **ಕಾವ್ಯವಿಹಾರ**, ಉದಯರವಿ, ಮೈಸೂರು.

ಕೃಷ್ಣಕುಮಾರ್ ಸಿ.ಪಿ. : ೧೯೯೫, **ಕವಿರಾಜಮಾರ್ಗದ ಕಾವ್ಯ ಮೀಮಾಂಸೆ**, ಪ್ರೇಮಸಾಯಿ, ಬೆಂಗಳೂರು.

ಕೃಷ್ಣಕುಮಾರ್ ಸಿ.ಪಿ. (ಸಂ) : ೧೯೯೪, **ದುರ್ಗಸಿಂಹ ವಿರಚಿತ ಕರ್ನಾಟಕ ಪಂಚತಂತ್ರಂ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಕೃಷ್ಣಮೂರ್ತಿ ಕಿತ್ತೂರ : ೧೯೭೫, **ಭಾರತೀಯ ಸಾಹಿತ್ಯ ಸಮೀಕ್ಷೆ**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕೆರೂರ ವಾಸುದೇವಾಚಾರ್ಯರು : ೧೯೪೭, : **ವಾಲ್ಮೀಕಿ ವಿಜಯ** (ಪೌರಾಣಿಕ ಕಾದಂಬರಿ), ವಾಸುದೇವ ಸಾಹಿತ್ಯ ರತ್ನಮಾಲೆ, ಬಾಗಲಕೋಟೆ.

ಕೆಳದಿ ಗುಂಡಾಜೋಯಿಸ್ : ೧೯೭೬, **ಲಿಂಗಣ್ಣ ಕವಿಯ ಕೆಳದಿ ನೃಪವಿಜಯ** (ಗದ್ಯಾನುವಾದ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕೇಶವಭಟ್, ಎಂ : ೧೯೭೭. **ಮುಳಿಯ ತಿಮ್ಮಪ್ಪಯ್ಯನವರ ನಾಡೋಜ ಪಂಪ**, ಗೀತಾ ಬುಕ್ ಹೌಸ್, ಮೈಸೂರು.

ಕೇಶವಶರ್ಮ, ಕೆ. : ೧೯೮೯, **ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹೆಣ್ಣಿನ ಪರಿಕಲ್ಪನೆ** (ಪಿಎಚ್.ಡಿ.ಪ್ರಬಂಧ), ಮಂಗಳೂರುವಿಶ್ವವಿದ್ಯಾಲಯ, ಮಂಗಳೂರು.

ಕೊಟ್ರಶೆಟ್ಟಿ, ಎಂ.ಬಿ. : ೧೯೭೬, **ವಿಮರ್ಶಾತ್ಮಕ ಲೇಖನಗಳು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಗಂಗಾದೇವಿ : **ಮಧುರಾವಿಜಯಂ ಅಥವಾ ವೀರಕಂಪರಾಯ ಚರಿತಂ**, (ಅನು) : ಕುಶಾಲಪ್ಪಗೌಡ : ೧೯೮೯, ಜಯಗೌರಿ ಪ್ರಕಾಶನ, ಸುಳ್ಯ

ಗುಬ್ಬಿಮಲ್ಲಣಾರ್ಯ : ೧೫೧೩, **ಭಾವಚಿಂತಾರತ್ನ**, (ಸಂ) : ಎಂ.ರಾಮಾನುಜಯ್ಯಂಗಾರ್ : ೧೯೩೩, 'ಕರ್ನಾಟಕ ಕಾವ್ಯ ಮಂಜರಿ'.

ಗುರುಬಸವ : ೧೪೩೦, **ಮನೋವಿಜಯಕಾವ್ಯ**, (ಸಂ) : ಎಂ.ಎ. ನರಸಿಂಹಾಚಾರ್ಯ : ೧೯೨೧ ಗುರುವಿಲಾಸ ಮುದ್ರಣಾಲಯ, ಬೆಂಗಳೂರು.

ಗುರುಲಿಂಗ ವಿಭು : **ಭಿಕ್ಷಾಟನೆ ಚರಿತ್ರೆ**, (ಸಂ) : ಬ.ವ್ಹಿ. ಶಿರೂರು : ೧೯೮೨, ಕ.ಸಾ.ಪ, ಬೆಂಗಳೂರು.

ಗೋಪಕವಿ : ೧೬೦೦, **ನಂದಿಮಹಾತ್ಮ್ಯಂ**, ೧೯೦೭, ಕರ್ನಾಟಕ ಕಾವ್ಯ ಕಲಾನಿಧಿ.

ಚಂದ್ರಕವಿ : ೧೪೩೦, **ವಿರೂಪಾಕ್ಷಸ್ಥಾನ ವರ್ಣನಂ**, (ಸಂ): ಬ.ಶಿವಮೂರ್ತಿಶಾಸ್ತ್ರಿ : ೧೯೫೫, ಶರಣ ಸಾಹಿತ್ಯ ಗ್ರಂಥಮಾಲೆ, ಬೆಂಗಳೂರು.

ಚಂದ್ರಕವಿ : ೧೪೩೦, **ಶಂಕರಶತಕ**, (ಸಂ) : ಸಿ.ಮಹಾದೇವಪ್ಪ : ೧೯೬೫, ಸಂಶೋಧನಕೂಟ, ಪ್ರಥಮದರ್ಜೆ ಕಾಲೇಜ್, ಚಿಕ್ಕಮಗಳೂರು.

ಚಂದ್ರಶೇಖರ್, ಎಂ. (ಗದ್ಯಾನುವಾದ) : ೧೯೭೯, **ವಿರೂಪಾಕ್ಷ ಪಂಡಿತ ಕೃತ ಚೆನ್ನಬಸವ ಪುರಾಣ**, (ಸಂಪುಟ- ೧ ಮತ್ತು ೨), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚನ್ನಬಸಪ್ಪ ಗೋ.ರು.(ಸಂ) : ೧೯೮೯ **ಗ್ರಾಮಜ್ಯೋತಿ** ,ಕೆ.ಆರ್. ಲಿಂಗಪ್ಪ ಅಭಿನಂದನ ಗ್ರಂಥ, ಜಯನಗರ, ಬೆಂಗಳೂರು.

ಚೆನ್ನಬಸವಣಾಂಕ : ೧೫೫೦, **ಮಹಾದೇವಿ ಅಕ್ಕಪುರಾಣ**, : (ಸಂ): ಎನ್.ಚಂದ್ರಯ್ಯ, ೧೯೬೮, ಶರತ್ ಪ್ರಕಾಶನ, ಮೈಸೂರು.

ಚೇರಮಾಂಕ : ೧೯೫೬, **ಚೇರಮಕಾವ್ಯ**, (ಸಂ) : ಕ.ಸಾ.ಪ., ಬೆಂಗಳೂರು.

ಜಂಗಮನಿ ಮೀನಾಕ್ಷಿ : ೧೯೯೨, **ಹರಿಶ್ಚಂದ್ರ ಕಾವ್ಯ- ಒಂದು ಸಾಂಸ್ಕೃತಿಕ ಅಧ್ಯಯನ**, (ಎಂ.ಫಿಲ್. ಪ್ರಬಂಧ- ಅಪ್ರಕಟಿತ), ಕನ್ನಡ ಅಧ್ಯಯನ ವಿಭಾಗ, ಗುಲ್ಬರ್ಗಾ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಸೊಂಡೂರು.

ಜವರೇಗೌಡ, ದೇ.: ೧೯೭೮, **ಗದುಗಿನ ಭಾರತ : ಒಂದು ಸಾಂಸ್ಕೃತಿಕ ಅಧ್ಯಯನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಜವರೇಗೌಡ, ದೇ.(ಸಂ) : ೧೯೭೯ **ರಾಮಧಾನ್ಯ ಚರಿತ್ರೆ**, ಡಿ.ವಿ.ಕೆ. ಮೂರ್ತಿ, ಮೈಸೂರು.

ಜವರೇಗೌಡ, ದೇ. (ಸಂ) : ೧೯೯೦, **ಕನಕಸಾಹಿತ್ಯ ದರ್ಶನ**, ಸಂ-೧. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಜವರೇಗೌಡ ಮತ್ತು ಇತರರು: ೧೯೮೯, **ಜನಪ್ರಿಯ ಕನಕ ಸಂಪುಟ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಜವಳಿ, ಬ.ಸಿ. : ೧೯೬೯, **ಹಂಪೆಯ ಹರಿಹರನ ರಗಳೆಗಳು**, ಪಂಪಾ ಸಾಹಿತ್ಯ ಪ್ರಕಟಣಾಲಯ, ಧಾರವಾಡ.

ಜೋಯಪ್ಪ, ಬಿ.ಆರ್. : ೧೯೯೮, **ಯಾರಬೇಟೆ ಮತ್ತು ಇತರಪ್ರಸಂಗಗಳು**, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.

ಜೋಶಿ, ಶಂ.ಬಾ : ೧೯೬೭, **ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ**, ಸಮಾಜ ಪುಸ್ತಕಾಲಯ, ಧಾರವಾಡ.

ಜೋಶಿ. ಶಂ.ಬಾ. : ೧೯೯೭, **ಹಾಲುಮತ - ದರ್ಶನ** (ಎರಡನೇ ಮುದ್ರಣ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಿಪ್ಪೇರುದ್ರಸ್ವಾಮಿ, ಎಚ್ : ೧೯೬೮, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ, ಮೈಸೂರು.

ತಿಪ್ಪೇರುದ್ರಸ್ವಾಮಿ, ಎಚ್. : ೧೯೭೬, **ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ತೌಲನಿಕ ಅಧ್ಯಯನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ತಿಪ್ಪೇರುದ್ರಸ್ವಾಮಿ, ಎಚ್. : ೧೯೭೬, **ಋಷಿಕವಿ ರಾಘವಾಂಕ**, ಡಿ.ವಿ.ಕೆ. ಮೂರ್ತಿ, ಮೈಸೂರು.

ತಿಪ್ಪೇರುದ್ರಸ್ವಾಮಿ, ಎಚ್ : ೧೯೭೮, **ಕನ್ನಡ ವಿಮರ್ಶೆ ಕವಲು ದಾರಿಯಲ್ಲಿ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ತೆಕ್ಕುಂಜ ಗೋಪಾಲಕೃಷ್ಣ ಭಟ್ಟ : ೧೯೭೬, **ಜನ್ನಕವಿಯ ಯಶೋಧರ ಚರಿತೆ** (ಗದ್ಯಾನುವಾದ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ತೆರಕಣಾಂಬಿ ಬೊಮ್ಮರಸ : **ಜೀವಂಧರ ಚರಿತೆ**, (ಸಂ): ಮಂಜುನಾಥನ್ : ೧೯೭೬, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ತೆರಕಣಾಂಬಿ ಬೊಮ್ಮರಸ : ೧೪೮೫, **ಸನತ್ಕುಮಾರ ಚರಿತೆ**, (ಸಂ) : ಜಿ.ಜಿ. ಮಂಜುನಾಥನ್ : ೧೯೭೦, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ತೊರವೆ ನರಹರಿ : ೧೫೦೦, **ತೊರವೆ ರಾಮಾಯಣ** ಭಾಗ-೧-೨, ೧೯೫೬-೫೯, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ.

ತೋಂಟದಾರ್ಯ : ೧೫೬೦, ಪಾಲ್ಕುರಿಕೆ ಸೋಮನಾಥ ಪುರಾಣ, ೧೯೧೨, ವೀರಶೈವ ಗ್ರಂಥ ಪ್ರಕಾಶಿಕಾ ಗ್ರಂಥಾವಳಿ ಮೈಸೂರು.

ದಿಬ್ಬೂರು ಶ್ರೀನಿವಾಸ ರಾವ್ : ೧೯೮೮, ಮಹಾಕವಿ ಷಡಕ್ಷರದೇವ ವಿರಚಿತ ಶಬರಶಂಕರ ವಿಳಾಸಂ (ಗದ್ಯಾನುವಾದ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ದೇಪರಾಜ : ೧೪೧೦, ಸೊಬಗಿನ ಸೋನೆ, (ಸಂ) : ಬಿ.ಎಸ್. ಸಣ್ಣಯ್ಯ : ೧೯೭೦, ಕ.ಅ.ಸಂಸ್ಥೆ, ಮೈ.ವಿ.ವಿ.

ದೇರ್ಲ ರೈ.ನರೇಂದ್ರ : ೧೯೯೬, ಕನ್ನಡದಲ್ಲಿ ಬೇಟೆ ಸಾಹಿತ್ಯ, ಕರ್ನಾಟಕ ಸಂಘ, ಪುತ್ತೂರು (ದ.ಕ.).

ದೇವಕವಿ : ಮರುಳ ಸಿದ್ಧಕಾವ್ಯ, (ಸಂ) : ಅ.ನ.ಕೃ. : ವಿಶ್ವವಾಣಿ ಪ್ರಕಟನ ಮಂದಿರ, ಬೆಂಗಳೂರು.

ದೇವಿರಪ್ಪ, ಎಚ್. : ೧೯೬೪, ರಾಮನಾಥ ಚರಿತ, (ಉತ್ತರಾರ್ಧ ಸಂಪುಟ-೩), ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು.

ದೇವಿರಪ್ಪ ಎಚ್. (ಸಂ) : ೧೯೭೪, ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ, ತರಳಬಾಳು ಪ್ರಕಾಶನ, ಸಿರಿಗೆರೆ.

ದೇವುಡು ನರಸಿಂಹಶಾಸ್ತ್ರಿ ಮತ್ತು ಶಿವಮೂರ್ತಿಶಾಸ್ತ್ರಿ, ಬಿ. : ೧೯೮೫, ಲಕ್ಷ್ಮೀಶಕವಿಯ ಕನ್ನಡ ಜೈಮಿನಿಭಾರತ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ನಂಜುಂಡ ಕವಿ : ೧೫೫೦, ಭೈರವೇಶ್ವರ ಕಾವ್ಯ, (ಸಂ): ೧೯೫೬, ಶ್ರೀ ಬಸವಸ್ವಾಮಿಗಳು : ವಾಙ್ಮಯ ಪ್ರಕಾಶನ ಕಾರ್ಯಾಲಯ, ಮೈಸೂರು.

ನಂಜುಂಡರಾಧ್ಯ : ೧೯೭೬, ಹರಿಹರ ಕವಿಯ ಗಿರಿಜಾ ಕಲ್ಯಾಣ ಮಹಾಪ್ರಬಂಧಂ (ಗದ್ಯಾನುವಾದ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ನಟರಾಜ ಬೂದಾಳು (ಸಂ) : ೧೯೯೬, ಕನಕದಾಸ, ಕ.ಸಾ.ಅ. ಬೆಂಗಳೂರು.

ನರಸಿಂಹಾಚಾರ್, ಆರ್. : ೧೯೭೪, ಕರ್ನಾಟಕ ಕವಿ ಚರಿತ್ರೆ ೧೮ ಮತ್ತು ೧೯ನೇ ಶತಮಾನಗಳು (೩ನೇ ಸಂಪುಟ), ಕ.ಸಾ.ಪ, ಬೆಂಗಳೂರು.

ನರಸಿಂಹಾಚಾರ್ ಡಿ.ಎಲ್. : ೧೯೭೬, ಪಂಪಭಾರತ ದೀಪಿಕೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ನರಸಿಂಹಾಚಾರ್ : ೧೯೬೮, ಹಂಪೆಯ ಹರಿಹರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ನಾಗರತ್ನ.ಟಿ.ಎಸ್. : ೧೯೮೬, ಹರಿದಾಸರ ಭಕ್ತಿ ಸ್ವರೂಪ, ಮೈ.ವಿ.ವಿ, ಮೈಸೂರು.

ನಾಗರಾಜಪ್ಪ ಕೆ.ಜಿ. : ೧೯೯೮, ಇಕ್ಕಟ್ಟು - ಬಿಕ್ಕಟ್ಟು, ಅನಿಕೇತನ, ಸಾಹಿತ್ಯ ಸಾಂಸ್ಕೃತಿಕ ಸಂಶೋಧನಾ ಕೇಂದ್ರ, ತುಮಕೂರು.

ನಾಗರಾಜಯ್ಯ ಹಂಪ (ಸಂ) : ೧೯೭೬, ಸಾಳ್ವಭಾರತ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ನಾಗರಾಜಯ್ಯ ಹಂಪ : ೧೯೮೨, ಲಕ್ಷ್ಮೀಶಕವಿ, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.

ನಾಗರಾಜಯ್ಯ ಹಂಪ : ೧೯೬೯, ವಡ್ಡಾರಾಧನೆ, ಮೈ.ವಿ.ವಿ, ಮೈಸೂರು

ನಾಗರಾಜಯ್ಯ ಹಂಪ (ಸಂ) : ೧೯೮೨, ರುದ್ರಭಟ್ಟಕವಿ, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು.

ನಾಗರಾಜಯ್ಯ ಹಂಪ ಮತ್ತು ಕುಲಕರ್ಣಿ ಆರ್.ವಿ. : ೧೯೮೧, ಕರ್ಣಪಾರ್ಯ ವಿರಚಿತ ನೇಮಿನಾಥ ಪುರಾಣಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ನಾಗರಾಜಯ್ಯ, ಹಂಪ : ೧೯೯೭, ಜೈನ ಕಥಾಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾಗರಾಜರಾವ್ ಸಿ.ಕೆ. : ೧೯೬೯, ಮಹಾಕವಿ ಲಕ್ಷ್ಮೀಶನ ಸ್ಥಳ ಮತ್ತು ಕಾಲ, ಸಾಹಿತ್ಯ ಮಾಲೆ, ಮೈಸೂರು.

ನಾಡಕರ್ಣಿ ಜೆ.ಡಿ. : ೧೯೯೫, ರತ್ನಕವಿಯ ಅಜಿತ ತೀರ್ಥಂಕರ ಪುರಾಣ, ಕ.ವಿ.ವಿ, ಧಾರವಾಡ.

ನಾಯಕ. ಹಾ.ಮಾ. (ಸಂ) : ೧೯೭೫, ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ, ಮೈಸೂರು.

ನಾಯಕ, ಹಾ.ಮಾ. : ೧೯೭೭, ಕನ್ನಡಸಾಹಿತ್ಯಚರಿತ್ರೆ, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ, ಮೈಸೂರು.

ನಾರಾಯಣ, ಪಿ.ವಿ. : ೧೯೮೩, ವಚನ ಸಾಹಿತ್ಯ :ಒಂದು ಸಾಂಸ್ಕೃತಿಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ.

ನಿಂಗಣ್ಣ ಸಣ್ಣಕ್ಕಿ : ೧೯೯೪. ವಿಶ್ವಮಾನ್ಯ ಶ್ರೀ ಕನಕದಾಸರು, ವಿದ್ಯಾನಿಧಿ ಪ್ರಕಾಶನ, ಗದಗ.

ನೃಪತುಂಗ : **ಕವಿರಾಜಮಾರ್ಗಂ ಕನ್ನಡದ ಪ್ರಥಮ ಲಕ್ಷಣ ಗ್ರಂಥ**, (ಸಂ) : ಕೆ. ಕೃಷ್ಣಮೂರ್ತಿ : ೧೯೮೩, ಐ.ಬಿ.ಎಚ್, ಬೆಂಗಳೂರು.

ನೇಗಿನಹಾಳ, ಎಂ.ಬಿ. : ೧೯೮೭, **ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪಂಚಮುಖಿ, ಆರ್.ಎಸ್.(ಸಂ) : ೧೯೪೯, **ಕುಮಾರವ್ಯಾಸ ವಿರಚಿತ ಐರಾವತ**, ಕನ್ನಡ ರಿಸರ್ಚ ಇನ್ಸಿಟಿಟ್ಯೂಟ್, ಧಾರವಾಡ.

ಪಂಚಮುಖಿ, ಆರ್. ಎಸ್. (ಸಂ) : ೧೯೫೩, **ಚಂದ್ರರಾಜಕವಿ ವಿರಚಿತಂ ಮದನ ತಿಲಕಂ**, ಕನ್ನಡ ರಿಸರ್ಚ್ ಇನ್ಸಟಿಟ್ಯೂಟ್, ಧಾರವಾಡ.

ಪದ್ಮಣಾಂಕ : ೧೪೭೦, **ಪದ್ಮರಾಜಪುರಾಣ**, ೧೯೫೮, ಮುರುಘಾಮಠ, ಧಾರವಾಡ.

ಪಾಲ್ಕುರಿಕೆ ಸೋಮನಾಥ : ೧೩೦೦, **ಸೋಮೇಶ್ವರ ಶತಕ**, (ಸಂ) ಆರ್.ಎಸ್. ಮುಗಳಿ : ೧೯೭೦, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಪುಟ್ಟಪ್ಪ, ಕೆ.ವಿ.(ಸಂ) : ೧೯೯೦, **ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಪ್ರಭಾವತಿ, ಎಸ್.ವಿ. : ೧೯೭೭, **ಪ್ರಾಚೀನ ಕನ್ನಡ ಕೃತಿಗಳಲ್ಲಿ ದ್ರೌಪದಿ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಬತ್ತಲೇಶ್ವರ : ೧೫೦೦, ಶಿವರಾಮಕಾರಂತ (ಸಂ) : ೧೯೯೬, **ಕೌಶಿಕ ರಾಮಾಯಣ**, ಹರ್ಷ ಪ್ರಕಟಣಾಲಯ, ಪುತ್ತೂರು.

ಬಸವಾಳ ಶಿವಲಿಂಗಪ್ಪನವರು : ೧೯೬೯, **ಹರಿಹರ ವಿರಚಿತ ರಕ್ಷಾಶತಕ ಮತ್ತು ಪಂಪಾಶತಕ**, ಲಿಂಗಾಯಿತ ಸಾಹಿತ್ಯ ಸಮಿತಿ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಬಸವರಾಜ ಕಲ್ಗುಡಿ : ೧೯೮೭, **ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ**, ಬೆಂ.ವಿ.ವಿ, ಬೆಂಗಳೂರು.

ಬಸವರಾಜ ಕಲ್ಗುಡಿ : ೧೯೮೫ **ಮಹಾಸತಿ ಆಚರಣೆ : ಒಂದು ಅಧ್ಯಯನ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಬಸವರಾಜ ಕಲ್ಗುಡಿ : ೧೯೯೩, **ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ**, ಕ.ಸಾ.ಅ, ಬೆಂಗಳೂರು.

ಬಸವರಾಜು, ಎಲ್. (ಸಂ) : ೧೯೭೧, **ಮಹಾಲಿಂಗೇಂದ್ರ ವಿಜಯ**, ಶ್ರೀ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ.

ಬಸವರಾಧ್ಯ, ಎನ್. ಮತ್ತು ಪಂಡಿತ, ಎಸ್. ಬಸಪ್ಪ (ಸಂ) : ೧೯೬೯, **ರಾಘವಾಂಕ ವಿರಚಿತ ಹರಿಶ್ಚಂದ್ರ ಕಾವ್ಯಂ** (ಎರಡನೇ ಮುದ್ರಣ), ಶಾರದಾ ಮಂದಿರ, ಮೈಸೂರು.

ಬ್ರಹ್ಮಪ್ಪ, ಜಿ.(ಸಂ) : ೧೯೬೭, **ಭರತೇಶ ವೈಭವ**, ಅತ್ತಿಮಬ್ಬೆ ಪ್ರಕಾಶನ, ಬೆಂಗಳೂರು.

ಬಾಲರಾಜು, ಎಚ್ : ೧೯೯೪, **ನೀಲಕುಮಾರನಕಥೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೆಟಗೇರಿ ಕೃಷ್ಣಶರ್ಮ : ೧೯೯೫, **ಕರ್ನಾಟಕ ಜನಜೀವನ**, ಸಮಾಜ ಪುಸ್ತಕಾಲಯ, ಧಾರವಾಡ.

ಭೀಮಕವಿ : ೧೪೦೦, **ಬಸವಪುರಣ**, ೧೯೬೯, ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಭಟ್, ಬಿ.ಎನ್. : ೧೯೮೧, **ಹದಿನಾರನೆಯ ಶತಮಾನದ ಕನ್ನಡ ಸಾಹಿತ್ಯ**, ಮಧುರೈ ವಿಶ್ವವಿದ್ಯಾಲಯ, ಮಧುರೈ.

ಮಂಜಪ್ಪಶೆಟ್ಟಿ, ಎಂ. : ೧೯೯೧, **ಮಲೆನಾಡಿನ ಶಿಕಾರಿ**, ಮಸಗಲಿ ಪ್ರಕಾಶನ, ಮೈಸೂರು.

ಮಗ್ಗೆಯ ಮಾಯಿದೇವ : ೧೪೩೦, **ಷಟ್‌ಸ್ಥಲ ಗದ್ಯ ಚನ್ನಮಲ್ಲಿಕಾರ್ಜುನ**, (ಸಂ) : ೧೯೬೭, ಮುರುಘಾಮಠ, ಧಾರವಾಡ.

ಮಗ್ಗೆಯ ಮಾಯಿದೇವ : ೧೪೩೦, **ಶತಕತ್ರಯ**, (ಸಂ) ವೈ.ನಾಗೇಶ ಶಾಸ್ತ್ರಿ : ೧೯೬೪, ಶ್ರೀ ಮುರುಘಾಮಠ, ಧಾರವಾಡ.

ಮರಿಯಪ್ಪ ಭಟ್ಟ : ೧೯೬೭, **ಕನ್ನಡ ಸಂಸ್ಕೃತಿ**, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

ಮರುಳಸಿದ್ಧಪ್ಪ, ಕೆ. : ೧೯೭೫, **ಷಟ್ಪದಿ ಸಾಹಿತ್ಯ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಮಾಳಿ, ವಿ.ಎಸ್. : ೧೯೯೩, **ಕನ್ನಡ ಸಾಹಿತ್ಯದಲ್ಲಿ ಕರ್ಣ**, (ಪಿಎಚ್.ಡಿ. ಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಮುಗುಳಿ, ರಂ.ಶ್ರೀ. : ೧೯೭೬, **ಕರ್ನಾಟಕದ ಸಾಂಸ್ಕೃತಿಕ ಪರಂಪರೆ**, ಸಮಾಜ ಪುಸ್ತಕಾಲಯ, ಧಾರವಾಡ.

ಮುಗುಳಿ, ರಂ.ಶ್ರೀ. : ೧೯೭೬, **ಕನ್ನಡ ಸಾಹಿತ್ಯದ ಇತಿಹಾಸ**, (ತೃತೀಯ ಆವೃತ್ತಿ), ಕಾವ್ಯಾಲಯ, ಮೈಸೂರು.

ಮುದ್ದೇಬಿಹಾಳ, ಆರ್.ಸಿ. : ೧೯೯೩, **ಸಿಂಧೂರಲಕ್ಷ್ಮಣ ಮಹಾಕಾವ್ಯ**, ರಸಬಳ್ಳಿ ಪ್ರಕಾಶನ, ಬಿಜಾಪುರ.

ಮೋಹಿನಿ, ಬಿ.ಪಿ. : ೧೯೮೮, **ಮಲೆನಾಡಿನಲ್ಲಿ ಬೇಟೆ**, (ಅಪ್ರಕಟಿತ ಪ್ರಬಂಧ), ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ, ಮೈಸೂರು.

ರಂಗರಾಜ. ವನದುರ್ಗ : ೧೯೮೯, **ಹರಿಹರನ ಸಾಂಸ್ಕೃತಿಕ ಲೋಕ**, ಪ್ರಜಾರಾಜ ಪ್ರಕಾಶನ, ವನದುರ್ಗ.

ರತ್ನಾಕರವರ್ಣಿ : ೧೫೬೦, **ಭರತೇಶವೈಭವ**, (ಸಂ) : ಜಿ.ಬ್ರಹ್ಮಪ್ಪ : ೧೯೬೭, ಅತ್ತಿಮಬ್ಬೆ ಪ್ರಕಾಶನ, ಬೆಂಗಳೂರು.

ರತ್ನಾಕರವರ್ಣಿ : ೧೫೬೦, **ಭರತೇಶವೈಭವ**, (ಸಂ) : ಟಿ.ಎಸ್. ಶಾಮರಾವ್ : ೧೯೬೬, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ರಾಘವಾಂಕ : **ಹರಿಶ್ಚಂದ್ರ ಕಾವ್ಯ**, (ಸಂ) : ಎನ್.ಬಸವಾರಾಧ್ಯ ಮತ್ತು ಪಂಡಿತ ಎಸ್.ಬಸಪ್ಪ : ಶಾರದಾ ಮಂದಿರ, ಮೈಸೂರು.

ರಾಮರಾಮ, ಕೆ. : ೧೯೮೪, **ಶ್ರೀ ಕುಮಾರಸ್ವಾಮಿ ಸಿಕ್ಕದ್ದು**, ಶ್ರೀ ಶರಣ ಪ್ರಕಾಶನ, ಗುಲಬರ್ಗಾ.

ರಾಮಾಯಣದ ರಾಮಚಂದ್ರರಾವ್ : ೧೯೫೫, **ವಾಲ್ಮೀಕಿಹೃದಯ**, ರಾಮಕೃಷ್ಣಪುರ, ಆನೇಕಲ್ ತಾ.

ರಾಮೇಗೌಡ : ೧೯೯೨, **ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು**, ಚಿತ್ರಕೂಟ, ಮೈಸೂರು.

ರಾಹುಲ ಸಾಂಕೃತ್ಯಾಯನ : ೧೯೯೩, (ಅನು) : ಶರ್ಮಾ, ಬಿ.ಎಂ. : **ವೋಲ್ಗಾ ಗಂಗಾ**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ರಾಹುಲ ಸಾಂಕೃತ್ಯಾಯನ : ೧೯೯೩, **ದಿವೋದಾಸ**, (ಅನು) : ಪ್ರಧಾನ್ ಗುರುದತ್ತ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಲಕ್ಕಣ್ಣ ದಂಡೇಶ : ೧೪೫೦, **ಶಿವತತ್ವ ಚಿಂತಾಮಣಿ**, (ಸಂ) : ಎಸ್.ಬಸಪ್ಪ : ೧೯೬೦, ಮೈ.ವಿ.ವಿ, ಮೈಸೂರು.

ವರದರಾಜರಾವ್, ಜಿ. : ೧೯೮೦, **ಚೌಂಡರಸ ವಿರಚಿತ ನಳಚರಿತ್ರೆ** (ಗದ್ಯಾನುವಾದ), ಕ.ಸಾ.ಪ, ಬೆಂಗಳೂರು.

ವರದರಾಜರಾವ್, ಜಿ. (ಸಂ) : ೧೯೬೬, **ಕುಮಾರರಾಮನ ಸಾಂಗತ್ಯಗಳು**, ಮೈ.ವಿ.ವಿ, ಮೈಸೂರು.

ವರದರಾಜರಾವ್, ಜಿ. : ೧೯೭೩, **ಶ್ರೀ ಪಾದರಾಯರ ಕೀರ್ತನೆಗಳು**, ಕ.ಅ.ಸಂ, ಮೈ.ವಿ.ವಿ, ಮೈಸೂರು.

ವರದಾಚಾರ್ಯ, ಎಂ. ಆರ್. (ಗದ್ಯಾನುವಾದ) : ೧೯೭೬, **ರುದ್ರಭಟ್ಟನ ಜಗನ್ನಾಥ ವಿಜಯಂ**, ಕ.ಸಾ.ಪ, ಬೆಂಗಳೂರು.

ವಾಮನ ಬೇಂದ್ರೆ. : ೧೯೭೯, **ಲಕ್ಷ್ಮೀಶನ ಜೈಮಿನಿಭಾರತ -ಒಂದು ಅಧ್ಯಯನ**, ಗೀತಾಬುಕ್‌ಹೌಸ್, ಮೈಸೂರು.

ವಿಮಲ, ಎನ್.ವಿ. : ೧೯೭೫, **ಹರಿಶ್ಚಂದ್ರನ ಕಥೆ ಭಾರತೀಯ ಸಾಹಿತ್ಯದಲ್ಲಿ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ವಿದ್ಯಾಶಂಕರ, ಎಸ್. : ೧೯೮೫, **ಚಾಮರಸನ ಪ್ರಭುಲಿಂಗಲೀಲೆ** (ಗದ್ಯಾನುವಾದ), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ವಿಷ್ಣುತೀರ್ಥ, ಪಿ. : ೧೯೬೩, **ಪಂಪಾ ಮಹಾತ್ಮಂ**, ನವಬೃಂದಾವನ, ಆನೆಗುಂದಿ.

ವೀರಣ್ಣ, ಸಿ. : ೧೯೯೧, **ಕನ್ನಡ ಕಾವ್ಯ ಮತ್ತು ಹೆಣ್ಣು**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ವೀರಣ್ಣ ರಾಜೂರ : ೧೯೮೫, **ಕನ್ನಡ ಸಾಂಗತ್ಯ ಸಾಹಿತ್ಯ**, ಕ.ಸಾ.ಪ, ಬೆಂಗಳೂರು.

ವೀರನಾಯಕ ಹೆಚ್.ವಿ. : ೧೯೮೧, **ದುರ್ಗದ ಧವಳ ಕೀರ್ತಿ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

ವೆಂಕಟಾಚಲಶಾಸ್ತ್ರಿ, ಟಿ.ವಿ. : ೧೯೮೭, **ಪ್ರಾಚೀನ ಕನ್ನಡ ಸಾಹಿತ್ಯ : ಕೆಲವು ನೋಟಗಳು**, ಗೀತಾ ಬುಕ್ ಹೌಸ್, ಮೈಸೂರು.

ವೆಂಕಟಾಚಲಶಾಸ್ತ್ರೀ : ೧೯೮೭, **'ಪಂಪ'**, ಕ.ಸಾ.ಅ, ಬೆಂಗಳೂರು.

ವೆಂಕಟಾಚಲಶಾಸ್ತ್ರೀ, ಟಿ.ವಿ. : ೧೯೯೫, **ಪಂಪಕವಿ ವಿರಚಿತಂ ಆದಿಪುರಾಣಂ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ವೆಂಕಟರಾಮಪ್ಪ, ಕೆ. : ೧೯೭೫, **ಕವಿರಾಘವಾಂಕ**, ಡಿ.ವಿ.ಕೆ. ಮೂರ್ತಿ, ಮೈಸೂರು.

ವೆಂಕಟಸುಬ್ಬಯ್ಯ ಜಿ. ಮತ್ತು ಇತರರು : ೧೯೮೧ **ನೇಮಿಚಂದ್ರ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ವೆಂಕಣ್ಣಯ್ಯ, ಟಿ. ಎಸ್. (ಸಂ) : ೧೯೬೩, **ಹರಿಶ್ಚಂದ್ರ ಕಾವ್ಯ ಸಂಗ್ರಹ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ವೆಂಕಣ್ಣಯ್ಯ ಟಿ.ಎಸ್. (ಸಂ) : ೧೯೭೫, **ನಾಗವರ್ಮನ ಕರ್ನಾಟಕ ಕಾದಂಬರಿ ಸಂಗ್ರಹ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶಂಕರ್ ಕೆದಿಲಾಯ : ೧೯೭೪, **ಪೆರಿಯಾಪುರಾಣಂ**, ಮದ್ರಾಸ್, ವಿಶ್ವವಿದ್ಯಾಲಯ, ಮದ್ರಾಸ್.

ಶಂಕರಯ್ಯ : ೧೯೯೩, **ಯುರೋಪಿನ ಮಧ್ಯಕಾಲೀನ ವೀರಕಾವ್ಯ ಕಥನಗಳು**, ಪ್ರಸಾರಾಂಗ, ಬೆಂ.ವಿ.ವಿ, ಬೆಂಗಳೂರು.

ಶಂಕರನಾರಾಯಣರಾವ್. ಎಚ್. ಎಂ. ಮತ್ತು ಇತರರು : ೧೯೭೩, **ಎರಡನೇ ನಾಗವರ್ಮ**, ಐ.ಬಿ.ಎಚ್. ಬೆಂಗಳೂರು.

ಶಂಕರನಾರಾಯಣರಾವ್ : ೧೯೭೩, **ಒಂದನೆಯ ನಾಗವರ್ಮ**, ಐ.ಬಿ.ಎಚ್, ಬೆಂಗಳೂರು.

ಶರ್ಮ ತಿ.ತಾ. (ಸಂ) : ೧೯೭೪, **ಕಂಠೀರವ ನರಸರಾಜ ವಿಜಯಂ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶಾಂತಿನಾಥ ದಿಬ್ಬದ : ೧೯೯೪, **ಪಂಪಭಾರತ : ಒಂದು ಸಾಂಸ್ಕೃತಿಕ ಅಧ್ಯಯನ**, ಕ.ಸಾ.ಪ, ಬೆಂಗಳೂರು.

ಶಾಮರಾಯ, ತ.ಸು. : ೧೯೮೮, **ಕನ್ನಡ ಸಾಹಿತ್ಯ ಚರಿತ್ರೆ : ಒಂದು ಸಮೀಕ್ಷೆ**, ಪುಸ್ತಕಾಲಯ, ಮೈಸೂರು.

ಶಿವಕುಮಾರ, ಕೆ.ವೈ. : ೧೯೯೩, **ಜನ್ನ ಮತ್ತು ಅವನ ಕೃತಿಗಳು**, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶಿವಮೂರ್ತಿಶಾಸ್ತ್ರಿ : ೧೯೭೧, **ಮಹಾಕವಿ ಷಡಕ್ಷರದೇವ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶಿವರಾಮಯ್ಯ : ೧೯೯೩, **ಸಾಹಿತ್ಯ ಮತ್ತು ಚರಿತ್ರೆ**, ಕ.ಸಾ.ಅ, ಬೆಂಗಳೂರು.

ಶಿವರುದ್ರಪ್ಪ, ಜಿ.ಎಸ್.(ಸಂ): ೧೯೭೬, **ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ-೩**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಶಿವರುದ್ರಪ್ಪ ಜಿ.ಎಸ್. ಶಾಸ್ತ್ರಿ ಬಿ. ಎಸ್. : ೧೯೫೫, **ಶಬರಶಂಕರವಿಳಾಸ ಪ್ರಬಂಧಂ**, ಅಚ್ಯುತ ಸಾಹಿತ್ಯ ಮಾಲೆ, ಮೈಸೂರು.

ಶ್ರೀ ಕಂಠಯ್ಯ, ಕೆ. : ೧೯೮೩, **ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶ್ರೀಕಂಠಯ್ಯ ತೀ.ನಂ. : ೧೯೯೨, **ಭಾರತೀಯ ಕಾವ್ಯಮೀಮಾಂಸೆ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಶ್ರೀನಿವಾಸ ಅಯ್ಯಂಗಾರ್ : ೧೯೭೩, **ಕನ್ನಡ ವಾಲ್ಮೀಕಿ ರಾಮಾಯಣ**(ಎರಡು ಸಂಪುಟಗಳು), ಡಿ.ವಿ.ಕೆ. ಮೂರ್ತಿ, ಮೈಸೂರು.

ಶ್ರೀನಿವಾಸ ಹಾವನೂರು : ೧೯೭೪, **ಹೊಸಗನ್ನಡದ ಅರುಣೋದಯ**, ಕ.ಅ.ಸಂಸ್ಥೆ, ಮೈ.ವಿ.ವಿ, ಮೈಸೂರು.

ಶ್ರೀಪಾದ ರಘುನಾಥ ಭಡೆ : ೧೯೯೦, **ವಾಲ್ಮೀಕಿ ರಾಮಾಯಣ : ಶಾಪ ಮತ್ತು ವರ**, (ಅನು) : ಸರಸ್ವತಿ ಗಜಾನನ ರಿಸಬೂಡ, ಗೀತಾ ಬುಕ್ ಹೌಸ್, ಮೈಸೂರು.

ಶ್ರೀ ವಿಜಯ : **ಕವಿರಾಜಮಾರ್ಗಂ**, (ಸಂ): ಎಂ.ವಿ. ಸೀತಾರಾಮಯ್ಯ : ೧೯೬೮, ಮೈ.ವಿ.ವಿ, ಮೈಸೂರು.

ಷಡಕ್ಷರದೇವ : **ಶಬರಶಂಕರ ವಿಳಾಸಂ**, (ಸಂ) : ಸುಂಕಾಪುರ, ಎಂ. ಎಸ್. ೧೯೭೬, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಂತಾನಂ, ಕೆ. : ೧೯೮೩, **ಭಾರತೀಯ ಸಾಹಿತ್ಯ ಸಂಕಲನ**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸರ್ವಜ್ಞ : ೧೭೦೦, **ಸರ್ವಜ್ಞನ ವಚನಗಳು** (ಸಂ), ಚನ್ನಪ್ಪ ಉತ್ತಂಗಿ : ೧೯೭೦, ಮೈಸೂರು ರಾಜ್ಯದ ಸಾ.ಸಂ.ಅ. ಇಲಾಖೆ, ಮೈಸೂರು.

ಸಿ.ಪಿ.ಕೆ. : ೧೯೭೪, **ಕರ್ನಾಟಕ ಕಾದಂಬರಿ : ಒಂದು ವಿಮರ್ಶಾತ್ಮಕ, ತೌಲನಿಕ ಅಧ್ಯಯನ**, ಮೈ.ವಿ.ವಿ, ಮೈಸೂರು.

ಸಿದ್ಧಲಿಂಗಯ್ಯ, ಜಿ.ಎಸ್. (ಸಂ) : ೧೯೯೭, **ಶ್ರೀ ಸಿದ್ಧಲಿಂಗೇಶ್ವರ ವಚನ ಸಂಗ್ರಹ**, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತುಮಕೂರು.

ಸೀತಾರಾಮಯ್ಯ, ಎಂ.ವಿ. (ಸಂ) : ೧೯೯೦, **ಕುಮಾರವ್ಯಾಸ ಭಾರತ ಸಂಗ್ರಹ**, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

ಸೀತಾರಾಮಾಚಾರ್, ಎಚ್ : ೧೯೭೪, **ಕುಮಾರ ವಾಲ್ಮೀಕಿ : ಒಂದು ಅಧ್ಯಯನ**, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಸುಂಕಾಪುರ, ಎಂ.ಎಸ್ (ಸಂ) : ೧೯೭೬, **ಮಹಾಕವಿ ಷಡಕ್ಷರದೇವ ವಿರಚಿತ ಶಬರ ಶಂಕರ ವಿಳಾಸಂ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸುಬ್ಬರಾವ್, ಬಿ.ಎಸ್. : ೧೯೮೬, **ನಡುಗನ್ನಡ ಸಾಹಿತ್ಯದಲ್ಲಿ ವಿಡಂಬನೆ.** (ಪಿಎಚ್.ಡಿ ಪ್ರಬಂಧ) ಮಧುರೈ ವಿಶ್ವವಿದ್ಯಾಲಯ, ಮಧುರೆ.

ಸುರಂಗಕವಿ : ೧೫೦೦, **ತ್ರಿಷಷ್ಟಿ ಪುರಾತನ ಚರಿತ್ರೆ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸುಂಕಾಪುರ ಎಂ.ಎಸ್. (ಸಂ) : ೧೯೭೪ **ಹರಳಯ್ಯ ಚರಿತ್ರೆ**, ಶ್ರೀ ಮುರುಘಾಮಠ, ಧಾರವಾಡ.

ಸೂರ್ಯನಾರಾಯಣ ಎಲ್.ವಿ. : ೧೯೮೮, **ರಾಘವಾಂಕ : ಒಂದು ಅಧ್ಯಯನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಹಳಕಟ್ಟಿ (ಸಂ) : ೧೯೩೦, **ಬಸವೇಶ್ವರ ವಚನಗಳು**, ಶಿವಾನುಭವ ಗ್ರಂಥಮಾಲೆ, ವಿಜಾಪುರ.

ಹಳ್ಳಿಕೇರಿ, ಎಫ್.ಟಿ. : ೧೯೯೬, **ಕೆರೆಯ ಪದ್ಮರಸ ಮತ್ತು ಆತನ ವಂಶಜರು - ಒಂದು ಅಧ್ಯಯನ**, ವಿಕಾಸ ಪ್ರಕಾಶನ, ಕಮಲಾಪುರ.

ಹುಗ್ಗಿ, ಪಿ.ಎಂ. : ೧೯೯೧, **ಷಡಕ್ಷರದೇವ : ಒಂದು ಅಧ್ಯಯನ**, (ಪಿಎಚ್.ಡಿ. ಪ್ರಬಂಧ), ಕ.ವಿ.ವಿ, ಧಾರವಾಡ.

೨. ಜಾನಪದ ಸಾಹಿತ್ಯ

ಅಂಬಳಿಕೆ ಹಿರಿಯಣ್ಣ : ೧೯೭೮, **ಮಲೆನಾಡ ಜನಪದ ಸಂಪ್ರದಾಯಗಳು**, ಮೈಸೂರು.

ಕೃಷ್ಣಮೂರ್ತಿ ಹನೂರು : ೧೯೮೭, **ಜನಪದ ವೀರ ಗೀತೆಗಳು**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕೃಷ್ಣಶರ್ಮ ಬೆಟಗೇರಿ : ೧೯೭೬, **ಕನ್ನಡ ಜಾನಪದ ಸಮೀಕ್ಷೆ**, ಧಾರವಾಡ.

ಕೃಷ್ಣಸ್ವಾಮಿ ಕ.ರಾ. : ೧೯೬೫, **ಪಾಳೆಯಗಾರರ ಪದಗಳು**, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು.

ಗದ್ದಗಿಮಠ ಬಿ.ಎಸ್. : ೧೯೬೩ **ಕನ್ನಡ ಜಾನಪದ ಗೀತೆಗಳು**, ಕ.ವಿ.ವಿ, ಧಾರವಾಡ.

ಗುರುಮೂರ್ತಿ,ಕೆ. ಜ. : ೧೯೭೯, **ಜನಪದ ಸಮಾಜ ಮತ್ತು ಸಂಸ್ಕೃತಿ**, ಕನ್ನಡ ಅಧ್ಯಯನ ಪೀಠ, ಕ.ವಿ.ವಿ, ಧಾರವಾಡ.

ಚೆನ್ನಣ್ಣ ವಾಲೀಕಾರ : ೧೯೮೩, **ಗುಲ್ಬರ್ಗಾ ಜಿಲ್ಲೆಯ ಮೊಹರಂ ಪದಗಳು**, ಮೈಸೂರು.

ಚೆನ್ನಬಸಪ್ಪ, ಗೊ.ರು. : ೧೯೭೭, **ಕರ್ನಾಟಕ ಜಾನಪದ ಕಲೆಗಳು**, ಕ.ಸಾ.ಪ, ಬೆಂಗಳೂರು.

ಚನ್ನಬಸಪ್ಪ, ಗೊ.ರು. (ಸಂ) : ೧೯೭೭, **ಹೊನ್ನಬಿತ್ತೇವು ಹೊಲಕೆಲ್ಲ** (ಸಂಸ್ಮರಣ ಗ್ರಂಥ), ತರೀಕೆರೆ, ಚಿಕ್ಕಮಗಳೂರು.

ಜವರೇಗೌಡ ದೇ : ೧೯೭೬, **ಜಾನಪದ ಅಧ್ಯಯನ**, ಡಿ.ವಿ.ಕೆ. ಮೂರ್ತಿ, ಮೈಸೂರು.

ಪರಮಶಿವಯ್ಯ, ಜಿ. ಶಂ. : ೧೯೭೯, **ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಪುರುಷೋತ್ತಮ ಬಿಳಿಮಲೆ : ೧೯೯೦, **ಕರಾವಳಿ ಜಾನಪದ**, ಮಂಗಳ ಗಂಗೋತ್ರಿ, ಮಂಗಳೂರು.

ಮಲ್ಲಿಕಾರ್ಜುನ ಶಿ.ಲಠ್ಠೆ (ಸಂ) : ೧೯೮೧, **ಉತ್ತರ ಕರ್ನಾಟಕದ ಜನಪದ ನಂಬಿಕೆಗಳು**, ಪ್ರಶಾಂತ ಪ್ರಕಾಶನ, ಮುತನಾಳ.

ರಂಗಪ್ಪ, ಎಂ. : ೧೯೭೧, **ಸುಂಕಿಮಲೆ ಪರಮಾರ್ಥ**, ಮೊಳಕಾಲ್ಮೂರು.

ರಾಜಶೇಖರ, ಪಿ.ಕೆ. : ೧೯೭೦, **ಪಿರಿಯಾಪಟ್ಟಣದ ಕಾಳಗ**, ಹೊನ್ನಾರು ಜಾನಪದ ಗಾಯಕರು, ಮೈಸೂರು.

ಲಿಂಗಯ್ಯ, ಡಿ. : ೧೯೭೬, **ಕರ್ನಾಟಕ ಜನಪದ ಕಾವ್ಯಗಳು**, ದಿನಕರ ಪ್ರಕಾಶನ, ಬೆಂಗಳೂರು.

ವಿವೇಕ ರೈ, ಬಿ.ಎ. : ೧೯೮೫, **ಆನ್ವಯಿಕ ಜಾನಪದ**, ಮಂಗಳ ಗಂಗೋತ್ರಿ, ಮಂಗಳೂರು.

ವಿವೇಕ ರೈ, ಬಿ.ಎ. : ೧೯೮೫, **ತುಳು ಜನಪದ ಸಾಹಿತ್ಯ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ವೆಂಕಾರೆಡ್ಡಿ ಮಧು : ೧೯೯೫, **ಹೊನ್ನಮ್ಮನ ಹದಿಬದೆಯ ಧರ್ಮ**, ಕ.ಸಾ.ಪ, ಬೆಂಗಳೂರು.

ಶ್ರೀ ಕಂಠಕೂಡಿಗೆ : ೧೯೮೮, **ಕೊಂಡಮಾಮ** (೨ ನೇ ಮುದ್ರಣ), ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೩. ಚಾರಿತ್ರಿಕ ಆಕರಗಳು

ಅಬ್ದುಲ್ ಸತ್ತಾರ್ : ೧೯೯೭, **ತರೀಕೆರೆಯ ಪಾಳೆಯಗಾರರು**, ಶ್ರೀಲೋಕಪಾವನಿ ಪ್ರಕಾಶನ, ಪಾಂಡವಪುರ.

ಆಂಜನೇಯ, ಸಿ. : ೧೯೯೫, **ಅಂತಃಕರಣದ ನಂಟು**, ಮದಕರಿ ಪ್ರಕಾಶನ, ಚಿತ್ರದುರ್ಗ.

ಆಚಾರ್ಯ, ಎ.ಎಸ್. ಎಸ್. (ಅನು) : ೧೯೮೩, **ಕೃಷ್ಣದೇವರಾಯನ ದಿನಚರಿ**, ಬಿ.ಎಂ.ಶ್ರೀ ಸ್ಮಾರಕ, ಪ್ರತಿಷ್ಠಾನ, ಬೆಂಗಳೂರು.

ಆಲೂರು ವೆಂಕಟರಾಯರು : ೧೯೩೦, **ಕರ್ನಾಟಕದ ವೀರರತ್ನಗಳು**, ರಾಮಾಶ್ರಯ ಬುಕ್‌ಡಿಪೋ, ಧಾರವಾಡ.

ಕೃಷ್ಣ, ಎಂ.ಎಚ್ : ೧೯೮೧, **ಕನ್ನಡ ನಾಡಿನ ಚರಿತ್ರೆ** (ಭಾಗ-೩), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕೃಷ್ಣಯ್ಯ, ಡಿ.ಎನ್. : ೧೯೭೪, **ಕೊಡಗಿನ ಇತಿಹಾಸ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕೃಷ್ಣರಾವ್, ಎಂ.ವಿ. ಕೇಶವಭಟ್ಟ ಎಂ (ಸಂ) : ೧೯೭೦, **ಕರ್ನಾಟಕ ಇತಿಹಾಸ ದರ್ಶನ**, ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

ಕಪಟರಾಳ ಕೃಷ್ಣರಾವ್ : ೧೯೭೦, **ಕರ್ನಾಟಕ ಸಂಸ್ಕೃತಿಯ ಸಂಶೋಧನೆ**, ಉಷಾ ಸಾಹಿತ್ಯ ಮಾಲೆ, ಮೈಸೂರು.

ಕಪಟರಾಳ ಕೃಷ್ಣರಾವ್ : ೧೯೭೭, **ಸುರಪುರ ಸಂಸ್ಥಾನ ಇತಿಹಾಸ**, ಮಂಜುನಾಥ ಪ್ರಕಾಶನ, ಬೆಂಗಳೂರು.

ಕಲಬುರ್ಗಿ, ಎಂ.ಎಂ. : ೧೯೯೪, **ಕರ್ನಾಟಕದ ಕೈಫಿಯತ್ತುಗಳು**, ಪ್ರಸಾರಾಂಗ, ಕ.ವಿ.ವಿ, ಹಂಪಿ.

ಕೋಸಾಂಬಿ, ಡಿ.ಡಿ. (ಮೂಲ), ನಗರಗೆರೆ ರಮೇಶ್ (ಅನು) : ೧೯೯೩, **ಆರ್ಯರು**, ಬೆಳ್ಳಿಚುಕ್ಕಿ, ಬುಕ್ ಟ್ರಸ್ಟ್, ಬೆಂಗಳೂರು.

ಗಂಡುಗಲಿ, ಟಿ.ಎನ್. : ೧೯೯೫, **ಪ್ರಮುಖ**, ಮದಕರಿ ಪ್ರಕಾಶನ, ಚಿತ್ರದುರ್ಗ.

ಗಂಡುಗಲಿ, ಟಿ.ಎನ್. : ೧೯೯೫, **ನೋಡಬನ್ನಿ ಚಿತ್ರದುರ್ಗ**, ಮದಕರಿ ಪ್ರಕಾಶನ, ಚಿತ್ರದುರ್ಗ,

ಗಂಡುಗಲಿ ಟಿ.ಎನ್. : ೧೯೯೫, **ದೇಶದ್ರೋಹಿ ದೊಡ್ಡ ಮದಕರಿ**, ಮದಕರಿ ಪ್ರಕಾಶನ, ಚಿತ್ರದುರ್ಗ.

ಗಿರಿಜ, ಟಿ. : ೧೯೯೧, **ಚಿತ್ರದುರ್ಗ ಜಿಲ್ಲಾದರ್ಶಿನಿ**, ರೇಖಾ ಪ್ರಕಾಶನ, ದಾವಣಗೆರೆ.

ಚಂದ್ರಶೇಖರ್, ಎಸ್. : ೧೯೯೭, **ಕರ್ನಾಟಕ ಚರಿತ್ರೆ ಸಂಪುಟ - ೭**, ಪ್ರಸಾರಾಂಗ, ಕ.ವಿ.ವಿ, ಹಂಪಿ.

ಚಂದ್ರಶೇಖರಯ್ಯ, ಬಿ.ಎಂ. : ೧೯೮೭, **ಕೂಡ್ಲಿಗಿ ತಾಲ್ಲೂಕು ದರ್ಶನ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ಚನ್ನಕ್ಕ ಎಲಿಗಾರ : ೧೯೮೭, **ಪ್ರಾಚೀನ ಕರ್ನಾಟಕದ ರಾಣಿಯರು**, ಗೌರೀಶ ಮುದ್ರಣಾಲಯ, ಧಾರವಾಡ.

ಚಿದಾನಂದಮೂರ್ತಿ ಎಂ. : ೧೯೬೬, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಚಿದಾನಂದಮೂರ್ತಿ, ಎಂ. : ೧೯೮೪, **ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು**, ಬೆಂಗಳೂರು.

ಚಿದಾನಂದಮೂರ್ತಿ, ಎಂ. : ೧೯೯೧, **ಕರ್ನಾಟಕ ಸಂಸ್ಕೃತಿ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚೆಲುವರಾಜನ್, ವಿ.ಆರ್. : ೧೯೮೭, **ಪಾವಗಡ ತಾಲೂಕು ದರ್ಶನ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ಜಯತೀರ್ಥ ರಾಜಪುರೋಹಿತ : ೧೯೭೩, **ಸುರಪುರದ ಶೂರ ನಾಯಕರು**, ಐ.ಬಿ.ಎಚ್, ಬೆಂಗಳೂರು.

ಜೋಗನ್‌ಶಂಕರ್ : ೧೯೯೫, **ಗ್ರಾಮಸಮಾಜ**, ಜೀವಪ್ರಕಾಶನ, ಮೈಸೂರು.

ದಾಸೇಗೌಡ, ಹೆಚ್. ಆರ್.: ೧೯೮೮, **ಭಾರತದ ಸಂವಿಧಾನ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ದೇವರಕೊಂಡರೆಡ್ಡಿ (ಸಂ) : ೧೯೯೮, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ- ೧, ಬಳ್ಳಾರಿ ಜಿಲ್ಲೆ**, ಕ.ವಿ, ಹಂಪಿ.

ದೇಸಾಯಿ ಪಾಂಡುರಂಗರಾಯರು : **ಮುದಗಜಮಲ್ಲ**, ಮನೋಹರ ಗ್ರಂಥಭಂಡಾರ, ಧಾರವಾಡ.

ನಂಜಮ್ಮಣ್ಣಿ : ೧೯೭೪, **ಸಾಮಾಜಿಕ ಮಾನವಶಾಸ್ತ್ರ**, ಪ್ರಸಾರಾಂಗ, ಮೈ.ವಿ.ವಿ, ಮೈಸೂರು.

ನರಸಿಂಹಮೂರ್ತಿ, ಎ.ವಿ. : ೧೯೯೬, **ವಿಜಯನಗರ ನಾಣ್ಯ ಸಂಪತ್ತು**, ಪ್ರಸಾರಾಂಗ, ಮೈ.ವಿವಿ, ಮೈಸೂರು.

ನಾಗೇಗೌಡ ಎಚ್. ಎಲ್. : (೧೯೬೪-೧೯೭೫), **ಪ್ರವಾಸಿ ಕಂಡ ಇಂಡಿಯಾ**, (ಸಂಪುಟ-೧-೫), ಪ್ರಸಾರಾಂಗ, ಮೈ.ವಿ.ವಿ, ಮೈಸೂರು.

ನಿರುಪಮಾ (ಅನು) : ೧೯೭೯ **ಶ್ರೀ ಕೃಷ್ಣದೇವರಾಯನ ಆಮುಕ್ತ ಮಾಲ್ಯದ**, ಶ್ರೀ ಪ್ರಕಾಶನ, ಬೆಂಗಳೂರು.

ಪಂಚಮುಖಿ, ಆರ್. ಎಸ್. : ೧೯೬೬, **ಕರ್ನಾಟಕದ ಇತಿಹಾಸ**, ಸಾಧನ ಮುದ್ರಣಾಲಯ, ಧಾರವಾಡ.

ಪಂಡಿತ, ಟಿ. ಎಂ. : ೧೯೯೪, **ನಮ್ಮ ಅರಣ್ಯಗಳು**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪರಮೇಶ್ವರಪ್ಪ . ಟಿ. (ಸಂ) : ೧೯೯೬, **ಹಂಪಿ ಪರಂಪರೆ**, ಶ್ರೀ ವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್ ಆನೆಗುಂದಿ, ಹೊಸಪೇಟೆ.

ಪಾಂಡುರಂಗ, ಡಿ.ಆರ್. : ೧೯೯೦, **ದಕ್ಷಿಣ ಕನ್ನಡ ಜಿಲ್ಲೆಯ ಬೈರರು**, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

ಪುಟ್ಟಣ್ಣ ಎಂ. ಎಸ್. : ೧೯೯೭, **ಚಿತ್ರದುರ್ಗದ ಪಾಳಯಗಾರರು**, (ಮರು ಮದ್ರಣ), ಮದಕರಿ ಪ್ರಕಾಶನ, ಚಿತ್ರದುರ್ಗ.

ಪೂರ್ಣಚಂದ್ರ ತೇಜಸ್ವಿ : ೧೯೯೭, **ಕಾಡಿನ ಕಥೆಗಳು**, (ಕೆನೆತ್ ಆಂಡರ್‌ಸನ್ ಅನುಭವಗಳ ಸಂಗ್ರಹ ರೂಪಾಂತರ ೧-೨) ಪುಸ್ತಕ ಪ್ರಕಾಶನ, ಮೈಸೂರು.

ಬಾಲಗೋಪಾಲ್, ಕೆ. (ಅನು) ಎಚ್.ಎಸ್. ಶ್ರೀಮತಿ : ೧೯೯೮, **ಪ್ರಾಚೀನ ಭಾರತದ ಚರಿತ್ರೆ**, ಬೆಳ್ಳಿಚುಕ್ಕಿ ಬುಕ್‌ಟ್ರಸ್ಟ್, ಬೆಂಗಳೂರು.

ಭಟ್, ಎಸ್. ಆರ್. : ೧೯೮೪, **ಪ್ರಾಚೀನ ಭಾರತದಲ್ಲಿ ಜನಜೀವನ**, ಬೆಂಗಳೂರು.

ಮಹದೇವ ಬಣಕಾರ : ೧೯೮೬, **ಆಂಗ್ಲರ ಆಡಳಿತದಲ್ಲಿ ಕನ್ನಡ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಮರಿಯಪ್ಪ ಭಟ್. ಎಂ. : ೧೯೬೭, **ಕನ್ನಡ ಸಂಸ್ಕೃತಿ**, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

ಮುದ್ದಾಚಾರಿ ಬಿ. : ೧೯೮೨ **ಆಧುನಿಕ ಯುರೋಪಿನ ಚರಿತ್ರೆ** (೨ನೇ ಮುದ್ರಣ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ರಂಗನಾಥಶರ್ಮ, ಎನ್. : ೧೯೮೩, **ವೀರ ಕಂಪಣರಾಯ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ರಾಮರಾವ್ ಆರ್.ಎಸ್. : ೧೯೮೮, **ಎಚ್ಚಮನಾಯಕ**, (೨ನೇ ಮುದ್ರಣ), ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ರಾಮಶೇಷನ್ ನೀ.ಕೃ. : ೧೯೮೪, **ಮಧುಗಿರಿ**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ರವಿಕುಮಾರ್ ಎನ್.ಎಮ್. ಮತ್ತು ವೃಷಭೇಂದ್ರಚಾರ್, ಎ. (ಸಂ), ೧೯೯೮, **ಮುನ್ನಡೆಯ ಕೂಡ್ಲಿಗಿ**, ಹೇಮಂತ ಪ್ರಕಾಶನ, ಎಂ.ಬಿ. ಅಯ್ಯನಹಳ್ಳಿ.

ಲಕ್ಷ್ಮಣ್ ತೆಲಗಾವಿ (ಸಂ) : ೧೯೮೭, **ಹರತಿಸಿರಿ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

ಲಕ್ಷ್ಮಣ್ ತೆಲಗಾವಿ (ಸಂ) : ೧೯೭೬, **ಹುಲ್ಲೂರು ಶ್ರೀನಿವಾಸ ಜೋಯಿಸ ಐತಿಹಾಸಿಕ ಲೇಖನಗಳು**, ಚಿತ್ರದುರ್ಗ.

ಲಕ್ಷ್ಮಣ್ ತೆಲಗಾವಿ : ೧೯೯೯, **ಇದು ಚಿತ್ರದುರ್ಗ** (೨ನೇ ಮದ್ರಣ), ಸ್ವಾತಿ ಪ್ರಕಾಶನ, ಬೆಂಗಳೂರು.

ವರದರಾಜರಾವ್, ಜಿ. : ೧೯೬೩, **ಕುಮ್ಮಟಕೇಸರಿ**, ಉಷಾಸಾಹಿತ್ಯಮಾಲೆ, ಮೈಸೂರು.

ವರದರಾಜರಾವ್ ಜಿ. : ೧೯೮೫, **ಕುಮ್ಮಟದುರ್ಗ**, ಐ.ಬಿ. ಎಚ್. ಪ್ರಕಾಶನ, ಬೆಂಗಳೂರು.

ವಿರೂಪಾಕ್ಷಿ : ೧೯೯೫, **ಬಳ್ಳಾರಿ ಜಿಲ್ಲೆಯಲ್ಲಿ ಕಲೆಕ್ಟರುಗಳ ಆಳ್ವಿಕೆ (೧೮೦೦-೧೯೪೭): ಒಂದು ಸಮೀಕ್ಷೆ**. (ಎಂ.ಫಿಲ್. ಅಪ್ರಕಟಿತ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿರಕ್ತಮಠ, ಎಸ್.ಜಿ. : ೧೯೭೧, **ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವೆಂಕಟರಾಮಪ್ಪ, ಕೆ. : ೧೯೭೪, **ಶ್ರೀ ಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ವೇಮಣ್ಣ : ೧೯೮೨, **ಪೆರಿಯಾರರ ವಿಚಾರ ಶೀಲ ಲೇಖನಗಳು ಭಾಗ-೧**, ಚಿಂತಕರ ಚಾವಡಿ, ಗುಂಡೋಪಂತರ ಬೀದಿ, ಬೆಂಗಳೂರು.

ಶರ್ಮಾ, ಆರ್.ಎಸ್. : ೧೯೯೭, **ಪ್ರಾಚೀನ ಭಾರತ**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಶರ್ಮಾ, ಆರ್. ಎಸ್. : (ಅನು) : ಎನ್.ಪಿ.ಶಂಕರನಾರಾಯಣರಾವ್ : ೧೯೯೮, **ಭಾರತಕ್ಕೆ ಆರ್ಯರ ಪ್ರವೇಶ**, (ಅನು) : ಗುರುದತ್ : ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಶಿವಣ್ಣ, ಕೆ.ಎಸ್. (ಸಂ) : ೧೯೯೭, **ಕರ್ನಾಟಕ ಚರಿತ್ರೆ ಸಂಪುಟ - ೩**. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೇಷಶಾಸ್ತ್ರಿ ಆರ್. : ೧೯೮೨, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಶ್ರೀ ಕಂಠಯ್ಯ : ೧೯೮೩, **ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ**, ಗೀತಾ ಬುಕ್ ಹೌಸ್, ಮೈಸೂರು.

ಶ್ರೀಕಂಠಶಾಸ್ತ್ರಿ ಎಸ್. :೧೯೬೯, **ಭಾರತೀಯ ಸಂಸ್ಕೃತಿ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶ್ರೀನಿವಾಸ್ ಎಂ.ವಿ. ಮತ್ತು ಲಕ್ಷ್ಮಣ್ ತೆಲಗಾವಿ (ಸಂ) : ೧೯೭೬, **ಚಂದ್ರವಳ್ಳಿ**, ಜ.೧.ಸಂ.ಮಂಡಳಿ, ಚಿತ್ರದುರ್ಗ.

ಶ್ರೀನಿವಾಸನಾಯಕ, ಬಿ.ಎಸ್. : ೧೯೮೪, **ಚಿತ್ರದುರ್ಗದ ಕಾಮಗೇತಿ ಅರಸರು**, ಸರ್ಜಾರಾಮಸ್ವಾಮಿ ನಾಯಕ, ತರೀಕೆರೆ.

ಶ್ರೀನಿವಾಸ ಪಾಡಿಗಾರ : ೧೯೮೭, **ಪುರಾತತ್ವಶಾಸ್ತ್ರ ಪರಿಚಯ**, ಗಾಯತ್ರಿ ಪ್ರಕಾಶನ, ಧಾರವಾಡ.

ಶ್ರೀನಿವಾಸ ರಿತ್ತಿ (ಸಂ) : ೧೯೮೫, **ಕರ್ನಾಟಕ ಗ್ರಾಮ ಸೂಚಿ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಷೇಕ್ ಅಲಿ, ಬಿ. (ಸಂ) : ೧೯೯೭, **ಕರ್ನಾಟಕ ಚರಿತ್ರೆ ಸಂಪುಟ- ೫**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಷೇಕ್ ಅಲಿ, ಬಿ. : ೧೯೯೭, **ಕರ್ನಾಟಕ ಚರಿತ್ರ ಸಂಪುಟ - ೪**. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸತ್ಯನಾಥ ಅಯ್ಯರ್ (ಮೂಲ) : **ಪ್ರಾಚೀನ ಭಾರತ,** (ಅನು) : ಆನವಟ್ಟಿ, ಎಂ.ಆರ್. : ೧೯೮೨, ಕನ್ನಡ ಅಧ್ಯಯನ ಪೀಠ, ಕ.ವಿ.ವಿ, ಧಾರವಾಡ.
ಸತ್ಯನಾರಾಯಣ ಹೆಚ್.ವಿ. : ೧೯೯೫, **ದಕ್ಷಿಣ ಧ್ರುವ,** ಬೆಂಗಳೂರು.
ಸದಾನಂದ ಕನವಳ್ಳಿ (ಅನು) : ೧೯೯೨, **ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಸದಾಶಿವಪ್ಪ, ಕುಂಬಾ. : ೧೯೯೬, **ಹರಪನಹಳ್ಳಿ ಪಾಳೆಯಗಾರರು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಸರಗಣಾಚಾರಿ ಎಸ್.ಎಮ್. ೧೯೯೮, **ಸಮಾಜ ಅಧ್ಯಯನ,** ಜಯಶ್ರೀ ಪ್ರಕಾಶನ, ಬಾಗಲಕೋಟೆ.
ಸಾಲೆತ್ತೊರೆ ಬಿ.ಎ. ಮತ್ತು ದೇಸಾಯಿಪಾಂಡುರಂಗರಾಯರು, ೧೯೭೯, **ಕನ್ನಡ ನಾಡಿನ ಚರಿತ್ರೆ ಭಾಗ-೧** (ಮರು ಮುದ್ರಣ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಸಿದ್ಧವೀರೇಗೌಡ, ಎಲ್ : (೧೯೭೯) **ಮಾನವನ ಉಗಮ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
ಸುಂದರ, ಅ. (ಸಂ) : ೧೯೯೭, **ಕರ್ನಾಟಕ ಚರಿತ್ರೆ ಸಂಪುಟ-೧,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಸುಜಾತಾ, ಎಚ್. ಎಸ್. : ೧೯೮೫, **ಹಾಗಲವಾಡಿ ಪಾಳೆಯಗಾರರು,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
ಸುರೇಂದ್ರರಾವ್, ಬಿ. (ಸಂ) : ೧೯೯೭, **ಕರ್ನಾಟಕ ಚರಿತ್ರೆ ಸಂಪುಟ - ೨,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಸೆಬಾಸ್ಟಿಯನ್ ಜೋಸೆಫ್ (ಸಂ) : ೧೯೯೭,**ಕರ್ನಾಟಕ ಚರಿತ್ರೆ ಸಂಪುಟ-೬,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಹಿರೇಮಠ, ಬಿ.ಆರ್. : ೧೯೮೬, **ಶಾಸನಗಳಲ್ಲಿ ಕರ್ನಾಟಕ ವರ್ತಕರು,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಇಂಗ್ಲೀಷ್ ಭಾಷೆಯ ಅಂತರಶಿಸ್ತೀಯ ಆಕರಗಳು

Arjan Singh : 1973, **Tiger Haven**, Macmillan London Ltd., London.
Basham, A.L. (Ed) : 1991, **A cultural History of India,** Oxford University press, Delhi.
Blackburn Stuart and Ramanujan A.K. (Ed.) : 1986, **Another Harmony,** Oxford University press, Delhi.
Buchanan Francis : 1807, **Southern India,** (A Journey from Madras through the countries of Mysore, Canara and Malabar) Madras.
Burton Stein : 1997, **The new Cambridge History of India : Vijayanagara,** Cambridge University press, Cambridge.
Charles Philp Brown (tra) : 1988, **The wars of the Rajas being the History of Anantapuram,** Asian educational services, New Delhi.
Claude Levi - Strauss : 1963, **Structural Anthropology,** Britain.
Desai, P.B. : 1970, '**History of Karnataka from Pre History to unification,** Dharwad.
Dorson, R.M. (Ed): 1972, **Folklore and Folklife,** Chicago university press, Chicago.
Elwin Verrier : 1949, **Myths of Middle India,** Madras.
Francis, W. (Ed). : 1904, **Madras district Gazetteer,** Bellary District, Govt. press, Madras.
Gee, E.P : 1969, **The Wild life of India,** Collins press, London & Glasgow.
Hodder M. Westropp : 1970, **Primitive Symbolism,** New Delhi.
Hrnold (David) and Hardiman (ed.) : 1996, **Subltern Studies Vol-8,** essays in honour of Ranjit Guha, Delhi.
Jim Corbett, 1967, **Jungle lore,** Oxford University Press, Calcutta.
Jack Denton Scott: 1959, **Forests of the Nights,** Jaico publishing house, Bombay.
Jyotsna K. Kamat: 1980, **Social life in Medieval Karnataka,** Abhinav publications, New Delhi.
Long Hurst : 1998, **Hampi ruins,** Asian Educational services, Madras.
Kadetotad, N.K: 1977, **Religion and Society among the Harijans,** Karnataka university, Dharwad.
Kane, P.V. : **History of Dharmashastra,** Vol-II, Part-II Bhandarkar Oriental Research Institute, Pune.
Kelshall, J. : 1872, **Madras district Gazetteer,** Bellary, Vol-V. Govt. press, Madras.
Khan Saheb Jamshed Batt : 1967, **Shikar,** Jaico publishing House, Bombay.
Kosambi D.D. : 1956, **An introduction to study of Indian History,** Bombay.
Kosambi, D.D. : 1962, **Myth and Reality,** Bombay.
Kosambi, D.D. : 1976, **The cultural and civilization of ancient India,** New Delhi.
Kroeber, A.L.: 1976, **Anthropology,** New Delhi.

Maclean C.D. (Ed.): 1987, **Manual of the Administration, Madras presidency,** (Vol-1), A.E.S, New Delhi.
Majumdar, A.K. : 1972, **Elements of Indian culture,** Bombay.
Majumdar, R.C.: 1957, **The vedic Age,** Vol-1, George Allen & Unwin Ltd., London.
Muddachari B. : 1969, **Mysore Maratha relations in the 17th century,** Prasaranga, University of Mysore, Mysore.
Narasimha Murthy, A.V.: 1975, **Coins of Karnataka,** Geeta Book House, Mysore.
Nilakanta Shastri K.A. : 1958, **History of south India,** Madras.
Nirmal Kumar Bose : 1961, **Cultural Anthropology,** New Delhi.
Pargiter, F.E. : 1979, **Ancient Indian Traditions,** Cosmo Publications, New Delhi.
Periyar E.V. Ramasami : 1983, **God and Man,** Madras.
Prater, S.H. : 1971, **Indian Animals,** Bombay Natural History Society, Bombay.
Rice, Lewis, B : 1903, **Epigraphia carnatica,** Vol-9-11 Government Press, Bangalore.
Rizvi S.A.A. : 1987, **The Wonder that was India,** (1200-1700), Vol-II (First publications), Sidgwick and Jackson, London.
Robort C. Kashi, N.Singh Rana, P.S. Singh : 1977, **Man, Culture and Settlement**, Kalyani Publications, New Delhi.
Robert Sewell: 1987, **India before the English,** Asian educational Services, Delhi.
Ronald E.Butchart : 1986, **Local Schools** (Exploring their history), the American Association for State and Local history, Nashville, Tennessee.
Saki : 1998, **Making History,** Vol-1, Vimukthi Prakashana, Bangalore.
Satish Ganjoo : 1992 (reprint), **Dictionary of History,** Anmol Publications PVT Ltd., New Delhi.
Shettar, S.S. (Ed.) : 1982, **Memorial Stones,** institute of Indian History, Karnataka University, Dharward.
Srinivas M.N. : 1966, **Indians Villages,** Bombay.
Srinivas Ayyangar P.T. : 1988 **The Stone Age in India,** Aslan Educational Services, New Delhi.
Sri. Satyam B.N. : 1967, (Ed) : **Chitradurga District Gazetteer** ; Mysore State Gazetteer Govt press, Banglore.
Steve Jones, Robert Martin and David Pilbeam : 1995, **The Cambridge Encyclopedia of Human Evolution,** (reprint) University Press, Cambridge.
Thapar, Ramila : 1979, **Anciant Indian Social History : Some Interpretations,** Orient Longman, New Delhi.
Thurston Edgar: 1906, **Ethnographic Notes on Southern India,** Cosmo publication, Delhi.
Tim Ingold : 1988, **Hunters, Pastoralists and ranchers,** Cambridge University Press, Cambridge.
Venkataramanayya : 1990, **Vijayanagara Origin of the city and the Empire,** Asian educational Services, New Delhi.
Vinod Chand Pandey and Vinod Behari Lal : 1991, **The Mediaeval India,** (711 AD 1803 A.D.) Prakashan Kendra, Lucknow.

೫. ವಿಶ್ವಕೋಶ, ವರದಿ ಇತ್ಯಾದಿ

ಇಂಡಿಯನ್ ಆಂಟಿಕ್ವರಿ, ಸಂ ೨೭, ೨೯೯.
ಚಂದ್ರಶೇಖರ ಕಂಬಾರ (ಸಂ) : ೧೯೮೫, ಕನ್ನಡ ಜಾನಪದ ವಿಶ್ವಕೋಶ, (ಸಂಪುಟ ೧-೨) : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ತಿಪ್ಪೇರುದ್ರಸ್ವಾಮಿ, ಎಚ್ (ಸಂ) : ೧೯೮೭, ಕನ್ನಡ ವಿಶ್ವಕೋಶ, ಸಂ-೧೨, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
ಯಜ್ಞನಾರಾಯಣ ಉಡುಪ : ೧೯೯೪, ಪುರಾಣ - ಭಾರತಕೋಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
Bernard Johnston (Ed) : 1990, **Merit Students Encyclopedia,** Vol-12, Macmillan Educational Company, New York.
Charles Annandale (Ed): 1990. **The Modern cyclopaedia of Universal information,** Akashdeep publishing House, New Delhi.
David L.Sills (Ed) : 1972, **International Encyclopedia of the Social Science,** Vo-7, The Macmillan company and the free press, New York.
Maurice Burton and Robert Burton : 1990, **The Marshall Cavendish international wild life Encyclopedia,** Vol-1 to 25 Marshall Cavendish, NewYork.
William D.Halsey, Bernard Johnston : 1989, **Merit Students Encyclopeadia,** Macmillan Educational company, New York.
Roborn Me Hency (Ed) : 1992, **The New Encyclopaedia Britanica,** (Vol-6-9), Chicago.

Sills L. Devid (Ed) : 1972, **International Encyclopedia of Social Sciences,** (Vol-7 & 15) The Macmillan Company, New York.
Children's Britannica : 1988, Vol-9, (Fourth Edition) Encyclopedia Britannica, Inc London.
The Karnataka Forest Act : 1963, with Rules and Forms, 1987-88, Ramashray a Book depot, Dharward.
Havanoor L.G. : 1975, **Karnataka Backward Class Commission Report,** Government Press, Banglore.
Report : **Bellary District Castes Tribes and Race in 1901**, Govt Press, Madras.

೬. ಬೇಡ ಮತ್ತು ಇತರ ಜನಸಮುದಾಯಗಳಿಗೆ ಸಂಬಂಧಿಸಿದ ಆಕರಗಳು

ಆಚಾರ್ಯ ಸಿದ್ಧಾರ್ತಾನಂದಸ್ವಾಮಿಗಳು : **ವಾಲ್ಮೀಕಿ ಮತಧರ್ಮ**, ಶ್ರೀ ವಾಲ್ಮೀಕಿ ಗುರುಕುಲಾಶ್ರಮ, ಅಲ್ಲೀಪುರ, ಬಳ್ಳಾರಿ.
ಈಶ್ವರಪ್ಪ, ಎಂ.ಜಿ. : ೧೯೮೨, **ಮ್ಯಾಸಬೇಡರು**, ಐ.ಬಿ.ಎಚ್, ಬೆಂಗಳೂರು.
ಕಮಲಾಕ್ಷ, ಪಿ. : ೧೯೯೪, **ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ಕುಮಾರ್ ಎನ್. ಎಚ್. : ೧೯೯೧, **ಆದಿವಾಸಿಗಳು**, (೫ನೇ ಮುದ್ರಣ) ಕಾದಂಬರಿ ಲೋಕ, ಮೈಸೂರು.
ಕೃಷ್ಣಮೂರ್ತಿ ಹನೂರು : **ಮ್ಯಾಸಬೇಡರ ಸಂಸ್ಕೃತಿ**, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ಕೃಷ್ಣಯ್ಯ ಎ.ಡಿ. : ೧೯೭೯, **'ಛಲವಾದಿ ಜನಾಂಗ'**, ಮೈಸೂರು.
ಖಂಡೋಬಾ, ಪಿ.ಕೆ. : ೧೯೯೧, **'ಕರ್ನಾಟಕದ ಲಂಬಾಣಿಗಳು : ಒಂದು ಸಾಂಸ್ಕೃತಿಕ ಅಧ್ಯಯನ'**, ತೇಜಸಿಂಗ್ ರಾಠೋಡ್ ಮೆಮೋರಿಯಲ್ ಟ್ರಸ್ಟ್, ಗುಲಬರ್ಗಾ.
ಖಂಡೋಬಾ, ಪಿ.ಕೆ. : ೧೯೮೮, **ಲಂಬಾಣಿ ಸಂಸ್ಕೃತಿ**, ದಿ.ತೇಜಸಿಂಗ ರಾಠೋಡ್ ಮೆಮೋರಿಯಲ್ ಟ್ರಸ್ಟ್, ಗುಲಬರ್ಗಾ.
ಗುರಪ್ಪ ಸೂಡಿ : ೧೯೭೮, **ಅಪಾಯದ ಅಂಚಿನಲ್ಲಿ ವಡ್ಡರ (ಭೋವಿ) ಜನಾಂಗ**, ಗುರಪ್ಪಸೂಡಿ, ಶಹಾಬಾದ, ಗುಲಬರ್ಗಾ.
ಚನ್ನಬಸವಯ್ಯ ಹಿರೇಮಠ : ೧೯೯೫, **ಕುರುಗೋಡು ಸಿಂದರು** : **ಒಂದು ಅಧ್ಯಯನ**. ಅಗಡಿ ಸಂಸ್ಕೃತಿ ಪ್ರತಿಷ್ಠಾನ, ಕೊಪ್ಪಳ.
ಜೋಶಿ ಶಂ.ಬಾ. : ೧೯೩೬, **ಕರ್ನಾಟಕದ ವೀರಕ್ಷತ್ರಿಯರು ಅಥವಾ ಹಟ್ಟೀಕಾರರು**. ಮನೋಹರ ಗ್ರಂಥಭಂಡಾರ, ಧಾರವಾಡ.
ಢಂಗ ಡಿ.ಬಿ. : ೧೯೮೮, **ಜನಾಂಗ ಪರಿಚಯ**. ದೆರಿಯಾ ಪ್ರಕಾಶನ, ಧಾರವಾಡ.
ದೇವೇಂದ್ರ ಮಾಧವನವರ : ೧೯೯೨, **ಕನಕದಾಸರು ಬೇಡ ಜನಾಂಗದವರು**. ಚಾಲುಕ್ಯ ಪ್ರಕಾಶನ, ಜಾಲಿಹಾಳ, ಬದಾಮಿ.
ನಾಗರಾಜ ಮೈ.ನ. : ೧೯೮೫, **ಸೋಲಿಗರು**. ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
ನಿಂಗಣ್ಣಸಣ್ಣಕ್ಕಿ : ೧೯೮೦, **ಬುಡಬುಡಕಿಯರು**. ಐ.ಬಿ.ಎಚ್. ಪ್ರಕಶಾನ ಬೆಂಗಳೂರು.
ನೆಲ್ಲಿಸರ ಬಸವರಾಜ : ೧೯೮೦, **ಲಂಬಾಣಿಗರು**. ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
ನೆಲ್ಲಿಸರ ಬಸವರಾಜ : ೧೯೮೪, **ಸುಡುಗಾಡ ಸಿದ್ಧರು**. ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
ನಾಯಕ, ಎ.ಆರ್ : ೧೯೯೧, **ಸಗರನಾಡಿನ ಬೇಡರ ಸಂಪ್ರದಾಯಗಳು ಮತ್ತು ನಂಬಿಕೆಗಳು**, (ಅಪ್ರಕಟಿತ ಎಂ.ಫಿಲ್ ಪ್ರಬಂಧ) ಕನ್ನಡ ಅಧ್ಯಯನ ಸಂಸ್ಥೆ, ಗು.ವಿ.ವಿ, ಗುಲಬರ್ಗಾ.
ಬಸಪ್ಪನವರ್, ಸಿ.ಎಚ್. : ೧೯೯೦, **ಹುಲಿ ಸಾಮ್ರಾಜ್ಯ**, ವನಸುಮ ಪ್ರಕಾಶನ, ಬೆಂಗಳೂರು.
ಭಾನುಮತಿ, ವೈ.ಸಿ. : ೧೯೯೪, **ಮಲೆನಾಡು ಶೈವ ಒಕ್ಕಲಿಗರು: ಜಾನಪದೀಯ ಅಧ್ಯಯನ**, ಕೇಶವ ಪ್ರಕಾಶನ, ಮೈಸೂರು.
ಮುದ್ದೇಬಿಹಾಳ, ಆರ್.ಸಿ. : ೧೯೯೪, **ಬೇಡನಾಯಕರ ಪಾಡು**. ರಂಗನಗೌಡ, ಅಂಜಳ.

ರಾಜಣ್ಣ, ಆರ್. : ೧೯೮೨, ನಾಯಕ ಜನಾಂಗದ ಇತಿಹಾಸ, ಚಳ್ಳಕೆರೆ.
ರುದ್ರಪ್ಪ, ಕೆ. : ೧೯೯೫, ಮ್ಯಾಸನಾಯಕರು : ಒಂದು ಜನಾಂಗಿಕ ಅಧ್ಯಯನ, ಕ.ಸಾ.ಪ, ಬೆಂಗಳೂರು.
ವೀಣಾ ಎಂ.ಪಿ. : ೧೯೯೫, ಮ್ಯಾಸನಾಯಕ ಮತ್ತು ಊರು ನಾಯಕರ ಮನೆ, ಸಮಾಜ ಮತ್ತು ಸಂಸ್ಕೃತಿ ಅಧ್ಯಯನ, (ಅಪ್ರಕಟಿತ ಎಂ.ಫಿಲ್. ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿಶ್ವನಾಥ ಕಾರ್ನಾಡ : ೧೯೯೪, ತುಳುವರ ಮುಂಬಯಿ ವಲಸೆ : ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.
ವೀರನಾಯಕ, ಹೆಚ್.ವಿ. : ೧೯೮೭ (ದ್ವಿತೀಯ ಮುದ್ರಣ), ಕ್ಷಾತ್ರಾಂಶ ಪ್ರಬೋಧ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.
ಶಂಕರನಾರಾಯಣ ತೀ.ನಂ. : ೧೯೮೨, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.
ಶಂಕರನಾರಾಯಣ ತೀ.ನಂ. : ೧೯೮೮, ಕಾಡುಗೊಲ್ಲರು, (ಎರಡನೇ ಮುದ್ರಣ)ಬಿ.ಎಚ್. ಪ್ರಕಾಶನ, ಬೆಂಗಳೂರು.
ಶೀಗೆಹಳ್ಳಿ : ೧೯೯೨, ಬೇಡರವೇಷ, ನವಚೇತನ ಪ್ರಕಾಶನ, ಶಿರಸಿ (ಉ.ಕ).
ಸತ್ಯನಾರಾಯಣ, ಮೊ.ಮ. : ೧೯೭೯, ಈಡಿಗ ಜನಪದ ಸಂಪ್ರದಾಯಗಳು, ಸತ್ಯರೇವಾ ಪ್ರಕಾಶನ, ಮೈಸೂರು.
ಹೆಗಡೆ ಎಲ್.ಆರ್ : ೧೯೮೨ ಉತ್ತರ ಕರ್ನಾಟಕದ ಸಿದ್ಧಿ ಜನರು, ಐ.ಬಿ.ಎಚ್, ಬೆಂಗಳೂರು.

Diwan Bahadur, L.K. Anantha Krishna Iyer : 1935, **The Mysore Tribes and castes**, vol-1, Mysore university, Mysore.
Edgar Thurston, K. Rangachari : 1987, **Castes and Tibes of Southern India**, vol-1, A&B, Asian Educational Services, New Delhi.
Singh, K.S. : 1994, **The Scheduled Tribes**, Anthropological Survey of India, Oxford University Press, Delhi.

೭. ಲೇಖನ, ಇತ್ಯಾದಿ

ಅಭಿಶಂಕರ್, ಕೆ. : ಕಂಪಿಲಿ ಕುಮ್ಮಟ, (ಸಂ) : ಸೂರ್ಯನಾಥ ಕಾಮತ್, ಲಕ್ಷ್ಮಣ್ ತೆಲಗಾವಿ, ಇತಿಹಾಸ ದರ್ಶನ, ಸಂ-೫.
ಕಣಗಲಿ ಸಿದ್ದೇಶ್ವರ, ಬಿ. : ವೀರ ಜನಾಂಗ, ವಾಲ್ಮೀಕಿ ಸಂದೇಶ, ಗದಗ-ಬೆಟಗೇರಿ, ಆಗಸ್ಟ್ ೧೫, ೧೯೮೪, ಪು-೧೦.
ಕಿತ್ತೂರ ಆರ್.ಬಿ. : ವಾಲ್ಮೀಕಿ ವಂಶಜರು, ವಾಲ್ಮೀಕಿಸಂದೇಶ, ಗದಗ-ಬೆಟಗೇರಿ, ಫೆಬ್ರವರಿ ೧೫, ೧೯೮೪, ಪು-೬-೭ ಮತ್ತು ೧೦.
ಕುಸಗಲ್ಲ ಶಿ.ಗು. : ಬವಣೆಯಲ್ಲಿ ಬೇಡರ ಹಳ್ಳಿಗಳು, ವಾಲ್ಮೀಕಿ ಸಂದೇಶ, ಗದಗ- ಬೆಟಗೇರಿ, ಮೇ-ಜೂನ್, ೧೯೮೭, ಪು-೧೮.
ಕೋಲುಕಾರ ನೇ.ಹ. (ಸಂ) : ೧೯೮೭, ವಾಲ್ಮೀಕಿ ಸಂದೇಶ, ಗದಗ, ಸಂಪುಟ-೫, ಸಂಚಿಕೆ - ೪.
ಚಿಕಾಗುಡ್ಡ, ಡಿ.ಬಿ.ಥಂಗೆ : ಬೇಡರ ಸಮಾಜ, ವಾಲ್ಮೀಕಿ ಸಂದೇಶ, ಜನ-ಫೆಬ್ರ ೧೫, ೧೯೮೫, ಪು. ೯-೧೦
ಚಿತ್ರಲಿಂಗಯ್ಯ, ಎಂ.ವಿ. : ಪರನಾರಿ ಸೋದರನ ಕಥೆ, ವಾಲ್ಮೀಕಿ ಸಂದೇಶ, ಆಗಸ್ಟ್ ೧೫, ೧೯೮೩, ಪು: ೧೮-೧೯.
ಚಿತ್ರಲಿಂಗಯ್ಯ, ಎಂ.ವಿ. : ಪರಿವಾರದವರು ಎಂದರೆ ಯಾರು ? ವಾಲ್ಮೀಕಿ ಸಂದೇಶ, ಜನೇವರಿ ೧೫, ೧೯೮೪, ಪು ೯+ ೧೮-೨೦.
ಚಿತ್ರಲಿಂಗಯ್ಯ, ಎಂ.ವಿ. : ಮುಮ್ಮಡಿ ಸಿಂಗೆಯ ನಾಯಕ, ವಾಲ್ಮೀಕಿ ಸಂದೇಶ, ಜೂನ್ ೧೫, ೧೯೮೬, ಪು: ೧೮-೧೯.
ಚಿತ್ರಲಿಂಗಯ್ಯ, ಎಂ.ವಿ. : ಬೇಡರ ಕಣ್ಣಪ್ಪನೂ ಲಿಂಗಾಯತರ ಬಸವಣ್ಣನೂ, ವಾಲ್ಮೀಕಿ ಸಂದೇಶ, ಗದಗ-ಬೆಟಗೇರಿ, ಫೆ-೧೫, ೧೯೮೬, ಪು :೯೯.
ಚಿತ್ರಲಿಂಗಯ್ಯ, ಎಂ.ವಿ. : ನಾಯಕನಹಟ್ಟಿ ಬಚ್ಚೈರು, ವಾಲ್ಮೀಕಿ ಸಂದೇಶ, ಜುಲೈ ೧, ೧೯೮೭, ಪು ೯+೧೧.
ಚಿತ್ರಲಿಂಗಯ್ಯ, ಎಂ.ವಿ. : ಕರ್ನಾಟಕದ ಪ್ರಸಿದ್ಧ ತರೀಕೆರೆ ಪಾಳೆಯಗಾರರು, ವಾಲ್ಮೀಕಿ ಸಂದೇಶ, ಆಗಸ್ಟ್ ೧೮, ೧೯೮೭, ಪು:೧೦-೧೧.
ತಿರುಮಲೆ ಶ್ರೀ ರಂಗಚಾರ್ಯ : ಗದ್ದೆಮನೆ ಶಾಸನ - ಒಂದು ಹೊಸ ದೃಷ್ಟಿ, ಇತಿಹಾಸದರ್ಶನ, ಸಂ-೯, ೧೯೯೪, ಪು:೧೩.

ತುಬಾಕಿ ಬಿ.ಆರ್. : **ಕುಮ್ಮಟದುರ್ಗ ವಿಜಯನಗರದ ಅಡಿಗಲ್ಲು**, ವಾಲ್ಮೀಕಿ ಸಂದೇಶ, ಮಾರ್ಚ್ ೧೫, ೧೯೮೬, ಪು-೬-೭.

ದೇವೇಂದ್ರ ಮಾಧವನವರು : **ಮುಧೋಳದ ಬೇಟೆ ನಾಯಿಗಳು**, ವಾಲ್ಮೀಕಿ ಸಂದೇಶ, ಜೂನ್ ೧೫, ೧೯೮೬, ಪು: ೧೮.

ರಾಧಾಕೃಷ್ಣಮೂರ್ತಿ : **ಸಂಸ್ಕೃತ ಕಾವ್ಯಗಳಲ್ಲಿ ರಾಜ ಮನೋರಂಜನೆಯಾಗಿ ಬೇಟೆ**, ಇತಿಹಾಸ ದರ್ಶನ, ಸಂ ೭, ೧೯೯೨, ಪು :೨೩೩.

ವಿರೂಪಾಕ್ಷಿ ಪೂಜಾರಹಳ್ಳಿ : **ಯರಗಾಟನಾಯಕನೆಂಬ ವೀರನಕತೆ**, ನಿಮಗೊಂದು ವನಸುಮ (ಸಂ) : ಬಿ.ತಿಪ್ಪಣ್ಣ ಮರಿಕುಂಟೆ. ಸಂ-೧, ಸಂ-೧೧, ಜನವರಿ ೧೯೯೮, ಪು:೧೦.

೭. ಸ್ಮರಣ ಸಂಚಿಕೆಗಳು

ತಿಪ್ಪಣ್ಣ ಬಿ.ಮರಿಕುಂಟೆ (ಸಂ) : **ಮೇಲುದುರ್ಗ**, ೧೯೭೮, ಅಖಿಲ ಕರ್ನಾಟಕ ನಾಯಕ ಜನಾಂಗದ ತೃತೀಯ ಮಹಾಸಮ್ಮೇಳನ, ಚಳ್ಳಕೆರೆ.

ದೇವೇಂದ್ರ ನಾಯಕ, ಸಿ.ಎಂ. (ಸಂ) : **ನಾಯಕ ಪುರುಷ ಸಿಂಹ**, ೧೯೭೯, ಸ್ಮರಣ ಸಂಚಿಕೆ, ಕರ್ನಾಟಕ ವಾಲ್ಮೀಕಿ ನಾಯಕ ಮಹಾಪರಿಷತ್ತು, ಕೇಶವಾಪುರ, ಹುಬ್ಬಳ್ಳಿ.

ವೀರನಾಯಕ ಹರತಿ (ಸಂ) : **ವಾಲ್ಮೀಕಿ**, ನಾಯಕ ಜನಾಂಗದ ದ್ವಿತೀಯ ಮಹಾಸಮ್ಮೇಳನ ೧೮-೩-೭೩, ದಾವಣಗೆರೆ.

ಹರ್ತಿಕೋಟೆ ವೀರೇಂದ್ರಸಿಂಹ (ಸಂ) : **ಬಿಚ್ಚುಗತ್ತಿ**, ೧೯೮೭, ಹರ್ತಿಕೋಟೆ.

ಹರ್ತಿಕೋಟೆ ವಿರೇಂದ್ರಸಿಂಹ (ಸಂ) : **ವಾಲ್ಮೀಕಿ ಜ್ಯೋತಿ**, ೧೯೮೯, ಅಖಿಲ ಕರ್ನಾಟಕ ನಾಯಕ ವಾಲ್ಮೀಕಿ ಜನಾಂಗದ ಮಹಾಸಮ್ಮೇಳನದ ಸ್ಮರಣ ಸಂಚಿಕೆ, ಹುಬ್ಬಳ್ಳಿ.

ಹರ್ತಿಕೋಟೆ ವಿರೇಂದ್ರಸಿಂಹ : **ವಾಲ್ಮೀಕಿ ಕಿರಣ**, ೧೯೯೮, ಶ್ರೀ ವಾಲ್ಮೀಕಿ ಮಹಾಸಂಸ್ಥಾನ, ರಾಜನಹಳ್ಳಿ.

೮. ಮಾಸಪತ್ರಿಕೆ

ನಾಗರಾಜ (ಸಂ) : **ವಾಲ್ಮೀಕಿ ಕರ್ನಾಟಕ**, ಬೆಂಗಳೂರು.

ನಾಯಕ, ಎಂ.ಕೆ. (ಸಂ) : **ವಾಲ್ಮೀಕಿ ವಾಣಿ**, ಸಂ-೧ ರಿಂದ ೩, ಸಂಚಿಕೆ - ೩೦, ಮುನ್ಸಿಪಲ್ ಕಾಲನಿ, ಚಿತ್ರದುರ್ಗ.

ಪರಮೇಶ್ವರಪ್ಪ ಕಟ್ಟೀಮನಿ (ಸಂ) : **ವಾಲ್ಮೀಕಿ ಬಂಧು**, ಸಂ-೧, ಸಂ-೧ರಿಂದ ೧೨ ಸಪ್ತಾಪೂರ ಕೊನೆ ಕ್ರಾಸ್, ಧಾರವಾಡ.

೯. ವಾರಪತ್ರಿಕೆ

ತರಂಗ, ಕರ್ಮವೀರ, ಸುಧಾ, ಲಂಕೇಶ್

೧೦. ದಿನಪತ್ರಿಕೆ

ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ಈ ನಮ್ಮ ಕನ್ನಡ ನಾಡು, ಇತ್ಯಾದಿ.

* * *

೭. ರೇಖಾಚಿತ್ರಗಳು



ವಿಜಯನಗರ ಕಾಲದ ವಾಸ್ತುಶಿಲ್ಪದಲ್ಲಿ ಕಂಡುಬರುವ
ಬೇಟೆಗಾರ್ತಿಯರು-ಹಂಪಿ



ಮಧ್ಯಕಾಲದ ವಾಸ್ತುಶಿಲ್ಪದಲ್ಲಿ ಕಂಡುಬರುವ
ವಿವಿಧ ಪ್ರಾಣಿಗಳ ಬೇಟೆ ಚಿತ್ರಣ



ಮಧ್ಯಕಾಲದ ವಾಸ್ತುಶಿಲ್ಪದಲ್ಲಿ ಕಂಡುಬರುವ
ವಿವಿಧ ಪ್ರಾಣಿಗಳ ಬೇಟೆ ಚಿತ್ರಣ



ಶಿವ-ಅರ್ಜುನರು ಸತ್ತ ಹಂದಿಗಾಗಿ ಕಾದಾಡುವುದು-ವೀರಭದ್ರ ದೇವಸ್ಥಾನ-ಲೇಪಾಕ್ಷಿ



ಅ. ಶಿವ - ಅರ್ಜುನರ ಮಲ್ಲಯುದ್ಧ, ವೀರಭದ್ರ ದೇವಸ್ಥಾನ-ಲೇಪಾಕ್ಷಿ




ಕಿರಾತಾರ್ಜುನೀಯ ಪ್ರಸಂಗ

ವೀರಭದ್ರ ದೇವಸ್ಥಾನ-ಲೇಪಾಕ್ಷಿ

೮. ಛಾಯಾಚಿತ್ರಗಳು



೧. ಬೇಟೆಕಾರರ ಹೆಬ್ಬಾಗಿಲು - ಹಂಪಿ (ವಿಜಯನಗರ)



೨. ಮಹಾನವಮಿ ದಿಬ್ಬದಲ್ಲಿರುವ ಬೇಟೆ ದೃಶ್ಯ - ಹಂಪಿ (ವಿಜಯನಗರ)







೩. ಅರ್ಜುನನಿಗೆ ಪಾಶುಪತಾಸ್ತ್ರ ದಯಪಾಲಿಸುವ ಶಿವ-ಪಾರ್ವತಿಯರ ದೃಶ್ಯ
ವೀರಭದ್ರ ದೇವಸ್ಥಾನ - ಲೇಪಾಕ್ಷಿ(ವಿಜಯನಗರ)



೪. ಪೆದ್ದಯ್ಯನ ವೀರಗಲ್ಲು (ಚಿರತೆಯೊಂದಿಗೆ ಹೋರಾಡುವ ದೃಶ್ಯ)
ಕಪ್ಪಡಬಂಡಹಟ್ಟಿ, ಮೊಳಕಾಲ್ಮೂರು ತಾಲೂಕು



೫. ಹಂದಿಬೇಟೆಯ ಮೆರವಣಿಗೆಯ ದೃಶ್ಯ - ಕೆ.ಬಿ.ಹಟ್ಟಿ, ಪೂಜಾರಹಳ್ಳಿ



೬. ಕುದುರೆ ಮೇಲೆ ಹಂದಿ ಬೇಟೆಯಾಡುವುದು

ಕೆ.ಬಿ.ಹಟ್ಟಿ, ಪೂಜಾರಹಳ್ಳಿ



೭. ಮನ್ನಕ್ಷೇರಿಯ ಹಿರಿಯರೊಂದಿಗೆ ಬೇಡರು
ಯುಗಾದಿ ಬೇಟೆಗೆ ಹೊರಡುವುದು - ಕಮಲಾಪುರ



೮. ಕೊಂದ ಹಂದಿಯೊಂದಿಗೆ ಬೇಡರ ಹಿರಿಯರು ಮತ್ತು
ವೀರರ ಮೆರವಣಿಗೆ - ಕಮಲಾಪುರ



೯. ಕೊಂದ ಹಂದಿಯೊಂದಿಗೆ ಬೇಡರ ಹಿರಿಯರು
ವೀರರ ಮೆರವಣಿಗೆ - ಕಮಲಾಪುರ



೧೦. ಕೊಂದ ಹಂದಿಯೊಂದಿಗೆ ಬೇಡರ ಯಜಮಾನ
ಕಮಲಾಪುರ



೧೧. ಕೊಂದ ಹಂದಿಯೊಂದಿಗೆ ಬೇಡರ ಹಿರಿಯರು ಮತ್ತು
ವೀರರ ಮೆರವಣಿಗೆ - ಕಮಲಾಪುರ



೧೩. ಗಾವು ಜಗಿಯುವ ಪೋತರಾಜರು (ಕಾಮಗೇತಿ),
ಅಣಬೂರು, ಜಗಳೂರು ತಾ.



೧೪. ಜೀವಂತ ಪ್ರಾಣಿಯನ್ನು ಗಾವು
ಜಗಿಯುವ ದೃಶ್ಯ - ಕಾತ್ರಿಕೆಹಟ್ಟಿ



೧೪. ಗ್ರಾಮದೇವತೆಗೆ ಕೋಣವನ್ನು ಬಲಿಕೊಡುವ ಬೇಡರು - ತುಮಕೂರ್ಲ ಹಳ್ಳಿ



೧೫. ರಾತ್ರಿಯಲ್ಲಿ ಪ್ರಾಣಿಗಳನ್ನು ಬೇಟೆಯಾಡುವ ಬೇಡ (ಲೈಟು ಶಿಕಾರಿ) - ಕೆ.ಬಿ.ಹಳ್ಳಿ, ಪೂಜಾರಹಳ್ಳಿ



೧೬. ವಾಲ್ಮೀಕಿ ಜಯಂತಿ, ನವೆಂಬರ್-೧೯೯೬,
ಕಮಲಾಪುರ



೧೭. ವಾಲ್ಮೀಕಿ, ಬೇಡರ ಕಣ್ಣಪ್ಪನ ಭಾವಚಿತ್ರ ಮತ್ತು ವೇಷ
ಕಮಲಾಪುರ



೧೮. ಬೇಡರ ಕಣ್ಣಪ್ಪನ ವೇಷ ಧರಿಸಿರುವ ಬೇಡರ ಬಾಲಕ
ಕಮಲಾಪುರ



೧೯. ವಾಲ್ಮೀಕಿ ಜಯಂತಿಯಲ್ಲಿ ಐತಿಹಾಸಿಕ ವ್ಯಕ್ತಿಯ ವೇಷ
ಕಮಲಾಪುರ